ಹರಿಹರ ತಾಲೂಕಿನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಹೆಚ್.ಡಿ.ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು
ಹೆಚ್. ರಮೇಶ

ಮಾರ್ಗದರ್ಶಕರು
ಡಾ. ವಾಸುದೇವ ಬಡಿಗೇರ
ಪ್ರಾಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

೨೦೧೭

ಹರಿಹರ ತಾಲೂಕಿನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಹೆಚ್.ಡಿ.ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು

ಹೆಚ್. ರಮೇಶ

ಮಾರ್ಗದರ್ಶಕರು

ಡಾ. ವಾಸುದೇವ ಬಡಿಗೇರ

ಪ್ರಾಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

೨೦೧೭

ಸಂಶೋಧಕರ ಘೋಷಣಾ ಪತ್ರ

"ಹರಿಹರ ತಾಲೂಕಿನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ" ಎಂಬ ಈ ಮಹಾಪ್ರಬಂಧವನ್ನು ಪಿಹೆಚ್.ಡಿ.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ **ಡಾ.ವಾಸುದೇವ ಬಡಿಗೇರ ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ.** ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ಸಂಶೋಧಕರು

(ಹೆಚ್. ರಮೇಶ)

ಪಿಹೆಚ್.ಡಿ. ಸಂಶೋಧನ ವಿದ್ಯಾರ್ಥಿ

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ: ವಿದ್ಯಾರಣ್ಯ

ದಿನಾಂಕ: 06-10-2017

ಮಾರ್ಗದರ್ಶಕರ ದೃಢೀಕರಣ ಪತ್ರ

ಹೆಚ್. **ರಮೇಶ** ಇವರು ಪಿಹೆಚ್.ಡಿ.ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ **"ಹರಿಹರ ತಾಲೂಕಿನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ"** ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ಮಾರ್ಗದರ್ಶಕರು

ಸ್ಥಳ: ವಿದ್ಯಾರಣ್ಯ
ದಿನಾಂಕ: 06-10-2017

(ಡಾ.ವಾಸುದೇವ ಬಡಿಗೇರ)
ಪ್ರಾಧ್ಯಾಪಕರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪರಿವಿಡಿ

ಅಧ್ಯಾಯ ಒಂದು

ಪ್ರಸ್ತಾವನೆ

ಅಧ್ಯಯನದ ಉದ್ದೇಶ, ಸಮೀಕ್ಷೆ, ವ್ಯಾಪ್ತಿ, ವಿಧಾನ ಮತ್ತು ಸ್ವರೂಪ

ಅಧ್ಯಾಯ ಒಂದು

ಪ್ರಸ್ತಾವನೆ

ಭಾರತದ ಸಾಂಸ್ಕೃತಿಕ ಇತಿಹಾಸವನ್ನು ವಸ್ತುನಿಷ್ಠವಾಗಿ ಪುನಾರಚಿಸುವ ನಿಟ್ಟಿನಲ್ಲಿ ಕನ್ನಡ ನಾಡಿನ ಕೊಡುಗೆ ಅಪಾರವಾಗಿದೆ. ಈ ನಾಡು ಒಂದು ಕಾಲದಲ್ಲಿ ಪೂರ್ವ ಪಶ್ಚಿಮವಾಗಿ ಬಂಗಾಳಕೊಲ್ಲಿಯಿಂದ ಅರಬ್ಬಿ ಸಮುದ್ರದವರೆಗೂ, ದಕ್ಷಿಣ ಉತ್ತರವಾಗಿ ಕಾವೇರಿಯಿಂದ ಗೋದಾವರಿಯವರೆಗೂ ವಿಶಾಲವಾಗಿತ್ತು. ಈ ನಾಡಿನ ಇತಿಹಾಸಪೂರ್ವ ಮತ್ತು ಇತಿಹಾಸ ಕಾಲದ ಪುರಾತತ್ವ ಅವಶೇಷಗಳು ಕರ್ನಾಟಕದಾದ್ಯಂತ ಹರಡಿವೆ. ಇವು ಹಲವು ಶತಮಾನಗಳಲ್ಲಿ ಮಾನವನು ನಡೆದು ಬಂದ ದಾರಿಯ ಕಿರು ನೋಟವನ್ನು ಸ್ಪಷ್ಟಪಡಿಸುತ್ತವೆ. ಹೀಗಾಗಿ ಈ ನಾಡಿನ ಸಾಂಸ್ಕೃತಿಕ ಇತಿಹಾಸ ಪುನಾರಚಿಸುವ ಉದ್ದೇಶದಿಂದ ಪುರಾತತ್ವ ಅವಶೇಷಗಳ ಅನ್ವೇಷಣೆ, ಶೋಧನೆ, ಸಂಗ್ರಹಣೆ, ವಿಶ್ಲೇಷಣೆ ಮತ್ತು ಪ್ರಕಟಣೆ ನಾಡಿನ ನರನಾಡಿಗಳೆನಿಸಿರುವ ಗ್ರಾಮಗಳಿಂದ ಆರಂಭವಾಗಬೇಕಾಗಿದೆ. ಆಗ ಮಾತ್ರ ಆ ನಾಡಿನ ಸಾಂಸ್ಕೃತಿಕ ಇತಿಹಾಸದ ಬಹುಮುಖ ಚಿತ್ರಣವನ್ನು ವಸ್ತುನಿಷ್ಠವಾಗಿ ಪುನಾರಚಿಸಬಹುದು ಮತ್ತು ಈವರೆಗೆ ತಿಳಿದುಬಂದಿರುವ ಇತಿಹಾಸದಲ್ಲಿ ಕಳೆದುಹೋದ ಕೊಂಡಿಗಳನ್ನು ಕಂಡುಕೊಳ್ಳಬಹುದು.

ಸಂಶೋಧಕನು ಸದಾ ಹೊಸ ಹೊಸದನ್ನು ಅನ್ವೇಷಿಸುವ ದಿಶೆಯಲ್ಲಿ ಸಾಂಪ್ರದಾಯಿಕ ಆಧಾರಗಳಿಗೆ ಲಿಖಿತ ಮತ್ತು ಪುರಾತತ್ವ ಆಕರಗಳಿಗೆ ಮಾತ್ರ ಗಮನಹರಿಸದೆ ಮೌಖಿಕ ಕಥನ ರೂಪದ ಆಧಾರಗಳನ್ನು ಭಿನ್ನವಾದ ದೃಷ್ಟಿಕೋನದಡಿಯಲ್ಲಿ ಅಧ್ಯಯನ ಮಾಡುವುದು ಅವಶ್ಯಕವಾಗಿದೆ. ಹಾಗಾಗಿ ಐತಿಹ್ಯಗಳು ಇತಿಹಾಸದ ಆಕರಗಳು ಹೌದು, ಮೌಖಿಕ ಪರಂಪರೆಯ ಮನುಷ್ಯನ ಚಟುವಟಿಕೆಗಳನ್ನ ಜೀವಂತವಾಗಿ ಉಳಿಸಿಕೊಂಡು ಬರುವ ಶಕ್ತಿಯಿದ್ದರೆ, ಪುರಾತತ್ವ ಆಕರಗಳಿಗೆ ಭೌತಿಕವಾಗಿ ಉಳಿದುಕೊಂಡು ಬಂದ ಹೆಮ್ಮೆಯಿದೆ. ಆದ್ದರಿಂದ ಪುರಾತತ್ವ ಮತ್ತು ಐತಿಹ್ಯಗಳನ್ನು ಸಮೀಕರಿಸಿದ ಅಧ್ಯಯನಗಳನ್ನ ಕೈಗೊಳ್ಳುವ ಅವಶ್ಯಕತೆ ಇದೆ. ಪ್ರಸ್ತುತ ಅಧ್ಯಯನ ಕ್ಷೇತ್ರವಾದ ಹರಿಹರ ತಾಲೂಕಿನ ಲಿಖಿತ ಹಾಗೂ ಪುರಾತತ್ವ ಅಕರಗಳ ಜೊತೆಗೆ ಈ ಪ್ರದೇಶದಲ್ಲಿನ ಐತಿಹ್ಯ, ಕಥೆ, ಕಾವ್ಯ, ಮೊದಲಾದ ಐತಿಹಾಸಿಕ ಅಂಶಗಳು ಉಳಿದುಕೊಂಡು ಬಂದಿವೆ. ಈ ನಿಟ್ಟಿನಲ್ಲಿ ದಾವಣಗೆರೆ ಜಿಲ್ಲೆಯ ಹರಿಹರ ತಾಲೂಕು ಪ್ರದೇಶವನ್ನು ಸೂಕ್ಷ್ಮ ಅಧ್ಯಯನಕ್ಕಾಗಿ ಆಯ್ದುಕೊಳ್ಳಲಾಗಿದೆ.

ಪ್ರಸ್ತುತ ಅಧ್ಯಯನದ ವಿಷಯ 'ಹರಿಹರ ತಾಲೂಕಿನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ' ಕುರಿತಾದ್ದಾಗಿದೆ. ದಾವಣಗೆರೆ ಜಿಲ್ಲೆಯಲ್ಲಿ ಪಶ್ಚಿಮ ಭಾಗದಲ್ಲಿರುವ ಈ ತಾಲೂಕು ಸೀರಾವರಿ ಪ್ರದೇಶದಿಂದ ಕೂಡಿದೆ. ಸಾರಥಿ, ಕೊಂಡಜ್ಜಿ, ಮಲೆಬೆನ್ನೂರು, ಕೊಮಾರನಹಳ್ಳಿ, ಐರಣಿ, ಹಳ್ಳಿಹಾಳ, ಮೂಗಿನಗೊಂದಿಗಳಲ್ಲಿ ಬೆಟ್ಟಗುಡ್ಡಗಳಿವೆ. ಈ ಬೆಟ್ಟಗುಡ್ಡಗಳಲ್ಲಿ ನೀರಿನ ತಾಣಗಳು, ನೈಸರ್ಗಿಕ ಕಲ್ಲಾಸರೆಗಳಿದ್ದು ಇವು ಪ್ರಾಚೀನ ಮಾನವನ ವಾಸ್ತವ್ಯಕ್ಕೆ ಅನುಕೂಲಕರವಾಗಿವೆ. ಈ ಪ್ರದೇಶದಲ್ಲಿ ಹರಿಯುವ ತುಂಗಭದ್ರಾ ನದಿ ಪ್ರಾಚೀನ ಮಾನವನಿಗೆ ನೀರಾಸರೆ ಆಗಿದ್ದು, ಹರಿಹರ ತಾಲೂಕಿನ ಸುತ್ತಮುತ್ತಲಿನ ಪ್ರದೇಶದಲ್ಲಿ ಪ್ರಾಗಿತಿಹಾಸ ಕಾಲದ ಪ್ರಾಚ್ಯಾವಶೇಷಗಳು ದೊರೆತಿವೆ. ಹರಿಹರ, ಕೊಮಾರನಹಳ್ಳಿ, ಹಲಸಬಾಳು, ಕೊಕ್ಕನೂರು, ಮೂಗಿನಗೊಂದಿ ಗುಡ್ಡದ ತುಮ್ಮಿನಕಟ್ಟೆ ಮತ್ತು ಕೊಂಡಜ್ಜಿ ಪ್ರದೇಶಗಳಲ್ಲಿ ಶಿಲಾಯುಗದ ಮಾನವನ ಕುರುಹುಗಳು ದೊರೆತಿವೆ.

ಹೀಗೆ ಶಿಲಾಯುಗದ ಅಸ್ತಿತ್ವದ ನೆಲೆಗಳನ್ನೊಳಗೊಂಡ ಈ ಪ್ರದೇಶವು ಐತಿಹಾಸಿಕವಾಗಿ ಬಾದಾಮಿ ಚಾಲುಕ್ಯರ ಕಾಲದಿಂದ ವಿಜಯನಗರ ನಂತರ ಕಾಲದ ಪಾಳೆಯಗಾರರ ಆಳ್ವಿಕೆಗೆ ಒಳಪಟ್ಟು ಆಯಾ ಕಾಲದ ಭೌತಿಕ ಗುರುತುಗಳನ್ನು ವಿಭಿನ್ನ ಬಗೆಯ ಸ್ಮಾರಕಗಳು, ಶಾಸನಗಳು, ಮೂರ್ತಿಶಿಲ್ಪಗಳು ಮುಂತಾದ ಪರಂಪರೆಗಳ ಕುರುಹುಗಳನ್ನು ಉಳಿಸಿಕೊಂಡು ಬಂದಿದೆ. ಇವುಗಳ ಹಿನ್ನೆಲೆಯಲ್ಲಿ ಹರಿಹರ ತಾಲೂಕಿನ ಇತಿಹಾಸ ಮತ್ತು ಪುರಾತತ್ವ ಅವಶೇಷಗಳನ್ನು ಬಳಸಿಕೊಂಡು ಸಂಯೋಜಿಸಿ, ವಿಶ್ಲೇಷಿಸುವ ಪ್ರಯತ್ನವನ್ನು ಪ್ರಸ್ತುತ ಮಹಾಪ್ರಬಂಧದಲ್ಲಿ ಮಾಡಲಾಗಿದೆ.

ಅಧ್ಯಯನದ ಉದ್ದೇಶ : ಪ್ರಾಗಿತಿಹಾಸ ಮತ್ತು ಐತಿಹಾಸಿಕ ದೃಷ್ಟಿಯಿಂದ ಹರಿಹರ ತಾಲೂಕು ಮತ್ತು ಅದರ ಸುತ್ತಮುತ್ತಲಿನ ಪ್ರದೇಶವು ಅತ್ಯಂತ ಮಹತ್ವವಾಗಿದೆಯೆಂದು ಹರಿಹರದ ಹರಿಹರೇಶ್ವರ ದೇವಾಲಯದ ಬಗ್ಗೆ ಉಲ್ಲೇಖವಾಗಿರುವ ಶಿಲಾಶಾಸನಗಳಿಂದ ಹಾಗೂ ೧೯೭೮ ರಲ್ಲಿ ಎಂ.ಎಸ್. ನಾಗರಾಜರಾವ್‌ರವರು ನಡೆಸಿದ ಉತ್ಖನನದಿಂದ ತಿಳಿಯುತ್ತದೆ. ಎಂ.ಎಸ್.ನಾಗರಾಜರಾವ್ ಅವರ ಮಾರ್ಗದರ್ಶನದಲ್ಲಿ ಪ್ರಾಚ್ಯವಸ್ತು ಮತ್ತು ವಸ್ತುಸಂಗ್ರಹಾಲಯ ನಿರ್ದೇಶನಾಲಯದಿಂದ ೧೯೭೮ರಲ್ಲಿ ನಡೆಸಿದ ಕೊಮಾರನಹಳ್ಳಿಯ ಶಿಲಾಸಮಾಧಿಗಳ ಉತ್ಖನನದಿಂದ ಕಲ್ಗೋರಿಗಳಲ್ಲಿನ ಮೃತ್‌ಪಾತ್ರೆಗಳ ರಚನೆ, ಆಕೃತಿ ಹಾಗೂ ಇವುಗಳ ಮೇಲಿನ ವರ್ಣರೇಖಾ ಚಿತ್ರಗಳಲ್ಲಿನ ವಿಶಿಷ್ಟತೆಯು ಹರಪ್ಪ ಸಂಸ್ಕೃತಿಯ ಮಡಕೆಗೆ ಹೋಲಿಕೆಯಿರುವ ಮಹತ್ವದ ಅವಶೇಷಗಳು ಶೋಧಗೊಂಡಿವೆ ಎಂದು ಉತ್ಖನನ ವರದಿಯಿಂದ ತಿಳಿಯುತ್ತದೆ. ಈ ನೆಲೆಯ ಕುರಿತಾದ ಅಧ್ಯಯನದಂತೆ ತಾಲೂಕಿನ ಬೇರಾವ ಪ್ರಾಗಿತಿಹಾಸ ನೆಲೆಯ ಕುರಿತಾದ ಸಮಗ್ರ ಅಧ್ಯಯನ ಈವರೆಗೆ ನಡೆದಿಲ್ಲ. ಈ ಕೊರತೆಯನ್ನು ತುಂಬಲು ವ್ಯವಸ್ಥಿತವಾದ ಅಧ್ಯಯನದ ಅವಶ್ಯಕತೆಯಿದೆ. ಆದ್ದರಿಂದ ಹರಿಹರ ತಾಲೂಕಿನ ಸಮಗ್ರ ಹಾಗೂ ಸೂಕ್ಷ್ಮ ಅಧ್ಯಯನ ನಡೆಸುವುದು ಪ್ರಮುಖ ಉದ್ದೇಶವಾಗಿದೆ. ಕೊಮಾರನಹಳ್ಳಿಯ ಉತ್ಖನನದಿಂದ ಪ್ರಾಚೀನ ಮಾನವನ ಅನೇಕ ಕುರುಹುಗಳು ದೊರೆತಿರುವುದನ್ನು ಗಮನಿಸಿದಾಗ, ಇವು ಕೇವಲ ಅದೊಂದೇ ನೆಲೆಗೆ ಸೀಮಿತಗೊಂಡಿದ್ದವೆ? ಇಲ್ಲವೆ ಈ ಪರಿಸರದ ಇತರ ಭೌಗೋಳಿಕ ಸನ್ನಿವೇಶಕ್ಕನುಗುಣವಾಗಿ

ವಿಸ್ತೃತ ರೂಪ ಪಡೆದುಕೊಂಡಿದ್ದವೇ ಎಂಬುವುದನ್ನು ಸಂಶೋಧನೆಗೊಳಪಡಿಸಿ ಈ ಪರಿಸರದಲ್ಲಿನ ಪ್ರಾಚೀನ ಮಾನವನ ಚಟುವಟಿಕೆ, ಜೀವನಕ್ರಮ ಮುಂತಾದವುಗಳ ಬಗ್ಗೆ ಅಧ್ಯಯನ ನಡೆಸುವ ಉದ್ದೇಶವಾಗಿದೆ.

ಈ ಪ್ರದೇಶದ ಆಧುನಿಕ ಮಾನವನ ಪ್ರಮುಖ ಕಸುಬು ನೀರಾವರಿ ವ್ಯವಸಾಯವಾಗಿದೆ. ಇಂದು ಸಮತಟ್ಟಾದ ಭೂಮಿ ಇದ್ದು, ತಾಲೂಕಿನ ದಕ್ಷಿಣ ದಿಕ್ಕಿನಲ್ಲಿರುವ ಮಲೆಬೆನ್ನೂರು, ಕೊಮಾರನಹಳ್ಳಿ ಗುಡ್ಡಗಳ ಸಾಲು ಪಶ್ಚಿಮದ ಕಡೆ ಚಾಚಿದ್ದು, ಈ ಬೆಟ್ಟಗಳ ತಪ್ಪಲಿನ ಇಳಿಜಾರು ಭಾಗದ ಭೂಮಿಯನ್ನ ಹದ ಮಾಡಿ ಕೃಷಿಗೆ ಒಳಪಡಿಸಲಾಗುತ್ತಿದೆ. ಪ್ರಾಚೀನ ಮಾನವನ ಅನೇಕ ನೆಲೆಗಳು ಈ ಬೆಟ್ಟಗುಡ್ಡಗಳ ತಪ್ಪಲಿನಲ್ಲಿಯೇ ಕೇಂದ್ರಿಕೃತಗೊಂಡಿವೆ. ಆಧುನಿಕ ಮಾನವನ ಕೃಷಿಚಟುವಟಿಕೆಯಿಂದ ಬಹುತೇಕ ಪ್ರಾಚೀನ ನೆಲೆಗಳು ಹಾಳಾಗಿವೆಯಲ್ಲದೆ ಇನ್ನೂ ಹಾಳಾಗುತ್ತಲಿವೆ. ಆದ್ದರಿಂದ ಅಂತಹ ನೆಲೆಗಳನ್ನ ಶೋಧಿಸಿ, ವಿಶ್ಲೇಷಿಸಿ, ದಾಖಲಿಸುವುದು ಅವಶ್ಯಕವಾಗಿದೆ. ಹೀಗೆ ನಾಶವಾಗುತ್ತಲಿರುವ ನೆಲೆಗಳನ್ನ ಶೋಧಿಸಿ, ವಿಶ್ಲೇಷಿಸುವುದು ಅಧ್ಯಯನದ ಉದ್ದೇಶಗಳಲ್ಲಿ ಒಂದಾಗಿದೆ. ಇಂತಹ ಅಧ್ಯಯನಗಳು ಆಯಾ ಪ್ರದೇಶದ ಪ್ರಾಗಿತಿಹಾಸ ಮಾನವನ ನಾಗರಿಕತೆಯ ವಿಕಾಸ, ಆಹಾರ ಪದ್ಧತಿ, ಜೀವನ ಕ್ರಮವನ್ನು ತಿಳಿಯಲು ಸಹಕಾರಿಯಾಗುತ್ತವೆ.

ಐತಿಹಾಸಿಕ ರಾಜಮನೆತನಗಳ ಸ್ಮಾರಕಗಳು, ಶಿಲಾಶಾಸನಗಳು ಈ ಪರಿಸರದಲ್ಲಿ ದೊರೆತಿರುವುದರಿಂದ ಈ ಪ್ರದೇಶ ಅಂತಹ ರಾಜಮನೆತನಗಳ ನೇರ ಆಳ್ವಿಕೆಗೆ ಒಳಪಟ್ಟಿತ್ತೆಂದು ಹೇಳಬಹುದು. ಹರಿಹರದ ಕ್ರಿ.ಶ. ೧೨೨೪ರ ಹೊಯ್ಸಳರ ಶಾಸನದ ಉಲ್ಲೇಖದನ್ವಯ ಈಗಿರುವ ಹರಿಹರೇಶ್ವರ ದೇವಾಲಯವನ್ನು ಪೋಲಾಳ್ವ ಕಟ್ಟಿಸಿದನೆಂದು ಉಲ್ಲೇಖಿಸುತ್ತದೆ. ಆದರೆ ಕ್ರಿ.ಶ. ೭ನೇ ಶತಮಾನದ ಬಾದಾಮಿ ಚಾಲುಕ್ಯರ ದೊರೆ ವಿನಯಾದಿತ್ಯನ ಕಾಲದಿಂದ ಹೊಯ್ಸಳರ ಕಾಲದವರೆಗಿನ [ಕ್ರಿ.ಶ. ೧೨೨೩] ಈ ಪರಿಸರದ ಶಾಸನಗಳು ಹರಿಹರದ [ಕೂಡಲೂರು, ಹರೀಶಪುರ] ಸ್ಥಳನಾಮದ ಜೊತೆಗೆ ಅಲ್ಲಿನ ದೇವರನ್ನು ಉಲ್ಲೇಖಿಸುತ್ತವೆ. ಹಾಗಾದರೆ ಪೋಲಾಳ್ವ ದಂಡನಾಥ ಕ್ರಿ.ಶ. ೧೨೨೪ರಲ್ಲಿ ಹರಿಹರೇಶ್ವರ ದೇವಾಲಯವನ್ನ ಮರು ನಿರ್ಮಾಣ ಮಾಡಿದನೋ ಅಥವಾ ಕ್ರಿ.ಶ ೭ನೇ ಶತಮಾನದಿಂದ ಕ್ರಿ.ಶ. ೧೩ನೇ ಶತಮಾನದವರೆಗಿನ ಶಾಸನಗಳಲ್ಲಿ ಉಲ್ಲೇಖವಾಗಿರುವ [ಹರಿಹರ, ಶಂಕರನಾರಾಯಣ] ದೇವಾಲಯ ಬೇರೆಡೆ ಇತ್ತೇ ಎಂಬುದು ವಿದ್ವಾಂಸರಲ್ಲಿ ಸಾಕಷ್ಟು ಚರ್ಚೆಗಳು ನಡೆದಿವೆಯಾದರೂ ಒಮ್ಮತಕ್ಕೆ ಬರಲಾಗಿಲ್ಲ. ಹಾಗಾಗಿ ಹರಿಹರದ ಸ್ಥಳನಾಮ ಹಾಗೂ ಹರಿಹರೇಶ್ವರ ದೇವಾಲಯದ ಕುರಿತಂತೆ ಅಧ್ಯಯನ ಕೈಗೊಳ್ಳುವುದು.

ಈ ಪ್ರದೇಶದಲ್ಲಿ ಪ್ರಾಚೀನ ಹಾಗೂ ಮಧ್ಯಕಾಲಿನಲ್ಲಿ ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಹೊಯ್ಸಳ, ವಿಜಯನಗರ, ಪಾಳೆಯಗಾರರ ರಾಜಮನೆತನಗಳಲ್ಲದೇ ಕೆಲವು ಸಾಮಂತ ರಾಜಮನೆತನಗಳು ಆಳ್ವಿಕೆ ನಡೆಸಿವೆ. ಈ ರಾಜಮನೆತನಗಳು ತಮ್ಮದೇ ಆದ ಸಾಂಸ್ಕೃತಿಕ ಕೊಡುಗೆಗಳನ್ನು ನೀಡಿವೆ. ಈ ಹಿನ್ನೆಲೆಯಲ್ಲಿ ಅವರ ಕಾಲದ ಕಲೆ ಮತ್ತು ವಾಸ್ತುಶಿಲ್ಪ, ಮೂರ್ತಿಶಿಲ್ಪಗಳನ್ನು ಕುರಿತಂತೆ ಅಧ್ಯಯನ ನಡೆಸುವ ಉದ್ದೇಶವನ್ನು ಹೊಂದಲಾಗಿದೆ. ಹಿಂದೆ

ರಾಜ ಪರಿವಾರ, ಉನ್ನತವರ್ಗದವರ ಪ್ರಧಾನವಾಗಿಟ್ಟುಕೊಂಡು ಅವರ ಜೀವನ ಘಟನೆಗಳನ್ನು ನಿರೂಪಿಸಲಾಗುತ್ತಿತ್ತು. ಆದರೆ ಇಂದು ರಾಜನ ಜೀವನದಲ್ಲಿ ಸಂಭವಿಸಿದ ಘಟನೆಗಳನ್ನು ಮಾತ್ರವಲ್ಲದೆ, ಅದರ ಜೊತೆಗೆ ಆ ರಾಜ್ಯದಲ್ಲಿದ್ದ ತಳಸಮುದಾಯಗಳ ಜೀವನ ಕ್ರಮವನ್ನು ನಿರೂಪಿಸುವುದು ಅಗತ್ಯವಾಗಿದೆ ಇದರಿಂದ ಒಂದು ರಾಜ್ಯವ್ಯವಸ್ಥೆಯಲ್ಲಿ ಜನತೆಯ ಪಾತ್ರವೇನು? ಎಂಬುದನ್ನು ತಿಳಿಯಲು ಸಾಧ್ಯವಾಗುತ್ತದೆ.

ಮೇಲಿನ ವಿಚಾರ ದೃಷ್ಟಿಯಿಂದ ವೀರಗಲ್ಲುಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಇವುಗಳು ಅಂದಿನ ಸಾಮಾನ್ಯ ಜನರ ವೀರತ್ವವನ್ನು, ಸ್ವಾಮಿನಿಷ್ಠೆಯನ್ನು ಪ್ರದರ್ಶಿಸುತ್ತವೆ. ಮಾಸ್ತಿಗಲ್ಲುಗಳು ಅಂದಿನ ಸಮಾಜದಲ್ಲಿ ರೂಢಿಯಲ್ಲಿದ್ದ ಸ್ತ್ರೀಯರ ಸ್ಥಾನಮಾನ, ಪತಿಭಕ್ತಿ ಹಾಗೂ ಸಾಮಾಜಿಕ ಪದ್ಧತಿಯನ್ನು ನಿರೂಪಿಸುತ್ತವೆ. ಈ ಎರಡು ಸ್ಮಾರಕಗಳಿಂದ ಪ್ರಾಚೀನ ಕಾಲದ ಜನತೆಯ ಇತಿಹಾಸವನ್ನು ನಿರ್ಮಿಸಲು ಸಹಾಯಕವಾಗುತ್ತದೆ. ಪ್ರಸ್ತುತ ಅಧ್ಯಯನದಲ್ಲಿ ವೀರಗಲ್ಲು ಹಾಗೂ ಮಾಸ್ತಿಗಲ್ಲುಗಳೆರಡನ್ನು ಈ ಪ್ರದೇಶದಲ್ಲಿನ ಐತಿಹ್ಯ ಹಾಗೂ ಜನಪದೀಯ ಹಿನ್ನೆಲೆಯಲ್ಲಿ ಗಮನಿಸಿ ಅಂದಿನ ಜನ ಇತಿಹಾಸವನ್ನು ನಿರೂಪಿಸುವ ಉದ್ದೇಶವನ್ನು ಹೊಂದಲಾಗಿದೆ. ಹಾಗೆಯೇ ಶಾಸನಗಳು ಸಹ ಅಂದಿನ ಕಾಲದ ಪ್ರಮುಖ ದಾಖಲೆಗಳಾಗಿವೆ. ಒಂದು ನಾಡಿನ ಚರಿತ್ರೆಯನ್ನು ನಿರ್ಮಿಸುವಲ್ಲಿ ಶಾಸನಗಳ ಪಾತ್ರ ಮಹತ್ವದ್ದಾಗಿದೆ. ಅವುಗಳು ಅಂದಿನ ರಾಜಕೀಯ, ಸಾಮಾಜಿಕ, ಧಾರ್ಮಿಕ, ಆರ್ಥಿಕ ಇನ್ನೂ ಮುಂತಾದ ಅನೇಕ ಮಹತ್ವದ ವಿಚಾರಗಳ ಬಗ್ಗೆ ಮಾಹಿತಿಯನ್ನು ನೀಡುತ್ತವೆ. ಈ ದೃಷ್ಟಿಕೋನದಿಂದ ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿರುವ ಶಾಸನಗಳನ್ನು ಪರೀಶಿಲಿಸಲಾಗುವುದು ಒಟ್ಟಿನಲ್ಲಿ ಈ ಪ್ರದೇಶದಲ್ಲಿರುವ ಪ್ರಾಗಿತಿಹಾಸ ಹಾಗೂ ಐತಿಹಾಸಿಕ ಕುರುಹುಗಳೆರಡನ್ನು ಸಾಂಸ್ಕೃತಿಕವಾಗಿ ಅಧ್ಯಯನ ನಡೆಸುವ ಉದ್ದೇಶವನ್ನಿರಿಸಿಕೊಳ್ಳಲಾಗಿದೆ. ಜೊತೆಗೆ ಅಧ್ಯಯನವು ಈ ಕೆಳಗಿನ ನಿರ್ದಿಷ್ಟ ಉದ್ದೇಶಗಳನ್ನು ಹೊಂದಿದೆ.

೧) ಹರಿಹರ ತಾಲೂಕು ಪರಿಸರದ ಪ್ರಾಗಿತಿಹಾಸ ಸಂಸ್ಕೃತಿಯನ್ನ ವಿಮರ್ಶಾತ್ಮಕವಾಗಿ ನೋಡುವುದು.

೨) ಹರಿಹರ ತಾಲೂಕಿನ ಸ್ಥಳನಾಮಗಳ ಕುರಿತು ದೊರೆತಂತಹ ತುರುಗೋಳ್ ವೀರಗಲ್ಲುಗಳೊಂದಿಗೆ ಸಮೀಕರಿಸುವುದು.

೩) ಹರಿಹರ ತಾಲೂಕಿನ ಶಾಸನಗಳ ಸಾಂಸ್ಕೃತಿಕ ಇತಿಹಾಸವನ್ನ ವಿಶ್ಲೇಷಿಸುವುದು ಹಾಗೂ ಪ್ರಸ್ತುತ ಸಾಂಸ್ಕೃತಿಕ ಪರಿಸರವನ್ನು ವಿವರಿಸುವುದು.

ಅಧ್ಯಯನದ ವ್ಯಾಪ್ತಿ : ಅಧ್ಯಯನ ಕ್ಷೇತ್ರದ ವ್ಯಾಪ್ತಿಯನ್ನು ನಿಗದಿಪಡಿಸಿ ಆ ಚೌಕಟ್ಟಿನಲ್ಲಿ ಅಧ್ಯಯನ ಕೈಗೊಂಡು ವಿಷಯವನ್ನು ವಿಶ್ಲೇಷಿಸಿದಾಗ, ಅದು ಅರ್ಥಪೂರ್ಣಗೊಳ್ಳುವುದು. ಪ್ರಸ್ತುತ ಅಧ್ಯಯನವು ಒಂದು ನಿರ್ದಿಷ್ಟ ವ್ಯಾಪ್ತಿಯನ್ನು ಒಳಗೊಂಡಿದೆ. ಹರಿಹರ ತಾಲೂಕಿನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಎಂಬ ಶೀರ್ಷಿಕೆಯೇ ಸೂಚಿಸುವಂತೆ ಅಧ್ಯಯನ ವ್ಯಾಪ್ತಿಯು ಹರಿಹರ ತಾಲೂಕಿಗೆ ಒಳಪಟ್ಟಿದೆ. ತಾಲೂಕು ವ್ಯಾಪ್ತಿ ಎಂದರೆ ಪ್ರಾಗಿತಿಹಾಸದಿಂದ ಇಂದಿನವರೆಗೂ

ಕಂಡುಬರುವ ಪ್ರಾಗಿತಿಹಾಸ ವಸತಿನೆಲೆ, ಶಾಸನ, ದೇವಾಲಯ, ಸ್ಮಾರಕ, ಕೋಟೆ–ಕೊತ್ತಲ ಮುಂತಾದ ಆಕರಗಳನ್ನು ಆಧಾರವಾಗಿಟ್ಟುಕೊಂಡು ಹರಿಹರ ತಾಲೂಕಿನ ಐತಿಹಾಸಿಕ ಗ್ರಾಮ ಪ್ರದೇಶಗಳು ಅಧ್ಯಯನಕ್ಕೆ ಒಳಪಟ್ಟಿವೆ. ಅಲ್ಲದೆ ಸಂದರ್ಭಾನುಸಾರವಾಗಿ ಹರಿಹರ ತಾಲೂಕಿನ ಆಚೆಗೂ ಇರುವಂತಹ ಬೇರೆ ತಾಲೂಕು ಪರಿಸರದ ಗ್ರಾಮಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಪ್ರಾಗಿತಿಹಾಸ ಕಾಲದಿಂದ ಪ್ರಸ್ತುತದವರೆಗೂ ಹರಿಹರ ತಾಲೂಕು ಪರಿಸರದ ಚಾರಿತ್ರಿಕ, ಸಾಂಸ್ಕೃತಿಕ, ಸಾಮಾಜಿಕ, ಧಾರ್ಮಿಕ ರೂಪಾಂತರಗಳನ್ನು ಅಧ್ಯಯನ ಮಾಡುವ ಪ್ರಯತ್ನವಾಗಿದೆ.

ಅಧ್ಯಯನದ ಸಮೀಕ್ಷೆ : ಹರಿಹರೇಶ್ವರ ದೇವಾಲಯದಿಂದ ಪ್ರಸಿದ್ಧವಾಗಿರುವ ಹರಿಹರದ ಸಾಂಸ್ಕೃತಿಕ ಪರಿಸರವನ್ನು ಕುರಿತು ಹಲವಾರು ಅಧ್ಯಯನಗಳು ನಡೆದಿವೆ. ಹರಿಹರದ ಪರಿಸರವನ್ನು ಕುರಿತು ಪ್ರಾಗಿತಿಹಾಸದ ನೆಲೆಗಳ ಸಾಂಸ್ಕೃತಿಕ ಚರಿತ್ರೆ, ಇತಿಹಾಸ, ಸ್ಥಳನಾಮ, ಕೋಟೆ, ದೇವಾಲಯ, ಶಾಸನ, ಮೂರ್ತಿಶಿಲ್ಪಗಳನ್ನ ಕುರಿತು ಅನೇಕ ವಿದ್ವಾಂಸರು ಅಧ್ಯಯನ ಕೈಗೊಂಡಿದ್ದಾರೆ. ದಕ್ಷಿಣ ಭಾರತದಲ್ಲಿ ದಕ್ಷಿಣ ಕಾಶಿ ಎಂದು ಪ್ರಸಿದ್ಧಿ ಪಡೆದಿರುವ ಹರಿಹರದಲ್ಲಿ ದೇವಾಲಯಗಳು, ಸ್ಮಾರಕಶಿಲ್ಪಗಳು ಶಾಸನಗಳಿಂದ ಹರಿಹರದ ಸಾಂಸ್ಕೃತಿಕ ಚರಿತ್ರೆಯ ಬೆಳವಣಿಗೆ ನಿರಂತರವಾಗಿ ತಿಳಿದು ಬರುವುದು ಇಂತಹ ಸಾಂಸ್ಕೃತಿಕ ಚರಿತ್ರೆಯನ್ನು ಕುರಿತು ಥಾಮಸ್ ಫೋಲ್ಕಸ್ ಅವರು ಹರಿಹರೇಶ್ವರ ದೇವಾಲಯಕ್ಕೆ ಸಂಬಂಧಿಸಿದಂತೆ ಪುರಾಣ ಇತಿಹಾಸವನ್ನು ವಿವರವಾಗಿ The Legends of the Shrine of Harihara in the Privince of Mysore (೧೮೭೦) ಎಂಬ ಕೃತಿಯಲ್ಲಿ ಪ್ರಕಟಿಸಿದ್ದಾರೆ. ಖ.ಃ. ಈಂಂಣ ರವರು ಕೊಮಾರನಹಳ್ಳಿಯಲ್ಲಿ ರಾಗಿ, ನವಣೆಗಳನ್ನು ಬೆಳೆದ ಬಗ್ಗೆ Indian Pre Historic and Proto Historic Antiquities ಎಂಬ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ. ಎಂ.ಎಸ್. ನಾಗರಾಜರಾವ್‌ರವರು ಕೊಮಾರನಹಳ್ಳಿ ಪ್ರದೇಶದಲ್ಲಿ ವೈಜ್ಞಾನಿಕ ಉತ್ಖನನ ಕೈಗೊಂಡು ಆ ಪ್ರದೇಶದ ಪ್ರಾಗಿತಿಹಾಸ ಸಂಸ್ಕೃತಿ, ಪ್ರಾಚ್ಯವಶೇಷಗಳು ಮತ್ತು ಛಾಯಾಚಿತ್ರಗಳನ್ನು ಒಳಗೊಂಡ ವಿವರವಾದ ವರದಿಯನ್ನು ಅ.ಸುಂದರ ಅವರ Archaeology in Karnataka ಎಂಬ ಕೃತಿಯಲ್ಲಿ Graves of the Early Iron Using People at Komaranahalli ಎನ್ನುವ ಲೇಖನದಿಂದ ತಿಳಿದುಬರುತ್ತದೆ. ಈ ನೆಲೆಯಲ್ಲಿ ಕಬ್ಬಿಣದ ಬಳಕೆಯ ಕುರಿತು ಅಧ್ಯಯನಗಳು ನಡೆದಿವೆ. S.C. Bhatt ಅವರ The Encyclopedia District Gazeetteers of India. Vol-I ರಲ್ಲಿ ನಂದಿತಾವರೆಯ ಈಶ್ವರ ದೇವಾಲಯದ ಹಾಗೂ ಹಾಲಿವಾಣದ ಕೋಟೆ, ದೇವಾಲಯ, ಶಾಸನಗಳನ್ನು ಈ ಕೃತಿಯಲ್ಲಿ ಉಲ್ಲೇಖಿಸಲಾಗಿದೆ.

ಹಯವದನರಾವ್ ಸಿ., ಇವರ Mysore Gazetteer vol.II, Historical Part II, ಎಂಬ ಕೃತಿಯಲ್ಲಿ ಹರಿಹರದ ಹರಿಹರೇಶ್ವರ ದೇವಾಲಯವನ್ನ ಹೊಯ್ಸಳರ ಚಕ್ರಾಧಿಪತಿ ಎರಡನೇ ನಾರಸಿಂಹನ ಮಂತ್ರಿ ಪೋಲಾಳ್ವ ಕಟ್ಟಿಸಿದುದರ ಬಗ್ಗೆ ಉಲ್ಲೇಖವಿದೆ. Rice B.L., ಇವರ Epigraphia Carnatic vol.XI ರಲ್ಲಿ ಹರಿಹರ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿನ ಸುಮಾರು ೮೦ಕ್ಕೂ ಹೆಚ್ಚಿನ ಶಾಸನಗಳನ್ನ ಪ್ರಕಟಿಸಿದ್ದಾರೆ. ಭಾರತಕ್ಕೆ ಪ್ರವಾಸ ಬಂದಂತಹ ಪ್ರವಾಸಿಗರಲ್ಲಿ

ಫ್ರಾನ್ಸಿಸ್ ಬುಕಾನಾನ್ ಕೂಡಾ ಒಬ್ಬರು. ಇವರ A Journey From Madras Through the Countries Of Mysore, Canara And Malabar ಎಂಬ ಕೃತಿಯಲ್ಲಿ ಹರಿಹರ, ಮಲೆಬೆನ್ನೂರು ಮಾರ್ಗವಾಗಿ ಬಂದಂತಹ ಸಂದರ್ಭದಲ್ಲಿ ಈ ಪ್ರದೇಶಗಳ ಸ್ಮಾರಕ, ದೇವಾಲಯಗಳನ್ನು ಗ್ರಾಮೀಣ ಸಮಾಜವನ್ನ ಕುರಿತು ದಾಖಲಿಸಿದ್ದಾರೆ.

Rice B.L., ರವರು ಹರಿಹರೇಶ್ವರ ದೇವಾಲಯವನ್ನು ಕುರಿತಂತೆ Annual Report ೧೯೯೧-೯೨ ರ ಸಂಚಿಕೆಯಲ್ಲಿ ಪ್ರಕಟಿಸಿದ್ದಾರೆ. ಮೈಸೂರು ಪುರಾತತ್ವ ಇಲಾಖೆಯ ವಾರ್ಷಿಕ ವರದಿಗಳಲ್ಲಿ ಹರಿಹರ, ನಂದಿತಾವರೆ, ನಂದಿಗುಡಿ ಗ್ರಾಮಗಳ ದೇವಾಲಯ ವಾಸ್ತುಶಿಲ್ಪವನ್ನ ಕುರಿತು ಪ್ರಕಟಿಸಲಾಗಿದೆ. ಹಾಗೆಯೇ ಮಾನವಿಕ ಭಾರತಿ ಸಂಪುಟ ೨, ಸಂಚಿಕೆ ೧ ರಲ್ಲಿ ಹರಿಹರ, ಹಲಸಬಾಳು ಗ್ರಾಮ ಪ್ರದೇಶಗಳ ನವಶಿಲಾಯುಗ ಹಾಗೂ ಇತಿಹಾಸ ಆರಂಭಯುಗ ಸಂಸ್ಕೃತಿಗಳ ಬಗ್ಗೆ ಉಲ್ಲೇಖಿಸಲಾಗಿದೆ. ಶಿವತಾರಕ್ ಕೆ.ಬಿ. ಅವರ ಕರ್ನಾಟಕದ ಪುರಾತತ್ವ ನೆಲೆಗಳು ಎಂಬ ಕೃತಿಯಲ್ಲಿ ಹರಿಹರ ತಾಲೂಕಿನ ಪ್ರಾಗಿತಿಹಾಸ ನೆಲೆಗಳ ಕುರಿತು ಮಾಹಿತಿ ಪ್ರಕಟಿಸಲಾಗಿದೆ. ಶಂಕರನಾರಾಯಣರಾವ್ ಎಚ್.ಎಂ. ಇವರ ಶ್ರೀ ಹರಿಹರ ದೇವಾಲಯ ಎಂಬ ಪುಸ್ತಕವು ಹರಿಹರದಲ್ಲಿನ ಎಲ್ಲಾ ಶಾಸನಗಳ ಕುರಿತು ರಾಜಕೀಯ, ಸಾಂಸ್ಕೃತಿಕ, ಸಾಮಾಜಿಕ ಹಾಗೂ ಧಾರ್ಮಿಕ ಅಂಶಗಳ ಜೊತೆಗೆ ಹರಿಹರೇಶ್ವರ ದೇವಾಲಯದ ಸ್ಥಳಪುರಾಣ, ವಾಸ್ತುಶಿಲ್ಪ ಹಾಗೂ ಮೂರ್ತಿ ಶಿಲ್ಪವನ್ನು ಕುರಿತಂತೆ ಇರುವ ಪ್ರಕಟಣೆ ಇದಾಗಿದೆ.

ಬಳ್ಳೆಕೆರೆ ಹನುಮಂತಪ್ಪ ಇವರ ಹರಿಹರ ತಾಲೂಕು ದರ್ಶಿನಿ., ಗಿರಿಜ ಟಿ ಇವರ ದಾವಣಗೆರೆ ಇದು ನಮ್ಮ ಜಿಲ್ಲೆ., ಸದಾಶಿವಪ್ಪ ಶ್ಯಾಗಲೆ ಬಿ. ಎಂ ಇವರ ದಾವಣಗೆರೆ ಜಿಲ್ಲೆ ಒಂದು ಪಕ್ಷಿನೋಟ, ಕಮಲದಾನಿ ಗುರುರಾಯರವರ ಹರಿಹರಕ್ಷೇತ್ರದ ಮಹಾತ್ಮೆ, ಫ್ರಾನ್ಸಿಸ್ ಕ್ಸೇವಿಯರ್ ಅವರ ಹರಿಹರ ಆರೋಗ್ಯ ಮಾತೆಯ ಪುಣ್ಯಕ್ಷೇತ್ರದ ಚರಿತೆ, ಸುರೇಶ ಬಿ ಅವರ ಚಿತ್ರದುರ್ಗ ದಾವಣಗೆರೆ ಜಿಲ್ಲೆಯ ದೇವಾಲಯಗಳು, ಎಂ.ಜಿ. ಈಶ್ವರಪ್ಪ ಇವರ ಸಂಪಾದನೆಯ ಶತಮಾನದ ದಾವಣಗೆರೆ, ಕೊಟ್ರೇಶ್ ನಾ ಉತ್ತಂಗಿಯವರ ಹರಿಹರದೆಳೆಗಳು ಎನ್ನುವಂತಹ ಮೇಲಿನ ಎಲ್ಲ ಗ್ರಂಥಗಳು ಹರಿಹರ ತಾಲೂಕಿನ ರಾಜಕೀಯ, ಸಾಂಸ್ಕೃತಿಕ ಬದುಕಿನ ಎಳೆಗಳನ್ನ ತೋರಿಸುವಂತಹ ಕೃತಿಗಳಾಗಿವೆ. ಸೂರ್ಯನಾಥ ಯು ಕಾಮತ್ ಇವರ ಸಂಪಾದನೆಯ ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ-೩ ರಲ್ಲಿ ಹರಿಹರ ತಾಲೂಕಿನ ಐತಿಹಾಸಿಕ ನೆಲೆಗಳ ಕುರಿತು ಪ್ರಸ್ತಾಪಿಸಲಾಗಿದೆ. ಅಂಬಳಿಕೆ ಹಿರಿಯಣ್ಣ ಇವರ ಸಂಪಾದನೆಯ ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ ಎಂಬ ಗ್ರಂಥದಲ್ಲಿ ಕೊಮಾರನಹಳ್ಳಿಯಲ್ಲಿ ನಡೆದ ಉತ್ಖನನದ ಬಗ್ಗೆ ಕುರಿತಂತೆ ಶಿಲಾಗೋರಿಗಳ ಬಗ್ಗೆ ಉಲ್ಲೇಖಿಸಲಾಗಿದೆ.

ಕಲಬುರ್ಗಿ ಎಂ.ಎಂ ಇವರ ಪ್ರಾಚೀನ ಕರ್ನಾಟಕ ಆಡಳಿತ ವಿಭಾಗಗಳು, ಚಿದಾನಂದ ಮೂರ್ತಿ ಎಂ. ಇವರ ಕನ್ನಡ ಶಾಸನಗಳು ಸಾಂಸ್ಕೃತಿಕ ಅಧ್ಯಯನ, ಹೊಸತು-ಹೊಸತು, ಸಂಶೋಧನಾ ತರಂಗ(ಸಂ.೨), ತಿಪ್ಪೇರುದ್ರಸ್ವಾಮಿ ಹೆಚ್. ಇವರ ಕರ್ನಾಟಕ ಸಂಸ್ಕೃತಿ ಸಮೀಕ್ಷೆ,

ಎಂಬ ಗ್ರಂಥಗಳಲ್ಲಿ ಹರಿಹರದ ಶಾಸನಗಳ, ವೀರಗಲ್ಲುಗಳು, ದೇವಾಲಯದ ಪುರಾಣ ಮುಂತಾದ ಅಂಶಗಳನ್ನು ಕುರಿತಂತೆ ಸಂದರ್ಭೋಚಿತವಾಗಿ ಉಲ್ಲೇಖಿಸಲಾಗಿದೆ. ಕಲಬುರ್ಗಿ ಎಂ.ಎಂ. ಸಂಪಾದನೆಯ ಕರ್ನಾಟಕದ ಕೃಷಿಯತ್ತುಗಳು ಎಂಬ ಗ್ರಂಥದಲ್ಲಿ ಹರಿಹರ ಪ್ರದೇಶಕ್ಕೆ ಸಂಬಂಧಿಸಿದಂತೆ ಹಲವಾರು ಕೃಷಿಯತ್ತುಗಳು ಉಲ್ಲೇಖವಾಗಿವೆ. ಶಾಂತವೀರಯ್ಯ ಪಿ.ಚಿ. ಇವರ ಪವಾಡ ಪುರುಷ ಉಕ್ಕಡಗಾತ್ರಿ ಅಜ್ಜಯ್ಯ ಎಂಬ ಕೃತಿಯಲ್ಲಿ ಉಕ್ಕಡಗಾತ್ರಿಯ ಸ್ಥಳಪುರಾಣ ಕುರಿತಂತೆ ಉಲ್ಲೇಖಿಸಲಾಗಿದೆ.

ಸಂತೇಬೆನ್ನೂರು ಸುಮತೀಂದ್ರ ನಾಡಿಗ್ ಇವರ ದಾವಣಗೆರೆ ಜಿಲ್ಲೆ: ಇತಿಹಾಸದ ಕೆಲವು ಹೆಜ್ಜೆಗಳು ಕೃತಿಯಲ್ಲಿ ಹರಿಹರ ತಾಲೂಕಿನ ಶಾಸನಗಳ ಬಗ್ಗೆ ಮಾಹಿತಿ ಇದೆ. ಎಸ್. ಶ್ರೀಕಂಠಶಾಸ್ತ್ರಿ ಇವರ ಹೊಯ್ಸಳ ವಾಸ್ತುಶಿಲ್ಪ ಕೃತಿಯಲಿ ಹರಿಹರದ ಹರಿಹರೇಶ್ವರ, ನಂದಿತಾವರೆ ಅಮೃತಲಿಂಗ ಮಾಣಿಕೇಶ್ವರ ದೇವಾಲಯಗಳ ವಾಸ್ತುಶಿಲ್ಪವನ್ನು ಉಲ್ಲೇಖಿಸಲಾಗಿದೆ. ದುಂಡ್ಯಪ್ಪ ಹಿ.ಗೊ. ಇವರ ೬೬ ಹಳ್ಳಿಯ ಒಡತಿ ಊರಮ್ಮನ ಚರಿತೆ ಎಂಬ ಪುಸ್ತಕದಲ್ಲಿ ಹರಿಹರ ಪ್ರದೇಶದ ಗ್ರಾಮದೇವತೆಯಾದ ಊರಮ್ಮ ದೇವಿಯ ಕುರಿತು ಪ್ರಸ್ತಾಪಿಸಲಾಗಿದೆ. Gerard Foekema EªÀgÀ Chalukya Architecture vol.I ಕೃತಿಯಲ್ಲಿ ಹರಿಹರದ ಹರಿಹರೇಶ್ವರ ಹಾಗೂ ಮಹಿಷಮರ್ದಿನಿ ದೇವಾಲಯಗಳ ವಾಸ್ತುಶಿಲ್ಪ ಕುರಿತಂತೆ ಉಲ್ಲೇಖವಿದೆ. ಲಕ್ಷ್ಮಣ್ ತೆಲಗಾವಿ, ಅವರ ಸಂಪಾದನೆಯ ಹರತಿಸಿರಿ ಗ್ರಂಥದಲ್ಲಿ ಹರಿಹರ ಪರಿಸರದಲ್ಲಿನ ಭೌಗೋಳಿಕ ಆಡಳಿತ ವಿಭಾಗಗಳನ್ನ ಚರ್ಚಿಸಿದ್ದಾರೆ. ವಾಸುದೇವ ಬಡಿಗೇರ ಇವರ ಶಿರಸಂಗಿ ಕಾಳಮ್ಮ ಸಾಂಸ್ಕೃತಿಕ ಅಧ್ಯಯನ [ಚಾರಿತ್ರಿಕ ಪರಂಪರೆ] ಎಂಬ ಕೃತಿಯಲ್ಲಿ ಕೊಮಾರನಹಳ್ಳಿಯ ಬೃಹತ್ ಶಿಲಾ ಸಂಸ್ಕೃತಿಗೆ ಸಂಬಂಧಿಸಿದಂತೆ ಪ್ರಸ್ತಾಪಿಸಲಾಗಿದೆ.

ಹರಿಹರ ಪರಿಸರದಲ್ಲಿನ ವಾಸ್ತುಮೂರ್ತಿಶಿಲ್ಪಕ್ಕೆ ಸಂಬಂಧಿಸಿದಂತೆ, ಇತಿಹಾಸ, ನೀರಾವರಿ ವ್ಯವಸ್ಥೆ, ಸ್ಮಾರಕಗಳು, ಹೀಗೆ ಹಲವಾರು ಐತಿಹಾಸಿಕ ವಿಚಾರಗಳನ್ನು ತಿಳಿಸಿಕೊಡುವಂತಹ ಲೇಖನಗಳು, ಇತಿಹಾಸ ದರ್ಶನ ಸಂಪುಟಗಳು, ವಿಜಯನಗರ ಅಧ್ಯಯನ ಶಾಸನ ಅಧ್ಯಯನ ಸಂಪುಟಗಳಲ್ಲಿ ಪ್ರಕಟಗೊಂಡಿವೆ. ಶ್ರೀಮತಿ ಚಂದನ್ ಇವರ ಹರಿಹರದ ಸಂಗಮೇಶ್ವರ ದೇವಾಲಯ, ಲೇಖನವನ್ನು ಇತಿಹಾಸ ದರ್ಶನ ಸಂಪುಟ ೮ ರಲ್ಲಿ ಪ್ರಕಟಿಸಲಾಗಿದೆ. ಇದೇ ಲೇಖಕರ ಜಿಗಳಿಯ ಅಪ್ರಕಟಿತ ದೇಗುಲ ಶಾಸನಶಿಲ್ಪ, ಲೇಖನವನ್ನ ಇತಿಹಾಸದ ದರ್ಶನ ಸಂಪುಟ ೧೨ ರಲ್ಲಿ ಪ್ರಕಟಿಸಲಾಗಿದೆ. ಹೀಗೆ ಇನ್ನೂ ಮುಂತಾದ ಲೇಖನಗಳು ಪ್ರಕಟಗೊಂಡಿವೆ. ಉಳಿದ ಎಲ್ಲಾ ಲೇಖನಗಳನ್ನ ಮಹಾಪ್ರಬಂಧದ ಗ್ರಂಥಋಣದಲ್ಲಿ ಕೊಡಲಾಗುತ್ತದೆ.

ಹರಿಹರ ಪರಿಸರವನ್ನು ಉಲ್ಲೇಖ ಮಾಡುವ ಪುಸ್ತಕಗಳು, ಲೇಖನಗಳ ಜೊತೆಗೆ ಸಂಶೋಧನಾ ಪ್ರಬಂಧಗಳು ಕೂಡ ಇವೆ. ಪಾಟೀಲ ಹ. ಮಂಜುನಾಥ ಇವರ ದಾವಣಗೆರೆ ಜಿಲ್ಲೆಯ ಶಾಸನಗಳು ಸಾಂಸ್ಕೃತಿಕ ಅಧ್ಯಯನ ಎಂಬ ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧದಲ್ಲಿ ಹರಿಹರ ತಾಲೂಕಿನ ಹಲವಾರು ಶಾಸನಗಳನ್ನು ಬಳಸಿಕೊಂಡಿದ್ದಾರೆ. ಸುರೇಶ್ ಬಿ. ಇವರ ಚಿತ್ರದುರ್ಗ-ದಾವಣಗೆರೆ ಜಿಲ್ಲೆಗಳ ಪುರಾತತ್ವ ಅಧ್ಯಯನ ಎಂಬ ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧದಲ್ಲಿ ಹರಿಹರ ತಾಲೂಕಿನ ವಾಸ್ತುಶಿಲ್ಪ ಕುರಿತಂತೆ ಅಧ್ಯಯನ ಮಾಡಲಾಗಿದೆ.

ತಿಪ್ಪೇಸ್ವಾಮಿ ಹೆಚ್. ಇವರ ದಾವಣಗೆರೆ ಜಿಲ್ಲೆಯ ದೇವಾಲಯಗಳು, ಎಂಬ ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧದಲ್ಲಿ ತಾಲೂಕಿನ ಭೌಗೋಳಿಕ, ರಾಜಕೀಯ, ವಾಸ್ತು ಮತ್ತು ಮೂರ್ತಿಶಿಲ್ಪ ಕುರಿತಂತೆ ಅಧ್ಯಯನ ಮಾಡಲಾಗಿದೆ. ಹರಿಹರದ ಹರಿಹರೇಶ್ವರ ದೇವಾಲಯಕ್ಕೆ ಸಂಬಂಧಿಸಿದಂತೆ ಡಿ. ಮಂಜುನಾಥ ಇವರು ಮಧ್ಯಕಾಲದಲ್ಲಿ ದೇವಾಲಯ ಆಶ್ರಯಪಾಲನೆ ಮತ್ತು ನಿರ್ವಹಣೆ ಹರಿಹರ ದೇವಾಲಯದ ಒಂದು ಅಧ್ಯಯನ ಶಾಸನಗಳ ಆಧಾರದಿಂದ ಎಂಬ ಎಂ.ಫಿಲ್. ಅಧ್ಯಯನ ಕೈಗೊಂಡಿದ್ದಾರೆ.

ಹೀಗೆ ಹಲವಾರು ಕೃತಿಗಳು ಪಿಎಚ್.ಡಿ., ಎಂ.ಫಿಲ್. ಪ್ರಬಂಧಗಳು ಈ ಭಾಗದ ಮಾಹಿತಿಯನ್ನು ಅಲ್ಪ ತಿಳಿಸುತ್ತವೆಯೇ ಹೊರತು ಪೂರ್ಣ ಮಾಹಿತಿಯನ್ನು ಒಳಗೊಂಡಿಲ್ಲ ಅಲ್ಲದೆ ಪ್ರಾಗಿತಿಹಾಸ, ವಾಸ್ತುಶಿಲ್ಪ, ಮೂರ್ತಿಶಿಲ್ಪ, ಶಾಸನಗಳು, ನಂಬಿಕೆ ಆಚರಣೆ ಕುರಿತಂತೆ ತಾಲೂಕು ವ್ಯಾಪ್ತಿಯೊಳಗೆ ಸಾಂಸ್ಕೃತಿಕ ಅಧ್ಯಯನ ನಡೆದಿಲ್ಲ ಹಾಗಾಗಿ ತಾಲೂಕಿನ ಬಗೆಗೆ ಸಮಗ್ರವಾಗಿ ಅಧ್ಯಯನ ಮಾಡಿ, ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟುವಲ್ಲಿ ಹರಿಹರ ತಾಲೂಕಿನ ಸಾಂಸ್ಕೃತಿಕ ಚರಿತ್ರೆ ಸಹಾಯಕವಾಗುವ ರೀತಿಯಲ್ಲಿ ಅಧ್ಯಯನ ಕೈಗೊಳ್ಳುವುದು.

ಅಧ್ಯಯನದ ವಿಧಾನ : ಸಂಶೋಧನೆಗೆ ಪೂರ್ವಯೋಜಿತ ಅಧ್ಯಯನ ವಿಧಾನವನ್ನು ಅನುಸರಿಸುವುದು ಅತಿ ಮುಖ್ಯ ಅಧ್ಯಯನ ಕ್ರಮವು ಸಂಶೋಧನೆಗೆ ವೈಜ್ಞಾನಿಕವಾದ ಮಾರ್ಗವಾಗಿದ್ದು, ಮಹಾಪ್ರಬಂಧವನ್ನು ವ್ಯವಸ್ಥಿತ ಹಾಗೂ ಸುಲಭವಾಗಿ ರಚಿಸಲು ಸಹಾಯಕವಾದುದು. ಸಂಶೋಧನಾ ಪ್ರಬಂಧಕ್ಕೆ ಪ್ರಥಮ ಹಾಗೂ ಅಂತಿಮ ರೂಪವನ್ನು ಅಧ್ಯಯನ ಕ್ರಮವು ನೀಡುವುದು ಗಮನಿಸಬೇಕಾದ ಸಂಗತಿ ಪ್ರಸ್ತುತ ಸಂಶೋಧನ ವಿಷಯವು ಕೆಲವು ಅಧ್ಯಯನ ಕ್ರಮಗಳನ್ನು ರೂಪಿಸಿಕೊಂಡಿದೆ. ಮೊದಲಿಗೆ ಸಂಶೋಧನ ವಿಷಯವಾದ ಹರಿಹರ ತಾಲೂಕು ಪ್ರದೇಶಕ್ಕೆ ಸಂಬಂಧಿಸಿದಂತೆ ಇದುವರೆಗೆ ಹೊರಬಂದಿರುವ ಉತ್ಖನನ ವರದಿ, ಸಂಶೋಧನ ಕೃತಿ, ಲೇಖನ, ನಿಯತಕಾಲಿಕೆ ಹಾಗೂ ಪ್ರಬಂಧಗಳನ್ನು ಸಂಗ್ರಹಿಸಲಾಗಿದೆ. ಸಂಗ್ರಹಿಸಿದ ಆಕರಗಳ ಗ್ರಂಥಸೂಚಿಯನ್ನು ತಯಾರಿಸಿ ಅಕಾರಾದಿಯಾಗಿ ಜೋಡಿಸಿಕೊಳ್ಳಲಾಯಿತು.

ನಂತರ ಸಂಶೋಧನ ವಿಷಯಕ್ಕೆ ವ್ಯವಸ್ಥಿತವಾದ ಹಾಗೂ ಪೂರ್ವಯೋಜಿತ ವಿಧಿ ವಿಧಾನವಾದ ಕ್ಷೇತ್ರಕಾರ್ಯವನ್ನು ಕೈಗೊಳ್ಳಲಾಯಿತು. ಇಲ್ಲಿ ಅನುಸರಿಸಿದ ವಿಧಾನವೆಂದರೆ ಹರಿಹರ ಪರಿಸರದಲ್ಲಿನ ಪ್ರಾಗಿತಿಹಾಸ ಕಾಲದ ವಸತಿನೆಲೆ, ಶಿಲಾಸಮಾಧಿ, ರಕ್ಷಣಾಸ್ಮಾರಕ, ದೇವಾಲಯ, ಶಾಸನ, ಸ್ಮಾರಕಶಿಲ್ಪಗಳ ಛಾಯಾಚಿತ್ರಗಳನ್ನು ತೆಗೆದು ಅವುಗಳಿಗೆ ಸಂಬಂಧಿಸಿದಂತಹ ಮಾಹಿತಿಯನ್ನು ಸಂಗ್ರಹಿಸಲಾಯಿತು. ಇದರೊಂದಿಗೆ ವಿಷಯಕ್ಕೆ ಅಗತ್ಯವೆನಿಸಿದ ಸಾಂಸ್ಕೃತಿಕ ಇತಿಹಾಸವನ್ನು ತಿಳಿಯಲು ಹರಿಹರ ಪರಿಸರದಲ್ಲಿರುವ ಐತಿಹ್ಯ, ನಂಬಿಕೆ, ಆಚರಣೆ ಹಾಗೂ ಜನರ ನಡುವಿನ ಮೂಲಗಳಿಂದ ಇರುವ ಚಾರಿತ್ರಿಕ ದಾಖಲೆಗಳನ್ನು ಕ್ರೋಢಿಕರಿಸಲಾಯಿತು. ಸಾಂಸ್ಕೃತಿಕವಾಗಿ ಹರಿಹರ ಪರಿಸರದಲ್ಲಿ ಇಂದಿಗೂ ನಡೆದುಕೊಂಡು ಬರುತ್ತಿರುವ ಜಾತ್ರೆ–ಉತ್ಸವಗಳಿಗೆ ಭೇಟಿನೀಡಿ ಛಾಯಾಚಿತ್ರ ಸಹಿತ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಒಟ್ಟಾರೆ ಭೌಗೋಳಿಕ, ಪ್ರಾಗಿತಿಹಾಸ,

ಚಾರಿತ್ರಿಕ ಅಂಶಗಳನ್ನು ಹರಿಹರ ತಾಲೂಕಿನಲ್ಲಿ ಸಮಗ್ರವಾಗಿ ದಾಖಲಿಸಿ, ಅರ್ಥೈಸಿ, ವಿಶ್ಲೇಷಿಸಿ ಅಧ್ಯಯನ ಕೈಗೊಳ್ಳಲಾಗಿದೆ.

ಅಧ್ಯಯನದ ಸ್ವರೂಪ : ಹರಿಹರ ತಾಲೂಕಿನ ಇತಿಹಾಸ ಮತ್ತು ಪುರಾತತ್ವ ಅಧ್ಯಯನವು ಸೀಮಿತ ವ್ಯಾಪ್ತಿಯನ್ನು ಹೊಂದಿದ್ದರೂ ಅದು ಪ್ರಾಗಿತಿಹಾಸ ಕಾಲದಿಂದ ಇಂದಿನವರೆಗೂ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ಒಳಗೊಂಡ ವಿಸ್ತಾರ ಅಧ್ಯಯನವಾಗಿದೆ. ಈ ನಿಟ್ಟಿನಲ್ಲಿ ಮಹಾಪ್ರಬಂಧವನ್ನು ಅಧ್ಯಯನದ ಅನುಕೂಲಕ್ಕಾಗಿ ಆರು ಅಧ್ಯಾಯಗಳಾಗಿ ವಿಭಾಗಿಸಲಾಗಿದೆ.

ಪ್ರಸ್ತಾವನೆ ಎಂಬ ಮೊದಲ ಅಧ್ಯಾಯವು, ಅಧ್ಯಯನದ ಉದ್ದೇಶ, ವ್ಯಾಪ್ತಿ, ಸಮೀಕ್ಷೆ, ವಿಧಾನ ಹಾಗೂ ಸ್ವರೂಪವನ್ನು ಒಳಗೊಂಡಿದೆ.

ಭೌಗೋಳಿಕ ಹಿನ್ನೆಲೆ ಮತ್ತು ಪ್ರಾಗಿತಿಹಾಸ ಎಂಬ ಎರಡನೆಯ ಅಧ್ಯಾಯವು, ಹರಿಹರ ತಾಲೂಕಿನ ಭೌಗೋಳಿಕ ಸಂಗತಿಗಳನ್ನು ಒಳಗೊಂಡಿದ್ದು ಹಾಗೂ ಹರಿಹರ ಪರಿಸರದಲ್ಲಿನ ಪ್ರಾಗಿತಿಹಾಸ ಕಾಲದ ಮಾನವನ ಸಾಂಸ್ಕೃತಿಕ ಚಟುವಟಿಕೆಗಳನ್ನ ಕುರಿತಾಗಿದ್ದು ಈ ಪರಿಸರದಲ್ಲಿ ಹಳೆಶಿಲಾಯುಗದ ಕುರುಹುಗಳನ್ನು ಹೊರತುಪಡಿಸಿದರೆ ಸೂಕ್ಷ್ಮಶಿಲಾಯುಗ, ನವಶಿಲಾಯುಗ, ಕಬ್ಬಿಣಯುಗ ಸಂಸ್ಕೃತಿಗಳಿಗೆ ಸಂಬಂಧಿಸಿದ ಉಪಕರಣಗಳು ಕಂಡುಬಂದಿವೆ. ಈ ಎಲ್ಲಾ ಆಕರಗಳ ಹಿನ್ನೆಲೆಯಲ್ಲಿ ಹರಿಹರ ಪ್ರದೇಶದ ಪ್ರಾಚೀನತೆಯನ್ನು ಅರಿಯುವ ಪ್ರಯತ್ನ ಮಾಡಲಾಗಿದೆ.

ಶಾಸನಗಳು ಎಂಬ ಮೂರನೆಯ ಅಧ್ಯಾಯವು, ಹರಿಹರ ತಾಲೂಕಿನಲ್ಲಿ ಇದುವರೆಗೂ ಪ್ರಕಟವಾಗಿರುವಂತಹ ಹಾಗೂ ನವಶೋಧಿತ ಶಾಸನಗಳಿಂದ ಸಾಂಸ್ಕೃತಿಕ ಚರಿತ್ರೆಯನ್ನ ಕಟ್ಟಿಕೊಡಲಾಗಿದೆ. ಶಾಸನಗಳಲ್ಲಿನ ಸ್ಥಳನಾಮಗಳ ಕುರಿತು ಅಧ್ಯಯನ ಮಾಡಲಾಗಿದೆ. ಪ್ರಾಚೀನ ಇತಿಹಾಸದಿಂದ ೧೭-೧೮ನೆಯ ಶತಮಾನದವರೆಗೂ ಹರಿಹರ ಪರಿಸರದಲ್ಲಿ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ರಾಜರು, ಸಾಮಂತರು ಮತ್ತು ಪಾಳೆಯಗಾರರು ಆಳ್ವಿಕೆ ಮಾಡಿರುತ್ತಾರೆ. ಈ ಪರಿಸರದಲ್ಲಿ ಕದಂಬ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಕಲಚೂರಿ, ನೊಳಂಬ, ಉಚ್ಚಂಗಿ ಪಾಂಡ್ಯರು, ಹೊಯ್ಸಳರು, ವಿಜಯನಗರ ಸಾಮ್ರಾಜ್ಯ, ಚಿತ್ರದುರ್ಗ, ತರೀಕೆರೆ ಪಾಳೆಯಗಾರರ ಕಾಲಘಟ್ಟದ ಚಾರಿತ್ರಿಕ ಕುರುಹುಗಳಾದ ಶಾಸನಗಳ ಆಕರಗಳ ಮೂಲಕ ಈ ಪ್ರದೇಶದ ರಾಜಕೀಯ, ಆಡಳಿತ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ವ್ಯವಸ್ಥೆಗಳನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸಲಾಗಿದೆ.

ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪ ಎಂಬ ನಾಲ್ಕನೆಯ ಅಧ್ಯಾಯವು ದೇವಾಲಯ, ರಕ್ಷಣಾವಾಸ್ತು, ಮೂರ್ತಿಶಿಲ್ಪ, ಸ್ಮಾರಕಶಿಲ್ಪವನ್ನು ಒಳಗೊಂಡ ವಿಸ್ತಾರವಾದ ಅಧ್ಯಾಯವಾಗಿದೆ. ಹರಿಹರ ಪರಿಸರವು ಶೈವ, ವೈಷ್ಣವ, ಶಾಕ್ತ ಮುಂತಾದ ದೇವಾಲಯಗಳನ್ನು ಒಳಗೊಂಡಿದೆ. ಈ ದೇವಾಲಯಗಳು ಧಾರ್ಮಿಕ ಪರಂಪರೆ ಮತ್ತು ವಾಸ್ತುವಿನ್ಯಾಸವನ್ನು ಸೂಚಿಸುವ ಆಕರಗಳಾಗಿವೆ. ರಕ್ಷಣಾವಾಸ್ತುವಿಗೆ ಸಂಬಂಧಿಸಿದಂತೆ ಕೋಟೆಗಳು ಕಂಡುಬರದೆ ಇತರ ಸ್ಮಾರಕಗಳಾದ ಬುರುಜು,

ಬತೇರಿ, ದ್ವಾರಬಾಗಿಲುಗಳನ್ನು ಈ ಅಧ್ಯಾಯದಲ್ಲಿ ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ. ಇದೇ ಅಧ್ಯಾಯದಲ್ಲಿ ಮೂರ್ತಿಶಿಲ್ಪಗಳ ಕುರಿತು ಅಧ್ಯಯನ ಮಾಡಲಾಗಿದೆ. ವೀರಗಲ್ಲು ಮತ್ತು ಮಾಸ್ತಿಗಲ್ಲುಗಳಿಂದ ಐತಿಹಾಸಿಕ ಅಂಶಗಳನ್ನು ಪ್ರತಿಬಿಂಬಿಸುವ ಜೊತೆಗೆ ಸಾಂಸ್ಕೃತಿಕ ಮೌಲ್ಯದ ಬಗ್ಗೆಯೂ ತಿಳಿಯಬಹುದು. ತ್ಯಾಗ, ಬಲಿದಾನದ ಪ್ರೇರಣೆಯಾದ ವೀರಗಲ್ಲು, ತುರುಗೋಳ್ ವೀರಗಲ್ಲುಗಳು ಮತ್ತು ಮಾನ ಪ್ರಾಣಕ್ಕಾಗಿ ಸತಿ ಹೋದ ಮಹಿಳೆಯ ಪ್ರೀತಿ–ಗೌರವಗಳನ್ನು ಸೂಚಿಸುವ ಸತಿಗಲ್ಲುಗಳನ್ನು ಕುರಿತ ಐತಿಹಾಸಿಕ ಮತ್ತು ಸಾಂಸ್ಕೃತಿಕ ಆಚರಣೆಗಳನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ.

ನಂಬಿಕೆ ಮತ್ತು ಆಚರಣೆ ಎಂಬ ಐದನೆಯ ಅಧ್ಯಾಯವು ತಾಲೂಕಿನ ಸಾಂಸ್ಕೃತಿಕ ಪರಂಪರೆಯಾದಂತಹ ನಂಬಿಕೆ, ಆಚರಣೆ, ಸ್ಥಳಪುರಾಣ, ಐತಿಹ್ಯ, ಜಾತ್ರೆ–ಉತ್ಸವಗಳು ಹಾಗೂ ಧಾರ್ಮಿಕ ವಿಧಿವಿಧಾನಗಳನ್ನು ವಿವರಿಸಲಾಗಿದೆ.

ಸಮಾರೋಪ ಎಂಬ ಆರನೆಯ ಅಧ್ಯಾಯವು ಇಡೀ ಅಧ್ಯಯನದಲ್ಲಿ ಕಂಡುಕೊಂಡ ಒಟ್ಟಾರೆ ಸಂಶೋಧನೆಯ ಫಲಿತಾಂಶಗಳನ್ನು ನೀಡುವ ಪ್ರಯತ್ನವನ್ನು ಮಾಡಲಾಗಿದೆ. ಕೊನೆಯಲ್ಲಿ ಪೂರಕ ಮಾಹಿತಿಗಳಾದ ಗ್ರಂಥಋಣ, ಛಾಯಾಚಿತ್ರ, ತಲನಕ್ಷೆ ಹಾಗೂ ನಕಾಶೆಗಳನ್ನು ನೀಡಲಾಗಿದೆ.

ಅಧ್ಯಾಯ ಎರಡು

ಭೌಗೋಳಿಕ ಹಿನ್ನೆಲೆ ಮತ್ತು ಪ್ರಾಗಿತಿಹಾಸ

೨.೧ ಭೌಗೋಳಿಕ ಹಿನ್ನೆಲೆ

೨.೨ ಪ್ರಾಗಿತಿಹಾಸ

ಅಧ್ಯಾಯ ಎರಡು

ಭೌಗೋಳಿಕ ಹಿನ್ನೆಲೆ ಮತ್ತು ಪ್ರಾಗಿತಿಹಾಸ

೨.೧ ಭೌಗೋಳಿಕ ಹಿನ್ನೆಲೆ

ಒಂದು ಪ್ರದೇಶದ ಅಧ್ಯಯನವನ್ನು ಕೈಗೊಳ್ಳುವ ಮೊದಲು ಆ ಪ್ರದೇಶದ ಭೌಗೋಳಿಕ ಅಂಶಗಳನ್ನು ತಿಳಿಯುವುದು ಅತ್ಯವಶ್ಯಕವಾಗಿರುತ್ತದೆ. ಕಾರಣ ಆ ಪ್ರದೇಶದ ಸಂಸ್ಕೃತಿಯ ವಿಕಾಸ ಮತ್ತು ಭೌಗೋಳಿಕ ಅಂಶಗಳ ನಡುವಿನ ಪರಸ್ಪರ ಸಂಬಂಧವಾಗಿದೆ. ಹಾಗೆಯೇ ಭೌಗೋಳಿಕ ಪರಿಸರ ಪ್ರಕೃತಿಯ ಒಂದು ಕೊಡುಗೆಯು ಆಗಿದೆ. ಪ್ರಕೃತಿಯ ಅಸ್ತಿತ್ವ ಮೊದಲು ಆದರೆ ಅನಂತರದಲ್ಲಿ ಮಾನವನ ಪ್ರವೇಶವಾಗಿದೆ. ಈ ಹಿನ್ನೆಲೆಯಲ್ಲಿ ಆ ಪ್ರದೇಶದ ಇತಿಹಾಸ ಅಲ್ಲಿನ ಸಂಸ್ಕೃತಿಯನ್ನು ಅರಿಯಲು ಭೌಗೋಳಿಕ ಅಂಶಗಳು ಸಹಾಯವಾಗುತ್ತವೆ. ಮಾನವನು ಒಂದು ಪ್ರದೇಶದಲ್ಲಿ ನೆಲೆಯೂರಲು ಅಲ್ಲಿ ಹರಿಯುವ ನದಿಗಳು, ಬಯಲು ಪ್ರದೇಶ, ಫಲವತ್ತಾದ ಮಣ್ಣು, ಪ್ರಾಣಿಸಂಪತ್ತು, ಖನಿಜ ಸಂಪತ್ತು, ಅರಣ್ಯ ಸಂಪತ್ತು, ಹವಾಗುಣ, ಅಕ್ಷಾಂಶ, ರೇಖಾಂಶ ಮುಂತಾದ ಭೌಗೋಳಿಕ ಅಂಶಗಳು ಅವಶ್ಯಕವಾಗುತ್ತವೆ. ಸೂಕ್ಷ್ಮವಾಗಿ ಗಮನಿಸಿ ನೋಡುವುದಾದರೆ ಅಂದಿನ ಪ್ರಾಚೀನ ನಾಗರೀಕತೆಗಳೆಲ್ಲವೂ ಸಾಮಾನ್ಯವಾಗಿ ನದಿ ಬಯಲು ಪರಿಸರದಲ್ಲಿಯೇ ಉಗಮವಾಗಿರುವುದು ತಿಳಿದುಬರುತ್ತದೆ. ಹರಿಹರ ತಾಲ್ಲೂಕು ಪರಿಸರವನ್ನು ಐತಿಹಾಸಿಕ ಅಧ್ಯಯನಕ್ಕೆ ತೊಡಗಿಸುವ ಮೊದಲು ಆ ಪ್ರದೇಶದ ಭೌಗೋಳಿಕ ಅಂಶಗಳು ಯಾವ ರೀತಿ ಪ್ರಭಾವ ಬೀರಿವೆ ಎಂದು ತಿಳಿಯುವುದು ಅಗತ್ಯವೆನಿಸುತ್ತದೆ.

ದಾವಣಗೆರೆ ಜಿಲ್ಲೆಯ ಆರು ತಾಲೂಕುಗಳಲ್ಲಿ ಹರಿಹರ ತಾಲೂಕು ಒಂದು ಈ ಪ್ರದೇಶದ ಸ್ಥಳಪುರಾಣ, ಭೌಗೋಳಿಕ ಲಕ್ಷಣ, ಹರಿಹರೇಶ್ವರ ದೇವಾಲಯ ಹಾಗೂ ಕನ್ನಡ ನಾಡಿನ ನಾಲ್ಕು ದಿಕ್ಕುಗಳನ್ನು ಒಟ್ಟುಗೂಡಿಸುವ ಆಧಾರದ ಮೇಲೆ ನಾಡಿನಾದ್ಯಂತ ಹೆಸರುವಾಸಿಯಾಗಿದೆ. ದಾವಣಗೆರೆ ೧೫-೦೮-೧೯೯೭ರಲ್ಲಿ ಚಿತ್ರದುರ್ಗ ಜಿಲ್ಲೆಯಿಂದ ಬೇರ್ಪಟ್ಟು ಚಿತ್ರದುರ್ಗ ಜಿಲ್ಲೆಯಲ್ಲಿದ್ದ ಹರಿಹರ, ಜಗಲೂರು, ದಾವಣಗೆರೆ ತಾಲ್ಲೂಕುಗಳಿಗೆ ಶಿವಮೊಗ್ಗ ಜಿಲ್ಲೆಯ ಹೊನ್ನಾಳಿ, ಚನ್ನಗಿರಿ, ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲೂಕುಗಳನ್ನು ಸೇರಿಸಿಕೊಂಡು ೬ ತಾಲೂಕುಗಳಿಂದ ಕೂಡಿದ

ನೂತನ ಜಿಲ್ಲೆಯಾಗಿದೆ. ಜಿಲ್ಲೆಯ ವಾಯುವ್ಯಕ್ಕೆ ೧೧ ಕಿ.ಮೀ. ದೂರದಲ್ಲಿರುವ ಹರಿಹರ ಉತ್ತರದಲ್ಲಿ ಹರಪನಹಳ್ಳಿ, ದಕ್ಷಿಣದಲ್ಲಿ ಹೊನ್ನಾಳಿ, ಪೂರ್ವದಲ್ಲಿ ದಾವಣಗೆರೆ, ಪಶ್ಚಿಮದಲ್ಲಿ ಹಿರೇಕೆರೂರು ಮತ್ತು ರಾಣಿಬೆನ್ನೂರು ತಾಲೂಕುಗಳಿಂದ ಸುತ್ತುವರಿಯಲ್ಪಟ್ಟಿದೆ. ಈ ತಾಲೂಕನ್ನು ಹರಿಹರ ಕಸಬಾ, ಹಾಗೂ ಮಲೆಬೆನ್ನೂರು ಎಂಬುದಾಗಿ ಎರಡು ಹೋಬಳಿ ಕೇಂದ್ರಗಳಾಗಿ ವಿಭಾಗ ಮಾಡಲಾಗಿದೆ.

ದಕ್ಷಿಣದ ಮಲೆನಾಡು ಮತ್ತು ಉತ್ತರದ ಬಯಲು ಸೀಮೆಗಳನ್ನು ಸಂಪರ್ಕಿಸುವ ಮಧ್ಯ ಕರ್ನಾಟಕದ ಕೇಂದ್ರ ಸ್ಥಳದಲ್ಲಿರುವ ಈ ತಾಲೂಕು ಅರೆಮಲೆನಾಡು ಪ್ರದೇಶವಾಗಿದೆ. ಹರಿಹರ ೧೪.೫೨ರ ಉತ್ತರ ಅಕ್ಷಾಂಶ ಹಾಗೂ ೭೫.೮ರ ಪೂರ್ವ ರೇಖಾಂಶದಲ್ಲಿ[1] ಕಂಡುಬರುವ ಇದು ಸಮುದ್ರ ಮಟ್ಟದಿಂದ ೫೪೦ ಮೀಟರ್[2] ಎತ್ತರದಲ್ಲಿದೆ. ಭೌಗೋಳಿಕ ವಿಸ್ತೀರ್ಣ ೪೯೮.೬೬ಚ.ಕಿ.ಮೀ[3] ಹೊಂದಿದೆ ತಾಲೂಕಿನಲ್ಲಿ ಒಟ್ಟು ೧೦ ಬೇಚಿರಾಕ್ ಗ್ರಾಮಗಳು ೮೬ ಜನವಸತಿ ಗ್ರಾಮಗಳು ಕಂಡುಬರುತ್ತವೆ. ೨೦೦೧ರ ಜನಗಣತಿ ಪ್ರಕಾರ ತಾಲೂಕಿನ ಜನಸಂಖ್ಯೆ ೨.೪೫.೬೪೭[4] ಇದ್ದಿತು ಆದರೆ ೨೦೧೧ರ ಜನಗಣತಿ ಪ್ರಕಾರ ೨.೮೭.೪೭೩[5] ಜನಸಂಖ್ಯೆಯನ್ನ ಹೊಂದಿದೆ. ಸುಮಾರು ೧.೪೭.೮೫೪ ಮಂದಿ ಪುರುಷರು, ೧.೩೯.೬೧೯ ಮಹಿಳೆಯರಿದ್ದಾರೆ. ತಾಲೂಕಿನ ಲಿಂಗಾನುಪಾತ ಗಮನಿಸಿದಾಗ ಇಲ್ಲಿ ಪ್ರತಿ ೧೦೦೦ ಪುರುಷರಿಗೆ ೯೪೭ ಮಂದಿ ಸ್ತ್ರೀಯರಿರುವುದು ತಿಳಿದುಬರುತ್ತದೆ.

೨.೧.೧ ವಾಯುಗುಣ

ಹರಿಹರ ತಾಲೂಕಿನ ವಾಯುಗುಣವನ್ನು ನೋಡುವುದಾದರೆ ಇಲ್ಲಿ ಮಾರ್ಚ್ ತಿಂಗಳಿನಿಂದ ಬೇಸಿಗೆ ಕಾಲ ಪ್ರಾರಂಭವಾಗಿ ಮೇ ತಿಂಗಳಲ್ಲಿ ಕೊನೆಗೊಳ್ಳುತ್ತದೆ. ಒಟ್ಟಾರೆ ಜಿಲ್ಲೆಯ ಉಷ್ಣಾಂಶವನ್ನು ಗಮನಿಸಿದಾಗ ಮಾರ್ಚ್ ತಿಂಗಳ ನಂತರ ಉಷ್ಣಾಂಶವು ಗಣನೀಯವಾಗಿ ಹೆಚ್ಚಾಗುತ್ತಾ ಹೋಗಿ ಏಪ್ರಿಲ್ ತಿಂಗಳಿನಲ್ಲಿ ಹೆಚ್ಚು ಉಷ್ಣಾಂಶವಿರುವುದನ್ನು ಕಾಣಬಹುದು ಹಾಗಾಗಿ ತಾಲೂಕಿನಲ್ಲಿ ಬೇಸಿಗೆ ಕಾಲದಲ್ಲಿ ಕನಿಷ್ಠ ೩೬೦ಸೆ. ಗ್ರೇಡ್ ನಿಂದ ೪೧೦ ಸೆಂ ಗ್ರೇಡ್[6] ಉಷ್ಣಾಂಶವಿರುತ್ತದೆ ಮತ್ತು ಮೇ ತಿಂಗಳಿನಿಂದ ನೈರುತ್ಯ ಮಾನ್ಸೂನ್ ಮಾರುತಗಳು ಆರಂಭವಾಗಿ ಸೆಪ್ಟೆಂಬರ್ ತಿಂಗಳವರೆಗೆ ಇರುತ್ತದೆ. ಈ ತಾಲೂಕಿನ ವಾರ್ಷಿಕ ಸರಾಸರಿ ಮಳೆ ೬೩೪.೬ ಮಿ.ಮೀ[7] ಬೀಳುತ್ತದೆ ಹಾಗೆಯೇ ಹಿಂಗಾರು ಮಳೆಯು ಸಹ ಅಧಿಕವಾಗಿ ಆಗುತ್ತದೆ. ಇನ್ನೂ ಚಳಿಗಾಲ ಡಿಸೆಂಬರ್‌ನಿಂದ ಪ್ರಾರಂಭವಾಗಿ ಫೆಬ್ರುವರಿಯವರೆಗೂ ನಿರಂತರವಾಗಿರುತ್ತದೆ.

೨.೧.೨ ಭೂ ಮೇಲ್ಮೈಲಕ್ಷಣ

ತಾಲೂಕಿನ ನೈರುತ್ಯದಲ್ಲಿ ಗುಡ್ಡದ ತುಮ್ಮಿನಕಟ್ಟೆಯ ಜೇನುಕೊಳ್ಳ ಗುಡ್ಡದಿಂದ ಪೂರ್ವದ ಕಡೆ ಹಬ್ಬಿರುವ ಕೊಮಾರನಹಳ್ಳಿ, ಹೆಳವನಕಟ್ಟೆ ಗುಡ್ಡ, ಕೊಪ್ಪದ ಗವಿಸಿದ್ದೇಶ್ವರ ಗುಡ್ಡ, ಉತ್ತರದಲ್ಲಿ ಚಿಕ್ಕಬಿದರೆ, ಕೊಂಡಜ್ಜಿ, ಸಾರಥಿ ಗುಡ್ಡಗಳಿವೆ. ಪಶ್ಚಿಮದ ಉದ್ದಕ್ಕೂ ಗಡಿಯಾಗಿ ತುಂಗಭಧ್ರಾ ನದಿ ಹರಿದಿದೆ. ಪೂರ್ವ, ಈಶಾನ್ಯ ಹಾಗೂ ಆಗ್ನೇಯ ಭಾಗವು ಗುಡ್ಡಗಳಿಂದ ಮುಕ್ತವಾಗಿದ್ದು,

ಪುಷ್ಪಭೂಮಿಯಂತೆ ಫಲವತ್ತಾದ ಭೂಭಾಗದಿಂದ ಕೂಡಿದೆ. ಹಾಗಾಗಿ ಹೆಚ್ಚು ಮೈದಾನ ಪ್ರದೇಶದಿಂದ ಕೂಡಿರುವ ಇದು ಸುಮಾರು ೧.೩೭೫ ಹೆಕ್ಟಾರ್‌ಗಳಷ್ಟು ಕುರುಚಲು ಅರಣ್ಯ ಪ್ರದೇಶವನ್ನು ಹೊಂದಿದೆ. ತಾಲೂಕಿನ ಪಶ್ಚಿಮದಲ್ಲಿ ಉತ್ತರಾಭಿಮುಖವಾಗಿ ಹರಿದಿರುವ ತುಂಗಭದ್ರ ಹಾಗೂ ಹೊಳಲ್ಕೆರೆ ತಾಲೂಕಿನ ರಾಮಗಿರಿ ಪಶ್ಚಿಮ ಗುಡ್ಡಗಳಲ್ಲಿ ಹುಟ್ಟಿ ದಾವಣಗೆರೆ ತಾಲೂಕಿನಲ್ಲಿ ಹರಿದು ಸೂಳೆಕೆರೆ ಹಳ್ಳದೊಂದಿಗೆ ಸೇರಿ ಈ ತಾಲೂಕನ್ನು ಪೂರ್ವ ದಿಕ್ಕಿನಲ್ಲಿ ಪ್ರವೇಶ ಮಾಡಿ ಸ್ವಲ್ಪ ದೂರ ವಾಯುವ್ಯಾಭಿಮುಖವಾಗಿ ಹರಿದಿರುವ ಹರಿದ್ರಾ ನದಿಯ ನಂತರ ಉತ್ತರಾಭಿಮುಖವಾಗಿ ಸಾಗಿ ಹರಿಹರದ ಬಳಿಯ ಹರಗನಹಳ್ಳಿ ಮಾರ್ಜೇನಹಳ್ಳಿಗಳ ಮಧ್ಯದಲ್ಲಿ ತುಂಗಭದ್ರಾ ನದಿಯನ್ನು ಕೂಡಿದೆ ಇದನ್ನು ಶ್ಯಾಗಲೆಹಳ್ಳ, ಸೂಳೆಕೆರೆ ಹಳ್ಳ ಹಾಗೂ ಹರಿದ್ರಾನದಿ ಎಂತಲೂ ಕರೆಯುತ್ತಾರೆ.[೮] ಈ ನದಿಗಳು ಮತ್ತು ಮೇಲಿನ ಬೆಟ್ಟಗುಡ್ಡಗಳು ಸಣ್ಣ ಸಣ್ಣ ತೊರೆಗಳು, ಕೆರೆ ಕಾಲುವೆಗಳು ತಾಲೂಕಿನ ಭೂಮೇಲ್ಮೈಲಕ್ಷಣಗಳಾಗಿವೆ.

೨.೧.೩ ನದಿಗಳು

ತಾಲೂಕಿನ ಪಶ್ಚಿಮದ ಎಲ್ಲೆಯಾಗಿ ಉತ್ತರಕ್ಕೆ ತುಂಗಭದ್ರಾ ನದಿ ಹರಿಯುತ್ತದೆ. ತಾಲೂಕಿನ ಒಳಭಾಗದಲ್ಲಿ ಶ್ಯಾಗಲೆಹಳ್ಳ, ರಾಮತೀರ್ಥದಹಳ್ಳ, ಹೊಟ್ಟಗ್ಯಾನಹಳ್ಳ, ಕರ್ಲಹಳ್ಳ'ಗಳು ಪ್ರಾಚೀನಕಾಲದಿಂದಲೂ ಕೃಷಿ ಚಟುವಟಿಕೆಗಳಿಗೆ ನೀರನ್ನೊದಗಿಸುತ್ತಿವೆ.

ತುಂಗಭದ್ರಾ ನದಿ : ನಾಡಿನ ಪ್ರಮುಖವಾದ ನದಿಗಳಲ್ಲಿ ತುಂಗಭದ್ರಾ ನದಿಯೂ ಒಂದು. ಈ ನದಿಯು ತನ್ನದೇ ಆದ ವಿಶಿಷ್ಟ ಲಕ್ಷಣಗಳನ್ನು ಹೊಂದಿ ಅಗ್ರಸ್ಥಾನವನ್ನು ಪಡೆದುಕೊಂಡಿದೆ ಈ ನದಿಯ ಪ್ರಾಮುಖ್ಯತೆಗೆ ಸಂಬಂಧಿಸಿದಂತೆ "ಗಂಗಾ ಸ್ನಾನ ತುಂಗಾ ಪಾನ" ಎಂಬ ಜನಪದ ನಾಣ್ನುಡಿಯು ನಾಡಿನಾದ್ಯಂತ ಪಸರಿಸಿದೆ.[೧೦] ತುಂಗಭದ್ರ ನದಿಯು ಪಶ್ಚಿಮಘಟ್ಟಗಳ ವರಹ ಪರ್ವತದಲ್ಲಿ ಹುಟ್ಟುತ್ತದೆ. ತುಂಗಭದ್ರಾ ನದಿಯ ಬಲದಂಡೆಯ ಹಳ್ಳಗಳಲ್ಲಿ ಹರಿಹರದ ಬಳಿ ಹರಿದ್ರಾ ನದಿ ಹಾಗೂ ಎಡದಂಡೆಯ ಹಳ್ಳಗಳಲ್ಲಿ ಕುಮುದ್ವತಿ ಸೇರುತ್ತದೆ.[೧೧] ಹರಿಹರ ತುಂಗಭದ್ರಾ ನದಿಯ ದಡದಲ್ಲಿರುವ ನಗರ ಹಾಗೂ ಪುಣ್ಯಕ್ಷೇತ್ರವೆಂದೆನಿಸಿದ್ದು ತಾಲೂಕಿನ ೨೭ ಗ್ರಾಮಗಳು ನದಿಯ ದಡದ ಮೇಲಿವೆ.

ತುಂಗಭದ್ರೆ-ಗುಪ್ತಗಾಮಿನಿ, ಬ್ರಹ್ಮ, ಭಾರ್ಗವ, ಗಾಲವ, ನಾರಸಿಂಹ, ವ್ಹನಿ, ಪಾಪನಾಶಿನಿ, ರುದ್ರಪಾದ, ಶಾಪವಿಮೋಚಿನಿ, ಋಣವಿಮೋಚಿನಿ, ವಟಚ್ಛಾಯ, ಚಕ್ರ ಮುಂತಾದ ತೀರ್ಥನದಿಗಳು ಈ ಕ್ಷೇತ್ರದಲ್ಲಿ ಹರಿಯುವ ತುಂಗಭದ್ರೆಯಲ್ಲಿ ಸಂಗಮವಾಗಿದೆಯೆಂದು ಪುರಾಣಗಳಲ್ಲಿ ಉಲ್ಲೇಖವಿದೆ ವಾದಿರಾಜರು ತಮ್ಮ ತೀರ್ಥ ಪ್ರಬಂಧ ಗ್ರಂಥದಲ್ಲಿ ಬರೆದಿದ್ದಾರೆ.[೧೨] ಜಾನಪದದಲ್ಲಿ ನದಿಯ ಬಗ್ಗೆ "ಹರಿಹರದ ಗಂಗೆಗೆ ಅರವತ್ತು ಪಾವಟಿಗೆ ಹಡದೋರು ಹೆಣ್ಣು ಕೊಡಬೇಡಿ। ಈ ಹೆಣ್ಣು ಅಳುತಾ ನೀರು ತರುತಾಳ॥[೧೩] ಎಂದು ಹೇಳುತ್ತಾರೆ. ಮಳೆಗಾಲದಲ್ಲಿ ತುಂಗಭದ್ರಾ ನದಿ ತುಂಬಿ ಹರಿಯುವಾಗ ಉತ್ತರಾಯಣ-ದಕ್ಷಿಣಾಯಣ ಪುಣ್ಯಕಾಲದಲ್ಲಿ ನದಿಗೆ ಬಂದು ಪಿತೃತರ್ಪಣ ನೀಡಿದರೆ ಮೋಕ್ಷ ಪ್ರಾಪ್ತಿ ಎನ್ನುವ ನಂಬಿಕೆ ಇದೆ. ಈ ನದಿಯ ಉಲ್ಲೇಖ ರಾಮಾಯಣ ಮತ್ತು

ಪುರಾಣಗಳಲ್ಲಿ ಬಂದಿದೆ. ಮಹಾಭಾರತದಲ್ಲಿ ಜಾಹ್ನವಿ, ಕೃಷ್ಣವೇಣಿಗಳ ಜೊತೆಗೆ ತುಂಗಾವೇಣಿ ಎಂದು ಹೆಸರು ಬರುತ್ತದೆ.

ಹರಿದ್ರಾ ಹಾಗೂ ಕುಮುದ್ವತಿ ನದಿಗಳು : ಹೊಳಲ್ಕೆರೆ ತಾಲೂಕಿನ ಪಶ್ಚಿಮದ ಬೆಟ್ಟಗಳಲ್ಲಿ ಹುಟ್ಟಿ ೭೨ ಕಿ.ಮಿ ಹರಿದು ತಾಲೂಕನ್ನು ಪೂರ್ವದಿಂದ ಪ್ರವೇಶಿಸಿ, ತುಂಗಭದ್ರೆಯಲ್ಲಿ ಸಂಗಮವಾಗುತ್ತದೆ. ಹೊಳೆಆನವೇರಿ ಗ್ರಾಮದ ಬಳಿ ಕುಮುದ್ವತಿ ನದಿ ತುಂಗಭದ್ರೆಯಲ್ಲಿ ಸಂಗಮವಾಗುತ್ತದೆ.[೧೪] ವಿಜಯನಗರದ ಕ್ರಿಶ ೧೪೧೦ರ ಹರಿಹರ ಶಾಸನದಲ್ಲಿ ಹರಿದ್ರಾ ನದಿಗೆ ಕಟ್ಟೆಯನ್ನು ಕಟ್ಟಿದ ಉಲ್ಲೇಖವಿದೆ.[೧೫] ಈ ಕಟ್ಟೆಯು ಹರಿಹರ ದೇವರ ಸೀಮೆಯೊಳಗಿನ ಬನ್ನಿಕೋಡು ಸೀಮೆಯಲ್ಲಿತ್ತು. ಈ ಕಟ್ಟೆಯಿಂದ ಹೊರಟ ಕಾಲುವೆಯು ಬನ್ನಿಕೋಡು, ಬೆಳುವಾಡಿ, ಹನಗವಾಡಿ, ಹರಿಹರ, ಗುತ್ತೂರು ಮತ್ತು ಗಂಗನರಸಿ ಗ್ರಾಮಗಳ ಭೂಮಿಗಳಿಗೆ ನೀರುಣಿಸುತ್ತಿತ್ತು. ಈ ಹರಿದ್ರಾ ನದಿಗೆ ದೇವರಬೆಳಕೆರೆ ಗ್ರಾಮದ ಹತ್ತಿರ ನೀರಾವರಿ ಇಲಾಖೆ ೧೯೮೬ರಲ್ಲಿ ತಡೆಗೋಡೆ (ಪಿಕ್‌ಅಪ್) ಯನ್ನ ಕಟ್ಟಿದೆ.[೧೬]

೨.೧.೪ ಮಣ್ಣು ಮತ್ತು ಆಹಾರ ಬೆಳೆಗಳು

ಹರಿಹರ ತಾಲೂಕಿನಲ್ಲಿ ವ್ಯವಸಾಯ ಪ್ರಧಾನವಾದ ಕಸುಬು ಎಂಬುದು ತಿಳಿದ ವಿಷಯವಾಗಿದೆ. ಇಲ್ಲಿ ಕಪ್ಪು, ಮರಳು ಮಿಶ್ರಿತ, ಮಸಾರಿ, ಕಲ್ಲರಗು, ಕೆಂಪು ಮಿಶ್ರಿತ ಕಪ್ಪು ಮಣ್ಣಿನ ಭೂಮಿಯಲ್ಲಿ ತುಂಗಭದ್ರಾ ಮತ್ತು ಅದರ ಉಪನದಿಗಳ ನೀರನ್ನು ಬಳಸಿಕೊಂಡು ಮತ್ತು ಮಳೆಯಾಶ್ರಿತ ನೀರಿನಿಂದ ಜೋಳ, ರಾಗಿ, ತೊಗರಿ, ಹತ್ತಿ, ಶೇಂಗಾ, ಮೆಕ್ಕೆಜೋಳ, ಭತ್ತ, ಬಾಳೆ, ತೆಂಗು, ಕಬ್ಬು, ವಿಳ್ಯದೆಲೆ ಹಾಗೂ ದ್ವಿದಳ ಧಾನ್ಯಗಳನ್ನು ಮತ್ತು ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಾರೆ. ತಾಲೂಕಿನಾದ್ಯಂತ ವ್ಯವಸಾಯಕ್ಕೆ ಯೋಗ್ಯವಾದ ಒಟ್ಟು ಭೂಮಿ ೧,೦೬.೪೬೬ ಹೆಕ್ಟರ್[೧೭] ಭೂಮಿಯನ್ನು ೨೬.೧೮೯ ಹಿಡುವಳಿದಾರರು[೧೮] ವ್ಯವಸಾಯವನ್ನ ಮಾಡುತ್ತಾರೆ. ಇಲ್ಲಿನ ವೀಳ್ಯದೆಲೆಗೆ ತುಂಬಾ ಹಿಂದಿನಿಂದಲೂ ಬೇಡಿಕೆ ಇದ್ದು ಪರರಾಜ್ಯ ಹಾಗೂ ಪರದೇಶಗಳಿಗೂ ರವಾನೆಯಾಗುತ್ತಿರುವುದು ಇಲ್ಲಿನ ಹೆಮ್ಮೆಯ ವಿಚಾರವಾಗಿದೆ.

೨.೧.೫ ಪ್ರಾಣಿ, ಪಕ್ಷಿಗಳ ಸಂಪತ್ತು

ಪರಿಸರದ ಬೆಟ್ಟಗುಡ್ಡಗಳಲ್ಲಿ ಹುಲಿ, ಚಿರತೆ, ಕಿರುಬ, ಕರಡಿ, ಕಾಡುಮಿಕ, ಜಿಂಕೆ, ನರಿ, ನಾಗರಹಾವು, ಮಂಡರಗಪ್ಪೆ, ಮತ್ತು ವಿವಿಧ ಜಾತಿಯ ಚೇಳುಗಳು ಇವೆ. ತುಂಗಭದ್ರಾ ನದಿಯಲ್ಲಿ ಮೊಸಳೆಗಳಿವೆ. ಗಿಳಿ, ಗೊರವಂಕ, ಮೈನ, ಮರಕುಟಿಗ, ಕಾಡು ಪಾರಿವಾಳ, ಕಾಡುಕೋಳಿ, ಕವುಜಗ, ನೀರುಕೋಳಿ, ಕೋಗಿಲೆ, ಬಾನಾಡಿ ಈ ತಾಲೂಕಿನ ಪ್ರಾಣಿ ಹಾಗೂ ಪಕ್ಷಿ ಸಂಪತ್ತಾಗಿದೆ. ನದಿ ದಡ ಮತ್ತು ಕೆರೆ ಕಾಲುವೆಗಳಲ್ಲಿ ನೀರು ಕೊಕ್ಕರೆಗಳಿವೆ. ಕೆಂಜರ್ಲೆ ಹಳ್ಳದ ಎಡಭಾಗದ ಗುಡ್ಡವು ಗೊರವಂಕ ಪಕ್ಷಿಗಳ ಗುಪ್ತ ತಂಗುದಾಣ, ಸಹಸ್ರಾರು ಗೊರವಂಕಗಳು ಆಶ್ರಯ ಪಡೆದಿರುವ ಈ ಗುಡ್ಡಕ್ಕೆ ಗೊರವಂಕನಗುಡ್ಡ ಎಂದೇ ಹೆಸರು.[೧೯]

೨.೧.೬ ಅರಣ್ಯ ಮತ್ತು ಖನಿಜ ಸಂಪತ್ತು

ಹರಿಹರ–ಮಲೆಬೆನ್ನೂರು ಬಳಿ ಕೊಮಾರನಹಳ್ಳಿಯಿಂದಲೇ ಗುಡ್ಡದ ಸಾಲು ಪ್ರಾರಂಭವಾಗಿದೆ. ಬೇವಿನಹಳ್ಳಿ ಗುಡ್ಡ, ತುಮ್ಮಿನಕಟ್ಟೆ ಗುಡ್ಡ, ಸಾರಥಿ ಗುಡ್ಡ, ಕೊಂಡಜ್ಜಿ ಬೆಟ್ಟಗಳು ಮುಖ್ಯವಾಗಿವೆ. ಪ್ರಸ್ತುತ ಅರಣ್ಯವಿರುವ ಪ್ರದೇಶಗಳಲ್ಲಿ ಕುರುಚಲು ಗಿಡ, ಕಾಡು ಜಾತಿಯ ಮರಗಳಿಂದ ಕೂಡಿದ್ದು ಅಲ್ಲಲ್ಲಿ ಹುಣಸೆ, ಜಾಲಿ, ಹಿಪ್ಪೆ, ಬೇವು, ದಿಂಡಿನ, ಹೊಂಗೆ ಮರಗಳು ಕಂಡುಬರುತ್ತವೆ. ತಾಲೂಕಿನಲ್ಲಿ ೨೦೬೦ ಹೆಕ್ಟರ್ ಅರಣ್ಯ ಪ್ರದೇಶವಿದೆ.[೨೦] ದೇವರಬೆಳೆಕೆರೆ ಭಾಗದಲ್ಲಿ ಸುಣ್ಣದಕಲ್ಲು ಅಗಾಧವಾಗಿ ದೊರೆತರೆ, ಮಲೆಬೆನ್ನೂರು ಮತ್ತು ಗುತ್ತೂರುಗಳು ಜೇಡಿಮಣ್ಣಿನ ಕಣಜಗಳಾಗಿವೆ. ಮ್ಯಾಂಗನೀಸ್, ಕಬ್ಬಿಣದ ಅದಿರು ನಿಕ್ಷೇಪಗಳು ತಾಲೂಕಿನಾದ್ಯಂತ, ಕೊಪ್ಪದ ಗುಡ್ಡದಿಂದ ಗುಡ್ಡದ ತುಮ್ಮಿನಕಟ್ಟೆ ಗುಡ್ಡ ಪ್ರದೇಶದಲ್ಲಿ ಅಲ್ಪ ಪ್ರಮಾಣದ ಚಿನ್ನದ ಅದಿರು ದೊರೆಯುವುದಾಗಿ ಭಾರತದ ಭೂಗೋಳ ಇಲಾಖೆ ಸಮೀಕ್ಷೆಯಿಂದ ತಿಳಿದು ಬಂದಿದೆ.[೨೧] ಈ ಖನಿಜ ಸಂಪತ್ತಿನ ಉಪಯೋಗದಿಂದ ಪ್ರಾಚೀನ ಮಾನವನು ನಗರೀಕೃತ ಸಂಸ್ಕೃತಿಯೆಡೆಗೆ ಹೆಜ್ಜೆ ಹಾಕಿದನು.

೨.೧.೭ ಜನ ಜೀವನ

ಹರಿಹರ ತಾಲೂಕಿನಲ್ಲಿ ಹಿಂದೂ–ಮುಸ್ಲಿಂ, ಕ್ರೈಸ್ತರು, ಜೈನರು ಹೀಗೆ ವೈವಿಧ್ಯಮಯ ಸರ್ವಧರ್ಮೀಯರು ವಾಸಿಸುತ್ತಾರೆ ತಾಲೂಕಿನಲ್ಲಿ ೨೦೧೧ರ ಜನಗಣತಿಯಂತೆ ಒಟ್ಟು ೪೫.೨೭೮ ಕುಟುಂಬಗಳಲ್ಲಿ ೨೮.೫೩೬ ಕುಟುಂಬಗಳು ಗ್ರಾಮೀಣ ಪ್ರದೇಶಕ್ಕೆ ಹಾಗೂ ೧೬.೭೪೨ ಕುಟುಂಬಗಳು ನಗರ ಪ್ರದೇಶಕ್ಕೆ ಸೇರಿವೆ ಅದರಲ್ಲಿ ಸುಮಾರು ೧.೮೭.೯೯ ಮಂದಿ ಗ್ರಾಮವಾಸಿಗರು ಮತ್ತು ಸುಮಾರು ೯೯.೪೭೪ ಜನ ಪಟ್ಟಣವಾಸಿಗರೂ ಆಗಿದ್ದಾರೆ.[೨೨]

೨.೨ ಪ್ರಾಗಿತಿಹಾಸ

ಭೂಮಿಯ ಹುಟ್ಟು ಸುಮಾರು ೬ ಕೋಟಿ ವರ್ಷಗಳಷ್ಟು ಹಿಂದೆ ಆಯಿತು. ನಂತರ ಮೊದಲ ಜೀವಿ ಸುಮಾರು ೨೫೦–೪೦೦ ಕೋಟಿ ಮಿಲಿಯನ್ ವರ್ಷಗಳ ಹಿಂದೆ ಸಂಭವಿಸಿರಬಹುದಾದ ಊಹೆ ಇದೆ.[೨೩] ಮಾನವ ಈ ಜೀವವಿಕಾಸದ ಏಣಿಯಲ್ಲಿ ಎತ್ತರಕ್ಕೆ ಏರಿರುವ ಒಂದು ಜೀವಿ ಈ ದೀರ್ಘಾವಧಿ ಭೂ ಇತಿಹಾಸಕ್ಕೆ ಹೋಲಿಸಿದರೆ ಮಾನವನ ಪೂರ್ವಜರ ಹುಟ್ಟು ಕೇವಲ ೬೫ ಮಿಲಿಯನ್ ವರ್ಷಗಳ ಹಿಂದಷ್ಟೆ ಆಗಿರುವ ದಾಖಲೆ ಸಿಗುತ್ತದೆ. ಆದಿಮಾನವನ ಉಗಮವಾಗಿ ಸರಿಸುಮಾರು ೧೪ ಮಿಲಿಯನ್ ವರ್ಷಗಳಾಗಿದ್ದರೆ, ಆಧುನಿಕ ಮಾನವನ ಉಗಮ ಕೇವಲ ೨ ಮಿಲಿಯನ್ ವರ್ಷಗಳ ಹಿಂದಷ್ಟೆ ಆಗಿದೆ ಎನ್ನಬಹುದು.[೨೪] ಮಾನವ ಕೋತಿ, ವಾನರನ್ನೊಳಗೊಂಡ ಪ್ರೈಮೋಟ್ (ಮುಖ್ಯ ಕಣ) ಗಣಕ್ಕೂ, ಸಸ್ತನಿ ವರ್ಗಕ್ಕೂ ಸೇರಿದ್ದಾನೆ.[೨೫] ಇಡೀ ಪ್ರಾಣಿ ಜಗತ್ತಿನಲ್ಲಿ ಮಾನವನಿಗೆ ಒಂದು ವ್ಯವಸ್ಥಿತ ಸ್ಥಾನವಿದೆ.

ಭಾರತದಲ್ಲಿ ಆದಿಮಾನವನ ಪ್ರಾಗಿತಿಹಾಸಕಾಲದ ವಿವಿಧ ಕಾಲಘಟ್ಟಗಳಲ್ಲಿ ಜೀವಿಸಿದ್ದ ಹಲವಾರು ಉದಾಹರಣೆಗಳು ದೊರೆತಿವೆ. ಕರ್ನಾಟಕವು ಇದಕ್ಕೆ ಹೊರತಾಗಿಲ್ಲ ದಖನ್

ಪ್ರಸ್ಥಭೂಮಿಗೆ ಸೇರಿದ ಕರ್ನಾಟಕವು ಭೌಗೋಳಿಕವಾಗಿ ಆಯಕಟ್ಟಿನ ಭಾಗದಲ್ಲಿದೆ. ಇಲ್ಲಿನ ಪರಿಸರವು ಮಾನವನ ವಾಸಕ್ಕೆ ಅತ್ಯಂತ ಅನುಕೂಲಕರವಾಗಿದ್ದರಿಂದ ಅತೀ ಪ್ರಾಚೀನ ಕಾಲದಿಂದಲೂ ಇವನ ಜೀವನೋಪಾಯದ ಚಟುವಟಿಕೆಗಳು ಇಲ್ಲಿ ಆರಂಭವಾಗಿರುವುದನ್ನು ಗುರುತಿಸಲಾಗಿದೆ.[೨೬] ಅನೇಕ ವಿದ್ವಾಂಸರ ಅನ್ವೇಷಣಾ ಕಾರ್ಯದಿಂದ ಹಾಗೂ ನಡೆಸಿದ ಉತ್ಖನನದಿಂದ ಕರ್ನಾಟಕದಲ್ಲಿ ಹಲವಾರು ಪ್ರಾಗಿತಿಹಾಸ ಮಾನವನ ನೆಲೆಗಳು ಬೆಳಕಿಗೆ ಬಂದಿವೆ. ಮಾನವ ಆದಿಮ ಹಂತದಿಂದ ನಾಗರಿಕ ಹಂತಕ್ಕೆ ತಲುಪುವವರೆಗಿನ ಕಾಲವನ್ನು ಇಲ್ಲವೇ ಮಾನವ ಅಕ್ಷರ ಜ್ಞಾನವನ್ನು ಕಂಡುಕೊಳ್ಳದೆ ಇದ್ದ ಕಾಲವನ್ನು ಪ್ರಾಗಿತಿಹಾಸ ಕಾಲವೆಂದು ಅಥವಾ ಇತಿಹಾಸಪೂರ್ವ ಕಾಲವೆಂದು ಕರೆಯಲಾಗಿದೆ.

ಈ ಇತಿಹಾಸಪೂರ್ವ ಕಾಲದ ಸಮಾಜದತ್ತ ದೃಷ್ಠಿ ಹಾಯಿಸಿದರೆ ಕಾಣುವ ಮಾನವ ಬದುಕಿನ ಸ್ಥಿತ್ಯಂತರಗಳು ಕುತೂಹಲ ಹುಟ್ಟಿಸುವಂತವು. ಆಹಾರ ಸಂಗ್ರಹಣೆಯ ಅಲೆಮಾರಿ ಸ್ಥಿತಿಯಿಂದ ಆಹಾರೋತ್ಪಾದನೆಯ ಹಂತಕ್ಕೆ ಬೆಳೆದ ಸಮುದಾಯಗಳು ತಮ್ಮ ಬೆಳವಣಿಗೆಯ ಹಾಗೂ ಪರಿವರ್ತನೆಯ ಸ್ವರೂಪವನ್ನು ನಾನಾ ವಿಧದಲ್ಲಿ ಅರ್ಥೈಸಿಕೊಟ್ಟಿವೆ. ಕೃಷಿಯ ಆರಂಭ, ಪಶುಪಾಲನೆ, ಮಡಿಕೆ ಕುಡಿಕೆಗಳ ತಯಾರಿಕೆ[೨೭] ಮುಖ್ಯ ಬೆಳವಣಿಗೆಗಳಾಗಿವೆ. ಆದಿ ಮಾನವ ಉಪಕರಣಗಳನ್ನು ಮುಖ್ಯವಾಗಿ ಕಲ್ಲುಗಳಿಂದ ನಿರ್ಮಿಸುತ್ತಿದ್ದ ಹಾಗಾಗಿ ಕಾಲವನ್ನು ಅಥವಾ ಸಂಸ್ಕೃತಿಯನ್ನು ಶಿಲಾಯುಗವೆಂದು ಗುರುತಿಸಲಾಗಿದೆ. ಕಟ್ಟಿಗೆ ಎಲುಬುಗಳನ್ನು ಕೂಡ ಉಪಕರಣಗಳಾಗಿ ಬಳಸಿರಬೇಕು. ಅವು ಕಾಲಗರ್ಭದಲ್ಲಿ ನಶಿಸಿಹೋಗಿವೆ. ಶಿಲಾಯುಗ ದೀರ್ಘಾವಧಿಯದು ಆದ್ದರಿಂದ ಅದನ್ನು ಹಳೆಯಶಿಲಾಯುಗ, ಸೂಕ್ಷ್ಮಶಿಲಾಯುಗ, ನವಶಿಲಾಯುಗ, ಶಿಲಾ–ತಾಮ್ರಯುಗ, ಕಬ್ಬಿಣ ಬೃಹತ್‌ಶಿಲಾಯುಗ ಹಾಗೂ ಇತಿಹಾಸ ಆರಂಭಯುಗ ಸಂಸ್ಕೃತಿಗಳಿಗೆ ಸೇರಿದ ಹಲವು ನೆಲೆಗಳು ಪತ್ತೆಯಾಗಿ ಕೊಮಾರನಹಳ್ಳಿಯಲ್ಲಿ ಉತ್ಖನನವು ಸಹ ನಡೆದಿದೆ. ಇದರ ಆಚೆಗೆ ಹೊಸದಾಗಿ ಸೂಕ್ಷ್ಮಶಿಲಾಯುಗದಿಂದ ಇತಿಹಾಸ ಆರಂಭಯುಗದವರೆಗಿನ ಕೆಲವು ನೆಲೆಗಳು ಶೋಧಿತವಾಗಿವೆ.

೨.೨.೧ ಹಳೆಶಿಲಾಯುಗ ಸಂಸ್ಕೃತಿ

ಹಳೆಶಿಲಾಯುಗವು ಶಿಲಾಯುಗಗಳಲ್ಲಿ ಅತ್ಯಂತ ಪ್ರಾಚೀನವಾದುದ್ದಾಗಿದ್ದು ಇದರಲ್ಲಿ ಮೂರು ಹಂತಗಳು ಗುರುತಿಸಬಹುದು. ಆದಿ ಹಳೆಶಿಲಾಯುಗ, ಮಧ್ಯಹಳೆಶಿಲಾಯುಗ ಹಾಗೂ ಅಂತ್ಯಹಳೆಶಿಲಾಯುಗ ಎಂದು, ಭಾರತದಲ್ಲಿ ೧೮೬೩ರಲ್ಲಿ ಈ ಸಂಸ್ಕೃತಿಯ ಆಯುಧಾವಶೇಷಗಳು ಮೊದಲ ಬಾರಿಗೆ ಬೆಳಕಿಗೆ ಬಂದವು. ರಾಬರ್ಟ್ ಬ್ರೂಸ್‌ಫುಟ್ ರವರು ತಮಿಳುನಾಡಿನ ಪಲ್ಲಾವರಮ್‌ನಲ್ಲಿ ಆದಿಹಳೆಶಿಲಾಯುಗಕ್ಕೆ ಸೇರಿದ ಉಪಕರಣಗಳನ್ನು ಪ್ರಥಮಬಾರಿಗೆ ಪತ್ತೆಹಚ್ಚಿದರು.[೨೮] ಈ ಹಿನ್ನೆಲೆಯಾಗಿ ಭಾರತದ ಪ್ರಾಗಿತಿಹಾಸ ಕಾಲದ ಅಧ್ಯಯನಕ್ಕೆ ಅವರು ಭದ್ರವಾದ ಬುನಾದಿಯನ್ನು ಹಾಕಿದರು. ಆದ್ದರಿಂದ ರಾಬರ್ಟ್ ಬ್ರೂಸ್‌ಫುಟ್‌ರವರನ್ನು ಭಾರತೀಯ ಪ್ರಾಗಿತಿಹಾಸಶಾಸ್ತ್ರದ ಪಿತಾಮಹರೆಂದು[೨೯] ಕರೆಯಲಾಗಿದೆ. ಕರ್ನಾಟಕದಲ್ಲಿಯೂ ಸಹ ಪ್ರಾಗಿತಿಹಾಸ

ಕಾಲದ ಅನ್ವೇಷಣೆಗಳನ್ನು ವ್ಯವಸ್ಥಿತವಾಗಿ ಆರಂಭಿಸಿದವರಲ್ಲಿ ರಾಬರ್ಟ್ ಬ್ರೂಸ್‌ಫುಟ್‌ಅವರು ಮೊದಲಿಗರಾಗಿದ್ದಾರೆ.

ಹಳೆಶಿಲಾಯುಗ ಕಾಲ(ಕ್ರಿಪೂ ೫ ಲಕ್ಷದಿಂದ ಕ್ರಿಪೂ.೧೦,೦೦೦)[೫೦] : ಅತ್ಯಂತ ದೀರ್ಘವಾದದ್ದು ಈ ಅವಧಿಯಲ್ಲಿ ಹೋಮೋಹೆಜಿಲಿಸ್, ಹೋಮೋಎರೆಕ್ಟಸ್, ಹೋಮೋಸೆಪಿಯನ್ಸ್, ನಿಯಾಂಡ್ರಥಾಲ್ ಮಾನವರು ಬದುಕಿದ್ದರು.[೫೧] ದೇಹದ ಲಕ್ಷಣ ಮತ್ತು ಪ್ರಾದೇಶಿಕ ಅಂಶಗಳ ಹಿನ್ನೆಲೆಯಲ್ಲಿ ಹೀಗೆ ಕರೆದಿದ್ದಾರೆ. ಕರ್ನಾಟಕದ ಕೃಷ್ಣ, ಮಲಪ್ರಭಾ, ತುಂಗಭದ್ರಾ, ಘಟಪ್ರಭಾ, ಕಾವೇರಿ ಮುಂತಾದ ನದಿಕೊಳ್ಳಗಳಲ್ಲಿ ಹಳೆಶಿಲಾಯುಗದ ಅವಶೇಷಗಳು ಹೆಚ್ಚಾಗಿ ಕಂಡುಬಂದಿವೆ. ಮೆಣಸಗಿ,[೫೨] ನಿಟ್ಟೂರು,[೫೩] ಗುಲ್ಬಾರ್ಗ, ಬೀದರ್, ಧಾರವಾಡ ಹಾಗೂ ವಿಜಯಪುರ ಜಿಲ್ಲೆಗಳಲ್ಲಿ ಇನ್ನಷ್ಟು ಹೆಚ್ಚಿನ ಸಂಖ್ಯೆಯ ನೆಲೆಗಳು ಬೆಳಕಿಗೆ ಬಂದಿವೆ.[೫೪] ಬಳ್ಳಾರಿ, ಬಾದನಹಟ್ಟಿ ಗುಡ್ಡ, ಬೆಳಗಲ್ಲು,[೫೫] ಹುಣಸಗಿ[೫೬] ನೆಲೆಗಳಲ್ಲಿ ಆಯುಧಾವಶೇಷಗಳು ದೊರೆತಿವೆ. ಪ್ರಸ್ತುತ ಹರಿಹರ ತಾಲೂಕಿನಲ್ಲಿ ಹಳೆಶಿಲಾಯುಗ ಸಂಸ್ಕೃತಿಗೆ ಸೇರಿದ ಯಾವ ಅವಶೇಷಗಳು ದೊರೆತಿಲ್ಲ. ಆದರೆ ಈ ಪರಿಸರದಲ್ಲಿಯೇ ಇರುವಂತಹ ನ್ಯಾಮತಿಯಲ್ಲಿ ಸಿಂಗಲ್‌ಬೆಡ್ ಎಂಬಾತ ೧೮೮೧ ರಲ್ಲಿ ಆದಿ ಶಿಲಾಯುಗಕ್ಕೆ ಸೇರಿದ ಎರಡು ಶಿಲಾಯುಧಗಳನ್ನು ಸಂಶೋಧಿಸಿದ್ದಾರೆ.[೫೭] ಕ್ವಾರ್ಟ್ಜೈಟ್‌ನಿಂದ ತಯಾರಿಸಲಾದ ಈ ಕೈಕೊಡಲಿಗಳಲ್ಲಿ ಮುಂಭಾಗ ಚೂಪಾಗಿಯೂ, ಹಿಂಭಾಗದಲ್ಲಿ ವೃತ್ತಾಕಾರವಾಗಿಯೂ ಹಾಗೂ ಬಾಯಿಹರಿತವಾಗಿಯೂ ಇತ್ತು. ಅದನ್ನು ವಿಭಿನ್ನ ಕೆಲಸಗಳಿಗೆ ಬಳಕೆ ಮಾಡಿದ್ದಾರೆನ್ನಬಹುದು.[೫೮]

೨.೨.೨ ಸೂಕ್ಷ್ಮಶಿಲಾಯುಗ ಸಂಸ್ಕೃತಿ

ಸೂಕ್ಷ್ಮ ಶಿಲಾಯುಗವು ಅಂತ್ಯ ಹಳೆಶಿಲಾಯುಗ ಹಾಗೂ ನೂತನ ಶಿಲಾಯುಗಗಳ ನಡುವಿನ ಹಂತವಾಗಿದೆ. ಈ ಅವಧಿಯ ಶಿಲಾಯುಗದ ಮಾನವನು ತನ್ನ ಜೀವನ ನಿರ್ವಹಣೆಗಾಗಿ ಹರಿತವುಳ್ಳ ಅತಿ ಸಣ್ಣ ನೀಳ ಅಲಗುಗಳನ್ನು ಬಳಸಿದನು. ಈ ಆಯುಧಗಳು ಸೂಕ್ಷ್ಮವಾದವುಗಳಾಗಿರುವುದರಿಂದ ಈ ಸಂಸ್ಕೃತಿಯನ್ನು ಸೂಕ್ಷ್ಮಶಿಲಾಯುಗವೆಂದು ಕರೆಯಲಾಗಿದೆ. ಪೂರ್ವದ ಹಳೆಶಿಲಾಯುಗಕ್ಕೆ ಹೋಲಿಸಿದರೆ ಈ ಶಿಲಾಯುಗವು ಕಡಿಮೆ ಅವಧಿಯಾಗಿದೆ. ಸೂಕ್ಷ್ಮಶಿಲಾಯುಗವು ಇಂದಿಗೆ ಸುಮಾರು ೨೫೦೦ ವರ್ಷಗಳಿಂದ ೧೦೦೦೦ ವರ್ಷಗಳಷ್ಟು ಪೂರ್ವದಲ್ಲಿತ್ತೆಂದು ತಿಳಿದು ಬಂದಿದೆ.[೫೯] ಮೇಲಿನ ಅಂಶವನ್ನು ಗಮನಿಸಿದರೆ ಈ ಸಂಸ್ಕೃತಿಯು ಪ್ಲೀಸ್ಟೋಸೀನ್ ಯುಗದ ಕೊನೆಯಲ್ಲಿ ಆರಂಭವಾಗಿ ಆದಿ ಮತ್ತು ಮಧ್ಯ ಹೇಲೋಸೀನ್ ಅವಧಿಯವರೆಗೂ ಮುಂದುವರೆದಿರುವುದು ವೈಜ್ಞಾನಿಕ ಅಂಶಗಳಿಂದ ತಿಳಿಯುತ್ತದೆ.[೬೦]

ಕರ್ನಾಟಕದಲ್ಲಿ ಸೂಕ್ಷ್ಮಶಿಲಾಯುಗ ಸಂಸ್ಕೃತಿಯ ನೆಲೆಗಳು ೧೯೩೯ರ ವೇಳೆಗೆ ಶೋಧಗೊಂಡಿದ್ದರೂ, ಕೂಡ ಈ ಸಂಸ್ಕೃತಿಯ ಆಯುಧಗಳ ವೈಜ್ಞಾನಿಕ ಅಧ್ಯಯನವು ೧೯೫೬ರಲ್ಲಿಯೇ ಆರಂಭಮಾಡಲಾಯಿತು.[೬೧] ಸಂಕಾಲಿಯಾರವರು ೧೯೬೯ರಲ್ಲಿ ಬಳ್ಳಾರಿ ಜಿಲ್ಲೆಯ ಸಂಗನಕನಲ್ಲಿ ನಡೆಸಿದ ಉತ್ಖನನದಿಂದ ಈ ಸಂಸ್ಕೃತಿಯು ನಿರ್ದಿಷ್ಟ ಕಾಲಮಾನಕ್ಕೆ ಸಂಬಂಧಿಸಿದ ಪ್ರತ್ಯೇಕವಾದ ಸಂಸ್ಕೃತಿ ಎಂದು ಕರ್ನಾಟಕದಲ್ಲಿ ಮೊದಲ ಬಾರಿಗೆ ಗುರುತಿಸಿದರು.[೬೨] ಆದರೂ ಸಹ

ಇದೊಂದು ಕಿರಿದಾದ ವಿವಿಧ ಆಯುಧಗಳ ಸಂಸ್ಕೃತಿಯೆಂದು ತಿಳಿಯಲಾಯಿತೆ ಹೊರತು ಈ ಸಂಸ್ಕೃತಿಯ ಜನರ ಜೀವನ ಕ್ರಮದ ಬಗೆಗೆ ತಿಳಿದುಕೊಳ್ಳಲು ಸಾಧ್ಯವಾಗಲಿಲ್ಲ. ಇಲ್ಲಿಯವರೆಗೆ ನಡೆದ ಅನ್ವೇಷಣೆಗೆ ಮತ್ತು ಉತ್ಖನನಗಳಿಂದ ಅನೇಕ ಸೂಕ್ಷ್ಮಶಿಲಾಯುಗದ ನೆಲೆಗಳು ಬೆಳಕಿಗೆ ಬಂದಿವೆ. ಜಾಲಹಳ್ಳಿ ಹಾಗೂ ಕಿಬ್ಬನಹಳ್ಳಿಗಳಲ್ಲಿ ಬೆಣಚುಕಲ್ಲಿನ ಸೂಕ್ಷ್ಮಶಿಲಾಯುಧಗಳು ದೊರೆತಿವೆ.[೪೩] ಹೇಮಾವತಿ ಕೊಳ್ಳದ ಕಟ್ಟೆಬೆಳಗಲಿ, ಜೋಳನಹಟ್ಟಿ, ಸಟ್ಟನಳ್ಳಿ,[೪೪] ಪೆನ್ನಾರ ಕೊಳ್ಳದ ದೊಡ್ಡಗುಣಿ, ನಾಗಪುರಗಳಲ್ಲದೆ, ಬಣ್ಣಿಗಾನಹಳ್ಳಿ, ಬೆಟ್ಟದಹಳ್ಳಿ, ಬೋಗಸಂದ್ರ, ಬಂಡನಹಳ್ಳಿ, ಮುಗನಾಯಕನ ಕೋಟೆಗಳು ಈ ಸಂಸ್ಕೃತಿಯ ನೆಲೆಗಳಾಗಿವೆ.[೪೫] ಭದ್ರಾಕೊಳ್ಳದ ಭದ್ರಾಪ್ರಾಜೆಕ್ಟ್,[೪೬] ತುಂಗಕೊಳ್ಳದ ಹೊಳೆಹರಳಹಳ್ಳಿ, ತಕ್ಕನಹಳ್ಳಿಗಳಲ್ಲಿ ಈ ಸಂಸ್ಕೃತಿಯ ಆಯುಧಗಳು ದೊರೆತಿವೆ.[೪೭] ದಾವಣಗೆರೆ ಜಿಲ್ಲೆಯಲ್ಲಿ ಕೊಂಡಜ್ಜಿ,[೪೮] ಮಾಡಲಗೇರಿ,[೪೯] ಹಲಸಬಾಳು,[೫೦] ಕೋನಾಯಕನಹಳ್ಳಿ,[೫೧] ಚಿಕ್ಕಬಸೂರು,[೫೨] ನ್ಯಾಮತಿ,[೫೩] ಬೆನಕನಹಳ್ಳಿ,[೫೪] ಸಲಬಾಳು[೫೫] ಸಾಸಿವೆಹಳ್ಳಿ,[೫೬] ಸುರಹೊನ್ನೆ,[೫೭] ಹನಗವಾಡಿ,[೫೮] ಹರಗನಹಳ್ಳಿ,[೫೯] ಹರಳಹಳ್ಳಿ,[೬೦] ಹಳೆಚವ್ವಳ್ಳಿ,[೬೧] ಹಳೆಲಿಂಗಾಪುರ[೬೨] ಹಾಗೂ ಹೊನ್ನಾಳಿಗಳಲ್ಲಿ[೬೩] ಈ ಸಂಸ್ಕೃತಿಯ ಕುರುಹುಗಳು ದೊರೆತಿವೆ.

೨೦೦೦-೨೦೦೧ ರಲ್ಲಿ ನಡೆಸಿದ ಅನ್ವೇಷಣೆಯಲ್ಲಿ ಹರಿಹರ ತಾಲೂಕಿನ ಕೊಂಡಜ್ಜಿ, ಹಲಸಬಾಳು ಪರಿಸರದಲ್ಲಿ ವಿವಿಧ ಮಾದರಿಯ ಸೂಕ್ಷ್ಮ ಶಿಲಾಯುಧಗಳು ದೊರೆತಿವೆ.[೬೪] ಗುಡ್ಡದ ತುಮ್ಮಿನಕಟ್ಟೆಯ ಗುಡ್ಡದ ತಪ್ಪಲಲ್ಲಿ ಈ ಸಂಸ್ಕೃತಿಯ ಬೆಣಚುಕಲ್ಲಿನ ಕೈಗೊಡಲಿ ದೊರೆತಿದೆ.[೬೫] ಈಗಾಗಲೆ ದೊರೆತಿರುವುದು ಹೆರೆಚೆಕ್ಕೆ, ಮೊನೆ, ನಿಳಚಕ್ಕೆ ಹಾಗೂ ಕೊಂಡಜ್ಜಿ ಗುಹೆಗಳಲ್ಲಿ ವರ್ಣಚಿತ್ರಗಳು ಮತ್ತು ವಿವಿಧ ಮಾದರಿಯ ಉಪಕರಣಗಳು ದೊರೆತಿವೆ. ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯಲ್ಲಿ ಕಂಡುಬರುವ ಸೂಕ್ಷ್ಮಶಿಲಾಯುಧಗಳು ಹೆಚ್ಚು ಕಡಿಮೆ ನೇರವಾಗಿ ಅಂತ್ಯ ಹಳೆಶಿಲಾಯುಗದ ಆಯುಧಗಳಿಂದ ಪ್ರಭಾವಿತವಾಗಿರುವುದು ಕಂಡುಬರುತ್ತದೆ. ಅಂತ್ಯ ಹಳೆಶಿಲಾಯುಗದಾಯುಧಗಳ ವೈವಿಧ್ಯತೆಯು ಬಹುಮಟ್ಟಿಗೆ ಈ ಕಾಲದಲ್ಲಿಯೂ ಮುಂದುವರಿದುದಲ್ಲದೆ ಈ ಕಾಲಘಟ್ಟದಲ್ಲಿ ಆಯುಧಗಳು ಹೆಚ್ಚು ಸುಧಾರಿಸಿಕೊಂಡವು. ಅಧ್ಯಯನಕ್ಕೆ ಸಂಬಂಧಿಸಿದ ನೆಲೆಗಳಲ್ಲಿ ದೊರೆತಿರುವ ಈ ಸಂಸ್ಕೃತಿಯ ಹೆರೆಚೆಕ್ಕೆ, ಮೊನೆ, ನಿಳಚಕ್ಕೆ ಹಾಗೂ ಕೈಗೊಡಲಿ ಲಭ್ಯವಾಗಿವೆ.

ಸೂಕ್ಷ್ಮಶಿಲಾಯುಗ ಸಂಸ್ಕೃತಿಯಲ್ಲಿ ಹೆರೆಚೆಕ್ಕೆಗಳು ನೀಳಚಕ್ಕೆಗಳ ನಂತರದ ಆಯುಧಗಳಾಗಿವೆ. ಇವುಗಳನ್ನ ತುದಿ ಮತ್ತು ಪಾರ್ಶ್ವಚಕ್ಕೆಗಳೆರಡರ ಮೇಲೆ ರೂಪಿಸಲಾಗಿದೆ. ನೀಳವಾದ ಹಾಗೂ ಕಡಿಮೆ ಉದ್ದದ ಅಯತ, ತ್ರಿಭುಜ ಮತ್ತು ಅಂಡಾಕಾರದಲ್ಲಿವೆ. ಇವುಗಳನ್ನು ತೆಳುವಾದ ಚಕ್ಕೆಗಳಿಂದ ರೂಪಿಸಲಾಗಿದೆ. ಇನ್ನು ಮೊನೆಗೆ ಸಂಬಂಧಿಸಿದ ಆಯುಧಗಳನ್ನು ನೀಳಚಕ್ಕೆ ಹೆರೆಚೆಕ್ಕೆಗಳನ್ನು ತಯಾರಿಸುವಾಗ ಉಂಟಾದ ತ್ಯಾಜ್ಯ ಚಕ್ಕೆಗಳ ಮೇಲೆ ರೂಪಿಸಲಾಗಿದೆ. ಇವುಗಳು ತ್ರಿಭುಜ, ಪಂಚಭುಜ ಹಾಗೂ ಅಂಡಾಕೃತಿಗಳಲ್ಲಿವೆ. ಹೆಚ್ಚಿನ ಆಯುಧಗಳು ನೀಳಚೆಕ್ಕೆಯನ್ನೆ ಹೋಲುತ್ತಿದ್ದು. ನೀಳಚಕ್ಕೆಯ ಪಾರ್ಶ್ವ ಅಥವಾ ಬದಿಗಳಲ್ಲಿ ಚಕ್ಕೆಗಳನ್ನು ತೆಗೆದು ಮೊನೆ

ಮಾಡಿಸಲಾಗಿದೆ. ಸೀಳಚಕ್ಕೆಯ ವಿವಿಧ ಮಾದರಿಗಳನ್ನು ರೂಪಿಸುವ ಮೊದಲ ಹಂತದಲ್ಲಿ ಸೀಳಚಕ್ಕೆಗಳನ್ನು ಹೋಲುವ ಚಕ್ಕೆ ಆಯುಧಗಳು ಈ ಸಂಸ್ಕೃತಿಯಲ್ಲಿ ಲಭಿಸುತ್ತವೆ. ಮೇಲಿನ ಆಯುಧಗಳು ಈ ಸಂಸ್ಕೃತಿಯ ಜನರ ಆಹಾರ ಸಂಗ್ರಹಣೆಗೆ ಸಹಾಯಕವಾಗಿದ್ದವು ಎಂದು ಹೇಳಬಹುದು.

೨.೨.೩ ನವಶಿಲಾಯುಗ ಸಂಸ್ಕೃತಿ

ಈ ಸಂಸ್ಕೃತಿಯ ಹಂತವನ್ನು ಗುರುತಿಸುವಾಗ ಉಜ್ಜಿನಯಗೊಳಿಸಿದ ಮೇಲ್ಮೈಯುಳ್ಳ ಕೊಡಲಿಗಳು ಹಾಗೂ ಬೂದು ವರ್ಣದ ಮಡಿಕೆಗಳನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಉಪಕರಣ ತಯಾರಿಕೆಯಲ್ಲಿ ಹೊಸ ತಂತ್ರ ಬಳಸಿದುದನ್ನು ಇದು ಪ್ರಧಾನವಾಗಿ ಸೂಚಿಸುತ್ತದೆ. ನಯಗೊಳಿಸಿದ ಕಲ್ಲಿನ ಉಪಕರಣಗಳ ಬಳಕೆ. ಮೊದಲ ಬಾರಿಗೆ ಮಣ್ಪಾತ್ರೆಗಳ ತಾಯಾರಿಕೆ ಮತ್ತು ಉಪಯೋಗ ಆರಂಭಿಕ ಹಂತದ ಬೇಸಾಯ ಮತ್ತು ಪ್ರಾಣಿಗಳ ಸಾಕಾಣಿಕೆ–ಇವು ಈ ಹಂತದ ವಿಶಿಷ್ಟ ಲಕ್ಷಣಗಳೆಂದು ಈಚಿನವರೆಗೂ ಪರಿಗಣಿಸಲಾಗಿತ್ತು. ಆದರೆ ಸು.೭–೮ ದಶಕಗಳಿಂದ ಗೋರ್ಡನ್ ಚೈಲ್ಡ್ ಮೊದಲಾದ ಪ್ರಾಕ್ತಾನ ವಿದ್ವಾಂಸರು ಅಂಥ ತಾಂತ್ರಿಕ ಲಕ್ಷಣಗಳಿಗಿಂತಲೂ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಸೂಚಿಸುವ ಆರ್ಥಿಕ, ಸಾಮಾಜಿಕ ಅಂಶಗಳ ಆಧಾರದ ಮೇಲೆ ನವಶಿಲಾಯುಗದ ಸಂಸ್ಕೃತಿಯನ್ನು ಗುರುತಿಸುವುದು ಸೂಕ್ತವೆಂದು ವಾದಿಸಿದ್ದಾರೆ.[೬]

ಅವರ ಪ್ರಕಾರ ಆಹಾರ ಸಂಗ್ರಹಣೆಯಲ್ಲಿ ತೊಡಗಿದ್ದ ಶಿಲಾಯುಗದ ಮಾನವ ಈ ಹಂತದಲ್ಲಿ ಆಹಾರೋತ್ಪಾದನೆಯತ್ತ ಮೊದಲ ಹೆಜ್ಜೆ ಇಟ್ಟ, ಪ್ರಕೃತಿಯನ್ನು ತನ್ನ ಹಿಡಿತದಲ್ಲಿಟ್ಟಿಕೊಳ್ಳವುದರ ಮೂಲಕ ಆರಂಭ ಹಂತದ ಬೇಸಾಯ, ಪಶುಸಂಗೋಪನೆಗಳನ್ನು ರೂಢಿಸಿಕೊಂಡು, ತತ್ಪರಿಣಾಮವಾಗಿ ಅಲೆಮಾರಿ ಜೀವನಕ್ರಮವನ್ನು ಬಿಟ್ಟು ಒಂದೆಡೆಯಲ್ಲಿ ನೆಲೆನಿಂತು ವಾಸಿಸುವಂತಾಯಿತು. ಇದರ ಫಲವಾಗಿ ಗ್ರಾಮೀಣ ಜೀವನ ಮತ್ತು ವಸತಿ ನಿರ್ಮಾಣಗಳು ಬೆಳೆದವು. ಧಾನ್ಯ, ಮಾಂಸ, ಮತ್ತಿತರ ಪಾನೀಯಗಳನ್ನು ಸಂಗ್ರಹಿಸಿಡಲು ಸುಟ್ಟಮಣ್ಣಿನ ಪಾತ್ರೆಗಳನ್ನು, ಬೆತ್ತದಲ್ಲಿ ಹೆಣೆದ ಬುಟ್ಟಿಗಳನ್ನು ತಯಾರಿಸಲಾರಂಭಿಸಿದ ಇವೆಲ್ಲವುಗಳಿಂದ ಮಾನವ ಸಂಸ್ಕೃತಿ ದೊಡ್ಡ ಪ್ರಮಾಣದಲ್ಲಿ ಪ್ರಗತಿ ಹೊಂದಿತು. ಮಾನವನ ಜೀವನ ರೀತಿಯಲ್ಲಿ ತಲೆದೂರಿದ ಇಂಥ ಪ್ರಮುಖ ಬದಲಾವಣೆಗಳು–ಅವನ ಸರ್ವತೋಮುಖ ಪ್ರಗತಿ ಮತ್ತು ನಾಗರಿಕತೆಗೆ ಭದ್ರಬುನಾದಿನ್ನೊದಗಿಸಿದವು.[೭]

ಕರ್ನಾಟಕದಲ್ಲಿ ಮೊಟ್ಟಮೊದಲು ೧೮೭೨ರಲ್ಲಿ ಫ್ರೆಸರ್‌ರವರು ಬಳ್ಳಾರಿ ಜಿಲ್ಲೆಯ ಕಪ್ಪಗಲ್ಲು ಬೆಟ್ಟಗಳಲ್ಲಿ ನೂತನ ಶಿಲಾಯುಗ ಸಂಸ್ಕೃತಿಗೆ ಸಂಬಂಧಿಸಿದ ಆಯುಧಗಳ ಉತ್ಪಾದನಾ ಕೇಂದ್ರವೊಂದನ್ನು ಶೋಧಿಸಿದರು.[೮] ರಾಬರ್ಟ್ ಬ್ರೂಸ್‌ಫುಟ್ ರವರು ೧೮೮೧–೧೮೮೪ರ ನಡುವಿನ ವೇಳೆಯಲ್ಲಿ ಕೋಲಾರ ಜಿಲ್ಲೆಯ ಶ್ರೀನಿವಾಸಪುರ ಮತ್ತು ಬೀರಮಂಗಲ, ಮೈಸೂರು ಜಿಲ್ಲೆಯ ಲಕ್ಷ್ಮಾಪುರ, ತಿ. ನರಸೀಪುರ, ಮಂಡ್ಯ ಜಿಲ್ಲೆಯ ಫ್ರೆಂಚ್ ಹಿಲ್ಸ್ ಇತ್ಯಾದಿ ಕಡೆಗಳಲ್ಲಿ ಈ ಸಂಸ್ಕೃತಿಯ ಕುರುಹುಗಳನ್ನು ಬೆಳಕಿಗೆ ತಂದರು.[೯] ತಿ. ನರಸೀಪುರ[೧೦] ಮತ್ತು ಹೆಮ್ಮಿಗೆ[೧೧] ನೆಲೆಗಳಲ್ಲಿ ನಡೆಸಿದ ಉತ್ಖನನಗಳಿಂದ ಅತ್ಯಂತ ಪ್ರಾಚೀನ ಸಾಂಸ್ಕೃತಿಕ ಘಟ್ಟದಲ್ಲಿ ತೆಳುನೀಳ

ಚಿಕ್ಕೆಗಳಾಗಲಿ, ವರ್ಣರೇಖಾತ್ಮಕ ಮೃತ್ಪಾತ್ರೆಗಳಾಗಲಿ ಕಂಡುಬಂದಿಲ್ಲ. ಆದರೆ ಈ ಸಂಸ್ಕೃತಿಯ ಅಂತಿಮ ಘಟ್ಟದ ಅಂತಿಮ ಭಾಗದಲ್ಲಿ ಕೆಲವು ವರ್ಣರೇಖಾಚಿತ್ರವುಳ್ಳ ಮೃತ್ಪಾತ್ರೆಯ ಚೂರುಗಳು ಮಾತ್ರ ಇದ್ದವು. ಪಾಲಾರ್ ನದಿ ದಂಡೆಯ ಮೇಲಿನ ಬನಹಳ್ಳಿಯ ನೆಲೆಯಲ್ಲಿ ನಡೆಸಿದ ಉತ್ಖನನದಲ್ಲಿ ವಸತಿಗೆ ಉಪಯೋಗಿಸಿದ ಅವಶೇಷಗಳು ಹಾಗೂ ವಿವಿಧ ಬಗೆಯ ಆಯುಧಗಳು ದೊರೆತಿವೆ.[೨೨] ಹಾವೇರಿ ಜಿಲ್ಲೆಯ ಹಳ್ಳೂರಿನ ಉತ್ಖನನದಲ್ಲಿ ಈ ಸಂಸ್ಕೃತಿಗೆ ಸಂಬಂಧಿಸಿದ ರಾಗಿ, ಕುದುರೆಯ ಎಲುಬುಗಳು, ವಸತಿ ಅವಶೇಷಗಳು, ಶವಕುಣಿಗಳು ದೊರೆತಿವೆ.[೨೩]

ಚಿತ್ರದುರ್ಗ ಜಿಲ್ಲೆಯ ಸಂಗೇನಹಳ್ಳಿಯಲ್ಲಿ ಬೂದು ಬಣ್ಣದ ಮಡಿಕೆಗಳು, ಬೂದಿದಿಬ್ಬ, ಬಯಲು ಬಂಡೆಯ ರೇಖಾಚಿತ್ರಗಳು ಅಲ್ಲದೇ ಶಿಲಾಕೊಡಲಿಗಳು ದೊರೆತಿವೆ.[೨೪] ಅಲ್ಲದೆ ಚಿತ್ರದುರ್ಗ,[೨೫] ಚಂದ್ರವಳ್ಳಿ,[೨೬] ಪರಶುರಾಂಪುರ[೨೭] ಮೊದಲಾದವುಗಳು ಈ ಸಂಸ್ಕೃತಿಗೆ ಸಂಬಂಧಿಸಿದ ನೆಲೆಗಳಾಗಿವೆ. ಇನ್ನೂ ಹರಿಹರದ ಜಿಲ್ಲಾ ಕೇಂದ್ರವಾದ ದಾವಣಗೆರೆ ಜಿಲ್ಲೆಯ ಮಾಡಲಗೇರಿಯಲ್ಲಿ ಬೂದುಬಣ್ಣದ ಮಡಿಕೆ ಭಾಗಗಳು ಹಾಗೂ ವಿವಿಧ ಮಾದರಿಯ ಶಿಲೋಪಕರಣಗಳು ದೊರೆತಿವೆ.[೨೮] ಅಲ್ಲದೆ ಅಯ್ಯನೂರು,[೨೯] ದಿಡಗೂರು,[೩೦] ನ್ಯಾಮತಿ,[೩೧] ಬೆನಕನಹಳ್ಳಿ,[೩೨] ಸಾಸಿವೆಹಳ್ಳಿ,[೩೩] ಹರಗನಹಳ್ಳಿ,[೩೪] ಹಳೆಲಿಂಗಾಪುರ,[೩೫] ಹಾಡೋನಹಳ್ಳಿ,[೩೬] ಹೊಸಹಳ್ಳಿ,[೩೭] ಮೊದಲಾದವುಗಳು ಪ್ರಸ್ತುತ ಅಧ್ಯಯನ ಕ್ಷೇತ್ರದ ಪರಿಸರದಲ್ಲಿಯೇ ಇರುವಂತಹ ಈ ಸಂಸ್ಕೃತಿಗೆ ಸಂಬಂಧಿಸಿದ ನೆಲೆಗಳಾಗಿವೆ.

ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಕೈಗೊಂಡ ಕ್ಷೇತ್ರಾನ್ವೇಷಣೆಯ ಫಲವಾಗಿ ನವಶಿಲಾಯುಗ ಸಂಸ್ಕೃತಿಯ ನೆಲೆಗಳು ಬೆಳಕಿಗೆ ಬಂದಿದ್ದು ಎಲ್ಲಾ ನೆಲೆಗಳು ಬೆಟ್ಟದ ತಪ್ಪಲಿನಲ್ಲಿಯೇ ಅಂದರೆ ಬೆಟ್ಟದ ತಪ್ಪಲಿನ ಇಳಿಜಾರು ಪರಿಸರದಲ್ಲಿಯೇ ಕಂಡುಬಂದಿವೆ. ಬಹುತೇಕ ನೆಲೆಗಳು ನಿಸರ್ಗದ ಹಾಗೂ ಮಾನವನ ಚಟುವಟಿಕೆಗಳಿಂದ ಹಾಳಾಗಿದ್ದು ಬಹುತೇಕ ನೆಲೆಗಳನ್ನು ಕೃಷಿ ಭೂಮಿಯನ್ನಾಗಿ ಪರಿವರ್ತಿಸಿಕೊಂಡಿರುವುದರಿಂದ ಹೆಚ್ಚಿನ ಅವಶೇಷಗಳು ಕಣ್ಮರೆಯಾಗಿರುವ ಸಾಧ್ಯತೆ ಇದೆ. ಅಧ್ಯಯನಕ್ಕೆ ಕಡಿಮೆ ಅವಶೇಷಗಳು ದೊರಕಿವೆ.

ಹರಿಹರ ಹಾಗೂ ಹಲಸಬಾಳು ಪರಿಸರದಲ್ಲಿ ಈ ಸಂಸ್ಕೃತಿಯ ಹಲವು ಶಿಲೋಪಕರಣಗಳಾದ, ಕೈಗೊಡಲಿ, ಬೂದುಬಣ್ಣದ ಮಡಿಕೆ ಚೂರುಗಳು ದೊರೆತಿವೆ. ಆದ್ದರಿಂದ ಈ ನೆಲೆಗಳು ಕೂಡ ಈ ಪರಿಸರದಲ್ಲಿ ಬರುವ ನ್ಯಾಮತಿ, ಹಳ್ಳೂರುಗಳಲ್ಲಿರುವಂತೆ ನವಶಿಲಾಯುಗದಿಂದಲೂ ನಿರಂತರವಾಗಿ ಜನವಾಸ್ತವ್ಯವಿದ್ದಿತು. ಗುಡ್ಡದ ತುಮ್ಮಿನಕಟ್ಟೆ ಪರಿಸರದಲ್ಲಿನ ಕರ್ಲಾಳಗುಡ್ಡದ ತಪ್ಪಲಿನಲ್ಲಿ ನವಶಿಲಾಯುಗಕ್ಕೆ ಸಂಬಂಧಿಸಿದಂತಹ ಆಗೇಟ್[೩೮] ಕೈಗೊಡಲಿಗಳಿಂದ ಹೊರ ತೆಗೆದ ಭರ್ಜಿಯಾಕಾರದ ಅಥವಾ ಚಪ್ಪಟೆ ಭಾಗಗಳಾದ ಬ್ಲೇಡ್ಸ್‌ಗಳು, ಕವಣೆಕಲ್ಲು, ಬೂದುಬಣ್ಣದ ಮಡಿಕೆ ಭಾಗಗಳು, ಹೆರೆಚೆಕ್ಕೆ ಹಲವಾರು ಮಾದರಿಯ ಶಿಲೋಪಕರಣಗಳು ದೊರೆತಿವೆ. ಸಾರಥಿ ಪರಿಸರದ ಆಂಜನೇಯ ಗುಡ್ಡದ ಹಿಂಭಾಗದಲ್ಲಿ ಚಿಕ್ಕಬಿದರೆಗೆ ಹೋಗುವ ಬಲಭಾಗದ ಗುಡ್ಡದ ತಪ್ಪಲಿನಲ್ಲಿ ಇದೇ ರೀತಿಯ ಶಿಲೋಪಕರಣಗಳ ಜೊತೆಗೆ ವಿವಿಧ ಮಡಿಕೆ ಮಾದರಿಗಳು ದೊರೆತಿವೆ.

ಹರಿಹರ ಸಮೀಪದ ಶೇರಾಪುರ ಗ್ರಾಮದ ಬಳಿ ಕ್ರಿ.ಪೂ. ೧೮೦೦ ವರ್ಷಗಳ ಮಧ್ಯದ ಅವಧಿಯ ನವಶಿಲಾಯುಗದ ಶಿಲಾಕೈಗೊಡಲಿ ದೊರೆತಿದೆ.[೯] ಡೈಕ್ ಶಿಲೆಯಲ್ಲಿ ಕೆತ್ತಲ್ಪಟ್ಟ ಈ ಕೊಡಲಿ ೧೩.೨ ಕೆ.ಜಿ ೧೫ ಇಂಚು ಉದ್ದ, ೭ ಇಂಚು ಅಗಲ, ೧೯ ಇಂಚು ಸುತ್ತಳತೆ ಹೊಂದಿದೆ. ಈ ಆಯುಧ ಸ್ಥಳದಿಂದ ಪಶ್ಚಿಮಕ್ಕೆ ತುಂಗಭದ್ರಾ ನದಿ ೧ ಕಿ.ಮೀ ದೂರದಲ್ಲಿದ್ದು ಹಳ್ಳದ ಬಳಿ ದೊರೆತಿದೆ. ಅದೇ ರೀತಿಯಾಗಿ ಹಿ.ಗೊ ದುಂಡ್ಯಪ್ಪ[೧೦] ಅವರಿಂದ ಶೋಧಿಸಲ್ಪಟ್ಟ ನವಶಿಲಾಯುಗದ ಕೈಗೊಡಲಿಯು ಹಿರೇಹಾಲಿವಾಣದ ಬೆಟ್ಟ ಪರಿಸರದಲ್ಲಿ ದೊರೆತಿದೆ. ಕಪ್ಪು ಶಿಲೆಯಲ್ಲಿ ಉಜ್ಜಿ ನಯಗೊಳಿಸಿದ ಈ ಕೈಗೊಡಲಿ ೯ ಇಂಚು ಉದ್ದ, ೫ ಇಂಚು ಅಗಲ, ೩ ಇಂಚು ಅಗಲ ಮೇಲ್ಭಾಗ ಹಾಗೂ ೧೫ ಇಂಚು ಸುತ್ತಳತೆಯನ್ನು ಹೊಂದಿದೆ.

ಈ ಮಾಹಿತಿಗಳನ್ನು ಬಿಟ್ಟರೆ ಈ ಸಂಸ್ಕೃತಿಗೆ ಸಂಬಂಧಿಸಿದ ವಸತಿ ನೆಲೆಗಳ ಬಗ್ಗೆಯಾಗಲಿ, ಬೂದಿದಿಬ್ಬಗಳು ದೊರೆತಿರುವುದಿಲ್ಲ. ಸಾಮಾನ್ಯವಾಗಿ ಈ ಸಂಸ್ಕೃತಿಯಲ್ಲಿ ಲಭ್ಯವಾಗುವ ಆಯುಧಗಳೆಂದರೆ ಕೋಡಲಿ, ಬಾಚಿ, ಸುತ್ತಿಗೆ, ಉಳಿ, ಕೆತ್ತುಳಿ, ಉಜ್ಜುಗ ಅಥವಾ ಅರೆಯುವ ಕಲ್ಲು ಮತ್ತು ಉಂಗುರ ಕಲ್ಲುಗಳು ಪ್ರಮುಖವಾಗಿದ್ದು ಆಯುಧಗಳ ತಯಾರಿಕೆಯಲ್ಲಿ ಚಕ್ಕೆ ಎಬ್ಬಿಸುವುದು, ಉಬ್ಬುಗಳನ್ನು ಹೊಡೆದು ತಗೆಯುವುದು, ಉಜ್ಜಿ ನಯಗೊಳಿಸುವುದು ಮತ್ತು ಹೊಳಪು ನೀಡುವ ಹಂತಗಳಿದ್ದು[೧೧] ಹರಿಹರ ಪರಿಸರದಲ್ಲಿ ದೊರೆತ ಶಿಲೋಪಕರಣಗಳಲ್ಲಿ ಮುಖ್ಯವಾಗಿ ಚಕ್ಕೆ ಎಬ್ಬಿಸಿದ ಕೈಗೊಡಲಿ, ಉಜ್ಜಿನಯಗೊಳಿಸಿದ ಕೈಗೊಡಲಿ ದೊರೆತಿವೆ. ಈ ಆಯುಧಗಳಲ್ಲಿ ಮೇಲ್ತುದಿ ಮತ್ತು ಹರಿತ ಅಲಗಿನ ಭಾಗಗಳಲ್ಲಿ ಹೊಳಪುಗೊಳಿಸಲು ಪ್ರಯತ್ನಿಸಿರುವುದನ್ನು ಕಾಣಬಹುದು. ವಿಶೇಷವಾಗಿ ಹೊಳಪು ನೀಡುವುದಕ್ಕಾಗಿ ಪ್ರಾಣಿಗಳ ಕೊಬ್ಬಿನಂತಹ ಜಿಡ್ಡುಳ್ಳ ವಸ್ತುವನ್ನು ಉಪಯೋಗಿಸಿರಬಹುದೆಂದು ಪದ್ದಯ್ಯರವರು ಅಭಿಪ್ರಾಯಪಟ್ಟಿದ್ದಾರೆ.[೧೨] ಜೊತೆಗೆ ರಂಗೋಲಿಯಂತಹ ಕ್ವಾರ್ಟ್ಜ್ ಶಿಲೆಯ ನುಣುಪು ಪುಡಿಯನ್ನು ಉಪಯೋಗಿಸಿರಬಹುದು.

ಕೊಡಲಿಯ ಈ ಸಂಸ್ಕೃತಿಯಲ್ಲಿ ದಿನನಿತ್ಯ ಬಳಸಲಾಗುತ್ತಿದ್ದ ಪ್ರಮುಖ ಆಯುಧವಾಗಿದೆ. ಕೊಡಲಿಯನ್ನು ನಿರ್ಮಿಸಲು ಪ್ರಮುಖವಾಗಿ ನಾಲ್ಕು ಹಂತಗಳನ್ನು ಅನುಸರಿಸಲಾಗುತ್ತಿತ್ತು.[೧೩] ಮೊದಲನೆಯದಾಗಿ ನಿರ್ದಿಷ್ಟ ಮೂಲ ಶಿಲಾಗಟ್ಟಿ ಇಲ್ಲವೇ ದಪ್ಪ ಚಕ್ಕೆಯಲ್ಲಿ ಅವಶ್ಯಕವಾದ ಅಳತೆಗೆ ತಕ್ಕಂತೆ ಚಕ್ಕೆ ತಗೆಯಲಾಗುತ್ತದೆ. ಎರಡನೆಯ ಹಂತದಲ್ಲಿ ಚಕ್ಕೆ ತೆಗದ ಉಬ್ಬು ಭಾಗಗಳನ್ನು ಕುಟ್ಟಿ ಅಂಡಾಕಾರದ ಅಥವಾ ಸಮೋನ್ನತ ಅಡ್ಡ ವಿನ್ಯಾಸಕ್ಕೆ ಸರಿಹೊಂದಿಸಲಾಗುತ್ತದೆ. ಹೀಗೆ ತಯಾರಿಸಿದ ಆಯುಧವನ್ನು ಕಲ್ಲಿನಮೇಲೆ ಉಜ್ಜಿ ಮೇಲ್ಮೈಯನ್ನು ನಯಗೊಳಿಸುವುದು ಮೂರನೆಯ ಹಂತವಾಗಿದೆ. ಕೊನೆಯ ಹಂತದಲ್ಲಿ ಇಡೀ ಆಯುಧವನ್ನು ಅಥವಾ ಅಲಗಿನ ಭಾಗವನ್ನು ಮತ್ತಷ್ಟು ಉಜ್ಜಿ ಅಲಗನ್ನು ಹೊಳಪು ಮಾಡಿ ಹರಿತಗೊಳಿಸಲಾಗುತ್ತದೆ. ಈ ಕೊಡಲಿಗಳು ಸಾಧಾರಣವಾಗಿ ತ್ರಿಭುಜಾಕಾರವನ್ನು ಹೊಂದಿರುತ್ತವೆ.[೧೪] ಹರಿಹರ ತಾಲೂಕಿನಲ್ಲಿ ಈ ನಮೂನೆಯ ಆಯುಧಗಳು ದೊರೆತಿವೆ. ದೊರೆತ ಕೈಕೊಡಲಿಗಳು ದೊಡ್ಡ ಗಾತ್ರದ ಕೊಡಲಿಗಳಿವೆ. ಈ ಆಯುಧಗಳನ್ನು ಡೈಕ್ ಹಾಗೂ ಕಪ್ಪುಶಿಲೆಯಿಂದ ರಚಿಸಲಾಗಿದೆ. ಶೇರಾಪುರ, ಹಿರೇ ಹಾಲಿವಾಣ ನೆಲೆಗಳಲ್ಲಿ ಆಯುಧಗಳು ಲಭ್ಯವಾಗಿವೆ.

ನವಶಿಲಾಯುಗದ ಆಯುಧಗಳ ಗುಂಪಿನ ಅವಿಭಾಜ್ಯ ಅಂಗವಾದ ಅರೆಯುವ ಕಲ್ಲು ಸಾಮಾನ್ಯವಾಗಿ ಅಡಿಗೆ ಮನೆಯ ಆಯುಧವಾಗಿದೆ. ಇದನ್ನು ಉಜ್ಜಲು, ಜಜ್ಜಲು ಮತ್ತು ಅರೆಯಲು ಬಳಸಲಾಗುತ್ತಿತ್ತು. ಸಾಧಾರಣವಾಗಿ ದುಂಡನೆಯ, ಅಂಡಾಕಾರ ಇಲ್ಲವೆ ಆಯತಾಕಾರದ ಉಂಡೆಕಲ್ಲು ಅಥವಾ ಚಕ್ಕಕಲ್ಲುಗಳಲ್ಲಿ ಇವುಗಳನ್ನು ತಯಾರಿಸಲಾಗಿದೆ. ಉಪಯೋಗ ಹಾಗೂ ಮೂಲಶಿಲೆಯ ಆಕಾರ ಇವುಗಳನ್ನಾಧರಿಸಿದಂತೆ ಒಂದು, ಎರಡು ಅಥವಾ ಎಲ್ಲಾ ಭಾಗದಲ್ಲೂ ಚಕ್ಕೆಗಳನ್ನು ಎಬ್ಬಿಸಿ ಕುಟ್ಟಿ ನಯಗೊಳಿಸಲಾಗಿದೆ.[೬೫] ಅರೆಯಲು ಉಪಯೋಗಿಸಿರುವ ಮೇಲ್ಮೈ ಸಹಜವಾಗಿ ಅತ್ಯಂತ ನಯವಾಗಿರುತ್ತದೆ. ಹರಿಹರ ತಾಲೂಕಿನಲ್ಲಿ ಅರೆಯುವ ಕಲ್ಲುಗಳು ದೊರೆಯದಿದ್ದರೂ ಒಂದು ಕಡೆ ಒರಳುಗಲ್ಲು ಇರುವುದನ್ನು ಗಮನಿಸಲಾಗಿದೆ ಬಗ್ಗಡನಾಳು ಪರಿಸರದಲ್ಲಿ ಈ ಸಂಸ್ಕೃತಿಗೆ ಸಂಬಂಧಿಸಿದ ಅವಶೇಷ ದೊರೆಯುವ ಸ್ಥಳದಲ್ಲಿ ಕೃಷಿಗೆ ಒಳಪಟ್ಟಿರುವ ಜಾಗದಲ್ಲಿ ಅಂಡಾಕಾರದ ಒರಳುಕಲ್ಲು ಇದೆ.[೬೬] ಇಂತಹ ಒರಳುಕಲ್ಲು ಈ ಪ್ರದೇಶದಲ್ಲಿ ಹೆಚ್ಚಾಗಿ ದೊರೆಯುತ್ತವೆ.

ನವಶಿಲಾಯುಗದ ನೆಲೆಗಳಲ್ಲಿ ಸಾಮಾನ್ಯವಾಗಿ ದೊರೆಯುವ ಆಯುಧಗಳು ಬೆಳೆಯನ್ನು ಹಾಳುಮಾಡುವ ಬರುವ ಪಕ್ಷಿಗಳನ್ನು ಬೆದರಿಸಿ ಓಡಿಸಲು ಮತ್ತು ತಿನ್ನಬಹುದಾದ ಹಕ್ಕಿ ಹಾಗೂ ಸಣ್ಣ ಪ್ರಾಣಿಗಳನ್ನು ದೂರದಿಂದಲೇ ಹೊಡೆದು ಕೊಲ್ಲಲು ಬಳಸಲಾಗುತ್ತಿತ್ತು. ಉಳಿದ ಆಯುಧಗಳಿಗೆ ಹೋಲಿಸಿದರೆ ಕಡಿಮೆ ಪ್ರಮಾಣದಲ್ಲಿ ದೊರೆಯುವ ಇವುಗಳು ಮಧ್ಯಮ ಗಾತ್ರದಲ್ಲಿದ್ದು ಪೂರ್ಣ ದುಂಡಾಗಿ ಅಥವಾ ಇಲ್ಲವೇ ಅಂಡಾಕಾರದಲ್ಲಿರುತ್ತದೆ. ಸಾಧಾರಣವಾಗಿ ಸಮಗಾತ್ರದ ದುಂಡನೆಯ ಅಂಡಾಕಾರದ ಉಂಡೆಕಲ್ಲುಗಳನ್ನು ಅವಶ್ಯಕವಾದ ಕಡೆ ಚಕ್ಕೆಯನ್ನು ತೆಗೆದು ಕುಟ್ಟಿ ಕನಿಷ್ಠ ಜಾಮಿತಿಯ ಆಕಾರಕ್ಕೆ ತಂದಿರುತ್ತಾರೆ ಬಳಪದ ಕಲ್ಲುಗಳಷ್ಟೆ ಅಲ್ಲದೆ ಮೊದಲಾದ ಶಿಲೆಗಳಿಂದ ಇಂತಹ ಕವಣೆಕಲ್ಲು ಹರಿಹರ ತಾಲೂಕಿನ ಗುಡ್ಡದ ತುಮ್ಮಿನಕಟ್ಟೆ ಗುಡ್ಡದ ಪರಿಸರದಲ್ಲಿ ದೊರೆತಿದೆ. ಈ ಪ್ರದೇಶದ ನವಶಿಲಾಯುಗ ಸಂಸ್ಕೃತಿಯ ನೆಲೆಗಳಲ್ಲಿ ದೊರೆತಿರುವ ಅವಶೇಷಗಳು ಈ ಸಂಸ್ಕೃತಿಯ ಮಾನವನ ಕಾರ್ಯಚಟುವಟಿಕೆಗಳನ್ನು ಅರಿಯಲು ಸಹಾಯಕವಾಗುತ್ತವೆ.

೨.೨.೪ ಶಿಲಾ-ತಾಮ್ರಯುಗ ಸಂಸ್ಕೃತಿ

ನವಶಿಲಾಯುಗ ಸಂಸ್ಕೃತಿಯ ನಂತರ ವಿಕಸನಗೊಂಡ ಹಂತವಿದ್ದು ತಾಮ್ರದ ಅದುರಿನ ಜ್ಞಾನ, ಲೋಹಗಳ ಪರಿವರ್ತನೆ, ನೀಳಚಕ್ಕೆಗಳ ಉಪಯೋಗ, ಶಿಲೆಗೆ ಬದಲಾಗಿ ಲೋಹದ ಆಯುಧಗಳ ಬಳಕೆ, ಸುಟ್ಟ ಮಣ್ಣಿನ ಪಾತ್ರೆಗಳ ಬಳಕೆ, ಸುಧಾರಿಸಿದ ಬೇಸಾಯ ಪದ್ಧತಿ, ಮೊದಲಾದ ಮುಖ್ಯ ಲಕ್ಷಣಗಳನ್ನು ಗುರುತಿಸಿಕೊಂಡ ಸಾಂಸ್ಕೃತಿಕ ಹಂತವಿದಾಗಿದೆ. ನವಶಿಲಾಯುಗ ಸಂಸ್ಕೃತಿಯ ಶಿಲೋಪಕರಣಗಳ ಬಳಕೆಯು ಈ ಹಂತದಲ್ಲಿಯೂ ಇದ್ದಿತೆಂದು ತಿಳಿಯುತ್ತದೆ. ಮಡಕೆಯ ಮಾದರಿಯ ವಿಶಿಷ್ಟವಾಗಿದ್ದುದು ಕಂಡುಬರುತ್ತದೆ. ಇವುಗಳಲ್ಲಿ ವರ್ಣರೇಖಾ ಚಿತ್ರಮಯವಾದ ಪಾತ್ರೆಗಳು ಕಂಡುಬಂದಿವೆ. ಕೆಲವೊಮ್ಮೆ ಪ್ರಾಣಿಗಳ ಚಿತ್ರಗಳನ್ನು ಬಿಡಿಸಲಾಗಿದೆ. ಇಂತಹ ಮಣ್ಣಿನ ಪಾತ್ರೆಗಳನ್ನು ಜೋರ್ವೆ ಮತ್ತು ಸಾವಳದ ಮಡಿಕೆ ಮಾದರಿಗಳೆಂದು[೬೭] ಕರೆಯಲಾಗುತ್ತದೆ.

ಶಿಲಾಯುಗದ ಜನರು ಸೌಂದರ್ಯ ಪ್ರಜ್ಞೆಯುಳ್ಳವರಾಗಿದ್ದರೆಂದು ಅವರು ಮಣ್ಣಿನ ಗೊಂಬೆ ಹಾಗೂ ದೊರೆತ ವರ್ಣಚಿತ್ರಗಳಿಂದ ತಿಳಿಯಬಹುದಾಗಿದೆ. ರಾಯಚೂರು, ಬಳ್ಳಾರಿ-ಚಿತ್ರದುರ್ಗ ಪ್ರದೇಶದಲ್ಲಿಯ ಬೆಟ್ಟಗಳಲ್ಲಿ ಬಯಲು ಬಂಡೆಗಳ ಮೇಲೆ ಚಿತ್ರಗಳು ದೊರೆತಿವೆ.[೯೮] ಶಿಲಾ-ತಾಮ್ರಯುಗ ಸಂಸ್ಕೃತಿಗೆ ಸಂಬಂಧಿಸಿದಂತೆ ಹರಿಹರ ತಾಲೂಕಿನಲ್ಲಿ ಯಾವುದೇ ಅವಶೇಷಗಳು ದೊರಕದೇ ಪಕ್ಕದ ಜಿಲ್ಲೆಗಳಲ್ಲಿ ದೊರೆತಿವೆ. ಚಂದ್ರವಳ್ಳಿ, ಚಿತ್ರದುರ್ಗ, ಜಟಿಂಗರಾಮೇಶ್ವರ, ಬ್ರಹ್ಮಗಿರಿ[ಚಿತ್ರದುರ್ಗ ಜಿಲ್ಲೆ],[೯೯] ಅಯ್ಯಪ್ಪನಹಳ್ಳಿ, ಕುಡುತಿನಿ, ಕುಪ್ಪಗಲ್, ಕುರುಗೋಡು, ಬಳ್ಳಾರಿ, ಸಂಗನಕಲ್ಲು, ತೆಕ್ಕಲಕೋಟೆ, ದರೋಜಿ, ಭೈರನಾಯಕನಹಳ್ಳಿ, ರಾಜಾಪುರ, ಲಕ್ಷ್ಮೀಪುರ, ಹಂಪಸಾಗರ, ಅಲ್ಲೀಪುರ, ಗಾದಿಗನೂರು, ಗುಡಿ ಓಬಳಾಪುರ, ನಿಂಬಾಪುರ, ಬೆಳಗಲ್ಲು, ಬೆಳಗೋಡುಹಾಳು, ವೆಂಕಟಾಪುರ, ಹಳಕುಂಡಿ, ಹಂಪಿ ಹತ್ತಿರ ತುಂಗಭದ್ರಾ ಬಲದಂಡೆ, ಹಂಪಿ ವಿರೂಪಾಕ್ಷ ಬಜಾರ್[ಬಳ್ಳಾರಿ ಜಿಲ್ಲೆ],[೧೦೦] ಹೊಳೆಹಟ್ಟಿ [ಶಿವಮೊಗ್ಗ ಜಿಲ್ಲೆ][೧೦೧] ಕದರಮಂಡಲಗಿ, ಆಸುಂಡಿ, ಕವಲೆತ್ತು, ಕೂನಬೇವು, ನದಿಹರಳಹಳ್ಳಿ, ನಲ್ವಗಲ್, ಮುದೇನೂರು, ಮಾದಾಪುರ, ಜಲ್ಲಾಪುರ, ತಳ್ಳಿಹಳ್ಳಿ, ಹಾದರಗೇರಿ, ಬೆನ್ನೂರು, ಮಣ್ಣೂರು, ತಡಕನಹಳ್ಳಿ, ಪುರದಕೇರಿ, ಹಳ್ಳೂರು[ಹಾವೇರಿ ಜಿಲ್ಲೆ][೧೦೨] ನೆಲೆಗಳಲ್ಲಿ ಈ ಸಂಸ್ಕೃತಿಗೆ ಸಂಬಂಧಿಸಿದ ಹಲವಾರು ಅವಶೇಷಗಳು ದೊರೆತಿವೆ.

೨.೨.೫ ಕಬ್ಬಿಣಯುಗ ಅಥವಾ ಬೃಹತ್‌ಶಿಲಾಯುಗ

ಮೆಗಾಲಿಥ್(Megalith) ಎಂಬ ಆಂಗ್ಲ ಪದವು "ಮೆಗಾ" (Mega) ಮತ್ತು "ಲಿಥೊಸ್"(Lithos) ಎಂಬ ಎರಡು ಗ್ರೀಕ್ ಪದಗಳಿಂದ ನಿಷ್ಪತ್ತಿಯಾಗಿದೆ. "ಮೆಗಾ' ಎಂದರೆ ಬೃಹತ್ "ಲಿಥಿಯೋ" ಎಂದರೆ ಶಿಲೆ ಎಂದಾರ್ಥ. ಅಂದರೆ ಮೆಗಾಲಿಥಿಕ್ ಕಲ್ಚರ್ ಎಂಬ ಆಂಗ್ಲ ಪದವು ಬೃಹತ್ ಶಿಲಾಯುಗ ಸಂಸ್ಕೃತಿ ಎಂಬ ಕನ್ನಡ ಪದಕ್ಕೆ ಸಮವಾಗಿದೆ.[೧೦೩] ತಾಮ್ರ ಮತ್ತು ಕಂಚಿನ ಲೋಹಕ್ಕೆ ಬದಲಾಗಿ ಕಬ್ಬಿಣವನ್ನು ಉಪಯೋಗಿಸಲಾರಂಭಿಸಿದ್ದು ಮಾನವನ ಇತಿಹಾಸದಲ್ಲಿ ಮಹತ್ವದ ಮೈಲಿಗಲ್ಲು. ದಕ್ಷಿಣ ಭಾರತದಲ್ಲಿ ನವಶಿಲಾಯುಗದ ಅಂತ್ಯದಿಂದ ಐತಿಹಾಸಿಕ ಕಾಲ ಆರಂಭವಾಗುವವರೆಗಿನ ಕಾಲವನ್ನು ಕಬ್ಬಿಣಯುಗ ಅಥವಾ ಬೃಹತ್‌ಶಿಲಾಯುಗವೆಂದು ಕರೆಯಲಾಗಿದೆ. ಆಯುಧೋಪಕರಣಗಳನ್ನು ತಯಾರಿಸಲು ಕಲ್ಲಿಗೆ ಬದಲಾಗಿ ಕಬ್ಬಿಣವನ್ನು ಬಳಸಲಾರಂಭಿಸಿದ್ದರಿಂದ ಕಬ್ಬಿಣಯುಗವೆಂದು, ಬೃಹತ್‌ಶಿಲಾಗೋರಿಗಳು ದಕ್ಷಿಣ ಭಾರತದಲ್ಲಿ ಕಂಡುಬಂದಿದ್ದರಿಂದ ಬೃಹತ್ ಶಿಲಾಯುಗವೆಂತಲೂ ಕರೆಯುತ್ತಾರೆ. ಮೆಡೋಸ್ ಟೇಲರ್, ರಾಬರ್ಟ್ ಬ್ರೂಸ್‌ಫೂಟ್, ಎಂ.ಹೆಚ್ ಕೃಷ್ಣ ಹಾಗೂ ಮಾರ್ಟಿಮರ್ ವ್ಹೀಲರ್ ಅವರು ಕರ್ನಾಟಕದ ಮಸ್ಕಿ, ಹಳ್ಳೂರು, ಟಿ. ನರಸೀಪುರಗಳಲ್ಲಿ ಬೃಹದಾಕಾರದ ಗೋರಿಗಳನ್ನು ಪತ್ತೆಹಚ್ಚಿ ದಕ್ಷಿಣಭಾರತದಲ್ಲಿ ಬೃಹತ್ ಶಿಲಾಯುಗದ[೧೦೪] ಅಸ್ತಿತ್ವವನ್ನು ಖಚಿತಪಡಿಸಿದರು.

ದಕ್ಷಿಣಭಾರತದ ಬೃಹತ್‌ಶಿಲಾಯುಗ ನೆಲೆಗಳಲ್ಲಿ ಕಬ್ಬಿಣದ ಅವಶೇಷಗಳು, ಮಾನವನ ಅಸ್ಥಿಪಂಜರ, ಅಕ್ಕಿಯ ತವಡು, ಮೆರಗುಗೊಳಿಸಿದ ಮಡಕೆಗಳು, ಬಂಗಾರ ಮತ್ತು ಕಂಚಿನ ಆಭರಣಗಳು ಕಪ್ಪೆಚಿಪ್ಪಿನ ಆಭರಣಗಳು, ಬಾಣದಮೊನೆ, ಅರ್ಧಚಂದ್ರಾಕಾರದ ಆಯುಧಗಳು ಕತ್ತಿ

ಮತ್ತು ನೇಗಿಲು ಕೃಷಿ ಉಪಕರಣಗಳು ಕಬ್ಬಿಣವನ್ನು ಉಪಯೋಗಿಸಿಕೊಂಡು ನಿರ್ಮಿತವಾದುವು. ಕರ್ನಾಟಕದಲ್ಲಿ ಉತ್ತರ ಕನ್ನಡ ಜಿಲ್ಲೆಯೂ ಸೇರಿದಂತೆ ಎಲ್ಲ ಜಿಲ್ಲೆಗಳಲ್ಲಿ ಬೃಹತ್‌ಶಿಲಾ ನೆಲೆಗಳು ಬೆಳಕಿಗೆ ಬಂದಿವೆ. ಈ ಸಂಸ್ಕೃತಿಯ ನೆಲೆಗಳು ಹೆಚ್ಚಾಗಿ ಗಷ್ಟುಕಲ್ಲು ಮತ್ತು ಗ್ರಾನೈಟ್ ಶಿಲೆಯ ಬೆಟ್ಟ ಪ್ರದೇಶಗಳಲ್ಲಿ ಕಂಡುಬಂದಿವೆ. ತಿ. ನರಸೀಪುರ,[೧೦೫] ರಾಜಘಟ್ಟ,[೧೦೬] ಹೆಗ್ಗಡೆಹಳ್ಳಿ,[೧೦೭] ನಿಡಗಟ್ಟ,[೧೦೮] ನಿಲಸಗಲ್,[೧೦೯] ಸೂಳೆಬೈಲು,[೧೧೦] ಚೌಡಯ್ಯದಾನಪುರ,[೧೧೧] ತಡಕನಹಳ್ಳಿ ಭೈರವನ ಪಾದ,[೧೧೨] ಹಳ್ಳೂರು,[೧೧೩] ಕೋಲಾರ,[೧೧೪] ಚಂದ್ರವಳ್ಳಿ,[೧೧೫] ಚಿತ್ರದುರ್ಗ[೧೧೬] ಇನ್ನೂ ಮೊದಲಾದ ನೆಲೆಗಳಲ್ಲಿ ಹಾಗೂ ದಾವಣಗೆರೆ ಜಿಲ್ಲಾ ಪರಿಸರದಲ್ಲಿಯೂ ಕೂಡ ದೊರೆತಿವೆ ಮುಖ್ಯವಾಗಿ ಆಕನೂರು,[೧೧೭] ತೆಲಗಿ,[೧೧೮] ನೀಲಗುಂದ,[೧೧೯] ಮಾಡಲಗೇರಿ,[೧೨೦] ಕೊಕ್ಕನೂರು,[೧೨೧] ಕೊಮಾರನಹಳ್ಳಿ,[೧೨೨] ಕಮ್ಮಾರಗಟ್ಟೆ,[೧೨೩] ಚಿನ್ನೀಕಟ್ಟೆ,[೧೨೪] ದಿಡಗೂರು,[೧೨೫] ಬನ್ನಿಕೋಡು,[೧೨೬] ಬೆನಕನಹಳ್ಳಿ,[೧೨೭] ಬೇಲಿಮಲ್ಲೂರು,[೧೨೮] ಸಾಸಿವೆಹಳ್ಳಿ,[೧೨೯] ಸಿದ್ಧಾಪುರ,[೧೩೦] ಸುಂಕದಕಟ್ಟೆ[೧೩೧] ಸೌಳಂಗ,[೧೩೨] ಹನುಮನಹಳ್ಳಿ,[೧೩೩] ಹರಗನಹಳ್ಳಿ,[೧೩೪] ಹಳೆಲಿಂಗಾಪುರ,[೧೩೫] ಹಾಡೋನಹಳ್ಳಿ,[೧೩೬] ಹೊಸಹಳ್ಳಿ[೧೩೭] ನೆಲೆಗಳಲ್ಲಿ ಈ ಸಂಸ್ಕೃತಿಯ ಗೋರಿನೆಲೆಗಳು, ವಾಸ್ತವ್ಯ ನೆಲೆಗಳು ಕಂಡುಬಂದಿವೆ.

ಗುಡ್ಡದ ತುಮ್ಮಿನಕಟ್ಟೆಯ ಗುಡ್ಡದ ತಪ್ಪಲಿನಲ್ಲಿ ಈ ಸಂಸ್ಕೃತಿಗೆ ಸೇರಿದ ಕೆಂಪುಮಿಶ್ರಿತ ಮಡಿಕೆ ಭಾಗಗಳು ದೊರೆತಿದ್ದು ಕೊಕ್ಕನೂರು ನೆಲೆಯಲ್ಲಿಯೂ ಸಹ ಇದೇ ಮಾದರಿಯ ಮಡಿಕೆ ಭಾಗಗಳು ದೊರೆಯುತ್ತವೆ. ಹಾಗೆಯೇ ಕೊಮಾರನಹಳ್ಳಿ ಬೃಹತ್‌ಶಿಲಾಯುಗದ ನೆಲೆಗಳು ಗೋರಿನೆಲೆಯಾಗಿದೆ. ಈ ಸಂಸ್ಕೃತಿಗೆ ಸಂಬಂಧಿಸಿದಂತೆ ಜನವಾಸ್ತವ್ಯದ ನೆಲೆಗಳು ಮತ್ತು ಕಲ್ಗೋರಿ ನೆಲೆಗಳೆಂದು ಎರಡು ವಿಧಗಳನ್ನ ಕಾಣಬಹುದು. ಕರ್ನಾಟಕವು ಸೇರಿದಂತೆ ಭಾರತದಲ್ಲಿ ಇದುವರೆಗೆ ವಾಸ್ತವ್ಯದ ನೆಲೆಗಳಿಂದ ಕಲ್ಗೋರಿ ನೆಲೆಗಳು ಅಧಿಕ ಸಂಖ್ಯೆಯಲ್ಲಿ ಲಭ್ಯವಾಗಿವೆ. ಬೇರೆ ಬೇರೆ ಪ್ರದೇಶಗಳಲ್ಲಿ ಸಹಜವಾಗಿ ನೀರಿನ ಸೌಕರ್ಯವಿರುವ, ಹೆಚ್ಚಾಗಿ ಶಿಲಾವೃತ್ತವಾದ ಬರಡುಭೂಮಿಯಲ್ಲಿ, ಬೆಟ್ಟದ ತಪ್ಪಲಿನಲ್ಲಿ ಹಾಗೂ ಬೆಟ್ಟದ ಮೇಲಿನ ಸಮತಟ್ಟಾದ ಪ್ರದೇಶಗಳಲ್ಲಿ ಕಂಡುಬರುವಂತೆ ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿಯೂ ಕಂಡುಬರುತ್ತವೆ.

ಬೃಹತ್‌ಶಿಲಾಯುಗ ಸಂಸ್ಕೃತಿಯ ಜನರು ಹಿಂದಿನ ಶಿಲಾಯುಗ ಸಂಸ್ಕೃತಿಯ ಜನರಂತೆ ವೃತ್ತಾಕಾರ ಹಾಗೂ ಚೌಕೋನಕಾರದ ಮನೆಗಳನ್ನು ನಿರ್ಮಿಸಿಕೊಳ್ಳುತ್ತಿದ್ದರೆಂದು ತರ್ಕಿಸಲಾಗಿದೆ. ತಡಿಕೆಗಳನ್ನು ಹೆಣೆದುಕೊಂಡು ಕಲಸು ಮಣ್ಣನ್ನು ತಡಿಕೆಗೆ ಮೆತ್ತಿ ಗೋಡೆಯನ್ನಾಗಿ ನಿರ್ಮಿಸಿಕೊಳ್ಳುತ್ತಿದ್ದರು. ಅಲ್ಲದೆ ಮೇಲೆ ಹುಲ್ಲಿನ ಇಳಿಜಾರು ಮಾಡನ್ನು ಮಾಡುತ್ತಿದ್ದರು. ಹಳ್ಳೂರು, ಮಂಗಸೂಳಿಗಳಲ್ಲಿ ಬಿಳಿ ಮಣ್ಣಿನ ನೆಲವುಳ್ಳ ವರ್ತುಲಾಕಾರದ ಗುಡಿಸಲಿನ ಅವಶೇಷಗಳು ಅಧ್ಯಯನದಿಂದ ತಿಳಿದುಬಂದಿದೆ.[೧೩೮] ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಹೆಚ್ಚಾಗಿ ಕಲ್ಗೋರಿ ನೆಲೆಗಳು ಅಧಿಕ ಸಂಖ್ಯೆಯಲ್ಲಿದ್ದು, ಜನವಾಸ್ತವ್ಯದ ನೆಲೆಗಳು ಆಕನೂರು[೧೩೯] [ಜಗಳೂರು ತಾ], ದಿಡಗೂರು[೧೪೦] [ಹೊನ್ನಾಳಿ ತಾ], ಜಟಿಂಗರಾಮೇಶ್ವರ[೧೪೧] [ಮೊಳಕಾಲ್ಮೂರು ತಾ] ಹತ್ತಿರದ ನೆಲೆಗಳಾಗಿವೆ. ಆಕನೂರು ಮತ್ತು ದಿಡಗೂರು ನೆಲೆಗಳಲ್ಲಿ ಕಪ್ಪು, ಕೆಂಪು ಮತ್ತು ಕಪ್ಪು ವರ್ಣದ ಭಾಗಗಳು

ದೊರೆಯುವುದರಿಂದ ಇವು ಈ ಸಂಸ್ಕೃತಿಯ ವಾಸ್ತವ್ಯದ ನೆಲಗಳೆಂದು ಹೇಳಬಹುದು. ಆದರ ಈ ನೆಲೆಗಳನ್ನು ಉತ್ಖನನ ಮಾಡಿದಾಗ ಮಾತ್ರ ಖಚಿತ ನಿರ್ಧಾರಕ್ಕೆ ಬರುವುದರ ಜೊತೆಗೆ ಕೊಮಾರನಹಳ್ಳಿ ಪರಿಸರದ ಬಗ್ಗೆ ಇನ್ನೂ ಹೆಚ್ಚಿನ ವಿಷಯಗಳು ಹೊರಬರುತ್ತವೆ. ಕೊಮಾರನಹಳ್ಳಿಯಲ್ಲಿ ನಡೆದ ಭೂಶೋಧನೆಗಳು ಇಲ್ಲಿಯ ಪದರಶಾಸ್ತ್ರ ಮತ್ತು ಸಾಂಸ್ಕೃತಿಕ ಶ್ರೀಮಂತಿಕೆಯನ್ನು ನಿಖರವಾಗಿ ಅರಿಯಲು ಸಾಧ್ಯವಾಗಿದೆ. ಅಲ್ಲದೆ ಸನಿಹ ಒಳಪ್ರದೇಶಗಳಲ್ಲಿಯೂ ಖನಿಜ ನಿಕ್ಷೇಪಗಳು ಹಾಗೂ ಕಚ್ಚಾವಸ್ತುಗಳನ್ನು ಗುರುತಿಸಬಹುದು[೧೪೨] ಹಾಗೂ ಉತ್ಖನನದಲ್ಲಿ ಕಬ್ಬಿಣದ ಉಪಕರಣಗಳು ಮತ್ತು ಮಣ್ಪಾತ್ರೆಗಳು ಕಂಡು ಬಂದಿವೆ.[೧೪೩] ಈ ಪರಿಸರದಲ್ಲಿನ ಶಿಲಾಯುಗ ಸಂಸ್ಕೃತಿಗಳಲ್ಲಿ ಬಹಳ ವಿಶಿಷ್ಟವಾದ ಬೃಹತ್‌ಶಿಲಾಯುಗ ಗೋರಿನೆಲೆಯಿದಾಗಿರುವುದರಿಂದ ಈ ನೆಲೆಯು ಹಲವಾರು ದೃಷ್ಟಿಯಿಂದ ವಿಶಿಷ್ಟವಾಗಿದೆ ಈ ಸಂಸ್ಕೃತಿಯ ನಂತರ ಇತಿಹಾಸ ಆರಂಭಕಾಲ ಪ್ರಾರಂಭವಾಯಿತು.

೨.೨.೬ ಇತಿಹಾಸ ಆರಂಭಕಾಲ

ಮನುಷ್ಯನು ಅಕ್ಷರ ಜ್ಞಾನ ಹೊಂದಿದ ಆರಂಭಿಕ ಕಾಲವನ್ನು ಇತಿಹಾಸ ಆರಂಭಕಾಲವೆಂದು ಕರೆಯಲಾಗಿದೆ. ಕರ್ನಾಟಕದಲ್ಲಿ ಇತಿಹಾಸ ಯುಗವು ಕ್ರಿ.ಪೂ ೪–೩ ನೇಯ ಶತಮಾನದಲ್ಲಿಯೇ ಆರಂಭವಾಗುತ್ತದೆ. ಪ್ರಸ್ತುತ ಅಧ್ಯಯನ ಪ್ರದೇಶವು ಸೇರಿದಂತೆ ಕರ್ನಾಟಕದ ಹಲವು ಭಾಗಗಳಲ್ಲಿ ಅದರಲ್ಲಿಯೂ ತುಂಗಭದ್ರಾ ಹಾಗೂ ಅದರ ಉಪನದಿಗಳ ಪಾತ್ರಗಳಲ್ಲಿ ಅಶೋಕನ ಶಾಸನಗಳು ದೊರೆತಿರುವುದು ಪರಿಚಿತ ವಿಚಾರವಾಗಿದ್ದು, ಈ ಶಾಸನಗಳು ಅಂದಿನ ರಾಜಕೀಯ, ಧಾರ್ಮಿಕ ಮತ್ತು ಕೆಲವು ಸಾಮಾಜಿಕ ಅಂಶಗಳನ್ನು ತಿಳಿಸುತ್ತವೆಯೇ ಹೊರತು ವಸ್ತು ಅವಶೇಷುಗಳು ಕಡಿಮೆ ಸಂಖ್ಯೆಯಲ್ಲಿ ದೊರೆತಿವೆ. ಅಶೋಕನ ಶಾಸಗಳಲ್ಲಿ ಅವನ ಹೆಸರು ಬಿರುದು ಹಾಗೂ ಅವನ ದಕ್ಷಿಣ ಪ್ರಾಂತ್ಯದ ಪ್ರಮುಖ ಕೇಂದ್ರಗಳಾದ ಸುವರ್ಣಗಿರಿ[೧೪೪] ಮತ್ತು ಇಸಿಲಾಗಳ[೧೪೫] ಉಲ್ಲೇಖಗಳಿವೆ.

ಯಾವುದೇ ಯುದ್ಧ ಹೂಡದೇ ಅಶೋಕ ಈ ಭಾಗದಲ್ಲಿ ತನ್ನ ಅಧಿಕಾರ ಸ್ಥಾಪಿಸಿದ್ದ ಆದರೆ ಇದು ಸಾಧ್ಯವಾದುದು ಆತನಿಗಿಂತ ಮೊದಲೇ ನಂದರ ಕೊನೆಯ ಅರಸನಾಗಿದ್ದ ಮಹಾಪದ್ಮನು ನಂದರ ರಾಜ್ಯವನ್ನು ಭದ್ರಬುನಾದಿಯ ಮೇಲೆ ನಿಲ್ಲಿಸಿದ್ದರಿಂದ ನಂದರ ರಾಜ್ಯ ದಖ್ಖನ್ ಹಾಗೂ ಅದಕ್ಕೂ ದಕ್ಷಿಣಕ್ಕೆ ಕೃಷ್ಣಾ–ತುಂಗಭದ್ರಾ ಪ್ರದೇಶಗಳವರೆಗೆ ವಿಸ್ತರಿಸಲ್ಪಟ್ಟಿದ್ದಿತೆಂಬ ವಿವರಣೆಯಿದ್ದು, ನಂದರನ್ನು ಸೋಲಿಸಿದ ಮೌರ್ಯ ಸಾಮ್ರಾಜ್ಯವನ್ನು ಸ್ಥಾಪಿಸಿದ ಚಂದ್ರಗುಪ್ತನ ಕಾಲದಲ್ಲಿ ಕರ್ನಾಟಕದ ಕೆಲವು ಭಾಗಗಳು ಅವರ ಆಳ್ವಿಕೆಯ ವ್ಯಾಪ್ತಿಗೆ ಬಂದಿರಬಹುದೆಂದು ತಿಳಿಯಲಾಗಿದೆ. ಎಂ.ಹೆಚ್. ಕೃಷ್ಣ ರವರು ಅಶೋಕನ ಶಾಸನವನ್ನು ಉಲ್ಲೇಖಿಸುತ್ತ ದಖ್ಖನ್ನಿನ ಪೈಠಣ, ಆಂಧ್ರ(ನಾಗಾರ್ಜುನ ಕೊಂಡ), ಮತ್ತು ಪುಳಿಂದ(ಬನವಾಸಿ)ಗಳಲ್ಲಿ ನೆಲೆಗೊಂಡ ಜನವರ್ಗಗಳು ತನ್ನ ಸಾಮ್ರಾಜ್ಯದೊಳಗಣ ಪ್ರದೇಶದವರೆಂದು ಅಶೋಕ ಸಂಭೋಧಿಸಿರುವಂತೆಯೇ, ಸತಿಯಪುತ್ರರನ್ನು ತನ್ನ ಸಾಮ್ರಾಜ್ಯದ ಹೊರಗಡೆಯವರೆಂದು ಕರೆದಿರುವನೆಂದು ಪ್ರಸ್ತಾಪಿಸುತ್ತಾರೆ.

ಮೆಗಸ್ತನೀಸನು ತುಂಗಭದ್ರೆಯ ದಕ್ಷಿಣದಂಡೆಯ ಪ್ರದೇಶದಲ್ಲಿ ಕೆಲವು ಸಂನ್ಯಾಸಿಗಳನ್ನು ಕಂಡಿದ್ದನೆಂದು, ಆ ನಂತರದ ಕ್ರೈಸ್ತ ಬರವಣಿಗೆಯೊಂದರಲ್ಲಿ ಉಕ್ತಗೊಂಡಿರುವುದುಂಟು. ಈ ಹೇಳಿಕೆಯನ್ನು ಒಪ್ಪಿದರೂ ಚಂದ್ರಗುಪ್ತನ ಸಾಮ್ರಾಜ್ಯ ದಕ್ಷಿಣದವರೆಗೆ ಹಬ್ಬಿದ್ದಿತೆಂದು ತಿಳಿಯುವುದು ಕಷ್ಟವಾಗುತ್ತದೆಂಬುದು ಕೆಲವು ಚರಿತ್ರಕಾರರು ಅಭಿಪ್ರಾಯವಾಗಿದೆ. ಅಶೋಕನ ಕಾಲದಲ್ಲಿ ಆಂಧ್ರ ಮತ್ತು ಕರ್ನಾಟಕದ ಹಲವಾರು ಪ್ರದೇಶಗಳು ಮೌರ್ಯ ಸಾಮ್ರಾಜ್ಯದ ಅಧೀನದಲ್ಲಿದ್ದುದು ಸ್ಪಷ್ಟ. ಈ ಪ್ರದೇಶಗಳನ್ನು ಪ್ರವೇಶಿಸಲು ಆತನಿಗೆ ಸಾಧ್ಯವಾದುದು ಪ್ರಾಚೀನ ವಾಣಿಜ್ಯಮಾರ್ಗಗಳ ಮೂಲಕವೇ ಎಂಬುದು ಧೃಡಪಡುತ್ತದೆ.[೧೪೬] ಶಾತವಾಹನರು ಮತ್ತು ಅವರ ನಂತರದ ಚಟುಮಹಾರಥಿ ದೊರೆಗಳು ಕ್ರಿ.ಶ. ಪ್ರಾರಂಭ ಮತ್ತು ನಂತರದ ಒಂದೆರೆಡು ಶತಮಾನಗಳವರೆಗೆ ಈಗೀನ ಕರ್ನಾಟಕದ ಕೆಲವು ಭಾಗಗಳನ್ನು ತಮ್ಮ ಆಳ್ವಿಕೆಗೊಳಪಡಿಸಿಕೊಂಡಿದ್ದರು. ಮ್ಯಾಕ್‌ಡೋನಿ(ಬಳ್ಳಾರಿ ಜಿಲ್ಲೆ), ವಾಸನ(ಧಾರವಾಡ ಜಿಲ್ಲೆ) ನೆಲೆಗಳಲ್ಲಿ ಶಾತವಾಹನ ಅರಸರ ಹೆಸರಿನ ಶಾಸನಗಳು, ಸೀಸ ಮತ್ತು ಬೆಳ್ಳಿಯ ನಾಣ್ಯಗಳು ದೊರೆತಿವೆ.[೧೪೭] ಹರಿಹರ ತಾಲೂಕು ಪರಿಸರದ ಸುತ್ತಮುತ್ತಲೂ ಇತಿಹಾಸದ ಆರಂಭಕಾಲದ ಅವಶೇಷುಗಳು ದೊರೆತಿವೆ. ಕೋಲೂರು,[೧೪೮] ಇಂಗಳದಾಳ,[೧೪೯] ಚಂದ್ರವಳ್ಳಿ,[೧೫೦] ಚಿತ್ರದುರ್ಗ,[೧೫೧] ಚಿಪ್ಪಿನಕೆರೆ[೧೫೨], ತಂಮ್ಮಟಕಲ್ಲು[೧೫೩], ಜಟಂಗಿರಾಮೇಶ್ವರ,[೧೫೪] ಬ್ರಹ್ಮಗಿರಿ,[೧೫೫] ಬಾಗಳಿ[೧೫೬], ನರಸಗೊಂಡನಹಳ್ಳಿ[೧೫೭], ಇಟ್ಟಗಿ[೧೫೮] (ರಾಣೆಬೆನ್ನೂರು ತಾ), ಉಕ್ಕುಂದ,[೧೫೯] ಹಿರೇಬಿದರಿ[೧೬೦] ನೆಲೆಗಳಲ್ಲದೆ ಇತರ ಅನೇಕ ನೆಲೆಗಳಲ್ಲಿಯೂ ಈ ಸಂಸ್ಕೃತಿಯ ಅವಶೇಷಗಳು ದೊರೆತಿವೆ. ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿಯು ಇತಿಹಾಸ ಆರಂಭಕಾಲದ ಅವಶೇಷಗಳು ದೊರೆತಿವೆ. ಹಲಸಬಾಳು[೧೬೧] ನೆಲೆಯಲ್ಲಿ ಈ ಸಂಸ್ಕೃತಿಯ ಅವಶೇಷಗಳು ದೊರೆತಿವೆ. ಇತ್ತೀಚಿಗೆ ಕ್ಷೇತ್ರಕಾರ್ಯಗಳಲ್ಲಿ ದೊರೆತ ನವಶೋಧಿತ ಇತಿಹಾಸ ಆರಂಭಕಾಲದ ಸಂಸ್ಕೃತಿಯ ನೆಲೆಗಳೆಂದರೆ ಮೂಗಿನಗೊಂದಿ ಮತ್ತು ಸಾರಥಿ ನೆಲೆಗಳಲ್ಲಿ ಇತಿಹಾಸ ಆರಂಭಯುಗಕ್ಕೆ ಸಂಬಂಧಿಸಿದ ಅವಶೇಷಗಳು ದೊರೆತಿವೆ.[೧೬೨]

ಬಹುಶಃ ಹಿಂದೊಮ್ಮೆ ದಟ್ಟವಾದ ಕಾಡು ಉತ್ತಮ ಹವಾಗುಣ ಮತ್ತು ನೀರಿನ ಸೌಲಭ್ಯ ಹೊಂದಿದ್ದ ಈ ಪರಿಸರದಿಂದ ಆಕರ್ಷಿತನಾದ ಮಾನವ ನೆಲೆ ನಿಂತನೆನ್ನಬಹುದು. ಈಗಾಗಲೆ ಹರಿಹರ ತಾಲೂಕಿನಲ್ಲಿ ಕೊಂಡಜ್ಜಿ, ಹಲಸಬಾಳು, ಹರಿಹರ ಹಾಗೂ ಕೊಮಾರನಹಳ್ಳಿಗಳಲ್ಲಿ ಸೂಕ್ಷ್ಮಶಿಲಾಯುಗ, ನವಶಿಲಾಯುಗ, ಬೃಹತ್‌ಶಿಲಾಯುಗ ಹಾಗೂ ಇತಿಹಾಸ ಆರಂಭಕಾಲ ಸಂಸ್ಕೃತಿಗಳ ಹಲವಾರು ಶಿಲಾಯುಧಗಳು, ಹೆರೆಚಕ್ಕೆ, ಮೊನೆ, ನಿಳಚಕ್ಕೆ, ಮಡಿಕೆ–ಕುಡಿಕೆಗಳು ದೊರೆತಿದ್ದು ಈ ಪರಿಸರದಲ್ಲಿನ ಆದಿಮಾನವನ ಜೀವನ ಕ್ರಮವನ್ನು ತಿಳಿಸುತ್ತವೆ. ಇವುಗಳಲ್ಲದೆ ಕ್ಷೇತ್ರಕಾರ್ಯದಲ್ಲಿ ಹೊಸದಾಗಿ ಸೂಕ್ಷ್ಮಶಿಲಾಯುಗ ಸಂಸ್ಕೃತಿಗೆ ಸೇರಿದ ಬೆಣಚು ಕಲ್ಲಿನ ಕೈಗೊಡಲಿ (ಗುಡ್ಡದ ತುಮ್ಮಿನಕಟ್ಟೆ), ನವಶಿಲಾಯುಗದ ಸಂಸ್ಕೃತಿಗೆ ಸೇರಿದ ಆಗೇಟ್, ಕೈಗೊಡಲಿಗಳಿಂದ ಹೊರತೆಗೆದ ಭರ್ಜಿಯಾಕಾರದ ಅಥವಾ ಚಪ್ಪಟೆ ಭಾಗಗಳಾದ ಬ್ಲೇಡ್ಸ್‌ಗಳು, ಕವಣೆಕಲ್ಲು, ಬೂದುಬಣ್ಣದ ಮಡಿಕೆ ಭಾಗಗಳು, ಹೆರೆಚಕ್ಕೆ ವಿವಿಧ ಮಾದರಿಯ ಶಿಲೋಪಕರಣಗಳು (ಗುಡ್ಡದ

ತುಮ್ಮಿನಕಟ್ಟೆ) ದೊರೆತಿವೆ. ಇದೇ ರೀತಿಯ ಶಿಲೋಪಕರಣಗಳು ಹಾಗೂ ಬೂದುಬಣ್ಣದ ಮಡಿಕೆ ಭಾಗಗಳು ಸಾರಥಿ ಪರಿಸರದ ಗುಡ್ಡದ ಹಿಂಭಾಗದಲ್ಲಿ ದೊರೆತಿವೆ.

ಹರಿಹರ ಸಮೀಪದ ಶೇರಾಪುರ ಗ್ರಾಮದ ಬಳಿ ದೊರೆತ ಉಪಕರಣವು ನೂತನ ಶಿಲಾಯುಗ ಕಾಲಘಟ್ಟದ್ದು, ಡೈಕ್ ಶಿಲೆ ಬಳಸಿ ತಯಾರಿಸಿದ ಈ ಆಯುಧವು ೧೯ ಇಂಚು ಉದ್ದವಿದೆ. ಆಯುಧದ ತುದಿಯು ಚುಪಾಗಿ ಮತ್ತು ಆಗಲವಾಗಿದೆಯಲ್ಲದೆ ಅದರ ಹಿಂಬದಿಯು ಸಣ್ಣದಾಗುತ್ತಾ ಹಾಗೂ ದುಂಡಾಗುತ್ತಾ ಹೋಗಿರುವುದನ್ನು ಕಾಣಬಹುದು ಹಾಗೆಯೇ ಹಿರೇಹಾಲಿವಾಣದ ಬೆಟ್ಟ ಪರಿಸರದಲ್ಲಿ ದೊರೆತ ಉಪಕರಣವು ಇದೇ ಸಂಸ್ಕೃತಿಯ ಕಪ್ಪುಶಿಲೆಯಲ್ಲಿ ಉಜ್ಜಿ ನಯಗೊಳಿಸಿದ ಕೈಗೊಡಲಿಯು ೧೫ ಇಂಚು ಸುತ್ತಳತೆಯನ್ನು ಹೊಂದಿದೆ. ಕಲ್ಲಿನ ಈ ಉಪಕರಣಗಳು ಮಾನವನ ಕೃಷಿ ಸಂಸ್ಕೃತಿಯ ಸಂಕೇತವೂ, ಕೃಷಿ ಆರಂಭಿಸಲು ಉಪಯೋಗಿಸಲ್ಪಟ್ಟ ಮೊದಲ ಸಾಧನವೂ ಆಗಿದೆ ಕೃಷಿಯ ಆರಂಭದಿಂದ ಮಾನವ ಮುಂದೆ ತನ್ನ ಪರಿವಾರದೊಡನೆ ಒಂದೆಡೆ ನೆಲೆ ನಿಂತು ಆರಂಭಿಸಿದ ಗ್ರಾಮ ಸಂಸ್ಕೃತಿಗೆ ಇದು ಮೂಲ ಪ್ರೇರಕ ಸಾಧನವಾಯಿತೆನ್ನಬಹುದು.

ಈ ಆಧಾರಗಳನ್ನು ಬಿಟ್ಟರೆ ನವಶಿಲಾಯುಗ ಸಂಸ್ಕೃತಿಗೆ ಸಂಬಂಧಿಸಿದ ವಸತಿ ನೆಲೆಗಳ ಬಗ್ಗೆಯಾಗಲಿ, ಬೂದಿದಿಬ್ಬಗಳು ದೊರೆತಿರುವುದಿಲ್ಲ. ಇಲ್ಲಿ ದೊರೆತ ಶಿಲೋಪಕರಣಗಳಲ್ಲಿ ಮುಖ್ಯವಾಗಿ ಚಕ್ಕೆ ಎಬ್ಬಿಸಿದ ಕೈಗೊಡಲಿ, ಉಜ್ಜಿನಯಗೊಳಿಸಿದ ಕೈಗೊಡಲಿ ದೊರೆತಿವೆ. ಈ ಆಯುಧಗಳಲ್ಲಿ ಮೇಲ್ತುದಿ ಮತ್ತು ಹರಿತ ಆಲಗಿನ ಭಾಗಗಳಲ್ಲಿ ಹೊಳಪುಗೊಳಿಸಲು ಪ್ರಯತ್ನಿಸಿರುವುದನ್ನು ಕಾಣಬಹುದು. ಕಬ್ಬಿಣಯುಗ ಅಥವಾ ಬೃಹತ್‌ಶಿಲಾಯುಗ ಸಂಸ್ಕೃತಿಗೆ ಸೇರಿದ ಕೆಂಪುಮಿಶ್ರಿತ ಮಡಿಕೆ ಭಾಗಗಳು (ಕೊಕ್ಕನೂರು) ದೊರೆತಿವೆ ಹಾಗೂ ಇತಿಹಾಸ ಆರಂಭಕಾಲಕ್ಕೆ ಸೇರಿದ (ಹಲಸಬಾಳು, ಸಾರಥಿ, ಮೂಗಿನಗೊಂದಿ) ಅವಶೇಷಗಳು ದೊರೆತಿವೆ. ಇದರಿಂದ ಹರಿಹರ ಪರಿಸರದಲ್ಲಿ ಸೂಕ್ಷ್ಮಶಿಲಾಯುದಿಂದಲೂ ಮಾನವನ ಚಟುವಟಿಕೆಗಳು ನಡೆಯುತ್ತವೆ ಎಂದು ಹೇಳಬಹುದು. ಇಲ್ಲಿನ ಸೂಕ್ಷ್ಮಶಿಲಾಯುಗ, ನವಶಿಲಾಯುಗ ಮತ್ತು ಬೃಹತ್‌ಶಿಲಾಯುಗದ ನೆಲೆಗಳನ್ನು ಹಾಗೂ ಆ ಜನತೆ ಬಳಸಿರುವ ವಿವಿಧ ಬಗೆಯ ವಸ್ತುಗಳಾದ ಮಣಿಗಳು, ಬಳೆಗಳು, ಮಡಿಕೆ–ಕುಡಿಕೆಗಳು, ಕಬ್ಬಿಣದ ವಸ್ತುಗಳು ಕಲ್ಲಿನ ಆಯುಧಗಳು ಮತ್ತು ಅವರ ಕರಕುಶಲತೆಯ ಬಗೆಗೆ ವಿಶೇಷ ಗಮನಹರಿಸಿದ್ದರು ಎಂಬುದು ತಿಳಿಯುತ್ತದೆ. ಇಲ್ಲಿ ದೊರೆತಂತಹ ಅವಶೇಷಗಳ ಪ್ರದೇಶಗಳು ಬೆಟ್ಟದ ತಪ್ಪಲುಗಳಾಗಿದ್ದು ಅವುಗಳನ್ನ ವ್ಯವಸಾಯದ ಅನುಕೂಲಕ್ಕಾಗಿ ಒತ್ತುವರಿ ಮಾಡಲಾಗುತ್ತಿದೆ.

೨.೨.೭ ಕೊಮಾರನಹಳ್ಳಿ

ಕೊಮಾರನಹಳ್ಳಿಯು ದಾವಣಗೆರೆ ಜಿಲ್ಲೆಯ ಹರಿಹರ ತಾಲೂಕಿನ ದಕ್ಷಿಣ ಭಾಗದಲ್ಲಿದೆ ದಕ್ಷಿಣ ದಿಕ್ಕಿನಲ್ಲಿ ಹರಿಹರ ತಾಲೂಕು ಗಡಿಯ ಕೊನೆಯ ಗ್ರಾಮವು ಸಹ ಆಗಿದೆ. ಇದೊಂದು ಬೃಹತ್‌ಶಿಲಾಯುಗದ ಗೋರಿನೆಲೆಯಾಗಿದ್ದು ಗ್ರಾಮದ ದಕ್ಷಿಣದಲ್ಲಿರುವ ಗುಡ್ಡದ ತಪ್ಪಲಿನಲ್ಲಿ

ಗೋರಿಗಳಿವೆ, ಪಕ್ಕದಲ್ಲಿಯೇ ಒಂದು ಕೆರೆಯಿದೆ. ರಾಬರ್ಟ್‌ಬ್ರೂಸ್‌ಫುಟ್ ಅವರು ೧೯೧೬ ರಲ್ಲಿ ಈ ಪರಿಸರದಲ್ಲಿ ಸರ್ವೇಕ್ಷಣೆ ನಡೆಸಿ ಕೊಮಾರನಹಳ್ಳಿ ಒಂದು ಬೃಹತ್ ಶಿಲಾಯುಗದ ಗೋರಿನೆಲೆಯೆಂದು ದಾಖಲಿಸಿದ್ದರು. ಈ ಹಿನ್ನೆಲೆಯಲ್ಲಿ ಎಂ.ಎಸ್. ನಾಗರಾಜರಾವ್ ಅವರು ಉತ್ಖನನ ಮಾಡಲು ಮುಂದಾಗಿ ೧೯೭೮ ರಲ್ಲಿ ಉತ್ಖನನ ಮಾಡಿ ಅದರ ವರದಿಯನ್ನು ಪ್ರಕಟಿಸಿದರು.[೧೩] ಈ ಬೃಹತ್‌ಶಿಲಾಯುಗ ಗೋರಿನೆಲೆಯಲ್ಲಿ ೨ ಪ್ರಕಾರದ ಗೋರಿಗಳಿವೆ. ಒಂದು ಕಲ್ಗುಪ್ಪೆಯ (cairn circle) ಅಡಿಯಲ್ಲಿರುವ ಶವಕುಣಿಗಳು ಮತ್ತೊಂದು ಚಪ್ಪಡಿಕಲ್ಲಿನಿಂದ (Dalmin) ಮುಚ್ಚಿರುವ ಶವಕುಣಿಗಳು. ಈ ಎಲ್ಲಾ ಗೋರಿಗಳು ಕಲ್ಲುವೃತ್ತದಿಂದ ಆವೃತವಾಗಿದೆ. ಎರಡೂ ಪ್ರಕಾರದ ಎರೆಡೆರಡು ಗೋರಿಗಳನ್ನು ಉತ್ಖನನ ಮಾಡಿದ್ದಾರೆ. ಈ ನೆಲೆಯಲ್ಲಿ ಕಬ್ಬಿಣದ ಉಪಕರಣಗಳು, ಮಣ್ಪಾತ್ರೆಗಳು, ಮಾನವನ ಅಸ್ತಿಪಂಜರಗಳು, ಪ್ರಾಣಿ ಮೂಳೆಗಳು, ಕಲ್ಲಿನ ಅರೆಗುಂಡುಗಳು ಮತ್ತು ಸುಡಾವೆ ಮಣ್ಣಿನ ಮಣಿಗಳು ದೊರೆತಿವೆ. ಸಮೀಪದಲ್ಲಿರುವ ಹಳ್ಳೂರಿನಲ್ಲಿ ಕಂಡು ಬಂದ ನವಶಿಲಾಯುಗ-ಕಬ್ಬಿಣಯುಗದ ಸಮ್ಮಿಶ್ರ ಹಂತಕ್ಕೆ ಈ ಗೋರಿಗಳು ಸಮಕಾಲೀನವಾಗಿರಬೇಕೆಂದು ನಾಗರಾಜರಾವ್ ಅವರು ಅಭಿಪ್ರಾಯಿಸಿದ್ದಾರೆ.

ಅ ಸುಂದರ ಅವರು ಕೊಮಾರನಹಳ್ಳಿ ಪರಿಸರದ ಬೃಹತ್‌ಶಿಲಾಯುಗ ಸಂಸ್ಕೃತಿಯಲ್ಲಿ ದೊರೆತ ಮೃತ್‌ಪಾತ್ರೆಗಳ ರಚನೆಯಲ್ಲಿ, ಆಕೃತಿಗಳಲ್ಲಿ ಇವುಗಳ ಮೇಲಿನ ವರ್ಣರೇಖಾಚಿತ್ರಗಳಲ್ಲಿ ಗುಜರಾತ್ ಪ್ರದೇಶದ ಲೋಥಾಲ್, ರಂಗಪುರ, ಸುರ್‌ಕೋಟದ ಮೊದಲಾದ ಸ್ಥಳಗಳಲ್ಲಿಯ ಹರಪ್ಪಾ ಸಂಸ್ಕೃತಿಯ ಪ್ರಾಚೀನ ಹಂತದ ಮೃತ್ ಪಾತ್ರೆಗಳಿಗೆ ಅತ್ಯಂತ ಸಮೀಪವಾಗಿರುವುದರ ಕುರಿತು ಅಧ್ಯಯನ ಮಾಡಿದ್ದಾರೆ. ಹಾಗೆಯೇ ವಾಸುದೇವ ಬಡಿಗೇರ ಅವರು ಕೊಮಾರನಹಳ್ಳಿ ಬೃಹತ್‌ಶಿಲಾಯುಗದ ಜನವರ್ಗದವರು ಬಳಸಿಕೊಂಡಂತಹ ಪ್ರಮುಖ ವೃತ್ತಿಗಳಲ್ಲಿ ಅದಿರನ್ನು ಕರಗಿಸಿ ಕಬ್ಬಿಣ ತಯಾರಿಸುವ ಕಲೆಯ ತಾಂತ್ರಿಕತೆಯ ಜ್ಞಾನವನ್ನು ಕುರಿತು ಬೇರೆಡೆಯಲ್ಲಿ ವಿಶದವಾಗಿ ಚರ್ಚಿಸಿದ್ದಾರೆ.[೧೪]

ಕೊಮಾರನಹಳ್ಳಿಯ ಬೃಹತ್ ಶಿಲಾಸಮಾಧಿಗಳ ಸಂಸ್ಕೃತಿ

ಕೊಮಾರನಹಳ್ಳಿ ಬೃಹತ್ ಶಿಲಾಸಂಸ್ಕೃತಿಯ ಜನವರ್ಗದವರು ಮೊದಲು ಕಬ್ಬಿಣವನ್ನು ಬಳಕೆಗೆ ತಂದರಲ್ಲದೆ ಬಾಣದ ಮೊನೆ, ಉಳಿ, ಈಟಿ, ಖಡ್ಗ, ಸುತ್ತಿಗೆ. ಚಾಕು, ಭರ್ಚಿ, ಕುಡುಗೋಲು ಮೊದಲಾದ ಕಬ್ಬಿಣದ ಆಯುಧಗಳನ್ನು ಬಳಸುತ್ತಿದ್ದರು. ಈ ಸಂಸ್ಕೃತಿಗೆ ಪೂರಕವಾಗಿ ಯಾವುದೇ ಕಬ್ಬಿಣದ ಗೋಡೆಗಳು ದೊರೆತಿರುವುದಿಲ್ಲ. ಹಾಗೆಯೇ ಅವರ ಮನೆಗಳಿಗೆ ಸಂಬಂಧಿಸಿದ ಯಾವುದೇ ದಾಖಲೆಗಳಿರುವುದಿಲ್ಲ. ಇಲ್ಲಿನ ಶವಕುಣಿಯನ್ನು ನೈಸರ್ಗಿಕ ಮಣ್ಣು ಹಾಗೂ ಅದರ ಕೆಳಗಿರುವ ತಳಬಂಡೆಯೊಳಗೆ ತೋಡಿ ಇಡಲಾಗಿದೆ. ಕುಣಿಯ ತಳದಲ್ಲಿ ಕಬ್ಬಿಣದ ಉಪಕರಣಗಳು ಮತ್ತು ಮಣ್ಪಾತ್ರೆಗಳನಿಟ್ಟು ಇವುಗಳ ಮೇಲೆ ಅಸ್ಥಿ ಅವಶೇಷಗಳನ್ನು ಇಡಲಾಗಿದೆ.[೧೫] ಅನಂತರ ಶವಕುಣಿಗಳನ್ನು ಕೆರೆಯ ಕಪ್ಪು ಮಣ್ಣು ಅಥವಾ ಬೂದು ಕೆಂಪು ಮಣ್ಣಿನಿಂದ ತುಂಬಲಾಗಿದೆ. ಇದರ ಗುರುತಿಗಾಗಿ ಸುತ್ತಲೂ ವೃತ್ತಾಕಾರದ ಚಪ್ಪಡಿಕಲ್ಲನ್ನು ಇಡಲಾಗಿದೆ. ಈ

ಸಂಸ್ಕೃತಿಯಲ್ಲಿ ಸಿಧಾನವಾಗಿ ತಿರುಗುವ ಚಕ್ರದಿಂದ ತಯಾರಿಸಿ ನಯಗೊಳಿಸಿದ ವಿಭಿನ್ನ ಆಕಾರದ ಮಡಿಕೆಗಳಿದ್ದು ಇನ್ನು ಕೆಲವು ಕೈಯಿಂದಲೇ ತಟ್ಟಿ ಮಾಡಿದಂತವುಗಳು ಈ ನೆಲೆಯಲ್ಲಿ ದೊರೆತಿವೆ. ಇದರಲ್ಲಿ ಬಿಳಿ ವರ್ಣರೇಖಾಚಿತ್ರವುಳ್ಳ ಪಾತ್ರೆಗಳು ಸಹ ಇವೆ. ಇಂತಹ ವರ್ಣರೇಖಾಚಿತ್ರಗಳನ್ನು ಮಡಿಕೆಗಳನ್ನು ಸುಟ್ಟ ನಂತರ ನಿರ್ಮಿಸುತ್ತಿದ್ದರು.

ಮೂರು ಪ್ರಕಾರದ ಮಣ್ಪಾತ್ರೆಗಳು ಇಲ್ಲಿನ ಗೋರಿಗಳೊಳಗೆ ದೊರೆತಿವೆ.

೧) ಕೆಂಪು-ಕಪ್ಪು ಮೃತ್ಪಾತ್ರೆಗಳು

೨) ಕಪ್ಪು-ಕೆಂಪು ಮೃತ್ಪಾತ್ರೆಗಳು

೩) ಬಿಳಿ ವರ್ಣರೇಖಾಚಿತ್ರವುಳ್ಳ ಮೃತ್ಪಾತ್ರೆಗಳು

೧) ಕೆಂಪು-ಕಪ್ಪು ಮೃತ್ಪಾತ್ರೆಗಳು: ಕೆಂಪು-ಕಪ್ಪು ವರ್ಣದ ಮೃತ್ಪಾತ್ರೆಗಳನ್ನು ಸುಡುವ ಮೊದಲು ತೆಳುಲೇಪನ ಕೊಟ್ಟು ಮಧ್ಯಮ ಉಷ್ಣತೆಯಲ್ಲಿ ಸುಡಲಾಗಿರುವುದರಿಂದ ಈ ತೆರನಾದ ಮೃತ್ಪಾತ್ರೆಗಳು ರೂಪಗೊಂಡಿರುವುದು ಕಂಡುಬರುತ್ತದೆ. ಬೃಹತ್ ಶಿಲಾಯುಗದ ಎಲ್ಲಾ ಆಕೃತಿಗಳು ಈ ಹಂತದಲ್ಲಿ ಮುಂದುವರೆದಿದ್ದು ಚಕ್ರದಿಂದ ತಯಾರಿಸಿದ ಹಾಗೂ ಕೈಯಿಂದಲೇ ತಟ್ಟಿ ಮಾಡಿದ ಶಂಕುವಿನಾಕಾರದ ತಳವುಳ್ಳ ಮಡಕೆಗಳು, ಗೋಲಮಡಕೆಗಳು, ಸಿಂಬಿ, ಚುಳ್ಳಿಯಿರುವ ಬಟ್ಟಲು ಮತ್ತು ಮೂರು ನಳಿಕೆಯುಳ್ಳ[೧೬] ಪ್ರಮುಖವಾದ ಪಾತ್ರೆಗಳು ಉತ್ಖನನದಲ್ಲಿ ದೊರೆತಿವೆ. ಈ ವರ್ಣದ ಮಡಿಕೆಗಳ ಜೊತೆಗೆ ಅದೇ ವರ್ಣದ ಸುಡಾವೆಮಣ್ಣಿನ ಮಣಿಗಳು[೧೭] ದೊರೆತಿವೆ.

೨) ಕಪ್ಪು-ಕೆಂಪು ಮೃತ್ಪಾತ್ರೆಗಳು: ಈ ತೆರನಾದ ಮಡಿಕೆಗಳು ಮೂಲತಃ ತಾಮ್ರ ಶಿಲಾಯುಗದಿಂದ ಆರಂಭವಾಗಿ ಬೃಹತ್‌ಶಿಲಾಸಂಸ್ಕೃತಿಯಲ್ಲಿ ಹೆಚ್ಚು ವೈವಿಧ್ಯತೆಯನ್ನು ಪಡೆದವು. ನಂತರ ಈ ಕಪ್ಪು-ಕೆಂಪು ದ್ವಿವರ್ಣದ ಮಡಿಕೆಗಳು ವಿಶಿಷ್ಟ ಅಲಂಕಾರವನ್ನು ಪಡೆದು ಆದಿ ಇತಿಹಾಸ ಕಾಲದಲ್ಲಿಯೂ ಮುಂದುವರೆದವು. ಈ ಮೃತ್ಪಾತ್ರೆಗಳನ್ನು ಸುಡುವಾಗ ತಲೆಕೆಳಗಾಗಿ ಅಥವಾ ಬೋರಲಾಗಿ ಜೋಡಿಸಿ ನಿಯಮಿತ ಪ್ರಮಾಣದಲ್ಲಿ ಇಟ್ಟು ಸುಟ್ಟಿರುವುದರಿಂದ ಗಾಳಿಗೆ ಒಡ್ಡಿದ ಬುಡದ ಹೊರಭಾಗವು ಕೆಂಪಾಗಿಯೂ, ಮುಚ್ಚಿದ ಹಾಗೂ ಒಳಭಾಗವೂ ಕಪ್ಪಾಗುತ್ತಿತ್ತು. ಹೀಗೆ ದ್ವಿವರ್ಣವಾಗಿ ರೂಪಗೊಂಡಿರುವುದು ಕಂಡುಬರುತ್ತದೆ. ಇವು ಕಿರು ಮತ್ತು ಮಧ್ಯಮ ಗಾತ್ರದ ಗೃಹೋಪಯೋಗಿ ಮಡಿಕೆಗಳಾದ ಬಟ್ಟಲು, ಶಂಕುವಿನಾಕಾರದ ಮುಚ್ಚಳಗಳು, ಸಿಂಬಿ, ಬಟ್ಟಲು, ಶಂಕುವಿನಾಕಾರದ ಬಟ್ಟಲು ಮತ್ತು ಮಡಿಕೆ ಕುಡಿಕೆಗಳು[೧೮] ಕೊಮಾರನಹಳ್ಳಿಯ ಗೋರಿನೆಲೆಯ ಉತ್ಖನನದಲ್ಲಿ ದೊರೆತಿವೆ.

೩) ಬಿಳಿವರ್ಣರೇಖಾಚಿತ್ರವುಳ್ಳ ಮೃತ್ಪಾತ್ರೆಗಳು: ಕಪ್ಪು-ಕೆಂಪು ವರ್ಣದ ಮೃತ್ಪಾತ್ರೆಗಳನ್ನು ಸುಡುವ ಮೊದಲು ವಿವಿಧ ಅಲಂಕಾರಿಕ ಚಿತ್ರಗಳನ್ನು ಬಿಡಿಸಿ ತೆಳ್ಳನೆಯ ಲೇಪನವನ್ನು ನೀಡಿ ಹೊಳಪು ಬರುವಂತೆ ರೂಪಿಸಲಾಗುತ್ತಿತ್ತು. ಸಮಾನಾಂತರ, ಓರೆ, ನೇರ, ಅಡ್ಡಲಾಗಿರುವ ಸಣ್ಣಗೆರೆಗಳು, ಪರಸ್ಪರ ಕತ್ತರಿಸುವ ಗೆರೆಗಳು, ಅಲೆಯಾಕಾರದ ಗೆರೆಗಳು, ಸಣ್ಣಚುಕ್ಕೆಗಳಿಂದ ಕೂಡಿದ

ತ್ರಿಭುಜ ಮುಂತಾದ ಅಲಂಕರಣವಿರುವ ಹೊರಮೈ ಕಪ್ಪು-ಕೆಂಪು ಬಣ್ಣಗಳ ಮಿಶ್ರಣ ಹಾಗೂ ಒಳಮೈ ಸಂಪೂರ್ಣ ಕಪ್ಪಾಗಿರುತ್ತದೆ. ಹೊರಮೈಯಲ್ಲಿರುವ ಕೆಂಪು ಬಣ್ಣವು ತಿಳಿಗೆಂಪಿನಿಂದ ಕಡುಗೆಂಪಿನವರೆಗೆ ಕಪ್ಪು ಮಿಶ್ರಿತ ಕೆಂಪು ಬಣ್ಣವು ಉಷ್ಣತೆಯ ವ್ಯತ್ಯಾಸದಲ್ಲಾದಂತಹ ಬದಲಾವಣೆಯಿಂದ ಮೂಡಿಬಂದವುಗಳಾಗಿದ್ದು, ಇವುಗಳನ್ನು ಕೈಯಿಂದ ಹಾಗೂ ಚಕ್ರಗಳಿಂದ ತಯಾರಿಸಲಾಗುತ್ತಿತ್ತು. ಕೊಮಾರನಹಳ್ಳಿಯ ಗೋರಿನೆಲೆಯ ಉತ್ಖನನದಲ್ಲಿ ಶಂಕುವಿನಾಕಾರದ ೨ ಮುಚ್ಚಳಗಳ ಹೊರಮೈ ಮೇಲೆ ಬಿಳಿವರ್ಣದಲ್ಲಿ ಪರಸ್ಪರ ಛೇಧಿಸುವ ಗೆರೆಗಳನ್ನು ಚಿತ್ರಿಸಲಾಗಿದೆ. ಈ ಮೃತ್ಪಾತ್ರೆಗಳ ಕಾಲಮಾನ ಪ್ರ.ಶ.ಪೂ. ೧೪೪೦, ಪ್ರ.ಶ.ಪೂ ೧೨೦೦ ಮತ್ತು ಪ್ರ.ಶ.ಪೂ ೯೩೦ ಹಾಗಾಗಿ ೨ನೇಯ ಸಹಸ್ರಮಾನದ ಕೊನೆಯ ಭಾಗಕ್ಕೆ[೧೧೯] ಸೇರುತ್ತದೆ.

ಕಬ್ಬಿಣದ ಉಪಕರಣಗಳಾದ ಬಾಣದ ಮೊನೆ, ಬಾಣಲೆ, ಗಾಳ, ಕುಡುಗೋಲು, ಸುಲಿಯುವ ಸಾಧನ, ಹೆರೆಯುವ ಸಾಧನ, ಕೊಡಲಿ, ಕಂಬಿ, ತಂತಿಯ ತುಣುಕು, ಚಾಕು, ಕಠಾರಿ, ಮುಳ್ಳು, ಮೊಳೆಗಳು[೧೨೦] ಕೊಮಾರನಹಳ್ಳಿ ನೆಲೆಯ ಉತ್ಖನನದಲ್ಲಿ ದೊರೆತಿವೆ. ಇಲ್ಲಿ ವಿವರಿಸಿದ ಕಬ್ಬಿಣದ ಉಪಕರಣಗಳನ್ನು ದೊಡ್ಡ ಪ್ರಮಾಣದಲ್ಲಿ ತಯಾರಿಸುತ್ತಿದ್ದುದರ ಚಟುವಟಿಕೆಯ ಪ್ರಾಚೀನತೆ ಕುರಿತು ಸ್ವಲ್ಪ ತಿಳಿಯುವುದಾದರೆ ತುಂಗಭದ್ರಾ ನದಿ ಪ್ರದೇಶದಲ್ಲಿ ಪ್ರಾಗಿತಿಹಾಸ ಕಾಲದ ವಿವಿಧ ಸಾಂಸ್ಕೃತಿಕ ಘಟ್ಟಗಳ ಮಾನವನ ಸಂಸ್ಕೃತಿ ನೆಲೆಗಳಿವೆ. ಮಧ್ಯ ಮತ್ತು ಅಂತ್ಯ ಹಳೆಶಿಲಾಯುಗದ ಪುರಾತತ್ವ ಅವಶೇಷಗಳುಳ್ಳ ಈ ಪ್ರದೇಶದಲ್ಲಿ ತಡಕನಹಳ್ಳಿ ನೂತನಶಿಲಾಯುಗ-ಕಬ್ಬಿಣಯುಗ ಸಂಸ್ಕೃತಿ ಕಾಲದ ಪುರಾತತ್ವ ಸಂಸ್ಕೃತಿಗಳ ಅವಶೇಷಗಳುಳ್ಳ ನೆಲೆಗಳು ಕೊಮಾರನಹಳ್ಳಿಯ ಸುತ್ತಮುತ್ತಲೂ ಇವೆ. ಉದಾಹರಣೆಗೆ ದಕ್ಷಿಣಕ್ಕೆ ಕಮ್ಮಾರಗಟ್ಟೆ,[೧೨೧] ಅನವೇರಿ,[೧೨೨] ಪೂರ್ವಕ್ಕೆ ಹಳ್ಳೂರು[೧೨೩] ಮೊದಲಾದ ಕಬ್ಬಿಣದ ಬೃಹತ್ ಶಿಲಾಯುಗ ಸಂಸ್ಕೃತಿಗಳ ನೆಲೆಗಳಿವೆ. ಆದ್ದರಿಂದ ಉತ್ತಮಗುಣಮಟ್ಟದ ಕಬ್ಬಿಣದ ಅದುರಿನ ನಿಕ್ಷೇಪವು ಕೊಮಾರನಹಳ್ಳಿಯ ಪ್ರದೇಶದಲ್ಲಿಯೂ ಪ್ರಾಚೀನ ಕಾಲದಿಂದಲೇ ಅದಿರು ನಿಕ್ಷೇಪವನ್ನು ಗುರುತಿಸಿ, ಅದಿರನ್ನು ಸಂಗ್ರಹಿಸಿ, ಕಬ್ಬಿಣದ ಉಪಕರಣಗಳನ್ನು ತಯಾರಿಸುವ ಚಟುವಟಿಕೆ ಇದ್ದಿರುವ ಸಾಧ್ಯತೆ ಇದೆ. ಇಲ್ಲಿ ದೊರೆತ ಕಬ್ಬಿಣದ ಉಪಕರಣಗಳ ವೈಜ್ಞಾನಿಕ ವಿಶ್ಲೇಷಣೆಯಿಂದ ಇವುಗಳು ಸ್ಥಳೀಯ ಅದುರಿನಿಂದಲೇ ತಯಾರಿಸಲ್ಪಟ್ಟಿವೆ ಎಂಬುದು ಖಚಿತವಾಗಿದೆ.[೧೨೪]

ಬೃಹತ್‌ಶಿಲಾಗೋರಿಗಳನ್ನು ನಿರ್ಮಿಸಿದ ಜನವರ್ಗದಲ್ಲಿ ಕೆಲವು ಜನಸಮುದಾಯಗಳು ಉತ್ತಮ ಕಬ್ಬಿಣ ಲೋಹವನ್ನು ಸಿದ್ಧಮಾಡಿ ಅದರಿಂದ ಉತ್ತಮವಾದ ಉಪಕರಣಗಳನ್ನು ತಯಾರು ಮಾಡುವ ಇವರ ತಾಂತ್ರಿಕ ಜ್ಞಾನ ಸುಧಾರಿಸಿದ ಮಟ್ಟಾದ್ದಾಗಿತ್ತೆಂದು ಇಲ್ಲಿ ದೊರೆತ ಅವಶೇಷಗಳ ವೈಜ್ಞಾನಿಕ ವಿಶ್ಲೇಷಣೆಯಿಂದ ತಿಳಿದುಬರುತ್ತದೆ.[೧೨೫] ಈ ಒಂದು ವಿಶಿಷ್ಟ ತಂತ್ರಗಾರಿಕೆಗೆ ಅವರು ಹೆಸರುವಾಸಿಗಳಾಗಿದ್ದಾರೆಂದು ಹೇಳಬಹುದು. ಈ ಜನರು ಬೆಟ್ಟಗಳ ಇಳಿಜಾರುಗಳಲ್ಲಿ ವಾಸಿಸುತ್ತಿದ್ದರು. ಕಬ್ಬಿಣದ ಅದಿರನ್ನು ಕರಗಿಸುವುದರ ಜೊತೆಗೆ ಕಮ್ಮಾರಿಕೆಯಲ್ಲಿ ತೀರಾ ಪರಿಣಿತರಾಗಿದ್ದರು[೧೨೬]. ಈ ಕಾರಣಕ್ಕಾಗಿಯೇ, ಕರ್ನಾಟಕ ಪ್ರದೇಶದ ಆರ್ಥಿಕ ಪರಿಸ್ಥಿತಿ

ಉತ್ತಮವಾಗಿದ್ದುದರಿಂದಲೇ ಅಶೋಕ ಚಕ್ರವರ್ತಿಯು ತನ್ನ ಉಚ್ಚವರ್ಗದ ಅಧಿಕಾರಿಗಳನ್ನು ಅಂದರೆ ಧರ್ಮಮಹಾಮಾತ್ರರನ್ನು ಈ ಪ್ರದೇಶದಲ್ಲಿ ನೇಮಿಸಿ ತನ್ನ ಅಧಿಕಾರವನ್ನು ಪರೋಕ್ಷವಾಗಿ ಈ ಪ್ರದೇಶದ ಹಲವಾರು ಕಡೆಗಳಲ್ಲಿ [ಬ್ರಹ್ಮಗಿರಿ, ಅಶೋಕಸಿದ್ಧಾಪುರ, ಜಟಂಗಿರಾಮೇಶ್ವರ, ಉದೇಗೊಳಂ, ನಿಟ್ಟೂರು, ಕೊಪ್ಪಳ] ತನ್ನ ಶಾಸನಗಳನ್ನು ಹಾಕಿಸುವುದರ ಮೂಲಕ ಸೂಚಿಸಿದನೆಂದು ತೋರುತ್ತದೆ. ಹಾಗೆಯೇ ಅಶೋಕ ತನ್ನ ಸಾಮ್ರಾಜ್ಯಕ್ಕೆ ಉಪಯೋಗಕಾರಿಯಾದ ಪ್ರದೇಶ, ಸಂಪತ್ತು ಹಾಗೂ ತಮ್ಮ ಕಸುಬಿನಲ್ಲಿ ಚೆನ್ನಾಗಿ ನುರಿತ ಪರಿಣಿತ ಸಮುದಾಯಗಳನ್ನು ತನ್ನ ವಶಕ್ಕೆ ತೆಗೆದುಕೊಳ್ಳುವ ಪ್ರಯತ್ನದಲ್ಲಿ ತಡಮಾಡಿರಲಾರ[೧೬] ಎಂದು ಹೇಳಬಹುದು.

ಒಟ್ಟಾರೆಯಾಗಿ ಹೇಳುವುದಾದರೆ ಕೊಮಾರನಹಳ್ಳಿಯಲ್ಲಿ ನಡೆದ ಭೂಸಂಶೋಧನೆಗಳು ಇಲ್ಲಿಯ ಪದರಶಾಸ್ತ್ರ ಮತ್ತು ಸಾಂಸ್ಕೃತಿಕ ಶ್ರೀಮಂತಿಕೆಯನ್ನು ನಿಖರವಾಗಿ ಅರಿಯಲು ಸಾಧ್ಯವಾಗಿದೆ ಅಲ್ಲದೆ ಸನಿಹದ ಒಳ ಪ್ರದೇಶಗಳಲ್ಲಿಯೂ ಖನಿಜ ನಿಕ್ಷೇಪಗಳು ಹಾಗೂ ವಸ್ತುಗಳನ್ನು ಗುರುತಿಸಬಹುದು.

ಕೊನೆಟಿಪ್ಪಣಿಗಳು

೧) ಕೊಟ್ರೇಶ್ ನಾ. ಉತ್ತಂಗಿ, ೨೦೧೩, ಹರಿಹರದೆಳೆಗಳು, ಪು.೪

೨) ಅದೇ, ಪು.೪

೩) ಅದೇ, ಪು.೪

೪) ಗಿರಿಜ ಟಿ., ೨೦೦೧, ದಾವಣಗೆರೆ ಇದು ನಮ್ಮ ಜಿಲ್ಲೆ, ಪು.೨

೫) ಕೊಟ್ರೇಶ್ ನಾ. ಉತ್ತಂಗಿ, ೨೦೧೩, ಪೂರ್ವೋಕ್ತ, ಪು.೪

೬) ಬಳ್ಳೆಕೆರೆ ಹನುಮಂತಪ್ಪ, ೨೦೦೨, ಹರಿಹರ ತಾಲೂಕು ದರ್ಶನ, ಪು.೪

೭) ಅದೇ, ಪು.೪

೮) ಕೊಟ್ರೇಶ್ ನಾ. ಉತ್ತಂಗಿ, ೨೦೧೩, ಪೂರ್ವೋಕ್ತ, ಪು.೪

೯) ಗಿರಿಜ ಟಿ., ೨೦೦೧, ಭಾರತದ ನದಿಗಳು, ಪು.೪೧೧

೧೦) ಸಿದ್ಧನಗೌಡ ಜೆ.ಬಿ., ೨೦೦೭, ತುಂಗಭದ್ರಾ ನದಿ ಪರಿಸರದ ಧಾರ್ಮಿಕ ಕ್ಷೇತ್ರಗಳು, [ಅಪ್ರಕಟಿತ ನಿಬಂಧ], ಪು.೬

೧೧) ಅದೇ, ಪು.೮ [ಈ ನಿಬಂಧದಲ್ಲಿ ಸೂಳೆಕೆರೆ ಹಳ್ಳಕ್ಕೆ ಸ್ವಾಗತಹಳ್ಳಿ ಎಂದು ಉಲ್ಲೇಖವಿದೆ]

೧೨) ಗಿರಿಜ ಟಿ., ೨೦೦೧, ಪೂರ್ವೋಕ್ತ, ಪು.೪೦೭

೧೩) ಅದೇ, ಪು.೪೦೭

೧೪) ಅದೇ, ಪು.೪೦೯

೧೫) ಎ.ಕ.,ಸಂ,೧೧, ಶಾ,ಸಂ,೨೩, ದಾವಣಗೆರೆ

೧೬) ಮಂಜುನಾಥ.ಡಿ., ೧೯೯೭, ಮಧ್ಯ ಕಾಲದಲ್ಲಿ ದೇವಾಲಯ ಆಶ್ರಯ ಪಾಲನೆ ಮತ್ತು ನಿರ್ವಹಣೆ ಹರಿಹರ ದೇವಾಲಯದ ಒಂದು ಅಧ್ಯಯನ,[ಅಪ್ರಕಟಿತ ಎಂ.ಫಿಲ್. ನಿಬಂಧ], ಪು.೨೭

೧೭) ಕೊಟ್ರೇಶ್ ನಾ. ಉತ್ತಂಗಿ, ೨೦೧೩, ಪೂರ್ವೋಕ್ತ, ಪು.೬

೧೮) ಅದೇ, ಪು.೫

೧೯) ಬಳ್ಳಕೆರೆ ಹನುಮಂತಪ್ಪ, ೨೦೧೩, ಪೂರ್ವೋಕ್ತ, ಪು.೪

೨೦) ಕೊಟ್ರೇಶ್ ನಾ. ಉತ್ತಂಗಿ, ೨೦೧೩, ಪೂರ್ವೋಕ್ತ, ಪು.೬

೨೧) ಅದೇ, ಪು.೬

೨೨) ಅದೇ, ಪು.೪

೨೩) ಲೀಲಾ, ೧೯೯೮, ಜೀವವಿಕಾಸ, ಪು.೨೭

೨೪) ಅದೇ, ಪು.೨೮

೨೫) ಶ್ರೀನಿವಾಸ ಎಲ್., ೨೦೧೦, ಪರಿಸರದ ಆದಿ ಮಾನವನ ನೆಲೆಗಳು, ಪು.೧೬

೨೬) ರಾಮಚಂದ್ರರಾವ್ ಎಸ್.ಕೆ., ೧೯೯೯, ಪ್ರಾಚೀನ ಸಂಸ್ಕೃತಿ, ಪು.೫

೨೭) ಲಕ್ಷ್ಮಣ್ ತೆಲಗಾವಿ, ೨೦೦೪, ಮೌರ್ಯ ಮತ್ತು ಶಾತವಾಹನಯುಗ, ಪು.೫

೨೮) ಶಿವತಾರಕ್ ಕೆ.ಬಿ., ೨೦೦೧, ಕರ್ನಾಟಕದ ಪುರಾತತ್ವ ನೆಲೆಗಳು, ಪು.೪

೨೯) ಅದೇ, ಪು.೪

೩೦) ವಾಸುದೇವ ಬಡಿಗೇರ, ೨೦೧೨, ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ ಭಾಗ-೧, ಪು.೫

೩೧) ತಂಬಂಡ ವಿಜಯಪೂಣಚ್ಚ(ಸಂ.), ೨೦೦೧, ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ ಚರಿತ್ರೆ ಸಂ-೪, ಪು.೫

೩೨) Foot R.B., 1916, Indian Pre Historic And Prohistoric Antiquities, p.131

೩೩) Ansari Z.D., I.A. 3rd series and Sankalia, H.D.Prehistory and proto history of India Pakistan, ಮತ್ತು ಶಿವತಾರಕ್ ಕೆ.ಬಿ., ೨೦೦೧, ಪೂರ್ವೋಕ್ತ, ಪು.೫೪

೩೪) I.A.R., ೧೯೭೬-೭೭, ಪು.೭೫-೭೬

೩೫) Foot R B., ೧೯೧೬, ಪೂರ್ವೋಕ್ತ, ಪು.೭೭-೭೮

೩೬) ಶಿವತಾರಕ್ ಕೆ.ಬಿ., ೨೦೦೧, ಪೂರ್ವೋಕ್ತ, ಪು.೭

೩೭) Sheshadri M., 1956, The Stone using cultures of prehistoric and prehistoric, p,21

೩೮) ತಿಪ್ಪೇಸ್ವಾಮಿ. ಎಚ್.೨೦೦೧, ದಾವಣಗೆರೆ ಜಿಲ್ಲೆಯ ದೇವಾಲಯಗಳು, [ಅಪ್ರಕಟಿತ ಪಿ.ಎಚ್.ಡಿ ಮಹಾಪ್ರಬಂಧ], ಪು.೭

೩೯) Sonavane V.H.,1986, The first Excavated Mesolithic Rock shelter of Gujrath, Sharma R.K.,(Edi) Indian Archaeology New Prospectives, P.61

೪೦) Saali S.A., 1996, The Asper Paleolithi and Mesolithic Cultures of Maharastra, P.89

೪೧) ಶಿವತಾರಕ್ ಕೆ.ಬಿ., ೨೦೦೧, ಪೂರ್ವೋಕ್ತ, ಪು.೧೪-೧೫

೪೨) Sankalia H.D., 1987, Mesolithic and Premesolithic Industries From Excavation at Sanganakallu Bellary, p.1-14

೪೩) Sheshadri M., ೧೯೫೬, ಪೂರ್ವೋಕ್ತ, p.14-36

೪೪) Poonacha K.D., 1990, Archaeology of Malenadu Region [unpublished thieses, Karnataka University, Dharwada] p.54

೪೫) ಶಿವತಾರಕ್ ಕೆ.ಬಿ., ೨೦೦೧, ಪೂರ್ವೋಕ್ತ, ಪು.೨೫-೫೭

೪೬) ಇ.ದ.ಸಂ.೧೦, ೧೯೯೫, ರಾಜಾರಾಮ ಹೆಗಡೆ, ಭದ್ರಾ ಪ್ರಾಜೆಕ್ಟ್ ಪರಿಸರದ ಶಿಲಾಯುಧಗಳು, ಪು.೩-೧೭

೪೭) ಸುಂದರ ಅ.,(ಸಂ.), ೧೯೯೭, ಕರ್ನಾಟಕ ಚರಿತ್ರೆ, ಸಂ,೧, ಪು.೧೨೪

೪೮) ಪತ್ರಿಕಾ ವರದಿ, ಡೆಕ್ಕನ್ ಹೆರಾಲ್ಡ್, ಶಿವತಾರಕ್ ಕೆ.ಬಿ., ೨೦೦೧, ಪೂರ್ವೋಕ್ತ, ಪು.೩೩೦

೪೯) ಇ.ದ.ಸಂ.೧೩, ೧೯೯೮, ವಾಸುದೇವ ಬಡಿಗೇರ, ಬಳ್ಳಾರಿ-ಕೊಪ್ಪಳ ಜಿಲ್ಲೆಗಳ ಕೆಲವು ಪುರಾತತ್ವ ಅವಶೇಷಗಳು, ಪು.೧೮

೫೦) ಶಿವತಾರಕ್ ಕೆ.ಬಿ., ೨೦೦೧, ಪೂರ್ವೋಕ್ತ, ಪು.೩೩೨

೫೧) I.A.R., ೧೯೮೧-೮೨, ಪು.೯೪

೫೨) Poonacha K P., ೧೯೯೦, ಪೂರ್ವೋಕ್ತ, ಪು.೩೨

೫೩) ಅದೇ, ಪು.೩೦, ಶಿವತಾರಕ್ ಕೆ.ಬಿ., ಪೂರ್ವೋಕ್ತ, ೨೦೦೧, ಪು.೩೩೬

೫೪) ಅದೇ, ಪು.೨೪, ಅದೇ, ಪು.೩೩೬

೫೫) ಅದೇ, ಪು.೨೯, ಅದೇ, ಪು.೩೩೭

೫೬) ಅದೇ, ಪು.೨೬, ಅದೇ, ಪು.೩೩೭-೩೩೮

೫೭) ಅದೇ, ಪು.೨೯, ಅದೇ, ಪು.೩೩೮

೫೮) ಅದೇ, ಪು.೨೮, ಅದೇ, ಪು.೩೩೯

೫೯) ಅದೇ, ಪು.೨೨, ಅದೇ, ಪು.೩೩೯

೬೦) ಅದೇ, ಪು.೧೯, ಅದೇ, ಪು.೩೪೦

೬೧) ಸುಂದರ ಅ., ೧೯೯೩, ಶಿವಮೊಗ್ಗ ಪ್ರದೇಶದಲ್ಲಿಯ ಮಹತ್ವದ ಪ್ರಾಗಿತಿಹಾಸದ ಸಾಂಸ್ಕೃತಿಕ ಕುರುಹುಗಳು, ವಜ್ರಪಥ, ಪು.೧೫೦-೧೬೩

೬೨) Poonacha K P., ೧೯೯೦,ಪೂರ್ವೋಕ್ತ, ಪು,೧೮, ಶಿವತಾರಕ್ ಕೆ.ಬಿ., ೨೦೦೧, ಪೂರ್ವೋಕ್ತ, ಪು.೩೪೦

೬೩) ಅದೇ, ಪು, ೧೮, ಅದೇ, ಪು.೩೪೨

೬೪) ಶಿವತಾರಕ್, ಕೆ.ಬಿ., ೨೦೦೧, ಪೂರ್ವೋಕ್ತ, ಪು.೩೩೦-೩೩೨

೬೫) ಕ್ಷೇತ್ರ ಕಾರ್ಯದಲ್ಲಿ ದೊರೆತ ಕೈಗೊಡಲಿ.

೬೬) ಕನ್ನಡ ವಿಷಯ ವಿಶ್ವಕೋಶ, ೨೦೦೯, ಇತಿಹಾಸ ಮತ್ತು ಪುರಾತತ್ವ, ಪು.೫೨೩

೬೭) ಅದೇ, ಪು.೫೨೩

೬೮) ಮಜುಂದಾರ್ ಆರ್.ಜಿ ಮತ್ತು ರಾಜಾಗುರು ಎಸ್.ಎಸ್., Aishmound Excavation at kappagallu, p.67-69

೬೯) Foot R B., ೧೯೧೬, ಪೂರ್ವೋಕ್ತ, ಪು.೬೭-೭೬

೭೦) Sheshadri M.,1971, Report On the Excavation at T Narasipura, P.1-5

೭೧) Hanumantha Rao K., and nagaraju S., 1974, Excavation at Hemmige, p.5

೭೨) Hanumanth Kanna, 1967, Archaeology of India, p,95-96, IAR, 1967-68, p.38-39

೭೩) Nagaraja Rao M S., 1997, Proto Historic Cultures of the Thungabhadra Valy, p.10-17

೭೪) ಸೋಮಶೇಖರ್ ಎಸ್.ವೈ., ೨೦೧೦, ಜಗಲೂರು, ಪು.೩

೭೫) ಇಂ.ಆ.ರಿ., ೧೯೭೭-೭೮, ಪು.೨೫

೭೬) ಅದೇ, ಪು.೨೭

೭೭) Rangaraju N S., Archaelogical Exploration in Karnataka Recent Researches in Karnataka Archeology, p.7-15

೭೮) ಇ.ದ.ಸಂ.೧೩, ೧೯೯೮, ವಾಸುದೇವ ಬಡಿಗೇರ, ಪೂರ್ವೋಕ್ತ, ಪು.೧೭-೨೦

೭೯) Poonacha K P., ೧೯೯೦, ಪೂರ್ವೋಕ್ತ, ಪು.೨೫

೮೦) ಅದೇ, ಪು.೧೯

೮೧) ಅದೇ, ಪು.೩೦

೮೨) ಶಿವತಾರಕ್ ಕೆ.ಬಿ., ೨೦೦೧, ಪೂರ್ವೋಕ್ತ, ಪು.೩೩೬

೮೩) Poonacha K P., ೧೯೯೦, ಪೂರ್ವೋಕ್ತ, ಪು.೨೬

೮೪) ಅದೇ, ಪು.೨೨

೮೫) ಅದೇ, ಪು.೧೮

೮೬) ಅದೇ, ಪು.೧೮

೮೭) ಅದೇ, ಪು.೧೮

೮೮) ಇಂಗ್ಲೀಷ್-ಕನ್ನಡ ನಿಘಂಟು,ಸಂ.೧ [A-D], ಮೈಸೂರು ವಿಶ್ವವಿದ್ಯಾನಿಲಯ, ಪು,೧೦೦, ಆಗೇಟ್, ಒಂದು ಪ್ರಶಸ್ತ ಶಿಲೆ; ಬಣ್ಣ ಬಣ್ಣದ ಪಚ್ಚೆಗಳು ಇರುವ ಗಟ್ಟಿಯಾದ ಕ್ಯಾಲ್ಸಿಡಿನಿ ಶಿಲೆಯಲ್ಲಿ ಒಂದು ಬಗೆ. ಈ ಬಗೆಯ ಅಗೇಟ್‌ಗಳು ಈ ನೆಲೆಯಲ್ಲಿ ಗ್ರೇ ಆಗೇಟ್, ವೈಟ್ ಆಗೇಟ್, ಮತ್ತು ಆಗೇಟ್ ಬ್ಲೇಡ್ಸ್‌ಗಳು ಸಹ ದೊರೆತಿವೆ.

೮೯) ದಿನಾಂಕ: ೦೨-೦೨-೨೦೧೩ರ ಪ್ರಜಾವಾಣಿ ಮತ್ತು ವಿಜಯ ಕರ್ನಾಟಕ ಪತ್ರಿಕಾ ವರದಿ

೯೦) ದಿನಾಂಕ:೧೧-೦೬-೨೦೧೬ರಂದು ದುಂಡ್ಯಪ್ಪ ಅವರನ್ನು ಸಂದರ್ಶನ ಮಾಡಿದಾಗ ದೊರೆತ ಮಾಹಿತಿ ಹಾಗೂ ಆ ಶಿಲಾಯುಧವನ್ನು ಗಮನಿಸಿ ಛಾಯಾಚಿತ್ರ ಮಾಡಿಕೊಳ್ಳಲಾಯಿತು.

೯೧) Sankalia H D., 1986, Stone vage Tools, p.18-43

೯೨) ಶಿವತಾರಕ್ ಕೆ.ಬಿ., ೨೦೦೧, ಪೂರ್ವೋಕ್ತ, ಪು.೪

೯೩) ಜಯಣ್ಣ ಯು., ೨೦೦೨, ಮೊಳಕಾಲ್ಮೂರು ತಾಲೂಕಿನ ಪುರಾತತ್ವೀಯ ಪರಿಸರ, (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೧೦೨

೯೪) ಅದೇ, ಪು.೧೦೨

೯೫) ಅದೇ, ಪು.೧೦೪

೯೬) ಇ.ದ.ಸಂ.೨೭, ೨೦೧೨, ರಾಕೇಶ್.ಬಿ.ಸಿ., ಬಗ್ಗಡನಾಳು ಪ್ರದೇಶದ ಪ್ರಾಚ್ಯಾವಶೇಷಗಳು, ಪು.೪೯

೯೭) ಶಿವತಾರಕ್ ಕೆ.ಬಿ, ೨೦೦೧, ಪೂರ್ವೋಕ್ತ, ಪು.೧೮

೯೮) ಅದೇ, ಪು.೧೮

೯೯) ಅದೇ, ಪು.೨೫೯-೨೬೯

೧೦೦) ಅದೇ, ಪು.೩೫೨-೩೭೯

೧೦೧) ಅದೇ, ಪು.೬೨೦

೧೦೨) ಅದೇ, ಪು.೬೨೯-೬೫೪

೧೦೩) Chaild V Gordan, 2001,Megalithis, Ancient India, Vol-4, p.5

೧೦೪) ಚಂದ್ರಶೇಖರಪ್ಪ ಪಿ.ಜಿ., ೨೦೦೬, ಪ್ರಾಚೀನ ಭಾರತದ ಇತಿಹಾಸ, ಪು.೧೫

೧೦೫) Sheshadri M., ೧೯೫೬, ಪೂರ್ವೋಕ್ತ, ಪು.೨-೨೭

೧೦೬) I.A.R., ೧೯೯೯, ಪು.೧೧-೧೨, ಕೃಷ್ಣಮೂರ್ತಿ ಎಂ.ಎಸ್., ಮತ್ತು ಮಹದೇವಯ್ಯ ಎಂ.ಪಿ., ಕರ್ನಾಟಕದ ಬೌದ್ಧ ಧರ್ಮದ ಮೇಲೆ ಹೊಸಬೆಳಕು-ರಾಜಘಟ್ಟ ಉತ್ಖನನ, ಪು.೧೩

೧೦೭) Devaraja D. V., 1996, A Report on Megalithic Excavation at heggadehalli, p.1 20

೧೦೮) Poonacha K P., ಪೂರ್ವೋಕ್ತ, ೧೯೯೦, ಪು.೩೬

೧೦೯) ಅದೇ, ಪು.೩೫

೧೧೦) ಅದೇ, ಪು.೩೫-೩೭

೧೧೧) I.A.R., ೧೯೯೬-೬೭, ಪು.೨೭

೧೧೨) ಶಿವತಾರಕ್ ಕೆ.ಬಿ., ೨೦೦೧, ಪೂರ್ವೋಕ್ತ, ಪು.೬೪೬

೧೧೩) Nagaraja Rao M S., ೧೯೭೧, ಪೂರ್ವೋಕ್ತ, ಪು.೧೧-೧೪

೧೧೪) Sheshadri M.,1960, Report on the jadigenahalli Megalithic Excavation, p.2

೧೧೫) ವೀಲ್ಹರ್ ಆರ್. ಎಂ., ೧೯೪೭, ಬ್ರಹ್ಮಗಿರಿ ಮತ್ತು ಚಂದ್ರವಳ್ಳಿ, Ancient India, ಸಂ.೪, ಪು.೧೮೦-೩೧೦

೧೧೬) I.A.R., ೧೯೭೭-೭೮, ಪು.೨೫

೧೧೭) ಇ.ದ.ಸಂ.೧೨, ೧೯೯೭, ಸೋಮಶೇಖರ್.ಎಸ್.ವೈ., ಆಕನೂರು ಗ್ರಾಮದ ಬಳಿ ಆದಿ ಇತಿಹಾಸದ ಕಾಲದ ಕುರುಹುಗಳು, ಪು.೧೨-೧೪

೧೧೮) ಶಿವತಾರಕ್ ಕೆ.ಬಿ., ೨೦೦೧, ಪೂರ್ವೋಕ್ತ, ಪು.೩೩೦, Subharao.B.,1949, Prehistoric and Early Historic Bellary, Unpublished Thises, P.108

೧೧೯) Sundara A., 1975, Early Chamber Tombs of India, Delhi,P.44

೧೨೦) ಇ.ದ.ಸಂ. ೧೩, ೧೯೯೮, ವಾಸುದೇವ ಬಡಿಗೇರ, ಪೂರ್ವೋಕ್ತ, ಪು.೧೭-೮೦

೧೨೧) ಶಿವತಾರಕ್ ಕೆ.ಬಿ., ೨೦೦೧, ಪೂರ್ವೋಕ್ತ, ಪು.೩೩೨

೧೨೨) Foot R.B., 1916, ಪೂರ್ವೋಕ್ತ, ಪು.74, Sundara A., 1990, Nagarajarao M S., graves of the Early iron using people at Komaranahalli: Recent Evidence, p.೩೧೪ ಇ.ದ.ಸಂ.೧, ೧೯೯೬, ಪು.೮-೧೪

೧೨೩) I.A.R., ೧೯೮೧-೮೨, ಪು.೯೪

೧೨೪) ಅದೇ, ಪು.೯೪

೧೨೫) Poonacha K.P., ೧೯೯೦, ಪೂರ್ವೋಕ್ತ, ಪು.೧೯

೧೨೬) ಸುಂದರ ಆ., ೧೯೯೩, ಶಿವಮೊಗ್ಗ ಪ್ರದೇಶದಲ್ಲಿರುವ ಮಹತ್ವದ ಪ್ರಾಗಿತಿಹಾಸದ ಸಾಂಸ್ಕೃತಿಕ ಕುರುಹುಗಳು, 'ವಜ್ರಪಥ', ಪು.೧೫೦-೧೬೩

೧೨೭) Poonacha K.P, ೧೯೯೦, ಪೂರ್ವೋಕ್ತ, ಪು.೨೪

೧೨೮) ಅದೇ, ಪು.೨೩

೧೨೯) ಅದೇ, ಪು.೨೬

೧೩೦) ಅದೇ, ಪು.೩೧

೧೩೧) ಅದೇ, ಪು.೩೦

೧೩೨) ಅದೇ, ಪು.೨೩

೧೩೩) I.A.R., ೧೯೮೧-೮೨, ಪು.೯೪

೧೩೪) Poonacha K.P., ೧೯೯೦, ಪೂರ್ವೋಕ್ತ, ಪು.೨೨

೧೩೫) ಅದೇ, ಪು.೧೮

೧೩೬) ಅದೇ, ಪು.೧೮

೧೩೭) ಅದೇ, ಪು.೧೮

೧೩೮) ಜಯಣ್ಣ ಯು., ೨೦೦೨, ಪೂರ್ವೋಕ್ತ, ಪು.೧೧೬

೧೩೯) ಇ.ದ.ಸಂ,೧೨, ೧೯೯೭, ಸೋಮಶೇಖರ್ ಎಸ್.ವೈ., ಪೂರ್ವೋಕ್ತ, ಪು.೧೨-೧೪

೧೪೦) Poonacha K.P., ೧೯೯೦, ಪೂರ್ವೋಕ್ತ, ಪು.೧೯

೧೪೧) I.A.R., ೧೯೭೭-೭೮, ಪು.೨೫

೧೪೨) ಲಕ್ಮಣ್ ತೆಲಗಾವಿ, ೨೦೦೪, ಮೌರ್ಯ ಮತ್ತು ಶಾತವಾಹನಯುಗ, ಪು.೪೦

೧೪೩) ಅಂಬಳಿಕೆ ಹಿರಿಯಣ್ಣ, ೨೦೦೯, ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ಪು.೨೭೮

೧೪೪) ಎ.ಕ.ಸಂ,೧೧, ಮೊಳಕಾಲ್ಮೂರು ಶಾ,ಸಂ,೨೧

೧೪೫) ಲಕ್ಷ್ಮಣ್ ತೆಲಗಾವಿ, ೨೦೦೪, ಪೂರ್ವೋಕ್ತ, ಪು.೧೧೧

೧೪೬) ಅದೇ, ಪು. ೩೪, ಕ್ರೈಸ್ತ ಬರವಣಿಗೆಯ ದಾಖಲೆ ಸಿಗದ ಕಾರಣ ತುಂಗಭದ್ರಾ ದಂಡೆಯ ಮೇಲೆ ಸಂನ್ಯಾಸಿಗಳಿದ್ದ ಬಗ್ಗೆ ಅದರಲ್ಲೂ ಹರಿಹರದಲ್ಲಿ ಸಂನ್ಯಾಸಿಗಳಿದ್ದ ಬಗ್ಗೆ ಈ ಮುಂದಿನಂತೆ ಊಹಿಸಬಹುದಾಗಿದೆ. "ಹರಿಹರರು(ಕಡಲೂರಿನಲ್ಲಿ) ವಿಷ್ಣು+ಶಿವ ಏಕಿಭವಿಸುವುದಕ್ಕೂ ಮುಂಚೆ ಈ ಕ್ಷೇತ್ರವೂ ಋಷಿ ಮುನಿಗಳು ಸಂನ್ಯಾಸಿಗಳ ಕ್ಷೇತ್ರವಾಗಿತ್ತೆಂದು ಪುರಾಣ ಉಲ್ಲೇಖಗಳಿಂದ ತಿಳಿಯುತ್ತದೆ. ಈ ಹಿನ್ನಲೆಯಲ್ಲಿ ಹರಿಹರದ ಮೊದಲ ಹೆಸರಾಗಿರುವ ಗುಹಾರಣ್ಯ ಪ್ರದೇಶವೇ ಆದಾಗಿರಬೇಕೆಂದು ತೋರುತ್ತದೆ.

೧೪೭) ಶಿವತಾರಕ್ ಕೆ.ಬಿ., ೨೦೦೧, ಪೂರ್ವೋಕ್ತ, ಪು.೪೫೧

೧೪೮) ಅದೇ, ಪು.೨೫೯

೧೪೯) I.A.R., ೧೯೮೬-೮೭, ಪು.೧೧೮

೧೫೦) ಸುಂದರ ಅ., ೧೯೯೪, ಕರ್ನಾಟಕದ ಪ್ರಾಗಿತಿಹಾಸ ಕಾಲದ ಕಲೆ, ಪು.೬೭-೬೯

೧೫೧) I.A.R., ೧೯೭೭-೭೮, ಪು.೨೫

೧೫೨) ಇ.ದ.ಸಂ.,೧೧, ೧೯೯೬, ಸೋಮಶೇಖರ್.ಎಸ್.ವೈ., ಚಿತ್ರದುರ್ಗ ತಾಲೂಕು ಚಿಕ್ಕನಕೆರೆಯಲ್ಲಿ ಕಂಡುಬಂದಿರುವ ಪ್ರಾಕ್ಚಾರಿತ್ರಿಕ ಕುರುಹುಗಳು, ಪು.೩೨-೩೩

೧೫೩) ಅದೇ, ಪು.೩೨-೩೩

೧೫೪) ಸುಂದರ ಅ., ೧೯೯೪, ಪೂರ್ವೋಕ್ತ, ಪು.೬೭-೬೯

೧೫೫) ಅದೇ, ಪು.೬೭-೬೯

೧೫೬) I.A.R., ೧೯೮೩-೮೪, ಪು.೪೦

೧೫೭) ಅದೇ, ೧೯೮೧-೮೨, ಪು.೯೪

೧೫೮) ಅದೇ, ೧೯೬೦-೬೧, ಪು.೨೮

೧೫೯) ಅದೇ, ೧೯೫೯-೬೦, ಪು.೩೮

೧೬೦) ಅದೇ, ೧೯೬೦-೬೧, ಪು.೨೮

೧೬೧) ಅದೇ, ೧೯೭೭-೭೮, ಪು.೨೫

೧೬೨) ಮೂಗಿನಗೊಂದಿ ಹಾಗೂ ಸಾರಥಿ ಪರಿಸರಗಳಲ್ಲಿ ಕ್ಷೇತ್ರಕಾರ್ಯದ ಸಂಧರ್ಭದಲ್ಲಿ ಹೆರೆಚಿಕ್ಕೆ, ಬ್ಲೇಡ್, ಮೀನುಬಲೆಗೆ ಹಾಕುವ, ಟೆರ್‍ರಾಕೋಟಮಣಿ ಹಾಗೂ ಕೆಂಪು ಮತ್ತು ಬೂದುಬಣ್ಣದ ಹಾಗೂ ಕಪ್ಪು ಮಿಶ್ರಿತ ಮಡಿಕೆಚೂರುಗಳು ದೊರೆತಿವೆ.

೧೬೩) Sundara A.,[Ed],Archaeology in Karnataka,1990, Nagarajarao M S., graves of the Early iron using people at Komaranahalli: Recent Evidence, p.314 ಇ.ದ.ಸಂ.೧, ೧೯೯೬, ಪು.೮-೧೪

೧೬೪) ವಾಸುದೇವ ಬಡಿಗೇರ, ೨೦೦೨, ಶಿರಸಂಗಿ ಕಾಳಮ್ಮ ಸಾಂಸ್ಕೃತಿಕ ಅಧ್ಯಯನ, ಚಾರಿತ್ರಿಕ ಪರಂಪರೆ, ಪು.೧೮ ಮತ್ತು ದಿನಾಂಕ:೦೮-೦೯-೨೦೧೨ ರಂದು ದಾವಣಗೆರೆಯ ಎ.ಆರ್.ಜಿ. ಕಾಲೇಜಿನಲ್ಲಿ ನಡೆದ 'ದಾವಣಗೆರೆ ಜಿಲ್ಲೆಯ ಇತಿಹಾಸ ಪರಂಪರೆ' ಎಂಬ ಒಂದು ದಿನದ ರಾಜ್ಯ ಮಟ್ಟದ ವಿಚಾರ ಸಂಕಿರಣದಲ್ಲಿ ಲೋಹಶಾಸ್ತ್ರದ ಕಲೆಗೆ ಸಂಬಂಧಿಸಿದಂತೆ ಜಿಲ್ಲೆಯ ಕೊಮಾರನಹಳ್ಳಿ ಬೃಹತ್ ಶಿಲಾಯುಗದ ಗೋರಿನೆಲೆಯ ಕುರಿತು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ವಾಸುದೇವ ಬಡಿಗೇರ ಅವರು ಮಾತನಾಡಿದರು.

೧೬೫) Sundara A., 1990, Ibid, p.313

೧೬೬) ಅದೇ, ಪು.೩೧೪

೧೬೭) ಅಂಬಳಿಕೆ ಹಿರಿಯಣ್ಣ, ೨೦೦೯, ಪೂರ್ವೋಕ್ತ, ಪು.೨೭೮

೧೬೮) ಅದೇ, ಪು.೨೭೮

೧೬೯) ಅದೇ, ಪು.೨೭೮

೧೭೦) ಲಕ್ಷ್ಮಣ್ ತೆಲಗಾವಿ, ೨೦೦೪, ಪೂರ್ವೋಕ್ತ, ಪು.೪೦

೧೭೧) I.A.R., ೧೯೮೧-೮೨, ಪು.೯೪

೧೭೨) ಅದೇ, ೧೯೭೪-೭೫, ಪು.೧೮

೧೭೩)ಅದೇ, ೧೯೬೨-೬೩, ಪು.೧೬-೧೭, Nagaraj Rao M.S.,೧೯೭೮, Protohistoric Culture of the Thungabhadra Vally, Dharwad, ಇ.ದ ಸಂ,೧೯, ೨೦೦೪, ಪೂರ್ವೋಕ್ತ, ಪು.೪೦

೧೭೪) Agarwal O.P., and Others, Iron,Megalithies[Karnataka], P.೧೧೬

೧೭೫) ವಾಸುದೇವ ಬಡಿಗೇರ, ೨೦೦೨, ಪೂರ್ವೋಕ್ತ, ಪು.೧೮

೧೭೬) ಲಕ್ಷ್ಮಣ್ ತೆಲಗಾವಿ, ೨೦೦೪, ಪೂರ್ವೋಕ್ತ, ಪು.೧೮

೧೭೭) ಅದೇ, ಪು.೪೦

ಅಧ್ಯಾಯ ಮೂರು

ಶಾಸನಗಳು

೩.೧ ಸ್ಥಳನಾಮಗಳು

೩.೨ ರಾಜಕೀಯ ಇತಿಹಾಸ

೩.೩ ಆಡಳಿತ ವ್ಯವಸ್ಥೆ

೩.೪ ಆರ್ಥಿಕ ವ್ಯವಸ್ಥೆ

೩.೫ ಧಾರ್ಮಿಕ ವ್ಯವಸ್ಥೆ

೩.೬ ಶೈಕ್ಷಣಿಕ ವ್ಯವಸ್ಥೆ

೩.೭ ಸಾಮಾಜಿಕ ವ್ಯವಸ್ಥೆ

ಅಧ್ಯಾಯ ಮೂರು

ಶಾಸನಗಳು

ಒಂದು ನಾಡಿನ ಇತಿಹಾಸವನ್ನು ದಾಖಲಿಸುವಲ್ಲಿ ಶಾಸನಗಳು ಅತ್ಯಂತ ಪ್ರಮುಖವಾದ ಪಾತ್ರವಹಿಸುತ್ತವೆ. ಇತರೆ ಆಧಾರಗಳಿಂದ ದೊರೆಯದ ಎಷ್ಟೋ ಅಂಶಗಳು ಶಾಸನಗಳಿಂದ ದೊರೆಯುತ್ತವೆ. ಶಾಸನಗಳಲ್ಲಿ ಬರೆಯಲ್ಪಟ್ಟ ವಿಷಯವು ಅತಿಶಯೋಕ್ತಿಯಿಂದ ಕೂಡಿದೆ ಹೆಚ್ಚಾನು ಹೆಚ್ಚು ವಾಸ್ತವದ ಸತ್ಯಾಸತ್ಯತೆಯನ್ನು ಒಳಗೊಂಡಿರುತ್ತದೆ. ಗಟ್ಟಿಯಾದ ಪದಾರ್ಥಗಳ ಮೇಲೆ ಕೊರೆದ ವಿಷಯವು ಗಟ್ಟಿಯಾಗಿಯೇ ಇರುತ್ತದೆಯೆಂದರೆ ತಪ್ಪಾಗಲಾರದು. ಆದ್ದರಿಂದ ಒಂದು ನಾಡಿನ ಪ್ರಾಚೀನ ಕಾಲದ ಇತಿಹಾಸವನ್ನು ಕಟ್ಟಿಕೊಡುವಾಗ ಶಾಸನಗಳಿಗೆ ಮೊದಲ ಅದ್ಯತೆ ಕೊಡಬೇಕಾಗುತ್ತದೆ. ನಂತರ ಸ್ಥಾನ ಇತರೆ ಆಧಾರಗಳದ್ದು. ಉದಾಹಣೆಗೆ ದೇವಾಲಯ, ಕೆರೆ. ಕಟ್ಟೆಕೋಟೆ, ಸ್ಮಾರಕ ಶಿಲ್ಪಗಳು, ಭಾರತ ದೇಶದಲ್ಲಿ ಇತಿಹಾಸ ರಚನೆಯಲ್ಲಂತೂ ಶಾಸನಗಳಿಗೆ ಮಹತ್ವದ ಸ್ಥಾನ ನೀಡಿರುವುದನ್ನು ಕಾಣುತ್ತೇವೆ. ವಿದ್ವಾಂಸರು ಶಾಸನಗಳನ್ನು 'ಭಾರತ ದೇಶದ ಜೀವನಾಡಿ' ಎಂದು ಕರೆದಿದ್ದಾರೆ. ಒಂದು ನಿರ್ದಿಷ್ಟ ವಿಷಯವನ್ನು ಕುರಿತು ಹೇಳುವ ಶಾಸನಗಳು ಹೆಚ್ಚು ಖಚಿತತೆಯಿಂದ ಕೂಡಿರುವುದೇ ಇದಕ್ಕೆ ಕಾರಣ.

'ಶಾಸನ' ಎಂಬ ಸಂಸ್ಕೃತ ಪದಕ್ಕೆ 'ಅಜ್ಞೆ' (ರಾಜಾಜ್ಞೆ) ಎಂಬುದು ಮೂಲಾರ್ಥ[1] 'ಶಾಸ್' ಎಂಬ ಧಾತುವಿನಿಂದ ಬಂದಿದ್ದು 'ಶಾಸನ', 'ಶಾಸ್' ಧಾತುವಿಗೆ ಅಜ್ಞಾಪಿಸು, ಶಿಕ್ಷಿಸು, ನಿಯಂತ್ರಿಸು ಎಂಬ ಅರ್ಥಗಳಿವೆ. 'ಶಾಸನ' ಶಬ್ದಕ್ಕೆ ಈಗಲೂ 'ಕಾನೂನು' ಎಂಬ ಅರ್ಥ ಪ್ರಚಲಿತವಾಗಿರುವುದನ್ನು ಗಮನಿಸಬಹುದು. 'ಶಾಸನ' ಎಂಬುದು ಮೂಲತಃ ದಾನ ಸಂಬಂಧವಾದ ರಾಜಾಜ್ಞೆಯಾಗಿತ್ತು ಈ ಆರ್ಥದಲ್ಲಿ ಶಾಸಗಳೆಂದರೆ ದಾನ ಶಾಸಗಳೇ ಆದರೆ ಕಾಲಾನುಕ್ರಮದಲ್ಲಿ 'ಶಾಸನಕ್ಕೆ ರಾಜಾಜ್ಞೆಯೆಂಬ ಅರ್ಥ ತಪ್ಪಿ ಹೋಗಿ, ಅದರ ವ್ಯಾಪ್ತಿ ಏನನ್ನು ಬೇಕಾದರೂ ಒಳಗೊಳ್ಳುವಂತೆ ಹಿಗ್ಗಿದ್ದನ್ನು ನೋಡುತ್ತೇವೆ ಇಂದು 'ಶಾಸನ' ಶಬ್ದ ಬಳಕೆಗೊಳ್ಳವುದು ಈ ವಿಶಾಲವಾದ ಅರ್ಥದಲ್ಲೆ.

ಮೊದಲ ಹಂತದಲ್ಲಿ ಶಾಸನಗಳು ರಾಜ ಕೊಟ್ಟ ದಾನಗಳನ್ನು ತತ್ಸಂಬಂಧವಾದ ನಿಯಮಗಳನ್ನು ಹೇಳುತ್ತಿದ್ದವು. ದಾನವಾಗಿ ಕೊಟ್ಟ ಭೂಮಿಗೆ ತೆರಿಗೆಯ ವಿನಾಯಿತಿಯನ್ನು ಹೇಳುವ ಆಜ್ಞೆಯನ್ನು ಅವು ಒಳಗೊಂಡಿರುತ್ತಿದ್ದವು. ಮಂದೆ ರಾಜರಲ್ಲದೆ ಬೇರೆಯವರು ಕೊಟ್ಟ

ದಾನಗಳನ್ನು ಉಲ್ಲೇಖಿಸುವ ಬರಹಗಳೂ ಶಾಸನಗಳೆಂದೇ ಕರೆಯಿಸಿಕೊಂಡವು ಇದು ಎರಡನೆಯ ಹಂತ. ನಂತರ ದಾನಕ್ಕೆ ಸಂಬಂಧಿಸಿದ ರಾಜಾಜ್ಞೆಯನ್ನೊಳಗೊಂಡಿರುವ ಸಂಕೀರ್ಣ ವಿಷಯಕ್ಕೆ ಬರಹಗಳೆಲ್ಲ ಶಾಸನವೆಂಬ ಹೆಸರು ಅನ್ವಯಗೊಳ್ಳತೊಡಗಿತು. ಇಂದು ಶಾಸನವೆಂದರೆ ದಾನಶಾಸನವೇ ಆಗಿರಬೇಕಾಗಿಲ್ಲ. ಇತರ ವಿಷಯಗಳನ್ನು ಹೇಳುವಂಥದ್ದಾಗಿರಬಹುದು ಅದು ಅಜ್ಞೆಯೇ ಆಗಿರಬೇಕಾಗಿಲ್ಲ. ಯಾವುದೇ ಸಂಗತಿಯ ನಿರೂಪಣೆಯಷ್ಟೆ ಆಗಿರಬಹುದು.

ಶಾಸನಕ್ಕೆ ಸಮಾನಾರ್ಥಕವಾಗಿ ಬಳಕೆಯಾಗುತ್ತಿರುವ ಇಂಗ್ಲಿಷ್ ಶಬ್ದ 'inscription' (Epigraph ಎಂಬ ಪದದ ಪ್ರಯೋಗವೂ ಉಂಟು ಇದರಿಂದಲೇ epigraphy ಬಂದಿರುವುದು) ಈ ಶಬ್ದಕ್ಕೆ ಮೂಲತಃ ರಾಜಾಜ್ಞೆಯೆಂಬ, ಅರ್ಥವೇನೂ ಇರದೆ ವಿಶಾಲವಾದ ಆರ್ಥವೇ ಇರುವುದು ಲಕ್ಷಿಸಬಹುದು [inscribe ಎಂದರೆ 'ಕೆತ್ತು' ಎಂದಾರ್ಥ 'inscription' ಎಂದರೆ ಕೆತ್ತಿದ್ದು][3] ಶಾಸನಗಳೆಂದೆ ಗಟ್ಟಿಯಾದ ಅಥವಾ ಶಾಶ್ವತವಾದ ಯಾವುದಾದರೊಂದು ವಸ್ತುವಿನ ಮೇಲೆ ಕೊರೆದ ದಾಖಲೆಗಳು ಅವು ಬರೆದವಲ್ಲ ಹಸ್ತಪ್ರತಿಗಳಲ್ಲ.

ಜೆ.ಎಫ್. ಫ್ಲೀಟ್ ಅವರು ಭಾರತೀಯ ಶಾಸನಗನಗಳ ಮೂಲಾರ್ಥವನ್ನೂ ಈಚೆಗೆ ಅದು ಪಡೆದುಕೊಂಡು ವಿಸ್ತಾರವನ್ನು ಲಕ್ಷ್ಯದಲ್ಲಿರಿಸಿಕೊಂಡು ಶಾಸನ ಲಕ್ಷಣವನ್ನು ಹೆಚ್ಚು ಸಮರ್ಪಕವಾಗಿ ನಿರೂಪಿಸಿದ್ದಾರೆ. ಶಾಸನಗಳು ಬಹು ಸಂದರ್ಭಗಳಲ್ಲಿ ಅಧಿಕೃತ ಲಕ್ಷಣವುಳ್ಳ. ಸಾಧಾರಣವಾಗಿ ಹೆಚ್ಚು ಕಡಿಮೆ ಸಾರ್ವಜನಿಕ ಸ್ವರೂಪವುಳ್ಳ ಸರಳವಾದ ಅರ್ಥ ಸಂಕೀರ್ಣವಾದ ಸಂಗತಿಗಳನ್ನು ದಿನಾಂಕವಿರುವ ಅಥವಾ ಇಲ್ಲದಿರುವ ಮತ್ತು ತಾವು ಪ್ರಸ್ತಾಪಿಸುವ ವಿಷಯಗಳ ಬಗ್ಗೆ ಶಾಶ್ವತವಾದ ದಾಖಲೆಗಳಾಗಬೇಕೆಂದು ಉದ್ದಿಷ್ಟವಾದ ಪ್ರಕಟಣೆಗಳು.

ಶಾಸನಗಳಿಗೆ ಸಂಬಂಧಿಸಿದಂತೆ ಯಾಜ್ಞವಲ್ಕ್ಯ ಸಂಹಿತೆಯಲ್ಲಿ ಹೀಗೆ ಉಕ್ತವಾಗಿದೆ. 'ಭೂಮಿಯನ್ನು ದಾನ ಮಾಡುವಾಗಲೋ ಅಥವಾ ಯಾವುದಾದರೂ ಶಾಶ್ವತವಾದ ಏರ್ಪಟನ್ನು ಮಾಡುವಾಗಲೋ ಅದರ ನಿಯಮಗಳನ್ನು ಮುಂದಿನ ರಾಜರ ತಿಳಿವಳಿಕೆಗಾಗಿ ವಸ್ತ್ರಪಟದ ಮೇಲಾಗಲಿ, ತಾಮ್ರಪಟದ ಮೇಲಾಗಲಿ ಬರೆಯಿಸಬೇಕು. ಅದರಲ್ಲಿ ತನಗಿಂತ ಹಿಂದಿನ (ಮೂರು) ತಲೆಮಾರುಗಳ, ತನ್ನ ವಿಷಯ, ದಾನವನ್ನು ಸ್ವೀಕರಿಸುವವನ ವಿಷಯ, ದಾನದ ಪ್ರಮಾಣ, ಭೂಮಿಯ ಮೇರೆಗಳು, ದಿನಾಂಕ–ಇವುಗಳನ್ನು ನಿರೂಪಿಸಿ, ತನ್ನ ಮುದ್ರೆ ಮತ್ತು ಸಹಿಗಳನ್ನು ಹಾಕಿರಬೇಕು. ಹೀಗೆ ದಾನವು ಶಾಶ್ವತವಾಗಿ ನಡೆಯುವಂತೆ ಮಾಡಬೇಕು[4] ಈ ಮಾತುಗಳು ದಾನಶಾಸನಗಳಿಗೆ ಅನ್ವಯಿಸುತ್ತವೆಂಬುದು ಸ್ಪಷ್ಟ ರಾಜಶಾಸನಗಳು ಎಂದರೆ ರಾಜಾಜ್ಞೆಗಳನ್ನು ಪ್ರಜೆಗಳಿಗೆ ಡಂಗೂರು ಹೊಡಿಸಿ ತಿಳಿಸಬೇಕೆಂದೂ. ಅವುಗಳನ್ನು ಪ್ರಜೆಗಳು ತಂಗಲು ಅವುಗಳನ್ನು ನಾಲ್ಕು ದಾರಿಗಳು ಕೂಡುವ ಸ್ಥಳಗಳಲ್ಲಿ ಬರೆಯಿಸಿ ಪ್ರಕಟಿಸಬೇಕೆಂದೂ, ಅವುಗಳನ್ನು ಮೀರಿದವರಿಗೆ ಶಿಕ್ಷೆಯನ್ನು ವಿಧಿಸಲಾಗುವುದೆಂದೂ ಶುಕ್ರನೀತಿಯು ತಿಳಿಸುತ್ತದೆ.[5]

ಮೂಲತಃ ರಾಜಾಜ್ಞೆಗಳು ಅಥವಾ ಶಾಸನಗಳು ತಾಳಪತ್ರದ ಮೇಲಿರುತ್ತಿದ್ದುವೆಂದು ತಿಳಿದುಬರುತ್ತದೆ. ಅವುಗಳನ್ನು ಶಾಶ್ವತಗೊಳಿಸುವುದಕ್ಕಾಗಿ ತಾಮ್ರಪಟಗಳ ಮೇಲೂ, ಕಲ್ಲಿನ

ಮೇಲೂ ಕೊರೆದರು. ಹೀಗೆ ತಾಮ್ರ ಅಥವಾ ಶಿಲೆಯ ಮೇಲಿರುವ ಆಜ್ಞೆಗಳು ಮಾತ್ರ ಇಂದು ಶಾಸನಗಳೆಂದು ವ್ಯವಹಾರಿತವಾಗುತ್ತವೆ. ತಾಳಪತ್ರಗಳ ಮೇಲಿನ ಆಜ್ಞೆಗಳೂ ಆಜ್ಞಾಪತ್ರಗಳೂ ಈಗ ಉಪಲಬ್ಧವಿಲ್ಲ.

ಕೌಟಿಲ್ಯ ತನ್ನ ಕೃತಿಯಾದ 'ಅರ್ಥಶಾಸ್ತ್ರ'ದಲ್ಲಿ ಶಾಸನದ ಬಗ್ಗೆ ಮಾತನಾಡುತ್ತಾ ರಾಜರ ಆಜ್ಞೆಗಳನ್ನು ತಿಳಿಸುವ ಬರಹವೇ ಶಾಸನ ಎಂದಿದ್ದಾನೆ. ಬ್ರಿಟಾನಿಕಾ ವಿಶ್ವಕೋಶದಲ್ಲಿ ಶಾಸನದ ವ್ಯಾಖ್ಯೆ ಹೀಗೆ ವಿವರಿಸಲಾಗಿದೆ. ಕೆಲವು ಸೂಚನೆಗಳನ್ನು ನೀಡುವುದಕ್ಕಾಗಿ ಅಥವಾ ಕೆಲವು ದಾಖಲೆಗಳನ್ನು ಧೀರ್ಘ ಕಾಲಾಂತರದವರೆಗೂ ಸಂರಕ್ಷಿಸುವುದಕ್ಕಾಗಿ ತಾಳೆಗರಿ, ಭೂರ್ಜಪತ್ರ ಮುಂತಾದವುಗಳ ಮೇಲೆ ಬರೆಯದೆ ಹಾಗೆ ಬಹುಕಾಲ ಬಾಳುವ ಗಟ್ಟಿಯಾದ ಸಾಮಾಗ್ರಿಯ ಮೇಲೆ ಕೆತ್ತಿದ ಬರಹಗಳೇ ಶಾಸನಗಳು ಎಂದು ತಿಳಿಸಲಾಗಿದೆ.[೫] ಇಂತಹ ಗಟ್ಟಿ ಸಾಮಾಗ್ರಿಗಳಲ್ಲಿ ಶಿಲಾಶಾಸನ ತಾಮ್ರ ಶಾಸನಗಳು ಪ್ರಮುಖವಾದವುಗಳಾಗಿವೆ. ಇವುಗಳ ಜೊತೆಗೆ ವೀರಗಲ್ಲು ಶಾಸನ, ಮಾಸ್ತಿಗಲ್ಲು ಶಾಸನ, ನಿಷಧಿಕಲ್ಲುಗಳು ಇವೆಲ್ಲವೂ ಮೂಲಾರ್ಥದಲ್ಲಿ ಶಾಸನಗಳಾಗಿವೆ.[೬] ಇವುಗಳಲ್ಲಿ ಹೆಚ್ಚಿನವು ದಾನ ದತ್ತಿಗೆ ಸಂಬಂಧಿಸಿದ ಶಾಸನಗಳಾಗಿದ್ದು ಪ್ರಾಚೀನ, ಸಮಾಜದಲ್ಲಿ 'ದಾನ' ಮಹೋನ್ನತವಾದ ಮೌಲ್ಯವಾಗಿತ್ತು.

ಕನ್ನಡ ನಾಡಿನ ದಾನ ಚಿಂತಾಮಣಿ ಅತ್ತಿಮಬ್ಬೆಯೆಂಬ ಹೆಸರು ಚಿರವಾಗಿ ಉಳಿಯಲು ಅವಳ ದಾನ, ಗುಣದಿಂದಲೇ ತಿಳಿಯುತ್ತದೆ ದಾನವನ್ನು ಸಾಮಾನ್ಯವಾಗಿ ಮಠ, ಬಸದಿ, ದೇವಾಲಯ, ವಿದ್ಯಾಕೇಂದ್ರ ಕೆರೆ, ಅರವಟ್ಟಿಗೆ ಪಂಡಿತರಿಗೆ ನೀಡಲಾಗುತ್ತಿತ್ತು. ಅಂದು ರಾಜ್ಯವಾಳುತ್ತಿದ್ದ ಅರಸ. ಮಾಂಡಳಿಕ ಪ್ರಧಾನಗೌಡ, ಹೀಗೆ ಕೇಂದ್ರದಿಂದ ಮೊದಲುಗೊಂಡು ಚಿಕ್ಕ ಘಟಕವಾದ ಗ್ರಾಮದವರೆಗೂ ದಾನದ ಬಗ್ಗೆ ಮಾಹಿತಿ ದೊರೆಯುತ್ತದೆ.[೭] ದಾನಧರ್ಮಗಳು ಶಾಸನಗಳ ಪ್ರೇರಕ ಶಕ್ತಿಯಾಗಿದ್ದರಿಂದರಿಂದಲೇ ದಾನ ಶಾಸನಗಳ ಸಂಖ್ಯೆಯು ಹೆಚ್ಚಿದೆ. ಒಂದು ವಿಚಾರವನ್ನು ನಾವು ಗಮನದಲ್ಲಿರಿಸಿಕೊಂಡಿರಬೇಕು ಚಾರಿತ್ರಿಕ ಮೌಲ್ಯವೇ ಶಾಸಗಳ ಜೀವಾಳವಾಗಿದೆ.

ಹರಿಹರ ತಾಲೂಕಿನ ಪ್ರಕಟಿತ ಶಾಸನಗಳು ಸಮಗ್ರವಾಗಿ ಒಂದು ಸಂಪುಟದಲ್ಲಿಲ್ಲ ಎಪಿಗ್ರಪಿಯಾ ಕರ್ನಾಟಿಕ ಸಂ.೧೧ರಲ್ಲಿ ಹಲವಾರು ಶಾಸಗಳನ್ನು ಬಿ.ಎಲ್. ರೈಸ್ ರವರು ಪ್ರಕಟಿಸಿದ್ದಾರೆ.[೮] ಆನಂತರ ಕಾಲದಿಂದ ಕಾಲಕ್ಕೆ ದೊರೆತ ಶಾಸಗಳನ್ನು ಎಂ.ಎ.ಆರ್. ವಾರ್ಷಿಕ ವರದಿಗಳಲ್ಲಿ ಎಚ್.ಎಂ ಶಂಕರನಾರಾಯಣರಾವ್‌ರವರ ಶ್ರೀ ಹರಿಹರ ದೇವಾಲಯ ಪುಸ್ತಕದಲ್ಲಿ, ಸಂಶೋಧಕರಾದ ಬಿ.ಆರ್. ಗೋಪಾಲ್, ಬಿ.ರಾಜಶೇಖರಪ್ಪ, ಚಂದನಾ ವೈ. ನೀಲಪ್ಪ, ಬುರುಡೆಕಟ್ಟೆ ಮಂಜಪ್ಪ ಹಾಗೂ ರಾಘವೇಂದ್ರ ಆಚಾರಿಯವರು ಇತಿಹಾಸ ದರ್ಶನ ಸಂಪುಟಗಳು ಹಾಗೂ ವಿಜಯನಗರ ಅಧ್ಯಯನ ಸಂಪುಟಗಳಲ್ಲಿ ಪ್ರಕಟಿಸಿದ್ದಾರೆ. ಹರಿಹರ ತಾಲೂಕಿಗೆ ಸಂಬಂಧಿಸಿದಂತೆ ಸುಮಾರು ೧೧೦ ಶಾಸಗಳು ದೊರೆತಿವೆ. ಈ ಶಾಸನಗಳು ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಗಂಗರು, ಕಲ್ಯಾಣ ಚಾಲುಕ್ಯ, ಕಲಚೂರಿ, ನೊಳಂಬ, ಹೊಯ್ಸಳ, ವಿಜಯನಗರ ಹಾಗೂ ಚಿತ್ರದುರ್ಗ ಪಾಳೆಗಾರರ ಮನೆತಗಳಿಗೆ ಸೇರಿದವುಗಳಾಗಿವೆ. ಇವುಗಳ ಆಧಾರದ ಮೇಲೆ

ಶಾಸನೋಕ್ತ ಸ್ಥಳನಾಮಗಳನ್ನು ಹಾಗೂ ರಾಜಕೀಯ, ಆಡಳಿತ, ಅರ್ಥಿಕ, ಧಾರ್ಮಿಕ, ಶೈಕ್ಷಣಿಕ ಮತ್ತು ಸಾಮಾಜಿಕ ವಿಚಾರಗಳನ್ನು ತಿಳಿಯಬಹುದು.

೩.೧ ಸ್ಥಳನಾಮಗಳು

ಒಂದು ಗ್ರಾಮದ ಸ್ಥಳನಾಮಗಳು ಅಲ್ಲಿನ ನೈಸರ್ಗಿಕತೆಯ ಮೇಲೆ ಹುಟ್ಟಿಕೊಂಡಿರುತ್ತವೆ. ಅಲ್ಲಿ ಹುಟ್ಟಿರುವ ಪ್ರಕೃತಿಯ ಕಲ್ಲು, ಮರ, ಬೆಟ್ಟ, ಹಳ್ಳ ಭೂಮಿಯ ಆಧಾರದ ಮೇಲೆ ಹೆಚ್ಚಿನ ಸ್ಥಳನಾಮಗಳು ರಚಿತವಾಗಿರುತ್ತದೆ. 'ಸ್ಥಳನಾಮಗಳಲ್ಲಿ ಅ ಪ್ರದೇಶದ ಸಂಸ್ಕೃತಿಯನ್ನು ಅಳೆಯಬಹುದಾಗಿದೆ. "ಸ್ಥಳನಾಮಗಳ ಅಧ್ಯಯನ ಮಹತ್ವವನ್ನು ಕ್ರಿ.ಶ. ೧೭೬೮ರ ಕಾಲಕ್ಕಾಗಲೇ ಮೊದಲು ಗುರುತಿಸಿದವರು ಗಾತ್‌ಫ್ರೀಡ್ ಮಿಲ್ಹೆಲ್ಮಲೀಬ್ನಜ್, ಈ ಕಾರಣದಿಂದಾಗಿ ಇವನನ್ನು ಸ್ಥಳನಾಮಶಾಸ್ತ್ರದ ಮೂಲ ಪುರುಷನೆಂದು ಕರೆಯಲಾಗುತ್ತದೆ.[೯] ಸ್ಥಳನಾಮಗಳ ಅಧ್ಯಯನದ ಜೊತೆಗೆ ವ್ಯಕ್ತಿನಾಮ, ಕುಟುಂಬನಾಮ ಇತ್ಯಾದಿಗಳ ಅಧ್ಯಯನಗಳು ನಡೆದಿವೆ. "ಪ್ರಾಚೀನ ಸ್ಥಳನಾಮಗಳಲ್ಲಿ ಬಹುಪಾಲು ಅರ್ಥಗರ್ಭಿತವಾದವುಗಳು ಒಂದು ಪ್ರದೇಶದ ನದಿ, ಬೆಟ್ಟ, ಕಲ್ಲು, ಮಣ್ಣು, ಮರ, ಗಿಡ, ಕೋಟೆ ದೇವಾಲಯ ಆ ಪ್ರದೇಶದ ಚರಿತ್ರೆಯನ್ನು ಹೇಳಲು ಹೇಗೆ ಸಹಾಯಕವಾಗುತ್ತವೆಯೋ ಹಾಗೆಯೇ ಅಲ್ಲಿನ ಸ್ಥಳನಾಮಗಳ ಚರಿತ್ರೆಗೆ ಪೂರಕವಾಗುವ ಅನೇಕ ಮಾಹಿತಿಗಳನ್ನು ಒದಗಿಸುತ್ತವೆ. ಆದುದರಿಂದ ಸ್ಥಳನಾಮಗಳಿಗೆ ಸಾಮಾನ್ಯ ನಾಮಗಳಿಗೆ ಕೊಡಬೇಕಾದ ಪ್ರಾಧಾನ್ಯಕ್ಕಿಂತ ಹೆಚ್ಚಿನ ಪ್ರಧಾನ್ಯತೆ ಕೊಡಬೇಕಾಗಿದೆ.[೧೦] ಸ್ಥಳನಾಮಗಳನ್ನು ಒದಗಿಸುವ ಪ್ರಮುಖ ಆಕಾರಗಳೆಂದರೆ ಶಾಸನಗಳು. ಶಾಸನಗಳೇ ಸ್ಥಳನಾಮಗಳ ಸೂಚಕಗಳಾಗಿ ಪರಿಣಮಿಸಿವೆ. ಸ್ಥಳನಾಮಗಳು ಆ ಪ್ರದೇಶದ ಸಾಂಸ್ಕೃತಿಕ ಪ್ರತಿಬಿಂಬಗಳು ಅವುಗಳನ್ನು ವ್ಯವಸ್ಥಿತವಾಗಿ ಅಧ್ಯಯನಕ್ಕೆ ಒಳಪಡಿಸಿದರೆ ಆ ಪ್ರದೇಶದ ಭವ್ಯ ಪರಂಪರೆ ಅನಾವರಣಗೊಳ್ಳುತ್ತದೆ.

ತಾಲೂಕಿನ ಶಾಸನಗಳಲ್ಲಿ ಸುಮಾರು ೧೧೫ ಕ್ಕೂ ಹೆಚ್ಚಿನ ಸ್ಥಳನಾಮಗಳ ಉಲ್ಲೇಖಗಳು ಕಂಡುಬರುತ್ತದೆ. ಈ ಸ್ಥಳನಾಮಗಳಲ್ಲದೆ ದೇಶ, ನಾಡು, ವಿಭಾಗ ಉಪವಿಭಾಗ, ಘಟಕಗಳ ಹೆಸರುಗಳು ಉಲ್ಲೇಖವಾಗಿವೆ. ಈ ಸ್ಥಳನಾಮಗಳು ತಮ್ಮದೇ ಅದ ವಿಶಿಷ್ಟತೆಯಿಂದ ಕೂಡಿರುವುದು ಕಂಡು ಬರುತ್ತದೆ. ತಾಲೂಕಿನ ಶಾಸನಗಳಲ್ಲಿ ಪ್ರಸ್ತಾಪಿತವಾದ ಸ್ಥಳನಾಮಗಳಲ್ಲಿ ಕೆಲವು ಹರಿಹರ ತಾಲೂಕನ್ನ ಹೊರತು ಪಡಿಸಿ ಬೇರೆ ಜಿಲ್ಲೆಯ ಅಥವಾ ತಾಲೂಕಿನ ಸ್ಥಳನಾಮಗಳು ಇಲ್ಲಿ ಕಾಣಿಸಿಗೊಳ್ಳುತ್ತವೆ. ಇಲ್ಲಿ ಶಾಸನಗಳಲ್ಲಿ ಉಲ್ಲೇಖವಾಗಿರುವ ಸ್ಥಳನಾಮಗಳ ಹೆಚ್ಚಿನವುಗಳು ಬದಲಾವಣೆಯಾಗಿದ್ದು ಕಂಡು ಬರುತ್ತದೆ. ಬದಲಾವಣೆ ಅಥವಾ ಪರಿವರ್ತನೆ ಅನ್ನುವುದು ಪ್ರಕೃತಿಯಷ್ಟೇ ಸಹಜವಾದುದು. ಇಲ್ಲಿ ಬದಲಾವಣೆ ಎಂದರೆ ಸ್ಥಳನಾಮದ ಪರಿವರ್ತನೆ ಚಿಕ್ಕ ಪ್ರಮಾಣದಲ್ಲಿ ಆಗಿರಬಹುದು ಅಥವಾ ಪೂರ್ಣ ಪ್ರಮಾಣದ ಪರಿವರ್ತನೆ ಇಲ್ಲವೇ ಒಂದಕ್ಷರವೂ ಬದಲಾವಣೆಗೊಂಡಿರಬಹುದು ಮೊದಲು ಅಧ್ಯಯನದ ಕೇಂದ್ರವಾದ ಹರಿಹರದ ಸ್ಥಳನಾಮವನ್ನು ಕುರಿತು ಇಲ್ಲಿ ಚರ್ಚಿಸುವುದು ಸೂಕ್ತವೆನಿಸುತ್ತದೆ. ಹರಿಹರ ಹೆಸರು ಪ್ರಸ್ತುತ ಕರೆಯಲ್ಪಟ್ಟರೂ. ಶಾಸನಗಳಲ್ಲಿ ಹರಿಷಪುರ[೧೧] ಹರಿಹರಪುರ[೧೨] ಹರಿಹರ ದೇವಪುರ[೧೩] ಹರಿಹರಕ್ಷೇತ್ರ[೧೪] ಹರಿಹರ

ಸೀಮೆ[೧೫] ಕೂಡಲೂರು[೧೬] ಕೂಡಲೀಪುರ[೧೭] ಕೂಡಲೂರ ಗ್ರಾಮ[೧೮] ಗುಹಾರಣ್ಯ[೧೯] ಕೂಡಲಸಂಗಮ[೨೦] ಹರಿಹರ[೨೧] ಹೆಸರುಗಳಿಂದ ಕರೆದಿರುವುದು ಕಂಡು ಬರುತ್ತದೆ. ಹರಿಹರ ಕೈಫಿಯತ್ತು ಹಾಗೂ ಇತರ ಕೈಫಿಯತ್ತುಗಳನ್ನು ಅವಲೋಕಿಸಿದಾಗ ಗೌತಮಗ್ರಾಮ[೨೨] ಕುಂಭಕ್ಷೇತ್ರ[೨೩] (ಕುಂಭಕಾಸಿ)ಮತ್ತು ಲಿಂಗಾಪುರ[೨೪] ಎಂದು ಹರಿಹರವನ್ನು ಹೆಸರಿಸಿವೆ.

ದೈವಸೂಚಕ ಸ್ಥಳನಾಮವಾಗಿ ಹರಿಹರ ಹರಿದ್ರಾನದಿ ತುಂಗಭದ್ರೆಯನ್ನು ಸೇರುವುದರಿಂದ ಆ ಸ್ಥಳಕ್ಕೆ ಕೂಡಲೂರು ಎಂದು ಕರೆದರೆ ಗುಹಾಸುರನೆಂಬ ರಾಕ್ಷಸನು ನೆಲೆಸಿದ್ದರಿಂದ ಈ ಪ್ರದೇಶಕ್ಕೆ ಗುಹಾರಣ್ಯವೆಂದು ಹೆಸರು ಬಂದಿದೆ. ಇದಕ್ಕೆ ಪೂರಕವಾಗಿ ಹರಿಹರದ ಶಾಸನಗಳುರನ್ನು ಊರನ್ನು ಕೂಡಲೂರು ಎಂದು ಅ ಪ್ರದೇಶವನ್ನು ಗುಹಾರಣ್ಯವೆಂದು ಉಲ್ಲೇಖಿಸಿವೆ. ಕ್ರಿ.ಶ. ೯೬೪ರ ಹರಿಹರ ಶಾಸನದಲ್ಲಿ "ಚುತುರ್ದಶೇ ವರ್ತಮಾನೇ ಹರಿಷಪುರ ಪ್ರತ್ಯಾಸನ್ನೇ[೨೫] ಎಂದಿದೆ ಇಲ್ಲಿ ಉಲ್ಲೇಖವಾಗಿರುವ ಹರಿಷಪುರ ಎಂಬ ಹೆಸರು ಹರಿ. ಮತ್ತು ಈಶರನ್ನು ಹೆಸರಿಸುತ್ತದೆ. ಜೊತೆಗೆ ಹರಿಷ ಪದ ಬಳಕೆಯ ನಂತರ ಬಂದ ವಾರ್ಗಿಕ ಪದವಾದಪುರ ಎಂಬುದು ವಾಸ್ತವ್ಯವಾಚಿ ಪದವಾಗಿದ್ದು. ವಿಷ್ಣು ಮತ್ತು ಶಿವನನ್ನು ಕುರಿತು ಆರಾಧಿಸುವ ತಾಣ ಇದಾಗಿದೆ.[೨೬] ಎಂಬುದು ಸ್ಪಷ್ಟವಾಗುತ್ತದೆ.

ಕ್ರಿ.ಶ. ೧೨೬೫ ಮತ್ತು ೧೪೧೦ರ ಹರಿಹರ ಶಾಸನಗಳಲ್ಲಿ ಹರಿಹರವನ್ನು ಹರಿಹರ ಕ್ಷೇತ್ರವೆಂದು ವರ್ಣಿಸಿದೆ. ಕ್ರಿ.ಶ.೧೧೬೪ರ ಹರಿಹರ ಶಾಸನದಲ್ಲಿ ದಕ್ಷಿಣಕಾಶಿಯೆಂದು ಉಲ್ಲೇಖಿಸಿದೆ. ಅಲ್ಲದೆ ಶಾಸಗಳಲ್ಲಿ ಹರಿಹರ ದೇವರನ್ನು ಶಂಕರನಾರಾಯಣ[೨೭] ಎಂದು ಸಹ ಉಲ್ಲೇಖಿಸಿದೆ. ಇಲ್ಲಿ ಹರಿಹರ ಹೆಸರಿನಲ್ಲಿ ಮೊದಲು ವಿಷ್ಣುವನ್ನು ನಂತರ ಶಿವನನ್ನು ಗುರತಿಸುತ್ತದೆ ಶಂಕರನಾರಾಯಣ ಎಂಬ ಹೆಸರು ಮೊದಲು ಶಿವನನ್ನು ನಂತರ ವಿಷ್ಣುವನ್ನು ಗುರುತಿಸುತ್ತದೆ.[೨೮] ಎರಡು ಹೆಸರುಗಳನ್ನು ಗಮನಿಸಿದರೆ ಅಂದಿನ ಶೈವ-ವೈಷ್ಣವ ಪಂಥಗಳ ಮಧ್ಯೆ ಇದ್ದಂತಹ ಒಳಧಾರ್ಮಿಕ ಸಂಘರ್ಷವನ್ನು ತಿಳಿಯಬಹುದು. ಇಲ್ಲಿ ಹರಿಹರನ ಹೆಸರಿನಲ್ಲಿ ವಾಸ್ತವ್ಯದ ಕುರಿತು ಸ್ಥಳ ಇರುವುದನ್ನು ಹರಿಹರಪುರ, ಹರಿಷಪುರ ಎಂಬಂತಹ ಹೆಸರುಗಳು ಶಾಸನಗಳಲ್ಲಿ ಉಲ್ಲೇಖವಾಗಿವೆ. ಅದರೆ ಶಂಕರನಾರಾಯಣನ ಹೆಸರಿನಲ್ಲಿ ಈ ಗ್ರಾಮ ಯಾವತ್ತು ವಾಸ್ತವ್ಯದ ನೆಲೆಯಾಗಿ ಕಾಣಿಸಿಲ್ಲ ಬದಲಾಗಿ ಪ್ರಸ್ತುತ ಪ್ರದೇಶದ [ಅಂದರೆ ಈಗಿನ ಹರಿಹರಪಟ್ಟಣದ ಕಾಲೋನಿಗಳನ್ನೊಳಗೊಂಡಂತೆ] ಬೇರೆ ಬೇರೆ ಹೆಸರುಗಳನ್ನು ಗಮನಿಸಿದರೆ ಶಿವನ ಆರಾಧಕರು ಶಾಂಕರಿಪುರ,[೨೯] ಲಿಂಗಾಪುರ[೩೦] ಶಂಕರನಹಳ್ಳಿ[೩೧] [ಶೇರಾಪುರ] ಗ್ರಾಮಗಳಲ್ಲಿದ್ದರೆ ವಿಷ್ಣುವಿನ ಆರಾಧಕರು ಹರ್ಲಾಪುರ[೩೨](ಹರಿಲಾಪುರ) ಗ್ರಾಮದಲ್ಲಿ ವಾಸಿಸುತ್ತಿದ್ದ ಬಗ್ಗೆ ಅಲ್ಲಿನ ಸ್ಥಳನಾಮಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಗೊತ್ತಾಗುತ್ತದೆ.

ದೇವರಬೆಳಕೆರೆ ವಿಶಿಷ್ಟ ಜಲವಾಚಕ ಮತ್ತು ದೈವ ವಾಚಕ ಸ್ಥಳನಾಮವಾಗಿದೆ.[೩೩] ಕುಣಿಬೆಳಕೆರೆಯ ಕಾಲಮಾನವಿಲ್ಲದ ಶಾಸನನದಲ್ಲಿ "ಶ್ರೀಮತ್ ಬೆಳಕೆರೆಯ"ಎಂದೂ ದೇವರಬೆಳಕೆರೆಯ ಗ್ರಾಮಕ್ಕೆ ಸೇರಿದ ಹಳೇವಾಳು ಬೆಚಾರಕ್ ಗ್ರಾಮದ ಕಲ್ಲೇಶ್ವರ ದೇವಾಲಯದ ಕ್ರಿಶ ೧೩ನೇ ಶತಮಾನದ ವೀರಗಲ್ಲು ಶಾಸನದಲ್ಲಿ "ಚಿಕ್ಕಬೆಳುಕರಿಯ ತುರುಹರಿಯಲು[೩೪] ಎಂದಿದೆ. ಅದೇ ದೇವಾಲಯದ ಕಂಬದ ಶಾಸನದಲ್ಲಿ "ಚಂಬೆಯಗೆರೆಯ ತೆಂಕಣಕೋಡಿಯಂ[೩೫] ಎಂದೂ

ಉಲ್ಲೇಖಿಸಿವೆ. ಪ್ರಕೃತಿವಾಚಕ ಸ್ಥಳನಾಮವಾದ ಭಾನುವಳ್ಳಿ ಸ್ಥಳಕ್ಕೆ ಕ್ರಿ.ಶ. ೧೨೬೫ರ ಬಾನುವಳ್ಳಿ, ಶಾಸನದಲ್ಲಿ "ಲಕ್ಷ್ಮೀನಾರಾಯಣಪುರ[೩೬] ಎಂದು ಉಲ್ಲೇಖಿಸಿದೆ. ಮುಂದೆವರೆದು ಕಾಲಕಾಲಕ್ಕೆ ಬನವಳ್ಳಿ, ಭಾನುವತಿಪಟ್ಟಣ, ಬಾನವಳ್ಳಿ[೩೭] ಪ್ರಸ್ತುತ ಬಾನುವಳ್ಳಿ ಎಂದಾಗಿದೆ. ಜಿಗಳಿ ಸ್ಥಳನಾಮ ಕುರಿತು ಜಿಗುಳೆ[೩೮], ಜಿಗಳ್[೩೯], ಜಿಗಾಲಿ[೪೦] ಎಂದು ಶಾಸನಗಳು ಉಲ್ಲೇಖಿಸಿವೆ. ಕ್ರಿ.ಶ. ೧೫೩೧ರಿಂದಲೂ ಶಾಸನಗಳಲ್ಲಿ ಉಲ್ಲೇಖವಾಗಿರುವ ಗಂಗನರಸಿ ಗ್ರಾಮವು ಪ್ರಸ್ತುತದವರೆಗೂ ಗಂಗನರಸಿ ಎಂದೆ ಕರೆಯಲ್ಪಟಿದೆ.

ದೈವವಾಚಕ, ಪ್ರಾಣಿವಾಚಕ ಮತ್ತು ಸಸ್ಯವಾಚಕ ಸ್ಥಳನಾಮದಿಂದ ಕೂಡಿದ ನಂದಿತಾವರೆ ಶಾಸನಗಳಲ್ಲಿ ತಾವರೆಹಳ್ಳಿ[೪೧], ತಾವರೆಗೆ[೪೨] ಎಂಬುದಾಗಿ ಉಲ್ಲೇಖಿಸಿವೆ. ಭೂವಾಚಕ ಸ್ಥಳನಾಮವಾದ[೪೩] ಮಲೆಬೆನ್ನೂರು ದಾವಣಗೆರೆ ತಾಲೂಕಿನ ಅವರಗೆರೆ ಶಾಸನದಲ್ಲಿ 'ಬಿನ್ನವೂರು' ಎಂದಿದೆ. ಕ್ರಿ.ಶ. ೧೫೧೬ರ ಮಲೆಬೆನ್ನೂರು ಶಾಸನದಲ್ಲಿ 'ಮಲೆಯ ಬೆನ್ನೂರ ಸೀಮೆಯ' ಎಂದಿದ್ದು ಮುಂದೆ "ಬೆನ್ನೂರ ನರಸ" ಮತ್ತು ಬೆನ್ನೂರು ಸೂರಿಸೆಟ್ಟಿ[೪೪] ಎನ್ನುವ ಹೆಸರುಗಳ ಉಲ್ಲೇಖವಿದೆ. ಈ ಎರಡು ಹೆಸರುಗಳು ಅಂದಿನ ಕಾಲದಲ್ಲಿದ್ದ ಮನೆತನದ ಹೆಸರಾಗಿಬೇಕು ಎಂದೇನಿಸುತ್ತದೆ. ಕ್ರಿ.ಶ. ೧೫೩೮ರ ಶಾಸನದಲ್ಲಿ "ಶ್ರೀಮತು ಆದಿಯಪ್ಪ ನಾಯಕರು ಮಲೆಯಬೆನ್ನೂರು ಗ್ರಾಮ ಕೆಸೆಟಿ ಪಟಣ ಸ್ವಾಮಿಗೌಡ ಮತ್ತು ಪ್ರಜೆಗಳಿಗೆ ಬಿಟ್ಟ ಕಬ್ಬಿನ ಸುಂಕ"[೪೫] ದ ಬಗ್ಗೆ ತಿಳಿಸುತ್ತದೆ. ಇಲ್ಲಿ ಉಲ್ಲೇಖವಾಗಿರುವ ಮಲೆಯಬೆನ್ನೂರು ಗ್ರಾಮ ಆರಂಭದ ಶಾಸಗಳಲ್ಲಿ ಬಿನ್ನವೂರು, ಬೆಂನ್ನೂರು ಆಗಿ ನಂತರದಲ್ಲಿ ಮಲೆಬೆನ್ನೂರು ಆಗಿರುವುದು ತಿಳಿದುಬರುತ್ತದೆ.

ತಾಲೂಕಿನಲ್ಲಿ ಅನೇಕ ರೀತಿಯ ಸ್ಥಳನಾಮಗಳು ದೊರೆಯುತ್ತವೆ. ಎಳೆಹೊಳೆ ಕ್ರಿ.ಶ. ೧೨೨೩ರ ಹರಿಹರ ಶಾಸನದಲ್ಲಿ "ಎಲೆವಳ್ಳಿ"[೪೬] ಎಂದಿದೆ. ಕುಂಬಳೂರು ಕ್ರಿ.ಶ.೧೫೧೬ ರ ಶಾಸನದಲ್ಲಿ ಕುಂಬಲೂರ[೪೭] ಎಂದಿದೆ. ಕೊಕ್ಕನೂರು ಕ್ರಿ.ಶ. ೧೨೯೮ರ ಹರಿಹರ ಶಾಸನದಲ್ಲಿ ಕುಕನೂರ[೪೮] ಎಂದು ಹಾಗೂ ಕ್ರಿ.ಶ. ೧೧೬೨ರ ವಾಸನದ ಶಾಸನದಲ್ಲಿ ಕೊಕ್ಕಲೂರ[೪೯] ಎಂಬ ಹೆಸರಿನಿಂದ ಉಲ್ಲೇಖವಾಗಿದೆ. ನಿಟ್ಟೂರು ಕ್ರಿ.ಶ. ೧೦೩೮ರ ಶಾಸನದಲ್ಲಿ ನಿಟ್ಟೂರು[೫೦] ಎಂದೆ ಇದೆ. ಆದರೆ ಕ್ರಿ.ಶ. ೧೦೪೨ರ ಶಾಸನದಲ್ಲಿ "ನಿಟ್ಟಾರವೆ."[೫೧] ಎಂದಿದೆ.

ಪ್ರಾಕೃತಿಕ ಸ್ಥಳನಾಮವಾದ ಬನ್ನಿಕೋಡು ಐತಿಹಾಸಿಕ ಶಾಸನಸ್ಥ ಗ್ರಾಮ ಕ್ರಿ.ಶ. ೧೦೩೪ ರ ನಿಟ್ಟೂರು[೫೨] ಶಾಸನದಲ್ಲಿ 'ಬನ್ನಿಕೋಡುಂ' ಎಂದು ಉಲ್ಲೇಖಿಸಿದೆ. ಕ್ರಿ.ಶ. ೧೧೨೫೦[೫೩] ಶಾಸನದಲ್ಲಿ 'ಚಿಕಬನಿಕೋಡು' ಎಂದಿದೆ. ಕ್ರಿ.ಶ. ೧೪೧೦ರ ಹರಿಹರ[೫೪] ಶಾಸನದಲ್ಲಿ 'ಬನ್ನಿಕೋಡ ಸೀಮೆಯೊಳಗೆ ಹರಿದ್ರೆಯೆಂಬ ನದಿಯಕಟ್ಟೆ" ಎಂದು ಉಲ್ಲೇಖಗೊಂಡಿದೆ. ಬನ್ನಿಕೋಡು, ಚಿಕಬನ್ನಿಕೋಡು, ಬನ್ನಿಕೋಡು ಕಾಲಾಂತರದಲ್ಲಿಯು ಸಹ ಬನ್ನಿಕೋಡು ಎಂದೆ ಉಳಿದುಕೊಂಡು ಬಂದಿದೆ. ಸಸ್ಯವಾಚಕ ಸ್ಥಳನಾಮದಿಂದಿರುವ ಊರು ಎಲವಟ್ಟಿ, ಶಾಸನಗಳಲ್ಲಿ 'ಮಂಬೆತು. . . . ನೆಲೆವಿಡಿನಲ್ಲಿದ್ದಾಗ ಎಲವಟ್ಟಿಯ ಸೋಮೇಶ್ವರದೇವರ ನೈವೇದ್ಯಕಂ ನಾರಾಯಣ ದೇವರ ನೈವೇದ್ಯಕಂ[೫೫] ಎಂದಿದೆ. ನಂತರದ ಶಾಸನಗಳಲ್ಲಿ ಎರೆಹಿಟ್ಟಿ, ಎಡವಟ್ಟಿ, ಎಲೆವಟ್ಟಿ ಎಂಬುದಾಗಿ ಉಲ್ಲೇಖಿಸಿವೆ.

ಇಂದಿನ ಮಿಟ್ಲಕಟ್ಟೆ ಕ್ರಿ.ಶ. ೧೩೫೪ರ ಶಾಸನದಲ್ಲಿ 'ಮಿಟ್ಟಲಿಗನಕಟ್ಟೆ'[೫೫] ಎಂದಿದೆ. ಹಾಗೆಯೇ ಬೆಳ್ಳೂಡಿ ಗ್ರಾಮವನ್ನು ಶಾಸನಗಳಲ್ಲಿ ಬೆಳವಡಿ, ಬೆಳ್ವಡಿ, ಬೆಳುವಡಿ, ಎಂದೂ ಉಲ್ಲೇಖಿಸಿ ಪ್ರಸ್ತುತ ಬೆಳ್ಳೂಡಿಯಾಗಿದೆ. ಇಂದಿನ ವಾಸನವೂ ತಾಲೂಕಿನ ಹಲವಾರು ಶಾಸನಗಳಲ್ಲಿ, 'ಓಸನ' ಎಂದು ಉಲ್ಲೇಖವಾಗಿದೆ. ವಾಸನ> ಬಾಸನವಾಗಿ> ಬಾಸಿಂಗವಾಗಿದೆ. ಬಾಸಿಂಗಕ್ಕೆ ಪ್ರಸಿದ್ಧಿಯಾದ ಊರಾಗಿರಬಹುದೇ? ಹೀಗೆ ಸಾಲಕಟ್ಟೆ ಗ್ರಾಮವನ್ನು ಕ್ರಿ.ಶ. ೧೩೫೪ ರ ವಿಜಯನಗರ ಕಾಲದ ಶಾಸನದಲ್ಲಿ "ಯರಚುಗ್ರಮದಿಂ ಪಡೆವಲು ಸಾಲಕಟ್ಟೆ"[೫೬] ಎಂದಿದೆ ಇನ್ನೂ ಕೆಲವು ಶಾಸನಗಳಲ್ಲಿ "ಸಾಲಕಟ್ಟೆಭಿಧಾದ್ಗ್ರಾಯಾದುತ್ತ"[೫೭] ಎಂದಿದೆ. ಹೀಗೆಯೆ ಹನಗವಾಡಿಯು ಸಹ ಕ್ರಿ.ಶ. ೧೪೧೦ರ ಶಾಸನದಲ್ಲಿ 'ಹನಗವಾಡಿ' ಎಂದೇ ಇದೆ. ಹೀಗೆ ತಾಲೂಕಿನ ಇನ್ನೂ ಕೆಲವು ಗ್ರಾಮಗಳು ಶಾಸನಗಳಲ್ಲಿ ಉಲ್ಲೇಖವಾಗಿವೆ.

ತಾಲೂಕಿನ ಶಾಸನಗಳಲ್ಲಿ ಕಂಡು ಬರುವ "ಕರಂಜಪತ್ರ, ಪೆರ್ಗಾಗಾಮಾಸಿ, ಸಿರಿಗಾಳು, ಕುವ್ವೆಸುರಿಗೋಳ, ಪುಲಿವತ್ತು, ಪೆರ್ಬುತು, ಅಲ್ದೊರೆ, ಆಲ್ಗೋಳ, ನಿತ್ತಕೊಳ, ಎಡವೊಳಲ್. ಕಿರುಕಾಗಾಮಾಸಿ, ನೀರಿಲ್ಗೆರೆ, ಕುರುಪಕೆರೆ, ಅರಕಟ್ಟೆ[೫೮], ಮುಂತಾದ ಗ್ರಾಮಗಳ ಹೆಸರುಗಳು ಈ ತಾಲೂಕಿನಲ್ಲಿ ಕಂಡುಬರುವುದಿಲ್ಲ. ಬಹುಶಃ ಇವುಗಳು ಬದಲುಗೊಂಡು ಬೇರೆ ಹೆಸರಿನಲ್ಲಿ [ಶಾಂಕರಿಪುರವು ಮಾಜೇನಹಳ್ಳಿಯಾದಂತೆ, ಶಂಕರಹಳ್ಳಿ ಶೇರಾಪುರವಾದಂತೆ] ಪ್ರಚಲಿತದಲ್ಲಿರಬೇಕು. ಆದರೆ ಇದರಲ್ಲಿ' ಪುಲಿವತು' ಎಂಬ ಹೆಸರಿನಲ್ಲಿ ಗ್ರಾಮ ಬಹುಶಃ ಇದೇ ತಾಲೂಕಿನ 'ಹುಲುಗಿನ ಹೊಳೆ' ಇರಬಹುದು' ಇವುಗಳಲ್ಲದೆ ತಾಲೂಕಿನ ಶಾಸನಗಳಲ್ಲಿ ಬೇರೆ ತಾಲೂಕಿನ ಸ್ಥಳನಾಮಗಳು ಕಂಡು ಬರುತ್ತವೆ. ಉರುವತ್ತಿ[೫೯], (ಕುರುವತ್ತಿ) ಪೊಳಲು[೬೦] (ಹೊಳಲು) ಬೇತೂರು, ಕೇಕರಕೊಳ (ಕಕ್ಕರಗೊಳ) ಲೋಕಿಯಕೆರೆ[೬೧] ಕಂಚಿಗೆರೆ[೬೨] (ಕಂಚಿಕೆರೆ) ಕುಂದವಾಡ, ಚಿಕ್ಕಹದಡಿ, ಚಿಕ್ಕಹದಡಾಪರಾಜ್ಯ[೬೩](ಹದಡಿ), "ಸೇಬನೂರು (ಶಾಮನೂರು), ಬಾತಿ, ಯರಗುಂಡಿ[೬೪] ಈ ಗ್ರಾಮಗಳಲ್ಲಿ ಮೊದಲಿನ ಉರುವತ್ತಿ ಹಾಗೂ ವೊಳಲು ಗ್ರಾಮಗಳು ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ತಾಲೂಕಿನಲ್ಲಿ ಕಂಡು ಬಂದರೆ ಉಳಿದ ಸ್ಥಳಗಳು ದಾವಣಗೆರೆ ತಾಲೂಕಿನಲ್ಲಿ ಕಂಡುಬರುತ್ತವೆ.

ಉಚ್ಚಂಗಿ[೬೫](ಉಚ್ಚಂಗಿದುರ್ಗ), ದುರ್ಗತ್ತಿ[೬೬] (ದುಗ್ಗಾವತಿ) ಕಳತಿ[೬೭] (ಕಡತಿ) ಅರಸಿಕೇರೆ[೬೮] ಗ್ರಾಮಗಳು ಹರಪನಹಳ್ಳಿ ತಾಲೂಕಿನಲ್ಲಿ ಕಂಡುಬರುತ್ತವೆ. ಲಿಂಗದಹಳ್ಳಿ[೬೯] ಹರೋಸಗ್ರ[೭೦], ಮುದಹದಡಿ[೭೧] ಗ್ರಾಮಗಳು ಚನ್ನಗಿರಿ ತಾಲೂಕಿನಲ್ಲಿ ಕಂಡುಬರುತ್ತವೆ. ಕುಂದೂರು[೭೨] ಹಾಗೂ ಕೂಲಂಬಿ[೭೩] ಗ್ರಾಮಗಳು ಹೊನ್ನಾಳಿ ತಾಲೂಕಿನಲ್ಲಿ ಕಂಡುಬರುತ್ತವೆ. ರಟ್ಟಪಳ್ಳಿ[೭೪] (ರಟ್ಟಿಹಳ್ಳಿ) ಹಳ್ಳವೂರು[೭೫] (ಹಳ್ಳೂರು), ಹಾಗೂ ಸವಣೂರುಗಳು[೭೬] ಹಾವೇರಿ ಜಿಲ್ಲೆಯಲ್ಲಿ ಕಂಡುಬರುತ್ತವೆ. ಇವುಗಳಲ್ಲದೆ ಬೇಚಾರಕ್ ಗ್ರಾಮಗಳಾದಂತಹ ಈಗಲೂ ಅಲ್ಲಿ ಗ್ರಾಮವಿತ್ತಂತೆ ಎಂಬ ಹೇಳಿಕೆಗಳಿಂದ ಕೂಡಿದ ಹಾಗೂ ಆ ಸ್ಥಳಗಳಲ್ಲಿ ವಸತಿಗೆ ಸಂಬಂಧಿಸಿದ ಅನೇಕ ಕುರುಹುಗಳು ದೊರೆಯುವ ಸ್ಥಳಗಳಿವೆ. ಇದರ ಜೊತೆಗೆ ಕೆಲವು ಸ್ಥಳಗಳನ್ನು ಪತ್ತೆ ಹಚ್ಚಲಿಕ್ಕೆ ಆಗದೆ ಇರುವಂತಹ ಸ್ಥಳಗಳು

ಇವೆ. ಇನ್ನೂ ಸಮುದ್ರ, ಕೆರೆಗಳನ್ನು ಒಳಗೊಂಡ ಸ್ಥಳನಾಮಗಳು ಶಾಸನಗಳಲ್ಲಿ ಉಲ್ಲೇಖಿತವಾಗಿರುವುದು ವಿಶೇಷವಾಗಿದೆ. ಹಿರಿಯಕೆರೆ[೭೭] ಕುಪ್ಪುಗಡ್ಡೆ[೭೮] ಬಸವಸಮುದ್ರ[೭೯] ವಿಜಯಸಮುದ್ರ[೮೦] ಈ ಸ್ಥಳಗಳನ್ನು ಗುರುತಿಸುವುದು ಕಷ್ಟ ಸಾಧ್ಯವಾದರು. ಕಾಲಮಾನವಿಲ್ಲದ ಹಳ್ಳಿಹಾಳು ಶಾಸನದಲ್ಲಿ[೮೧] ಯಿಬ್ಬಯನಾಯ್ಕನ ತಂದೆ ಬುವೆನಾಯ್ಕನು ಶಿವಧೀನರಾದ ಪ್ರಯುಕ್ತ ಬುವಸಮುದ್ರ ಎನ್ನುವ ಕೆರೆಯನ್ನು ಕಟ್ಟಿಸಿದನು.[೮೨] ಎಂದು ಉಲ್ಲೇಖವಿದೆ.

ಈ ತಾಲೂಕಿನ ಶಾಸನಗಳಲ್ಲಿ ವಿಶೇಷವಾಗಿ ಬೇರೆ ರಾಜ್ಯಗಳ ಸ್ಥಳನಾಮಗಳನ್ನು ಉಲ್ಲೇಖಿಸಿರುವುದು ಗಮನಾರ್ಹ ಗೋವೆಯಾ[೮೩] (ಗೋವಾ) ಚಿದುಪುರಾಲು[೮೪] ಹಾಗೂ ವೇಲೂರು[೮೫] [ಅಂಧ್ರಪ್ರದೇಶ] ಗಳು ಉಲ್ಲೇಖವಾಗಿವೆ. ಹೀಗೆ ಅನೇಕ ರೀತಿಯ ಸ್ಥಳನಾಮಗಳು ದೊರೆಯುತ್ತವೆ. ಆದರೆ ಕೆಲವು ಶಾಸನಗಳಲ್ಲಿ ಸ್ಥಳನಾಮಗಳ ಹೆಸರುಗಳು ಕಂಡು ಬರುವುದಿಲ್ಲ ಬದಲಾಗಿ ಕೆಲವು ನಾಡುಗಳ, ಸೀಮೆಗಳ ಉಲ್ಲೇಖಗಳೂ ಇವೆ.

೩.೨ ರಾಜಕೀಯ ಇತಿಹಾಸ

ಹರಿಹರ ತಾಲೂಕು ಪ್ರಾಗಿತಿಹಾಸ ಕಾಲದಿಂದಲೂ ಮಾನವನ ಸಾಂಸ್ಕೃತಿಕ ಚಟುವಟಿಕೆಗಳ ನೆಲೆ ಬೀಡಾಗಿದೆ[೮೬] ಇದರೊಂದಿಗೆ ರಾಜಕೀಯ ಚರಿತ್ರೆಯು ಅಷ್ಟೇ ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ. ಹರಿಹರ ಪರಿಸರವನ್ನು ಅನೇಕ ರಾಜಮನೆತನಗಳು ಸಾಮಂತರು, ಮಹಾಮಂಡಳೇಶ್ವರರು ಮತ್ತು ಗಾವುಂಡರು ತಮ್ಮ ಅಧಿನಕ್ಕೆ ಒಳಪಡಿಸಿಕೊಂಡು ಆಳ್ವಿಕೆ ನಡೆಸಿದ್ದಾರೆ. ಅಲ್ಲದೆ ಈ ಪರಿಸರದಲ್ಲಿ ದೊರೆತ ಶಾಸನಗಳ ಆಕರಗಳನ್ನು ಪೂರಕವಾಗಿಟ್ಟುಕೊಂಡು ಆ ಮನೆತನಗಳ ರಾಜಕೀಯ ಚರಿತ್ರೆಯನ್ನು ವಿಶ್ಲೇಷಿಸಲಾಗಿದೆ. ಇಲ್ಲಿ ಆಳ್ವಿಕೆ ಮಾಡಿದ ರಾಜವಂಶಗಳ ಚರಿತ್ರೆಯನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ಬನವಾಸಿ ಕದಂಬರ ಪೂರ್ವ ಕಾಲದ ಇತಿಹಾಸ: ಕ್ರಿಪೂ. ೪ನೇ ಶತಮಾನದ ಪೂರ್ವದಲ್ಲಿ ಉತ್ತರದ ಸಾಮ್ರಾಜ್ಯ ಶಾಹಿಗಳಾದ ನಂದರು, ಶಿಶುನಾಗರು, ಕರ್ನಾಟಕದ ಕೆಲವು ಭಾಗಗಳನ್ನು ಆಳಿರುವುದಕ್ಕೆ ಆಧಾರಗಳಿವೆ. ನಂದರನ್ನು ಕೆಳಗುರುಳಿಸಿ. ಮೌರ್ಯರು ಅನುಕ್ರಮವಾಗಿ ದಕ್ಷಿಣ ಭಾರತವನ್ನು ಒಳಗೊಂಡ ಮಗಧ ರಾಜ್ಯದ ಒಡೆಯರಾದರೆಂದು ತಿಳಿದುಬರುತ್ತದೆ. ಕ್ರಿಶ ೧೨ನೇ ಶತಮಾನದ ಶಿಕಾರಿಪುರದ ಶಾಸನಗಳು ಉಲ್ಲೇಖಿಸುವಂತೆ ಆ ಪ್ರದೇಶದಲ್ಲಿ ಹಿಂದೆ ನಂದರ ಆಳ್ವಿಕೆಯಿದ್ದಿತೆಂಬುದನ್ನು ಸೂಚಿಸುತ್ತವೆ.[೮೭] ಕರ್ನಾಟಕದ ಚಿತ್ರದುರ್ಗ, ರಾಯಚೂರು. ಕೊಪ್ಪಳ, ಬಳ್ಳಾರಿ ಹಾಗೂ ಗುಲ್ಬರ್ಗ ಜಿಲ್ಲೆಯಲ್ಲಿ ಅಶೋಕನ ಕಾಲದ ಶಾಸನಗಳು ದೊರೆತಿವೆ. ಇವುಗಳಿಂದ ಈ ಪ್ರದೇಶಗಳು ಮೌರ್ಯ ಸಾಮ್ರಾಜ್ಯದ ಅಧೀನದಲ್ಲಿದ್ದುವೆಂದು ತಿಳಿದುಬರುತ್ತದೆ. ಇದರಿಂದ ಹರಿಹರ ಹಾಗೂ ಸುತ್ತಮುತ್ತಲಿನ ಪ್ರದೇಶಗಳು ಸಹ ಮೌರ್ಯರ ಅಧೀನಕ್ಕೊಳಗಾಗಿದ್ದವೆಂದು ಹೇಳಬಹುದು.[೮೮] ಇತ್ತೀಚಿಗೆ ನಡೆದ ಸಂಶೋಧನೆಗಳಿಂದ ಮೌರ್ಯ ಸಾಮ್ರಾಜ್ಯವು ಚಿತ್ರದುರ್ಗ ಜಿಲ್ಲೆಯ ಭಾಗಗಳಲ್ಲದೆ ಈಗೀನ ದಾವಣಗೆರೆ ಜಿಲ್ಲೆಯ ಕೆಲ ಪ್ರದೇಶಗಳನ್ನು ಒಳಗೊಂಡಿದ್ದಾಗಿಯೂ ತಿಳಿದು ಬಂದಿವೆ.[೮೯]

ಮೌರ್ಯ ಸಾಮ್ರಾಜ್ಯಕ್ಕೆ ಸೇರಿದ್ದೆಂದು ಹೇಳುವ ದಾವಣಗೆರೆಯ ಆಸಗೋಡು ಹಿಂದೆ ಅಶೋಕ ಪಟ್ಟಣವೆಂದು ಕರೆಯಲ್ಪಡುತ್ತಿತ್ತು. ಇಲ್ಲಿ ಬೌದ್ಧ ಧರ್ಮವು ಇದ್ದ ಬಗ್ಗೆ ದಾಖಲೆಗಳಿವೆ.[೭೮] ಮುಖ್ಯವಾಗಿ ಈ ಪರಿಸರದಲ್ಲಿ ಬೃಹತ್ ಶಿಲಾಯುಗದ ಸಮಾಧಿಗಳನ್ನು ಜನರು ಮೋರಿಯರ ಮನೆ ಅಥವಾ ಪಾಂಡವರ ಮಟ್ಟೆ ಎಂದು ಕರೆಯುತ್ತಿರುವುದು ಅರ್ಥಪೂರ್ಣವಾಗಿದೆ ಇಂಥದೊಂದು ಮಾಹಿತಿ ಹರಿಹರದ ಒಂದು ಶಾಸನದಲ್ಲಿ ಗಡಿಕಲ್ಲುಗಳನ್ನು ಹೇಳುವ ಸಂದರ್ಭದಲ್ಲಿ "ಪಾಂಡವರ ಮರಡಿ ಮೇಲೆ ನೆಟ್ಟ ಕಲ್ಲು"[೭೯] ಎಂಬ ಅಂಶವನ್ನು ಉಲ್ಲೇಖಿಸುತ್ತದೆ. ಬಹುಶಃ ಇದು ಕೂಡ ಮೌರ್ಯರ ಕುರುಹಾಗಿ ಇಲ್ಲಿ ನಮಗೆ ಸಿಗುತ್ತದೆ. ಶಾಸನದಲ್ಲಿ ಉಲ್ಲೇಖವಾದ ದಿಕ್ಕಿಗೆ ಈಗ ಅ ಮಟ್ಟಗಳು ಕಾಣಿಸುವುದಿಲ್ಲ. ಆಧುನಿಕ ನೀರಾವರಿ ಅದನ್ನು ತಿಂದು ಹಾಕಿದೆ. ದಾವಣಗೆರೆ ಜಿಲ್ಲೆಯ ಶಾಮನೂರು, ಬೇತೂರು, ಆಸಗೋಡುಗಳಲ್ಲಿ ಬೌದ್ಧರಿಗೆ ಸಂಬಂಧಿಸಿದ ಕೆಲ ಅವಶೇಷಗಳು ದೊರೆತಿವೆ.[೮೦] ಈ ಜಿಲ್ಲೆಯ ಸಮೀಪದ ಸ್ಥಳಗಳಲ್ಲಿ ಮೌರ್ಯರ ಆಳ್ವಿಕೆಗೆ ಸಂಬಂಧಪಟ್ಟ ಆಧಾರಗಳು ದೊರೆತಿರುವುದರಿಂದ ಹರಿಹರ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳು ಮೌರ್ಯ ಸಾಮ್ರಾಜ್ಯದ ಭಾಗವಾಗಿದ್ದು ಅವರ ದಕ್ಷ ಆಡಳಿತ ಪದ್ಧತಿಯಿಂದ ಪ್ರಯೋಜನ ಹೊಂದಿದವೆನ್ನಬಹುದು ಹಾಗೆಯೇ ಅವರ ಸಾಂಸ್ಕೃತಿಕ ಪರಂಪರೆಯ ವ್ಯಾಪ್ತಿಗೆ ಒಳಗಾದವು.

ಮೌರ್ಯರ ನಂತರ ಕ್ರಿ.ಪೂ. ೨೦೦ ಕ್ರಿ.ಶ. ಸುಮಾರು ೨೩೦ರವರೆಗೆ ಅಂದರೆ ಸುಮಾರು ೪೫೦ ವರ್ಷಗಳ ದೀರ್ಘಕಾಲ ಶಾತವಾಹನರು ಭಾರತದಲ್ಲಿ ಆಳ್ವಿಕೆ ನಡೆಸಿದ್ದಾರೆ. ಡಾ. ಸುಕುಂಥಕರ್ ಅವರು ಶಾತವಾಹನರ ಕುಟುಂಬ ಕನ್ನಡ ಪ್ರದೇಶದಿಂದ ಬಂದಿದೆ ಎಂದು ಹೇಳಿದ್ದಾರೆ[೮೧] ಕರ್ನಾಟಕದ ಬಹುಭಾಗವನ್ನಾಳಿದ ಮೊಟ್ಟ ಮೊದಲನೆಯ ಪ್ರಮುಖ ರಾಜವಂಶದವರಾದ ಈ ಶಾತವಾಹನರು ತಮ್ಮನ್ನು 'ಕುಂತಳಸ್ವಾಮಿ'ಗಳೆಂದು ಕರೆದುಕೊಂಡಿದ್ದರು[೮೨] ದಾವಣಗೆರೆ ಜಿಲ್ಲೆಯ ಹರಿಹರ ಪರಿಸರದಲ್ಲಿ ಶಾತವಾಹನರ ಆಳ್ವಿಕೆ ಬಗ್ಗೆ ಶಾಸನಗಳು ದೊರೆತಿಲ್ಲ. ಆದರೆ ಬಳ್ಳಾರಿ ಜಿಲ್ಲೆಯ ಪುಲಮಾಯಿ ಶಾಸನದಿಂದ ಶಾತವಾಹನರ ಕೊನೆಯ ಅರಸರು ತಮ್ಮ ಆಳ್ವಿಕೆಯನ್ನು ಇಲ್ಲಿಯವರೆಗೆ ವಿಸ್ತರಿಸಿದ್ದರೆಂದು ಹೇಳಬಹುದು.[೮೩] ದಾವಣಗೆರೆ ಸುತ್ತಮುತ್ತಲಿನಲ್ಲಿ ನಡೆದ ಶೋಧಗಳಿಂದಾಗಿ ಶಾತವಾಹನರ ಬಗೆಗೆ ಅನೇಕ ಮಹತ್ವದಾಯಕ[೮೪] ಅಂಶಗಳು ತಿಳಿದು ಬಂದಿವೆ. ಚಿತ್ರದುರ್ಗ, ಚಿಪ್ಪಿನಕೆರೆ, ಬ್ರಹ್ಮಗಿರಿ, ಚಂದ್ರವಳ್ಳಿಗಳಲ್ಲಿ ನಡೆದ ಶೋಧನೆ ಮತ್ತು ಉತ್ಖನನಗಳಿಂದಾಗಿ ಶಾತವಾಹನರ ಆಳ್ವಿಕೆಯ ಮೇಲೆ ಹೆಚ್ಚಿನ ಬೆಳಕು ಬೀರಿದಂತಾಗಿದೆ. ದಾವಣಗೆರೆ ಜಿಲ್ಲೆ ಜಗಲೂರು ತಾಲೂಕಿನ ಅಕನೂರು, ಹಾಗೂ ಹೊನ್ನಾಳಿ ತಾಲೂಕಿನ ಬೆಳಗುತ್ತಿಯಲ್ಲಿ ಇವರ ಕಾಲಕ್ಕೆ ಸೇರಿದ ಮಡಿಕೆ ಚೂರುಗಳು ದೊರಕಿವೆ. ಕದಂಬರಿಗೂ ಪೂರ್ವದಲ್ಲಿ ಆಳ್ವಿಕೆ ನಡೆಸಿದ ನಂದರು, ಶಿಶುನಾಗರು, ಮೌರ್ಯರು ಹಾಗೂ ಶಾತವಾಹನರಿಗೆ ಸೇರಿದ ದಾಖಲೆಗಳು ನೇರವಾಗಿ ಸಿಗದೆ ಹೋದರೂ ಸಮೀಪದ ಚಿತ್ರದುರ್ಗ ಜಿಲ್ಲೆಯಲ್ಲಿ ಹೆಚ್ಚು ಸ್ಪಷ್ಟವಾದ ಆಧಾರಗಳು ದೊರೆತಿವೆ ಭೌಗೋಳಿಕವಾಗಿ, ರಾಜಕೀಯವಾಗಿ, ಸಾಂಸ್ಕೃತಿಕವಾಗಿ

ಪ್ರಾಚೀನ ಕಾಲದಿಂದಲೂ ಚಿತ್ರದುರ್ಗ ವ್ಯಾಪ್ತಿಗೆ ಒಳಪಟ್ಟಿದ್ದು ಹರಿಹರವು ಕೂಡ ಮೇಲಿನ ಮನೆತನಗಳ ಆಳ್ವಿಕೆಗೆ ಒಳಪಟ್ಟಿತ್ತು ಎಂದು ಹೇಳಬಹುದು.

ಬನವಾಸಿ ಕದಂಬರು: ಕರ್ನಾಟಕದಲ್ಲಿ ಕನ್ನಡಿಗರಿಂದ ಸ್ಥಾಪಿತವಾದ ಪ್ರಪ್ರಥಮ ರಾಜಮನೆತನವೆಂದೆ ಬನವಾಸಿಯ ಕದಂಬವಂಶ ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲೂಕಿನ ಬನವಾಸಿ ಇವರ ರಾಜಧಾನಿಯಾಗಿತ್ತು. ರಾಮಾಯಣ, ಮಹಾಭಾರತಕಾವ್ಯಗಳಲ್ಲಿ ವನವಾಸಿಕ ಮತ್ತು ಕುಂತಲ ಎಂಬ ಶಬ್ದಗಳನ್ನು ಈ ಪ್ರದೇಶಕ್ಕೆ ಬಳಸಲಾಗಿದೆ. ವನವಾಸಿ, ವೈಜಂತಿ, ಜಯಂತಿಪುರ, ಕನಕಾವತಿ ಎಂದು ಕರೆಯಲ್ಪಡುತ್ತಿದ್ದ ಬನವಾಸಿ ಪ್ರದೇಶಕ್ಕೆ ಅಶೋಕನು ಬೌದ್ಧಧರ್ಮದ ಪ್ರಚಾರಕ್ಕಾಗಿ ತನ್ನ ಭಿಕ್ಷುಗಳಾದ ರಕ್ಷಿತನೆಂಬುವವನನ್ನು ಕಳುಹಿಸಿದನೆಂದು ಉಲ್ಲೇಖವಿದೆ.[೧೬] ಮೌರ್ಯ, ಶಾತವಾಹನ ಆಳ್ವಿಕೆ ಮುಕ್ತಾಯಗೊಂಡ ನಂತರ ಅವರ ಸಾಮ್ರಾಜ್ಯ ಹರಿದು ಹಂಚಿಹೋಗುತ್ತಿದ್ದ ಕಾಲದಲ್ಲಿಯೇ ಈ ಸಾಮ್ರಾಜ್ಯದ ದಕ್ಷಿಣ ಮತ್ತು ಪಶ್ಚಿಮ ಭಾಗಗಳ ಒಡೆತನವನ್ನು ಆಗತಾನೆ. ತಲೆ ಎತ್ತಿದ ಕದಂಬರ ವಶವಾಯಿತು. ಹೇಗೆ ಕದಂಬರ ಅಧೀನಕ್ಕೊಳಪಡುವ ಪ್ರದೇಶಗಳಲ್ಲಿ ಹರಿಹರ ಪ್ರದೇಶವು ಒಂದಾಗಿತ್ತು ಕದಂಬ ರಾಜ್ಯ ಸ್ಥಾಪಕನೆಂದು ಕೀರ್ತಿ ಪಡೆದ ಮಯೂರಶರ್ಮ ವಿದ್ಯಾಭ್ಯಾಸಕ್ಕೆ ಪಲ್ಲವ ರಾಜ್ಯಕ್ಕೆ ಅಂದರೆ ಕಂಚಿಗೆ ಹೋಗಿ ಅಲ್ಲಿ ತನಗಾದ ಅವಮಾನದ ಸೇಡು ತೀರಿಸಿಕೊಳ್ಳಲು ಪಲ್ಲವರೊಡನೆ ಹೋರಾಡಿ ಸ್ವಾತಂತ್ರ್ಯವಾದ ರಾಜ್ಯ ಸ್ಥಾಪಿಸಿದ ವಿವರ ತಾಳಗುಂದದ ಶಾಂತಿವರ್ಮನ ಶಾಸನದಲ್ಲಿ[೧೭] ಉಲ್ಲೇಖವಾಗಿದೆ.

ಈ ರಾಜಮನೆತನಕ್ಕೆ ಸಂಬಂಧಿಸಿದಂತೆ ಚಿತ್ರದುರ್ಗದ ಚಂದ್ರವಳ್ಳಿ, ದಾವಣಗೆರೆ, ಅಣಜಿ, ಕಾಶಿಪುರ, ಗ್ರಾಮಗಳ ಶಾಸನಗಳಲ್ಲಿ ಕದಂಬ ಅರಸರ ಉಲ್ಲೇಖಗಳಿವೆ. ಆದರೆ ಕ್ರಿ.ಶ. ಸುಮಾರು ೬ನೇ ಶತಮಾನದವರೆಗೆ ಆಳಿದ ಪೂರ್ವ ಕದಂಬರು ಬಹುಶಃ ಚಾಲುಕ್ಯರಿಗೆ ಸೋತು ಹಿಮ್ಮೆಟ್ಟಿದ್ದರು[೧೮] ಆದರೂ ಅವರ ಮನೆತನದ ಕೆಲವು ಸಣ್ಣಮಟ್ಟ ಅರಸರು ಈ ಪ್ರದೇಶದಲ್ಲಿ ಪ್ರಾಬಲ್ಯ ಅರಸರ ಸಾಮಂತರಾಗಿ ಆಳುತ್ತಿದ್ದ ಕುರುಹುಗಳಾಗಿ ಕಾಣುತ್ತವೆ. ಸೋಮನೃಪನೆಂಬ ಕದಂಬ ರಾಜನು ಕಳಚೂರಿ ಬಿಜ್ಜಳನ ಆಳ್ವಿಕೆಯಲ್ಲಿ ಬನವಾಸಿಯನ್ನು ಆಳುತ್ತಿದ್ದ ಕಸಪಯ್ಯನ ಆಧೀನನಾಗಿದ್ದು, ನಾಗರಖಂಡ ೭೦ರ ಮನ್ನೆಯಕ್ಕೆ ಅಧಿಪತಿಯಾಗಿದ್ದನು ಹರಿಹರದಲ್ಲಿರುವ ಇವನ ಶಾಸನವೊಂದು[೧೯] ಕದಂಬ ವಂಶದ ಉಗಮವನ್ನು ತಿಳಿಸುತ್ತದೆ. ಮಯೂರವರ್ಮನು ಕದಂಬ ವೃಕ್ಷದ ಅಡಿಯಲ್ಲಿ ರುದ್ರ ಮತ್ತು ವಸುಂಧರೆಗೆ ಜನಿಸಿದನಂತೆ. ಅವನ ಲಲಾಟದಲ್ಲಿ ನೇತ್ರವಿದ್ದುದರಿಂದ ಕಿರೀಟವವನ್ನು ಬಿಗಿಯಲು ಸಾಧ್ಯವಾಗಲಿಲ್ಲವಂತೆ ಆದ್ದರಿಂದ ಅದನ್ನು ಮಂಡಿಗೆ ಕಟ್ಟಲಾಯಿತಂತೆ ಅವನು ಕದಂಬ ವೃಕ್ಷದ ನೆರಳಿನಲ್ಲಿ ಬೆಳೆದ ಮೇಲೆ ಅವರ ವಂಶಕ್ಕೆ ಕದಂಬ ಎಂಬ ಹೆಸರು ಬಂದಿತಂತೆ ಈ ಮುಕ್ಕಣ್ಣ ಕದಂಬ ಮಮೂರವರ್ಮನ ನಂತರ ಅನೇಕರು ಆಳಿದ ಮೇಲೆ ಬರ್ಮದೇವನು ಆಳಿದನು. ಆ ಬರ್ಮದೇವ ಮತ್ತು ಕಾಳದೇವಿಗೆ ಬೊಪ್ಪದೇವ ಭೂಪನೂ. ಆ ಬೋಪ್ಪದೇವ ಮತ್ತು ಸಿರಿದೇವಿಗೆ ಸೋಯಿದೇವನೂ ಹುಟ್ಟಿದರು. ಈ ಸೋಮನೃಪನು ತತಿವಿತಾಗತ ವಾದ್ಯ ಶೃತಿ, ಸ್ವರ, ಗ್ರಾಮ, ಮೂರ್ಛನಾ ತಾನ ಮತ್ತು ಗಾನ ಭೇದಗಳಲ್ಲಿ ಅತಿ ಚತುರನೂ ಭರತನಿಗೆ ಸಮಾನನೂ ಆಗಿದ್ದನೆಂದು ಶಾಸನ ತಿಳಿಸುತ್ತದೆ.

ಹರಿಹರಕ್ಕೆ ಸಮೀಪವಿರುವ ಉಚ್ಚಂಗಿದುರ್ಗದಿಂದ ಆಳಿದ ಬನವಾಸಿಯ ಪುರವರಾಧೀಶ್ವರರೆಂದು ಬಣ್ಣಿಸಿಕೊಂಡಿರುವ ಉಚ್ಚಂಗಿ ಕದಂಬರ ಶಾಸನಗಳು ಇಲ್ಲಿಯೂ ದೊರೆತಿದ್ದು ಉಚ್ಚಂಗಿಯಲ್ಲಿ ಆಳುತ್ತಿದ್ದ ವಿಜಯಪಾಂಡ್ಯನ ಸಾಮಂತನಾದ ನಾಗತಿಯರಸ ಎಂಬ ಕದಂಬ ರಾಜನ ಹೆಸರು ಹತ್ತಿರದ ನಂದಿಕಂಬ ಗ್ರಾಮದಲ್ಲಿ ದೊರೆತ ಶಾಸನದಲ್ಲಿ ಕಂಡುಬರುತ್ತದೆ. ಈ ನಾಗತಿಯರಸ ಕದಂಬ ಚಕ್ರವರ್ತಿ ಮಯೂರವರ್ಮನ ವಂಶದವನೆಂದೂ ಉಚ್ಚಂಗಿ ಗಿರಿನಾಥನೆಂದೂ ಹೇಳಿಕೊಂಡಿದ್ದಾನೆ. ಕದಂಬ ಸಾವಿರ ನಾಡಿಗೆ ಮನ್ನೆಯನಾಗಿದ್ದನು. ತಂದೆ ಕೇತರಸ. ತಾಯಿ ಕನಕಬ್ಬೆಯರಸಿ ಈತನು ಶಂಕರನಾರಾಯಣ ಪಾದ ಪಂಕಜ ಭೃಮರನಾಗಿದ್ದು. ಹರಿಹರದ ಹರಿಹರೇಶ್ವರ ದೇವರಿಗೆ ಕೆಲವು ದತ್ತಿಗಳನ್ನ ಬಿಟ್ಟಿದ್ದಾನೆ.[೧೦೦] ಹೀಗೆ ಹರಿಹರ ಪರಿಸರದಲ್ಲಿ ಆಳ್ವಿಕೆ ಮಾಡಿದ ಕದಂಬರು ಮುಂದೆ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಕೋಗಳಿ-೫೦೦ ರ ಮಹಾಮಂಡಳೇಶ್ವರರಾಗಿದ್ದರು.

ಬಾದಾಮಿ ಚಾಲುಕ್ಯರು: ಬನವಾಸಿ ಕದಂಬರ ನಂತರ ಅಧಿಕಾರಕ್ಕೆ ಬಂದು ಕ್ರಿ.ಶ. ೫೪೩ ರಿಂದ ೭೫೭ರ ವರೆಗೆ ಆಳ್ವಿಕೆ ಮಾಡಿದರು. ಚಾಲುಕ್ಯರು ಈ ಪ್ರದೇಶದ ಮೇಲೆ ಅಧಿಕಾರ ಸ್ಥಾಪಿಸಿದ್ದರೂ, ಅವರ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಕಾರ್ಯ ಚಟುವಟಿಕೆಗಳು ಬಾದಾಮಿಯ ಸುತ್ತಮುತ್ತ ಕೇಂದ್ರೀಕೃತವಾಗಿದ್ದುದು ಅಲ್ಲಿಯ ಶಾಸನಗಳು ಮತ್ತು ವಾಸ್ತುಶಿಲ್ಪ ಕಲೆಯಿಂದ ಸ್ಪಷ್ಟವಾಗುತ್ತದೆ. ಕ್ರಿ.ಶ. ೬೯೪ರ ವಿನಯಾದಿತ್ಯನ ಹರಿಹರದ ತಾಮ್ರಪಟ ಶಾಸನದಲ್ಲಿ[೧೦೧] ಬಾದಾಮಿ ಚಾಲುಕ್ಯ ವಂಶದ ಉಗಮ ಹಾಗೂ ಶಾಸನದ ವಿವರಗಳು ತಿಳಿದುಬರುತ್ತವೆ. ಚಾಲುಕ್ಯರು ಮಾನವ್ಯಗೋತ್ರದವರು, ಹಾರಿತೀಪುತ್ರರು, ಏಳು ಲೋಕಗಳಿಗೂ ತಾಯಂದಿರಾದ ಸಪ್ತಮಾತೃಕೆಯರಿಂದ ಏಳಿಗೆಯನ್ನು ಪಡೆದವರು, ಕಾರ್ತಿಕೇಯನಿಂದ ಹೊಂದಿದ ಕಲ್ಯಾಣ ಪರಂಪರೆಯುಳ್ಳವರು ಭಗವಂತನಾದ ನಾರಾಯಣನ ಅನುಗ್ರಹದಿಂದ ಪಡೆದ ವರಾಹ ಲಾಂಛನವನ್ನು ಶತ್ರುಗಳು ಕಂಡಾಕ್ಷಣವೇ ಸೋತ ಕಾರಣದಿಂದ. ಸಮಸ್ತ ಭೂಮಂಡಲವನ್ನು ಗೆದ್ದವರು. ಎಂದಿದೆ.

ಲೋಕ ಪ್ರಸಿದ್ಧಿಯಾದ ಒಂದನೆಯ ಪುಲಕೇಶಿ ರಾಜನ ಮಗನಾದ ಒಂದನೆಯ ಕೀರ್ತಿವರ್ಮ ತನ್ನ ಪರಾಕ್ರಮದಿಂದ ಬನವಾಸಿಯ ರಾಜರನ್ನು ಗೆದ್ದು ಅವರನ್ನು ತನ್ನ ಸಾಮಂತರನ್ನಾಗಿ ಮಾಡಿಕೊಂಡನು. ಇವನ ಮಗ ಯುದ್ಧಾಸಕ್ತನಾದ ಉತ್ತರಾಪಥದ ಶ್ರಿಹರ್ಷನನ್ನು ಗೆದ್ದು ಪರಮೇಶ್ವರನೆಂಬ ಬೇರೊಂದು ಹೆಸರನ್ನು ಪಡೆದು ಸತ್ಯಾಶ್ರಯ ಶ್ರೀಪೃಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಇಮ್ಮಡಿ ಪುಲಕೇಶಿ [ಶಾಸನದಲ್ಲಿ ಬಿರುದಿದೆ ಆದರೆ ಹೆಸರಿಲ್ಲ] ಇವನ ಮಗ ವಿಕ್ರಮಾದಿತ್ಯ ಪರಮೇಶ್ವರ ಭಟ್ಟಾರಕ ತನ್ನ ಸಹಾಸ ಪರಾಕ್ರಮಗಳಿಂದ ತನ್ನ ವಂಶದ ಅಧಿಕಾರವನ್ನು ಮರಳಿ ಪಡೆದುಕೊಂಡವನು ಪಲ್ಲವ ರಾಜರನ್ನು ಪರಿಭವಿಸಿದ ನಂತರ ಕಾಂಚೀಪುರವನ್ನು ವಶಪಡಿಸಿಕೊಂಡವನು. ತನ್ನ ಪ್ರಭಾವವೆಂಬ ವಜ್ರಾಯುಧದಿಂದ ಚೋಳ, ಪಾಂಡ್ಯ, ಕೇರಳರಾಜರ ಮಾನಸ್ತಂಭವನ್ನು ಮುರಿದವನು ಇವನ ಮಗನೆ ವಿನಯಾದಿತ್ಯ ಸತ್ಯಾಶ್ರಯ ಪೃಥ್ವೀವಲ್ಲಭ ಮಹಾರಾಜ ಪರಮೇಶ್ವರ ಭಟ್ಟಾರಕ ಇವನು ಪಟ್ಟ ವೇರಿದ

ಹದಿನಾಲ್ಕನೆಯ ವರ್ಷದಲ್ಲಿ ಹರಿಹರ (ಹರೀಷಪುರ) ದ ಸಮೀಪದ ಕರಂಜಪತ್ರ ಗ್ರಾಮದಲ್ಲಿ ಜೀಡುಬಿಟ್ಟಿದ್ದಾಗ ಸಾಮಂತ ಆಳುಪ ದೊರೆಯ ವಿಜ್ಞಾಪನೆಯಂತೆ ಸೋಮಯಾಜಿ ಶ್ರೀ ಶರ್ಮನ ಮೊಮ್ಮಗ, ಮಾರಶರ್ಮನ ಪುತ್ರ ಈಶಾನ ಶರ್ಮನಿಗೆ ಬನವಾಸಿ ಪ್ರಾಂತ್ಯದ ಎಡೆವೊಳಲ್ ಭಾಗದ 'ಕಿರುಕಾಗಾಮಾಸಿ' ಹಾಗೂ 'ಪೆರ್ಗಾಗಾಮಾಸಿ' ಎಂಬ ಗ್ರಾಮಗಳನ್ನು ದಾನಮಾಡಲಾಗಿದೆ.

ಶಾಸನದಲ್ಲಿ ಚಾಲುಕ್ಯ ರಾಜರ ಪರಾಕ್ರಮವನ್ನು ಸಹ ತಿಳಿಸಿದೆ. ಮೊದಲನೆಯ ಪುಲಕೇಶಿ ಅಶ್ವಮೇಧಯಾಗವನ್ನು ಮಾಡಿದ ವಿಷಯ ಅವನ ಸಾಮಾರ್ಥ್ಯಕ್ಕೆ ದ್ಯೋತಕವಾಗಿದೆ. ಇಮ್ಮಡಿ ಪುಲಿಕೇಶಿ ಹರ್ಷನನ್ನು ಗೆದ್ದ ವಿಷಯ, ಪಲ್ಲವರ ನರಸಿಂಹವರ್ಮನು ವಾತಾಪಿಯನ್ನು ಆಕ್ರಮಿಸಿಕೊಂಡು ಕೆಲವು ಕಾಲ ಅಲ್ಲಿ ತಂಗಿದ್ದನು, ಪಲ್ಲವರಿಂದ ಚಾಲುಕ್ಯರಿಗೆ ಆದ ಅಪಮಾನವನ್ನು ಪರಿಹರಿಸಿ, ಪಲ್ಲವ ರಾಜನನ್ನು ಪಾದಾಕ್ರಾಂತನನ್ನಾಗಿ ಮಾಡಿಕೊಂಡವನು, ಎರಡನೇಯ ಪುಲಕೇಶಿಯ ಮಗ ವಿಕ್ರಮಾದಿತ್ಯ, ವಿಕ್ರಮಾದಿತ್ಯನಿಗೆ ಬಲಭುಜವಾಗಿ ನಿಂತು ಅವನಿಗೆ ಸಹಾಯ ಮಾಡಿದನು ಅವನ ಮಗ ವಿನಯಾದಿತ್ಯ, ಈ ಶಾಸನದಿಂದ ವಿನಯಾದಿತ್ಯನ ರಾಜನೀತಿ ಪರಾಕ್ರಮ, ರಾಜ್ಯ ವಿಸ್ತಾರದ ಸ್ವರೂಪಗಳು ತಿಳಿದುಬರುತ್ತವೆ.

ಆಳುಪರು: ಕ್ರಿ.ಶ. ಅದಿಯಿಂದ ೧೫ನೇ ಶತಮಾನದವರೆಗೆ ಆಳಿದ ಅವರ ಇತಿಹಾಸವು ಅತ್ಯಂತ ದೀರ್ಘವೂ ಉಜ್ವಲವೂ ಆದುದು. ಅವರದು ದಕ್ಷಿಣ ಭಾರತದ ಪ್ರಾಚೀನ ರಾಜಮನೆತನಗಳಲ್ಲೊಂದು. ರಾಜಪೀಠವೊಂದು ಸಾರೋದ್ಧಾರವಾಗಿ ಅಷ್ಟೊಂದು ದೀರ್ಘಕಾಲ ಒಂದು ಪ್ರದೇಶವನ್ನು ಆಳಿದ ಉದಾಹರಣೆ ಭಾರತದಲ್ಲಿ ಮತ್ತೆಲ್ಲಿಯೂ ಇಲ್ಲವೆಂದೂ ಇತಿಹಾಸಕಾರರು ಹೇಳಿದ್ದಾರೆ. ಸಪ್ತಕೊಂಕಣಗಳಲ್ಲೊಂದೆನಿಸಿದ ಆಲುವವೆಂಬ ತುಳುನಾಡೇ ಆಳುಪರಾಳಿದ ನಾಡು ಮುಂದೆ ಅದು ಆಳ್ವಖೇಡ ಆರು ಸಾವಿರ ಎಂದು ಪ್ರಸಿದ್ಧವಾಯಿತು.[೧೦೨] ಆಳುವರು ಆಳಿದ ನಾಡು ಆಳುವಖೇಡ, ಆಳ್ವಖೇಡ ಎಂದೆನಿಸಿತು. ಆಳುವ ಎಂಬುದೇ ಮುಂದೆ ಆಳುಪುರ ಎಂಬ ರೂಪವನ್ನು ಪಡೆದುಕೊಂಡಿತು ಇಂದು ಆಳ್ವ ಎಂದು ಪ್ರಸಿದ್ಧವಾಗಿರುವ ಬಂಟ ಜನಾಂಗದ ನಡುವಣ ಉಪನಾಮವು ಆಳುವ, ಆಳುಪ ಎಂಬುದರ ರೂಪವೇ ಆಗಿದೆ.[೧೦೩]

ಆಳ್ವಖೇಡದ ಗಡಿಗಳು ಎಲ್ಲಿಂದ ಎಲ್ಲಿಯವರೆಗೆ ಹಬ್ಬಿದ್ದುವೆಂಬುದನ್ನು ನಿರ್ಧಾರ ಪೂರ್ವಕವಾಗಿ ಹೇಳುವುದು ಸಾಧ್ಯವಿಲ್ಲ. ದಕ್ಷಿಣ ಕನ್ನಡವಲ್ಲದೆ ಇಂದಿನ ಉತ್ತರ ಕನ್ನಡದ ಭಟ್ಕಳ, ಹೊನ್ನಾವರಗಳವರೆಗೂ ಅದು ಹಬ್ಬಿತ್ತು. ಮಂಗಲಪುರವೆಂಬ ಮಂಗಳೂರು, ಉದಯಪುರವೆಂಬ ಉದ್ಯಾವರ, ಬಾರಹಕನ್ಯಾಪುರವೆಂಬ ಬಾರಕೂರು, ವೇಣುಪುರವೆಂಬ ಮೂಡುಬಿದಿರೆ ಅವರ ರಾಜಧಾನಿಗಳಾಗಿದ್ದುವು. ಕಾಲದಿಂದ ಕಾಲಕ್ಕೆ ಕರ್ನಾಟಕದ ಕೀರ್ತಿಯನ್ನು ಎತ್ತಿಹಿಡಿದ ಬನವಾಸಿಯ ಕದಂಬರು, ಬಾದಾಮಿಯ ಚಾಲುಕ್ಯರು, ಮಾನ್ಯಖೇಟದ ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ದ್ವಾರಸಮುದ್ರದ ಹೊಯ್ಸಳರು, ವಿಜಯನಗರದ ಅರಸರ ಸಾರ್ವಭೌಮತ್ವವನ್ನು ಒಪ್ಪಿಕೊಂಡು ಅವರ ಸಾಮಂತರಾಗಿ ತಮ್ಮ ಸ್ವಾತಂತ್ರ್ಯಕ್ಕೆ ಲೋಪವಿಲ್ಲದೆ. ರಾಜ್ಯವಾಳಿದ್ದಾರೆ.[೧೦೪] ಆಳುಪ ಮನೆತನಗಳನ್ನು ಇತಿಹಾಸಕ್ಕೆ ಜೋಡಿಸುವ ಕೆಲವು ಕೊಂಡಿಗಳು ಕ್ರಿಶ. ೫ನೇಯ ಶತಮಾನದ

ಶಾಸನಗಳಿಂದ ಮುಂದಕ್ಕೆ ಕಾಣಿಸಿಕೊಂಡಿವೆ. ಮೊದಲಿಗೆ ಅವರು ಬನವಾಸಿಯ ಕದಂಬರ ಸಾಮಂತರಾಗಿ ಆಳುತ್ತಿದ್ದರು. ಕನ್ನಡದ ಮೊತ್ತ ಮೊದಲನೆಯ ಕ್ರಿ.ಶ. ೪೫೦ ಹಲ್ಮಿಡಿ ಶಾಸನದಲ್ಲಿ ಉಲ್ಲೇಖವಾಗಿರುವ 'ಆಳಪಗಣ' ಎಂಬ ಮಾತು ಆಳುಪ ಮನೆತನವನ್ನೇ ಸೂಚಿಸುವಂತಿದೆ. ಕ್ರಿ.ಶ. ೬ನೇ ಶತಮಾನದ ಆರಂಭಕಾಲಕ್ಕೆ ಸೇರಬಹುದಾದ ಕದಂಬದೊರೆ ರವಿವರ್ಮನ (ಸು.೪೮೫–೫೧೯) ಬನವಾಸಿ ಬಳಿಯ ಗುಡ್ನಾಪುರ ಸಂಸ್ಕೃತ ಶಾಸನದಲ್ಲಿ "ಗಂಗಪುನ್ನಾಟ ಕೊಂಗಾಳ ಪಾಂಡ್ಯಾಲುಪಾದಯಃ" ಎಂದು ಬಂದಿರುವ ಮಾತಿನ ಕೊನೆಯಲ್ಲಿ ಅಳುಪರಿದ್ದಾರೆ, ಅಲ್ಲಿ ಅವರು ಕಂದಬರ ಸಾಮಂತರಾಗಿದ್ದರೆಂಬ ಸೂಚನೆಯಿದೆ. ಕ್ರಿ.ಶ. ೬ನೇಯ ಶತಮಾನದ ಉತ್ತರಾರ್ಧದಲ್ಲಿ ಬಾದಾಮಿಯ ಚಾಲುಕ್ಯರ ರಾಜ್ಯವು ಸ್ಥಾಪನೆಗೊಂಡಾಗ ಆಳುಪರು ಅವರಿಗೆ ಸಾಮಂತರಾದರು ಆ ಪರಂಪರೆಯ ಒಂದನೆಯ ಕೀರ್ತಿವರ್ಮನು ಆಳುಕ ಮತ್ತು ವೈಜಯಂತಿಗಳನ್ನು ಗೆದ್ದನೆಂದು ಕ್ರಿ.ಶ ೬೦೨ರ ಮಂಗಳೇಶನ ಮಹಾಕೂಟ ಶಾಸನದಲ್ಲಿ[೧೦೫] ಹೇಳಿದೆ. ಅಲ್ಲಿ ಬಂದಿರುವ ಆಳುಪ ಎಂಬುದು ಆಳ್ವಖೇಡ ತುಳುನಾಡನ್ನೇ ಸೂಚಿಸುವುದಾಗಿದೆ. ಎರಡನೇಯ ಪುಲಿಕೇಶಿಯ ೬೩೪ರ ಐಹೊಳೆ ಶಾಸನದಲ್ಲೂ[೧೦೬] ಆಳುಪರ ನಿರ್ದೇಶನವಿದೆ.

ಆಳುಪರು "ಸೋಮವಂಶೋದ್ಭವ ಕುಲತಿಲಕರೂ" ಮೀನ ಲಾಂಛನೋಪೇತರೂ ಆಗಿದ್ದರು. ಅರಿರಾಯ ಬಸವಶಂಕರ ಮುಂತಾದ ಬಿರುದುಗಳಿದ್ದ ಅವರು ಶೈವಧರ್ಮಾವ ಲಂಬಿಗಳಾಗಿದ್ದರು[೧೦೭] ಕ್ರಿ.ಶ. ೧೦ನೇ ಶತಮಾನದವರೆಗೆ ಆಳಿದ ಆಳುಪರನ್ನು ಆಳುಪರೆಂದೂ ಅಲ್ಲಿಂದ ಮುಂದಕ್ಕೆ ಆಳಿದವರನ್ನು ಮಧ್ಯಯುಗದ ಆಳುಪರೆಂದೂ ಕರೆದು ವಿವೇಚಿಸುವುದು ರೂಢಿಗೆ ಬಂದಿದೆ. ಪ್ರಾಚೀನ ಆಳುಪರ ಇತಿಹಾಸವನ್ನು ರಚಿಸಿಕೊಡಲು ಬೇಕಾಗುವಷ್ಟು ಶಾಸನಗಳೂ ಲಭ್ಯವಾಗಿಲ್ಲ. ಲಭ್ಯವಾಗಿರುವ ಶಾಸನಗಳಲ್ಲೂ ತೆದಿಗಳಿಲ್ಲ ಲಿಪಿಶಾಸ್ತ್ರವನ್ನು ಆಧರಿಸಿ ಸ್ಥೂಲವಾಗಿ ಆ ಶಾಸನಗಳ ಕಾಲನಿರ್ಣಯ ಮಾಡಿ ವಿವೇಚಿಸುವ ಕಾರ್ಯ ನಡೆದಿದೆ. ಕೆ.ವಿ. ರಮೇಶ್ ಮತ್ತು ಎಂ.ಜೆ. ಶರ್ಮಾ ಆ ಕ್ಷೇತ್ರದಲ್ಲಿ ಪ್ರಶಂಸನೀಯವಾದ ಕೆಲಸ ಮಾಡಿದ್ದಾರೆ ಕ್ರಿ.ಶ. ೬೫೦ ರಿಂದ ೧೪೦೦ರವರೆಗೆ ೩೩ ಆಳುಪ ದೊರೆಗಳು ಆಳಿದರೆಂದು ಆ ಪರಂಪರೆಯನ್ನು ಗುರುರಾಜ ಭಟ್ಟರು ಶಾಸನಸಾಮಾಗ್ರಿಯ ಬಲದಿಂದ ಹಾಗೂ ಸಾಧಾರಣ ಊಹೆಗಳ ಬಲದಿಂದ ಪುನಾರಚಿಸಿ ಕೊಟ್ಟಿದ್ದಾರೆ.[೧೦೮]

ಈಗ ತಿಳಿದ ಮಟ್ಟಿಗೆ ಆಳುಪ ವಂಶದಲ್ಲಿ ಗುಣಸಾಗರ ಆಳುಪೇಂದ್ರನದೇ [ಕ್ರಿ.ಶ.ಸು. ೬೫೦–೮೦] ಮೊತ್ತ ಮೊದಲನೆಯ ಹೆಸರು. ಅವನು ಹೆಸರಿಗೆ ತಕ್ಕಂತೆ ತನ್ನ ಗುಣ ವಿಶೇಷಗಳಿಂದ ಚಾಲುಕ್ಯ ಚಕ್ರವರ್ತಿ ಒಂದನೆಯ ವಿಕ್ರಮಾದಿತ್ಯನ ಗಣ್ಯಗೆಳೆಯನಾಗಿದ್ದನು. ಪಲ್ಲವರ ಆಕ್ರಮಣವನ್ನು ತಡೆಗಟ್ಟಲು ಗುಣಸಾಗರನು ಮಾಡಿದ ಸಹಾಸಗಳಿಂದ ಸಂತುಷ್ಟನಾಗಿದ್ದ ಚಕ್ರವರ್ತಿಯು ಅವನಿಗೆ ತುಳುನಾಡಲ್ಲದೆ ಇಂದಿನ ಶಿವಮೊಗ್ಗ ಜಿಲ್ಲೆಯ ಹುಂಚ ಎನ್ನುವ ಪೊಂಬುಚ್ಚ ಅಥವಾ ಪಟ್ಟಪೊಂಬುಚ್ಚ ಮತ್ತು ಕದಂಬ ಮಂಡಲವೆನಿಸಿದ ಬನವಾಸಿ ೧೨೦೦೦ ಗಳ್[೧೦೯] ಆಡಳಿತವನ್ನೂ ಒಪ್ಪಿಸಿ ಕೊಟ್ಟಿದ್ದನು. ಈ ಕದಂಬ ಮಂಡಲದೊಳಗೆ ಹರಿಹರವು ಒಂದಾಗಿತ್ತು.

ಗುಣಸಾಗರ ತರುವಾಯ 'ಚಾಲುಕ್ಯ ರಾಜ್ಯಾಭಿವೃದ್ಧಿ ಹೇತುಭೂಂತ' ನೆನಿಸಿದ ೧ನೇಯ ಚಿತ್ರವಾಹನನು (ಕ್ರಿ.ಶ. ಸು. ೬೮೦-೭೩೦) ಆಳುಪ ಸಿಂಹಾಸನವವೇರಿದನು. ಅವನು ವಿದ್ಯಾಪಕ್ಷಪಾತಿಯಾಗಿದ್ದು ಮಹಾರಾಜ ಎಂಬ ಬಿರುದನ್ನು ಧರಿಸಿದ್ದನು. ಅದು ಪ್ರಾಚೀನ ಆಳುಪರ ಸುವರ್ಣಯುಗದ ಕಾಲ. ಎಂದಿನಂತೆ ಚಾಲುಕ್ಯ ಮತ್ತು ಆಳುಪರ ನಡುವಣ ಮೈತ್ರಿಯು ಮುಂದುವರೆದು, ಅದು ವೈವಾಹಿಕ ಅನುಬಂಧಗಳ ಮೂಲಕ ಮತ್ತಷ್ಟು ಗಟ್ಟಿಗೊಂಡಿತು. ಚಾಲುಕ್ಯ ದೊರೆ ವಿಜಯಾದಿತ್ಯನು ತನ್ನ ತಂಗಿಯಾದ ಕುಂಕುಮ ದೇವಿಯನ್ನು ಚಿತ್ರ ವಾಹನನಿಗೆ ಧಾರೆಯೆರೆದುಕೊಟ್ಟು ಭಾವಮೈದುನ ಬಂಧುತ್ವವನ್ನು ಸಂಪಾದಿಸಿಕೊಂಡನು ಪುರಿಗೆರೆಯಲ್ಲಿ ಕುಂಕುಮದೇವಿಯು ಕಟ್ಟಿಸಿದ ಜಿನಭವನಕ್ಕೆ ಚಿತ್ರವಾಹನನ ಬೇಡಿಕೆಯ ಮೆರೆಗೆ ದೊರೆಯು ಗುಡ್ಡಿಗೆರೆಯೆಂಬ ಗ್ರಾಮವನ್ನು ದತ್ತಿಯಾಗಿ ಬಿಟ್ಟನು. ಶೈವ, ಜೈನ ಭೇದವಿಲ್ಲದೆ ಆ ಮೈತ್ರಿ ಬೆಳೆಯಿತು. ಚಿತ್ರವಾಹನನು ಕದಂಬ ಮಂಡಲದ ಬನವಾಸಿಯಿಂದಲೇ ಆಳುತ್ತಿದ್ದುದ್ದು ತಿಳಿಯುತ್ತದೆ. ಹರಿಹರದ ಶಾಸನದಲ್ಲಿ[೧೧೦] ವಿನಯಾದಿತ್ಯನು ಹರಿಹರದ ಸಮೀಪದ ಕರಂಜಪತ್ರ ಗ್ರಾಮದಲ್ಲಿ ಬೀಡು ಬಿಟ್ಟಾಗ ಸಾಮಂತ ಆಳುವ ದೊರೆಯ ವಿಜ್ಞಾಪನೆಯಂತೆ ಗ್ರಾಮಗಳನ್ನು (ಕಿರುಕಾಗಾಮಾಸಿ ಮತ್ತು ಪೆರ್ಗಾಗಾಮಾಸಿ) ದಾನ ಬೀಡಲಾಗಿದೆ. ಈ ಸಂದರ್ಭದಲ್ಲಿ ಆಳುತ್ತಿದ್ದ ದೊರೆ ಈ ಚಿತ್ರವಾಹನನೇ ಇರಬೇಕು. ಬನವಾಸಿ ಮಂಡಲದಲ್ಲಿ ಆಳುತ್ತಿದ್ದ ಇವನಿಗೆ ಹರೀಷಪುರ, ಶಿವಮೊಗ್ಗ, ಚಿತ್ರದುರ್ಗ ದಕ್ಷಿಣ ಕನ್ನಡ ಜಿಲ್ಲೆಗಳು ಸಹ ಸೇರಿದ್ದವು.[೧೧೧] ಬನವಾಸಿಯಿಂದ ಆಳುತ್ತಿದ್ದ ಈತ ತುಳುನಾಡಿನ ಮೇಲ್ವಿಚಾರಣೆಯನ್ನು ಮಂಗಳಪುರದಲ್ಲಿದ್ದುಕೊಂಡು ನೋಡಿಕೊಳ್ಳುವುದಕ್ಕೆಂದು ತನ್ನ ಮಗ ಬಬ್ರುವಾಹನನಿಗೆ ವಹಿಸಿದ್ದನೆಂದು ಇತಿಹಾಸಕಾರರು ಆಭಿಪ್ರಾಯಿಸಿದ್ದಾರೆ.[೧೧೨] ಈತನ ತರುವಾಯ ಇಮ್ಮಡಿ ಆಳುವರಸನು ಪಟ್ಟವೇರಿದನು. ಈತನೇ ಬಬ್ರುವಾಹನನೇ ಇರಬಹುದೆಂಬ ವಾದವಿದೆ.

ಗಂಗರು: ಕರ್ನಾಟಕ ಉತ್ತರ ಭಾಗದಲ್ಲಿ ಕದಂಬರು ಅಧಿಕಾರಕ್ಕೆ ಬರುತ್ತಿದ್ದಂತೆ ಗಂಗರು ಕಾವೇರಿ ನದಿ ಭಾಗಳನ್ನೊಳಗೊಂಡ ಆಗ್ನೇಯ ಭಾಗದಲ್ಲಿ ಸ್ವತಂತ್ರ ರಾಜ್ಯವನ್ನು ಸ್ಥಾಪಿಸಿ ಸುಮಾರು ೨೦೦ ವರ್ಷಗಳ ಕಾಲ ಆಳ್ವಿಕೆ ಮಾಡಿ ನಂತರ ಆದಿ ಚಾಲುಕ್ಯ ರಾಷ್ಟ್ರಕೂಟ, ಅರಸ ಮನೆತನಗಳ ಅಧೀನರಾಗಿ ರಾಜ್ಯವಾಳಿದರು. ಇವರ ರಾಜ್ಯವನ್ನು ಶಾಸನಗಳಲ್ಲಿ 'ಗಂಗವಾಡಿ ೯೬೦೦೦'ವೆಂದು ಕರೆಯಲಾಗಿದೆ. ಮೈಸೂರು ಜಿಲ್ಲೆಯ ತಲಕಾಡು (ತಲವನ ಪುರ) ಕುವಲಾಲ (ಕೋಲಾರ), ನಂದಗಿರಿ (ನಂದಿಬೆಟ್ಟ) ಇವರ ರಾಜಧಾನಿಗಳಾಗಿದ್ದವು.[೧೧೩] ಆನೆ ಇವರ ಲಾಂಛನವಾಗಿತ್ತು. ಆರಂಭದಲ್ಲಿ ಇವರು ಕಂಚಿಯ ಪಲ್ಲವರ ಕೃಪಾ ಪಾತ್ರಕ್ಕೆ ಒಳಗಾಗಿದ್ದರು. ಬಾದಾಮಿ ಚಾಲುಕ್ಯ ರಾಜ್ಯ ಸ್ಥಾಪನೆಯೊಂದಿಗೆ ತಮ್ಮ ನಿಷ್ಠೆಯನ್ನು ಚಾಲುಕ್ಯರಲ್ಲಿ ಇರಿಸಿದರು. ರಾಷ್ಟ್ರಕೂಟರು ಅಧಿಕಾರಕ್ಕೆ ಬಂದಾಗ ತಮ್ಮ ಪ್ರಭುತ್ವವನ್ನು ಗಂಗರ ಮೇಲೆ ಹೇರಿದರು. ಹರಿಹರ ಪ್ರದೇಶದಲ್ಲಿ ಗಂಗ ವಂಶದ ಚಂದಿ ಅರಸ ಸಾಮಂತನಾಗಿದ್ದಾಗ ಬೆಳವಡಿಯಲ್ಲಿ 'ಅಲ್ಲಿಗ' ಎಂಬ ವ್ಯಕ್ತಿ ತನ್ನ ರಾಜನೊಡನೆ ಜೀವಂತ ಸಮಾಧಿಯಾದ ಸ್ಮರಾಣಾರ್ಥವಾಗಿ ವೀರಗಲ್ಲನ್ನು ನೆಟ್ಟಿದ್ದಾರೆ

ಈ ವೀರಗಲ್ಲನ್ನು ಈ ಶಾಸನ ತಾಲೂಕಿನ ನಂದಿಗುಡಿ[೧೧೪] ರಲ್ಲಿದೆ. ಕ್ರಿ.ಶ. ೮ನೇ ಶತಮಾನದ ಹಿರೆಹಾಲಿವಾಣದ ವೀರಗಲ್ಲು ಶಾಸನದಲ್ಲಿ[೧೧೫] ಗಂಗವಂಶದ ಎರೆಗಂಗಯ್ಯನು ಗೂಡ್ಡಿಲದೇವನು ರಾಜ್ಯವಾಳುತ್ತಿರುವಾಗ ಹೋರಾಟದಲ್ಲಿ ಮರಣ ಹೊಂದಿದ್ದನ್ನು ತಿಳಿಸುತ್ತದೆ.

ರಾಷ್ಟ್ರಕೂಟರು: ಕ್ರಿ.ಶ. ೭೫೩ರಲ್ಲಿ ಚಾಲುಕ್ಯ ಅರಸ ಇಮ್ಮಡಿ ಕೀರ್ತಿವರ್ಮನನ್ನು ಸೋಲಿಸಿ ದಂತಿ ದುರ್ಗನು ಎಲ್ಲೋರದಲ್ಲಿ ಸಾಮ್ರಾಜ್ಯವನ್ನು ಸ್ಥಾಪಿಸಿದನು. ಮುಂದೆ ಮಳಖೇಡ ಇವರ ರಾಜಧಾನಿಯಾಗಿತು. ಈ ಮನೆತನದ ಅರಸರು ಕ್ರಿ.ಶ. ೯೭೩ರ ವರೆಗೆ ಆಳ್ವಿಕೆ ಮಾಡಿದರು. ಈ ಪ್ರದೇಶದಲ್ಲಿ ರಾಷ್ಟ್ರಕೂಟರ ಮನೆತನಕ್ಕೆ ಸಂಬಂಧಿಸಿದ ಶಾಸನಗಳೂ ಕಂಡು ಬಂದಿವೆ. ಕ್ರಿ.ಶ. ೮ನೇ ಶತಮಾನದ ಹಿರೆಹಾಲಿವಾಣದ ವೀರಗಲ್ಲು ಶಾಸನದಲ್ಲಿ[೧೧೬] ರಾಷ್ಟ್ರಕೂಟರ ಕನ್ನರದೇವನ ಕಾಲದ್ದಾಗಿದ್ದು ಗೂಡ್ಡಿಲದೇವ ನೆಂಬುವನು ರಾಜ್ಯವಾಳುತ್ತಿರುವಾಗ ಹೋರಾಟದಲ್ಲಿ ಎರೆ ಗಂಗಯ್ಯನು ಮರಣ ಹೊಂದಿದ್ದನ್ನು ಉಲ್ಲೇಖಿಸುತ್ತದೇ ಹಾಗೆಯೇ ಸಿರಿಗೆರೆಯ ಕ್ರಿ.ಶ. ೯೭೧ರ[೧೧೭] ಶಾಸನವು ಕೂಡ ರಾಷ್ಟ್ರಕೂಟರ ಕಾಲದ್ದಾಗಿದೆ. ಕೊಕ್ಕನೂರಿನಲ್ಲಿ[೧೧೮] ರಾಷ್ಟ್ರಕೂಟರ ಆರ್ಕದೇವರಸನ ಕಾಲದ ಪ್ರಾಚೀನ ವೀರಗಲ್ಲು ಶಾಸನವಿದೆ. ಇದು ದೇವಯ್ಯ ಎಂಬುವವನು ವೀರಹೋರಾಟದಲ್ಲಿ ಮರಣ ಹೊಂದಿದ್ದನ್ನು ದಾಖಲಿಸುತ್ತದೆ.

ಬೆಳಗುತ್ತಿಯ ಸಿಂಧರು: ಬೆಳಗುತ್ತಿ ಸಿಂಧರು ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲೂಕಿನ ಬೆಳಗುತ್ತಿಯಿಂದ ಆಳಿದ ಇವರು ಕರಾಹಾಟ ಪುರಾಪರಾಧೀಶ್ವರರು. ಈ ವಂಶದ ಮೂಲಪುರುಷನ ಹೆಸರು ನಿಡದೋಳು ಸಿಂಧ, ಇವರು ಚಾಲುಕ್ಯರ, ಕಲಚೂರ್ಯರ, ಹೊಯ್ಸಳರ, ಹಾಗೂ ಸೇವುಣರ ಸಾಮಂತರಾಗಿಯೂ ಆಳ್ವಿಕೆ ನಡೆಸಿದರು. ಈವರೆಗೆ ಹರಿಹರ ತಾಲೂಕಿನಲ್ಲಿ ೩ ಶಾಸನಗಳು ದೊರೆತಿವೆ. ಕ್ರಿ.ಶ[೧೧೯] ೧೧೯೧ರ ವಾಸನದ ಶಾಸನದಲ್ಲಿ ಅಹಮಲ್ಲದೇವನ ಮಹಾಸಾಮಂತನಾದ ಮುಳ್ಗುಂದ ಸಿಂಧರ ಅರಸ ಶ್ರೀ ಜಾತರಸನು ಕದಂಬಳಿಗೆ-೧೦೦೦ವನ್ನು ವಂಶಪಾರಂಪರ್ಯವಾಗಿ ಆಳುತ್ತಿದ್ದನು. ಆದರೆ ಈ ಜಾತಕರಸನು ಬೆಳಗುತ್ತಿಯ ಸಿಂಧರ ಅರಸನಲ್ಲ ಎಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. ಹರಿಹರದ ಕ್ರಿ.ಶ. ೧೧೪೪ ಹಾಗೂ ೧೧೭೨ರ ಶಾಸನದಲ್ಲಿ[೧೨೦] ಬರುವ ಐಹರಸ, ಮಾಚರಸ, ಮಲ್ಲರಸ, ಈಶ್ವರ ದೇವರಸ ಇವರು ಬೆಳಗುತ್ತಿಯ ಸಿಂಧ ವಂಶಕ್ಕೆ ಸೇರಿದ ಹತ್ತಿರದ ಸಂಬಂಧಗಳು, ಹಳ್ಳವೂರು ಇವರು ರಾಜಧಾನಿಯಾಗಿದ್ದು ಹರಿಹರ ಪ್ರದೇಶ ಇವರಿಗೆ ಸೇರಿತ್ತು. ಕ್ರಿ.ಶ. ೧೧೬೪ ಹರಿಹರದ[೧೨೧] ಇನ್ನೊಂದು ಶಾಸನದಲ್ಲಿ ಸಿಂಧ ವಂಶದ ಉಗಮ ಹಾಗೂ ಅದನ್ನು ಆಳಿದ ರಾಜರ ವಿಷಯವನ್ನು ಹೇಳಿದೆ.

ಮೊದಲಿಗನಾದ ಸೈಂಧವ (ಸಿಂಧ), ಚಟ್ಟರಸ, ಮತ್ತು ಅವನ ಪತ್ನಿ ದೋರಬರಸಿ, ಅವರ ಮಗ ಜೋಗರಸ, ಅವನ ಮಗ ಚಟ್ಟರಸ, ಅವನ ನಂತರದ ಮಾಚರಸ ಮತ್ತು ಮಾಚಲದೇವಿ, ಇವನ ತಮ್ಮ ಮಲ್ಲಿದೇವ, ಅವನ ತಮ್ಮ ಐಹರಸ, ಇವನ ಮಗ ರಾಯ ಮತ್ತು ಪತ್ನಿ ಬೂಚಲದೇವಿ, ಅವರ ಮಗ ಈಶ್ವರ ನೃಪಾಳರ ವರ್ಣನೆಯನ್ನು ಒಳಗೊಂಡಿದೆ. ಬನವಾಸಿ ಮಂಡಲದಲ್ಲಿನ ಎಡವಟ್ಟೆ-೭೦ ರ ಹಳ್ಳವೂರದಲ್ಲಿ ಈಶ್ವರ ದೇವರಸನ ಆಳ್ವಿಕೆ ತಿಳಿಸುತ್ತದೆ.

ಈಶ್ವರದೇವರಸನು ಹರಿಹರದ ಶಂಕರನಾರಣದೇವರ ಕಾರ್ಯಕ್ಕೆ, ನೈವೇದ್ಯಕ್ಕೆ, ಭ್ರಾಂತಿ–೩೦ರ ಹೊನ್ನನ್ನು ದಾನ ನೀಡುತ್ತಾನೆ. ಹೀಗೆ ಸಿಂಧ ವಂಶದ ಎಲ್ಲ ರಾಜರನ್ನು ಉಲ್ಲೇಖಿಸುವುದರ ಜೊತೆಗೆ ಅವರ ರಾಜ್ಯಡಳಿತಕ್ಕೆ ಈ ಪ್ರದೇಶ ಸೇರಿತ್ತೆಂದು ತಿಳಿಸುತ್ತದೆ.

ಕಲ್ಯಾಣದ ಚಾಲುಕ್ಯರು: ಕರ್ನಾಟಕವನ್ನಾಳಿದ ಪ್ರಮುಖ ರಾಜಮನಗಳಲ್ಲಿ ಕಲ್ಯಾಣ ಚಾಲುಕ್ಯರ ಮನೆತನವು ಒಂದು ಈ ವಂಶದ ಸಾಮ್ರಾಜ್ಯ ಸ್ಥಾಪಕನಾದ ಇಮ್ಮಡಿ ತೈಲಪ, ಈತನು ಕ್ರಿ.ಶ. ೯೭೩ರಲ್ಲಿ ರಾಷ್ಟ್ರಕೂಟರ ಆಳ್ವಿಕೆಯನ್ನು ಕೊನೆಗೊಳಿಸಿ ಈ ಸಾಮ್ರಾಜ್ಯವನ್ನು ಸ್ಥಾಪಿಸುತ್ತಾನೆ. ಇದಕ್ಕೆ ಮೊದಲು ಬೇರೆ ಬೇರೆ ಸ್ಥಳಗಳಲ್ಲಿ ರಾಷ್ಟ್ರಕೂಟರು ಹಾಗೂ ಗಂಗರು ಇವರೊಡನೆ ವೈವಾಹಿಕ ಸಂಬಂಧ. ಹೊಂದಿದ್ದರೆಂಬುದಾಗಿ ಇತಿಹಾಸ ಹೇಳುತ್ತದೆ. ಈ ಹಿನ್ನಲೆಯಿಂದ ಕಲ್ಯಾಣ ಚಾಲುಕ್ಯರ ಆಡಳಿತವನ್ನು ಗುತುತಿಸಬಹುದಾಗಿದೆ. ಇವರಿಗೆ ಸಂಬಂಧಿಸಿದಂತೆ. ಈ ಪ್ರದೇಶದಲ್ಲಿ ಅನೇಕ ಶಾಸನಗಳು ದೊರೆಯುತ್ತವೆ.

ಕ್ರಿ.ಶ. ೧೦೯೯ರ ಗುತ್ತೂರಿನ ಶಾಸನದಲ್ಲಿ[೨೨] ಚಾಲುಕ್ಯ ಚಕ್ರವರ್ತಿ ತ್ರಿಭುವನಮಲ್ಲ ದೇವನ ಆಳ್ವಿಕೆಯ ಕಾಲವನ್ನು ತಿಳಿಸುತ್ತದೆ. ಕೂಡಲೂರಿನ ಶಂಕರನಾರಾಯಣನ ಪರಮ ಭಕ್ತರಾದ ಚಂದ್ರಮೌಳೀ ಸ್ಥಾನವೆಗ್ಗೆಡಯರ ಉಲ್ಲೇಖ ಇದರಲ್ಲಿದೆ. ಕ್ರಿ.ಶ. ೧೧೧೯ರ[೨೩] ಜಿಗಳಿಯ ಶಾಸನವು ಚಾಲುಕ್ಯ ದೊರೆ ವಿಜಯಾದಿತ್ಯನ ಕುರಿತಾಗಿದೆ. ಅವನ ಮಹಾಮಂಡಳೇಶ್ವರನಾಗಿದ್ದ ರಾಯಪಾಂಡ್ಯದೇವನು ಕದಂಬಳಿಗೆ–೩೨೦೦೦ ವನ್ನು ಆಳುವಾಗ ಕುರಿತಾದ ದಾಖಲೆ ಇದಾಗಿದೆ ನಂತರ ಕಲ್ಯಾಣದ ಇಮ್ಮಡಿ ಜಗದೇಕಮಲ್ಲನಿಗೆ ಸೇರಿದ ಶಾಸನವೊಂದು ಹರಿಹರದ ಹರಿಹರೇಶ್ವರ ದೇವಾಲಯದಲ್ಲಿದೆ.[೨೪] ಈ ಶಾಸನದಲ್ಲಿ ಹರಿಹರದೇವರನ್ನು ಹೆಸರಿಸಲಾಗಿರುವುದಲ್ಲದೆ, ಬನವಾಸಿ ಪುರಾವಧೀಶ್ವರ ವೀರ ಮಲ್ಲಿದೇವರಸನನ್ನು ಹಾಗೂ ಬನವಾಸಿಯ ಮಧುಕೇಶ್ವರನನ್ನು ಉಲ್ಲೇಖಿಸಲಾಗಿದೆ. ಇವನ ಕಾಲದ ಇನ್ನೊಂದು ಶಾಸನ ಇದೇ ಹರಿಹರದಲ್ಲಿ ದೊರೆತಿದೆ.[೨೫]

ಕ್ರಿ.ಶ. ೧೧೪೫೦[೨೬] ಗಂಗನರಸಿ ಶಾಸನವು ಸಹ ಜಗದೇಕಮಲ್ಲನ ಆಳ್ವಿಕೆಯನ್ನು ತಿಳಿಸುತ್ತದೆ. ಆದರೆ ಇದೇ ಕಾಲದ ಸಾರಥಿ ಶಾಸನವು[೨೭] ಚಾಲುಕ್ಯದೊರೆ ತ್ರೈಲೋಕಮಲ್ಲದೇವರ ಉಲ್ಲೇಖ ಬರುತ್ತದೆ. ಈ ತ್ರೈಲೋಕಮಲ್ಲ ಎಂಬ ಬಿರುದು ಕಲ್ಯಾಣ ಚಾಲುಕ್ಯಗ ೩ ನೇ ತೈಲಪನಿಗೆ ಇದ್ದದ್ದು.[೨೮] ಇತನ ಆಳ್ವಿಕೆಯ ಆರಂಭ ಕಾಲವಾದ ಕ್ರಿ.ಶ. ೧೧೪೯ರಲ್ಲಿ[೨೯] ಹರಿಹರದ ಶಾಸನದಲ್ಲಿ ಮತ್ತೆ ಇಮ್ಮಡಿ ಜಗದೇಕ ಮಲ್ಲನ ಆಳ್ವಿಕೆಯನ್ನು ಗುರುತಿಸುತ್ತದೆ.

ಕಲಚೂರಿಗಳು: ಕಲ್ಯಾಣದ ಚಾಲುಕ್ಯರನ್ನು ಸುಮಾರು ೩೫ ವರ್ಷಗಳ ಕಾಲ ಮೂಲೆಗುಂಪು ಮಾಡಿ ಕಲಚೂರಿಗಳು ಆಳ್ವಿಕೆ ಮಾಡಿದರು. ಇವರು ಮಧ್ಯ ಭಾರತದ ಕಲಚುರಿ ವಂಶದ ಹೈಹೆಯಕುಲಕ್ಕೆ ಸೇರಿದವರು.[೩೦] ಹೈಹೆಯರು ನರ್ಮದಾ ತೀರದ ಮಾಹಿಷ್ಮತಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು. ಇದನ್ನು 'ಮಾಹಿಷ್ಮತೀಪುರವರಾಧೀಶ್ವರ' ಎಂಬ ತಮ್ಮ ಬಿರುದಿನ ಮೂಲಕ ಅಮರಗೊಳಿಸಿದ್ದಾರೆ.[೩೧] ಉತ್ತರದ ಕಾಲಂಜರಪುರದಿಂದ ಬಂದರೆಂಬುದನ್ನು ತೋರಿಸಲು 'ಕಾಲಂಜರಪುರವರಾಧೀಶ್ವರ'ರೆಂದೂ ತಮ್ಮನ್ನು ಕರೆದುಕೊಂಡಿದ್ದಾರೆ. ಶಿವಭಕ್ತರಾದ

ಇವರು 'ಸುವರ್ಣ್ಣವೃಷಭ' ಲಾಂಛನವನ್ನು ಹೊಂದಿದ್ದಾರೆ. ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದ ಕಲಚೂರಿಗಳು 'ತರಿಕಾಡನಾಡನ್ನು' ತಮ್ಮ ನೆಲೆಯನ್ನಾಗಿ ಮಾಡಿಕೊಂಡರು[೧೩೨] ಆ ನಾಡಿನ ಮುಖ್ಯ ಪಟ್ಟಣ ಮಂಗಳವೇಡವು ಅವರ ಪರಂಪರಾಗತ ರಾಜಧಾನಿಯಾಗಿ ಮೆರೆಯಿತು.

ಒಂದನೆಯ ಜಿಜ್ಜಳ ಮತ್ತು ಅವನ ಮಗ ಕನ್ನಮರಸರು ಚಾಲುಕ್ಯರ ಅಧೀನರಾಗಿ ರಾಜಕೀಯದಲ್ಲಿ ಭಾಗವಹಿಸಿದ್ದರು ಈ ಅವಧಿಯಲ್ಲಿ ಮಹಾಮಂಡಳೇಶ್ವರ ಕನ್ನಮರಸ ಮಂಗಳವೇಡದಿಂದ ರಾಜ್ಯವಾಳುತ್ತಿದ್ದನು. ಇವನ ಮಗ ಜೋಗಮನು ತನ್ನ ಮಗಳು ಸಾವಳದೇವಿಯನ್ನು ಆರನೆಯ ವಿಕ್ರಮಾದಿತ್ಯನಿಗೆ ಮದುವೆ ಮಾಡಿ ಕೊಡುವ ಮೂಲಕ ಚಾಲುಕ್ಯ-ಕಲಚೂರಿ. ಸಂಬಂಧವನ್ನು ಸ್ಥಿರಗೊಳಿಸಿದನು. ಇವನ ಮಗ ಪೆರ್ಮಾಡಿಯು ಸೋಮೇಶ್ವರನ ಕಾಲದಲ್ಲಿ ತರ್ದವಾಡಿ ನಾಡಿನ ಮಹಾಮಂಡಳೇಶ್ವರನಾಗಿದ್ದನು. ಪೆರ್ಮಾಡಿಯು ವಿಕ್ರಮಾದಿತ್ಯ ಹಾಗೂ ಚಂದಲದೇವಿಯರ ಮಗಳಾದ ನಾಗಲದೇವಿಯನ್ನು ಲಗ್ನವಾಗುವ ಮೂಲಕ ಮೊದಲಿನ ಸಂಬಂಧವನ್ನು ಮತ್ತಷ್ಟು ನಿಕಟಗೊಳಿಸಿ ಕಲಚೂರಿಯರ ರಾಜಕೀಯ ಸ್ಥಾನವನ್ನು ಸುಭದ್ರಗೊಳಿಸಿದನು.[೧೩೩] ಮೂರನೆಯ ಸೋಮೇಶ್ವರನ ಕಾಲದಲ್ಲಿ ತಾನು ಸ್ವತಂತ್ರ್ಯನೆಂಬಂತೆ ತನ್ನ ಆಳ್ವಿಕೆಯ ಹನ್ನೆರಡನೆಯ ವರ್ಷವನ್ನು ಉಲ್ಲೇಖಿಸಿ ಶಾಸನ ಬರೆಸಿದ್ದಾನೆ.[೧೩೪] ಈ ಅವಕಾಶವನ್ನು ಮುಂದೆ ಎರಡನೆಯ ಬಿಜ್ಜಳನೂ ಅನುಸರಿಸಿದ್ದ.

ತಂದೆಯ ಕನಸನ್ನು ನನಸಾಗಿಸಿದ ಮಹತ್ವಾಕಾಂಕ್ಷಿ ಎರಡನೆಯ ಬಿಜ್ಜಳ ಜಗದೇಕಮಲ್ಲನ ಕಾಲದಲ್ಲಿ ಕುಮಾರನೆನ್ನಿಸಿಕೊಂಡು ಪ್ರಭಾವಿಶಾಲಿ ಮಹಾಮಂಡಳೇಶ್ವರನಾದನು. ಚಾಲುಕ್ಯರೊಂದಿಗಿನ ರಾಜಕೀಯ ಸಂಬಂಧದಿಂದ ಅಲ್ಲಿನ ಪ್ರತಿ ಆಗುಹೋಗುಗಳ ಸಮಗ್ರ ತಿಳುವಳಿಕೆ ಆತನಿಗಿತ್ತು[೧೩೫] ಮುಂದೆ ತನಗಿಂತ ಕಿರಿಯನಾದ ಮೂರನೆಯ ತೈಲಪ ಸಿಂಹಾಸನವೇರುವುದು ಬಿಜ್ಜಳನಿಗೆ ಸರಿ ಬರಲ್ಲಿಲ್ಲ. ಕ್ರಿ.ಶ. ೧೧೫೦ರಲ್ಲಿ ಮೂರನೆಯ ತೈಲಪ ಇನ್ನೂ ಸಿಂಹಾಸನವನ್ನೇರುತ್ತಿದ್ದಂತೆಯೇ 'ಸ್ವಸ್ತಿ ಶ್ರೀಮತು ಕಳಚುರ್ಯ ಭುಜಬಲಚಕ್ರವರ್ತಿ ತ್ರಿಭುವನಮಲ್ಲ ವೀರವಿಜ್ಜಲದೇವ ವರ್ಷದ ಪ್ರಥಮ ರಾಜ್ಯಂ' ಎಂದು ಶಾಸನ ಹೊರಡಿಸಿದನು.[೧೩೬]

ಈ ಪ್ರದೇಶದಲ್ಲಿ ಬಿಜ್ಜಳನ ಕ್ರಿ.ಶ. ೧೧೬೧ರ ಗಂಗನರಸಿ ಶಾಸನ[೧೩೭] ಮೊದಲನೆಯದು. ಇದರಲ್ಲಿ ಬಿಜ್ಜಳನನ್ನು "ಸಮಧಿಗತ ಪಂಚ ಮಹಾಶಬ್ಬ ಮಹಾಮಂಡಳೇಶ್ವರಂ ಕಾಳಂಜರ ಪುರವರಾಧೀಶ್ವರ ಸುವರ್ಣ ವೃಷಭಧ್ವಜ ಡವರುಗತೂರ್ಯ್ಯ ನಿರ್ಘ್ಘೋಷಣ ಕಳಚುರ್ಯ್ಯ ಕುಳಕಮಳಮಾರ್ತ್ತಾಂಣ್ಡ ಕದನಪ್ರಚಂಡ ಮಾನಕನಕಾಚಳ ಸುಭವರಾಧಿತ್ಯಂ ಕಲಿಗಳಂಕುಶಗಜಚಮಂತ ಶಾರಣಾಗತ ವಜ್ರಪಂಜರಂ ಪ್ರತಾಲಂಕೇಶ್ವರ ಪರನಾರೀ ಸಹೋದರಂ ಶನಿವಾರಸಿದ್ಧಿ ಗಿರಿದುರ್ಗ್ಗಮಲ್ಲ ಚಲದಂಕರಾಮಂ ವೈರೀಭಕಣ್ಣೀರವಂ ನಿಶ್ಯಂಕ ನಾಮಾದಿಸಮಸ್ತ ಪ್ರಶಸ್ತಿ ಸಹಿತಂ ಶ್ರೀ ಮದ್ಭುಜಬಲಚಕ್ರವರ್ತಿ ತ್ರಿಭುವನಮಲ್ಲ ಬಿಜ್ಜಲದೇವರ ವಿಜಯರಾಜ್ಯ ಮುತ್ತರೋತ್ತರಾಭಿವೃದ್ಧಿಪ್ರವರ್ಧ್ಧಮಾನ ಚಂದ್ರಾರ್ಕ್ಕತಾರಂಬರಂ ಸಲುತ್ತಮಿರೆ ತತ್ಪಾದಪದ್ಮೋಪಜೀವಿ." ಎಂದಿದೆ. ಈ ಅವಧಿಯಲ್ಲಿ ಪಾಂಡ್ಯರಾಜನು ನೊಳಂಬವಾಡಿಯ ಕೋಗಳಿ-೫೦೦, ಬಿಕ್ಕಿಗ-೭೦ನ್ನು ಆಳುತ್ತಿದ್ದನು. ಇವನ

ಇನ್ನೊಂದು ಶಾಸನ ಹರಿಹರದಲ್ಲಿದೆ.[೧೬೮] ಕಲ್ಯಾಣ ಚಾಲುಕ್ಯರ ಅಧೀನತೆಯನ್ನು ಕಿತ್ತೊಗೆದು, ಅವರನ್ನು ಮೂಲೆಗೊತ್ತಿ ತಾನೇ ಚಕ್ರವರ್ತಿಯೆಂದು ಘೋಷಿಸಿಕೊಂಡು ಸ್ವತಂತ್ರನಾಗಿ ಕರ್ನಾಟಕವನ್ನು ಆಳಿದ ಎರಡನೆ ಬಿಜ್ಜಳ. ಅವನ ದಂಡನಾಯಕ ಕಸಪಯ್ಯನನ್ನು ತಿಳಿಸುತ್ತದೆ.

ಕ್ರಿ.ಶ. ೧೧೬೪ಳ ಹರಿಹರದ[೧೬೯] ಶಾಸನದಲ್ಲಿ ಕಳಚೂರ್ಯ ಬಿಜ್ಜಳ ಹಾಗೂ ಅವರ ಸಮಂತರನ್ನು ಕೊಂಡಾಡಿದೆ. ಇದೇ ಗ್ರಾಮದ ಕ್ರಿ.ಶ. ೧೧೭೩ರ ಶಾಸನವು[೧೭೦] ಕಳಚೂರ್ಯ ಸಾಮಂತ ಬನವಾಸಿ-೧೨೦೦೦ ದ ಅಧಿಕಾರಿಯಾದ ಮಹಾಪ್ರಧಾನ ದುರ್ಗ್ಗರಸ ದಂಡ ನಾಯಕನನ್ನು ಉಲ್ಲೇಖಿಸುತ್ತದೆ. ಹಾಗೆಯೇ ಕ್ರಿ.ಶ. ೧೧೮೦[೧೭೧] ರ ಇನ್ನೊಂದು ಶಾಸನವು ಬಿಜ್ಜಳರ ಆಳ್ವಿಕೆ ಅವನ ತಮ್ಮ ಮೈಳುಗಿದೇವನ ಪರಾಕ್ರಮ ಅವರ ಮೊಮ್ಮಗ ಕರ್ಣದೇವನ ಆಳ್ವಿಕೆ ನಂತರ ಸೋವಿದೇವ, ಮಲ್ಲಿಗಿದೇವ, ಸಂಕಮದೇವನ ಸಾಹಸಗಳ ಪ್ರಸ್ತಾಪ ಮಾಡಲಾಗಿದೆ. ನಂತರದ ಕಳಚೂರ್ಯರ ಬಿರುದುಗಳು, ಕಲ್ಯಾಣದಲ್ಲಿ ಸಂಕಮದೇವರು ರಾಜ್ಯಭಾರ ಮಾಡುತ್ತಿರುವಾಗ ಅವನ ಮಹಾದಂಡನಾಥನಾಗಿದ್ದ ಕಾವಣದಂಡನಾಯಕನ ಪ್ರತಾಪ, ನಂದವಾಡಿಯ ಸೋಮಲದೇವ, ಪೆರ್ಮದೇವ ಮತ್ತು ಜಕ್ಕಣವ್ವೆ, ಇವರ ಮಗನೇ ಕಾವಣದಂಡನಾಥ, ಅವನ ಶೌರ್ಯ ಬಿರುದುಗಳ ಕುರಿತ ಹಾಗೂ ಅವನ ಪತ್ನಿಯರಾದ ಕಾಳಲದೇವಿ, ಮಾಳಲದೇವಿಯರ ಗುಣಗಾನ, ಅವನ ತಮ್ಮ ತೇಜಚಮೂಪತಿಯ ಪರಾಕ್ರಮ, ಅವನ ಮಗ ಬರ್ಮದೇವ, ಅವನ ತಮ್ಮಂದಿರಾದ ಕೇಶವ ನರಸಿಂಹ, ಮಹಾಲಿಂಗರ ವಿಷಯ, ನಂತರ ಕಾವಣದಂಡನಾಥನು ದಕ್ಷಿಣ ದಿಗ್ವಿಜಯ ಮಾಡಿ ಬಂದ ಸಂದರ್ಭದಲ್ಲಿ ಬನವಾಸಿಯನ್ನು ಒಳಗೊಂಡಿದೆ. ಪ್ರಮುಖವಾಗಿ ಮಾದೇವದಂಡಾಧಿಪನು ಬನವಾಸಿ ದೇಶದ ನೊಳಂಬವಾಡಿಗೆ ಸೇರಿದ ಎಡವಟ್ಟಿ, ಬಳ್ಳವೆಗಳನ್ನು ಹರಿಶಂಕರದೇವರಿಗೆ (ಹರಿಹರ) ದಾನ ನೀಡಿದ್ದಾನೆ.

ಸೇವುಣರು: ಮಹಾರಾಷ್ಟ್ರದ ಔರಂಗಾಬಾದ್ ಹತ್ತಿರದ ದೇವಗಿರಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದ ದೇವಗಿರಿಯ ಸೇವುಣರು ಕರ್ನಾಟಕದ ಈ ಭಾಗಗಳ ಮೇಲೂ ಕೂಡ ಕೆಲವು ಕಾಲ ತಮ್ಮ ಅಧಿಕಾರವನ್ನು ಹೊಂದಿದ್ದರು. ಇವರನ್ನು ದೇವಗಿರಿಯ ಯಾದವರೆಂದು ತಿಳಿಯಲಾಗಿದೆ. ಇವರು ಇಲ್ಲಿ ಆಡಳಿತ ನಡೆಸಿದುದಕ್ಕೆ ಅವರ ಶಾಸನಗಳೇ ಬಹುಮುಖ್ಯ ಆಧಾರಗಳಾಗಿವೆ. ಸೇವುಣರು ಈ ಭಾಗದಲ್ಲಿ ಆಡಳಿತ ನಡೆಸುವ ಸಂಧರ್ಭಕ್ಕೆ ಸಮಾನವಾಗಿ ಕಲ್ಯಾಣದ ಚಾಲುಕ್ಯರ ರಾಜ ಮನೆತನ ರಾಜಕೀಯವಾಗಿ ಅಸ್ತಿತ್ವವನ್ನು ಕಳೆದುಕೊಳ್ಳುವತ್ತ ಸಾಗಿತ್ತು. ಮತ್ತು ಇತ್ತ ದೋರ ಸಮುದ್ರದ ಹೊಯ್ಸಳರು ತಮ್ಮ ಅತ್ಯುತ್ತಮ ಸ್ಥಾನದಲ್ಲಿ ಇದ್ದರು. ಇಂತಹ ಸಂದರ್ಭದಲ್ಲಿ ತುಂಗಭದ್ರೆಯ ತೀರದವರೆಗೂ ಅಧಿಕಾರ ಸ್ಥಾಪಿಸಿದ ಸೇವುಣರ ಶಾಸಗಳು ಹರಿಹರ ಪ್ರದೇಶದಲ್ಲಿ ದೊರೆತಿವೆ.[೧೭೨] ಅವುಗಳಲ್ಲಿ ಕನ್ನರದೇವ, ಮಹಾದೇವರಾಯ, ರಾಮಚಂದ್ರರಾಯರ ಕಾಲದವಾಗಿದ್ದು ಮಹಾದೇವರಾಯ ಹಾಗೂ ರಾಮಚಂದ್ರರ ಆಳ್ವಿಕೆಯ ಕಾಲದ ಹೆಚ್ಚಿನ ಶಾಸನಗಳು ದೊರೆತಿವೆ.

ಸೇವುಣರ ಯಾದವನಾರಾಯಣ ಪ್ರತಾಪ ಚಕ್ರವರ್ತಿ ವೀರ ಮಹಾದೇವರಾಯನ ಆಳ್ವಿಕೆಯ ಶಾಸನವೊಂದು[೧೪೩] ಚಿಕ್ಕಬಿದರೆ ಗ್ರಾಮದಲ್ಲಿ ಉಲ್ಲೇಖ ಮಾಡುತ್ತದೆ. ಸೇವುಣರ ವಂಶದ ಉಲ್ಲೇಖ ನೀಡುವಂತಹ ಶಾಸನಗಳಲ್ಲಿ ಕಂಡು ಬರುವ ಅವರ ವಂಶ ವೃಕ್ಷವನ್ನು ನೀಡಿದಾಗ ಭಿಲ್ಲಮನೇ ಈ ವಂಶದ ಮೂಲ ಪುರುಷ ಅವನ ಮಗ ಜೈತುಗಿ, ಅವನ ಮಗ ಸಿಂಘಣನು ಸೇವುಣದಲ್ಲಿಯೇ ಅಪ್ರತಿಮನಾದ ದೊರೆ, ಇವನ ಸಾಹಸವನ್ನು ಹರಿಹರ ಶಾಸನದಲ್ಲಿ ಉಲ್ಲೇಖಿಸಿದೆ.[೧೪೪] ಸಿಂಘಣನ ಮಗ ಕೃಷ್ಣ ಅಥವಾ ಕಂದರ. ಈ ಕಂದರನು ಸುಮಾರು ಕ್ರಿ.ಶ. ೧೨೫೮ರಲ್ಲಿ ಚಿಕ್ಕಬಿದರೆ ಗ್ರಾಮದಲ್ಲಿ ಕನ್ನೇಶ್ವರ ದೇವಾಲಯವನ್ನು ಸಿಂಘಣನ ಸೇನಾನಿಯಾಗಿದ್ದ ಬಿಲ್ಲಾಳು ಆಮ್ಮೆಯ ನಾಯಕನೆಂಬುವವನು ನಿರ್ಮಿಸಿದನೆಂದು ಹಾಗೂ ಅನೇಕ ದಾಸ ದತ್ತಿಗಳನ್ನು ನೀಡಿದನೆಂದು ಅಲ್ಲಿನ ಶಾಸನ ತಿಳಿಸುತ್ತದೆ.[೧೪೫] ಈ ಕೃಷ್ಣ ಅಥವಾ ಕಂದರನ ಉಲ್ಲೇಖ ನೀಡುವ ಮೊದಲ ಶಾಸನ ಗಂಗನರಸಿಯಲ್ಲಿರುವ ವೀರಗಲ್ಲಿನ ಮೇಲಿದೆ.[೧೪೬] ಕ್ರಿ.ಶ. ೧೨೭೧–೧೩೦೯ರವರೆಗೆ ಆಳ್ವಿಕೆ ನಡೆಸಿದ ಯಾದವ ರಾಮಚಂದ್ರನು ಸೇವುಣ ಅರಸರಲ್ಲೇ ಪ್ರಮುಖ. ಹರಿಹರದ ಹರಿಹರೇಶ್ವರ ದೇವಾಲಯದ ಪ್ರಾಂಗಣದಲ್ಲಿರುವ ಲಕ್ಷ್ಮೀ ದೇವಾಲಯದಲ್ಲಿರುವ ಈತನ ಒಂದು ಪ್ರಮುಖ ಶಾಸನವು ದತ್ತಿ ಬಿಟ್ಟ ವಿವರ ನೀಡುತ್ತದೆ.[೧೪೭]

ಹೊಯ್ಸಳರ ಆಳ್ವಿಕೆಯ ಕಾಲದಲ್ಲಿಯೇ ತಮ್ಮ ಇರುವಿಕೆಯನ್ನು ಪ್ರಸ್ತುತಪಡಿಸಿದ ಸೇವುಣರು ಸ್ಥಳೀಯವಾಗಿ ಸಾಮಾಜಿಕ ಮತ್ತು ಆರ್ಥಿಕ ಬೆಳವಣಿಗೆಗೆ ಪೂರಕವಾಗುವಂತಹ ಹಲವಾರು ಕಾರ್ಯಕ್ರಮಗಳನ್ನು ನಿರೂಪಿಸಿದರು. ಇವರ ಅಸ್ತಂಗತದ ಕಾಲಕ್ಕಾಗಲೇ ಮುಸ್ಲಿಂರ ದಾಳಿಗಳು ಇವರ ಪ್ರದೇಶದ ಮೇಲೆ ನಡೆದು ಆರ್ಥಿಕವಾಗಿ ಸೈನಿಕವಾಗಿ ಮತ್ತು ರಾಜಕೀಯವಾಗಿ ಸಾಮ್ರಾಜ್ಯವು ವಿನಾಶದ ಹಾದಿಯನ್ನು ಹಿಡಿದಿತ್ತು. ಅಂತಿಮವಾಗಿ ಕ್ರಿಶ ೧೩೧೮ ವೇಳೆಗೆ ಸೇವುಣರ ಪ್ರದೇಶವು ಖಿಲ್ಜಿ ಸಾಮ್ರಾಜ್ಯದಲ್ಲಿ ವಿಲೀನಗೊಂಡು ಮುಬಾರಕ್ ಷಾ ಮತ್ತು ಮಾಲಿಕ್ ಯಾಕ್‌ಲಿಖಿಯರ ಆಡಳಿತ ಹಿಡಿತಕ್ಕೆ ಒಳಪಟ್ಟಿತ್ತು.

ನೊಳಂಬರು: ನೊಳಂಬವಾಡಿ ೩೨೦೦೦ ಎಂಬ ಚಿತ್ರದುರ್ಗ ಪ್ರಾಂತ್ಯದ ಆಸುಪಾಸಿನಲ್ಲಿ ಆಡಳಿತ ನಡೆಸಿದ ನೊಳಂಬರು ಕಾಲ ಕಾಲದಲ್ಲಿ ತಲಕಾಡಿನ ಗಂಗರು, ರಾಷ್ಟ್ರಕೂಟರು, ಚಾಲುಕ್ಯರು ಮುಂತಾದವರ ಆಧೀನರಾಗೀಯೂ ಆಡಳಿತ ನಡೆಸಿದರು. ಇವರ ರಾಜಧಾನಿ ಹೆಂಜೇರು. ಆನಂತಪುರ ಜಿಲ್ಲೆ, ಹೇಮಾವತಿ ತಾಲ್ಲೂಕು. ಇವರ ಲಾಂಛನ ನಂದಿ, ನೊಳಂಬರಿಗೂ ಪಲ್ಲವರಿಗೂ ಸಂಬಂಧ ಇದ್ದುದರಿಂದ ನೊಳಂಬ ಪಲ್ಲವರೆಂದು ಕರೆಯಲಾಗುತ್ತದೆ. ನಿಟ್ಟೂರು ಶಾಸನದಲ್ಲಿ[೧೪೮] ಕ್ರಿ.ಶ. ೧೦೩೪ರಲ್ಲಿ ಸಾಮಂತ ನೊಳಂಬ ಪಲ್ಲವ ಪೆರ್ಮಾಡಿದೇವನ ಆಡಳಿತದಲ್ಲಿ ಕದಂಬಳಿಗೆ -೧೦೦೦ ಬಿಳಿಯ ಕಂಪಣವಾದ ಕುಂದೂರು-೭೦ ರೊಳಗಿನ ಗ್ರಾಮಗಳ ಗೌಡಿರೆ ಹೊಂದಿದ್ದ ಬಲ್ಲಯ್ಯ ಮತ್ತು ಎರೆಚಟ್ಟಯ್ಯರು ಬಲ್ಲೇಶ್ವರ ದೇವರಿಗೆ ಗದ್ದೆಯನ್ನು ಭೂದಾನ ನೀಡಿದ ಉಲ್ಲೇಖವನ್ನು ನೀಡುತ್ತದೆ. ನೊಳಂಬ ಪಲ್ಲವ ಪೆರ್ಮಾಡಿದೇವ ಚಾಳುಕ್ಯ ಚಕ್ರವರ್ತಿ ಜಗದೇಕಮಲ್ಲ ಎರಡನೆಯ ಜಯಸಿಂಹನ ಸಾಮಂತನಾಗಿ ಆಳುತ್ತಿದ್ದುದರಿಂದ, ಈತನೂ ಸಹ ಜಗದೇಕಮಲ್ಲನೆಂಬ ಬಿರುದನ್ನು ತನ್ನ ಹೆಸರಿಗೆ ಸೇರಿಸಿಕೊಂಡಿದ್ದನು.

ಉಚ್ಚಂಗಿ ಪಾಂಡ್ಯರು: ಉಚ್ಚಂಗಿಯ ಪಾಂಡ್ಯರು ಕಲ್ಯಾಣ ಚಾಲುಕ್ಯರ ಚಕ್ರವರ್ತಿಗಳಿಗೆ ಸಾಮಂತ ಅರಸರಾಗಿದ್ದರು. ಅನೇಕ ಯುದ್ಧಗಳಲ್ಲಿ ಭಾಗವಹಿಸಿ ತಮ್ಮ ಅರಸರಿಗೆ ಜಯ ತಂದುಕೊಟ್ಟ ರಾಜರ ಮೆಚ್ಚುಗೆ ಪಡೆದು ನಂಬಿಕೆಯ ಸಾಮಂತರಾಗಿದ್ದರು. ಇವರು ಉಚ್ಚಂಗಿ ಪಟ್ಟಣದಿಂದ ನೊಳಂಬವಾಡಿಯನ್ನು ಆಳುತ್ತಿದ್ದರು. ಚಾಲುಕ್ಯ ಸಾಮ್ರಾಟರಾದ ಎರಡನೆಯ ಸೋಮೇಶ್ವರ ಮತ್ತು ಆರನೆಯ ವಿಕ್ರಮಾದಿತ್ಯರ ನಡುವೆ ನಡೆದ ಕೌಟುಂಬಿಕ ಘರ್ಷಣೆಯಲ್ಲಿ ವಿಕ್ರಮಾದಿತ್ಯನ ಪರವಹಿಸಿದರು. ವಿಕ್ರಮಾದಿತ್ಯನು ಸಾಮ್ರಾಟನಾದಾಗ ಇವರನ್ನು ನೊಳಂಬಾಡಿ – ೩೨೦೦೦ ದ ಮಾಂಡಳಿಕರನ್ನಾಗಿ ನೇಮಕ ಮಾಡಿದನು. ಚಾಲುಕ್ಯ–ಗುತ್ತಿ ವಂಶದವರೊಂದಿಗೆ ಸಂಬಂಧ ಬೆಳೆಸುವ ಮೂಲಕ ತಮ್ಮ ರಾಜ್ಯದ ಎಲೆಯನ್ನು ವಿಸ್ತರಿಸಿದರು. ಶಾಸನಗಳು ಪಾಂಡ್ಯರನ್ನು 'ಕಾಂಚಿಪುರವರೇಶ್ವರ ಯದುವಂಶಾಂಬರದ್ಯುಮಣೀ' ಮುಂತಾದ ಬಿರುದುಗಳೊಂದಿಗೆ ಕರೆಯುತ್ತವೆ. ಈ ಮನೆತನದ ತ್ರಿಭುವನಮಲ್ಲ ರಾಯಾಪಾಂಡ್ಯ ಪಾಂಡ್ಯದೇವ, ವೀರಪಾಂಡ್ಯ, ಮತ್ತು ವಿಯಪಾಂಡ್ಯರು[೧೪೯] ಚಾಲುಕ್ಯರ ಮಾಂಡಳಿಕರಾಗಿ ೬೦ ವರ್ಷಗಳ ಕಾಲ ನೊಳಂಬವಾಡಿಯನ್ನು ಆಳಿದರು.

ಚಾಲುಕ್ಯ ವಿಕ್ರಮಾದಿತ್ಯನ ಮಾಂಡಳಿಕನಾಗಿ ತ್ರಿಭುವನವಲ್ಲ ರಾಯಪಾಂಡ್ಯ ಅಧಿಕಾರಕ್ಕೆ ಬಂದನು ಕ್ರಿ.ಶ. ೧೧೧೯ರ ಜಿಗಳಿ[೧೫೦] ಕ್ರಿ.ಶ. ೧೧೨೫ ಬನ್ನಿಕೊಡು[೧೫೧] ಹಾಗೂ ವಾಸನದ[೧೫೨] ಕಾಲವಮಾನವಿಲ್ಲದ ಶಾಸನಗಳು ಇವನ ಆಳ್ವಿಕೆಯನ್ನು ಉಲ್ಲೇಖಿಸುತ್ತವೆ. ಇದರಲ್ಲಿ "ಕಾಂಚೀಪುರವರಾದೀಶ್ವರ. . . ಚೂಡಾಮಣಿ ನಿಜಕುಳಕಮಳ ಮಾರ್ತಂಡ ಪರಿಚ್ಚೇದಿಗಂಡ ರಾಜಿಗಚೋಳ ಮನೋಭಂಗ ಗಂಡರಾ. ಶ್ರೀಮನ್ಮಹಾಮಂಡಳೇಶ್ವರ ರಾಯಪಾಂಡ್ಯದೇವನು" ಎನ್ನುತ್ತ. ಕದಂಬಳಿಗೆ–೩೨೦೦೦ ಹಾಗೂ ನೊಳಂಬವಾಡಿ ೩೨೦೦೦ವನ್ನು ಆಳುತ್ತಿದ್ದುದಾಗಿ ಹೇಳಿದೆ. ತ್ರಿಭುವನಮಲ್ಲ ಎಂಬ ಬಿರುದನ್ನು ಇವನು ವಿಕ್ರಮಾದಿತ್ಯನೊಂದಿಗೆ ರಾಜೇಂದ್ರಚೋಳನನ್ನು ಯುದ್ಧದಲ್ಲಿ ಸೋಲಿಸಿ ಇದನ್ನು ಪಡೆದುಕೊಂಡನು. ತ್ರಿಭುವನಮಲ್ಲ ರಾಯಪಾಂಡ್ಯದೇವನ ನಂತರ ಕ್ರಿ.ಶ. ೧೧೪೫ರ ಸಾರಥಿ ಶಾಸನ[೧೫೩] ತ್ರಿಭುವನಮಲ್ಲ ಪಾಂಡ್ಯದೇವನ ಹೆಸರನ್ನು ಹೇಳುತ್ತದೆ. ಹಾಗೆಯೇ ಕ್ರಿ.ಶ. ೧೧೬೧.[೧೫೪] ರ ಗಂಗನರಸಿ ಶಾಸನದಲ್ಲಿಯೂ ಸಹ ಪಾಂಡ್ಯದೇವನ ಉಲ್ಲೇಖ ಸಂದರ್ಭೋಚಿತವಾಗಿ ಬಂದಿದೆ. ಇವನ ನಂತರ ವೀರಪಾಂಡ್ಯದೇವ ಅಧಿಕಾರಕ್ಕೆ ಬಂದನು. ಕ್ರಿ.ಶ. ೧೧೫೪ರ ಗಂಗನರಸಿ ಶಾಸನ ವೀರಪಾಂಡ್ಯದೇವನನ್ನು ಹೆಸರಿಸುತ್ತದೆ.[೧೫೫] ಜಗದೇಕ ಮಲ್ಲದೇವನ ಆಳ್ವಿಕೆಯ ಕಾಲದಲ್ಲಿ ನೊಳಂಬವಾಡಿ ೩೨೦೦೦ ದಲ್ಲಿನ ಕೋಗಳಿ ಸೀಮೆಯ ದಂಡನಾಯನಾಗಿದ್ದ. ಆದರೆ ಇದೇ ಗ್ರಾಮದ ಇದೇ ಕಾಲಮಾನದ ಇನ್ನೊಂದು ಶಾಸನದಲ್ಲಿ ಮೇಲೆ ತಿಳಿಸಿದ ಪಾಂಡ್ಯದೇವನು ನೊಳಂಬವಾಡಿ–೩೨೦೦೦ ವನ್ನು ಆಳುತಿದ್ದ ಆಗ ಯುವರಾಜ ವೀರಪಾಂಡ್ಯ ದೇವನು ಕೋಗಳಿ ಸಿಮೇಯನ್ನು ನೋಡಿಕೊಳ್ಳುತ್ತಿದುದು ಈ ಶಾಸನದಿಂದ ತಿಳಿದು ಬರುತ್ತದೆ. ಆಗ ಕೂಡಲೂರ ತುಂಗಭದ್ರೆಯ ಬ್ರಹ್ಮತೀರ್ಥದ ಶ್ರೀ ಶಂಕರನಾರಾಯಣದೇವರು ಮತ್ತು ಅರಸೀಕೆರೆಯ ಕಲಿದೇವರಿಗೆ ದಾನ ನೀಡಿದನು. ಎಂದು ಹೇಳಿದೆ.

ವೀರಪಾಂಡ್ಯದೇವನ ನಂತರ ಅವನ ಸಹೋದರ ವಿಜಯಪಾಂಡ್ಯ ಅಧಿಕಾರಕ್ಕೆ ಬಂದನು. ನೊಳಂಬವಾಡಿ-೩೨೦೦೦ ವನ್ನು ಉಚ್ಚಂಗಿಯಿಂದ ಆಳುತ್ತಿದ್ದನೆಂದು ಉಚ್ಚಂಗಿದುರ್ಗದ ಶಾಸನವೊಂದು[೧೫೬] ತಿಳಿಸುತ್ತದೆ. ಕ್ರಿ.ಶ. ೧೧೬೨ ಗಂಗನರಸಿ,[೧೫೭] ಕ್ರಿ.ಶ. ೧೧೬೨ರ ವಾಸನ[೧೫೮] ಕ್ರಿ.ಶ. ೧೧೬೭ರ ಹರಿಹರ[೧೫೯] ಮತ್ತು ಕ್ರಿ.ಶ. ೧೧೭೧ರ ಹರಿಹರದ[೧೬೦] ಶಾಸನಗಳು ಇವನ ಆಳ್ವಿಕೆಯನ್ನು ಉಲ್ಲೇಖಿಸುತ್ತವೆ. ಗಂಗನರಸಿಯ ಶಾಸನ ವಿಜಯಪಾಂಡ್ಯನ ರಾಜ್ಯಭಾರದ ಶಾಸನವಾಗಿದೆ. ಆದರೆ ಕ್ರಿ.ಶ. ೧೧೬೭ರ ಹರಿಹರದ ಶಾನದಲ್ಲಿ ಪಾಂಡ್ಯರ ಉಗಮ ಹಾಗೂ ಬಿರುದುಗಳು ಉಲ್ಲೇಖವಾಗಿದೆ. ಆರಂಭದಲ್ಲಿ ಈಶ್ವರ ಮತ್ತು ವಿಷ್ಣುವನ್ನು ಸ್ಮರಿಸಿ [ಶಂಕರ ನಾರಾಯಣ ಮನೆದೇವರಾಗಿದ್ದ ಕಾರಣಕ್ಕಾಗಿ] ಅತ್ರಿಯನ ಹುಟ್ಟು, ಅವನಿಂದ ಚಂದ್ರನ ಜನನ, ಯಾದವರಾಜ ಗೋತ್ರದ ಹುಟ್ಟು, ಆ ವಂಶದ ದೊರೆ ಚೇದಿರಾಜನ ಆಳ್ವಿಕೆ, ಪಾಂಡ್ಯನೆಂಬ ಹೆಸರಿನಿಂದ ಖ್ಯಾತಿ, ಚಾಲುಕ್ಯ ಚೋಳರಿಗೆ ತನ್ನ ಶೌರ್ಯದಿಂದ ಪ್ರಿಯನಾಗಿದ್ದು ಅವನ ಮಗ ಪಳಂತೆ, ಅವನ ಮಗ ಇರುಕ್ಕುವೇಳ, ಅವನ ಮಗ ರಾಯಪಾಂಡ್ಯ, ಅವನ ಪತ್ನಿ ವೀರಲಕ್ಷ್ಮೀ, ರಾಯಪಾಂಡ್ಯನ ಪಟ್ಟಮಹಿಷಿ ಸೋಮದೇವಿ, ಅವರ ಮಗ ಪಂಡಿತಪಾಂಡ್ಯ ಅವನ ತಮ್ಮ ವೀರ ಪಾಂಡ್ಯ, ಅವನ ಮಗ ವಿಯಶ್ರೀ ಪಾಂಡ್ಯ ಮುಂತಾದವರ ಶೌರ್ಯ ಪರಾಕ್ರಮಗಳು ಹಾಗೂ ಪಡೆದ ಬಿರುದುಗಳ ಉಲ್ಲೇಖ ಇದರಲ್ಲಿದೆ. ವಿಜಯ ಪಾಂಡ್ಯದೇವನು ಉಚ್ಚಂಗಿಯಲ್ಲಿ ರಾಜ್ಯಭಾರ ಮಾಡುತ್ತಿರುವ ಸಂದರ್ಭದಲ್ಲಿ ರಚಿತವಾದ ಶಾಸನ ಇದಾಗಿದೆ.

ಹೊಯ್ಸಳರು: ಕಲ್ಯಾಣ ಚಾಲುಕ್ಯರ ಆಳ್ವಿಕೆಯ ಕಾಲದಲ್ಲಿ ಸೇವುಣರಂತೆ ಹೊಯ್ಸಳರೂ ಅವರ ಮಾಂಡಳಿಕರಾಗಿ ಕೆಲವು ಭಾಗಗಳ ಆಡಳಿತ ನೋಡಿಕೊಳ್ಳುತ್ತಿದ್ದರು. ಇವರು ತಮ್ಮನ್ನು ಯಾದವ ವಂಶಕ್ಕೆ ಸೇರಿದವರೆಂದು ಹೇಳಿಕೊಂಡಿದ್ದಾರೆ. ಶಾಸನಗಳಲ್ಲಿ ತಮ್ಮನ್ನು 'ಯಾದವನಾರಾಯಣ.[೧೬೧] ಯಾದವ ಕುಲಾಂಬರದ್ಯುಮಣಿ,[೧೬೨] ದ್ವಾರಾವತಿಪುರ ವಾರಧೀಶ್ವರ[೧೬೩] ಮುಂತಾದ ಬಿರುದುಗಳಿಂದ ಗುರುತಿಸಿಕೊಂಡಿದ್ದಾರೆ. ಈ ಮನೆತನದ ಮೂಲಪುರಷ ಹುಲಿಯನ್ನು ಕೊಂದನೆಂದು ರಾಜಮನೆತನಕ್ಕೆ ಹೊಯ್ಸಳ ಎಂಬ ಹೆಸರು ಮತ್ತು ಹುಲಿಯನ್ನು ಕೊಲ್ಲುತ್ತಿರುವ ಚಿತ್ರಣವನ್ನು ತಮ್ಮ ಲಾಂಛನವನ್ನಾಗಿ ಮಾಡಿಕೊಂಡರು.[೧೬೪] ಈ ಮನೆತನದ ಮೊದಲ ಅರಸ ಕಾಮ ಇವನನ್ನು ನೃಪಕಾಮನೆಂದು ಕರೆಯಲಾಗಿದೆ. ಇವನ ನಂತರ ಅಧಿಕಾರಕ್ಕೆ. ಬಂದ ವಿನಯಾದಿತ್ಯ ಒಂದನೆಯ ಬಲ್ಲಾಳ, ವಿಷ್ಣುವರ್ಧನ ಇವರೆಲ್ಲರೂ ಚಾಲುಕ್ಯರ ಸಾಮಂತರಾಗಿದ್ದರು. ಇವರು ಚಾಲುಕ್ಯ-ಚೋಳರ ಮಧ್ಯ ನಡೆದಂತಹ ಯುದ್ಧಗಳಲ್ಲಿ ಪ್ರಮುಖ ಪಾತ್ರವಹಿಸಿದರು.[೧೬೫] ವಿಷ್ಣುವರ್ಧನನ ಕಾಲದಲ್ಲಿ ಕ್ರಿ.ಶ. ೧೧೧೬ರ ವೇಲೆ ಚೋಳರೊಂದಿಗಿನ ಹೋರಾಟದಲ್ಲಿ ಗಂಗವಾಡಿ ಹೊಯ್ಸಳರ ವಶವಾಯಿತು. ಈ ವಿಜಯದ ನೆನಪಿಗಾಗಿ ತಲಕಾಡುಗೊಂಡ'[೧೬೬] ಎಂಬ ಬಿರುದನ್ನು ಧರಿಸಿದೆ.

ಗಂಗವಾಡಿ ಗೆಲುವಿನಿಂದ ಪ್ರಚೋದಿತನಾದ ವಿಷ್ಣುವರ್ಧನ ಚಾಲುಕ್ಯರಿಮದ ಸ್ವತಂತ್ರನಾಗಲು ಹವಣಿಸಿದ. ಚಾಲುಕ್ಯ ಸಾಮ್ರಾಟ ಆರನೆಯ ವಿಕ್ರಮಾದಿತ್ಯ ವೃದ್ಧನಾಗಿದ್ದು. ಶಾಂತಿಯುತ

ಆಳ್ವಿಕೆಯಲ್ಲಿದ್ದುದರಿಂದ ವಿಷ್ಣುವರ್ಧನನಿಗೆ ಮುಂದುವರಿಯಲು ಅವಕಾಶ ಪ್ರಾಪ್ತಯಾಗಿತ್ತು. ಚಾಲುಕ್ಯ ಅರಸ ಸೋಮೇಶ್ವರನ ಕಾಲದಲ್ಲಿ ಕಲಚೂರಿಗಳು ಸಾಮ್ರಾಜ್ಯದಾಹದಲ್ಲಿ ತೊಡಗಿದ್ದರು. ಇವರಿಬ್ಬರ ಮಧ್ಯದ ಕಾದಾಂಟದಲ್ಲಿ ಪ್ರಚೋದಿತನಾದ ವಿಷ್ಣುವರ್ಧನ ಕ್ರಿಶ ೧೧೩೬ ರಲ್ಲಿ ಕದಂಬರನ್ನು ಸೋಲಿಸಿ ಅದರ ಭದ್ರಕೋಟೆಗಳೆನಿಸಿದ ಹಾನಗಲ್ಲು, ಬಂಕಾಪುರಗಳನ್ನು ವಶಪಡಿಸಿಕೊಂಡನು[೧೬] ಕ್ರಿ.ಶ. ೧೧೪೨ರಲ್ಲಿ ಇವನ ಮಗ ಒಂದನೆಯ ನರಸಿಂಹ ಅಧಿಕಾರ ವಹಿಸಿಕೊಂಡನು ಇವನು ಬಲಿಷ್ಠ ದೊರೆಯಾಗಿರಲಿಲ್ಲ. ನಿರಂತರ ಪತನಗಳಿಂದ ಬೇಸತ್ತ ಇವನ ಮಗ ಎರಡನೆಯ ಬಲ್ಲಾಳ ಅನ್ಯಮಾರ್ಗವಿಲ್ಲದೆ ತಂದೆಯನ್ನು ಪದಚ್ಯುತಗೊಳಿಸಿ ಅಧಿಕಾರ ಸೂತ್ರಗಳನ್ನು ಹಿಡಿದುಕೊಂಡ, ಕ್ರಿ.ಶ. ೧೨೨೦ ರವರೆಗೂ ಸ್ವತಂತ್ರ ಆಳ್ವಿಕೆ ಮಾಡಿದನು. ಈ ಸ್ವತಂತ್ರ ರಾಜ್ಯವನ್ನಾಗಿ ರೂಪಿಸಬೇಕೆಂದಿದ್ದ ವಿಷ್ಣುವರ್ಧನನ ಕನಸುನನಸಾದದ್ದು ಎರಡನೆಯ ಬಲ್ಲಾಳನಿಂದ. ಅವನು ಚೆಂಗಾಳ್ವ, ಕೊಂಗಾಳ್ವರನ್ನು ಸೋಲಿಸಿದ ಅಲ್ಲದೆ ಉಚ್ಚಂಗಿ ಪಾಂಡ್ಯರನ್ನು ಸೋಲಿಸಿದರೂ, ಅವರ ರಾಜ್ಯವನ್ನು ಹಿಂದಿರುಗಿಸಿ ಸಾಮಂತರನ್ನಾಗಿ ಮಾಡಿಕೊಂಡ.

ಎರಡನೆಯ ಬಲ್ಲಾಳನ ನಂತರ ಕ್ರಿ.ಶ. ೧೨೨೦ರಲ್ಲಿ ವೀರನಸಿಂಹ ವೀರನರಸಿಂಹನು [ಎರಡನೆಯ ನರಸಿಂಹ] ಅಧಿಕಾರಕ್ಕೆ ಬಂದನು. ಕ್ರಿ.ಶ. ೧೨೨೩ರ ಹರಿಹರದ[೧೮] ಶಾಸನವು ಅತ್ಯಂತ ಧೀರ್ಘವಾದದು, ಹಾಗೂ ಮುಖ್ಯವಾದುದು ಆಗಿದೆ. ಹರಿಹರ ದೇವಾಲಯ ನಿರ್ಮಾಣಗೊಂಡ ವೃತ್ತಾಂತ ಈ ಶಾಸನದಲ್ಲಿದೆ. ಹರಿ-ಹರ ಇವರೀರ್ವರ ನಡುವೆ ಯಾವುದೆ ಬೇದವಿಲ್ಲವೆನ್ನುವುದನ್ನು ತೋರಿಸಲು ಹರಿಹರನು ಒಂದಾಗಿ ರೂಪ ತಳೆದುದನ್ನು ಕುರಿತ ವಿವರಣೆಯು ಶಾಸನದ ಪ್ರಾರಂಭದಲ್ಲಿ ಬಂದಿದೆ. ಆನಂತರ ಹೊಯ್ಸಳರ ಮೂಲ ಮತ್ತು ವಂಶಾವಳಿಯು ಉಕ್ತಿಗೊಂಡಿದೆ. ಈ ಭಾಗದಲ್ಲಿ ಹೊಯ್ಸಳ ಬಿಟ್ಟಿಗ (ವಿಷ್ಣುವರ್ಧನ) ಮತ್ತು ಇಮ್ಮಡಿ ಬಲ್ಲಾಳರ ಪರಾಕ್ರಮಗಳನ್ನು ವರ್ಣಿಸಲಾಗಿದೆ. ಇಮ್ಮಡಿ ನರಸಿಂಹನನ್ನು ಕುರಿತು ಅವನು ಅಸಾಮಾನ್ಯ ಶೂರನೆಂತಲೂ, ಸೇವುಣರನ್ನು ಮತ್ತು ಪಾಂಡ್ಯರನ್ನು ಸದೆ ಬಡಿದ ವೀರನೆಂತಲೂ, ಚೋಳರಾಜ್ಯ ಪ್ರತಿಷ್ಠಾಪನಾಚಾರ್ಯನೆಂತಲೂ ವರ್ಣಿಸಿದೆ. ಇವನ ಪ್ರಧಾನಿ ಚೋಳರಾಜ್ಯ ಪೋಲಾಳ್ವದೇವನನ್ನು ಕುರಿತ ವರ್ಣನೆ ಮೂಡಿದೆ. ಪೋಲಾಳ್ವ ದೇವನಿಗೆ 'ತೂಲಗದ ಕಂಬ' ಎಂಬ ಬಿರುದು ಇದ್ದು. ಹೊಯ್ಸಳ ಆಸ್ಥಾನದಲ್ಲಿ ಅತ್ಯಂತ ಪ್ರಭಾವಿತ ವ್ಯಕ್ತಿಯಾಗಿದ್ದನೆಂದು ಈ ಶಾಸನದಿಂದಲೇ ವ್ಯಕ್ತವಾಗುತ್ತದೆ. ಇವನು ಹರಿಹರೇಶ್ವರ ದೇವಾಲಯವನ್ನು ಪೂರ್ಣಗೊಳಿಸಿ ದೇವಾಲಯದ ಮೇಲೆ ೧೧೫ ಸುವರ್ಣ ಕಳಸಗಳನ್ನು ಇಡಿಸಿದನು. ದೇವಾಲಯವನ್ನು ಪೂರ್ಣಗೊಳಿಸಿದ ನಂತರ ೧೦೪ ಬ್ರಾಹಣರನ್ನೊಳಗೊಂಡ ಅಗ್ರಹಾರವೊಂದಕ್ಕೆ ಭಾನುವಳ್ಳಿ ಗ್ರಾಮವನ್ನು ದತ್ತಿಬಿಟ್ಟು ಲಕ್ಷ್ಮೀ ನಾರಾಯಣದೇವಾಲಯವನ್ನು ಕಟ್ಟಿಸಿದನು. ಆದರೆ ಇಂದು ಹರಿಹರೇಶ್ವರ ದೇವಾಲಯದ ದ್ವಾರಮಂಟಪದ ಮೇಲೆ ಯಾವುದೇ ರೀತಿಯ ವಿಮಾನ ಕಂಡು ಬರದೆ ಕೇವಲ ಪ್ರವೇಶದ್ವಾರವಿದೆ. ಬಹುಶಃ ವಿಮಾನವು ಶಿಥಿಲಗೊಂಡಿರಬಹುದು. ಈ ಶಾಸನವು ಈ ಪ್ರದೇಶದಲ್ಲಿ ಆಳ್ವಿಕೆ ನಡೆಸಿದ ಎರಡನೆಯ ನರಸಿಂಹನ ಕುರಿತ ಶಾಸನವಾಗಿದೆ. ಈತನ ಆಳ್ವಿಕೆ ಕುರಿತು ಹಿರೆಹಾಲಿವಾಣದ ವೀರಗಲ್ಲೂ ಶಾಸನವೊಂದು[೧೯] ಮಾಹಿತಿ ನೀಡುತ್ತದೆ.

ವೀರನರಸಿಂಹನ ನಂತರ ಆಳ್ವಿಕೆಗೆ ಬಂದವನು ಅವನ ಮಗ ಸೋಮೇಶ್ವರ ಆದರೆ ಅವನ ಶಾಸನಗಳು ಅಧ್ಯಯನ ಪ್ರದೇಶದಲ್ಲಿ ಕಂಡು ಬರುವುದಿಲ್ಲ. ನಂತರ ಆಳ್ವಿಕೆಗೆ ಬಂದ ಮೂರನೇ ನರಸಿಂಹನ ಆಳ್ವಿಕೆಯ ಕುರಿತು. ಕ್ರಿ.ಶ. ೧೨೯೮ರ ಹರಿಹರ[೧೦] ಶಾಸನ ಉಲ್ಲೇಖಿಸುತ್ತದೆ. ಈ ಶಾಸನವನ್ನು ಮೂರನೇ ನರಸಿಂಹನ ಆಪ್ತನೂ. ದಂಡನಾಯಕನೂ ಆಗಿದ್ದ ಸೋಮೆಯ ದಂಡನಾಯಕ ಹಾಕಿಸಿದ್ದಾನೆ. ಈ ಶಾಸನದಲ್ಲಿ ಉಲ್ಲೇಖಿಸಿದಂತೆ ಹರಿಹರ ದೇವಾಲಯ ಪೂರ್ವದ್ವಾಕ್ಕೆ ಐದು ಮಹಡಿಗಳುಳ್ಳ ಗೋಪುರವನ್ನು ನಿರ್ಮಿಸಿ ಐದು ಚಿನ್ನದ ಕಳಸಗಳನ್ನು ಪ್ರತಿಷ್ಠಾಪಿಸಿದನೆಂದು ಹಾಗೂ 'ಸೋಮನಾಥಪುರ'ವೆಂಬ ಆಗ್ರಹಾರವನ್ನು ನಿರ್ಮಿಸಿ ಅಲ್ಲಿ ಶಿವ ಮತ್ತು ವಿಷ್ಣು ದೇವಾಲಯಗಳನ್ನು ನಿರ್ಮಿಸಿದನೆಂದು[೧೧] ತಿಳಿದುಬರುತ್ತದೆ. ಹೊಯ್ಸಳರ ಮೂರನೆಯ ನರಸಿಂಹನ ದಂಡನಾಯಕನಾದ ಈ ಸೋಮೆಯ ದಂಡನಾಯಕನಿಗೆ ಸಂಬಂಧಿಸಿದ ಕ್ರಿ.ಶ. ೧೩೦೨ ಹರಿಹರದ[೧೨] ವೀರಗಲ್ಲು ಶಾಸನವು ಸೋಮೆಯ ದಂಡನಾಯಕರು ಸ್ವರ್ಗಸ್ಥರಾದರೆಂಬುದನ್ನು ತಿಳಿಸುತ್ತದೆ. ಇಲ್ಲಿಗೆ ಈ ಪ್ರದೇಶದಲ್ಲಿ ಹೊಯ್ಸಳರ ಆಳ್ವಿಕೆಯ ಕುರುಹುಗಳು ಮುಂದೆ ಕಾಣಬರುವುದಿಲ್ಲ.

ವಿಜಯನಗರದ ಅರಸರು: ಭಾರತದ ವಾಯುವ್ಯ ಭಾಗದಿಂದ ಆಗಮಿಸಿದ ಮುಸ್ಲಿಂ ದಾಳಿಕೋರರು ಕ್ರಮೇಣ ಭಾರತದ ದಕ್ಷಿಣ ಭಾಗದಲ್ಲಿ ದಾಳಿ ನಡೆಸಿ ಕ್ರಿ.ಶ. ೧೨೯೬ ರಿಂದ ೧೩೩೬ರ ವರೆಗೆ ಇಲ್ಲಿ ರಾಜ್ಯಗಳನ್ನೆಲ್ಲಾ ಬಲಹೀನಗೊಳಿಸಿದ್ದರು. ಈ ಅವಧಿಯಲ್ಲಿ ರಾಜಕೀಯ ಅನಾಯಕತ್ವ ತಲೆದೋರಿತು. ದೇವಗಿರಿಯನ್ನು ರಾಜಕೀಯವನ್ನಾಗಿ ಮಾಡಿಕೊಂಡು ಆಡಳಿತ ನಡೆಸುತ್ತಿದ್ದ ಸೇವುಣರು, ದ್ವಾರಸಮುದ್ರವನ್ನು ರಾಜಧಾನಿಯಾನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದ ಹೊಯ್ಸಳರು, ಓರಂಗಲ್ಲನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಕಾಕತೀಯರು ಉತ್ತರದಿಂದ ಬರುತ್ತಿದ್ದ ಮುಸ್ಲಿಂರ ದಾಳಿಯನ್ನು ಎದುರಿಸಲಾಗದೆ. ತಮ್ಮ ಅಸ್ತಿತ್ವವನ್ನೇ ಕಳೆದುಕೊಂಡಿದ್ದರು. ಇಂತಹ ಸಂಧಿಗ್ಧ ಸಮಯದಲ್ಲಿ ಹಿಂದೂ(ಸ್ಥಳಿಯ ರಾಜಕೀಯ)ಧರ್ಮ ಮತ್ತು ಸಂಸ್ಕೃತಿಯ ರಕ್ಷಣೆಗಾಗಿ ದಕ್ಷಿಣ ಭಾರತದಲ್ಲಿ ವಿಜಯನಗರ ಸಾಮ್ರಾಜ್ಯವು ಉದಯಿಸಿತು. ಹೊಯ್ಸಳರ ಆಡಳಿತ ಅಧಿಕಾರಿಗಳಾಗಿದ್ದ ಸಂಗಮ ವಂಶದ ಸಂಗಮನ ಮಕ್ಕಳಾದ ಹರಿಹರ, ಬುಕ್ಕರಾಯರು ಕ್ರಿ.ಶ. ೧೩೩೬ರಲ್ಲಿ ಇಂತಹದ್ದೊಂದು ರಾಜ್ಯ ಸ್ಥಾಪಿಸಿ, ರಾಜಕೀಯ ಅಸ್ಥಿರತೆಯನ್ನು ಹೋಗಲಾಡಿಸಲು ಕಾರಣವಾದರು[೧೩] ಆರಂಭದಲ್ಲಿ ಇವರ ರಾಜಧಾನಿ ಆನೆಗೊಂದಿಯಾಗಿತ್ತು. ಆನಂತರ ಹೊಸಪಟ್ಟಣವನ್ನು ನಿರ್ಮಿಸಿ ಅದಕ್ಕೆ ವಿಜಯನಗರವೆಂದು ಹೆಸರಿಟ್ಟರು ಅಂದಿನಿಂದಲೂ ಅದು ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿ ಹಂಪಿ ಎಂದು ಪ್ರಸಿದ್ಧಿ ಪಡೆಯಿತು. ಈ ವಿಜಯನಗರವನ್ನು ಕೇಂದ್ರವಾಗಿಸಿಕೊಂಡು ಸಂಗಮ, ಸಾಳುವ, ತುಳುವ ಮತ್ತು ಅರವೀಡು ವಂಶಗಳು ಕ್ರಮವಾಗಿ ಆಡಳಿತ ನಡೆಸಿದವು. ಮೊದಲ ಮೂರು ವಂಶಗಳಿಗೆ ವಿಜಯನಗರ ರಾಜಧಾನಿಯಾಗಿತ್ತು. ಆನಂತರ ನಾಲ್ಕನೇಯ ವಂಶವು ಪೆನುಗೊಂಡ, ಚಂದ್ರಗಿರಿಗಳಿಂದ ರಾಜ್ಯಭಾರ ಮಾಡಿತು.

ಹರಿಹರ ಪ್ರದೇಶದ ಮೇಲೆ ವಿಜಯನಗರ ಅರಸರು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ತಮ್ಮ ಆಡಳಿತ ನಡೆಸಿದ್ದಾರೆ. ಅವರ ಅನೇಕ ಶಾಸನಗಳು ಈ ಪ್ರದೇಶದಲ್ಲಿ ದೊರೆತಿದ್ದು ಅವುಗಳ ಸಹಾಯದಿಂದ ವಿಜಯನಗರ ಅರಸರು ಈ ಪ್ರದೇಶವನ್ನು ತಮ್ಮ ಆಡಳಿತದ ಅನೂಕಲತೆಗೋಸ್ಕರ ಅನೇಕ ವಿಭಾಗಗಳಾಗಿ ವಿಭಾಗಿಸಿದ್ದರು. ಅವುಗಳಲ್ಲಿ ಸೀಮೆ, ವೆಂಠೆ ಮತ್ತು ಚಾವಡಿಗಳೆಂಬ ವಿಭಾಗಗಳು ಮುಖ್ಯವಾದವು, ಬುಕ್ಕರಾಯನ ಶಾಸನಗಳೇ ಇವರ ಮೊದಲ ಆಕಾಗಳಾಗಿವೆ ಕ್ರಿ.ಶ. ೧೩೫೪ರ ಹರಿಹರದ[೧೭೪] ಶಾಸನವು ಜ್ಯೋತಿಷ್ಯ ಪಂಡಿತರೂ, ಹರಿಹರದ ದೈವಿಜ್ಞರೂ ಆದ ಮಾಧವ ಜೋಯಿಸರ ಮಕ್ಕಳಾದ ರಾಮಣ್ಣ ಜೋಯಿಸರಿಗೆ ವಿಜಯನಗರದ ಬುಕ್ಕಮಹಾರಾಜರು ಕೊಟ್ಟೂರ ಪ್ರದೇಶದ ಉಚ್ಚಂಗಿ ಸೀಮೆಯ ಹರಿಹರದೇಪುರದ ವ್ಯಾಪ್ತಿಯಲ್ಲಿ ಮಿಟ್ಟಲಿಗೊಲ್ಲನಿಗೆ ಕಟ್ಟಿಸಿಕೊಟ್ಟ ಮಿಟ್ಟಲಿನಕಟ್ಟೆಯನ್ನು ದಾನ ನೀಡಿದ ಉಲ್ಲೇಖವಿದೆ. ಕ್ರಿ.ಶ. ೧೩೬೭ರ ಕೊಂಡಜ್ಜಿ[೧೭೫] ಶಾಸನವು ಕೂಡ ಬುಕ್ಕಾರಾಯನ ಆಳ್ವಿಕೆಗೆ ಸಂಬಂಧಿಸಿದ್ದಾಗಿದೆ.

ಇತನ ನಂತರ ಇಮ್ಮಡಿ ಹರಿಹರನ ಶಾಸನಗಳು ದೊರೆಯುತ್ತವೇ ಕ್ರಿ.ಶ. ೧೩೭೯ರ ಹರಿಹರದ[೧೭೬] ಶಾಸನದಲ್ಲಿ ಮುದ್ಧಣ್ಣ ದಂಡನಾಯಕ ಹರಿಹರ ದೇವಸ್ಥಾನಕ್ಕೆ ಚಿಕ್ಕಹದಡಿ ಗ್ರಾಮವನ್ನು ದತ್ತಿಕೊಟ್ಟು ಅದಕ್ಕೆ ಮುದ್ಧದಂಡನಾಯಕಪುರ ಎಂದು ಹೆಸರಿಟ್ಟು ಆಗ್ರಹಾರ ಮಾಡಿದ್ದನ್ನು ಶಾಸನ ತಿಳಿಸುತ್ತದೆ. ಇದೇ ಗ್ರಾಮದ ಕ್ರಿ.ಶ. ೧೩೮೨೦[೧೭೭] ಇನ್ನೊಂದು ಶಾಸನದಲ್ಲಿ ವೇದ ಮತ್ತು ಶಾಸನಗಳನ್ನು ಸತತವಾಗಿ ಅಭ್ಯಾಸ ಮಾಡುವುದಕ್ಕಾಗಿ ಇಮ್ಮಡಿ ಹರಿಹರನು ಶಂಕರಾಪುರವೆಂಬ ಗ್ರಾಮವನ್ನು ಬ್ರಾಹ್ಮಣರಿಗೆ ದಾನ ಮಾಡಿದ. ಮಂತ್ರಿಯಾಗಿದ್ದ ಮುದ್ದಾದಂಡನಾಯಕನು ಮುವಾತ್ತಾರು. ವೃತ್ತಿಗಳಲ್ಲಿ ಅಗ್ರಹಾರವೊಂದನ್ನು ರಚಿಸಿ, ಬ್ರಾಹ್ಮಣರಿಗೂ ದೇವಾಯಕ್ಕೂ ದತ್ತಿಕೊಟ್ಟನು. ಇದೇ ಗ್ರಾಮದ ಕ್ರಿ.ಶ. ೧೩೮೭[೧೭೮] ರ ಶಾಸನದಲ್ಲಿ ಯದವಂಶದ ಉದಯ, ಇಮ್ಮಡಿ ಹರಿಹರನ ಪರಾಕ್ರಮ, ಬಿರುದುಗಳು, ದಾನಗಳ ಬಗ್ಗೆ ಉಲ್ಲೇಖಿಸಲಾಗಿದೆ. ಕ್ರಿ.ಶ. ೧೩೯೭ರ ಬಾನುವಳ್ಳಿ[೧೭೯] ಶಾಸನದಲ್ಲಿ ವಿಜಯನಗರದ ಶ್ರೀವೀರಹರಿಹರರಾಯರ ಆಳ್ವಿಕೆ ಕಾಲದಲ್ಲಿ ಗ್ರಾಮದಲ್ಲಿ ಆಂಜನೇಯ ಮೂರ್ತಿಯನ್ನು ಪ್ರತಿಷ್ಠಾಪಿಸಿದ ನಿರೂಪ ಇದಾಗಿದೆ.

ಇಮ್ಮಡಿ ಬುಕ್ಕರಾಯರಿಗೆ ಸಂಬಂಧಿಸಿದಂತೆ ಮಲೆಬೆನ್ನೂರು ಗ್ರಾಮದ ಕ್ರಿ.ಶ. ೧೪೦೫ರ ಶಾಸವನವೊಂದು ಉಲ್ಲೇಖಿಸುತ್ತದೆ.[೧೮೦] ಇಮ್ಮಡಿ ಬುಕ್ಕರಾಯನ ಆಳ್ವಿಕೆಯಲ್ಲಿ ಮಲೆಬೆನ್ನೂರಿನ ಸ್ವತಂತ್ರ ಕಪಿಗೋತ್ರದ ನರಸಾವಧಾನಿಗೆ ಜಿಗಳಿ, ಕುಂದೂರು, ಹರೋಸಾಗರ ಮುಂತಾದ ಗ್ರಾಮಗಳ ಜೋತಿಷ್ಯ ಪುರೋಹಿತಕ್ಕಾಗಿ ದಾನ ಕೊಟ್ಟಿದ್ದನ್ನು ತಿಳಿಸುತ್ತದೆ. ವೀರಪ್ರತಾಪ ದೇವರಾಯನ ಹರಿಹರದ ಕ್ರಿ.ಶ. ೧೪೧೦ರ[೧೮೧] ಶಾಸನದಲ್ಲಿ ಈತನ ಮಂತ್ರಿಬುಳ್ಳರಾಯ ತುಂಗಭದ್ರಾ ನದಿಗೆ ಸೇರುವ ಹರಿದ್ರಾ ನದಿಗೆ ಒಂದು ಅಣೆಕಟ್ಟನ್ನು ಕಟ್ಟಿ ಹರಿಹರದ ಆಗ್ರಹಾರದ ಬ್ರಾಹ್ಮಣರ ಜಮೀನಿಗೆ ನೀರಾವರಿ ಸೌಲಭ್ಯ ಕಲ್ಪಿಸಿದನೆಂದು ಆ ಕೆಲಸಕ್ಕೆ ಹರಿಹರ ದೇವಸ್ಥಾನದ್ದು ಎರಡು ಪಾಲ ಬ್ರಾಹ್ಮಣರದ್ದು ಒಂದು ಪಾಲು ಖರ್ಚು ನಿಗಧಿಗೊಳಿಸಿ, ಒಂದ ಆದಾಯದಲ್ಲಿ ದೇವರಿಗೆ ಎರಡು ಪಾಲು, ಬ್ರಾಹ್ಮನರಿಗೆ ಒಂದು ಪಾಲು ಸಲ್ಲುವಂತೆ ಹಂಚಿದ್ದನ್ನು ಹೆಸರು, ಗೋತ್ರ

ಸಮೇತ ತಿಳಿಸುತ್ತದೆ. ಕಾಲಾನಂತರ ಬುಳ್ಳರಾಜರು ನಿರ್ಮಿಸಿದ ಅಣೆಕಟ್ಟೆ ಒಡೆದು ಹೋದಾಗ ಅದೇ ದೇವರಾಯನ ಆಳ್ವಿಕೆಯಲ್ಲಿ ಮುಂದೆ ಮಂತ್ರಿಯಾಗಿ ಬಂದ ಚಾಮರಾಜ ಕ್ರಿ.ಶ. ೧೪೨೪ರಲ್ಲಿ ಮತ್ತೆ ಅದನ್ನು ಕಟ್ಟಿಸಿದನೆಂದು ಹರಿಹರದ ಇನ್ನೊಂದು ಶಾಸನ[೧೮೨] ತಿಳಿಸುತ್ತದೆ.

ಕ್ರಿ.ಶ. ೧೫೦೯ ರಿಂದ ೧೫೨೯ರಲ್ಲಿ ಆಳ್ವಿಕೆ ನಡೆಸಿದ ಕೃಷ್ಣದೇವರಾಯನು ವಿಜಯನಗರ ಅರಸರಲ್ಲೇ ಪ್ರಮುಖನು ಈತನ ಹಲವಾರು ಶಾಸನಗಳು ಪ್ರಸ್ತುತ ಪ್ರದೇಶದಲ್ಲಿ ದೊರೆತಿವೆ. ಮಲೆಬೆನ್ನೂರಿನಲ್ಲಿ[೧೮೩] ದೊರೆತ ಕ್ರಿ.ಶ. ೧೫೧೬ರ ಶಾಸನವು ಗಜಪತಿ ವಂಶದ ಪ್ರತಾಪರುದ್ರ ಮಹಾರಾಜನ ಕುಮಾರ ವೀರಭದ್ರನು, ಅವನ ನಾಯಕತ್ವಕ್ಕೆ ನೀಡಿದ್ದ ಮಲೇಬೆನ್ನೂರು, ಲಿಂಗದಹಳ್ಳಿ ಸೀಮೆಗಳ ಪ್ರಜೆಗಳಿಂದ ಅರಮ ಸೇರಬೇಕಾಗಿದ್ದ ಮದುವೆ ಸುಂಕವನ್ನು ಮನ್ನಾ ಮಾಡಿದ ವಿಷಯವನ್ನು ತಿಳಿಸುತ್ತದೆ. ಇದೇ ಗ್ರಾಮದ ಕ್ರಿ.ಶ. ೧೫೨೮[೧೮೪] ರ ಶಾಸನವು ಗ್ರಾಮದ ಕೆಸೆಟಿ ಪಟ್ಟಣಸ್ವಾಮಿಗೌಡ ಮತ್ತು ಪ್ರಜೆಗಳಿಗೆ ಕಬ್ಬಿನ ಸುಂಕವನ್ನು ಮನ್ನಾ ಮಾಡಿದ ಉಲ್ಲೇಖವಿದೆ. ಅಚ್ಯುತರಾಯನ ಕ್ರಿ.ಶ. ೧೫೩೦ರ ಹರಿಹರದ[೧೮೫] ಶಾಸನವು ಹಣಕಾಸು ಮಂತ್ರಿಯಾದ ತಿಮ್ಮರಸನ ಮಗ ನಾರಾಯಣದೇವನ ಹೆಸರನ್ನು ಉಲ್ಲೇಖಿಸುವ ಈ ಶಾಸನ ಹರಿಹರ ಸೀಮೆಯ ಬುಳ್ಳಾಪುರಕ್ಕೆ ಅಚ್ಯುತರಾಯಪುರ ಎನ್ನವ ಪುನರ್ ನಾಮಕರಣ ಮಾಡಿದ ವಿವರಗಳನ್ನು ನೀಡುತ್ತದೆ. ಇದೇ ಅಚ್ಯುತರಾಯ ಬೆಳವಡಿ ಮತ್ತು ಗಂಗನರಸಿ ಗ್ರಾಮವನ್ನು ಹರಿಹರ ದೇವರ ಅಮೃತಪಡಿ ನೈವೇದ್ಯಕ್ಕೆ ಅರ್ಪಿಸಿದ್ದನ್ನೂ ಕ್ರಿ.ಶ. ೧೫೩೧ರ ಹರಿಹರದ[೧೮೬] ಶಾಸನ ತಿಳಿಸುತ್ತದೆ. ಈತನ ಕಾಲದ ಇದೇ ಗ್ರಾಮದ ಕ್ರಿ.ಶ. ೧೫೩೩ರ ಇನ್ನೊಂದು ಶಾಸನದಲ್ಲಿ ಅವಸರದ ಚಂದ್ರಶೇಖರಾಯರು ಹರಿಹರ ದೇವಾಲಯದ ಉತ್ತರದಲ್ಲಿ ದೇಮೇಶ್ವರ ದೇವಸ್ಥಾನ ಪ್ರತಿಷ್ಠಾಪಿಸಿದ್ದನ್ನು ತಿಳಿಸುತ್ತದೆ. ಹಾಗೆಯೇ ಕ್ರಿ.ಶ. ೧೫೩೮[೧೮೭] ರ ಇದೇ ಗ್ರಾಮದ ಶಾಸನ ಅಚ್ಯುತಮಲ್ಲಪ್ಪಣ್ಣನೃಪತಿ ಅಚ್ಯುತರಾಯೇಂದ್ರ ಮಲ್ಲಾಪುರವೆಂದು ಹೆಸರಿಟ್ಟು, ಕುಂದುವಾಡವನ್ನು ಹರಿಹರದೇವಾಲಯದ ಮಧ್ಯಾಹ್ನದ ಸೀಮೆಗೆ ಕೊಟ್ಟಿದ್ದನ್ನು ತಿಳಿಸುತ್ತದೆ. ಈತನಿಗೆ ಸಂಬಂಧಿಸಿದ ಈ ಪ್ರದೇಶದಲ್ಲಿನ ಕೊನೆಯ ಶಾಸನವು ಕ್ರಿ.ಶ. ೧೫೪೬ ಹರಿಹರದ[೧೮೮] ಶಾಸನವು ಮಹಾನಂದ ನಿಧಿ ಎಂಬ ವಿಶೇಷ ನಿಧಿಯನ್ನು ಸ್ಥಾಪಿಸಿದ್ದಾಗಿ ತಿಳಿಸುತ್ತದೆ.

ವಿಜಯನಗರದ ತುಳುವ ಮನೆತನದ ಕೊನೆಯ ಅರಸನಾಗಿದ್ದ ಸದಾಶಿವನಿಗೆ ಸಂಬಂಧಿಸಿದಂತೆ ಹರಿಹರ, ಗಂಗನರಸಿಗಳಲ್ಲಿ ಶಾಸಗಳು ದೊರೆಯುತ್ತದೆ. ಕ್ರಿ.ಶ. ೧೫೫೫ರ ಹರಿಹರದ[೧೮೯] ಶಾಸನದಲ್ಲಿ ಶ್ರೀವೀರಪ್ರತಾಪ ಸದಾಶಿವಮಹಾರಾಯರ ಆಳ್ವಿಕೆಯಲ್ಲಿ ಸಾಮಂತ ಹಡಪದ ಸಿಂಧುಗೋವಿಂದನ ಗೌಡಿಕೆಯಲ್ಲಿ ಬೈಯಪ್ಪನಾಯಕರ ಮಕ್ಕಳಾದ ಕೃಷ್ಣಪ್ಪ ನಾಯಕರು ನರಸಿಂಹ ಜಯಂತಿಯಂದು ತಂದೆ ತಾಯಿಗೆ [ಬೈಯಪ್ಪ ತಂದೆ, ತಾಯಿ ಕೊಂಡಮ್ಮ] ಪುಣ್ಯವಾಗಲೆಂದು ಹರಿಹರ ದೇವರಿಗೆ ಬೆಳ್ಳಿಯ ಹರಿವಾಣವನ್ನು ನೀಡಿದರೆಂದು ಶಾಸನ ಉಲ್ಲೇಖಿಸುತ್ತದೆ. ಇದೇ ಗ್ರಾಮದ ಕ್ರಿ.ಶ. ೧೫೬೧[೧೯೦] ರ ಶಾಸನವು ಹರಿಹರ ದೇವರಿಗೆ ಮಣಿನಾಗಪುರವರಾಧೀಶ್ವರನಾದ ಹಡಪದ ಬೈಯಪ್ಪನಾಯಕರ ಮಕ್ಕಳು ಕೃಷ್ಣಪ್ಪ ನಾಯಕರ ಕಾರ್ಯಕರ್ತರಾದ ವೇಲೂರು

ಕಾಳಪ್ಪನಾಯಕ ಮಕ್ಕಳು ಮಾರ್ಗ ಸಹಾಯ ನಾಯಕರು ಹರಿಹರರ ಪತ್ನಿಯರಾದ ಮಹಾಲಕ್ಷ್ಮಿ ಮತ್ತು ಪಾರ್ವತಿದೇವಿಯರ ರಥೋತ್ಸವಕ್ಕಾಗಿ ಕೃಷ್ಣಪ್ಪ ನಾಯಕರಿಗೆ ಪುಣ್ಯವಾಗಲೆಂದು ಗಂಗನರಸಿ ಗ್ರಾಮವನ್ನು ದಾನ ನೀಡಿದ ಉಲ್ಲೇಖವಿದೆ.

ಕ್ರಿ.ಶ. ೧೫೬೧ರ ಗಂಗನರಸಿ[೧೯೧] ಗ್ರಾಮದ ಶಾಸನವು. ಹರಿಹರದ ಶಾಸನದಲ್ಲಿನ ಮಾಹಿತಿಯನ್ನು ಉಲ್ಲೇಖ ಮಾಡುತ್ತದೆ. ಹೀಗೆ ವಿಜಯನಗರ ಅರಸರ ಅನೇಕ ಶಾಸಗಳು ಈ ಪ್ರದೇಶದಲ್ಲಿ ದೊರೆತು ಅಂದಿನ ಆಡಳಿತದ ವ್ಯವಸ್ಥೆಯ ಮೇಲೆ ಬೆಳಕು ಚೆಲ್ಲುತ್ತವೆ. ಹಾಗೆಯೇ ವಿಜಯನಗರದ ಅರಸರು ಕಲಾಪ್ರಿಯರಾಗಿದ್ದು ಕಲೆ ಮತ್ತು ವಾಸ್ತು ಶಿಲ್ಪಕ್ಕೆ ಮಹತ್ತರವಾದ ಪ್ರೋತ್ಸಾಹವನ್ನು ನೀಡುವುದರ ಮೂಲಕ ಅನೇಕ ದೇವಾಲಯಗಳನ್ನು, ಶಿಲ್ಪಗಳನ್ನು ನಿರ್ಮಿಸಿದ್ದಾರೆ. ಅನೇಕ ಆಗ್ರಹಾರಗಳನ್ನು ನಿರ್ಮಿಸಿ ಅವುಗಳಿಗೆ ದತ್ತಿಬಿಟ್ಟಿರುವ ವಿವರಗಳೂ ದೊರೆಯುತ್ತವೆ. ಅಣೆಕಟ್ಟು, ಕೆರೆ, ಕಾಲುವೆಗಳನ್ನು ನಿರ್ಮಿಸಿ ಕೃಷಿಗೂ ಪ್ರೋತ್ಸಾಹ ನೀಡಿರುವುದನ್ನು ಅವರ ಶಾಸನಗಳಿಂದ ತಿಳಿಯಬಹುದಾಗಿದೆ.

ಬೇಲೂರು ನಾಯಕರು: ಬಲಂನಾಯಕರೆಂಬ ಹೆಸರಿನಿಂದ ಬೇಲೂರು ನಾಯಕರನ್ನು ಶಾಸನಗಳಲ್ಲಿ ಮಣಿ ನಾಗಪುರಾವಧೀಶ್ವಾರರೆಂದು ಕರೆಯಲಾಗಿದೆ. ಈಗಿನ ಮಂಜರಾಬಾದು ಅಂದಿನ ಮಣಿನಾಗಪುರ ವಿಜಯನಗರ ಕೃಷ್ಣದೇವರಾಯನ ಖಾಸ ಸಂಚಿಯಾಗಿದ್ದ ಹಡಪದ ಬೇಲೂರು ಕೃಷ್ಣಪ್ಪ ನಾಯಕರಿಗೆ ಈಗಿನ ಪ್ರಾಂತ್ಯ ವಹಿಸಿಕೊಟ್ಟು ಕಾರಣ. ಇವರನ್ನು ಬೇಲೂರು ನಾಯಕರೆಂದು ಕರೆಯಲಾಗುತ್ತದೆ.[೧೯೨] ಕೆಲವು ಕಾಲ ಐಗೂರಿನಿಂದಲೂ ಆಡಳಿತ ನಡೆಸಿದ ಇವರ ಶಾಸನಗಳು ಹರಿಹರ ಪ್ರದೇಶದಲ್ಲಿ ದೊರೆತಿವೆ. ಹತ್ತಿರದ ಕಾಡಜ್ಜಿಯಲ್ಲಿ ದೊರೆತ ಶಾಸನ ಬೇಲೂರು ಕೃಷ್ಣಪ್ಪ ನಾಯಕರು ತಮ್ಮ ತಂದೆ ಭೈರಪ್ಪ, ತಾಯಿ ಕೊಂಡಮ್ಮರಿಗೆ ಪುಣ್ಯವಾಗಲಿ ಎಂದು ಬಿಳಿಚೋಡು ಸೀಮೆಯ ಕಾಡಜ್ಜಿ ಎಂಬ ಗ್ರಾಮವನ್ನು ಕ್ರಿ.ಶ. ೧೫೬೧ರ[೧೯೩] ಹರಿಹರದ ದೇವರ ಛತ್ರದ ಅವಸರ ನೈವೇದ್ಯಕ್ಕೆ ತುಪ್ಪದ ಸುಂಕಬಿಟ್ಟಿದ್ದನ್ನು ತಿಳಿಸುತ್ತದೆ. ಹರಿಹರ ಶಾಸನ[೧೯೪] ಮತ್ತು ಗಂಗನರಸಿ ಶಾಸನ[೧೯೫] ಎರಡು ವಿಷಯಗಳೂ ಒಂದೇ ಆಗಿದ್ದು, ಕೃಷ್ಣಪ್ಪ ನಾಯಕರ ಕಾರ್ಯಕರ್ತ ಕಾಳಪ್ಪ ನಾಯಕರ ಮಕ್ಕಳು ಮಾರ್ಗಸಹಾಯಕರು ಕೃಷ್ಣಪ್ಪನಾಯಕರಿಗೆ ಒಳಿತಾಗಲೆಂದು ಹರಿಹರದೇವರ ಹೆಂಡಿರಾದ ಮಹಾಲಕ್ಷ್ಮಿದೇವಿ, ಪಾರ್ವತಿದೇವಿಯರಿಗೆ ರಥೋತ್ಸವಕ್ಕೇ ಗಂಗನರಸಿ ಗ್ರಾಮವನ್ನು ದತ್ತಿ ಬಿಟ್ಟಿದ್ದನ್ನು ಈ ಶಾಸನ ತಿಳಿಸುತ್ತದೆ. ಒಂದೇ ಪಾಠದ ಶಾಸನ ದತ್ತಿ ಬಿಟ್ಟ ಗ್ರಾಮ ಹಾಗೂ ದತ್ತಿ ಕೊಟ್ಟ ದೇವಾಲಯದಲ್ಲಿಯೂ ಹಾಕಿಸಿರುವುದು ರಾಜ್ಯದ ಶಾಸನ ಇತಿಹಾಸದಲ್ಲೇ ಅಪೂರ್ವವಾಗಿದೆ.

ಚಿತ್ರದುರ್ಗದ ಪಾಳೆಯಗಾರರು: ಮಧ್ಯಯುಗೀನ ಭಾರತದ ಇತಿಹಾಸದ ಅತ್ಯಂತ ಆಕರ್ಷಕವಾದ ಕಾಲಘಟ್ಟವೆಂದರೆ ವಿಜಯನಗರ ಸಾಮ್ರಾಜ್ಯದ ಕಾಲಾವಧಿ. ಕ್ರಿ.ಶ. ೧೪ನೇ ಶತಮಾನದ ಪೂರ್ವಾರ್ಧದಲ್ಲಿ ಏಳಿಗೆಗೆ ಬಂದ ವಿಜಯನಗರ ಅರಸರು ಬಹುವಿಶಾಲವಾದ ಸಾಮ್ರಾಜ್ಯವನ್ನು ನಿರ್ಮಿಸಿ ಭಾರತದ ಆಸೆ ಕೀರ್ತಿ ಪತಾಕೆಯನ್ನು ಹಾರಿಸಿದರು. ಆದರೆ ಕ್ರಿ.ಶ. ೧೫೬೫ರಲ್ಲಿ ನಡೆದ

ರಕ್ಕಸಗಿ–ತಂಗಡಗಿ ಯುದ್ಧಾನಂತರ ಸಾಮ್ರಾಜ್ಯವು ನಾಶಗೊಂಡಿತು. ಇಂತಹ ಸಂದಿಗ್ಧ ರಾಜಕೀಯ ಸನ್ನಿವೇಶದಲ್ಲಿ ಹಲವಾರು ಅಧೀನ ಪಾಳೆಯಗಾರರು ಸ್ವತಂತ್ರ ಹೊಂದಿದರು. ಆಗ ಹರಿಹರ ಮತ್ತು ಅದರ ಸುತ್ತಲಿನ ಪ್ರದೇಶ ಇಕ್ಕೇರಿ ರಾಜರ ವಶಕ್ಕೆ ಬಂದಿತು.[೯೬] ಈ ಪ್ರದೇಶಗಳನ್ನು ಮುಂದೆ ಬಿದನೂರು ನಾಯಕರು[೯೭] ಅವರಿಂದ ಪಡೆದರು ಚಿತ್ರದುರ್ಗ ಪಾಳೆಯಗಾರರು ಇವರನ್ನು ಸೋಲಿಸಿ ಈ ಪ್ರದೇಶಗಳನ್ನು ಆಕ್ರಮಿಸಿದರು. ಹರಿಹರ ಗ್ರಾಮವು ಬಹಳ ಕಾಲದವರೆಗೆ ಇವರ ಅಧೀನದಲ್ಲಿಯೇ ಇತ್ತು. ಕ್ರಿ.ಶ. ೧೬೭೬ರಲ್ಲಿ ಇಮ್ಮಡಿ ಮದಕರಿನಾಯಕ ಅಧಿಕಾರಕ್ಕೆ ಬಂದನು. ಈತನ ಕಾಲದಲ್ಲಿ ಷಂಷೇರ್ ಖಾನನು ಆರು ಸಹಸ್ರ ಕುದುರೆ ಮತ್ತು ಹನ್ನೆರಡು ಸಹಸ್ರ ಪದಾತಿದಳದೊಡನೆ ಬಂದು ಹರಿಹರವನ್ನು ಮುತ್ತಿದನು. ಪಾಳೆಯಗಾರನು ಸ್ವತ: ಯುದ್ಧದಲ್ಲಿ ಭಾಗವಹಿಸಿ ಷಂಷೇರ್ ಖಾನನ ದಂಡು ಹಿಮ್ಮೆಟ್ಟುವಂತೆ ಮಾಡಿದನು.[೯೮] ಹೀಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಚಿತ್ರದುರ್ಗದ ಪಾಳೆಯಗಾರರು ಹರಿಹರ ಪ್ರದೇಶವನ್ನು ತಮ್ಮ ಆಡಳಿತಕ್ಕೆ ಸೇರಿಸಿಕೊಂಡು ಆಳ್ವಿಕೆ ನಡೆಸಿದ್ದಾರೆ.

ಮೈಸೂರು ಒಡೆಯರು: ಕ್ರಿ.ಶ. ೧೫ನೇ ಶತಮಾನದ ಆದಿಭಾಗದಲ್ಲಿ ಮೈಸೂರು ಜಿಲ್ಲೆ ಕೆಲವು ಭಾಗಗಳನ್ನು ಒಳಗೊಂಡಿದ್ದ ಚಿಕ್ಕ ಪಾಳೆಯಪಟ್ಟಿನಲ್ಲಿ ಅಧಿಕಾರ ಸ್ಥಾಪಿಸಿ ರಕ್ಕಸಗಿ–ತಂಗಡಗಿ ಯುದ್ಧದ ತರುವಾಯ ವಿಜಯನಗರ ಸಾಮ್ರಾಜ್ಯ ಶಿಥಿಲವಾಗುತ್ತಿದ್ದ ಕಾಲದಲ್ಲಿ ಕೆಲಕಾಲ ಸಾಮಂತರಾಗಿ ಅನಂತರ ಸ್ವತಂತ್ರರಾಗಿ ದಕ್ಷಿಣ ಕರ್ನಾಟಕದ ಹಲವು ಭಾಗಗಳನ್ನು ಆಕ್ರಮಿಸಿಕೊಂಡು ಮುಂದೆ ತಮ್ಮ ಪ್ರಭಾವವನ್ನು ಸುತ್ತಣ ಪ್ರದೇಶಗಳಿಗೂ ವಿಸ್ತರಿಸಿ ೧೮ನೇ ಶತಮಾನದ ಉತ್ತರಾರ್ಧದಲ್ಲಿ ಕೆಲಕಾಲ ಗುಪ್ತವಾಗಿದ್ದು ಅಧಿಕಾರವನ್ನು ಮತ್ತೆ ಬ್ರಿಟಿಷರ ಸಹಾಯದಿಂದ ಪಡೆದು ಅವರ ಅಧೀನತ್ವದಲ್ಲಿ ಈ ರಾಜ್ಯ ಭಾರತ ಒಕ್ಕೂಟದಲ್ಲಿ ಸರಿಹೋಗುವ ತನಕ ಆಳಿದ ರಾಜಮನೆತನ ಶ್ರೀರಂಗಪಟ್ಟಣ ಮತ್ತು ಮೈಸೂರು ಈ ವಂಶದ ಅರಸರ ರಾಜಧಾನಿಗಳಾಗಿದ್ದವು.

ಈ ಮನೆತನದ ಸ್ಥಾಪಕನಾದ ಯದುರಾಯ ಸೋದರ ಕೃಷ್ಣರಾಯನೊಡನೆ ದ್ವಾರಕೆಯಿಂದ ಇಲ್ಲಿ ಬಂದು ನೆಲೆಸಿದನೆಂಬ ಐತಿಹ್ಯವಿದೆಯಾದರೂ ಶಾಸನಗಳಲ್ಲಿ ಇವರ ಪ್ರಸ್ತಾಪ ಬರುವುದಿಲ್ಲ. ಆದ್ಯನಾದ ಯದುರಾಯ [ಸು.೧೩೯೯–೧೪೨೩] ಸುಸಂದರ್ಭವೊದಗಿದಾಗ, ಮೈಸೂರಿನ ಆಗ್ನೇಯದಲ್ಲಿರುವ ಹದಿನಾಡು ಮತ್ತು ಕಾರುಹಳ್ಳಿಗಳ ಪಾಳೆಯಪಟ್ಟಿನ ಅಧಿಪತ್ಯ ಸಾಧಿಸಿಕೊಂಡಿರಬೇಕು.[೯೯] ಈ ಸಂದರ್ಭದಲ್ಲಿ ಜಂಗಮನೊಬ್ಬ ಸಹಕರಿಸಿದನೆಂದೂ ಅವನ ಮೇಲಿನ ಗೌರವದಿಂದ ತಮ್ಮ ಹೆಸರಿನೊಡನೆ ಮೈಸೂರು ಅರಸರು ಒಡೆಯರು ಎಂಬ ಹೆಸರನ್ನು ಸೇರಿಸಿಕೊಳ್ಳುವ ಪರಿಪಾಠ ಬೆಳೆಯಿತೆಂದೂ ಪ್ರತೀತಿ. ಈ ಮೈಸೂರು ಒಡೆಯರಿಗೆ ಸಂಬಂಧಿಸಿದ ಶಾಸನವೊಂದು ಭಾನುವಳ್ಳಿಯಲ್ಲಿ ದೊರೆತಿದ್ದು ಇದು ಕ್ರಿ.ಶ. ೧೮೫೪ಕ್ಕೆ[೧೦೦] ಸಂಬಂಧಿಸಿದ ಕೃಷ್ಣರಾಜಕಂಠಿರವ ಮಹಾರಾಜರಿಗೆ ಸಂಬಂಧಿಸಿದ್ದಾಗಿದೆ.

ಟಿಪ್ಪು ಸುಲ್ತಾನನ ಮರಣದ ನಂತರ ಮೈಸೂರು ರಾಜ್ಯ ಮೈಸೂರು ಒಡೆಯರಿಗೆ ಪುನಃ ಮರಳಿದ ನಂತರ ಬ್ರಿಟಿಷರು ವಿಶಾಲ ಮೈಸೂರು ರಾಜ್ಯವನ್ನು ಕರಾರು ಪ್ರಕಾರ ನಾಲ್ಕು ಭಾಗವಾಗಿ

ಮಾಡಿದರು. ಮರಾಠರು, ನಿಜಾಮರು ಮತ್ತು ಬ್ರಿಟಿಷರು ತಲಾ ಒಂದು ಭಾಗ ಹಂಚಿಕೊಂಡರು ಉಳಿದ ಒಂದು ಭಾಗವನ್ನು ಮೈಸೂರು ಒಡೆಯರಿಗೆ ಅನೇಕ ಷರತ್ತುಗಳ ಮೇಲೆ ಅಧಿಕಾರ ನೀಡಿದರು. ಕ್ರಿ.ಶ. ೧೮೧೧ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಅಧಿಕಾರ ವಹಿಸಿಕೊಂಡಾಗ, ತಮ್ಮ ರಾಜ್ಯದಲ್ಲಿ ಅನೇಕ ಸುಧಾರಣೆಗಳನ್ನು ಮಾಡಿ ೧೮ ಆಡಳಿತ ಕಛೇರಿಗಳನ್ನು ೧೨೫ ಗಡಿ ತಾಲೂಕುಗಳನ್ನು ೬ ಫೌಜುದಾರಿ ಅಥವಾ ತುಕಡಿಗಳನ್ನು ಸ್ಥಾಪಿಸಿದರು ಅದರಲ್ಲಿ ಚಿತ್ರದುರ್ಗ ತುಕಡಿಯೂ ಒಂದಾಗಿದ್ದು. ಈ ತುಕಡಿಯಲ್ಲಿ ದಾವಣಗೆರೆಯೂ ಒಂದು ತಾಲೂಕು ಆಗಿತ್ತು. ಆಗ ಒಬ್ಬ ಸುಭೇದಾರ, ಪೇಷ್ಕಾರ, ಇಬ್ಬರು ಶಿರಸ್ತೆದಾರರು, ಒಬ್ಬ ಗುಮಾಸ್ತ, ಒಬ್ಬ ಮುನ್ಷಿ ಓಲೆಕಾರ, ಕಿಲ್ಲೇದಾರ, ಠಾಣಾದಾರ, ಅಂಚೆ ಮುತ್ಸದ್ಧಿ, ಗೌಡ, ಶ್ಯಾನುಭೋಗ, ಷೇಕುದಾರ ಒಬ್ಬ ಫೌಜುದಾರ ಇಷ್ಟು ಜನ ದಾವಣಗೆರೆ ತಾಲೂಕಿನ ಅಧಿಕಾರಿಗಳಾಗಿದ್ದರು ಎಂದು ತಿಳಿದು ಬರುತ್ತದೆ.

ಹರಿಹರದಲ್ಲಿ ತರೀಕೆರೆ ಪಾಳೆಯಗಾರರು ಕೋಟೆಯನ್ನು ಕಟ್ಟಿಸಿದರು. ಸವಣೂರಿನ ನವಾಬರು ತರೀಕೆರೆ ಪಾಳೆಯಗಾರರಿಂದ ಕಸಿದುಕೊಂಡು ನವಾಬ ಅಬ್ದುಲ್ ಮಜೀದಖಾನನು ಶೇರ್‌ಖಾನ್‌ನಿಗೆ ಜಹಗೀರಾಗಿ ಹರಿಹರವನ್ನು[೨೦೧] ಕೊಟ್ಟನು. ಆಗ ಬಿಜಾಪುರ ಸುಲ್ತಾನರ ಸೈನಿಕರು ಹರಿಹರ ಕೋಟೆಯನ್ನು ಮುತ್ತಿ ಹರಿಹರದ ದೇವಾಲಯದ ಮೇಲೆ ದಾಳಿ ಮಾಡಿದರು.[೨೦೨] ವಿಗ್ರಹವನ್ನು ತುಂಗಭದ್ರಾ ನದಿಗೆ ಎಸೆದರು ದೇವಾಲಯದ ಶಿಲ್ಪಗಳನ್ನು ಒಡೆದು ಹಾಕಿದರು. ಹೀಗೆ ಮಾಡಿದ ಗುರುತುಗಳು ಈಗಲೂ ದೇವಾಲಯದ ಪ್ರತಿಯೊಂದು ಬಾಗಿಲ ಮೇಲೆ ಇವೆ.[೨೦೩] ಹರಿಹರ ಗ್ರಾಮವನ್ನು ಮುಸಲ್ಮಾನರು ಆಕ್ರಮಿಸಿಕೊಂಡಿದ್ದಾರೆಂದು ಅರಿತ ಮರಾಠ ಪೇಶ್ವೆಯರು ದೊಡ್ಡ ಸೈನ್ಯವನ್ನು ಕಳಿಸಿದರು. ಅ ಸೈನ್ಯ ಹರಿಹರವನ್ನು ಮುತ್ತಿದ ಮುಸಲ್ಮಾನ ಸೈನಿಕರನ್ನೆಲ್ಲಾ ಓಡಿಸಿ ತನ್ನ ಸ್ವಾಧೀನಪಡಿಸಿಕೊಂಡಿತು.

ಹೈದರಾಲಿ ಮತ್ತು ಟಿಪ್ಪು ಸುಲ್ತಾನ: ಮೈಸೂರು ಒಡೆಯರ ಸೈನ್ಯದಲ್ಲಿದ್ದ ಹೈದರನೆಂಬ ಸೈನಿಕನು ಪ್ರಬಲನಾಗಿ ಹಿಂದೂರಾಜನನ್ನು ಉಚ್ಚಾಟನೆಗೊಳಿಸಿ ತಾನು ಮೈಸೂರು ಸಿಂಹಾಸನವನ್ನೇರಿ ಸುಲ್ತಾನನಾಗಿ ಬಿಟ್ಟನು. ಕ್ರಿ.ಶ. ೧೭೬೧ ರಿಂದ ೧೭೯೯ರವರೆಗೆ ಹೈದರಾಲಿ ಮತ್ತು ಅವನ ಮಗ ಟಿಪ್ಪುಸುಲ್ತಾನನು ಮೈಸೂರು ರಾಜ್ಯವಾಳಿದರು. ಹೈದರನು ಮೈಸೂರು ಸಿಂಹಾಸನವನ್ನೇರಿದೊಡನೆ ರಾಜ್ಯ ವಿಸ್ತರಿಸುವ ಆಸೆಯಿಂದ ರಾಜ್ಯದಲ್ಲೆಲ್ಲಾ ಯಾತ್ರೆಯನ್ನು ಕೈಗೊಂಡನು ಅವನು ತನ್ನ ಮಗನಿಂದೊಡಗೂಡಿ ಅಪಾರ ಸೈನ್ಯ ಸಮೇತ ಉತ್ತರ ದಿಕ್ಕಿಗೆ ಸಾಗಿ ಹರಿಹರ ಮತ್ತು ಆದರ ಸುತ್ತಲಿನ ವಿಶಾಲವಾದ ಪ್ರದೇಶವನ್ನು ವಶಪಡಿಸಿಕೊಂಡು ನದಿ ದಾಟಿ ಮುಂದೆ ಸಾಗಿದನು. ನದಿಯ ಆಚೆಗಿನ ಪ್ರದೇಶದಲ್ಲಿ ಮರಾಠ ಸರದಾರ ಸೈನಿಕರು ಹೈದರನಿಗೆ ಎದುರಾದರು. ಘೋರ ಕದನದ ನಂತರ ಆವರೀರ್ವರಲ್ಲಿ ಒಪ್ಪಂದವಾಯಿತು. ಆ ಒಪ್ಪಂದದ ಪ್ರಕಾರ ಹರಿಹರವು ಪುನಃ ಮರಾಠರ ವಶಕ್ಕೆ ಬಂದಿತು.[೨೦೪] ಆಗ ಮರಾಠ ಸರದಾರ ಅಪ್ಪೋಜಿರಾಯರು ಹರಿಹರ ಪ್ರದೇಶಗಳಿಗೆ ಕೇಂದ್ರವಾಗಿದ್ದ ದಾವಣಗೆರೆಯನ್ನು ಜಹಾಗೀರಿಯಾಗಿ ಪಡೆದಿದ್ದ ಇದನ್ನು ಅಭಿವೃದ್ಧಿ ಪಡಿಸುವುದಕ್ಕಾಗಿ ಮರಾಠಿ ವ್ಯಾಪಾರಿಗಳನ್ನು ದಾವಣಗೆರೆಗೆ ಕರೆತಂದ ಅದರೆ ಆಪ್ಪೋಜಿರಾಯನಿಗೆ

ಉತ್ತರಾಧಿಕಾರಿಗಳಿಲ್ಲದೆ ದಾವಣಗೆರೆ, ಹರಿಹರ ಜಹಾಗೀರನ್ನು ಟಿಪ್ಪು ಹಿಂದಕ್ಕೆ ಪಡೆದ ನಂತರ ಟಿಪ್ಪು ಕ್ರಿ.ಶ. ೧೭೯೦-೯೨ರಲ್ಲಿ ಬ್ರಿಟಿಷರಿಗೆ ಸೋತಾಗ ಅವರಿಗೆ ಕೊಡಬೇಕಾಗಿದ್ದ ಪರಿಹಾರಕ್ಕಾಗಿ ಹರಿಹರ ತುಂಗಭದ್ರಾ ನದಿಯ ಉತ್ತರ ಭಾಗವನ್ನು ೩.೫ ಕೋಟಿ[೨೦೫] ರೂಪಾಯಿಗಳಿಗೆ ಸ್ಥಳೀಯವಾಗಿಯೇ ಉಳಿದಿದ್ದ ಮರಾಠರಿಗೆ ಮಾರಿದನು ಆಗ ದಾವಣಗೆರೆ, ಹರಿಹರ, ಮೈಸೂರು ರಾಜ್ಯದ ಪ್ರದೇಶಗಳಾದವು.

ಕ್ರಿ.ಶ. ೧೭೯೯ರಲ್ಲಿ ಬ್ಯಾರಿಕ್ಲೋಸ್ ಎನ್ನುವ ಬ್ರಿಟಿಷ್ ಅಧಿಕಾರಿ ಮೈಸೂರು ರೆಸಿಡೆಂಟಿ ಆಗಿದ್ದಾಗ ಹರಿಹರದಲ್ಲಿ ಬ್ರಿಟಿಷ್ ಸೈನಿಕ ಠಾಣೆ ಪ್ರಾರಂಭವಾಗಿತ್ತು 'ಮೈಸೂರು ಹುಲಿ' ಎಂದು ಗರ್ಜಿಸುತ್ತಿದ್ದಾ ಟಿಪ್ಪು ಸುಲ್ತಾನನೂ ಆಂಗ್ಲ ಸೈನಿಕರ ಮೋಸಕ್ಕೆ ಬಲಿಯಾದನು. ಆಗ ಹರಿಹರ ಸಂಪೂರ್ಣವಾಗಿ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಸರಕಾರದ ಅಧಿಕಾರಕ್ಕೆ ಒಳಪಟ್ಟಿತು.[೨೦೬] ಅಂದಿನಿಂದ ಹರಿಹರ ಪ್ರದೇಶ ಮೈಸೂರು ರಾಜ್ಯದಲ್ಲೇ ಇದೆ. ಕ್ರಿ.ಶ. ೧೮೬೬ ರಲ್ಲಿ ಹರಿಹರದ ಹತ್ತಿರ ತುಂಗಭದ್ರಾ ನದಿಗೆ ಸೇತುವೆಯನ್ನು ಮೂರುವರೆ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ನಿರ್ಮಾಣ ಮಾಡಲಾಯಿತು. ರೈಲ್ವೆ ಸೇತುವೆಯನ್ನು ಕ್ರಿ.ಶ. ೧೮೬೪ ರಿಂದ ಪ್ರಾರಂಭ ಮಾಡಿ ಕ್ರಿ.ಶ. ೧೮೬೯ ರವರೆಗೆ ಟೇಲರ್ ಕಂಪನಿಯು ಇದನ್ನು ಮೂರುವರೆ ವರ್ಷದಲ್ಲಿ ನಿರ್ಮಾಣ ಮಾಡಿತು.[೨೦೭] ಇದರಿಂದ ಮೈಸೂರು ಸಂಸ್ಥಾನ ಮತ್ತು ಕರ್ನಾಟಕದ ಸಂಪರ್ಕ ಬೆಳೆಯಿತು. ಕ್ರಿ.ಶ. ೧೮೭೧ರ ಜನಗಣತಿಯಲ್ಲಿ ಹರಿಹರ ಗ್ರಾಮದ ಜನಸಂಖ್ಯೆ ೬೪೦೧ ಎಂದು ಉಲ್ಲೇಖವಿದೆ.[೨೦೮] ಆನಂತರ ಕ್ರಿ.ಶ. ೧೮೭೫ ರಲ್ಲಿ ಬ್ರಿಟಿಷ್ ಸರ್ಕಾರವು ಹರಿಹರದ ಸುತ್ತಲಿನ ಕೆಲವು ಹಳ್ಳಿಗಳನ್ನು ಸೇರಿಸಿ ಸಬ್ ತಾಲೂಕನ್ನಾಗಿ ನಿರ್ಮಿಸಿ ದಾವಣಗೆರೆ ತಾಲೂಕಿನಲ್ಲಿ ಸೇರಿಸಲಾಯಿತು. ೧೯೯೭ ಆಗಸ್ಟ್ ೧೫ ರಂದು ದಾವಣಗೆರೆಯನ್ನು ಹೊಸ ಜಿಲ್ಲೆಯನ್ನಾಗಿ ಹರಿಹರವನ್ನು ತಾಲೂಕು ಕೇಂದ್ರವಾಗಿ ಮಾಡಲಾಗಿದೆ.

ಪ್ರಸ್ತುತ ಹರಿಹರ ಪ್ರದೇಶದ ರಾಜಕೀಯ ಇತಿಹಾಸವು ಪರೋಕ್ಷವಾಗಿ ಮೌರ್ಯರ ಕಾಲದಿಂದ ಪ್ರಾರಂಭವಾಗಿ ಪ್ರತ್ಯಕ್ಷವಾಗಿ ಮೈಸೂರು ಒಡೆಯರ ಕಾಲದವರೆಗೂ ನಿರಂತರವಾಗಿ ನಡೆದುಕೊಂಡು ಬಂದು ಬ್ರಿಟಿಷ್ ಸರ್ಕಾರದಲ್ಲೂ ಮುಂದುವರೆದು ತನ್ನ ಸಾಂಸ್ಕೃತಿಕ ಕುರುಹುಗಳನ್ನು ಉಳಿಸಿ ಬೆಳೆಸಿಕೊಂಡು ಬಂದಿದೆ. ಈ ಭಾಗದ ಇತಿಹಾಸವನ್ನು ವಾಸ್ತವವಾಗಿ ನೋಡುವುದಾದರೆ ಮೌರ್ಯರ ಪೂರ್ವ ಕಾಲದಿಂದಲೇ ಮಾನವನ ಜೀವನದ ವಿವಿಧ ಹಂತದ ಮೆಟ್ಟಿಲುಗಳನ್ನು ಏರುತ್ತಾ ಬಂದಿದೆ. ಇದಕ್ಕೆ ಪೂರಕವಾಗಿ ಶಿಲೋಪಕರಣಗಳು, ಮಡಿಕೆ ಕುಡಿಕೆಗಳು, ಶಿಲಾಸಮಾಧಿ ಸ್ಥಳಗಳು ಕಂಡುಬರುತ್ತವೆ. ಇತಿಹಾಸದ ಕಾಲವನ್ನು ಎಲ್ಲ ದೃಷ್ಟಿ ಕೋನಗಳಿಂದ ಸಂಪದ್ಭರಿತವಾಗಿ ರಾಜಮನೆತನಗಳು ಬೆಳೆಸಿದರು ಎಂದು ಹೇಳಬಹುದು. ಇದಕ್ಕೆ ದಾಖಲೆಯಾಗಿ ಮುಖ್ಯವಾಗಿ ಶಾಸನಗಳು, ದೇವಾಲಯಗಳು, ಶಿಲ್ಪಗಳು ಹಾಗೂ ಇತ್ಯಾದಿ ಸ್ಮಾರಕಗಳು ಇಂದಿಗೂ ಉಳಿದುಕೊಂಡು ಬಂದಿವೆ.

೩.೩. ಆಡಳಿತ ವ್ಯವಸ್ಥೆ

ಪ್ರಾಚೀನ ಕಾಲದ ಅಖಂಡವಾದ ಸಾಮ್ರಾಜ್ಯವನ್ನು ಸಮರ್ಥವಾಗಿ ನಿರ್ವಹಿಸಲು ಮತ್ತು ಆಡಳಿತ ಅನುಕೂಲತೆಗಾಗಿ ನಾಡು ಪ್ರಾಂತ್ಯ, ಪ್ರದೇಶ, ವಿಭಾಗ ಮುಂತಾದ ರೂಪಗಳಲ್ಲಿ ವಿಭಾಗಿಸಿ ಅಧಿಕಾರ ನಿರ್ವಹಿಸುತ್ತಿದ್ದರು. ಅವುಗಳಿಗೆ ಸಾಮಂತರು, ದಂಡನಾಯಕರು, ಮಹಾಮಂಡಳೇಶ್ವರರು, ಗಾವುಂಡರು ನೇಮಕವಾಗುತ್ತಿದ್ದರು. ಹೀಗಾಗಿ ಪ್ರತಿ ಘಟಕದ ಮೇಲೆ ವಿಶೇಷವಾದ ಅಧಿಕಾರವನ್ನು ವಿವಿಧ ಸ್ತರಗಳ ಮೂಲಕ ಹಂಚಿಕೆ ಮಾಡಿ ಅಡಳಿತವನ್ನು ನಡೆಸುತ್ತಿದ್ದರು. ವಿಸ್ತಾರವಾದ ಸಾಮ್ರಾಜ್ಯದ ಮೇಲೆ ಒಬ್ಬ ವ್ಯಕ್ತಿ ಆಡಳಿತ ನಡೆಸುವುದು ಕಷ್ಟದ ಕೆಲಸ ಇಂದು ಕೂಡ ಆಡಳಿತ ಸೌಕರ್ಯಕ್ಕಾಗಿ ರಾಷ್ಟ್ರವನ್ನು ರಾಜ್ಯ–ವಿಭಾಗ–ಜಿಲ್ಲೆ–ತಾಲೂಕು–ಗ್ರಾಮ ಎಂದು ವಿಭಾಗಿಸಿ ಕ್ರಮವಾಗಿ ಇವುಗಳ ಮೇಲೆ ರಾಷ್ಟ್ರಪತಿ–ರಾಜ್ಯಪಾಲ–ವಿಭಾಗಾಧಿಕಾರಿ–ಜಿಲ್ಲಾಧಿಕಾರಿ–ತಹಸಿಲ್ದಾರ–ಗ್ರಾಮ ಲೆಕ್ಕಾಧಿಕಾರಿಗಳನ್ನು ನೇಮಿಸಲಾಗುತ್ತದೆ. ಇದರಲ್ಲಿ ರಾಷ್ಟ್ರಪತಿಯೇ ಪರಮೋಚ್ಚ ಅಧಿಕಾರಿಯಾಗಿರುವಂತೆ ಹಿಂದೆ ರಾಜನೇ ಸರ್ವಶ್ರೇಷ್ಠ ಅಧಿಕಾರಿಯಾಗಿದ್ದನು ಸಾಮ್ರಾಜ್ಯವನ್ನು ಆಡಳಿತ ಅನುಕೂಲತೆಗಾಗಿ ವಿಭಾಗ–ಉಪವಿಭಾಗಗಳನ್ನಾಗಿ ವಿಂಗಡಿಸಿ ಅವುಗಳಿಗೆ ಆತನು ಅಧಿಕಾರಿಗಳನ್ನು ನೇಮಿಸುತ್ತಿದ್ದನು. ಈ ಪದ್ಧತಿ ಬಹಳ ಪ್ರಾಚೀನ ಕಾಲದಿಂದಲೂ ನಡೆದು ಬಂದಿದೆ. ತೀರಾ ಪ್ರಾಚೀನ ಕಾಲದಲ್ಲಿ ಇಂತಹ ವಿಭಾಗಗಳನ್ನು ಆಹಾರ–ಮಂಡಲ–ಭಕ್ತಿ–ವಿಷಯ–ದೇಶ ಎಂದು ಮುಂತಾಗಿ ಕರೆಯಲಾಗುತಿತ್ತು[೨೯] ಇದರಂತೆ ಹರಿಹರ ತಾಲೂಕಿನಲ್ಲಿನ ಶಾಸನಗಳಲ್ಲಿ ಉಲ್ಲೇಖಗೊಂಡ ಆಡಳಿತ ಘಟಕ, ಸೀಮೆ, ವೆಂಠೆ, ವಿಭಾಗಗಳನ್ನು ಗುರುತಿಸಲಾಗಿದೆ.

ಆಡಳಿತ ವಿಭಾಗಗಳು

ನೊಳಂಬವಾಡಿ–೩೨೦೦೦: ನೊಳಂಬವಾಡಿ ೩೨೦೦೦ ಪ್ರಾಂತ್ಯವು ಕರ್ನಾಟಕದ ಚಿತ್ರದುರ್ಗ ತುಮಕೂರು, ಕೋಲಾರ, ಬೆಂಗಳೂರು, ಹಾಸನ, ಬಳ್ಳಾರಿ ಜಿಲ್ಲೆಗಳು ಹಾಗೂ ಅವಕ್ಕೆ ಸೇರಿದಂತಿರುವ ಆಂಧ್ರದ ಅನಂತಪುರ, ಚಿತ್ತೂರು ಜಿಲ್ಲೆಗಳ ಭಾಗಗಳು, ತಮಿಳುನಾಡಿನ ಉತ್ತರ ಆರ್ಕಾಟ್ ಮತ್ತು ಧರ್ಮಪುರಿ ಜಿಲ್ಲೆಗಳ ಭಾಗಗಳನ್ನು ಒಳಗೊಂಡಿದ್ದಿತು. ಇದರ ಕುರಿತು ಹರಿಹರ ಪ್ರದೇಶದ ಹಲವಾರು ಶಾಸನಗಳು ಉಲ್ಲೇಖಿಸುತ್ತವೆ, ಕ್ರಿಶ. ೧೧೨೫ರಲ್ಲಿ[೩೦] ಉಚ್ಚಂಗಿ ಪಾಂಡ್ಯರ ವಿಜಯ ಪಾಂಡ್ಯದೇವನು ಉಚ್ಚಂಗಿ ನೆಲೆವೀಡಿನಲ್ಲಿನ ನೊಳಂಬವಾಡಿ–೩೨೦೦೦ ಪ್ರಾಂತ್ಯವನ್ನು ಆಳುತ್ತಿದ್ದ ಬಗ್ಗೆ ಮಾಹಿತಿ ದೊರೆಯುತ್ತದೆ.

ಕದಂಬಳಿಗೆ–೧೦೦೦: ಈ ಪ್ರದೇಶದ ಶಾಸನಗಳಲ್ಲಿ ಕದಂಬಳಿಗೆ ಸಾಸಿರದ ಉಲ್ಲೇಖ ಬರುತ್ತದೆ. ದಾವಣಗೆರೆ, ಜಗಲೂರು, ಹರಿಹರ, ಚಳ್ಳಕೆರೆ ಮತ್ತು ಚಿತ್ರದುರ್ಗ ತಾಲೂಕುಗಳ ಕೆಲವು ಗ್ರಾಮಗಳು ಈ ಭಾಗದಲ್ಲಿ ಬರುತ್ತವೆ. ಇದರ ಮುಖ್ಯ ಪಟ್ಟಣವನ್ನು ಕದಂಬಳಿಗೆ ಕಡಬಗೆರೆ ಆಗಿರಬೇಕೆಂದು ಊಹಿಸಿದ್ದಾರೆ.[೩೧] ನಂದಿಗುಡಿ, ನಿಟ್ಟೂರು, ವಾಸನ, ಮೊದಲಾದ ಶಾಸನಗಳಲ್ಲಿ ಈ ವಿಭಾಗವನ್ನು ಹೆಸರಿಸಲಾಗಿದೆ.

ಕೋಗಳಿ-೫೦೦: ಹರಿಹರ ತಾಲೂಕಿನ ಶಾಸನಗಳಲ್ಲಿ ಉಲ್ಲೇಖಗೊಂಡ ಆಡಳಿತ ವಿಭಾಗಗಳಲ್ಲಿ ಕೋಗಳಿ-೫೦೦ ಕೂಡ ಒಂದಾಗಿದೆ. ೫೦೦ ಗ್ರಾಮಗಳನ್ನು ಹೊಂದಿದ ಆದರ ಕೇಂದ್ರ ಇಂದು ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲೂಕಿನ 'ಕೋಗಳಿ' ಗ್ರಾಮವಾಗಿದೆ. ಹರಿಹರ ತಾಲೂಕಿನ ವಾಸನದ[೨೧೨] ನೊಳಂಬ ಪಲ್ಲವರ ಕಾಲದ ಶಾಸನದಲ್ಲಿ ಕೋಗಳಿ-೫೦೦ ನ್ನು ಒಳಗೊಂಡಂತೆ ಬೇರೆ ಬೇರೆ ವಿಭಾಗಗಳನ್ನು ಚಳಿಕೆ ಅಯ್ಯಹರಸನು ಆಳುತ್ತಿದ್ದ ಬಗ್ಗೆ ತಿಳಿಸುತ್ತದೆ.

ಕದಂಬಳಿಗೆ-೩೨೦೦೦: ನೊಳಂಬವಾಡಿ-೩೨೦೦೦ದಷ್ಟೆ ವಿಸ್ತೀರ್ಣವನ್ನು ಹೊಂದಿದಂತಹ ಕದಂಬಳಿಗೆ-೩೨೦೦೦ ವು ಕೂಡ ಪ್ರಾಚೀನ ಕಾಲದ ಆಡಳಿತ ವಿಭಾಗವೆಂದು ತಿಳಿಯುತ್ತದೆ. ಈ ವಿಭಾಗವನ್ನು ಜಗಳಿಯ ಕ್ರಿ.ಶ. ೧೧೧೯ರ ಶಾಸನವು[೨೧೩] ಚಾಲುಕ್ಯ ದೊರೆ ವಿಜಯಾದಿತ್ಯನ ಮಹಾಮಂಡಳೇಶ್ವರನಾಗಿದ್ದ ರಾಯಪಾಂಡ್ಯದೇವನು ಈ ಕಂದಂಬಳಿಗೆ ೩೨೦೦೦ವನ್ನು ಆಳುತ್ತಿದ್ದನೆಂದು ಉಲ್ಲೇಖಿಸುತ್ತದೆ.

ಬಲ್ಲಕುಂದೆ-೩೦೦: ಇದು ೩೦೦ ಗ್ರಾಮಗಳನ್ನೊಳಗೊಂಡ ಆಡಳಿತ ವಿಭಾಗವಾಗಿತ್ತು ಇದರ ಕೇಂದ್ರ ಸಿರಗುಪ್ಪ ತಾಲೂಕಿನಲ್ಲಿ ಬಲ್ಲಕುಂದೆ ಗ್ರಾಮ ಇದ್ದು ಇದರ ಸುತ್ತಮುತ್ತಲಿನ ಪ್ರದೇಶವೇ ಬಲ್ಲಕುಂದೆ ೩೦೦ ಇರಬಹುದು. ಇದರ ಆಳ್ವಿಕೆಯನ್ನು ವಾಸನದ ಶಾಸನವೊಂದು ಉಲ್ಲೇಖಿಸುತ್ತದೆ.

ಬಿಕ್ಕಿಗ-೭೦: ಹರಪನಹಳ್ಳಿ ತಾಲೂಕಿನ ಬಿಕ್ಕಿಗಮರಡಿ ಎಂಬ ಹಾಳು ಗ್ರಾಮ ಆಗಿನ ಬಿಕ್ಕಿಗ-೭೦ ರ ಪ್ರಮುಖ ಆಡಳಿತ ಕೇಂದ್ರವಾಗಿತ್ತು. ಹರಿಹರ ಶಾಸನಗಳಲ್ಲಿ ಇದು ನೊಳಂಬವಾಡಿ-೩೨೦೦೦ ಕ್ಕೆ ಸೇರಿದ ಕೊಟ್ಟೂರು ಸೀಮೆಯೋಳಗಿನ ಎಂದು ಉಲ್ಲೇಖವಾಗಿದೆ.[೨೧೪] ಇದರಲ್ಲಿ ೭೦ ಹಳ್ಳಿಗಳಿದ್ದವೆಂದು ತಿಳಿಯುತ್ತದೆ.

ಕುಂದೂರು-೭೦: ಕುಂದವಾಡ ಎಂಬ ಊರಿನಿಂದಾಗಿ ಈ ಪ್ರಾಂತ್ಯಕ್ಕೆ ಈ ಹೆಸರು ಬಂದಿದೆ. ಇದು ಇಂದಿನ ದಾವಣಗೆರೆ, ಹರಿಹರ ತಾಲೂಕಿನ ಗ್ರಾಮಗಳನ್ನು ಹೊಂದಿತ್ತೆಂದು ಹೇಳಬಹುದು. ನಿಟ್ಟೂರಿನ[೨೧೫] ಕ್ರಿ.ಶ. ೧೦೩೪ರ ಶಾಸನದಲ್ಲಿ ಕದಂಬಳಿಗೆ ಬಳಿಯ ಕಂಪಣ ಕುಂದೂರೆಪ್ಪತ್ತರ ಎಂದು ತಿಳಿಸಿದೆ.

ಭ್ರಾಂತಿಕಡ-೩೦: ಮೂವತ್ತು ಗ್ರಾಮಗಳನ್ನು ಹೊಂದಿದ ಈ ಪ್ರಾಚೀನ ಘಟಕವನ್ನು ವಾಸನದ ಶಾಸನದಲ್ಲಿ ತಿಳಿಸುತ್ತದೆ. ಭ್ರಾಂತಿಕಡವು ಕದಂಬಳಿಗೆ-೧೦೦೦ ಪ್ರದೇಶದ ಒಂದು ಭಾಗವಾಗಿತ್ತು.

ಭಿನ್ನಪುರಂ-೧೨: ವಾಸನದ ಶಾಸನದಲ್ಲಿ ಉಲ್ಲೇಖವಾದ ಈ ವಿಭಾಗವು ಬಹುಶಃ ಬಾನವೂರು-೧೨ ಇರಬೇಕು ಹತ್ತಿರದಲ್ಲಿರುವ ಅವರಗೆರೆ ಶಾಸನದಲ್ಲಿ ಇದರ ಉಲ್ಲೇಖವಿದೆ. ಇದು ಕದಂಬಳಿಗೆ ೧೦೦೦ ದಲ್ಲಿ ಅಂತರ್ಗತವಾಗಿತ್ತು.

ಬನವಾಸಿ-೧೨೦೦೦: ಬನವಾಸಿ ಕದಂಬರ ಪಾರಂಪರಿಕ ಆಳ್ವಿಕೆಯ ಪ್ರದೇಶ ಬನವಾಸಿ ೧೨೦೦೦. ಇದರ ಕೇಂದ್ರ ಸ್ಥಳ ಈಗಿನ ಸಿರಸಿ ತಾಲೂಕಿನ ಬನವಾಸಿ. ಅರೆಮಲೆನಾಡ

ಪ್ರದೇಶವಾಗಿರುವುದರಿಂದ ಫಲವತ್ತಾದ ಭೂಮಿಯನ್ನೊಳಗೊಂಡಿದ್ದು ಇದರ ಒಡೆತನಕ್ಕಾಗಿ ರಾಜರ ನಡುವೆ ಮತ್ತು ಅಧಿಕಾರಿಗಳ ನಡುವೆ ಪೈಪೋಟಿ ನಡೆಯುತ್ತಿದ್ದಿತು. ಇದು ಪ್ರಾಚೀನ ಕನ್ನಡ ಸಾಹಿತ್ಯದ ಮುಕುಟಮಣಿಯೆನಿಸಿದ ಪಂಪನ ಊರು ಹರಿಹರದ ಕ್ರಿ.ಶ. ೧೧೬೦ ಶಾಸನದಲ್ಲಿ[೨೧೬] ಸಾಮಂತನಾದ ಕಸಪಯ್ಯ ನಾಯಕನು ಬನವಾಸಿ ೧೨೦೦೦ವನ್ನು ಆಳುತ್ತಿದ್ದನೆಂದು ತಿಳಿಸಿದೆ. ಈ ವಿಭಾಗದ ಕುರಿತು ಹರಿಹರದ ಬೇರೆ ಬೇರೆ ಶಾಸನಗಳು ಸಹ ಉಲ್ಲೇಖಿಸುತ್ತವೆ.

ನಾಗರಖಂಡ-೭೦: ಬನವಾಸಿ-೧೨೦೦೦ದ ಒಳಗಿನ ಒಂದು ಕಂಪಣವಾಗಿತ್ತು. ಈ ನಾಗರಖಂಡ-೭೦ ಹರಿಹರ ತಾಲೂಕಿನ ಪಕ್ಕದ ಹಿರೇಕೆರೂರು ಗ್ರಾಮಗಳನ್ನು ಹಾಗೂ ಸೊರಬ, ಶಿಕಾರಿಪುರದ. ಕೆಲವುಗ್ರಾಮಗಳು ಇದಕ್ಕೆ ಸೇರಿದ್ದವು. ಈ ವಿಭಾಗದ ಕುರಿತು ಹರಿಹರದ ಶಾಸನವೊಂದು ಉಲ್ಲೇಖಿಸುತ್ತದೆ.[೨೧೭]

ಎಡವಟ್ಟೆ-೭೦: ಬನವಾಸಿ ಮಂಡಲದಲ್ಲಿ ಬರುವ ಈ ಎಡವಟ್ಟೆ-೭೦ ರ ಉಲ್ಲೇಖ ಹರಿಹರದ[೨೧೮] ಕ್ರಿಶ ೧೧೬೪ ರ ಶಾಸನದಲ್ಲಿ ಉಲ್ಲೇಖವಾಗಿದೆ.

ಕೊಟ್ಟೂರು ಸೀಮೆ: ಈ ಸೀಮೆ ನೊಳಂಬವಾಡಿ-೩೨೦೦೦ಕ್ಕೆ ಸೇರಿದ್ದು ಇದರೊಳಗೆ ಬಿಕ್ಕಿಗ-೭೦ ಒಳಪಟ್ಟಿತ್ತು ಎಂದು ಹರಿಹರದ ಶಾಸನವೊಂದು[೨೧೯] ಉಲ್ಲೇಖಿಸುತ್ತದೆ. ಈ ಸೀಮೆಗೆ ಹರಿಹರದೇವಪುರ, ಶಾಂಕರಿಪುರ, ಭಾನುವತಿಪಟ್ಟಣ ಮುಂತಾದ ಈ ಭಾಗದ ಗ್ರಾಮಗಳು ಸೇರಿದ್ದವು.

ಉಚ್ಚಂಗಿ ವೆಂಠೆ: ಹರಪನಹಳ್ಳಿ ತಾಲೂಕಿಗೆ ಸೇರಿಗೆ ಸೇರಿದ ಉಚ್ಚಂಗಿದುರ್ಗವು ಕಲ್ಯಾಣ ಚಾಲುಕ್ಯರ ಕಾಲದಲ್ಲಿ 'ಉಚ್ಚಂಗಿ ಮೂವತ್ತು' ಎಂಬ ಪ್ರಾದೇಶಿಕ ವಿಭಾಗದ್ದರ ಬಗ್ಗೆ ಶಾಸನಗಳ ಉಲ್ಲೇಖವಿದೆ. ಕಾಲಾಂತರದಲ್ಲಿ ದುರ್ಗವನ್ನು ಪಡೆದು ಮಾಂಕಲಿಕರ ನೇಲೆವಿಡಾಗಿ ನೊಳಂಬವಾಡಿ ನಾಡ ಶಿರೋಮಣಿಯಾಗಿ, ಮರೆದಿದೆ.[೨೨೦] ವಿಜಯನಗರ ಅರಸರ ಕಾಲದಲ್ಲಿ ಇದು ಕೊಟ್ಟೂರು ಚಾವಡಿಗೆ ಸೇರಿದ ವೆಂಠೆಯಾಗಿದ್ದ ಬಗ್ಗೆ ಹರಿಹರದ[೨೨೧] ಶಾಸನಗಳು ಉಲ್ಲೇಖಿಸುತ್ತವೆ. ಈ ವೆಂಠೆಯೊಳಗೆ ಹರಿಹರದ ಸೀಮೆ. ಬಿಳಿಚೋಡು ಸೀಮೆಗಳು ಸೇರಿದ್ದವು.

ಮಲೆಬೆನ್ನೂರು ಸೀಮೆ: ಮಲೆಬೆನ್ನೂರು ಹರಿಹರ ತಾಲೂಕಿನ ಒಂದು ಹೋಬಳಿ ಕೇಂದ್ರ, ಲಿಂಗದಹಳ್ಳಿ, ಹದಡಿ, ಕೂಲಂಬಿ, ನಿಟ್ಟೂರು, ಬೆಂನೂರುಗಳು ಈ ಸೇಮೆಯ ಗ್ರಾಮಗಳೆಂದು ಮಲೆಬೆನ್ನೂರಿನ[೨೨೨] ಕ್ರಿ.ಶ. ೧೫೧೬ರ ಶಾಸನದಿಂದ ತಿಳಿದು ಬರುತ್ತದೆ.

ಬನ್ನಿಕೋಡು ಸೀಮೆ: ಕ್ರಿ.ಶ. ೧೪೧೦ರ ಹರಿಹರದ ಶಾಸನದಲ್ಲಿ ಈ ಸೀಮೆಯೊಳಗಿನ ಹರಿದ್ರೆಯೆಂಬ ನದಿಗೆ ಕಾಲುವೆ ಕಟ್ಟಿ, ಬನ್ನಿಕೋಡು, ಬೆಳುವಡಿ, ಹನಗವಾಡಿ, ಹರಿಹರ, ಗುತ್ತೂರು, ಗಂಗನರಸಿಯಕೆರೆಯ ಪರಿಯಂತವಾಗಿ ಬಂದ ಕಾಲುವೆಯ ಕೆಳಗೆ ನೀರಾವರಿಯಾದ ೩ನೆ ೨ ಭಾಗವನ್ನು ಹರಿಹರ ದೇವರಿಗೂ ೩ನೆ ೧ ಪಾಲು ಭೂಮಿಯನ್ನು "ಹೊಂನನಿಕ್ಕಿ ಕಟ್ಟೆ ಕಾಲುವೆಯಂ ತಂದಂಥ" ಮಹಾಜನರು ಭೋಗಿಸುವುವರೆಂದೂ ತಿಳಿಸುವ ಈ ಶಾಸನವು

ಅಂದಿನ ನೀರಾವರಿ ಪದ್ಧತಿ ವಿಚಾರದಲ್ಲಿ ಬೆಳಕು ಚೆಲ್ಲುತ್ತದೆ.[೨೨೩] ಶಾಸನದಲ್ಲಿ ಉಲ್ಲೇಖವಾಗಿರುವ ಗ್ರಾಮಗಳೆಲ್ಲವು ಹರಿಹರಕ್ಕೆ ಸಮೀಪವಾಗಿವೆ.

ಹರಿಹರದ ಸೀಮೆ: ಕ್ರಿ.ಶ. ಸುಮಾರು ಹತ್ತನೆಯ ಶತಮಾನದಿಂದಲೂ 'ಕುಡಲೂರು' ಎಂದೂ ಕರೆಯಲಾಗುತ್ತಿದ್ದ ಹರಿಹರವು ಶ್ರೀ ಹರಿಹರ ದೇವಾಲಯದಿಂದಾಗಿ ಖ್ಯಾತವಾಗಿದ್ದಿತು೧೦೪ ಮಹಾಜನರಿದ್ದ ಅಗ್ರಹಾರವಾಗಿದ್ದಿತು ಹರಿಹರದ ಸೀಮೆಯು "ಕೊಟ್ಟೂರು ಚಾವಡಿಗೆ ಸಲುವ ಉಚ್ಚಂಗಿ ವೇಂಠೆಯ ವೊಳಗಣ ಪಾಂಡ್ಯನಾಡಿ"ಗೆ ಸೇರಿದ್ದಿತು.[೨೨೪] ಈ ಸೀಮೆಗೆ ಸೇರಿದ ಶಾಂಕರಿಪುರ, ಅಚ್ಯುತರಾಯಪುರ, [ಬುಳ್ಳಾಪುರ], ಬೆಳುವಡಿಗ್ರಾಮ, ಗಂಗನರಸಿಗ್ರಾಮ ಮತ್ತು ಚಿಕ್ಕಹದಡಿ [ಮುದ್ದಣ ನಾಯಕಪುರ] ಗ್ರಾಮಗಳು ಶಾಸನೋಕ್ತವಾಗಿವೆ.

ಜಂಬೂದ್ವೀಪ: ನಮ್ಮ ಭೂಮಂಡಲದ ರಚನೆಯ ಬಗೆಗೆ ಪುರಾಣ ರಚನಾಕಾಲದಲ್ಲಿದ್ದ ಜ್ಞಾನವು ಪ್ರಶಂಸಾರ್ಹವಾದುದಾಗಿದೆ. ಭೂಮಿಯು ಸಪ್ತದ್ವೀಪ ಪರಿವೃತವಾದುದೆಂದೂ ಆ ಸಪ್ತದ್ವೀಪಗಳಲ್ಲಿ 'ಜಂಬೂದ್ವೀಪ' ಸಹ ಒಂದಾಗಿದೆಯೆಂದೂ ಇದು ಲವಣಸಮುದ್ರದಿಂದ ಆವೃತವಾದುದೆಂದೂ ಜಂಬೂದ್ವೀಪದಲ್ಲಿ ಏಳುಕಾಲ ಪರ್ವತಗಳಿವೆಯೆಂದೂ ಹಿಮವಂತ, ಹೇಮಕೂಟ, ನಿಷಧ, ಮೇರು, ನೀಲಗಿರಿ, ಶ್ವೇತಾಫಲ, ಶೃಂಗವಂತ ಎಂಬುವು ಅವುಗಳ ಹೆಸರುಗಳಾಗಿವೆಯೆಂದೂ ಈ ಕುಲಪರ್ವತಗಳಿಗೆ ಹೊಂದಿಕೊಂಡಂತೆ ಇಲಾವೃತ್ತ, ಭದ್ರಾಶ್ವ, ಕೇತುಮೂಲ, ಹರಿ, ಕಿಂಪುರಷ, ರಮ್ಯಕ, ಹಿರಣ್ಣಯ, ಕುರು ಮತ್ತು ಭರತವರ್ಷಗಳೆಂಬ ಒಂಬತ್ತು ಭೂಪ್ರದೇಶಗಳಿವೆಯೆಂದೂ ಪುರಾಣವು ಭೂಗೋಳವನ್ನು ಪ್ರತಿಪಾದಿಸುತ್ತದೆ.[೨೨೫] ಜಂಬೂ ದ್ವೀಪವನ್ನು ಪ್ರಸ್ತಾಪಿಸುವ ಶಾಸನಗಳು ನಮ್ಮ ನಾಡಿನಲ್ಲಿ ವಿಪುಲವಾಗಿವೆ ಹರಿಹರದ[೨೨೬]ಕ್ರಿ.ಶ. ೧೧೬೦ರ ಶಾಸನವೊಂದರಲ್ಲಿ "ಕ್ರಮದಿಂ ತತ್ವದ್ಮಜಂ ಮಾಡಿದ ನಖಿಳ ಜಗಚ್ಚಕ್ರದೋಳ್ನೊಡೆಲ್ಲೈ ಮಧ್ಯಮಲೋಕಂ ಚೆಲ್ವನಾ ಲೋಕದೊಳವತಿ ಮನೋಹಾರಿ ತಾನಾದುದಿಂತಾದಮೆ ಜಂಬೂದ್ವೀಪ..."ಎಂದೂ ಹೇಳಿದೆ.

ಆಡಳಿತ ವ್ಯವಸ್ಥೆ

ಹರಿಹರ ಅನೇಕ ಅರಸು ಮನೆತನಗಳನ್ನು ಕಂಡ ಐತಿಹಾಸಿಕ ಪರಿಸರ ಇಡೀ ತಾಲ್ಲೂಕಿನ ಇತಿಹಾಸವನ್ನು ಶಾಸನಗಳ ಮೂಲಕ ಗಮನಿಸಿದಾಗ ಮಹತ್ವದ ವಿಚಾರಗಳ ಜೊತೆಗೆ ಇಲ್ಲಿ ಆಳಿದ ಚಕ್ರವರ್ತಿ, ರಾಣಿಯರು, ಮಹಾಮಂಡಳೇಶ್ವರರು, ಸಾಮಂತರು ಹಾಗೂ ದಂಡನಾಯಕರು ಹೀಗೆ ಮುಂತಾದವರನ್ನು ಕುರಿತು ಶಾಸನಗಳು ಉಲ್ಲೇಖಿಸುತ್ತವೆ.

ಚಕ್ರವರ್ತಿ: ಕೇಂದ್ರಾಡಳಿತದಲ್ಲಿ ಸಾಮ್ರಾಜ್ಯದ ಸಮಸ್ತ ಸೂತ್ರಗಳ ತನ್ನ ಅಧೀನದಲ್ಲಿರುವಂತೆ ನೋಡಿಕೊಳ್ಳುತ್ತಿದ್ದ. ಅವನು ಸಮಸ್ತ ಭುವನಾಶ್ರಯ, ಶ್ರೀ ಪೃಥ್ವಿವಲ್ಲಭ ಮುಂತಾದ ಬಿರುದುಗಳನ್ನು ಧರಿಸುತ್ತಿದ್ದ. ವಿವಿಧ ಕ್ಷೇತ್ರಗಳಲ್ಲಿ ಸಮರ್ಥ ಮಂತ್ರಿಗಳನ್ನು ನೇಮಕಮಾಡುವ ಮೂಲಕ ತನ್ನ ದಕ್ಷತೆಯನ್ನು ಹೆಚ್ಚಿಸಿಕೊಳ್ಳುತ್ತಿದ್ದ, ರಾಜನು ಜನತೆಯ ಏಕೈಕ ಪ್ರತಿನಿಧಿಯಾಗಿದ್ದರಿಂದ ಒಂದು

ನಾಡಿನ ಸರ್ವಸ್ವ ಅವನ ಪ್ರತಿಷ್ಠೆಯ ಮೇಲೆಯೇ ನಿಂತಿತ್ತು. ಪ್ರಜೆಗಳ ರಕ್ಷಣೆ ರಾಜನ ರಕ್ಷಣೆಯಾಗಿದ್ದರಿಂದ ಅವನು ಪ್ರತ್ಯಕ್ಷ ಆದ ದೇವತಾ[೨೭] ಆಡಳಿತಾಧಿಕಾರಿಗಳಿಂದ ಪ್ರಜೆಗಳಿಗೆ ತೊಂದರೆಯಾದಾಗ ಅವರು ನೇರವಾಗಿ ಅರಸನಿಗೆ ದೂರು ನೀಡುವ ಹಕ್ಕುಳ್ಳವರಾಗಿದ್ದರು. ಯಥಾರಾಜಾ ತಥಾಪ್ರಜೆ ಎಂಬಂತೆ ರಾಜನ ನಡವಳಿಕೆಯನ್ನು 'ಧರೆಯಂ ರಕ್ಷಿಸಿ ದುಷ್ಟರಂ ಜಡಿದು ಸದ್ಧರ್ಮಂಗಳಂ ಕಾದು ತಸ್ಕರಂ ಬಂಧಿಸಿ ಕಷ್ಟರಂ ಕಿಡಿಸಿ ದಂಡಗೊಂಡು ಮಿಂಡರ್ಕಳಂ ಭರದಿಂ ಬಗ್ಗಿಸಿ ಶಿಷ್ಟರಿಷ್ಟಪದಮಂ ಸಂತೋಷದಿಂದ ಕೊಟ್ಟು ದೂರ್ತರ ಖೇರಂ ನೆರೆಕಿಳ್ತು ಪಾಲಿಸುವುದುರ್ವೀ ಚಕ್ರಮಂ ಕ್ಷತ್ರಿಯರ್', ಎಂದು ನಯಸೇನನು ಹೇಳಿದ್ದಾನೆ.[೨೮] ರಾಜನು ಸಾಮಾಜಿಕ, ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಳ್ಳುತ್ತಿದ್ದ. ರಾಜ್ಯದ ಪರಿಸ್ಥಿತಿ, ಜನರ ಕಷ್ಟ ಸುಖಗಳನ್ನು ಪ್ರತ್ಯಕ್ಷ ವಿಚಾರಿಸಲು ಆಗಾಗ ಸಂಚರಿಸುತ್ತಿದ್ದನು. ಒಟ್ಟಾರೆಯಾಗಿ ಚಕ್ರವರ್ತಿಯು ಸಾಮ್ರಾಜ್ಯದ ನ್ಯಾಯದೇವನು ಆಗಿದ್ದನು. ಇಂತಹ ಚಕ್ರವರ್ತಿಯನ್ನು ಕುರಿತು ಹೆಚ್ಚಿನ ವಿವರಗಳನ್ನು ಇದೇ ಅಧ್ಯಾಯದ ರಾಜಕೀಯ ಇತಿಹಾಸದಲ್ಲಿ ಚರ್ಚಿಸಿದ್ದೇನೆ.

ರಾಣಿಯರು: ರಾಣಿಯರು ಪ್ರಾಚೀನ ಕಾಲದಿಂದಲೂ ರಾಜಕೀಯದಲ್ಲಿ ವಿಶೇಷ ಪಾತ್ರ ವಹಿಸುತ್ತಿದ್ದರು. ಅವರ ಚಟುವಟಿಕೆಗಳು ಕೇವಲ ಅಂತಃಪುರಕ್ಕೆ ಅಥವಾ ರಾಣೀವಾಸಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಅವರಿಗೆ ಪುರುಷ ಪ್ರಧಾನ ಸಮಾಜದಲ್ಲಿ ಸಮಾನವಾದ ಗೌರವಗಳು ಇರುತಿದ್ದವು. ಅವರು ಪುರುಷರಿಗೆ ಸಮಾನವಾಗಿ ರಾಜಕೀಯ ಚಟುವಟಿಕೆ ನಡೆಸಿದ ದಾಖಲೆಗಳು ದೊರೆಯುತ್ತವೆ. ರಾಣಿಯರು–ರಾಜಕುಮಾರಿಯರೂ ಸಹ ರಾಜಕೀಯದಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಹರಿಹರ ತಾಲೂಕಿನ ಶಾಸನಗಳಲ್ಲಿ ಉಲ್ಲೇಖಿತವಾಗಿರುವ ಇಂತಹ ರಾಣಿಯರ ಆಳ್ವಿಕೆ, ದಾನ ಇತ್ಯಾದಿಗಳನ್ನು ಕುರಿತು ಇಲ್ಲಿ ಚರ್ಚಿಸಲಾಗಿದೆ. ಬಿಜ್ಜಳದೇವನ ಆಳ್ವಿಕೆಯಲ್ಲಿ ಪಾಂಡ್ಯರಾಜನು ಕೋಗಳಿ ನಾಡನ್ನು ಆಡಳಿತ ನಡೆಸುತ್ತಿದ್ದಾಗ ಅವನ ದಂಡನಾಯಕನ ಪತ್ನಿಯಾದ ಮಹಾದೇವಿಯು ಶ್ರೀಶಂಕರನಾರಾಯಣದೇವರ, ಕೂಡಲೂರ ತುಂಗಭದ್ರಾದೇವಿಯ ಬ್ರಹ್ಮತೀರ್ಥದ, ಅರಸೀಕೆರೆಯ ಮಾದೇಶ್ವರ ದೇವರ ಅಂಗಭೋಗ ನೈವೇದ್ಯಕ್ಕೆ ಶ್ರೀಜ್ಞಾನಶಕ್ತಿದೇವರಿಗೆ ಮೇವನಕೆರೆಯ ಎರೆಭೂಮಿ ಮತ್ತು ಮನೆಯ ನಿವೇಶನವನ್ನು ನೀಡಿದ ಉಲ್ಲೇಖ ಕ್ರಿ.ಶ. ೧೧೬೧ರ ಗಂಗನರಸಿ[೨೯] ಶಾಸನದಲ್ಲಿದೆ. ಹಾಗೆಯೇ ರಾಯಪಾಂಡ್ಯನ ಹೆಂಡತಿಯಾದ ಸೋವಲದೇವಿಯು ತಮ್ಮ ಕುಲಾಭಿವೃದ್ಧಿಗಾಗಿ ಕುಲದೇವರಾದ ಮಲ್ಲಿಕಾರ್ಜುನ ದೇವರ ದೂಪ ದೀಪ ನೈವೇದ್ಯ ನಂದಾದೀವಿಗೆಗೆ ಜೀರ್ಣೋದ್ದಾರಕ್ಕೆ ಬೆಲ್ತುರ ಗಡಿಯಲ್ಲಿನ ಗದ್ದೆ ಮಾವಿನಕೆರೆಯ ತಾಯಿವಳ್ಳದ ತೆಬ್ಕ ಕಮ್ಮ–೭೦೦, ಬೇವಿನಕೊಳದ ಉತ್ತರದ ಬೆದ್ದಲೆ ಮತ್ತರು–೨, ಕಮ್ಮ–೧೦೦ ಗಳನ್ನು ದಾನ ನೀಡಿದ ಉಲ್ಲೇಖ ಕ್ರಿ.ಶ. ೧೧೨೫ರ ಬನ್ನಿಕೋಡು[೩೦] ಶಾಸನದಲ್ಲಿದೆ. ನಂತರ ರಾಮಚಂದ್ರ ಬಾದಾಮಿ ಪ್ರಭುವರ್ಮನ ಹೆಂಡತಿಯಾದ ತುಳುಜಾಬಾಯಿಯು ತನ್ನ ಗಂಡನು ಧರ್ಮದನುಸಾರ ರಾಜಲಕ್ಷ್ಮಿಯನ್ನು ಹಾಗೂ ಇತರ ಸೌಭಾಗ್ಯಗಳನ್ನು ಜೀವನದಲ್ಲಿ ಪಡೆದುಕೊಳ್ಳಲು ಸ್ವಕುಲೋದ್ಧಾರಕ್ಕಾಗಿ ಹರಿಹರ ಕ್ಷೇತ್ರದಲ್ಲಿ ದೀಪಮಾಲೆಯನ್ನು ಮಾಡಿಸಿದ ಉಲ್ಲೇಖ ಕ್ರಿ.ಶ. ೧೫೧೯ರ ಹರಿಹರದ[೩೧] ಶಾಸನದಲ್ಲಿದೆ.

ಮಹಾಮಂಡಳೇಶ್ವರರು: ಸಾಮ್ರಾಜ್ಯದ ಅನೇಕ ಭಾಗಗಳಲ್ಲಿ ಮಂಡಳವೆಂಬುದು ಪ್ರಮುಖ ಘಟಕ. ಮಂಡಲ ಅಥವಾ ನಾಡಿನ ಒಡೆಯ ಮಂಡಳೇಶ್ವರನಾಗಿದ್ದು ಅವನನ್ನು ಮಂಡಳಾಧಿಪತಿ, ಮಂಡಳೇಶ, ಮಹಾಮಂಡಳೇಶ್ವರನೆಂದು ಕರೆಯಲಾಗಿದೆ. ಇದಕ್ಕೆ ನೇಮಕವಾಗುವಂತಹ ವ್ಯಕ್ತಿ ಚಕ್ರವರ್ತಿಯಷ್ಟೆ ಪ್ರಬಲನಾಗಿದ್ದ. ಕೆಲವು ಸಲ ಒಂದಕ್ಕಿಂತ ಹೆಚ್ಚು ಮಂಡಳ ಅಥವಾ ನಾಡುಗಳಿಗೆ ಒಬ್ಬನೇ ಮಂಡಳೇಶ್ವರನು ಅಧಿಕಾರಿಯಾಗುತ್ತಿದ್ದನು. ಸಾಮ್ರಾಜ್ಯದ ಆಗುಹೋಗುಗಳಲ್ಲಿ ಇವನ ಪಾತ್ರ ಪ್ರಮುಖವಾದುದು. ತನ್ನ ಅಧೀನದಲ್ಲಿದ್ದ ಪ್ರದೇಶದಲ್ಲಿ ಇತರ ಅಧಿಕಾರಿಗಳು ಮತ್ತು ಪ್ರಮುಖ ವ್ಯಕ್ತಿಗಳು ನೀಡುತ್ತಿದ್ದ ದಾನ, ದತ್ತಿ, ಕೈಗೊಳ್ಳುವ ಧಾರ್ಮಿಕ ಕಾರ್ಯಗಳನ್ನು ಹೇಳುವಾಗ ಚಕ್ರವರ್ತಿ ಮತ್ತು ಮಹಾ ಮಂಡಳೇಶ್ವರನ್ನು ನೆನೆಯುವುದು ಸ್ವಾಭಾವಿಕವಾಗಿತ್ತು. ಇಂತಹ ಮಹಾಮಂಡಳೇಶ್ವರರ ಕುರಿತು ತಾಲೂಕಿನ ಅನೇಕ ಶಾಸನಗಳಲ್ಲಿ ವಿವರಗಳು ದೊರೆಯುತ್ತವೆ. ಶಾಸನೋಕ್ತ ಮಹಾಮಂಡಳೇಶ್ವರರ ವಿವರಗಳನ್ನು ಈ ಕೆಳಗಿನಂತೆ ನೋಡಬಹುದು. ಮಹಾಮಂಡಳೇಶ್ವರ ರಾಯಪಾಂಡ್ಯನು ಚಾಲುಕ್ಯ ದೊರೆ ವಿಜಯಾದಿತ್ಯನ ಮಾಂಡಳಿಕನಾಗಿ ರಾಯ ಪಾಂಡ್ಯನು ಅಧಿಕಾರಕ್ಕೆ ಬಂದನು. ಕ್ರಿ.ಶ. ೧೧೧೯ರ ಜಿಗಳಿಯ ಶಾಸನ[೨೨] ಇವನ ಆಳ್ವಿಕೆಯನ್ನು ೧ ಉಲ್ಲೇಖಿಸುತ್ತದೆ. ಇವನು ಕದಂಬಳಿಗೆ-೩೨೦೦೦ನ್ನು ಆಳುತ್ತಿದ್ದನೆಂದು ತಿಳಿಸಿದೆ. ರಾಯ ಪಾಂಡ್ಯನ ನಂತರ ಕಾಲಮಾನವಿಲ್ಲದ ವಾಸನದ ಶಾಸನವು ತ್ರಿಭುವನಮಲ್ಲ ಪಾಂಡ್ಯದೇವನ ಹೆಸರನ್ನು ಹೇಳುತ್ತದೆ.[೨೩] ಇವನು ನೊಳಂಬವಾಡಿ-೩೨೦೦೦ ವನ್ನು ಆಳುತ್ತಿದ್ದ ಬಗ್ಗೆ ತಿಳಿಸುತ್ತದೆ. ಈತನ ನಂತರ ವಿಜಯಪಾಂಡ್ಯ ದೇವನು ಮಹಾಮಂಡಳೇಶ್ವರನಾಗಿದ್ದು ಬಗ್ಗೆ ಕ್ರಿ.ಶ. ೧೧೬೨ರ ಗಂಗನರಸಿ, ವಾಸನದ ಶಾಸನಗಳು[೨೪] ತಿಳಿಸುತ್ತವೆ. ಹಾಗೆಯೇ ಪಾಂಡ್ಯರ ದೊರೆ ವೀರಪಾಂಡ್ಯನು ಕಳಚೂರ್ಯರಿಗೆ ಸಾಮಂತನಾಗಿದ್ದ ಕಾಲದಲ್ಲಿ ಮಂಳೇಶ್ವರನಾಗಿ ಈಶ್ವರ ದೇವರಸನು ಕಾಣಿಸಿಕೊಳ್ಳುತ್ತಾನೆ. ಕ್ರಿ.ಶ. ೧೧೬೪[೨೫] ಹರಿಹರದ ಶಾಸನದಲ್ಲಿ ಉಲ್ಲೇಖವಾಗಿರುವಂತೆ ಈತನು ದಕ್ಷಿಣ ಗಂಗೆ, ವಾರಣಾಸಿ ಹೆಸರಿಗೆ ಕಾರಣನಾದ ಸ್ವಯಂಭೂ ಶಂಕರನಾರಾಯರಣದೇವರ ಕಾರ್ಯಕ್ಕೆ, ನೈವೇದ್ಯಕ್ಕೆ, ಭ್ರಾಂತಿ ೩೦ ರ ಒಂದೂರಿನ ಹೊನ್ನನ್ನು ಬ್ರಾಹ್ಮರಿಗೆ ದಾನ ನೀಡಿದ್ದನ್ನ ತಿಳಿಸುತ್ತದೆ.

ಕ್ರಿ.ಶ. ೧೨೬೩ರ ಹರಿಹರದ[೨೬] ಶಾಸನದಲ್ಲಿ ಮಹಾಮಂಡಳೇಶ್ವರ ಬೊಮ್ಮರಸನ ಉಲ್ಲೇಖವಿದೆ. ಈತ ಯಾರಿಗೆ ಮಹಾಮಂಡಳೇಶ್ವರನಾಗಿದ್ದಾ ಎಂಬುದರ ಕುರಿತು ಉಲ್ಲೇಖವಿಲ್ಲ. ಆದರೆ ಹರಿಹರ ದೇವರಿಗೆ ದಾನ ದತ್ತಿ ನೀಡಿದನೆಂದು ಉಲ್ಲೇಖವಿದೆ. ಮತ್ತು ಮಹಾಮಂಡಳೇಶ್ವರ ಯಾಚರಸ ಪಂಡಿತರ ಉಲ್ಲೇಖ ಕ್ರಿ.ಶ. ೧೨೮೮ರ[೨೭] ಹರಿಹರದ ಶಾಸನದಲ್ಲಿ ಉಲ್ಲೇಖವಿದೆ. ಕೊನೆಯದಾಗಿ ಮಹಾಮಂಡಳೇಶ್ವರನಾದ ರಾವಜಿರಂಗಪ್ಪರಸನ ಉಲ್ಲೇಖ ಕಾಲಮಾನವಿಲ್ಲದ ಹರಿಹರದ ಶಾಸನದಲ್ಲಿ ಉಲ್ಲೇಖವಿದೆ. ಈತನ ಆಳ್ವಿಕೆಯಲ್ಲಿ ತಳವಾರಿಕೆಯ ಹಳಿನಾಯರಿಗೆ ಆಯಕ್ಕೆ ಉಂಬಳಿಯಾಗಿ ಹೊಲ ಕೊಟ್ಟಿದ್ದನ್ನು ದಾಖಲಿಸಲಾಗಿದೆ.

ಮಹಾಸಾಮಂತರು: ಚಕ್ರವರ್ತಿಯ ಅಧೀನದಲ್ಲಿದ್ದು ಹಲವಾರು ಸಣ್ಣ ಪುಟ್ಟ ಪ್ರದೇಶಗಳಲ್ಲಿಯೇ ಆಳ್ವಿಕೆ ನಡೆಸುತ್ತಿದ್ದ ಪ್ರಭುವರ್ಗವೇ ಮಹಾಸಾಮಂತರು. ತಮ್ಮ ಸೀಮಿತ ಪ್ರದೇಶದಲ್ಲಿ ತಾವು

ಸರ್ವಾಧಿಕಾರಿಗಳಾಗಿದ್ದರು, ಇವರು ಸಹ ಮಂಡಳೇಶ್ವರರಂತೆ ಮಂತ್ರಿಮಂಡಲವನ್ನು ಅಧಿಕಾರಿ ವರ್ಗದವರನ್ನು, ಸೈನ್ಯವನ್ನು ಹೊಂದಿರುತ್ತಿದ್ದರು. ರಾಜನಿಗೆ ಸಲ್ಲಿಸಬೇಕಾದ ಕಪ್ಪಕಾಣಿಕೆ ಸಲ್ಲಿಸಿ ತಮ್ಮ ಪ್ರದೇಶದಲ್ಲಿ ನಿಶ್ಚಿಂತೆಯಿಂದ ಆಳ್ವಿಕೆ ನಡೆಸುತ್ತಿದ್ದರು. ಸಾಮಂತರು ರಾಜರಂತೆ ಪ್ರತ್ಯೇಕ ಧ್ವಜ ಲಾಂಛನಗಳನ್ನು ಹೊಂದಿರುತ್ತಿದ್ದರು. ರಾಜರಂತೆ ದೇಶ ಸಂಚಾರವನ್ನು ಕೈಗೊಂಡು ಪ್ರಜೆಗಳ ಸುಖ-ದುಃಖಗಳನ್ನು ವಿಚಾರಿಸುತ್ತಿದ್ದರು. ರಾಜನ ಅಜ್ಞೆಯ ಮೇರೆಗೆ ಅನೇಕ ಯುದ್ಧಗಳಲ್ಲಿ ಭಾಗವಹಿಸಿ ಜಯ ಸಾಧಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದರು. ಹರಿಹರ ತಾಲೂಕಿನ ಶಾಸನಗಳಲ್ಲಿ ಹೆಸರಿಸಲಾಗಿರುವ ಮಹಾಸಾಮಂತರನ್ನು ಕುರಿತು ಈ ಕೆಳಗಿನಂತೆ ನೋಡಬಹುದು.

ಕ್ರಿ.ಶ. ೯೪೪ರ ವಾಸನದ[೩೮] ಶಾಸನದಲ್ಲಿ ಮಹಾಸಾಮಂತ ಮುಳ್ಗುಂದ ಸಿಂಧರ ಅರಸ ಶ್ರೀಜಾತರಸರು ಕದಂಬಳಿಗೆ-೧೦೦೦ ವನ್ನು ವಂಶಪಾರಂಪರ್ಯವಾಗಿ ಆಳುತ್ತಿದ್ದನು. ಎಂಬ ಉಲ್ಲೇಖವಿದೆ. ಕ್ರಿ.ಶ. ೧೦೩೪ ನಿಟ್ಟೂರಿನ[೩೯] ಶಾಸನದಲ್ಲಿ ಸಾಮಂತರಾಗಿದ್ದ ನೊಳಂಬಪಲ್ಲವ ಪೆರ್ಮಾಡಿದೇವನ ಆಡಳಿತದಲ್ಲಿ ಕದಂಬಳಿಗೆ ೧೦೦೦ ಬಳಿಯ ಕಂಪಣವಾದ ಕಂದೂರು-೭೦ರೊಳಗೆ ಇದ್ದ ಕುಂದೂರು, ಬನ್ನಿಕೋಡುಗಳನ್ನು ನೋಡಿಕೊಳ್ಳುತ್ತಿದ್ದ ನಂತರ ಈ ಗ್ರಾಮಗಳಿಗೆ ಪ್ರತ್ಯೇಕವಾದ ಗೌಡರು ಕೂಡ ಇದ್ದ ಬಗ್ಗೆ ಇದೇ ಶಾಸನ ಉಲ್ಲೇಖಿಸುತ್ತದೆ. ಕ್ರಿ.ಶ. ೧೧೪೦ ರ ಹರಿಹರದ ಶಾಸನದಲ್ಲಿ ಶಾಸನದಲ್ಲಿ ಸಾಮಂತ ದೊರೆ ಕೇತಯನಾಯಕನ ಆಳ್ವಿಕೆಯನ್ನು ತಿಳಿಸುತ್ತದೆ. ಇಮ್ಮಡಿ ಜಗದೇಕಮಲ್ಲನ ಸಾಮಂತ ದೊರೆಯಾಗಿದ್ದ ವೀರಪಾಂಡ್ಯನ ಕುರಿತು ಕ್ರಿ.ಶ. ೧೧೪೯ರ ಹರಿಹರದ[೪೦] ಶಾಸನ ಉಲ್ಲೇಖಿಸುತ್ತದೆ. ಬಿಜ್ಜಳನ ಸಾಮಂತನಾದ ಕಸಪಯ್ಯನಾಯಕನು ಬನವಾಸಿ-೧೨೦೦೦ವನ್ನು ಆಳುತ್ತಿದ್ದ ಬಗ್ಗೆ ಕ್ರಿ.ಶ. ೧೧೬೦ರ ಹರಿಹರದ ಶಾಸನವೊಂದು ಉಲ್ಲೇಖಿಸುತ್ತದೆ. ಕ್ರಿ.ಶ. ೧೧೬೨ರ ವಾಸನದ ಶಾಸನದಲ್ಲಿ ಮಹಾಸಾಮಂತ ಲಕ್ಷ್ಮೀಕಾಂತನು ಮಹಾಮಂಡಳೇಶ್ವರನಾದ ವಿಜಯಪಾಂಡ್ಯದೇವನು ಮಹಾಸಾಮಂತನಾಗಿದ್ದನೆಂದು ತಿಳಿಸುತ್ತದೆ.

ಕ್ರಿ.ಶ. ೧೧೭೧ರ ಹರಿಹರದ ಶಾಸನದಲ್ಲಿ ಸಾಮಂತನಾಗಿದ್ದ ನಾಗತಿಯರಸನ ಕುರಿತು ತಿಳಿಸುತ್ತದೆ. ಕ್ರಿ.ಶ. ೧೩೩೩ರ ಹರಿಹರದ ಶಾಸನದಲ್ಲಿ ಸಾಮಂತ ಹಡಪದ ಸಿಂಧುಗೋವಿಂದನ ಕುರಿತ ಉಲ್ಲೇಖವಿದೆ. ಹಾಗೆಯೇ ಕ್ರಿ.ಶ. ೧೩೬೧ರ ಗಂಗನರಸಿ ಶಾಸನದಲ್ಲಿ ಮಹಾರಾಜರ ಸಾಮಂತರಾಗಿದ್ದು ಮಣಿನಾಗಪುರದ ಬೈಯಪ್ಪನಾಯಕರ ಕುರಿತ ಉಲ್ಲೇಖವಿದೆ. ಇಲ್ಲಿ ಉಲ್ಲೇಖಿಸಲಾದ ಎಲ್ಲಾ ಮಹಾಸಾಮಂತರ ಆಡಳಿತ ಕೇಂದ್ರ ಬೇರೆಯಾಗಿದ್ದರು. ಅವರ ಆಳ್ವಿಕೆಯ ಸಂದರ್ಭದಲ್ಲಿ ಹರಿಹರ ಪ್ರದೇಶಕ್ಕೆ ಅಥವಾ ಹರಿಹರೇಶ್ವರ ದೇವಾಲಯಕ್ಕೆ ದಾನ- ದತ್ತಿಗಳನ್ನು ಬಿಟ್ಟ ಅಂಶಗಳು ಮೇಲಿನ ಶಾಸನಗಳಿಂದ ತಿಳಿಯುತ್ತದೆ.

ದಂಡನಾಯಕರು: ಚಕ್ರವರ್ತಿಯಿಂದ ನೇಮಿಸಲ್ಪಟ್ಟ ಅಧಿಕಾರಿ ವರ್ಗದವರಲ್ಲಿ ದಂಡನಾಯಕರಿಗೆ ವಿಶೇಷವಾಗಿ ಗೌರವ ಸಲ್ಲುತ್ತಿತ್ತು. ದಂಡನಾಯಕನು ಚಕ್ರವರ್ತಿ ಹಾಗೂ ಪ್ರಜೆಗಳ ಮಧ್ಯೆ ಸೇತುವೆಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಸಾಮ್ರಾಜ್ಯದಲ್ಲಿ ಗಲಭೆ ಗದ್ದಲಗಳು ಜರುಗಿದರೆ ಈ ದಂಡನಾಯಕರು ದಮನ ಮಾಡುತ್ತಿದ್ದರು. ಸಾಮ್ರಾಜ್ಯದ ಬೇರೆ ಬೇರೆ ವಿಭಾಗಗಳಲ್ಲಿ ಪರಿಸ್ಥಿತಿಯನ್ನು

ನಿಯಂತ್ರಣದಲ್ಲಿಡಲು ಚಕ್ರವರ್ತಿಯು ದಂಡನಾಯಕರನ್ನು ನೇಮಿಸುತ್ತಿದ್ದನು. ದಂಡನಾಯಕರು ತಮ್ಮ ತಮ್ಮ ವಿಭಾಗದಲ್ಲಿ ಪರಿಸ್ಥಿತಿಯ ಕುರಿತು ಚಕ್ರವರ್ತಿಗೆ ವರದಿ ಒಪ್ಪಿಸುತ್ತಿದ್ದರು. ದಂಡನಾಯಕರೆಲ್ಲರೂ ವೀರರಾಗಿದ್ದುದರಿಂದಲೂ 'ದಂಡ' ಶಬ್ದಕ್ಕೆ 'ಸೈನ್ಯ' ಎಂಬ ಅರ್ಥವಿರುವುದರಿಂದಲೇ ದಂಡನಾಯಕರೆಂದರೆ 'ಸೇನಾಪತಿ' ಎಂದೆ ಕರೆಯಲಾಗುತ್ತದೆ. ಭಾರತೀಯ ಸಂಸ್ಕೃತಿಯಲ್ಲಿ 'ದಂಡ'ಕ್ಕೆ ವಿಶಿಷ್ಟ ಸ್ಥಾನವಿದೆ. ರಾಜನಿಂದ ಹುದ್ದೆಯನ್ನು ಸ್ವೀಕರಿಸುವ ಸಂದರ್ಭದಲ್ಲಿ ಅವರು ದಂಡವನ್ನು ಹಿಡಿಯುತ್ತಿರಬೇಕು. ಆದ್ದರಿಂದ ಅವರಿಗೆಲ್ಲ ದಂಡನಾಯಕ ಎಂಬ ಹೆಸರು ಸಾಮಾನ್ಯವಾಗಿ ಬಳಕೆಯಾಗುತ್ತದೆ.

ಕ್ರಿ.ಶ. ೧೧೪೫ರ ಗಂಗನರಸಿ[೨೧] ಶಾಸನದಲ್ಲಿ ದಂಡನಾಯಕ ವೀರಪಾಂಡ್ಯನ ಹೆಸರು ಕಾಣಸಿಗುತ್ತದೆ. ಶಾಸನೋಕ್ತವಾಗಿ ಈ ಪರಿಸರದಲ್ಲಿ ಈತನೇ ಇಲ್ಲಿನ ಮೊದಲ ದಂಡನಾಯಕನಾಗಿದ್ದಾನೆನ್ನಬಹುದು. ಕ್ರಿ.ಶ. ೧೧೬೨ರ ಹರಿಹರದ[೨೨] ಶಾಸನದಲ್ಲಿ ಕಳಚೂರ್ಯ ಬಿಜ್ಜಳನ ಕಾಲದ ದಂಡನಾಯಕನಾದ ಕಸಪಯ್ಯನು ಅವನ ಅಧೀನದಲ್ಲಿ ಬನವಾಸಿ-೧೨೦೦೦ವನ್ನು ಆಳುತ್ತಿದ್ದ ಬರ್ಮರಸನಿಗೆ ಮತ್ತೊಬ್ಬ ಡಂಡನಾಯಕನನ್ನು ಉಲ್ಲೇಖಿಸುವುದು ಬಹಳ ವಿಶೇಷವಾಗಿದೆ ದಂಡನಾಯಕನಿಗೆ ಮತ್ತೊಬ್ಬ ದಂಡನಾಯಕನಿರುವುದು ಈ ಶಾಸನದಲ್ಲಿನ ವಿಶೇಷ ಕ್ರಿ.ಶ. ೧೨೨೦ರ ನಂದಿತಾವರೆಯ[೨೩] ಶಾಸನದಲ್ಲಿ ಶ್ರೀಕರಣದ ಹೆಗೆಡೆ ನಾಗಣ್ಣದಂಡನಾಯಕನ ಉಲ್ಲೇಖವಿದೆ. ಈತನ ಮಗನೆ ನಂದಿತಾವರೆಯ ಅಮೃತಲಿಂಗ ಮಾಣಿಕ್ಯೇಶ್ವರ ದೇವಾಲಯ ನಿರ್ಮಾಣ ಮಾಡಿದವನು. ಕ್ರಿ.ಶ. ೧೨೨೪ರ ಹರಿಹರದ[೨೪] ಶಾಸನದಲ್ಲಿ ಪೋಲಾಳ್ವ ದಂಡನಾಯಕನ ಉಲ್ಲೇಖವಿದೆ. ಆಂಧ್ರಪ್ರದೇಶಕ್ಕೆ ಸೇರಿದ ನಾರಾಯಣಪುರದ ಅತ್ತಿರಾಜ ಮತ್ತು ನವಿಲಾಡೆಯಕ್ಕರ ಪುತ್ರನೂ ಹೊಯ್ಸಳ ದೊರೆ ವೀರಬಲ್ಲಾಳನ ಮಗ ವೀರನಾಯರಸಿಂಹ ಹಾಗೂ ಮೊಮ್ಮಗ ವೀರ ಸೋಮೇಶ್ವರರ ಆಸ್ಥಾನದಲ್ಲಿ ಪ್ರಧಾನ ಅಮಾತ್ಯಯನಾಗಿದ್ದ ಪೋಲಾಳ್ವ ದಂಡನಾಥನು೧೧೫ ಹೊನ್ನಕಳಸದಿಂದ ಕೂಡಿದ ಹರಿಹರ ದೇವಾಲಯವನ್ನು ಜೀರ್ಣೋದ್ದಾರಗೊಳಿಸಿದನು. ಹಾಗೆಯೇ ಲಕ್ಷ್ಮೀನಾರಾಯಣಪುರ ಹೆಸರಿನ ಬಾನುವಳ್ಳಿಯನ್ನು ನಿರ್ಮಿಸಿ ಎಲೆವಳ್ಳಿ, ಮುಂತಾದ ಗ್ರಾಮಗಳನ್ನು ದತ್ತಿಬಿಟ್ಟನು. ಈತನು 'ಹರಿಚಾರಿತ್ರ್ಯ' ಕೃತಿಯನ್ನು ರಚಿಸಿದನು.

ಕ್ರಿ.ಶ. ೧೨೫೭ರ ಚಿಕ್ಕಬಿದರೆಯ ಶಾಸನದಲ್ಲಿ ದಂಡನಾಯಕ ಚೌಡಿಸೆಟ್ಟಿಯ ಉಲ್ಲೇಖವಿದೆ. ಈತನು ಹುಲಿಗೆರೆನಾಡನ್ನು ಆಳುತ್ತಿದ್ದ ಬಗ್ಗೆ ತಿಳಿಸುತ್ತದೆ. ಇದೇ ಗ್ರಾಮದ ಕ್ರಿ.ಶ. ೧೨೬೭ರ ವೀರಗಲ್ಲು ಶಾಸನವು ದಂಡನಾಯಕ ತಿಪ್ಪರಸನ ಬಗ್ಗೆ ತಿಳಿಸುತ್ತದೆ. ಕ್ರಿ.ಶ. ೧೨೯೮ರ ಹರಿಹರದ[೨೫] ಶಾಸನದಲ್ಲಿ ಸೋಮನಾಥ ದಂಡನಯಕನ ಉಲ್ಲೇಖವಿದೆ. ಈತನು ಸೋಮನಾಥಪುರವೆಂಬ ಅಗ್ರಹಾರವನ್ನು ಕಟ್ಟಿಸಿ ಕೇಶವ ದೇವಾಲಯವನ್ನು ನಿರ್ಮಾಣ ಮಾಡಿದನು. ಈ ಶಾಸನದಲ್ಲಿ ಹಾಗೂ ಕ್ರಿ.ಶ. ೧೨೭೨ರ ಹರಿಹರದ[೨೬] ಶಾಸನದಲ್ಲಿ ಪೆರುಮಾಳೆ ಎಂಬ ಬ್ರಾಹ್ಮಣ ದಂಡನಾಯಕನೂ ಇದ್ದ ಬಗ್ಗೆ ಉಲ್ಲೇಖಿಸುತ್ತದೆ. ಕ್ರಿ.ಶ. ೧೨೮೦ರ ಹರಿಹರದ ಶಾಸನದಲ್ಲಿ ರಾಮಚಂದ್ರನ ಸೇನಾಪತಿಯಾದ ಸಾಳುವ ತಿಕ್ಕಮನು ಮಹಾದೇವರಾಯನ ಹೆಸರಿನಲ್ಲಿ ಹರಿಹರರ

ಪಕ್ಕದಲ್ಲಿ ಲಕ್ಷ್ಮೀನಾರಾಯಣ ದೇಗುಲವನ್ನು ಕಟ್ಟಿಸಿ ದಾನ-ದತ್ತಿಗಳನ್ನು ಬಿಟ್ಟು ಉಲ್ಲೇಖಿಸಿದೆ.[೨೪೭] ಮುದ್ದಣ್ಣದಂಡನಾಯಕನ ಉಲ್ಲೇಖ ಕ್ರಿ.ಶ. ೧೩೬೭ರ ಶಾಸನದಲ್ಲಿದ್ದರೆ ನಾಗಣ್ಣ ದಂಡನಾಯಕನ ಹಾಗೂ ಚಾಮರಾಜ ದಂಡನಾಯಕನ ಉಲ್ಲೇಖ ಕ್ರಿ.ಶ. ೧೪೨೪ರ ಹರಿಹರದ[೨೪೮] ಶಾಸನದಲ್ಲಿದೆ. ಇಲ್ಲಿ ದೊರೆತ ದಂಡನಾಯಕ ಅಂಶಗಳು ದಂಡನಾಯಕರಾದವರು ಕೆಲವೊಮ್ಮೆ ವಂಶಪಾರಂಪರ್ಯವಾಗಿ ಬಂದ ಹುದ್ದೆಯನ್ನು ನಿರ್ವಹಿಸಿದರೆ, ಕೆಲವೊಮ್ಮೆ ಅವರ ಸಾಮಾರ್ಥ್ಯವನ್ನು ನೋಡಿ ರಾಜನೇ ಅವರನ್ನು ಆ ಸ್ಥಾನಕ್ಕೆ ನೇಮಿಸುವ ಸಾಧ್ಯತೆಗಳು ಇದ್ದವು.

ಅಧಿಕಾರಿ ವರ್ಗ: ಶಾಸನಗಳಲ್ಲಿ ಅಧಿಕಾರಿಗಳಿಗೆ ಸಂಬಂಧಪಟ್ಟಂತೆ ಅನೇಕ ಪಾರಿಭಾಷಿಕ ಪದಗಳು ಕಂಡುಬರುತ್ತವೆ. ಈ ವರೆಗೆ ಈ ಎಲ್ಲಾ ಪದಗಳು ಹುದ್ದೆಗಳನ್ನು ಸೂಚಿಸುತ್ತವೆ ಎಂದು ನಂಬಲಾಗಿದೆ. ಅದರೆ ಇವುಗಳನ್ನು ಪದವಿ, ಶ್ರೇಣಿ ಮತ್ತು ಹುದ್ದೆ ಎಂಬ ಮೂರು ವರ್ಗಗಳಾಗಿ ವಿಂಗಡಿಸಬಹುದೆಂದು ತೋರುತ್ತದೆ. ಈ ಹಿನ್ನಲೆಯಲ್ಲಿ ಮಹಾಮತ್ಯ, ಮಹಾಪ್ರಧಾನ, ಸಚಿವ-ಮಂತ್ರಿ, ಪಸಾಯಿತ ಎಂಬವು ಪದವಿ ಸೂಚಿಗಳಾದರೆ ಮಹಾಸಾಮಂತ ಅಧಿಪತಿ, ಮಹಾಪ್ರಪಂಚ ದಂಡನಾಯಕ ಮತ್ತು ದಂಡನಾಯಕ ಎಂಬಿವು ಅಧಿಕಾರಿ ಶ್ರೇಣಿಗಳಾಗಿದ್ದು, ರಾಜ್ಯಾಧ್ಯಕ್ಷ, ಅಂತಃಪುರಾಧ್ಯಕ್ಷ, ನಿಯೋಗಿ, ಪಡೆವಳ, ಪೆರ್ಗಡೆ, ಪಡಿಹಾರ, ಎಡಪವಳ, ಕರಣಿಕ ಸೇನಬೋವ-ಕುಲಕರ್ಣಿ, ತಳವಾರ ಎಂಬಿವು ನೇರವಾಗಿ ಹುದ್ದೆಯನ್ನು ಸೂಚಿಸುತ್ತವೆ.[೨೪೯] ಚಕ್ರವರ್ತಿಯಿಂದ ನೇಮಿಸಲ್ಪಟ್ಟ ಅಧಿಕಾರಿಗಳಲ್ಲಿ ಕೆಲವರು ಮಾತ್ರ ರಾಜಧಾನಿಯಲ್ಲಿರುತ್ತಿದ್ದರು ಸುಂಕದ ಅಧಿಕಾರಿಗಳು ಸಾಮ್ರಾಜ್ಯದ ಬೇರೆ ಬೇರೆ ಭಾಗಗಳಲ್ಲಿದ್ದು ಸುಂಕ ಸಂಗ್ರಹಿಸುತ್ತಿದ್ದರು. ಸೈನ್ಯದ ಅಧಿಕಾರಿಗಳಲ್ಲಿ ಕೆಲವರು ರಾಜಧಾನಿಯಲ್ಲಿದ್ದರೆ ಹೆಚ್ಚಿನ ಅಧಿಕಾರಿಗಳು ಸಾಮ್ರಾಜ್ಯದ ವಿವಿದೆಡೆಗಳಲ್ಲಿ ಸೈನ್ಯದೊಂದಿಗೆ ಇರುತ್ತಿದ್ದರು. ಬಿಡಿ ಭಾಗಗಳಲ್ಲಿ ಇಂತಹ ಅಧಿಕಾರಿಗಳು ಸದಾ ಸಿದ್ಧರಿರುತ್ತಿದ್ದರು. ಈ ಶ್ರೇಣಿಯ ಅಧಿಕಾರಿಗಳು ಯಾವುದೇ ಸಮಯದಲ್ಲಿ ಎಂಥಾ ತ್ಯಾಗಕ್ಕೂ ಇವರು ಸಿದ್ಧರಿರುತ್ತಿದ್ದರು.[೨೫೦] ಹರಿಹರ ತಾಲೂಕಿನಲ್ಲಿ ದೊರೆತ ಶಾಸನಗಳಲ್ಲಿ ಕೇವಲ ಪೆರ್ಗಡೆ ಅಥವಾ ಹೆಗ್ಗಡೆ ಮತ್ತು ಸ್ಥಾನಾಚಾರ್ಯ ಎಂಬ ಅಧಿಕಾರಿಗಳನ್ನು ಮಾತ್ರ ಉಲ್ಲೇಖಿಸಲಾಗಿದೆ.

ಪೆರ್ಗಡೆ/ಹೆಗ್ಗಡೆ: ಪೆರ್ಗಡೆಗಳು ಸುಂಕದ ಅಧಿಕಾರಿಗಳಾಗಿದ್ದರು ವಿವಿಧ ಸುಂಕಗಳನ್ನು ಸಂಗ್ರಹಿಸುವ ಇವರು ಗಾವುಂಡರಿಗಿಂತ ಹಿರಿಯರು. 'ಪಿರಿಯಗಾವುಂಡ' ಎಂಬುದು ಪೆರ್ಗಾವುಂಡ>ಪೆರ್ಗಾವುಡ>ಪೆರ್ಗ್ಗಡೆ>ಹೆಗ್ಗಡೆ ಎಂದಾಗಿದೆ. ಇವರು ಪ್ರಭುವಾಗಿ ಯಾವುದೇ ಗ್ರಾಮವನ್ನು ಆಳಿಲ್ಲ. ಆದರೆ ಸುಂಕವನ್ನು ಸಂಗ್ರಹಿಸುವ ಅಧಿಕಾರವನ್ನು ಮಾತ್ರ ಹೊಂದಿದ್ದರು. ಸಂಗ್ರಹವಾದ ಸುಂಕವನ್ನು ತಮ್ಮ ಮೇಲಾಧಿಕಾರಿಗಳಾದ ದಂಡನಾಯಕರಿಗೆ ಒಪ್ಪಿಸುತ್ತಿದ್ದರು. ಸಂಗ್ರಹಿಸಿದ ಒಟ್ಟು ಸುಂಕದಲ್ಲಿ ಇಂತಿಷ್ಟು ಭಾಗ ಪೆರ್ಗ್ಗಡೆಗಳಿಗೆ ಸಲ್ಲುತ್ತಿತ್ತು. ಅದೇ ಅವರಿಗೆ ಸಂಬಳವಾಗಿರುತ್ತಿತ್ತು.[೨೫೧] ಪೆರ್ಗಡೆಗಳನ್ನು ಕುರಿತು ಜಿ.ಎಸ್. ದೀಕ್ಷಿತ್ ಇವರು ನಾಡು ಅಥವಾ ಗ್ರಾಮದ ಮುಖ್ಯಸ್ಥ, ಗಾವುಂಡ, ಪೆರ್ಗಡೆ ಎಂಬುವರು ನಾಡುಗಳು ಇಲ್ಲವೇ ಹಳ್ಳಿಗಳ ಇಲ್ಲವೇ ಯಾವುದೇ ವಿಭಾಗದ ಮುಖ್ಯಸ್ಥರಾಗಿದ್ದಾರೆ, ತೆರಿಗೆ ಸಂಗ್ರಹಿಸುವ ಅಧಿಕಾರ ಹೊಂದಿದ್ದ

ಪೆರ್ಗಡೆಯನ್ನು ಸುಂಕದ ಹೆಗ್ಗಡೆ ಎಂದು ಕರೆದಿದ್ದಾರೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು.[೨೫೨] ಹರಿಹರ ತಾಲೂಕಿನಲ್ಲಿ ದೊರೆತ ಶಾಸನಗಳಲ್ಲಿ ಹೆಗ್ಗಡೆ ಕುರಿತು ಮಾಹಿತಿ ದೊರೆತಿರುವುದನ್ನು ಗಮನಿಸ ಬಹುದಾಗಿದೆ.

ತಾಲೂಕಿನ ಹಲವಾರು ಶಾಸಗಳು ಪೆರ್ಗಡೆಗಳ ಕುರಿತು ದಾಖಲಿಸಿವೆ. ಸುಂಕ ಸಂಗ್ರಹಿಸುವುದಷ್ಟೇ ಇವರ ಪ್ರಮುಖ ಕಾರ್ಯವಾಗಿದ್ದರೂ ದೇವಾಲಯಗಳಿಗೆ ದಾನ ಬಿಟ್ಟ ಮಾಹಿತಿಯನ್ನು ಇಲ್ಲಿನ ಶಾಸನಗಳು ಉಲ್ಲೇಖಿಸುತ್ತವೆ. ಕ್ರಿ.ಶ. ೧೦೯ರ ಗುತ್ತೂರಿನ ಶಾಸನವು ಕೂಡಲೂರಿನ ಶಂಕರನಾರಾಯಣನ ಪರಮಭಕ್ತೆ ಶಿವಾಚಾರಿಗಳಾಗಿದ್ದ ಚಂದ್ರಮೌಳೀ ಸ್ಥಾನವೆಗ್ಗಡೆಯರು ಶಂಕರನಾಯಣ ಮಹಾದೇವರ ಅಯ್ಯಂಗಳ ಅನ್ನಸತ್ರಕ್ಕೆ, ಹೊತ್ತಿಗೆ ಸೇವಾ ಕೈಂಕರ್ಯಕ್ಕೆ ಬೇತೂರ ಹಿರಿಯ ಕೆರೆಯ ಪೂರ್ವದಲ್ಲಿನ ಗದ್ದೆಯನ್ನು ದಾನ ನೀಡಿದ ಉಲ್ಲೇಖವಿದೆ. ಕ್ರಿ.ಶ. ೧೧೧೯ರ ಜಿಗಳಿಯ[೨೫೩] ಶಾಸನದಲ್ಲಿಯೂ ಕೂಡ ಪೆರ್ಗಡೆ ಪಾಂನಾಂಡರು, ಎಂಬ ಉಲ್ಲೇಖದೊಂದಿಗೆ ತಾಲೂಕಿನ ಇತರೆ ಶಾಸನಗಳು ಕಲ್ಲವೆಗ್ಗಡೆ, ಶ್ರೀಕರಣದ ಹೆಗ್ಗಡೆ[೨೫೪] ಮಾದಿಯ ಹೆಗ್ಗಡೆ[೨೫೫], ಅಣ್ಣಮ ವೆಗ್ಗಡೆ[೨೫೬] ಹಾಗೂ ಚೌಡವೆಗ್ಗಡೆ ಎಂಬ ಹೆಗ್ಗಡೆಯರನ್ನು ಉಲ್ಲೇಖಮಾಡುತ್ತವೆ. ಇವರು ಸಹ ಹಲವಾರು ದಾನ ದತ್ತಿಗಳನ್ನು ನೀಡಿದ್ದಾರೆ.

ಸ್ಥಾನಾಚಾರ್ಯರು: ದೇವಾಲಯದ ಅತ್ಯಂತ ಪ್ರಮುಖ ವ್ಯಕ್ತಿಯೇ ಸ್ಥಾನಾಚಾರ್ಯರೆನಿಸಿಕೊಂಡಿದ್ದಾರೆ. ಇವರು ಯಾವುದೇ ಒಂದು ಊರಿನ ದೇವಾಲಯದ ಪ್ರಭಾವಶಾಲಿ ವ್ಯಕ್ತಿಯಾಗಿದ್ದರು. ದೇವಾಲಯದ ಪರಿಚಾರಿಕೆಯನ್ನು ಪಾಲಿಸಿಕೊಂಡು ಬರುವವರಲ್ಲಿ ಹಿರಿಯನಾದವನು ಸ್ಥಾನಿಕನೆಸಿಕೊಂಡಿದ್ದನು. 'ಸಂನ್ಯಾಸಿಯಾಗಿ, ದೇವಾಲಯದಲ್ಲಿ ಅಥವಾ ಅದಕ್ಕೆ ಸಂಬಂಧಿಸಿದ ಮಠದಲ್ಲಿ ವಾಸಿಸುತ್ತ ಅದರ ಆಡಳಿತದ ಮೇಲ್ವಿಚಾರಕನಾಗಿ, ತಪಸ್ವಿಯಾಗಿ ವಿದ್ಯಾದಾನ ಮಾಡುತ್ತಿದ್ದ ಶೈವ ಸಂನ್ಯಾಸಿಯನ್ನು ಸ್ಥಾನಿಕ ಎಂದು ಅನೇಕ ಕಡೆಗಳಲ್ಲಿ ಕರೆದಿದೆ[೨೫೭] ದೇವಾಲಯಗಳಿಗೆ ದತ್ತಿಗಳನ್ನು ಬಿಡುವ ಸಮಯದಲ್ಲಿ ಇವರ ಒಪ್ಪಿಗೆಯ ಅವಶ್ಯಕತೆಯೂ ಇದ್ದಿತು. ಆದ್ದರಿಂದ ಆ ದೇವಾಲಯದ ಆಗು ಹೋಗುಗಳನ್ನು ನೋಡಿಕೊಳ್ಳುವ ಕರ್ತವ್ಯವನ್ನು ಹೊತ್ತಿರುವವರು ಸ್ಥಾನಪತಿಗಳು ಅಥವಾ ಸ್ಥಾನಿಕರು[೨೫೮] ಎನಿಸಿಕೊಳ್ಳುತ್ತಿದ್ದರು.

ಇವರು ಯಮನಿಯಮ ಮೌನಾನುಷ್ಠಾನ ಜಪಸಮಾಧಿಶೀಳ ಗುಣ ಸಂಪನ್ನರಾಗಿದ್ದು, ವ್ಯಾಕರ್ಣತರ್ಕಸಿದ್ದಾಂತ ಕಾವ್ಯನಾಟಕ ನಾಟಿಕಾ ವೇಧಾವಿಧಾನಾಳಂಕಾರ ಪ್ರತಿ ಪುರಾಣೇತಿಹಾಸ ಮೀಮಾಂಸಾ ನೀತಿಶಾಸ್ತ್ರದ್ಯನೇಕ ಶಾಸ್ತ್ರರ್ಥ ಪ್ರವೀಣರಾಗಿದ್ದರು. ಈ ಪ್ರದೇಶದ ಶಾಸನಗಳು ಸ್ಥಾನಾಚಾರ್ಯರನ್ನು ಆಚಾರ್ಯರೆಂದೂ ಕರೆದಿವೆ. ಹಲವರನ್ನೂ ದೇವಾಲಯದ ಆಚಾರ್ಯರೆಂದು ಶಾಸನಗಳು ಕರೆದಿವೆ. ಕ್ರಿ.ಶ. ೧೦೯[೨೫೯] ರ ಗುತ್ತೂರಿನ ಶಾಸನವು ಕೂಡಲೂರಿನ ಶಂಕರನಾರಾಯಣ. ದೇವಾಲಯದ ಭಕ್ತರಾದ ಶಿವಾಚಾರಿಗಳೆಂದೆ ಕರೆದಿದೆ. ಹಾಗೆಯೇ ಇವರು ಇಲ್ಲಿನ ಸ್ಥಾನಾಚಾರ್ಯ ಗುರುಪಾದ ಪಂಡಿತರಿಗೆ ದೇವಾಲಯದ ಜೀರ್ಣೋದ್ದಾರಕ್ಕಾಗಿ ಅಡಕೆ ತೋಟವನ್ನು ದಾನ ನೀಡಿದ ಉಲ್ಲೇಖವಿದೆ. ಹಾಗೆಯೇ ಕ್ರಿ.ಶ. ೧೫೨೮ರ[೨೬೦] ಮಲೆಬೆನ್ನೂರಿನ ಶಾಸನವು ಹರಿಹರ ದೇವರ

ಸ್ಥಾನಿಕರಾಗಿದ್ದ ಶ್ರೀ ಚಿನ್ನಪ್ಪಯ್ಯ ಹಾಗೂ ಮಗ ಹರಿಯಣ್ಣನನ್ನು ಉಲ್ಲೇಖಿಸುತ್ತದೆ. ಹೀಗೆ ಸ್ಥಾನಿಕರು ದೇವಾಲಯದ ಪೂಜೆ ಹಾಗೂ ಆ ದೇವಾಲಯದ ಪರಿಚಾರಿಕೆಯ ಹೊಣೆಯನ್ನು ಹೊತ್ತಿರುತ್ತಿದ್ದರು. ಸಮಾಜದಲ್ಲಿ ಆ ಸ್ಥಾನಾಚಾರ್ಯರಿಗೆ ಒಳ್ಳೆಯ ಸ್ಥಾನಮಾನವಿದ್ದಿತೆಂದು ಶಾಸನಗಳಲ್ಲಿನ ಉಲ್ಲೇಖಿತ ಅಂಶಗಳಿಂದ ತಿಳಿದುಬರುತ್ತದೆ.

ಗ್ರಾಮಾಡಳಿತ: ಆಡಳಿತ ವಿಭಾಗಗಳಲ್ಲಿ ಅತ್ಯಂತ ಕೊನೆಯ ಆಡಳಿತ ವಿಭಾಗವೆಂದರೆ ಗ್ರಾಮಾಡಳಿತ ಅಥವಾ ಸ್ಥಳೀಯ ಸರ್ಕಾರ, ಪ್ರಭುಗಾವುಂಡ, ಗವುಂಡ (ಗೌಡ, ಗವುಡ), ಸೇನುಬೋವ, ತಳವಾರ ಗ್ರಾಮಾಡಳಿತದಲ್ಲಿ ಪ್ರಮುಖವಾದ ಪಾತ್ರ ವಹಿಸುತ್ತಾರೆ. ಇವರುಗಳು ಗ್ರಾಮದ ಶ್ರೇಯೋಭಿವೃದ್ಧಿಗಾಗಿ ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸುತ್ತಿದ್ದರು. ಒಂದು ಗ್ರಾಮದ ಏಳಿಗೆ ಇಲ್ಲವೆ ಅಧಃಪತನ ಆ ಗ್ರಾಮದ ಆಡಳಿತದ ವರ್ಗದವರ ಮೇಲೆ ಅವಲಂಬನೆಯಾಗಿರುತ್ತಿತ್ತು. ಗ್ರಾಮದ ಒಡೆಯನಾಗಿ ಪ್ರಭುಗಾವುಂಡರು, ಗೌಡರು ಕಾರ್ಯ ನಿರ್ವಹಿಸಿದರೆ ವಿದ್ಯಾವಂತನಾದ ಸೇನಬೋವ ಊರಿನ ಲೆಕ್ಕ ಪತ್ರಗಳನ್ನು ಬರೆದುಕೊಳ್ಳುತ್ತಿದ್ದನು. ಹಾಗೂ ಕೆಲವು ಸಂಧರ್ಭದಲ್ಲಿ ಸೇನಬೋವ ಶಾಸನ ಬರೆಯಿಸಿದ ಬಗ್ಗೆ ಮಾಹಿತಿಯನ್ನು ಕಾಣಬಹುದಾಗಿದೆ. ಹಗಲೂ ರಾತ್ರಿ ಕಳ್ಳ ಕಾಕರಿಂದ, ತುರುಗಳ್ಳರಿಂದ, ಸಮಾಜ ಘಾತಕರಿಂದ ಗ್ರಾಮವನ್ನು ರಕ್ಷಿಸುವ ಹೊಣೆ ತಳವಾಳರನ ಮೇಲೆ ಇರುತ್ತಿತ್ತು. ಹೀಗೆ ಪ್ರತಿಯೊಬ್ಬರೂ ತಮ್ಮ ತಮ್ಮ ಕರ್ತವ್ಯಗಳನ್ನು ನಿಷ್ಠೆಯಿಂದ ನಿರ್ವಹಿಸುತ್ತಿದ್ದರು.

ಪ್ರಭುಗಾವುಂಡರು: ಪ್ರಭುಗಾವುಂಡರನ್ನು ಕುರಿತು ವಿದ್ವಾಂಸರು ವಿವಿಧ ರೀತಿ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ಜಿ. ಎಸ್.ದೀಕ್ಷಿತ್ ರವರು ಗ್ರಾಮದ ಗಾವುಂಡರನ್ನೇ ಪ್ರಭುಗಾವುಂಡರೆಂದು ಕರೆಯಬಹುದಾಗಿದೆ. ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಡಾ.ಎಂ ಚಿದಾನಂದಮೂರ್ತಿಯವರು ಕೂಡ ಊರಗಾವುಂಡರನ್ನೇ ಪ್ರಭುಗಾವುಂಡರೆಂದು ಕರೆಯುತ್ತಾರೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅವರು ನಾಡಿನ ಆಯಾ ಊರಿಗೆ ಮುಖ್ಯಸ್ಥನಾಗಿ ಪ್ರಭುಗಾವುಂಡ ಅಥವಾ ಊರ ಗಾವುಂಡನಿರುತ್ತಿದ್ದನು.[೨೦] ಗಾವುಂಡನು ಪ್ರಭುಗಾವುಂಡನಿಗೆ ನಿಷ್ಠೆಯಿಂದರಬೇಕಾಗಿತ್ತು. ಪ್ರಭುಗಾವುಂಡರು ಮಹಾಸಾಮಂತನಿಗೆ ನಿಷ್ಠೆಯಿಂದಿದ್ದು. ದೇವಾಲಯ, ಮಠ ಮೊದಲಾದ ಸಾರ್ವಜನಿಕ ಕ್ಷೇತ್ರಗಳಿಗೆ ವಿವಿಧ ಜನರು ಬಿಟ್ಟ ದತ್ತಿ, ದಾನ ಇವುಗಳನ್ನು ರಕ್ಷಿಸಿಕೊಂಡು ಹೋಗಬೇಕು ಪ್ರಭುಗಾವುಂಡರು ವೀರರಾಗಿದ್ದು ಮಹಾಸಾಮಂತರ ಸಲುವಾಗಿ ಯುದ್ಧದಲ್ಲಿ ಭಾಗವಹಿಸಿ ಜಯ ತಂದುಕೊಡುತ್ತಿದ್ದರು.[೨೧] ಈ ಪ್ರಭುಗಾವುಂಡರನ್ನು ಕುರಿತು ಹರಿಹರದ ಯಾವ ಶಾಸನಗಳು ಉಲ್ಲೇಖಿಸಿಲ್ಲ.

ಗಾವುಂಡ/ಗಾವುಡ/ಗೌಡ: ಗಾವುಂಡರು ಗ್ರಾಮದ ಮುಖ್ಯಸ್ಥನಾಗಿರುವುದರಿಂದ ಅವನ ಮೇಲೆ ಸಾಕಷ್ಟು ಜವಾಬ್ದಾರಿಗಳಿರುತ್ತಿದ್ದವು. ಗ್ರಾಮದ ಆಡಳಿತ, ಗ್ರಾಮಾಭಿವೃದ್ಧಿ, ಗ್ರಾಮದ ರಕ್ಷಣೆ, ಸುಂಕಸಂಗ್ರಹ, ಧಾರ್ಮಿಕ ಕಾರ್ಯ, ದತ್ತಿದಾನಗಳ ಸಂರಕ್ಷಣೆ ಹೊಣೆ ಇವರದಾಗಿತ್ತು. ಇವನು ಪ್ರಭುಗಾವುಂಡನಿಗೆ ನಿಷ್ಠೆಯಿಂದ ಗ್ರಾಮಾಡಳಿತದ ವರ್ತಮಾನವನ್ನು ವರದಿ ಮಾಡುತ್ತಿದ್ದನು. 'ಗ್ರಾಮದ ಪ್ರಭುವಾಗಿರುವ ಗಾವುಂಡನು ಅಧಿಕಾರಿಗಳನ್ನು ಹೊಂದಿದ್ದನು. ಆ ಅಧಿಕಾರಿಗಳಲ್ಲಿ

ಪ್ರಮುಖನೆಂದರೆ ಸೇನುಬೋವ, ಇವನು ಗ್ರಾಮದ ಲೆಕ್ಕ ಪತ್ರವನ್ನು ನೋಡಿಕೊಳ್ಳುತ್ತಿದ್ದನು. ಇನ್ನೊಬ್ಬ ಪ್ರಮುಖ ಅಧಿಕಾರಿಯೆಂದರೆ ತಳವಾರ, ಇವನು ಗ್ರಾಮದ ರಕ್ಷಣಾದಿಕಾರಿಯಾಗಿದ್ದನು.[೨೩] ಕ್ರಿ.ಶ. ೧೦೩೪ರ ನಿಟ್ಟೂರಿನ[೨೪] ಶಾಸನದಲ್ಲಿ ಕದಂಬಳಿಗೆ ೧೦೦೦ ಬಳಿಯ ಕಂಪಣವಾದ ಕುಂದೂರ-೭೦ರೊಳಗೆ ಇದ್ದ ಕುಂದೂರು, ಬನ್ನಿಕೋಡು, ಹಪ್ಪವನಹಾಳು, ನಿಟ್ಟೂರುಗಳ ಗೌಡರ ಹೊಂದಿದ್ದ ಬಲ್ಲಯ್ಯ ಮತ್ತು ಎರೆಚಟ್ಟಯ್ಯರು ಬಲ್ಲೇಶ್ವರ ದೇವರಿಗೆ ದೇವರ ಮುಂದಿನ ಕೆರೆಯಕೆಳಗೆ ಇರುವ ಗದ್ದೆಯನ್ನು ಭೂದಾನ ನೀಡಿದನೆಂದು ತಿಳಿಸುತ್ತದೆ.

ಕ್ರಿ.ಶ. ೧೧೫೯ರ ಗುತ್ತೂರಿನ ಶಾಸನದಲ್ಲಿ ಕೂಡಲೂರ ಮಹಾನಾಳ್ಗಾವುಂಡ ಪ್ರಭುಕುಂಬರ ಚಂದಯ್ಯನ ಮಗ ಗುಂಡಬೊಮ್ಮಯ್ಯನ ಮಗ ಕೇತಿಯಯ್ಯನು ಬಾಗಳಿ ಸಮೀಪದ ಭೂಮಿಯನ್ನು ಕ್ರಿಯಾಶಕ್ತಿ ಪಂಡಿತರ ಖರ್ಚಿಗಾಗಿ ಗದ್ದೆಯನ್ನು ದಾನ ನೀಡಿದ ಉಲ್ಲೇಖವಿದೆ ಹಾಗೆಯೇ ಕ್ರಿ.ಶ. ೧೧೬೦ರ ಹರಿಹರದ[೨೫] ಶಾಸನವು ಹರಿಹರ ದೇವರ ನಿತ್ಯಪೂಜೆಗೆ ಸುಂಕಗಾವುಂಡ ಹಾಗೂ ಇತರ ಗಾವುಂಡಗಳು ಸೇರಿ ದಾನ ನೀಡಿದ ಉಲ್ಲೇಖವಿದೆ. ಕ್ರಿ.ಶ. ೧೧೬೨ರ ಶಾಸನವೊಂದರಲ್ಲಿ ಗ್ರಾಮದಲ್ಲಿ ತೆಗೆದುಕೊಂಡ ನಿರ್ಧಾರದಲ್ಲಿ ಗ್ರಾಮದ ಹಲವಾರು ಗೌಡರು ಮಹಿಳೆಯರನ್ನು ಒಳಗೊಂಡಂತೆ ಭಾಗವಹಿಸಿದ್ದಾರೆಂದು ತಿಳಿಸುತ್ತದೆ.[೨೬] ಹರಿಹರದ ಇನ್ನೂ ಅನೇಕ ಶಾಸನಗಳು ಗಾವುಂಡರನ್ನು ಕುರಿತು ಉಲ್ಲೇಖಿಸುತ್ತವೆ.

ಸೇನುಬೋವ: ಗ್ರಾಮಗಳ ಲೆಕ್ಕ ಪತ್ರಗಳನ್ನು ಬರೆಯುತ್ತಿದ್ದ ಸೇನುಬೋವ ಅಥವಾ ಕುಲಕರಣಿ ಗಾವುಂಡರ ಕೆಳಗೆ ಕಾರ್ಯನಿರ್ವಹಿಸುತ್ತಿದ್ದರು. ಹಳ್ಳಿಯ ವಿರಳ ಸಾಕ್ಷರರಲ್ಲಿ ಸೇರಿದ ಇವರು ಶಾಸನಗಳನ್ನೂ ಕೂಡಾ ಬರೆದಿದ್ದಾರೆ ಊರಾಡಳಿತದಲ್ಲಿ ನಡೆಯುತ್ತಿದ್ದ ಸಭೆ-ಸಮಾರಂಭಗಳಲ್ಲಿ ಸೇನುಬೋವನೂ ಇರುತ್ತಿದ್ದ. ಕ್ರಿ.ಶ. ೧೨೬೨ರ ಹರಿಹರದ[೨೭] ಶಾಸನದಲ್ಲಿ ಕಪ್ಪುಗಡ್ಡೆಯ ಮೇದಾವಿ ಶಾನುಭೋಗನ ಉಲ್ಲೇಖವಿದೆ. ಗಂಗನರಸಿಯ ಶಾಸನವನ್ನು ಬರೆದ ಉಲ್ಲೇಖ ಕ್ರಿ.ಶ. ೧೧೬೨[೨೮] ರ ಅದೇ ಗ್ರಾಮದ ಶಾಸನದಲ್ಲಿಯೀ ಸಾಸನವ ಸೇನಬೋವಬೋಪ್ಪಯ' ಬರೆದ ಎಂದು ಉಲ್ಲೇಖವಿದೆ. ಹಾಗೂ ಕ್ರಿ.ಶ. ೧೨೬೭ರ ಹರಿಹರದ ಶಾಸನದಲ್ಲಿ ಗೋವಿಂದ ಸೇನುಬೋವನ ಉಲ್ಲೇಖವಿದೆ.

ತಳವಾರ: ಗ್ರಾಮಾಡಳಿತದ ಕರ್ತವ್ಯಗಳಲ್ಲಿ ಗ್ರಾಮದ ರಕ್ಷಣೆ ತುಂಬಾ ಮುಖ್ಯವಾದುದ್ದು ಈ ರಕ್ಷಣೆಯ ಉಸ್ತುವಾರಿಯನ್ನು ವಹಿಸಿಕೊಂಡವನೇ ತಳವಾರ. ಇವನನ್ನು ತಳಾರ, ತಳವುಕಾರ, ತಳವಾರ ಮುಂತಾಗಿ ಕರೆಯಲಾಗಿದೆ ಇವರಲ್ಲಿಯೂ ಹಿರಿಯ ತಳಾರನಿದ್ದು, ಅವನನ್ನು ಮಹಾತಳವಾರನೆಂದು ಕರೆದಂತಿದೆ. ಊರಿನ ರಕ್ಷಣೆ ಮಾಡುವುದು ಇವರ ಮುಖ್ಯ ಕರ್ತವ್ಯವಾಗಿತ್ತು. ಇವನು ರಾತ್ರಿ ಗಸ್ತು ತಿರುವಗುತ್ತಿದ್ದುದು ಕಳ್ಳರನ್ನು ಹಿರಿಯುತ್ತಿದ್ದ ಸೂಚನೆಗಳಿವೆ. ರಾತ್ರಿಯೆಲ್ಲಾ ನಿದ್ದೆಗೆಟ್ಟು ಕರ್ತವ್ಯ ಪರನಾದ ತಳವಾರನನ್ನು ಕಂಡಕೂಡಲೆ ಕಳ್ಳರು , ಪಾದಾರಿಗಳು, ವಂಚಕರು ಗಡಗಡ ನಡುಗಿ ಕುಸಿದು ಬಿಡುತ್ತಿದ್ದರು. ಈ ಪ್ರದೇಶದ ಶಾಸನಗಳು ತಳವಾರರ ಕುರಿತು ಮಾಹಿತಿ ಒದಗಿಸುವುದು ವಿರಳ. ಹರಿಹರದ[೨೯] ಶಾಸನವೊಂದರಲ್ಲಿ ತಳವಾರಿಕೆಯ ಹಳಿ ನಾಯಕಿಗೆ

ಪ್ರಸನ್ನವೋಡೇಯರು ಹೊಲ ಕೊಟ್ಟ ಬಗ್ಗೆ ದಾಖಲಾಗಿದೆ. ಹಳಿನಾಯಕಿ ಎಂದರೆ ಬಹುಶಃ ಊರಿನ ತಳವಾರಿಕೆಯನ್ನು ಮಹಿಳೆಯರು ಮಾಡಿರಬಹುದು. ಈ ರೀತಿ ಹಳ್ಳಿಗಳ ಆಡಳಿತದಲ್ಲಿ ಗಾವುಂಡ, ಸೇನುಬೋವ, ತಳವಾರರು ಅಲ್ಲಿಯ ಪ್ರಮುಖ ಜನರ ಒಮ್ಮತದಿಂದ ಕರ್ತವ್ಯನಿರ್ವಹಿಸಿ ಊರಿನ ಅಭಿವೃದ್ಧಿಯಲ್ಲಿ ಪಾಲುದಾರರಾಗಿದ್ದಾರೆ.

ಹೀಗೆ ಹರಿಹರ ತಾಲೂಕಿನಲ್ಲಿದ್ದ ವಿವಿಧ ಆಡಳಿತ ವಿಭಾಗಗಳಲ್ಲಿ ಕಾರ್ಯನಿರ್ವಹಿಸಿದ ಮಹಾಮಂಡಳೇಶ್ವರ, ಮಹಾಸಾಮಂತರಾದಿಯಾಗಿ ಗ್ರಾಮದ ಗಾವುಂಡ, ಶಾನಬೋವ, ತಳವಾರರವರೆಗೂ ಅಧಿಕಾರದ ಮೂಲಕ ತಮ್ಮ ತಮ್ಮ ಜವಾಬ್ದಾರಿಗಳನ್ನು ಸರಿಯಾಗಿ ನಿರ್ವಹಿಸಿ ಆಯಾ ಕಾಲಘಟ್ಟದ ಸಾಂಸ್ಕೃತಿಕ ಏಳಿಗೆಯಲ್ಲಿ ಪಾಲುದಾರರಾಗಿದ್ದಾರೆ.

೩.೪ ಆರ್ಥಿಕ ವ್ಯವಸ್ಥೆ

ಪ್ರಾಚೀನ ಇತಿಹಾಸದ ಕಾಲದಿಂದಲೂ ಆರ್ಥಿಕ ವ್ಯವಸ್ಥೆಯು ಇತಿಹಾಸದ ಒಂದು ಭಾಗವೆಂದು ಗುರುತಿಸಿದ್ದಾರೆ. ಇದು ರಾಜರ ಆಳ್ವಿಕೆಯ ಕಾಲದಿಂದ ಹಿಡಿದು ಒಂದು ವ್ಯವಸ್ಥೆಯಾಗಿ ಆರ್ಥಿಕ ಅಭಿವೃದ್ಧಿಗೆ ಪ್ರೇರಕ ಶಕ್ತಿಯಾಗಿ ನಿಂತಿದೆ. ಅಂದಿನ ಕಾಲದಲ್ಲಿ ಸಮಾಜದ ಒಂದು ಪ್ರಮುಖ ಅಂಗ ಎಂದರೆ ಕೃಷಿ ಪದ್ಧತಿಯೇ ಆಗಿದೆ. ಆದ್ದರಿಂದಲೇ ವ್ಯಾಪಾರ ವಹಿವಾಟಿಗೆ ಸಂಬಂಧಿಸಿದಂತೆ ಎಲ್ಲ ಅಂಶಗಳು ಅರ್ಥಿಕ ವ್ಯವಸ್ಥೆಯಿಂದ ತಿಳಿಯಬಹುದು. ವ್ಯಾಪಾರ ಎನ್ನುವುದು ಒಂದು ವೃತ್ತಿ ಎಂದು ಹೇಳಬಹುದು ವೃತ್ತಿ ಎನ್ನುವುದು ಇಂದು ನಿನ್ನೆಯದಲ್ಲ ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿರುವಂತಹದ್ದು: ಆದುದರಿಂದ ಸಮಾಜದಲ್ಲಿ ವೃತ್ತಿ ಜೀವನ ಒಂದು ಅವಶ್ಯಕತೆಯಾಗಿ ನಿಂತಿದೆ ವೃತ್ತಿಗೆಮಾನವನಷ್ಟು ಇತಿಹಾಸವಿದ್ದುದು ಶಾಸನಗಳಲ್ಲಿ ಉಲ್ಲೇಖವಿದೆ. ಏಕೆಂದರೆ ಮಾನವನು ವೃತ್ತಿಯನ್ನು ಅವಲಂಬಿಸಬೇಕಾದುದು ಅನಿವಾರ್ಯವಾಗಿದ್ದು ಈ ವೃತ್ತಿಯಿಂದಲೇ ಮಾನವನು ಜೀವನ ಸಾಗಿಸುತ್ತಿದ್ದನು. ಇನ್ನೊಂದೆಡೆ ಅನಾಗರಿಕತೆ ತಾಂಡವಾಡುತ್ತಿದ್ದರಿಂದ ಅಷ್ಟೇನು ವ್ಯಾಪಾರ ವೃತ್ತಿ ಬೆಳಕಿಗೆ ಬಂದಿರಲಿಲ್ಲ. ಏಕೆಂದರೆ ನೈಸರ್ಗಿಕವಾದ ಸಂಪತ್ತಿನಲ್ಲಿಯೇ ವೃತ್ತಿ ಮಾಡಲೇಬೇಕಾಗಿತ್ತು. ಆದುದರಿಂದ ಮಾನವನ ಶ್ರಮ ಅಪಾರವಾಗಬೇಕಿತ್ತು. ಭೂಮಿಯಲ್ಲಿ ನೈಸರ್ಗಿಕವಾಗಿ ದೊರೆಯುವ ಸಂಪನ್ಮೂಲಗಳನ್ನು ಉಪಯೋಗಿಸುತ್ತಾ ತನ್ನ ಬದುಕನ್ನು ಸಾಗಿಸುತ್ತಿದ್ದನು.

ಮಾನವ ಬುದ್ಧಿಜೀವಿ ಬೌದ್ಧಿಕ ವಿಕಾಸವಾದಂತೆಲ್ಲ ವೃತ್ತಿಗಳಲ್ಲಿ ಹಲವಾರು ಬದಲಾವಣೆಗಳನ್ನು ಕಂಡುಕೊಂಡನು. ವೃತ್ತಿಯ ಗುಣಮಟ್ಟ ಹಾಗೂ ಅವುಗಳನ್ನು ಬಳಸಿಕೊಳ್ಳುವ ವಿಧಾನದಿಂದಲೇ ಆ ನಾಡಿನ ಅರ್ಥಿಕಾಭಿವೃದ್ಧಿಯು ತಿಳಿದುಬರುತ್ತಿತ್ತು. ಆರ್ಥಿಕ ವ್ಯವಸ್ಥೆಯು ಸಮಾಜದ ಮಹತ್ವದ ಒಂದು ಭಾಗ ಮಾನವ ಶ್ರಮಜೀವಿ ತನ್ನ ನಿತ್ಯ ದುಡಿಮೆಯ ಮೂಲಕ ಅರ್ಥಿಕ ಮುಗ್ಗಟ್ಟಿನಿಂದ ಬಿಡುಗಡೆ ಹೊಂದುತ್ತಿದ್ದನು. ಹೀಗಾಗಿ ಮಾನವನ ವೃತಿ ಬದುಕಿನಲ್ಲಿ ಅತ್ಯಂತ ಮೌಲ್ಯವುಳ್ಳ ಅಂಶವಾಗಿ ಕಾಣುತ್ತದೆ. ಶ್ರಮದಲ್ಲಿ ನಿಷ್ಠೆ ಮತ್ತು ಪ್ರಾಮಾಣಿಕತೆ ಇದ್ದಷ್ಟು ವೃತಿಗೆ ಹೊಳಪು ಬರುತ್ತದೆ. ಶ್ರಮ ಮತ್ತು ವೃತ್ತಿಗಳು ನಾಡಿನ ಆರ್ಥಿಕ ಜೀವನದ ನಾಡಿ ಎನಿಸಿದ್ದವು[೨೦]

ಅದರಂತೆಯೇ ಹರಿಹರ ತಾಲೂಕಿನ ಶಾಸನಗಳು ಆರ್ಥಿಕ ವ್ಯವಸ್ಥೆಯ ಬಗ್ಗೆ ತಿಳಿಸುವಲ್ಲಿ ಹೊರತಾಗಿಲ್ಲ ಎಂದು ಹೇಳಬಹುದು.

ಭೂ ಸಂಪತ್ತು: ಮಾನವ ಸಂಘಜೀವಿ ಹಾಗೂ ಶ್ರಮಜೀವಿಯೂ ಕೂಡ, ಆದ್ದರಿಂದ ಸಮಾಜದಲ್ಲಿ ಬಾಳಿ ಬದುಕುವ ಪ್ರತಿಯೊಬ್ಬ ಮನುಷ್ಯನು ತನ್ನ ಜೀವನದ ನಿರ್ವಹಣೆಗಾಗಿ ಆರ್ಥಿಕ ವ್ಯವಸ್ಥೆಯ ತಳಹದಿಯಲ್ಲಿಯೇ ಜೀವನ ಸಾಗಿಸಬೇಕಾಗುತ್ತಿತ್ತು. ನೈಸರ್ಗಿಕ ಕೊಡುಗೆಯಾದ ಭೂಮಿಯನ್ನು ಮಾನವ ಅವಲಂಬಿಸಲೇಬೇಕಾಗಿತ್ತು ಇದನ್ನು ಪ್ರಾಚೀನ ಕಾಲದಿಂದಲೂ ಕಾಣಬಹುದಾಗಿದೆ ಭೂಮಿ ಅನೇಕ ವಿಧಗಳಿಂದ ಕೂಡಿರುವಂತಹದ್ದು ಅದರಲ್ಲಿ ನೀರು,ಮಣ್ಣು, ಕಾಡು, ಖನಿಜ ಸಂಪತ್ತು, ನದಿ ಮುಂತಾದವುಗಳಲ್ಲದೇ ಅನೇಕ ಜೀವರಾಶಿಗಳನ್ನು ತನ್ನ ಗರ್ಭದಲ್ಲಿರಿಸಿಕೊಂಡಿದೆ. ಭೂಮಿ ಒಂದು ಸಂಪತ್ತು ಇದರಿಂದ ನಾವು ಏನಾದರೂ ಪಡೆಯಬಹುದು ಆದ್ದರಿಂದಲೇ ಮಾನವನು ವ್ಯವಸಾಯಕ್ಕಾಗಿ ಬಳಸಿಕೊಂಡನು. ಎಲ್ಲಾ ಭೂಮಿಯು ವ್ಯವಸಾಯಕ್ಕೆ ಬರುತ್ತದೆ ಎಂದು ಹೇಳಬಾರದು ಒಂದೆಡೆ ನೀರಿನಿಂದ ಕೂಡಿದ ವ್ಯವಸಾಯಕ್ಕೆ ಯೋಗ್ಯವಾದ ಭೂಮಿ ಇದ್ದರೆ ಇನ್ನೊಂದೆಡೆ ಮಳೆಯನ್ನೇ ಅವಲಂಬಿತ ಭೂಮಿ ಕಂಡಬರುತ್ತದೆ.

ಭೂಮಿಯ ವಿಧಗಳು: ಭೌಗೋಳಿಕ ಹಿನ್ನಲೆಯಲ್ಲಿ ಬೆಟ್ಟ, ಖನಿಜ, ಕಾಡು ಮತ್ತು ವಿವಿಧ ಮಣ್ಣಿನ ಸ್ವರೂಪಗಳನ್ನೊಳಗೊಂಡ ಭೂಮಿಯನ್ನು ಅನೇಕ ಬಗೆಯಾಗಿ ವಿಂಗಡಿಸಲಾಗಿದೆ. ಪ್ರಾಚೀನ ಶಾಸನಗಳು ಭೂಮಿಯನ್ನು ಸಾಮಾನ್ಯವಾಗಿ ಕೆಯಿ ಎಂದು ಕರೆದಿವೆ. ಇದರಲ್ಲಿ ಯೋಗ್ಯ ಮತ್ತು ಯೋಗ್ಯವಲ್ಲದ ಭೂಮಿಯೆಂದು ವಿಂಗಡಿಸಬಹುದು. ಪ್ರಾಗಿತಿಹಾಸ ಕಾಲದಿಂದ ಮಾನವನು. ಒಂದು ಕಡೆ ನೆಲೆನಿಂತು ಗ್ರಾಮ ನಿರ್ಮಾಣವಾದಾಗ ಅದರ ಸುತ್ತಮುತ್ತಲಿನ ಪ್ರದೇಶವನ್ನು ವ್ಯವಸಾಯಕ್ಕೆ ಬಳಸಿಕೊಳ್ಳುತ್ತ ಸಾಗಿದನು.[೨೦] ಅಲ್ಲದೆ ನದಿ, ಹಳ್ಳ, ಬಾವಿಗಳ ನೀರನ್ನು ವ್ಯವಸಾಯಕ್ಕೆ ಬಳಸಿಕೊಂಡನು. ಇದರಲ್ಲಿ ಮಹಿಳೆಯನ್ನು ಅವಲಂಬಿಸಿ ಸಾಗುವಳಿ ಮಾಡುವ ಭೂಮಿಯನ್ನು ದೇವ ಮಾತೃವೆಂದೂ, ಕೆರೆ-ಬಾವಿ ಮುಂತಾದವುಗಳನ್ನುವಲಂಬಿಸಿದ ನೀರಾವರಿ ಭೂಮಿಯನ್ನು ನದಿ ಮಾತೃಕವೆಂದೂ ವಿಂಗಡಿಸಲಾಗಿದೆ.[೨೧] ದೇವಮಾತೃಕ ಪೊಲ-ಹೊಲ-ಗದ್ದೆ-ಗಳ್ದೆಯಲ್ಲಿ ಮತ್ತು ನದಿ ಮಾತೃಕ ತೋಟದಲ್ಲಿ ಸೇರ್ಪಡೆಗೊಳ್ಳುತ್ತದೆ. ಇದರೊಂದಿಗೆ ಬೀಳು ಭೂಮಿಯನ್ನು ಕಾಯ್ದಿಡಲಾಗುತ್ತಿತ್ತು ಒಂದು ವೇಳೆ ಬೀಳು ಭೂಮಿ ಇಲ್ಲದಿದ್ದರೆ ಅಂಥ ಊರುಗಳಲ್ಲಿ ನೂರು ಬಿಲ್ಲಳತೆಯ ಭೂಮಿಯನ್ನು ಕಾಯ್ದಿಡಬೇಕೆಂದು ಯಜ್ಞವಲ್ಕ್ಯ ಸ್ಮೃತಿಯಲ್ಲಿದೆ.[೨೨] ಈಗಲೂ ಪ್ರತಿಯೊಂದು ಗ್ರಾಮದಲ್ಲಿ ಗೋಮಾಳ ಎಂದು ಕಾಯ್ದಿಡುವ ನಿಯಮವಿದೆ ಇಂಥ ಭೂಮಿ ರಾಜರ ವಶದಲ್ಲಿರುತ್ತಿತ್ತು.

ಹರಿಹರ ತಾಲೂಕಿನ ಶಾಸನಗಳಲ್ಲಿ ಭೂಮಿಯನ್ನು ದಾನ ನೀಡಿದ ಉಲ್ಲೇಖ ಬರುತ್ತದೆ. ಅದರಲ್ಲಿ ಬೆದ್ದಲು ಭೂಮಿ,[೨೩] ಎರೆಭೂಮಿ,[೨೪] ನಿರ್ಮಣ್ಣು ಗದ್ದೆ[೨೫] > ಮಣ್ಣಿನ ಗೆದ್ದೆ[೨೬]> ಮಣ್ಣಿನ ಗೆದ್ದೆ[೨೭], ಹಾಗೂ ದೇವರ ಭೂಮಿ[೨೮] ಎಂಬುದಾಗಿ ವಿಧಗಳಿವೆ. ಕೊಂಡಜ್ಜಿ, ವಾಸನ, ಹಳ್ಳಿಹಾಳು ಗ್ರಾಮಗಳ ಶಾಸನಗಳಲ್ಲಿ ಬೆದ್ದಲು ಭೂಮಿ ಉಲ್ಲೇಖಗಳಿವೆ. ಹರಿಹರ, ಗಂಗನರಸಿ

ಗ್ರಾಮಗಳ ಶಾಸನಗಳಲ್ಲಿ ಎರೆಭೂಮಿ ಉಲ್ಲೇಖಗಳಿವೆ. ಗೂತ್ತೂರು, ಹರಿಹರದ ಶಾಸನಗಳಲ್ಲಿ ನಿರ್ಮಣ್ಣು ಗದ್ದೆ, ಮಣ್ಣಿನ ಗದ್ದೆ, ಮಣುವಿನ ಗದ್ದೆಯ ಬಗ್ಗೆ ಉಲ್ಲೇಖಗಳಿವೆ. ಅದೇ ರೀತಿ ವಾಸನದ ಶಾಸನದಲ್ಲಿ ದೇವರ ಭೂಮಿಯ ಉಲ್ಲೇಖಗಳಿವೆ. ಇವೆಲ್ಲಾ ಶಾಸನಗಳು ದಾನ ಶಾಸನಗಳಾಗಿರುವುದರಿಂದ ದಾನದ ವಿಷಯದ ಕುರಿತು ಹೇಳಿವೆಯೇ ಹೊರತು ಭೂಮಿಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯನ್ನೇನು ತಿಳಿಸುವುದಿಲ್ಲ. ಪ್ರಸ್ತುತ ತಾಲೂಕಿನಾದ್ಯಂತ ಗುರುತಿಸುವುದಾದರೆ ಕಪ್ಪು, ಮರಳು ಮಿಶ್ರಿತ, ಮಸಾರಿ, ಕಲ್ಲರಗು, ಕೆಂಪುಮಿಶ್ರಿತ ಕಪ್ಪು ಮಣ್ಣಿನ ಭೂಮಿಯನ್ನು ಗುರುತಿಸಬಹುದಾಗಿದೆ.

ನೀರಾವರಿ: ಪ್ರಾಚೀನ ಕಾಲದಿಂದಲೂ ಜಲ ಸಂಗ್ರಹಣಾ ಕಾರ್ಯ ಶ್ಲಾಘನೀಯವಾದದ್ದು ಮಳೆಯನ್ನು ಅವಲಂಬಿಸದೇ ಕೃಷಿ ಉತ್ಪಾದನೆಗೆ ಹಾಗೂ ವ್ಯವಸಾಯಕ್ಕೆ ಅನುಕೂಲವಾಗುವಂತೆ ಕೆರೆ, ಬಾವಿ, ನದಿ, ಹಳ್ಳಗಳಿಂದ ನೀರು ಸಂಗ್ರಹಿಸಿಕೊಳ್ಳುತಿದ್ದರು. ದನ-ಕರುಗಳಿಗೆ, ಪಶು, ಪಕ್ಷಿಗಳಿಗೆ, ವ್ಯವಸಾಯಕ್ಕೆ ನೀರು ಅವಶ್ಯವಾಗಿ ಬೇಕಾಗಿತ್ತು. ನೀರನ್ನು ಪಡೆಯಲು ಮಾನವನು ಭಗೀರಥ ಪ್ರಯತ್ನವನ್ನು ಮಾಡಿದ್ದಾನೆ ಕೆರೆ, ಬಾವಿ, ನಾಲೆ, ಕಟ್ಟೆ, ಮುಂತಾದ ನಾನಾ ರೀತಿಯ ಕಟ್ಟೆಗಳನ್ನು ನಿರ್ಮಿಸಿ ನೀರನ್ನು ಸಂಗ್ರಹಸಿ ಅದನ್ನು ಉಪಯೋಗಿಸುತ್ತಾ ಬಂದಿದ್ದಾನೆ. 'ನಮ್ಮ ಪ್ರಾಚೀನರು ಇಂತಹ ಕೆರೆ, ಕಟ್ಟೆ, ಬಾವಿಗಳನ್ನು ಕಟ್ಟಿಸುವುದು ಪುಣ್ಯಕರ, ಶ್ರೇಯಸ್ಸಕರ ಎಂದು ಭಾವಿಸಿದ್ದರು. ಅವರೆಲ್ಲ ಮನೋಭಾವದ ಫಲವಾಗಿಯೇ ಈ ನಾಡಿನ ಉದ್ದಗಲಕ್ಕೂ ಉದ್ದಗಲಕ್ಕೂ ಅನೇಕ ಕೆರೆ- ಬಾವಿಗಳು ವ್ಯಾಪಿಸಿ ನಿಂತದ್ದನ್ನು ಶಾಸನಗಳು ಉಲ್ಲೇಖಿಸಿವೆ,[೨೮೦]

ನೀರಾವರಿಗೆ ಸಂಬಂಧಪಟ್ಟಂತೆ ತಾಲೂಕಿನ ಕೆಲವು ಶಾಸನಗಳಲ್ಲಿ ಉಲ್ಲೇಖವಿರುವುದನ್ನು ನೋಡಬಹುದಾಗಿದೆ. ಕ್ರಿ.ಶ. ೧೦೫೪ರ ದೇವರಬೆಳಕೆರೆ[೨೮೧] ಶಾಸನದಲ್ಲಿ ವಿಜಯಪಂಡಿತ ಎಂಬುವವನು ಹಿರಿದಾದ ಕೆರೆಯನ್ನು ಕಟ್ಟಿಸಿ ವಿಜಯಸಮುದ್ರ ಎಂದು ನಾಮಕರಣ ಮಾಡಿದ ವಿಷಯ ತಿಳಿಸುತ್ತದೆ. ಕಾಲಮಾನವಿಲ್ಲದ ಹಳ್ಳಿಹಾಳು ಗ್ರಾಮದ ಶಾಸನದಲ್ಲಿ ಬುವೆನಾಯ್ಕನ ಮಗ ಯಿಬ್ಬೆಯನಾಯ್ಕನು ತನ್ನ ತಂದೆ ಶಿವಾಧೀನ ಆಗಿದ್ದರಿಂದ ತಂದಯೆ ಹೆಸರಿನಲ್ಲಿ ಬುವಸಮುದ್ರ ಎನ್ನುವ ಕೆರೆಯನ್ನು ಕಟ್ಟಿಸಿದ ಬಗ್ಗೆ ತಿಳಿಸುತ್ತದೆ. ಕ್ರಿ.ಶ. ೧೪೧೦ರ ಹರಿಹರದ[೨೮೨] ಶಾಸನದಲ್ಲಿ ಹರಿಹರದ ಮಹಾಜನರು ಸ್ವಂತ ಹಣದಲ್ಲಿ ಹರಿದ್ರಾನದಿಗೆ ಸೇತುವೆಯನ್ನು ಕಟ್ಟಿಸಿ ಹರಿಹರ ದೇವರ ಭೂಮಿಯಾಗಿದ್ದ ಬನ್ನಿಕೋಡು ಸೀಮೆಯೊಳಗೆ ಬನ್ನಿಕೋಡು, ಬೆಳವಡಿ, ಹನಗವಾಡಿ, ಹರಿಹರ, ಗುತ್ತೂರು, ಗಂಗರಸಿವರೆಗೆ ಕಾಲುವೆ ಮಾಡಿಸಿದ ಬಗ್ಗೆ ತಿಳಿಸುತ್ತದೆ. ಈ ಕಾಲುವೆ ಹೊಡೆದು ಹೋದ ತರುವಾಯ ಮತ್ತೆ ಕ್ರಿ.ಶ. ೧೪೨೪ರಲ್ಲಿ[೨೮೩] ಕಟ್ಟೆಯ ಜಿರ್ಣೋದ್ದಾರವನ್ನು ಅಲ್ಲಿನ ಚಾಮರಾಜನ ನೆರವಿನಿಂದ ಬುಳ್ಳರಾಯನು ಮಾಡಿಸುತ್ತಾನೆ. ಹೀಗೆ ಅವಶ್ಯಕವಾದ ನೀರಾವರಿ ಬಗ್ಗೆ ಪ್ರಾಚೀನರು ಹೆಚ್ಚಿನ ಗಮನಹರಿಸಿ ಅದರ ಅಭಿವೃದ್ಧಿಗಾಗಿ ಅವಿರತ ಶ್ರಮವಹಿಸಿರುವುದು ಶಾಸನಗಳಿಂದ ವ್ಯಕ್ತವಾಗುತ್ತದೆ.

ವ್ಯವಸಾಯ: ಮಾನವನ ಜೀವನದ ಆಧಾರವೇ ವ್ಯವಸಾಯ, ಇದು ಪ್ರಾಚೀನ ಕಾಲದಿಂದ ಹಿಡಿದು ಇಲ್ಲಿಯವರೆಗೂ ಮುಂದುವರೆದುಕೊಂಡು ಬಂದಿದೆ. ವ್ಯವಸಾಯ ಎಂಬುದು ಜೀವನೋಪಾಯ ಪ್ರಮುಖ ಅಂಗ, ನಾಗರಿಕತೆಯ ಪೂರ್ವದಿಂದಲೂ ಸಾಗುತ್ತಾ ಬಂದಿದೆ. ಭಾರತ ದೇಶ ಕೃಷಿ ಪ್ರಧಾನವಾದ ದೇಶ ಎಂಬ ಹೆಗ್ಗಳಿಕೆಗೆ ವ್ಯವಸಾಯವೇ ಕಾರಣವಾಗಿದೆ. ವ್ಯವಸಾಯವೇ ಈ ದೇಶದ ಜೀವನಾಡಿಯಾಗಿದೆ. ಈ ವ್ಯವಸಾಯ ಪದ್ಧತಿಯು ನಾಗರಿಕತೆಯ ಆರಂಭದಲ್ಲಿ ಹುಟ್ಟಿ ಇಂದಿಗೂ ಮುಂದುವರೆದುಕೊಂಡು ಬಂದಿರುವುದು ಕಾಣುತ್ತೇವೆ. ದೇಶದ ಪ್ರಗತಿಗೆ ಕೃಷಿ, ವ್ಯಾಪಾರ, ಉದ್ಯೋಗ ಅಲ್ಲದೆ ಕೈಗಾರಿಕೆಗಳಂತಹ ಕಸುಬುಗಳು ಈ ದೇಶದ ಜನರ ಜೀವನದ ಆಧಾರ ಸ್ತಂಭಗಳಾಗಿದ್ದವು ಆದ್ದರಿಂದಲೇ ಪ್ರಾಚೀನ ಕಾಲದ ಜನರು ಒಂದು ನಾಡಿನ ನಿಜವಾದ ಸಂಪತ್ತು ಮತ್ತು ಅಭಿವೃದ್ಧಿಗೆ ವ್ಯವಸಾಯವೇ ಮೂಲ ಸೆಲೆ ಎಂದು ನಂಬಿದ್ದರು. ವ್ಯವಸಾಯಕ್ಕಾಗಿ ಭೂಮಿಯನ್ನು ದಾನದ ರೂಪದಲ್ಲಿ ನೀಡಿದ್ದು ಶಾಸನಗಳಿಂದ ತಿಳಿದುಬರುತ್ತದೆ. ದಾನದ ವಸ್ತುಗಳಲ್ಲಿ ವ್ಯವಸಾಯ ಯೋಗ್ಯ ಭೂಮಿಗೆ ಪ್ರಾಶಸ್ತ್ಯವಿದ್ದು ಕರ್ನಾಟಕದ ಮುಕ್ಕಾಲು ಪಾಲು ಶಾಸನಗಳು ಭೂದಾನಕ್ಕೆ ಸಂಬಂಧಿಸಿವೆ.

ಕ್ರಿ.ಶ. ೧೧೪೪ರ ಹರಿಹರದ[೨೮೪] ಶಾಸನವು ಹರಿಹರ ದೇವರ ಕೂಡಲೂರಿಗೆ ತಮ್ಮ ಹೊಳೆಯ ಮಣ್ಣಿನ ಮನ್ನೆಯಗೈಯೊಳಗೆ ಬೆಳೆಯಗೆರೆಯ ಪಶ್ಚಿಮಕ್ಕೆ ಕೇಕರಕೊಳದ ದಕ್ಷಣಕ್ಕೆ ಇರುವ ಎರೆಯ ಭೂಮಿ ಮತ್ತರು ಒಂದನ್ನು ಶ್ರೀಯೋಗೇಶ್ವರ ದೇವರ ನೈವೆದ್ಯಕ್ಕೆ ದಾನ ಮಾಡಿದರು. ಹರಿಹರ ದೇವರ ಮಾಲೆಕಾರರಿಗೆ ಮನೆ ಇಲ್ಲದಿರಲು ನಿವೇಶನ, ದೇವರ ದೀಪ, ನೈವೆದ್ಯಕ್ಕೆ ಅಂಗಡಿಯಿಂದ ಅಕ್ಕಿ, ಗಾಣದಿಂದ ಎಣ್ಣೆಯನ್ನು ಏರ್ಪಡಿಸಿದರು. ಈ ವಿವರಗಳು ವೃತ್ತಿಗಳನ್ನೂ ಸೂಚಿಸುತ್ತಾ ಅಂಗಡಿ ಹಾಗೂ ಗಾಣದ ವಿವರಗಳನ್ನು ನೀಡುತ್ತದೆ. ಹೀಗೆ ದೇವರ ಕಾರ್ಯಗಳಿಗೆ ಭೂಮಿಯನ್ನು ದಾನ ನೀಡಿದ ವಿವರಗಳನ್ನು ತಿಳಿಸುವ ಅನೇಕ ಶಾಸನಗಳು ಈ ಪರಿಸರದಲ್ಲಿವೆ. ಕ್ರಿ.ಶ. ೧೧೬೧[೨೮೫] ರ ಶಾಸನದಲ್ಲಿ ಶ್ರೀಶಂಕರನಾರಾಯಣದೇವರ, ಕೂಡಲೂರ ತುಂಗಭದ್ರಾದೇವಿಯ ಬ್ರಹ್ಮತೀರ್ಥದ ಅರಸೀಕೆರೆಯ ಮಾದೇಶ್ವರ ದೇವರ ಅಂಗಭೋಗ ನೈವೇದ್ಯಕ್ಕೆ ಶ್ರೀಜ್ಞಾನಶಕ್ತಿದೇವರ ಶಿಷ್ಯವಾಮಶಕ್ತಿ ಪಂಡಿತರ ಶಿಷ್ಯ ತೇಜೋನಿಧಿಪಂಡಿತದೇವರಿ ಮೇವನಕೆರೆಯ ಕೆಳಗಿನ ಗದ್ದೆ ಕಂಬ-೪೫೦ ಹಾಗೂ ಅ ಕೆರೆಯ ಪಡುಗೊಡೆಯ ಎರೆಭೂಮಿ ಮತ್ತು ಮನೆಯ ನಿವೇಶವನ್ನು ನೀಡಿದ ಭೂದಾನ ಶಾಸನ ಇದಾಗಿದೆ. ವ್ಯವಸಾಯದಲ್ಲಿ ಅನೇಕ ವಿಧವಾದ ಬೆಳೆಗಳನ್ನು ಆಯಾ ಮಣ್ಣಿನ ವಿಧದಲ್ಲಿ ಬೆಳೆದು ಆರ್ಥಿಕತೆಯ ಸಮತೋಲನ ಸಲ್ಲಿಸುವಲ್ಲಿ ಶ್ರಮಿಕರ ಶ್ರಮ ಅಪಾರವಾದುದು.

ಬೆಳೆಗಳು: ತಾಲೂಕಿನ ಅನೇಕ ತರದ ಭೂಮಿ ಇರುವುದರ ಬಗ್ಗೆ ತಿಳಿದಿದ್ದೇವೆ. ಹಾಗೆಯೇ ಈ ಭೂಮಿಯಲ್ಲಿ ನಾನಾ ವಿಧಗಳ ಬೆಳೆಗಳನ್ನು ಬೆಳೆದಿರುವುದು ಶಾಸನಗಳಿಂದ ತಿಳಿದುಬರುತ್ತದೆ. ಕ್ರಿ.ಶ. ೧೧೬೭ರ ಹರಿಹರದ[೨೮೬] ಶಾಸನದಲ್ಲಿ ಅಕ್ಕಿ, ಹೆಸರು ಬೆಳೆ, ಹಣ್ಣು ತರಕಾರಿ, ಮೆಣಕಾಸಿನಕಾಯಿ, ಕುಂಕುಮ ಹಾಗೂ ಕೇಸರಿಗಳ ಬಗ್ಗೆ ಉಲ್ಲೇಖ ಬರುತ್ತದೆ. ಅಂದರೆ ಈ ಎಲ್ಲಾ

ಬೆಳೆಗಳನ್ನು ನಮ್ಮ ಪ್ರಾಚೀನರು ಬೆಳೆಯುತ್ತಿದ್ದರೆಂದು ತಿಳಿದು ಬರುತ್ತದೆ ಈ ಮೇಲಿನ ಎಲ್ಲಾ ಬೆಳೆಗಳನ್ನು ಈಗಲೂ ಬೆಳೆಯುತ್ತಾರೆ, ಗುತ್ತೂರಿನ ಶಾಸನಗಳಲ್ಲಿ ಅಡಿಕೆ ತೋಟಗಳ ಕುರಿತ ಉಲ್ಲೇಖಗಳಿವೆ. ಹೀಗೆ ಶಾಸನಗಳಲ್ಲಿ ಇಲ್ಲಿನ ಬೆಳೆಗಳನ್ನು ಕುರಿತ ಮಾಹಿತಿ ದೊರೆಯುತ್ತದೆ.

ತೂಕ ಮತ್ತು ಅಳತೆ: ಮಾನವರು ತಮ್ಮ ದಿನನಿತ್ಯದ ವ್ಯವಹಾರಕ್ಕಾಗಿ ತಮ್ಮದೇ ಆದ ವಿಧಾನವನ್ನು ಅನುಸರಿಸಿ ತೂಕ ಮತ್ತು ಅಳತೆಯ ರೂಪದಲ್ಲಿ ವಿಭಾಗ ಮಾಡಿಕೊಂಡಿದ್ದರು. ತಾವು ಬೆಳೆದ ದವಸ ಧಾನ್ಯಗಳನ್ನು ಮಾರಲು ಅಥವಾ ಇನ್ನೊಬ್ಬರಿಗೆ ಕಡದ ರೂಪದಲ್ಲಿ ನೀಡುವ ಸಂದರ್ಭದಲ್ಲಿ ತೂಕ ಮತ್ತು ಅಳತೆ ಪ್ರಮುಖ ಉರುಗೋಲಾಗಿ ಕೆಲಸ ಮಾಡುತ್ತದೆ. ತೂಕ ಮತು ಅಳತೆಗೆ ಸಂಬಂಧಪಟ್ಟಂತೆ ಮಾಹಿತಿಯನ್ನು ನೀಡುವ ಅನೇಕ ಶಾಸನಗಳು ಹರಿಹರ ತಾಲೂಕಿನಲ್ಲಿ ದೊರೆತಿವೆ. ಅವರು ಅನುಸರಿಸಿದ ಅಳತೆ ಮಾಪನಗಳ ಪದ್ಧತಿಯು ಕಂಡು ಬರುವುದರ ಜೊತೆಗೆ ಅವರ ಆರ್ಥಿಕ ವ್ಯವಸ್ಥೆಯ ಒಂದು ಭಾಗ ತಿಳಿದುಬರುತ್ತದೆ. ಕೊಂಡಜ್ಜಿ[೨೮೭] ಶಾಸನದಲ್ಲಿ ಪೋಮಣ್ಣನಾಯಕನು ಕಾದಾಡಿ ಶಿವಾಧೀನನಾಗಿದ್ದರಿಂದ ಅವನ ಸ್ಮರಾಣಾರ್ಥ ನಿಲ್ಲಿಸಿದ ವೀರಗಲ್ಲಿಗೆ ಗದ್ದೆ, ಕಂಬ ೧೦೦. ಬೆದ್ದಲು ಭೂಮಿಯನ್ನು ದಾನ ಕೊಟ್ಟ ಬಗ್ಗೆ ಉಲ್ಲೇಖಿಸಿದೆ. ಗಂಗನರಸಿಯ ಒಂದು ಶಾಸನದಲ್ಲಿ ಗದ್ದೆಯನ್ನು ಕಂಬ-೪೫೦ ಎಂದು ಭೂಮಿಯ ಅಳತೆಯ ಉಲ್ಲೇಖವನ್ನು ತಿಳಿಸಿದೆ.[೨೮೮] ಕೊಂಡಜ್ಜಿಯ ಇನ್ನೊಂದು ಶಾಸನದಲ್ಲಿ ಮುದ್ರೆಯ ಪುಟ ಆಯ್ಯಗಳು ಶ್ರೀವೀರೂಪಾಕ್ಷದೇವರಿಗೆ ಮತ್ತರು ಭೂಮಿಯನ್ನ ದಾನ ಬಿಟ್ಟನೆಂದು ಉಲ್ಲೇಖಿಸಿದೆ. 'ಭೂಮಿಯನ್ನು ಆಳೆಯುವುದಕ್ಕೆ ಮತ್ತರು ಎಂಬುದಾಗಿಯೂ, ಮತ್ತರು ಎಂದರೆ ೯೦೦ ಕಂಬಗಳು ಎಂದರ್ಥ'[೨೮೯] ಚಿಕ್ಕಬಿದರೆಯ ಶಾಸನದಲ್ಲಿ ಮತ್ತರು ಒಂದನ್ನು ಕಂನ್ನೇಶ್ವರ ದೇವರಿಗೆ ಬಿಟ್ಟ ಭೂಮಿಯ ಬಗ್ಗೆ ತಿಳಿಸುತ್ತದೆ.

ಗುತ್ತೂರಿನ ಶಾಸನವೊಂದು ಶಂಕರನಾರಾಯಣದೇವರ ಅಯ್ಯಗಳ ಅನ್ನಸತ್ರಕ್ಕೆ, ಹೊತ್ತಿಗೆ ಸೇವಾ ಕೈಂಕರ್ಯಕ್ಕೆ, ೧೨೦ ಕಂಬ ಅಡಿಕೆ ತೋಟವನ್ನು ದಾನ ಬಿಟ್ಟ ಬಗ್ಗೆ ತಿಳಿಸುತ್ತದೆ. ಈ ರೀತಿಯಾಗಿ ಪ್ರಾಚೀನರು ತಮಗೆ ಅನುಕೂಲವಾದ ರೀತಿಯಲ್ಲಿ ಅಳತೆ ಮಾಪನಗಳನ್ನು ರೂಢಿಯಲ್ಲಿಟ್ಟುಕೊಂಡಿದ್ದರೆಂದು ಶಾಸನಗಳಿಂದ ವ್ಯಕ್ತವಾಗುತ್ತದೆ ಈ ಆಳತೆ ಮಾಪನಗಳಲ್ಲದೆ ಖಂಡುಗ, ಕೊಳ, ಗದ್ಯಾಣ, ವರಹ, ಎಕರೆ ಹಿರೇಕೋಲು ಮುಂತಾದ ಅಳತೆ ಮಾಪನಗಳು ಕೂಡ ಜಾರಿಯಲ್ಲಿದ್ದವು.

ನಾಣ್ಯಗಳು: ಮಾನವನು ಸಂಘಜೀವನವನ್ನು ಆರಂಭಿಸಿದ ಮೊದಲ ಕಾಲಘಟ್ಟದಲ್ಲಿ ನಾಣ್ಯಗಳ ಬಳಕೆಯಿರಲ್ಲಿಲ್ಲ. ಆಗ ತಮ್ಮ ದೈನಂದಿನ ವ್ಯವಹಾರವನ್ನು ಕೊಡು-ಕೊಳ್ಳುವಿಕೆಯ ಮೂಲಕ ವಿನಿಮಯ ಮಾಡಿಕೊಳ್ಳುತ್ತಿದ್ದರು. ವಿನಿಮಯ ಮಾಡಿಕೊಳ್ಳುವ ಸಂಧರ್ಭದಲ್ಲಿ ವಸ್ತುಗಳೇ ಪ್ರಮುಖವಾಗಿ ಬಳಕೆಗೊಳ್ಳುತ್ತಿದ್ದವು ಒಕ್ಕಲಿಗರು ತಾವು ಬೆಳೆದ ದವಸ-ಧಾನ್ಯಗಳನ್ನು ವರ್ತಕರಿಗೆ ನೀಡಿ ಅವರಿಂದ ತಮ್ಮ ಉಪಜೀವನಕ್ಕೆ ಬೇಕಾಗುವ ವಸ್ತಗಳನ್ನು ಪಡೆದುಕೊಳ್ಳುತ್ತಿದ್ದರು ನಂತರ ನಾಗರಿಕತೆಯ ಮೂಲಕ ನಾಣ್ಯಗಳನ್ನು ಮುದ್ರಿಸುವಲ್ಲಿ ಹಾಗೆಯೇ ಚಲಾವಣೆಗೆ ತರುವ

ಪದ್ಧತಿಯನ್ನು ರೂಢಿಸಿಕೊಂಡರು. ಆದ್ದರಿಂದಲೇ ನಾಣ್ಯಗಳು ಒಂದು ನಾಡಿನ ಆರ್ಥಿಕಾಭಿವೃದ್ಧಿಯನ್ನು ಗುರುತಿಸುವಲ್ಲಿ ಪ್ರಮುಖ ನಿದರ್ಶನಗಳಾಗಿ ನಿಲ್ಲುತ್ತವೆ ನಾಣ್ಯಗಳನ್ನು ಟಂಕಿಸುತ್ತಿದ್ದ ಸ್ಥಳಗಳನ್ನು 'ಕಮ್ಮಟಗಳೆಂದು 'ಅಚ್ಚಿನಟಂಕಸಾಲೆ' ಗಳೆಂದೂ ಕರೆಯುತ್ತಿದ್ದರು.[೨೦] ಹಾಗೆಯೇ ಚಲಾವಣೆಯಲ್ಲಿದ್ದ ನಾಣ್ಯವನ್ನು ಗದ್ಯಾಣವೆಂದೂ ಗುರುತಿಸಿ ಅದಕ್ಕೆ ಇನ್ನೊಂದು ಹೆಸರು ಪೊನ್ ಎಂಬುದಾಗಿಯೂ ಕರೆಯುತ್ತಿದ್ದರು.

ಕ್ರಿ.ಶ. ೧೧೬೮ರ ಹರಿಹರದ[೨೧] ಶಾಸನದಲ್ಲಿ ಹರಿಹರ ದೇವರ ಸೇವೆಗಾಗಿ ವಿಜಯಪಾಂಡ್ಯದೇವನು ಬಿಟ್ಟಿರುವ ಹಣ ಮತ್ತು ವಿತರಣೆಯನ್ನು ಈ ಕೆಳಗಿನಂತೆ ನೋಡಬಹುದು. ಹರಿಹರ ದೇವರ ತ್ರಿಕಾಲ ನೈವೇದ್ಯಕ್ಕಾಗಿ ೩ ಅಡಕ ಅಕ್ಕಿ, ಹೆಸರು ಬೆಳೆ ೧ ಪ್ರಸ್ಥ, ಮುಕ್ಕಾಲು ಪ್ರಸ್ಥತುಪ್ಪ, ಪಾಯಸಕ್ಕಾಗಿ ಹಾಲು, ಕಣಕ, ದದ್ಮಗಳು, ಪ್ರತ್ಯೇಕ ೩, ಹಣ್ಣು-ತರಕಾರಿ ೪, ದೊಡ್ಡ ದೀಪದ ಎಣ್ಣೆ ಕಾಲು ಪ್ರಸ್ಥ, ತರಕಾರಿ ಒಂದು ಪ್ರಸ್ಥ, ಮೆಣಸಿನಕಾಯಿ, ಹದಿನಾರು ಅಡಿಕೆ, ಇಪ್ಪತ್ತು ಎಲೆ, ಈ ರೀತಿ ಪ್ರತಿದಿನ ಸಂವತ್ಸರದವರೆಗೆ ನಿಷ್ಕ ೪, ಶ್ರೀಖಂಡಕ್ಕೆ ನಿಷ್ಕ೧, ಕುಂಕುಮ, ಕೇಸರಿ, ಪಚ್ಚೆಕರ್ಪೂರಕ್ಕೆ ನಿಷ್ಕ ೫ ಚೈತ್ರಕ್ಕೆ ನಿಷ್ಕ ೧, ಪವಿತ್ರಕ್ಕೆ ನಿಷ್ಕ ೧, ಹೀಗೆ ದೇವರ ಅಂಗಭೋಗಕ್ಕೆ ನಿಷ್ಕ ೫೨, ಪಂಡಿತರಲ್ಲಿ ಋಗ್ವೇದದವರಿಗೆ ನಿಷ್ಕ ೬, ಯಜುರ್ವೇದದವರಿಗೆ ನಿಷ್ಕ ೬, ಆಕ್ಷರ ಶಿಕ್ಷದವರಿಗೆ ಭತ್ಯದ ರೂಪದಲ್ಲಿ ನಿಷ್ಕ ೪ ಪ್ರತಿದಿನ ಸತ್ರದಲ್ಲಿ ಐತ್ತು ಜನ ಬ್ರಾಹ್ಮಣರಿಗೆ ವರ್ಷದ ಉದ್ದಕ್ಕೂ ಭೋಜನಕ್ಕೆ ನಿಷ್ಕ ೧೮೦, ಮೂರು ಜನ ಪರಿಚಾರಕರಿಗೆ ನಿಷ್ಕ ೯, ಅಡಿಗೆಯವರಿಗೆ ನಿಷ್ಕ ೨ ಬ್ರಾಹ್ಮಣರ ಅಭ್ಯಂಗ ತೈಲಕ್ಕೆ ನಿಷ್ಕ ೨, ಪ್ರತಿಪರ್ವದಲ್ಲಿ ಪಕ್ವಾನ್ನಕ್ಕೆ ನಿಷ್ಕ ೧, ವೇದಾಂತಕ್ಕೆ ನಿಷ್ಕ ೧ ವ್ಯಾಕರಣಭ್ಯಾಸಕ್ಕೆ, ನಿಷ್ಕ ೬, ಹೀಗೆ ಒಟ್ಟು ೩೦೦ ನಿಷ್ಕಗಳನ್ನು ನೀಡಿದಂತಹ ದಾಖಲೆ ದೊರೆಯುತ್ತದೆ. ಇದರಿಂದ ಅಂದು ಹೇಗೆ ಧಾರಾಳವಾಗಿ ದೇವತಾಪೂಜಾ ಚಟುವಟಿಕೆಗಳಿಗೆ ಹಣ ನೀಡುತ್ತಿದ್ದರು ಎಂದು ಈ ಶಾಸನ ತಿಳಿಸುತ್ತದೆ.

ಸಾಮಾನ್ಯವಾಗಿ ಆಗಿನ ಜನ ತಮ್ಮ ಸಂಪಾದನೆಯ ಬಹುಭಾಗವನ್ನು ದೇವರ ಹಾಗೂ ಸಾಮಾಜಿಕ ಕಾರ್ಯಗಳಿಗೆ ವಿನಿಯೋಗಿಸುತ್ತಿದ್ದರು. ಧಾರ್ಮಿಕ ಕಾರ್ಯಗಳನ್ನು ಕೈಗೊಳ್ಳುವುದು ಮೋಕ್ಷ ಸಾಧನೆಯ ಭಾಗವಾಗಿ ಅಂದಿನ ಅವರ ಆರ್ಥಿಕ ಪರಿಸ್ಥಿತಿಯನ್ನೂ ಕೂಡ ಸ್ಪಷ್ಟವಾಗಿ ಬಿಂಬಿಸುತ್ತದೆ. ದೇವರ ಹೆಸರಿನಲ್ಲಿ ಒಟ್ಟಾರೆಯಾಗಿ ಅಂದಿನ ಸಮಾಜದ ನಂಬಿಕೆಗಳನ್ನು ನೀತಿ ನಿಯಮಗಳನ್ನು ಸೂಚಿಸುತ್ತದೆ, ಹರಿಹರೇಶ್ವರ ದೇವಾಲಯ ಇಂದಿಗೂ ಕೂಡ ಪೂಜಾ ಆಚರಣೆಯನ್ನು ನಿರಂತರವಾಗಿ ನಡೆಸಿಕೊಂಡು ಬಂದಿದೆ. ಈ ಆಚರಣೆಗಳೆಲ್ಲವೂ ನಿರಂತರವಾಗಿ ನಡೆಯಬೇಕಾದರೆ ನಡೆಸಿಕೊಂಡು ಹೋಗಲು ಆರ್ಥಿಕವಾಗಿ ಸದೃಢತೆ ಬೇಕಾಗುತ್ತದೆ. ಮೇಲಿನ ಶಾಸನದಲ್ಲಿ ಉಲ್ಲೇಖಿತ ಹಲವಾರು ರೀತಿಯ ಹಣಗಳನ್ನು ಇಲ್ಲಿ ನಾವು ಗಮನಿಸುವುದಾದರೆ ಗದ್ಯಾಣ, ನಾಣ್ಯ, ನಿಷ್ಕ, ಪಣ, ಖರ್ಷ ಈ ಎಲ್ಲಾ ಹೆಸರುಗಳೂ ನಿರ್ದಿಷ್ಟ ತೂಕದ ನಾಣ್ಯಗಳಾಗಿವೆ. ಇವುಗಳು ಆ ಕಾಲದಲ್ಲಿ ಚಲಾವಣೆಯಲ್ಲಿದ್ದ ನಾಣ್ಯಗಳು ಇವಷ್ಟೆ ಅಲ್ಲದೆ ಹರಿಹರ ತಾಲೂಕಿನ ಇನ್ನೂ ಅನೇಕ ಶಾಸನಗಳು ಈ ರೀತಿಯ ನಾಣ್ಯಗಳನ್ನು ಉಲ್ಲೇಖಿಸುತ್ತವೆ.

ವಾಣಿಜ್ಯ ವರ್ತಕರು: ಜೀವನೋಪಾಯಕ್ಕೆ ವೃತ್ತಿಯನ್ನೇ ಅವಲಂಬಿಸಿ ವ್ಯಾಪಾರವನ್ನೇ ತೊಡಗಿಸಿಕೊಂಡವರನ್ನು ವರ್ತಕರೆಂದು ಕರೆಯುತ್ತೇವೆ. ಭಾರತದಲ್ಲಿ ವೈದಿಕ ಸಾಹಿತ್ಯಕ್ಕಿಂತ ಮುಂಚೆಯೇ ಇತಿಹಾಸದುದ್ದಕ್ಕೂ ವರ್ತಕರ ಉಲ್ಲೇಖವಿರುವುದು ಕಂಡು ಬರುತ್ತದೆ. ಆದರೆ ಕರ್ನಾಟಕ ಇತಿಹಾಸದಲ್ಲಿ ಇವರ ಬಗ್ಗೆ ಸುಮಾರು ಕ್ರಿ.ಶ ೭–೮ನೇ ಶತಮಾನದಿಂದೀಚೆಗೆ ಉಲ್ಲೇಖಗಳನ್ನು ಕಾಣಬಹುದು ಭಾರತೀಯ ವರ್ತಕರಂತೆ ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದಲ್ಲಿಯೂ ಸಹ ವರ್ತಕರಲ್ಲಿ ಅನೇಕ ಪ್ರಕಾರಗಳನ್ನು ಕಾಣಬಹುದು. ಆದರಲ್ಲಿ ಶೆಟ್ಟಿಬಣಜಿಗ, ಕುಂಬಾರ, ಬಡಿಗ, ಗಾಣಿಗ, ಆದರೆ ಹರಿಹರ ತಾಲೂಕಿನ ಶಾಸನಗಳಲ್ಲಿ ಮುಖ್ಯವಾಗಿ ಗಾಣಿಗ, ಬಡಿಗ, ಮತ್ತು ಸೆಟ್ಟಿಗಳ ವರ್ತಕರ ಕುರಿತ ಉಲ್ಲೇಖಗಳಿವೆ. ಪ್ರಾಚೀನ ಕರ್ನಾಟಕದ ವ್ಯಾಪಾರ ವಾಣಿಜ್ಯ ಚಟುವಟಿಕೆಗಳಲ್ಲಿ ಕೆಲವು ಪಟ್ಟಣಗಳು ಮುಖ್ಯವಾದ ಪಾತ್ರವನ್ನು ವಹಿಸಿವೆ. ಅದರಲ್ಲಿ ಹರಿಹರ[೨೫] ಕೂಡ ಪ್ರಮುಖವಾದ ಪಟ್ಟಣವಾಗಿತ್ತು. ಇಲ್ಲಿ ಗುರುತಿಸಲಾದ ವರ್ತಕರ ಕುರಿತು ವೃತ್ತಿ ಆಧಾರಿತ ಜಾತಿಗಳು ಎಂಬ ವಿಷಯದ ಕೆಳಗೆ ಅವರ ವೃತ್ತಿ ಹಾಗೂ ಜಾತಿಯ ಕುರಿತು ವಿವರಿಸಲಾಗಿದೆ.

ಉತ್ಪದನಾ ಕೈಗಾರಿಕೆಗಳು: ಕೈಗಾರಿಕೆ ಎಂಬುದು ಒಂದು ಕಸುಬು. ಇದರಿಂದ ಮಾನವ ಹೊರತಾಗಿರುವುದಿಲ್ಲ. ಕಸುಬು ಯಾವುದಾದರೂ ಆಗಿರಬಹುದು. ಗಾಣಿಗ ಎಣ್ಣೆ ತಯಾರಿಸುವುದು. ಕುಂಬಾರ ಮಡಿಕೆ ತಯಾರಿಸುವುದು. ಬಡಿಗ ಬಡಗಿತನ ಮಾಡುವುದು ಇವೆಲ್ಲವುಗಳನ್ನು ನಾಗರಿಕತೆ ಬೆಳೆದಂತೆಲ್ಲಾ ಮಾನವಜೀವಿ ಅನುಸರಿಸಿಕೊಂಡು ಬಂದಿದ್ದಾನೆ. ಸಮಾಜ ಮತ್ತು ವ್ಯಕ್ತಿಯ ಅರ್ಥ ವ್ಯವಸ್ಥೆಯಲ್ಲಿ ಭೂಮಿಗಿರುವಷ್ಟು ಪ್ರಾಧಾನ್ಯತೆ ಕೈಗಾರಿಕೆಗಳಿಗಿವೆ. ಇಂತಹ ಕೈಗಾರಿಕೆಗಳಿಗೆ ಭೂಮಿಯಲ್ಲಿ ದೊರೆಯುವ ಕಚ್ಚಾ ಸಾಮಾಗ್ರಿಗಳೇ ಸಂಪನ್ಮೂಲಗಳಾಗಿವೆ. ಇಂತಹ ಕೈಗಾರಿಕೆಗಳಿಂದ ಜೀವನ ಸಾಗಿಸುವ ವರ್ತಕರು ದಾನದ ರೂಪದಲ್ಲಿ ನೀಡಿರುವುದನ್ನು ಶಾಸನಗಳು ಉಲ್ಲೇಖಿಸುತ್ತವೆ.

ಸನಾತನ ಕಾಲದಿಂದಲೂ ಮನುಷ್ಯ ತನ್ನ ಬದುಕಿಗೆ ಅತ್ಯವಶ್ಯಕವಾದ. ವಸ್ತುಗಳನ್ನು ತಯಾರಿಸಿಕೊಳ್ಳುತ್ತಿದ್ದನು. ಅಂತವುಗಳಲ್ಲಿ ಎಣ್ಣೆ ಕೈಗಾರಿಕೆಯು ಒಂದಾಗಿದೆ. ಎಣ್ಣೆ ತಯಾರಿಸುವವರನ್ನು ಶಾಸನಗಳು ಗಾಣಿಗ ಅಥವಾ ತೆಲ್ಲಿಗರೆಂದು ಉಲ್ಲೇಖಿಸುತ್ತವೆ. ಇಂತಹ ಗಾಣಿಗರು ಎಣ್ಣೆಯನ್ನು ಗಾಣದ ಸಹಾಯದಿಂದ ತಯಾರಿಸುತ್ತಿದ್ದರು. ಗಾಣವನ್ನು ಕಟ್ಟಿಗೆ ಹಾಗೂ ಕಲ್ಲಿನಿಂದ ತಯಾರಿಸಲಾಗುತ್ತಿತ್ತು. ಎಣ್ಣೆಯು ದಿನನಿತ್ಯ ಅವಶ್ಯವಾಗಿ ಬೇಕಾಗಿದ್ದ ವಸ್ತುವಾಗಿದ್ದರಿಂದ ಅದರ ಅಗತ್ಯತೆ ತುಂಬಾ ಮಹತ್ವವನ್ನು ಪಡೆದುಕೊಂಡಿದೆ. ಅಡುಗೆಗಾಗಿ, ದೇವರ ನಂದಾದೀವಿಗೆಗಾಗಿ ಎಣ್ಣೆಯನ್ನು ಬಳಸಲಾಗುತ್ತಿತ್ತು. ಎಣ್ಣೆಯನ್ನು ತಯಾರಿಸುವ ಗಾಣವನ್ನೇ ದೇವರ ನಂದಾದಿವಿಗೆಂದು ದಾನ ನೀಡಿದ ಉಲ್ಲೇಖಗಳು ಹರಿಹರದ ಶಾಸನಗಳಲ್ಲಿ ಕಂಡು ಬರುತ್ತವೆ.

ಅನಾದಿ ಕಾಲದಿಂದಲೂ ಕಟ್ಟಿಗೆ ಮತ್ತು ಮಾನವನಿಗೆ ನಿಕಟವಾದ ಸಂಬಂಧವಿದೆ. ವ್ಯವಸಾಯಕ್ಕೆ ಬೇಕಾಗುವ ಕುಂಟೆ, ಕೂರಿಗೆ, ರಂಟೆ, ನೇಗಿಲು ಇತ್ಯಾದಿಗಳನ್ನು ತಯಾರಿಸುವ

ಕೆಲಸ ಬಡಗಿದಾಗಿತ್ತು ವ್ಯವಸಾಯ ಹಾಗೂ ಕೃಷಿ ಜೆಳೆಗಳ ಕುರಿತು ಶಾಸನಗಳು ಉಲ್ಲೇಖಿಸುತ್ತವೆ. ಅದಕ್ಕೆ ಸಂಬಂಧಿಸಿದಂತೆ ಬಡಗಿಗಳು ಕೃಷಿ ಉಪಕರಣಗಳನ್ನು ತಯಾರಿಸಿಕೊಡುತ್ತಿದ್ದರು ಎಂಬುದು ಸಾಮಾನ್ಯವಾಗಿ ತಿಳಿದ ವಿಚಾರವಾಗಿದೆ. ಆದರೆ ಬಡಗಿಗಳನ್ನು ಕುರಿತು ಈ ಪರಿಸರದ ಯಾವ ಶಾಸನವು ಉಲ್ಲೇಖಿಸುವುದಿಲ್ಲ. ಗಡಿಗೆ ಅಥವಾ ಮಡಿಕೆ ಎಂಬ ಹೆಸರಿನ ವೃತ್ತಿ ಕಂಬಾರದ್ದಾಗಿದೇ ಮಾನವ ತನ್ನ ಆಹಾರ ತಯಾರಿಸುವುದರಿಂದ ಹಿಡಿದು ಎಲ್ಲ ಕೆಲಸ ಕಾರ್ಯಗಳಿಗಾಗಿ ಮಡಕೆಗಳನ್ನು ಬಳಸಿಕೊಂಡಿದ್ದು ಇತಿಹಾಸದಿಂದ ತಿಳಿದುಬರುತ್ತದೆ. ಇದು ನೈಸರ್ಗಿಕ ಸಂಪತ್ತಿನ ಭೂಮಿಯ ಮಣ್ಣಿನಿಂದಲೇ ತಯಾರಿಸುತ್ತಿದ್ದರು. ಅದರಲ್ಲಿ ಒಂದು ಗಡಿಗೆಯ ಬಗ್ಗೆ ದೇವರಬೆಳಕೆರೆಯ ಶಾಸನ ಉಲ್ಲೇಖಿಸುತ್ತದೆ. ಅದರ ಕುರಿತು ವೃತ್ತಿ ಆಧಾರಿತ ಜಾತಿಗಳು ಎಂಬ ವಿಷಯದ ಕೆಳಗಡೆ ಬರುವ ಕುಂಬಾರರು ಎಂಬ ಜಾತಿಯಲ್ಲಿ ವಿವರಿಸಲಾಗಿದೆ.

ತೆರಿಗೆ/ಸುಂಕ: ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ಸಂದರ್ಭದಲ್ಲಿ ತೆರಿಗೆಯ ಬಗೆಗೆ ಅನೇಕ ಶಾಸನಗಳಲ್ಲಿ ಉಲ್ಲೇಖಗಳಿವೆ. ಭೂಮಿ ಹಾಗೂ ಇನ್ನಿತರ ವ್ಯಾಪಾರ, ವಸ್ತುಗಳ ಮೇಲೆ ಯಾವ ರೀತಿ ತೆರಿಗೆ ವಿಧಿಸಲಾಗುತ್ತಿತ್ತು ಎನ್ನುವುದನ್ನು ಶಾಸನಗಳ ಆಧಾರದಿಂದ ತಿಳಿದುಕೊಳ್ಳ ಬಹುದಾಗಿದೆ. ಒಂದು ನಾಡಿನ ಭದ್ರ ಅರ್ಥ ವ್ಯವಸ್ಥೆಗೆ ಭೂಮಿಯೇ ಮೂಲವಾದುದರಿಂದ ರಾಜ್ಯಾದಾಯದಲ್ಲಿ ಭೂಕಂದಾಯದ ಮೊತ್ತ ದೊಡ್ಡದಾಗಿರುತ್ತಿತ್ತು. ಆದುದರಿಂದ 'ಭೂಕಂದಾಯ ಪದ್ಧತಿ ಪರಂಪರಾನುಗತವಾಗಿ ನಡೆದು ಬಂದರೂ ಸಾಗುವಳಿ ಭೂಮಿಯ ಫಲವತ್ತತೆ ಮತ್ತು ಅಳತೆಯ ಪ್ರಮಾಣಕ್ಕನುಸರಿಸಿ ನಿರ್ಧರಿತವಾಗುತ್ತಿತ್ತು.[೨೩] ಇಂತಹ ಭೂಕಂದಾಯ ಅಥವಾ ತೆರಿಗೆ ಪದ್ಧತಿ ತಾಲೂಕಿನ ಅನೇಕ ಶಾಸನಗಳಲ್ಲಿ ಉಲ್ಲೇಖಗಳಿವೆ. ತೆರಿಗೆ ಎಂದರೆ ಕೇವಲ ಸುಂಕ ವಿಧಿಸುವ ಪದ್ಧತಿ ಎಂದಲ್ಲ ಸಂಧರ್ಭನುಸಾರ ವಿನಾಯ್ತಿ, ಮನ್ನ ಮುಕ್ತಗೊಳಿಸುವುದು ಒಂದು ಪದ್ಧತಿಯಾಗಿರುವುದು ಶಾಸನಗಳಿಂದ ತಿಳಿದುಬರುತ್ತದೆ. ಅದಕ್ಕೆ ಪೂರಕವಾಗಿ ಗಂಗನರಸಿಯ[೨೪] ಶಾಸನವೊಂದು ಗಂಗನರಸಿ ಗ್ರಾಮವನ್ನು ತೆರಿಗೆಗಳಿಂದ ಮುಕ್ತಗೊಳಿಸಿ ಜೀರ್ಣೋದ್ಧಾರ ಮಾಡಿ ಅರ್ಪಿಸಿದ ದಾನ ಶಾಸನ ವಿಜಯನಗರದ ಅರಸ ಶ್ರೀವೀರಪ್ರತಾಪ ಸದಾಶಿವಮಹಾರಾಯರ ಕಾಲದ್ದಾಗಿದೆ.

ರಾಜನ ಆದಾಯದ ಬಹುಭಾಗವು ತೆರಿಗೆಗಳಿಂದ ಬರುತ್ತಿದ್ದಿತು. ರಾಜನು ದೇಶವನ್ನು ರಕ್ಷಿಸುವುದಕ್ಕೆ ಪ್ರಜೆಗಳು ಹಿಂದಿರುಗಿ ಕೊಡುವ ಪ್ರತಿಫಲವೇ ತೆರಿಗೆಗಳೆಂದು (ಸುಂಕ) ಗೌತಮ ಸಂಹಿತೆ, ನಾರದ ಸಂಹಿತೆ, ಮುಂತಾದ ಸಬತಿಗಳು ಭಾವಿಸುತ್ತವೆ.[೨೫] ಇಂತಹ ತೆರಿಗೆಯು ಆಯಾ ವೃತ್ತಿಗಳ ಮೇಲೆ ವಿಧಿಸಿದ್ದನ್ನ. ಕಾಣಬಹುದು. ಕ್ರಿಶ. ೧೨೭೫ರ ಬಾನುವಳ್ಳಿ[೨೬] ಶಾಸನದಲ್ಲಿ ಬಾನುವಳ್ಳಿಯ ಬ್ರಾಹ್ಮಣರಿಗೆ ಹೇಳೆಹಾಳು, ಎಲೆವಟ್ಟಿ, ಜಿಗುಳಿಗಳ ಸುಂಕವನ್ನು ಕೊಟ್ಟು ವಿವರವನ್ನು ತಿಳಿಸುತ್ತದೆ. ಕ್ರಿಶ. ೧೫೧೬ರ ಮಲೆಬೆನ್ನೂರಿನ[೨೭] ಶಾಸನವು ವೀರಭದ್ರ ಮಹಾರಾಯರು ಅವರ ತಂದೆ ಶ್ರೀಪ್ರತಾಪರುದ್ರ ಮಹಾರಾಯರಿಗೆ, ಶ್ರೀಕೃಷ್ಣದೇವರಾಯರಿಗೆ ಹಾಗೂ ತನಗೆ ಒಳ್ಳೆಯದಾಗಲಿ ಎಂದು ಮಲೆಬೆನ್ನೂರು ಸೀಮೆಯಲ್ಲಿನ ಲಿಂಗದಹಳ್ಳಿ ಸೀಮೆಯವರೆಗೆ ಅವರ ಅರಮನೆಗೆ

ಸಲ್ಲಬೇಕಾಗಿದ್ದ ಮದುವೆಯ ಸುಂಕವನ್ನು ಬಿಟ್ಟುಕೊಟ್ಟ ಬಗ್ಗೆ ತಿಳಿಸುತ್ತದೆ. ಹಾಗೆಯೇ ಕ್ರಿ.ಶ. ೧೫೨೮ರ[೨೮] ಅದೇ ಗ್ರಾಮದ ಶಾಸನವು ಹರಿಹರದದೇವರ ಸ್ಥಾನಿಕರಾಗಿದ್ದ ಶ್ರೀಚೆನ್ನಪ್ಪಯ್ಯಗಳ ಮಗ ಹರಿಯಣ್ಣನು ಹೇಳಿದ್ದರಿಂದ ಅವರು ಪುತ್ರ ಪರಂಪರೆಯಾಗಿ ಆಚಂದ್ರಾರ್ಕವಾಗಿ ಸುಖವಾಗಿರಲೆಂದು ಕಬ್ಬಿನ ಸುಂಕವನ್ನು ಬಿಟ್ಟದ್ದಾಗಿ ತಿಳಿಸುತ್ತದೆ. ಈ ಸುಂಕವನ್ನು ವಸೂಲಿ ಮಾಡುವುದಕ್ಕೆ ಅಧಿಕಾರಿಗಳಿರುತ್ತಿದ್ದರು. ಅವರನ್ನು ಸುಂಕದ ಎಂಬುವ ಹೆಸರಿನಿಂದ ಅವರನ್ನು ಗುರುತಿಸಲಾಗುತ್ತದೆ. ಹರಿಹರದ ಒಂದು ಶಾಸನದಲ್ಲಿ ಸುಂಕದ ಹರಿಪಯ್ಯ ಎಂದೇ ಉಲ್ಲೇಖವಿದೆ.[೨೯] ಇಂತಹ ಸುಂಕದಾರರು ರೈತರಿಂದ ತೆರಿಗೆಗಳನ್ನು ವಸೂಲಿ ಮಾಡಲು ಸುಗ್ಗಿಕಾಲದಲ್ಲಿ ಬರುತ್ತಿದ್ದರು. ಏಕೆಂದರೆ ರೈತರು ಬೆಳೆದು ಮಾರಾಟ ಮಾಡುವುದರಿಂದಲೇ ತೆರಿಗೆ ವಿಧಿಸುತ್ತಿದ್ದರು.

ಹರಿಹರ ತಾಲೂಕಿನಲ್ಲಿ ದೊರೆತಿರುವ ಬಹುಪಾಲು ಶಾಸನಗಳು ಧಾರ್ಮಿಕ ಶಾಸನಗಳಾಗಿದ್ದರೂ ಅವುಗಳಲ್ಲಿ ಆರ್ಥಿಕ ಅಂಶಗಳೂ ಅಡಕವಾಗಿವೆ. ಆರ್ಥಿಕ ವ್ಯವಸ್ಥೆಯಲ್ಲಿ ಉತ್ಪಾದನೆ ವಿತರಣೆ ಮುಖ್ಯ ಭಾಗಗಳು, ಅವುಗಳ ಮೇಲೆ ಆಕರಿಸುತ್ತಿದ್ದ ತೆರಿಗೆ ರಾಜ್ಯ ವೈಭವದ ಖರ್ಚನ್ನು ನಿಭಾಯಿಸುತ್ತಿತ್ತು. ಸಾರ್ವಜನಿಕ ಕಾರ್ಯಗಳಿಗೆ ಸರ್ಕಾರಕ್ಕಿಂತ ಅಲ್ಲಿಯ ಪ್ರಮುಖರೇ ಹೆಚ್ಚಿನ ಹಣವನ್ನು ವಿನಿಯೋಗಿಸುತ್ತಿದ್ದರು ಇದಕ್ಕೆ ಧಾರ್ಮಿಕ ಹಿನ್ನಲೆಯೂ ಮುಖ್ಯಕಾರಣವಾಗಿತ್ತು.

೩.೫ ಧಾರ್ಮಿಕ ವ್ಯವಸ್ಥೆ

ಧರ್ಮ ಮಾನವನ ಸಾಂಸ್ಕೃತಿಕ ಬದುಕಿನ ಜೀವನಾಡಿ ಆದರಲ್ಲೂ ಭಾರತೀಯರ ಸಾಂಸ್ಕೃತಿಕ ಬದುಕಿಗೆ ಧರ್ಮವೇ ಮಾರ್ಗದರ್ಶಿ, ಧಾರ್ಮಿಕ ವಿಚಾರಗಳ ತಳಹದಿಯ ಮೇಲೆ ನಮ್ಮ ಪೂರ್ವಜರು ಜೀವನ ಸಾಗಿಸುತ್ತಾ ಬಂದಿದ್ದಾರೆ. ಭಾರತದಲ್ಲಿ ಕ್ರಿ.ಪೂ.ದಿಂದಲೇ ಆಸ್ತಿತ್ವದಲ್ಲಿದ್ದ ಸನಾತನ ಧರ್ಮವು, ನಂತರದಲ್ಲಿ ತನ್ನ ಸ್ವರೂಪದಲ್ಲಿ ಹಲವಾರು ಬದಲಾವಣೆಗಳನ್ನು ಹೊಂದಿ, ಹಲವು ಆಚಾರ–ವಿಚಾರಗಳು ಪರಿವರ್ತನೆಗೊಂಡು ಅನೇಕ ಧರ್ಮಗಳಾಗಿ ಪರಿಣಮಿಸಿದವು. ಹೀಗೆ ವಿಭಿನ್ನ ಆಚರಣೆಗಳಿಗನುಣವಾಗಿ ಹತ್ತು ಹಲವು ಧರ್ಮಗಳು ಕಾಲ ಕಾಲಕ್ಕೆ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ಥಾನಪಲ್ಲಟಗೊಳ್ಳುತ್ತಾ ಬಂದಿವೆ. ಆಯಾ ಕಾಲದ ರಾಜಕೀಯ ಸ್ಥಿತಿಗತಿಯು ಧರ್ಮದ ಸ್ಥಿತಿಗತಿಯನ್ನು ನಿರ್ಧರಿಸಿದೆ. ಆನೇಕ ಧರ್ಮಗಳ ತಾಣವಾಗಿದ್ದ ಈ ನೆಲದ ಧಾರ್ಮಿಕ ವ್ಯವಸ್ಥೆಯು ಹೇಗೆ ಬದಲಾಗುತ್ತಾ ಬಂದಿದೆ ಎನ್ನುವುದನ್ನು ಇಲ್ಲಿ ಚರ್ಚಿಸಲಾಗುತ್ತದೆ. ಧರ್ಮಸಹಿಷ್ಣುತೆಯನ್ನನುಸರಿಸಿದ ಕರ್ನಾಟಕದ ಅರಸು ಮನೆತಗಳು ಧರ್ಮಗಳ ಅನುಯಾಯಿಗಳಿಗೆ ಧಾರ್ಮಿಕ ಸ್ವಾತಂತ್ರ್ಯವನ್ನು ನೀಡಿದ್ದವು. ಧರ್ಮ ಸಮನ್ವಯತೆ ಆ ಕಾಲದ ರಾಜ್ಯಾಡಳಿತದ ಮುಖ್ಯ ಲಕ್ಷಣವಾಗಿತ್ತು. ಸ್ವಧರ್ಮ ಧ್ಯೇಯವಾಗಿತ್ತು ಬೌದ್ಧಧರ್ಮ, ಜೈನಧರ್ಮ, ವೈಷ್ಣವಧರ್ಮ, ಶೈವಧರ್ಮ, ವೀರಶೈವಧರ್ಮ, ಕ್ರಿಶ್ಚಿಯನ್ ಧರ್ಮ ಹಾಗೂ ಇಸ್ಲಾಂ ಧರ್ಮಗಳ ಕುರಿತು ಚರ್ಚಿಸಲಾಗುವುದು.

ಬೌದ್ಧಧರ್ಮ: ಅತ್ಯಂತ ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ಧರ್ಮವಾದ ಬೌದ್ಧಧರ್ಮವು ಮೌರ್ಯ ಸಾಮ್ರಾಟನಾದ ಅಶೋಕನ ಕಾಲಕ್ಕೆ ಕರ್ನಾಟಕದಲ್ಲಿ ಒಂದು ಪ್ರಬಲವಾದ ಧರ್ಮವಾಗಿತ್ತು. ಕ್ರಿ.ಶ.ಪೂ ೩ನೇ ಶತಮಾನದಲ್ಲಿ ಮೌರ್ಯದೊರೆ ಅಶೋಕನು ಭಿಕ್ಷು

ಮಹಾದೇವನನ್ನು ಮಹಿಷ ಮಂಡಲಕ್ಕೂ, ರಕ್ಷಿತನನ್ನು ಬನವಾಸಿಗೂ ಕಳಿಸಿದನೆಂಬ ಉಲ್ಲೇಖವೇ ಕರ್ನಾಟಕಕ್ಕೆ ಬೌದ್ಧಧರ್ಮ ಪ್ರವೇಶದ ಪ್ರಥಮ ದಾಖಲೆ. ಕ್ರಿ.ಶ. ೬೪೦ರಲ್ಲಿ ದಕ್ಷಿಣ ಭಾರತದಲ್ಲಿ ಪ್ರವಾಸ ಮಾಡಿದ ಚೀನಿ ಪ್ರವಾಸಿ ಹುಯ್ಯನತ್ಸಾಂಗನು ಬೌದ್ಧಧರ್ಮದ ಮಹಾಯಾನ ಪಂಥವು ಕರ್ನಾಟಕ ಭಾಗದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದಿತೆಂದು ಬರೆದಿದ್ದಾನೆ.[೩೦೦] ಬೌದ್ಧಧರ್ಮದ ಅವಶೇಷಗಳು ಕರ್ನಾಟಕದಲ್ಲಿ ಕ್ರಿ.ಪೂ. ೩ನೇ ಶತಮಾನದಿಂದ ೧೬ನೇ ಶತಮಾನದವರೆಗೆ ದೊರೆಯುತ್ತವೆ. ಅದರಲ್ಲಿಯೂ ಈ ಧರ್ಮದ ಹೆಚ್ಚು ಪ್ರಭಾವ ಕಂಡು ಬರುವುದು ಶಾತವಾಹನರ ಕಾಲದಲ್ಲಿ.

ಬೌದ್ಧಧರ್ಮದಲ್ಲಿ ಮೂರು ಶಾಖೆಗಳು ಕಂಡುಬರುತ್ತವೆ. ಅವು ಹೀನಾಯಾನ, ಮಹಾಯಾನ ಮತ್ತು ವಜ್ರಯಾನ ಇವು ಮೂರು ತಮ್ಮ ಪ್ರಾಬಲ್ಯದ ಕಾಲದಲ್ಲಿ ಕರ್ನಾಟಕದಲ್ಲಿ ತಕ್ಕ ಮಟ್ಟಿಗೆ ಪ್ರಚಾರದಲ್ಲಿದ್ದವು ಕ್ರಿಸ್ತ ಪೂರ್ವದ ಅಶೋಕನ ಕಾಲದಲ್ಲಿ ಕರ್ನಾಟಕದಲ್ಲಿ ಪ್ರಚಲಿತವಾಗಿದ್ದ ಧರ್ಮವೆಂದರೆ ಬಹುಶಃ ಬೌದ್ಧಧರ್ಮದ ಹೀನಯಾನ ಕ್ರಿ.ಶ. ಆರಂಭದಲ್ಲಿ ಮಹಾಯಾನವು ಪ್ರಚಾರಕ್ಕೆ ಬಂದಿತು. ಬಹುಶಃ ೭ನೇ ಶತಮಾನದಲ್ಲಿ ನಾಗರ್ಜುನನೆಂಬ ಬೌದ್ಧತಾಂತ್ರಿಕನ ಮೂಲಕ ತಾಂತ್ರಿಕ ಬೌದ್ಧಧರ್ಮವು ದಕ್ಷಿಣ ಭಾರತದಲ್ಲಿ ಪ್ರಸಾರವಾಯಿತು. ಈ ವಜ್ರಯಾನದ ಕುರುಹುಗಳು ಮತ್ತು ತಾಂತ್ರಿಕ ಆಚರಣೆಗಳು ನಮಗೆ ಶಾಸನಗಳಲ್ಲಿ ಸ್ಪಷ್ಟವಾಗಿ ದೊರೆಯದಿದ್ದರೂ, ಬೌದ್ಧದೇವತೆಯಾದ 'ತಾರಾಭಗವತಿ'ಗೆ ಇದ್ದ ಸ್ಥಾನದಿಂದ ಅದನ್ನು ಊಹಿಸಬಹುದಾಗಿದೆ.[೩೦೧] ಆದರೆ ಬುದ್ಧನ ನಂತರದಲ್ಲಿ ಬಂದ ಬೌದ್ಧ ಪಂಡಿತರು ಬುದ್ಧನ ಉಪದೇಶಗಳನ್ನು ವಿಸ್ತರಿಸಿ ಹೀನಯಾನ ಮತ್ತು ಮಹಾಯಾನ ಎಂಬ ಎರಡು ಶಾಖೆಗಳನ್ನಾಗಿ ವಿಂಗಡಿಸಿದರು.

ಅಂದು ಅಶೋಕ ಚಕ್ರವರ್ತಿಯ ಆಶ್ರಯದೊರೆತ ನಂತರ ಬೌದ್ಧಧರ್ಮ ಭಾರತದಲ್ಲಿ ಪ್ರಸಿದ್ಧಿಯನ್ನು ಪಡೆದಿದ್ದಲ್ಲದೆ ಅದು ಅನುಸರಿಸಿದ ಶಾಂತಿ, ಅಹಿಂಸೆ, ಮಾನವ ಪ್ರೀತಿಗಳಿಂದಾಗಿ ಜನ ಸಾಮಾನ್ಯರ ಧರ್ಮವೆಂಬಂತಾಯಿತು ಹರಿಹರ ತಾಲೂಕಿನಲ್ಲಿ ಬೌದ್ಧಧರ್ಮಕ್ಕೆ ಸಂಬಂಧಿಸಿದಂತಹ ಯಾವ ಕುರುಹುಗಳು ದೊರೆತಿಲ್ಲ.

ಜೈನಧರ್ಮ: ಜೈನಧರ್ಮವು ಕ್ರಿ.ಪೂ. ೩ನೇ ಶತಮಾನದ ಸುಮಾರಿಗೆ ಪ್ರಾಚೀನ ಕರ್ನಾಟಕದಲ್ಲಿ ಒಂದು ಪ್ರಬಲವಾದ ಧರ್ಮವಾಗಿತ್ತು ಕರ್ನಾಟಕವು ಪ್ರಾಚೀನ ಕಾಲದಿಂದ ಜೈನಧರ್ಮದ ವಾಸಸ್ಥಾನವಾಗಿದ್ದು, ಕರ್ನಾಟಕದ ಪ್ರಸಿದ್ಧ ಅರಸು ಮನೆತನಗಳಾದ ಕದಂಬರು, ಗಂಗರು, ಬಾದಾಮಿ ಚಾಲುಕ್ಯರು ಹಾಗೂ ರಾಷ್ಟ್ರಕೂಟರ ಆಡಳಿತ ಅವಧಿಯಲ್ಲಿ ಜೈನಧರ್ಮವು ಮೇಲ್ಮೈಯನ್ನು ಸಾಧಿಸಿ ಇಲ್ಲಿ ಭದ್ರಬುನಾದಿಯನ್ನು ಹಾಕಿತು. ನಂತರ ಬಂದ ಕಲ್ಯಾಣ ಚಾಲುಕ್ಯ ಅರಸರು ಹಾಗೂ ದ್ವಾರಸಮುದ್ರದ ಹೊಯ್ಸಳರೂ ಜೈನಧರ್ಮಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಿದರು. ೧೪ನೇ ಶತಮಾನದ ಅವಧಿಯಲ್ಲಿ ಆಡಳಿತ ನಡೆಸಿದ ವಿಜಯನಗರದ ಅರಸರು ಪರಮತ ಸಹಿಷ್ಣುತೆಯನ್ನು ತೋರಿ ಜೈನಧರ್ಮಕ್ಕೆ ಆಶ್ರಯ ನೀಡಿದರು.

ಕ್ರಿ.ಪೂ. ೩ನೇ ಶತಮಾನದಲ್ಲಿಯೇ ಜೈನಧರ್ಮ ದಕ್ಷಿಣ ಭಾರತದಲ್ಲಿ ಪ್ರವೇಶ ಮಾಡಿದರೂ ಕರ್ನಾಟಕದಲ್ಲಿ ವರ್ಧಮಾನ ಮಹಾವೀರನ ಕ್ರಿ.ಪೂ. ೫೪೦ರ ಅವಧಿಯ ಸುಮಾರಿಗೆ ಈ

ಧರ್ಮ ಶ್ರೀಮಂತವಾಗಿ ಬೆಳೆಯಿತು. ಈ ವರ್ಧಮಾನ ಮಹಾವೀರನೆ ಜೈನ ಮತದ ಸ್ಥಾಪಕನೆನಿಸಿಕೊಂಡಿದ್ದಾನೆ. ಕ್ರಿ.ಪೂ. ೬ನೇ ಶತಮಾನದಲ್ಲಿ ಆಗಿಹೋದ ಮಹಾವೀರ ತೀರ್ಥಂಕರರು ಐತಿಹಾಸಿಕವಾಗಿ ಜೈನಧರ್ಮದ ಮೂಲ ಪುರುಷರು. ಆದರೆ ಜೈನಧರ್ಮ ಗ್ರಂಥಗಳ ಹಾಗೂ ನಂಬಿಕೆಗಳ ಪ್ರಕಾರ ಮಹಾವೀರನು ೨೪ನೇ ಹಾಗೂ ಕೊನೆಯ ತೀರ್ಥಂಕರರು. ಆದಕ್ಕೂ ಮೊದಲು ಆಗಿಹೋದ ೨೩ ತೀರ್ಥಂಕರರು ಜೈನಧರ್ಮವನ್ನು ಪ್ರತಿಪಾದಿಸಿದರೆಂದೂ ೨೨ನೇ ತೀರ್ಥಂಕರರಾದ ನೇಮಿನಾಥರು ಭಾಗವತದ ಶ್ರೀಕೃಷ್ಣನ ಸಮಕಾಲೀನರೆಂದು ಹೇಳಲಾಗುತ್ತದೆ. ರಾಜಪುತ್ರರಾಗಿ ಜನಿಸಿದ ಮಹಾವೀರರು ಆ ವೈಭವಗಳನ್ನೆಲ್ಲಾ ತ್ಯಜಿಸಿ ತೀರ್ಥಂಕರರಾದದ್ದು ಒಂದು ಅದ್ಭುತ ತ್ಯಾಗದ ಕಥೆ[೨೦೨] ತೀರ್ಥಂಕರ ಎಂದರೆ ಭವಸಾಗರವನ್ನು ದಾಟಿಸಬಲ್ಲ ಧರ್ಮಗುರು.

ಕಠೋರವಾದ ತಪಶ್ಚರ್ಯದ ಮೂಲಕ ದೇಹದಂಡನೆ ಮಾಡುತ್ತಾ ತಮ್ಮ ಕರ್ಮದ ಕುರಿತು ಯೋಚಿಸಿ ಪಶ್ಚಾತ್ತಾಪ ಪಡುತ್ತಾ ಸಲ್ಲೇಖನ ವ್ರತದ ಮೂಲಕ ಜೀವನವನ್ನು ಕೊನೆಗೊಳಿಸುವುದು. ಇವು ಮೋಕ್ಷಸಾಧನೆಯ ಮಾರ್ಗಗಳೆಂದು ಜೈನಧರ್ಮ ಬೋಧಿಸುತ್ತದೆ. ಈ ಕಠೋರವಾದ ವ್ರತವನ್ನು ಮುನಿಗಳಲ್ಲದೆ ಸಂಸಾರಿಗಳಾದ ಪುರಷರೂ ಸೇರಿದಂತೆ ಸ್ತ್ರೀಯರಿಗೂ ಕೈಗೊಳ್ಳುವ ಹಕ್ಕು ಇರುತ್ತಿತ್ತು. ಇಂತಹ ಕಠಿಣ ವ್ರತಗಳನ್ನು ಬೋಧಿಸಿದ ಮಹಾವೀರನು ಸನ್ಯಾಸನಕ್ಕೆ ಮಾನ್ಯತೆಯನ್ನಿತ್ತನು. ಇದು ಪೂರ್ವಜನ್ಮಗಳಲ್ಲಿ ಸಂಚಿತವಾದ ಕರ್ಮವನ್ನೆಲ್ಲಾ ನಾಶಪಡಿಸಿ ಮೋಕ್ಷ ಪ್ರದವಾಗುವುದೆಂದು ಬೋಧಿಸಿದನು.

ಕ್ರಿ.ಶ. ೧೧೪೪ರ ಗುತ್ತೂರಿನ ಶಾಸನವೊಂದರಲ್ಲಿ ಶ್ಲೋಕವು ಜೀನನನ್ನು ನೆನೆದಿದೆ 'ಶ್ರೀಮತ್ಸರಮ ಗಂಭೀರ ಸ್ವಾದ್ಯಾಯ ದಾಮೋಘ ಲಾಂಛನಂ ಜೀಯಾತ್ರೈಲೋಕ್ಯನಾಥಸ್ಯ ಜಿನಶಾಸನಂ'[೨೦೩] ಎಂದು ಹೇಳಿದೆ ಉಳಿದ ಭಾಗ ಶಂಕರನಾರಾಯಣದೇವರ ಕುರಿತು ಉಲ್ಲೇಖಿಸುತ್ತದೆ. ಕಾಲಮಾನವಿಲ್ಲದ ನಂದಿಗುಡಿಯ ಶಾಸನವು[೨೦೪] ಅವರಗೊಳ್ಳದ ಪಾರ್ಶ್ವನಾಥ ಬಸದಿಗೆ ಬೇತೂರ ಕೆರೆಯ ಹಿಂಭಾಗದ ಗದ್ದೆಯನ್ನು ದಾನ ನೀಡಿದ ಉಲ್ಲೇಖವಿದೆ. ಇವಷ್ಟೆ ಹರಿಹರ ತಾಲೂಕಿನಲ್ಲಿ ಜೈನ ಧರ್ಮಕ್ಕೆ ಸಂಬಂಧಿಸಿದ ಕುರುಹುಗಳಾಗಿವೆ.

ವೈಷ್ಣವ ಧರ್ಮ: ಕರ್ನಾಟಕದ ದಕ್ಷಿಣ ಭಾಗದಲ್ಲಿ ರಾಮಾನುಜರ ಆಗಮನದಿಂದ ಹಾಗೂ ಅವರ ಬೆಂಬಲದಿಂದ ಶ್ರೀವೈಷ್ಣವ ಧರ್ಮ ಕ್ರಮೇಣ ವೃದ್ಧಿಸುತ್ತಾ ಬಂದಿತ್ತು. 'ಜೈನ ಹಾಗೂ ಶೈವರ ಒತ್ತಡದಿಂದ ಒಂದೊಮ್ಮೆ ಹಿಂದಕ್ಕೆ ನೂಕಲ್ಪಟ್ಟರೂ ೧೨-೧೩ನೇಯ ಶತಮಾನದ ಸುಮಾರಿಗೆ ಅದು ತನ್ನ ಸ್ಥಾನವನ್ನು ಮರಳಿ ಗಳಿಸಿಕೊಂಡು, ಅತ್ಯಂತ ಜನಪ್ರಿಯ ಧರ್ಮಗಳೆರಡರಲ್ಲೊಂದಾಗಿತ್ತು. ೧೨ನೇಯ ಶತಮಾನದಲ್ಲಿ ರಾಮಾನುಜರು ಕರ್ನಾಟಕಕ್ಕೆ ಬಂದಾಗ ಮತ್ತು ೧೩ನೇಯ ಶತಮಾನದಲ್ಲಿ ಮಧ್ವಾಚಾರ್ಯರು ತಮ್ಮ ಮತ ಪ್ರಚಾರ ಕೈಗೊಂಡ ನಂತರ ವೈಷ್ಣವ ಮತದ ಶಾಖೆಗಳು ಸಾಕಷ್ಟು ಪ್ರಭಾವ ಬೀರಿ ನಾಡಿನ ಸಮಾಜ, ಸಂಸ್ಕೃತಿ, ಸಾಹಿತ್ಯ ಹಾಗೂ ಕಲೆಯ ಮೇಲೆ ಕ್ರಮೇಣ ತಮ್ಮ ಮುದ್ರೆಯನ್ನೊತ್ತಿದ್ದವು.[೨೦೫] ತಮಿಳುನಾಡಿನಿಂದ ರಾಮಾನುಚಾರ್ಯರು

೧೨ನೇಯ ಶತಮಾನದಲ್ಲಿ ಕರ್ನಾಟಕಕ್ಕೆ ಬಂದ ಮೇಲೆ ವೈಷ್ಣವ ಧರ್ಮದ ಬ್ರಾಹ್ಮಣರು ಅಗ್ರಹಾರದ ಮಹಾಜನರೆನಿಸಿ ಅಲ್ಲಿನ ಆಡಳಿತ ನೋಡಿಕೊಳ್ಳುವುದರೊಂದಿಗೆ ಯಜನ, ಯಾಜನ, ದಾನ, ಅಧ್ಯಯನ ಅಧ್ಯಾಪನ, ಪರಿಗ್ರಹ ಮೊದಲಾದ ಷಟ್ಕರ್ಮಗಳಲ್ಲಿ ನಿರತರಾಗಿರುತ್ತಿದ್ದರು, ಇಂತಹ ಮಹಾಜನರ ಕುರಿತು ಹರಿಹರ ತಾಲೂಕಿನ ಶಾಸನಗಳಲ್ಲಿ ಉಲ್ಲೇಖಗಳಿವೆ.

ಮಹಾಜನರು ಅಗ್ರಹಾರಗಳಲ್ಲಿ ನೆಲೆಸುತ್ತಿದ್ದು ವ್ಯಾಕರಣ, ಸ್ಮೃತಿ, ಕಾವ್ಯ, ವಾತ್ಸಾಯನ, ವೇದಾಧ್ಯಯನ, ಮಂತಾದ ವಿಷಯಗಳಲ್ಲಿ ಪರಿಣಿತರಾದ ಇವರು ಇತರರಿಗೂ ವಿದ್ಯೆಯನ್ನು ನೀಡುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ಕ್ರಿಶ. ೧೨೭೫ರ ಬಾನುವಳ್ಳಿಯ ಶಾಸನದಲ್ಲಿ ಭಾನುವಳ್ಳಿಯ ನೂರನಾಲ್ಕು ಬ್ರಾಹ್ಮಣರಿಗೆ ಹಣ ಹಾಗೂ ಹಲವು ಗ್ರಾಮಗಳ ಸುಂಕ ಬಿಟ್ಟ ಬಗ್ಗೆ ತಿಳಿಸುತ್ತದೆ.[೨೦೬] ಈ ರೀತಿಯಲ್ಲಿ ೧೦೪ ಬ್ರಾಹ್ಮಣರನ್ನು ಹರಿಹರದ[೨೦೭] ಬಹಳ ಶಾಸನಗಳು ಉಲ್ಲೇಖಿಸುತ್ತವೆ. ಕ್ರಿಶ. ೧೨೮೦ರ ಹರಿಹರದ[೨೦೮] ಶಾಸನವೊಂದು. ಸೋಮನಾಥ ಭಟ್ಟೋಪಾಧ್ಯಾಯ ಮಕ್ಕಳಾದ ರಾಜಗುರು ಶ್ರೀಧರದೇವರು ಮತ್ತು ಅವರ ತಮ್ಮ ಹರಿಹರದೇವರು ಪ್ರತಿ ದ್ವಾದಶಿಯಂದು ಶ್ರೀಹರಿಹರದೇವರಿಗೆ ಶಾಶ್ವತವಾಗಿ ಪಂಚಭಕ್ಷ್ಯದ ಸೇವೆ ನಡೆಯಲೆಂದು ವಿಷ್ಣುಭಟ್ಟರ ಮೂಲಕ ಮಹಾಜನಗಳ ಕೈಗೆ ಹತ್ತು ಗದ್ಯಾಣವನ್ನು ನೀಡಿದ್ದನ್ನು ಉಲ್ಲೇಖಿಸುತ್ತದೆ. ಇದೇ ಗ್ರಾಮದ ಇನ್ನೊಂದು ಶಾಸನದಲ್ಲಿ ಚಿಕ್ಕಹದಡಿ ಗ್ರಾಮಕ್ಕೆ ಮುದ್ದದಂಡನಾಯಕಪುರವೆಂದು ಹೆಸರಿಟ್ಟು ಅದನ್ನು ಅಗ್ರಹಾರವಾಗಿ ಪರಿವರ್ತಿಸಿ, ಅದರಲ್ಲೂ ಮೂವತ್ತೇಳು ವೃತ್ತಿಗಳನ್ನು ಕಲ್ಪಿಸಿ, ಅದರಲ್ಲಿ ೨೪ ವೃತ್ತಿಗಳನ್ನು ಬ್ರಾಹ್ಮಣರಿಗೆ ಕೊಟ್ಟಿದ್ದನ್ನು ತಿಳಿಸುತ್ತದೆ.[೨೦೯] ಇಲ್ಲಿನ ಬ್ರಾಹ್ಮಣರು ವೇದ ಪ್ರತಿಭಾವಂತರೆನಿಸಿಕೊಂಡಿದ್ದು. ಸಕಳ ಶಾಸ್ತ್ರಗಳಲ್ಲಿ ನಿಪುಣರೆನಿಸಿದ್ದರು. ವೇದ, ಸ್ಮೃತಿ, ತರ್ಕ, ವ್ಯಾಕರಣ, ಪುರಾಣ, ಕಾವ್ಯ, ನಾಟಕ ಈ ಮುಂತಾದ ವಿಷಯಗಳಲ್ಲಿ ಪಾಂಡಿತ್ಯರೆನಿಸಿಕೊಂಡಿದ್ದರು. ಇವರು ವೈಷ್ಣವ ಧರ್ಮದ ಅನುಯಾಯಿಗಳಾಗಿದ್ದರು. ಹೀಗೆ ವೈಷ್ಣವ ಧರ್ಮವು ಈ ಪ್ರದೇಶಗಳಲ್ಲಿ ತನ್ನದೇ ಆದ ಸ್ಥಾನವನ್ನು ಪಡೆದುಕೊಂಡಿತ್ತೆನ್ನಬಹುದು.

ಶೈವಧರ್ಮ: ಶೈವಧರ್ಮ ಬಹಳ ಪುರಾತನವಾದದ್ದು ದಕ್ಷಿಣ ಭಾರತದಲ್ಲಿ ಇತಿಹಾಸ ಪೂರ್ವಕಾಲದಿಂದಲೇ ರೂಢಿಯಲ್ಲಿರುವುದನ್ನು ಅದರ ಸಂಪ್ರದಾಯ ಮತ್ತು ಪರಂಪರೆಯಿಂದ ಕಂಡುಕೊಳ್ಳಬಹುದು ಕನ್ನಡ ನಾಡಿನ ಅರಸು ಮನೆತನಗಳು ದೇವಾಲಯಗಳ ನಿರ್ಮಾಣ, ಅವುಗಳಿಗೆ ದಾನ–ದತ್ತಿ ನೀಡುವ ಮೂಲಕ ಶೈವ ಧರ್ಮವನ್ನು ಎತ್ತಿಹಿಡಿದಿದ್ದಾರೆ. ಹತ್ತನೆಯ ಶತಮಾನದಲ್ಲಿ ಆಳ್ವಿಕೆಗೆ ಬಂದ ಕಲ್ಯಾಣ ಚಾಲುಕ್ಯರು ತಮ್ಮ ಸಾಮ್ರಾಜ್ಯದಾದ್ಯಂತ ಶೈವ ದೇವಾಲಯಗಳ ನಿರ್ಮಾಣ ಮತ್ತು ಸ್ಥಾನಾಚಾರ್ಯರ ನೇಮಕ ಮಾಡುವುದರೊಂದಿಗೆ ಅದರ ಏಳಿಗೆ ಉನ್ನತ ಮಟ್ಟಕ್ಕೆ ಮುಟ್ಟಿತು ಶೈವ ದೇವಾಲಯಗಳ ಪೂಜೆ–ಪುನಸ್ಕಾರ, ದೇವರ ಅಂಗಭೋಗ, ರಂಗಭೋಗ, ಚೈತ್ರ ಪವಿತ್ರ, ಖಂಡಸ್ಫುಟಿತ ಜೀರ್ಣೋದ್ದಾರ, ತಪೋಧನರ, ವಿದ್ಯಾರ್ಥಿಗಳ ಆಹಾರ, ಆಚ್ಛಾದನ ಮೊದಲಾದವುಗಳಿಗೆ ದಾನ ನೀಡಿದ ಬಗ್ಗೆ ಹೆಚ್ಚಿನ ಶಾಸನಗಳು ಕಂಡುಬರುತ್ತವೆ. ಅರಸರು, ಅಧಿಕಾರಿಗಳು, ಮಹಾಜನರು, ವರ್ತಕರು, ಸಾಮಾನ್ಯ ಜನರು ಈ

ದಾನ-ದತ್ತಿ ಬಿಟ್ಟಿರುದು ತಿಳಿಯುತ್ತದೆ. ಶೈವ ಪರವಾದ ಶಾಸನಗಳು ಉಳಿದವುಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿರುವುದನ್ನು ಗಮನಿಸಿದರೆ ಅದು ಜನಸಾಮಾನ್ಯರ ಧರ್ಮವಾಗಿತ್ತೆಂದು ಹೇಳಬಹುದು.

ಶೈವಧರ್ಮದಲ್ಲಿ ಕಾಪಾಲಿಕರು, ಪಾಶುಪತ ಕಾಳಾಮುಖರು ಎಂಬ ಎರಡು ವರ್ಗಗಳನ್ನು ಗುರುತಿಸಲಾಗಿದೆ ಕರ್ನಾಟಕದಲ್ಲಿ ಕಾಪಾಲಿಕರ ಸಂಖ್ಯೆ ಕಡಿಮೆ, ಪಾಶುಪತ ಕಾಳಾಮುಖರು ಹೆಚ್ಚಾಗಿ ಕಂಡುಬಂದಿದ್ದಾರೆ ಪಾಶುಪತರು ಎಲ್ಲಿಯವರು? ಯಾವ ಪ್ರದೇಶದಿಂದ ಇವರು ಕರ್ನಾಟಕವನ್ನು ಪ್ರವೇಶಿಸಿದರು ಎಂಬುವುದು ಸ್ಪಷ್ಟವಿಲ್ಲ[೩೧೦] ಪಾಶುಪತ ಶಾಖೆಯ ಸ್ಥಾಪಕನಾದ ಲಕುಲೀಶನು ವಾಯುಪುರಾಣ, ಶಿವಪುರಾಣ, ಲಿಂಗಾಪುರಾಣ ಮತ್ತು ಸಂಹಿತೆಗಳಲ್ಲಿ ಉಕ್ತನಾಗಿದ್ದಾನೆ. ಅಲ್ಲದೆ ರುದ್ರನ ಒಂದು ಅವತಾರವಾಗಿ ಗುಜರಾತಿನ ಕಾರೋಣಹದಲ್ಲಿ ಹುಟ್ಟಿದನೆಂದು ತಿಳಿದುಬರುತ್ತದೆ.[೩೧೧] ಕೆಲವರು ತಮ್ಮ ಪರಂಪರೆಯನ್ನು ಹೇಳಿಕೊಳ್ಳುವಾಗ ಕಾಶ್ಮೀರದಿಂದ ಬಂದವರೆಂದೂ ಮಲೆಯಾಳ ಪಂಡಿತರೆಂದೂ ಕರೆದುಕೊಂಡಿದ್ದಾರೆ ಹರಿಹರ ತಾಲೂಕಿನಲ್ಲಿನ ಶೈವ ದೇವಾಲಯಗಳ ಕುರಿತು ಶಾಸನಗಳಲ್ಲಿ ಉಲ್ಲೇಖಗಳಿವೆ ಇಲ್ಲಿನ ಶೈವ ದೇವಾಲಯಗಳ ಉಸ್ತುವಾರಿಕೆ ಅಲ್ಲಿಯ ಸ್ಥಾನಿಕರದಾಗಿತ್ತು ದೇವಾಲಯಗಳ ಮತ್ತು ಮಠಗಳ ಕಾರ್ಯಚಟುವಟಿಕೆಗಳ ನಿರ್ವಹಣೆ ಮತ್ತು ವಿದ್ಯಾದಾನ ನೀಡುವುದು ಇವರ ಕರ್ತವ್ಯವಾಗಿತ್ತು ಇಲ್ಲಿ ದೊರೆತ ಶಾಸನಗಳ ಮೂಲಕ ಶೈವಧರ್ಮದ ಕುರಿತು ಚರ್ಚಿಸಲಾಗುತ್ತದೆ.

ಕ್ರಿ.ಶ. ೧೨೫೭ರ ಚಿಕ್ಕಬಿದರೆ[೩೧೨] ಶಾಸನದಲ್ಲಿ ನೊಳಂಬವಾಡಿ-೩೨೦೦೦ಕ್ಕೆ ಸೇರಿದ ಕೊಟ್ಟೂರ ಸೀಮೆಯೊಳಗಿನ ಬೆಕ್ಕಿಗ-೭೦ ರ ತುಂಗಭದ್ರಾನದಿಯ ಪೂರ್ವಭಾಗದ ದುರ್ಗತ್ತಿಯ ಪ್ರವಿಷ್ಟದ ಬಿದರೆಯಲ್ಲಿ ಕನ್ನೇಶ್ವರ ದೇವರ ಪ್ರತಿಷ್ಠೆ ಮಾಡಿಸಿ ಅ ದೇವರಿಗೆ ಉಪಹಾರಕ್ಕೆ ಮತ್ತೂರ ಸಂಜಾತಕಳತಿಯ ಅಮ್ಮೆಯನಾಯಕನು ದಾನ ನೀಡಿದ ಉಲ್ಲೇಖವಿದೆ. ಜಿಗಳಿಯ ಒಂದು ಶಾಸನದಲ್ಲಿ ಎಲವಟ್ಟಿಯ ಸೋಮೇಶ್ವರ ದೇವರಿಗೆ ನೈವೇದ್ಯಕ್ಕೆ, ನಂದಾದೀವಿಗೆಗೆ, ತಪೋಧನರ ಆಹಾರಕ್ಕೆ ಗದ್ದೆ-ಬೆದ್ದಲು ಭೂಮಿಯನ್ನು ದಾನ ನೀಡಿದ ಉಲ್ಲೇಖವಿದೆ. ಇದೇ ರೀತಿಯಾಗಿ ನಂದಿತಾವರೆಯ ಶ್ರೀ ಅಮೃತಲಿಂಗ ಮಾಣಿಕೇಶ್ವರ ದೇವರಿಗೆ ಶ್ರೀಕರಣದ ಹೆಗ್ಗಡೆ ನಾಗಣ್ಣನ ಮಗ ಮಾಣಿಕಣ್ಣನು ದೇವರ ರಂಗಭೋಗ ನೈವೇದ್ಯಕ್ಕೆ ಕೆಂಗಾಡು ಮಲ್ಲಿಕಾರ್ಜುನ ದೇವರ ಮುಂತಾದ ಭೂಮಿಯನ್ನು ದಾನ ನೀಡಿದ ಉಲ್ಲೇಖಗಳಿವೆ ಬಲ್ಲೇಶ್ವರ ದೇವರಿಗೆ ದೇವರ ಮುಂದಿನ ಕೆರೆಯ ಕೆಳಗೆ ಇರುವ ಗದ್ದೆಯನ್ನು ವ್ಯವಸಾಯಕ್ಕೆ ಕೊಟ್ಟ ಉಲ್ಲೇಖ ನಿಟ್ಟೂರಿನ ಶಾಸನದಲ್ಲಿದೆ.[೩೧೩]

ಕ್ರಿ.ಶ. ೧೧೨೫ರ ಬನ್ನಿಕೋಡು[೩೧೪] ಶಾಸನದಲ್ಲಿ ಸೋವಲದೇವಿಯು ತನ್ನ ಕುಲಾಭಿವೃದ್ಧಿಗಾಗಿ ಕುಲದೇವರಾದ ಮಲ್ಲಿಕಾರ್ಜುನ ದೇವರ ಧೂಪ, ದೀಪ, ನೈವೇದ್ಯ ನಂದಾದೀವಿಗೆಗೆ, ಜೀರ್ಣೋದ್ಧಾರಕ್ಕೆ ಬೆಲ್ತುರ ಗಡಿಯಲ್ಲಿನ ಗದ್ದೆಯನ್ನು ಜ್ಞಾನಶಕ್ತಿ ಪಂಡಿತರಿಗೆ ದಾನಕೊಟ್ಟ ಬಗ್ಗೆ ತಿಳಿಸುತ್ತದೆ. ಹರಿಹರದ ಶಾಸನವೊಂದು ಶ್ರೀಯೋಗಿಶ್ವರ ದೇವರನ್ನು ಉಲ್ಲೇಖಿಸಿದೆ. ಕ್ರಿ.ಶ. ೧೫೩೩ರ ಹರಿಹರದ[೩೧೫] ಇನ್ನೊಂದು ಶಾಸನವು ಅವಸರದ ಚಂದ್ರಶೇಖರಯ್ಯನು ಅವರ ಮಾನವರಾದ ದೇಮರಸಯ್ಯನ ಸ್ಮರಣಾರ್ಥ ಹರಿಹರ ದೇವಾಲಯದ ಉತ್ತರ ಭಾಗದಲ್ಲಿ ದೇಗುಲ

ಕಟ್ಟಿಸಿ, ಅದರಲ್ಲಿ ದೇಮೇಶ್ವರ ದೇವರನ್ನು ಪ್ರತಿಷ್ಠೆ ಮಾಡಿದ ಬಗ್ಗೆ ಉಲ್ಲೇಖವಿದೆ. ಹಾಗೆಯೇ ಹಳ್ಳಿಹಾಳು ಗ್ರಾಮದ[೩೧೬] ಶಾಸನದಲ್ಲಿ ಋಬ್ಬೆಯನಾಯ್ಕನು ತನ್ನ ತಂದೆ ಬುವೆಯನಾಯ್ಕನು ತೀರಿಹೋದ ಮೇಲೆ ಹಲವಾಳದಲ್ಲಿ ಬುವೇಶ್ವರದೇವರನ್ನು ಪ್ರತಿಷ್ಠಾಪಿಸಿ ಭೂಮಿಯನ್ನು ದಾನ ಮಾಡಿದ ಉಲ್ಲೇಖವಿದೆ. ಹೀಗೆ ಇಲ್ಲಿ ದೊರೆತ ಹಲವಾರು ಶಾಸನಗಳ ಮೂಲಕ ಶೈವ ಧರ್ಮವು ಇಲ್ಲಿ ತನ್ನದೇ ಆದ ಒಂದು ನೆಲೆಯನ್ನು ಹೊಂದಿದ್ದಿತು ಎಂದು ತಿಳಿಯುತ್ತದೆ.

ಕ್ರೈಸ್ತ ಧರ್ಮ: ಕೇವಲ ಬಾಹ್ಯಚಾರಗಳೇ ಸತ್ಯವೆಂದು ತಿಳಿದು ಅಂಧಕಾರದಲ್ಲಿ ತಪ್ಪು ಹೆಜ್ಜೆಯಿಡುತ್ತಿದ್ದ ಯಹೂದ್ಯರನ್ನು ಉದ್ಧರಿಸಲೆಂದು ಏಸುಕ್ರಿಸ್ತನು ಹುಟ್ಟು ಹಾಕಿದ ಧರ್ಮವೇ ಕ್ರೈಸ್ತಧರ್ಮ, ಭಾರತದಲ್ಲಿ ಕ್ರಿಶ ಒಂದನೆಯ ಶತಮಾನದಲ್ಲಿಯೇ ಕ್ರೈಸ್ತಧರ್ಮ ಸೇಂಟ್ ಥಾಮಸ್‌ನ ಮೂಲಕ ಒಂದು ಮಲಬಾರ್ ಮತ್ತು ವ್ಯಾಯುವ್ಯಗಳಲ್ಲಿ ಹರಡಿತ್ತೆಂದು- ಕ್ರಿ.ಶ. ೫ ನೇಯ ಶತಮಾನದ ವೇಳೆಗೆ ಕೊಚ್ಚಿನ್ ಪ್ರದೇಶದಲ್ಲಿ ಪ್ರಾಮುಖ್ಯತೆ ಪಡೆಯಿತ್ತೆಂದು ಐತಿಹ್ಯಗಳಿವೆ.[೩೧೭] ಆದರೆ ಈ ಬಗ್ಗೆ ನಂಬಲಾರ್ಹ ಆಧಾರಗಳು ದೊರೆಯುವುದಿಲ್ಲ, ಆದರೆ ವಿಜಯನಗರದ ಕಾಲದಲ್ಲಿ ಪೋರ್ಚುಗೀಸರ ಆಗಮನದೊಂದಿಗೆ ಕರ್ನಾಟಕದಲ್ಲಿ ಕ್ಯಾಥೋಲಿಕ್ ಕ್ರೈಸ್ತರು ಕಾಲಿಟ್ಟರೆನ್ನಬಹುದು. ವಿಜಯನಗರ ಕಾಲದಲ್ಲಿ ಪೋರ್ಚುಗೀಸರು ಮಂಗಳೂರು, ಕುಂದಾಪುರ ಮತ್ತು ಹೊನ್ನಾವರಗಳಲ್ಲಿ ಕಾರ್ಖಾನೆಗಳನ್ನು ಸ್ಥಾಪಿಸಿದರು ಮತ್ತು ಆಯಾಯ ಸ್ಥಳಗಳಲ್ಲಿನ ಜನರನ್ನು ಮತಾಂತರಗೊಳಿಸುವ ಕೆಲಸವನ್ನು ಮಾಡಿದರು. ತೀವ್ರತರವಾದ ಧಾರ್ಮಿಕ ವಿಚಾರಣೆ, ಬರಗಾಲ ಮತ್ತು ಸಾಂಕ್ರಾಮಿಕ ರೋಗಗಳ ದೆಸೆಯಿಂದ ಅನೇಕ ಕ್ಯಾಥೋಲಿಕ್ ಕ್ರೈಸ್ತರು ಗೋವೆಯಿಂದ ಕರ್ನಾಟಕದೊಳಕ್ಕೆ ವಲಸೆ ಬಂದರು. ಹೀಗೆ ಬಂದ ಕ್ಯಾಥೋಲಿಕ್ ಕ್ರೈಸ್ತರು ವಿದೇಶಿಯರ ಸಂಪರ್ಕದಿಂದ ಪಶುಸಂಗೋಪನೆ ಮತ್ತು ಕೃಷಿಯಲ್ಲಿ ಹೊಸ ವಿಧಾನ ರೀತಿಗಳನ್ನು ರೂಢಿಸಿಕೊಂಡಿದ್ದುದರಿಂದ ಅವರಿಗೆ ಮುಂದೆ ಕೆಳದಿಯ ಅರಸರಿಂದಲೂ ವಲಸೆ ಬಂದು ಬೀಡುಬಿಡಲು ಪ್ರೋತ್ಸಾಹ ಸಿಕ್ಕಿತು.[೩೧೮]

ಮುಂದೆ ೧೯ನೇಯ ಶತಮಾನದಲ್ಲಿ ಪ್ರಾಟೆಸ್ಟೆಂಟ್ ಕ್ರೈಸ್ತಧರ್ಮ ಪ್ರಸಾರದ ನಿಯೋಗಗಳಾದ ಬಾಸೆಲ್ ಮಿಷನ್, ಲಂಡನ್ ಮತ್ತು ವೆಸ್ಲೆಯನ್ ಮಿಷನ್ ಶಾಲೆಗಳ ಪ್ರಚಾರ ತಂಡಗಳು ಕರ್ನಾಟಕದೊಳಕ್ಕೆ ಪ್ರವೇಶಿಸಿದವು, ಬಾಸೆಲ್ ಮಿಷನ್‌ರವರು ತಮ್ಮ ಚಟುವಟಿಕೆಗಳನ್ನು ಕ್ರಿ.ಶ. ೧೮೩೪ರಲ್ಲಿ ಮಂಗಳೂರಿನಿಂದ ಆರಂಭಿಸಿದರು. ನಂತರ ಅವರು ತಮ್ಮ ಚಟುವಟಿಕೆಗಳನ್ನು ಧಾರವಾಡ, ಹುಬ್ಬಳ್ಳಿ, ಗದಗ ಮೊದಲಾದ ಕಡೆಗೂ ಹಬ್ಬಿಸಿದರು. ಕ್ರಿ.ಶ. ೧೮೧೦ರಲ್ಲಿ ಲಂಡನ್ ಮಿಷನವರು ಬಳ್ಳಾರಿಯಲ್ಲಿಯೂ ಕ್ರಿ.ಶ. ೧೮೨೦ರಲ್ಲಿ ಬೆಂಗಳೂರಿನಲ್ಲಿಯೂ ಶಾಖೆಗಳನ್ನು ಸ್ಥಾಪಿಸಿದರು, ಕ್ರಿ.ಶ. ೧೮೨೧ರಲ್ಲಿ ವೆಸ್ಲೆಯನ್ ಮಿಷನ್‌ವರು ತಮ್ಮ ಕಾರ್ಯಚಟುವಟಿಕೆಗಳನ್ನು ಒಡೆಯರ್ ಮನೆತನ ಆಳುತ್ತಿದ್ದ ಮೈಸೂರು ರಾಜ್ಯದಲ್ಲಿ ಆರಂಭಿಸಿದರು. ೧೭೯೯ರಲ್ಲಿ ಮೈಸೂರು ಸಂಸ್ಥಾನದ ರೆಸಿಡೆಂಟ್‌ನಾಗಿ ಬ್ಯಾರಿಕ್ಲೋಸ್ ನೇಮಕವಾದನು. ಮೈಸೂರಿನಿಂದ ೧೮೬ ಕಿ.ಮೀ ಅಂತರದಲ್ಲಿ ಹರಿಹರಕ್ಕೆ ಸಂಸ್ಥಾನದ ಗಡಿಯ ಕೊನೆಯಗೊಳ್ಳುತ್ತಿತ್ತು ಬ್ಯಾರಿಕ್ಲೋಸ್‌ನ್ ನೇತೃತ್ವದಲ್ಲಿ

ಇಲ್ಲೊಂದು ಕಂಪೋಸ್ಮೆಂಟ್ ಸ್ಥಾಪಿಸಲಾಯಿತು.[೩೧೯] ಹಾಗಾಗಿ ಇಲ್ಲಿಂದಲೇ ಹರಿಹರದಲ್ಲಿ ಕ್ರೈಸ್ತರು ವಾಸವಾಗತೊಡಗಿದರು. ಹರಿಹರ ನಗರದಿಂದ ೨ ಕಿ.ಮೀ., ದೂರದಲ್ಲಿ ವಾಯವ್ಯ ದಿಕ್ಕಿಗೆ ಸ್ಥಾಪಿಸಿ ಕೆಲವು ತುಕಡಿಗಳನ್ನು ನಿಯೋಜಿಸಲಾಯಿತು. ಸೈನಿಕರಿಗಾಗಿ ಬ್ಯಾರಾಕ್‌ಗಳ ಸಮೀಪದಲ್ಲಿಯೇ ೧೮೨೮ರಲ್ಲಿ ಒಂದು ಆಸ್ಪತ್ರೆಯನ್ನು ಪ್ರಾರಂಭ ಮಾಡಲಾಯಿತು.[೩೨೦]

ಹರಿಹರದಲ್ಲಿ ಕ್ರಿಸ್ತನ ಸಂದೇಶ ಸಾರುವಂತಹ ಚರ್ಚುಗಳು ಇವೆ. ಸಂತಪಾಲಿನ ದೇವಾಲಯ (ಚರ್ಚ್) ಹಾಗೂ ಆರೋಗ್ಯ ಮಾತೆಯ ಮಹಾಲಯ, ಹಳ್ಳಿಹಾಳು ಗ್ರಾಮದ ಚರ್ಚ್ ಇವೆ. ಸಂತಪಾಲನ ಚರ್ಚ್ ದಿನಾಂಕ ೨೫-೦೨-೧೯೭೪ ರಂದು ಉತ್ತರ ಕರ್ನಾಟಕದ ಬಿಷಪ್ ಆಗಿದ್ದ ಆರ್.ಟಿ ರೆವರೆಂಡ್ ಡಬ್ಲ್ಯೂ.ವಿ.ಕಾರ್ಲರವರಿಂದ ಶಂಕು ಸ್ಥಾಪನೆಗೊಂಡು ದಿನಾಂಕ ೨೬-೦೧-೧೯೭೫ ರಂದು ಉದ್ಘಾಟನೆಗೊಂಡಿತು ನಂತರ ೨೦೦೯ ರಲ್ಲಿ ಬಿಷಪ್ ಆಗಿದ್ದ ಆರ್.ಟಿ.ರೆವೆರೆಂಡ್, ಜೆ. ಪ್ರಭಾಕರ್‌ರಿಂದ ನವೀಕರಣವಾಯಿತು. ಆರೋಗ್ಯ ಮಾತೆಯ ಮಹಾಲಯ, ಶಿವಮೊಗ್ಗದ ಪಸ್ಟ್ ಬಿಷಪ್ ರೆ.ಡಾ.ಇಗ್ನಾಟಿಡಿಯಸ್ ಪಿಂಟೊ ಇವರಿಂದ ೨೬-೦೪-೧೯೮೯ ರಲ್ಲಿ ಶಂಕುಸ್ಥಾಪನೆಗೊಂಡು ದಿನಾಂಕ ೩೧-೦೮-೧೯೯೨ ರಲ್ಲಿ ಅವರಿಂದಲೇ ಹೊಸ ಕಟ್ಟಡವು ಉದ್ಘಾಟನೆಗೊಂಡಿತು ಈ ಆವರಣದಲ್ಲಿ ಗುರು ನಿವಾಸ, ಪ್ರಾರ್ಥನಾಮಂದಿರ, ಕ್ರಿಸ್ತಾರಾಧನಾ ದೇವಳ, ಹರಕೆ ಸ್ನಾನ, ಸ್ಥಳ, ಪ್ರಾರ್ಥನಾ ಮಂದಿರದ ಬದಿಯಲ್ಲಿ ಏಸು ಜನನ ಮತ್ತು ಬೆತ್ಲೆಹೇಮ್ ಗ್ರಾಮದ ರೂಪಕವನ್ನು ನಿರ್ಮಿಸಲಾಗಿದೆ.[೩೨೧] ಇದು ಸೇಂಟ್ ಮೇರಿ ಚರ್ಚ್ ಆಗಿ ಕ್ರೈಸ್ತ ಆರಾಧಕರ ಧಾರ್ಮಿಕ ಕ್ಷೇತ್ರವಾಗಿದೆ. ಪ್ರತಿವರ್ಷ ಸೆಪ್ಟೆಂಬರ್ ತಿಂಗಳಲ್ಲಿನಲ್ಲಿ ಆರೋಗ್ಯ ಮಾತೆಯ ದೊಡ್ಡ ಉತ್ಸವ ನಡೆಯುತ್ತದೆ. ಹಳ್ಳಿಹಾಳು ಗ್ರಾಮದಲ್ಲಿ ಪರಿವರ್ತಿತ ಕ್ರಿಶ್ಚಿಯನ್ ಧರ್ಮೀಯರು ಇತ್ತೀಚಿಗೆ ಒಂದು ಚರ್ಚ್ ಕಟ್ಟಿಸಿಕೊಂಡಿದ್ದಾರೆ.

ಇಸ್ಲಾಂ ಧರ್ಮ: ಇಸ್ಲಾಂ ಧರ್ಮವು ಸಾವಿರಾರು ವರ್ಷಗಳ ಸುದೀರ್ಘ ಧಾರ್ಮಿಕ ಪರಂಪರೆಯನ್ನು ಹೊಂದಿದೆ. ಭಾರತಕ್ಕೆ ಇಸ್ಲಾಂ ಧರ್ಮ ಯಾವಾಗ ಪ್ರವೇಶ ಮಾಡಿತು ಎಂದು ಖಚಿತವಾಗಿ ಹೇಳುವುದು ಕಠಿಣವೇ. ಏಕೆಂದರೆ ಭಾರತಕ್ಕೂ ಪಶ್ಚಿಮ ಏಷ್ಯಾಕ್ಕೂ ಚರಿತ್ರ ಪೂರ್ವಕಾಲದಲ್ಲಿಯೇ ವಾಣಿಜ್ಯ ಸಂಬಂಧ ಬೆಳೆದಿದ್ದಿತು. ಇಸ್ಲಾಂಧರ್ಮದ ವ್ಯಾಪಕವಾದ ಅರ್ಥದಲ್ಲಿ ಅರಬ್ಬಿ ಭಾಷೆಯ ಶಬ್ದವಾದ "ಇಸ್ಲಾಂ" ಎಂಬ ಪದಕ್ಕೆ ಅನುಸರಣೆ, ಆತ್ಮ ಸಮರ್ಪಣೆ, ಮತ್ತು ಅಜ್ಞಾನುವರ್ತನೆ ಎಂಬ ಅರ್ಥಗಳಿವೆ. ಇಸ್ಲಾಂ ಧರ್ಮದ ಹೆಸರು 'ಇಸ್ಲಾಮ್' ಆಗಲು ಕಾರಣವೇನೆಂದರೆ ಇದರಲ್ಲಿರುವುದು ಭಗವಂತನ ಆದೇಶಗಳ ಅನುವರ್ತನೆ ಮತ್ತು ಆತನ ಆಜ್ಞಾಪಾಲನೆ ಮಾತ್ರ, ಇಸ್ಲಾಂ ಧರ್ಮದ ಸ್ಥಾಪಕ ಮಹಮ್ಮದ್ ಪೈಗಂಬರ್ ಹುಟ್ಟಿದ್ದು ಅರಬ್ ಸ್ಥಾನದಲ್ಲಿ ೭ನೇಯ ಶತಮಾನದಲ್ಲಿ ಅಲ್ಲಿ ರೂಢಿಯಲ್ಲಿದ್ದ ವಿವಿಧ ಪಂಗಡಗಳ ಕಾಡು ಪದ್ಧತಿಗಳನ್ನು ಒಟ್ಟೂಗೂಡಿಸಿ ಮಹಮ್ಮದ್ ಪೈಗಂಬರರು ಹೊಸ ಧರ್ಮಾಚರಣೆಯನ್ನು ನೀಡಿದರು. ಇಲ್ಲಿಂದ ಮುಂದೆ ಅರೇಬಿಯಾ ದೇಶದಿಂದ ಕ್ರಿ.ಶ. ೧೪ ನೇಯ ಶತಮಾನದ ಮಧ್ಯಭಾಗದಲ್ಲಿ ಕರ್ನಾಟಕದಲ್ಲಿ ಇಸ್ಲಾಂ ಧರ್ಮ ಉದಯಿಸಿದ್ದನ್ನು ಕಾಣುತ್ತೇವೆ.

ಹರಿಹರದ ಪರಿಸರದಲ್ಲಿ ಈ ಧರ್ಮದ ಕುರಿತು ಯಾವ ಶಾಸನಗಳು ದೊರೆತಿರುವುದಿಲ್ಲ ಆದರೆ ಟಿಪ್ಪು ಸುಲ್ತಾನನ ಆಡಳಿತಕ್ಕೆ ಹರಿಹರ ಒಳಪಟ್ಟಿತ್ತು ಎಂಬ ವಿಷಯ ಈ ಹಿಂದೆ ರಾಜಕೀಯ ಇತಿಹಾಸದಲ್ಲಿ ತಿಳಿದುಕೊಂಡಿದ್ದೇವೆ. ಹಾಗೆಯೇ ಸವಣೂರು ನವಾಬರು ಕೂಡ ಈ ಪ್ರದೇಶದ ಮೇಲೆ ಹಿಡಿತ ಸಾಧಿಸಿದ್ದರು. ಪ್ರಸಕ್ತ ಹರಿಹರ, ಮಲೆಬೆನ್ನೂರು ಮುಂತಾದ ಸ್ಥಳಗಳಲ್ಲಿ ಇಸ್ಲಾಂ ಧರ್ಮಿಯರು ವಾಸವಾಗಿದ್ದು ಅಲ್ಲಲ್ಲಿ ದರ್ಗಾಗಳನ್ನು ಕಟ್ಟಿಸಿಕೊಂಡಿದ್ದಾರೆ. ಮಲೆಬೆನ್ನೂರು ದರ್ಗಾದಲ್ಲಿ ವರ್ಷಕ್ಕೊಮ್ಮೆ ಮಾರ್ಚ್ ತಿಂಗಳಲ್ಲಿ ಉರುಸು, ಗಂಧ ಉತ್ಸವ ಜರುಗುತ್ತದೆ. ಇಸ್ಲಾಂಮಿಯರಿಗೆ ಸಂಬಂಧಿಸಿದಂತೆ ಇಷ್ಟು ಮಾಹಿತಿ ದೊರೆಯುತ್ತದೆ.

ಹರಿಹರ ತಾಲೂಕಿನ ಪ್ರಾಚೀನ ಸಂಸ್ಕೃತಿಯಲ್ಲಿ ಶೈವ ಮತ್ತು ವೈಷ್ಣವ ಧರ್ಮಗಳು ರಾಜಾಶ್ರಯ ಪಡೆದು ಬೆಳವಣಿಗೆ ಹೊಂದಿದವು. ರಾಜಕೀಯ ಮತ್ತು ಆಡಳಿತದಲ್ಲಿ ತುಂಬಾ ಪರಿಣಾಮಕಾರಿ ಪ್ರಭಾವ ಬೀರಿದ್ದರಿಂದ ಸಾಮಾಜಿಕ ಸ್ಥಿತಿಯನ್ನು ಕಾಪಾಡುವಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿವೆ. ಪ್ರಸ್ತುತ ಜೈನ, ಕ್ರೈಸ್ತ, ಹಾಗೂ ಇಸ್ಲಾಂ ಧರ್ಮದ ಪ್ರಭಾವ ಬೀರಿದೆ ಎಂದು ಹೇಳಬಹುದು. ಧಾರ್ಮಿಕ ಹಿನ್ನಲೆಯಲ್ಲಿ ರೂಪತಳೆದ ದೇವಾಲಯ, ಮೂರ್ತಿಶಿಲ್ಪ, ಆಚರಣೆ ಉತ್ಸವಗಳು ಮತ್ತು ಸಾಂಸ್ಕೃತಿಕ ಅಭಿವೃದ್ಧಿಗೆ ಕಾರಣಗಳಾಗಿವೆ.

೩.೬ ಶೈಕ್ಷಣಿಕ ವ್ಯವಸ್ಥೆ

ಸುಶಿಕ್ಷತ ಸಮಾಜ ಆರ್ಥಿಕ. ಸಾಂಸ್ಕೃತಿಕ ಅಭಿವೃದ್ಧಿಗೆ ಕಾರಣವಾಗುತ್ತದೆ. ಪ್ರಾಚೀನ ಕಾಲದಿಂದ ವಿದ್ಯೆ-ವಿದ್ಯಾ ಕೇಂದ್ರಗಳಿಗೆ ಬಹು ಪ್ರಾಮುಖ್ಯತೆಯನ್ನು ನೀಡುತ್ತಾ ಬರಲಾಗಿದೆ. ಅರಸನಾದಿಯಾಗಿ ಸಾಮಾನ್ಯ ಜನರೂ ಕೂಡ ದೇವಾಲಯಗಳಿಗೆ ದಾನ-ದತ್ತಿ ಬಿಡುವಾಗ ಅಲ್ಲಿಯ ವಿದ್ಯಾಭ್ಯಾಸಕ್ಕಾಗಿ ಇಂತಿಷ್ಟು ಎಂದು ನಿಗಧಿಪಡಿಸುತ್ತಿದ್ದರು. ದೇವಸ್ಥಾನ-ಮಠಗಳಲ್ಲಿ ತಪೋಧನರು, ವಿದ್ಯಾಭ್ಯಾಸದಲ್ಲಿ ನಿರತರಾಗುತ್ತಿದ್ದರು. ತಪೋಧನರು ವಿದ್ಯಾಭ್ಯಾಸದ ನಂತರ ದೇವಸ್ಥಾನಗಳಿಗೆ ಸ್ಥಾನಪತಿಗಳಾದರೆ, ಛಾತ್ರರು ಗೃಹಸ್ಥಾಶ್ರಮಕ್ಕೆ ಮರಳುತ್ತಿದ್ದರು ತಪೋಧನರು ಓದುವ ವಿದ್ಯಾರ್ಥಿಗಳಾದರೆ ಕೇಳುವ ವಿದ್ಯಾರ್ಥಿಗಳೆಂಬುದನ್ನು ಎಸ್.ಕೆ. ಕೊಪ್ಪಾ ಅವರು ಪುಷ್ಟಿಕರಿಸಿದ್ದಾರೆ[೩೮] ವಿದ್ಯಾರ್ಥಿ ತಪೋಧರನಾಗಿ ಅಥವಾ ನೈಷ್ಠಿಕ ಬ್ರಹ್ಮಚಾರಿಗಳಾಗಿ ಆ ದೇವಸ್ಥಾನದ ಯತಿಗಳ ಸಂಪ್ರದಾಯಕ್ಕೆ ಸೇರಿದವರು. ಈ ನೈಷ್ಠಿಕ ಬ್ರಹ್ಮಚಾರಿಗಳ ಏಕೈಕ ಗುರಿ ಜ್ಞಾನಾರ್ಜನ[೩೯] ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದಲ್ಲಿ ಶಿಕ್ಷಣ ಅಥವಾ ವಿದ್ಯಾಕೇಂದ್ರಗಳಾಗಿ ದೇವಾಲಯ ಮತ್ತು ಮಠಗಳು ಕಾರ್ಯನಿರ್ವಹಿಸುತ್ತಿದ್ದವು ಅಗ್ರಹಾರ, ಘಟಿಕಾಸ್ಥಾನ ಮತ್ತು ಬ್ರಹ್ಮಪುರಿಗಳಲ್ಲಿದ್ದ ವಿದ್ಯಾಕೇಂದ್ರಗಳಿಗೆ ಹೆಚ್ಚಿನ ಮಹತ್ವವಿತ್ತು.

ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಿಗೆ ವಿದ್ಯೆ ಕಲಿಯುವುದು ಅವರ ಜನ್ಮಸಿದ್ಧ ಅಧಿಕಾರವಾಗಿತ್ತು. ಆದರೆ ಅಧಿಕ ಸಂಖ್ಯೆಯಲ್ಲಿದ್ದ ಶೂದ್ರರಿಗೆ ಶಿಕ್ಷಣ ಕಲಿಯುವುದು ಅಸಾಧ್ಯವಾಗಿತ್ತು. ಆಸಮತೋಲವನ್ನು ಯಾರು ಪ್ರಶ್ನಿಸುವಂತಿರಲಿಸಲ್ಲ. ಇವರು ತಮ್ಮ ತಮ್ಮ ಜಾತಿಗನುಗುಣ ವೃತ್ತಿಯನ್ನು ಮಾಡಬೇಕಾಗಿತ್ತು. ಬ್ರಾಹ್ಮಣರ ಶಿಕ್ಷಣ ಆಧ್ಯಾತ್ಮಿಕ ಶಿಕ್ಷಣವಾಗಿದ್ದು ವೇದದ ವಿವಿಧ ಭಾಗಗಳನ್ನು ಅಧ್ಯಯನ

ಮಾಡುತ್ತಿದ್ದರು. ಕ್ಷತ್ರಿಯರ ಶಿಕ್ಷಣ ವೃತ್ತಿದಾಯಕವಾಗಿದ್ದು, ಸೈನಿಕ ಶಿಕ್ಷಣವಾಗಿತ್ತು, ವೈಶ್ಯರ ಶಿಕ್ಷಣ ಸಾಂಸ್ಥೀಕರಣಕ್ಕಿಂತ ಹೆಚ್ಚಾಗಿ ಗೃಹಕೃತ್ಯವಾಗಿತು ರಾಜರು, ಸಾಮಂತರು, ಶ್ರೀಮಂತರು ಹೀಗೆ ಅನೇಕರು ಇಂತಹ ಸಂಸ್ಥೆಗಳಿಗೆ ದಾನ-ದತ್ತಿಗಳನ್ನು ನೀಡುತ್ತಿದ್ದರೆಂದು ಶಾಸನಗಳಿಂದ ತಿಳಿದು ಬರುತ್ತದೆ. ಇದು ಅವರು ವಿದ್ಯೆಗೆ ಕೊಡುತ್ತಿದ್ದ ಪ್ರೋತ್ಸಾಹವಾಗಿತ್ತು. ಹರಿಹರದ ಒಂದು ಶಾಸನವು[೨೪] ಸ್ಪಷ್ಟವಾಗಿ ವಿದ್ಯಾಲಯದ ವಿವರಣೆಯನ್ನು ನೀಡುತ್ತದೆ. 'ಅಕ್ಷರಶಿಕ್ಷ' ವ್ಯಾಕರಣ, ಮೀಮಾಂಸ, ವೇದಾಂತ, ವ್ಯಾಖ್ಯಾನ, ಋಗ್ವೇದ, ಯಜುರ್ವೇದ, ಅಧ್ಯಾಪನಾರ್ಥವಾಗಿ ದಾನ ನೀಡಿದ ಉಲ್ಲೇಖವಿದೆ. ಇದರಿಂದ ಹರಿಹರದಲ್ಲಿ ಮೇಲೆ ಹೆಸರಿಸಿದ ಅಧ್ಯಾಪನಗಳು ನಡೆಯುತ್ತಿದ್ದವು ಎಂದು ಸ್ಪಷ್ಟವಾಗುತ್ತದೆ.

ಅಗ್ರಹಾರಗಳು: ಅಗ್ರಹಾರವೆಂದರೆ ವಿದ್ಯಾವಂತ ಬ್ರಾಹ್ಮಣರ ನಿವಾಸಕ್ಕಾಗಿ ಕೆಲವು ಗ್ರಾಮಗಳನ್ನು ಅಗ್ರಹಾರಗಳನ್ನಾಗಿ ಮಾರ್ಪಡಿಸಿ ಅವರಿಗೆ ದಾನವಾಗಿ ಬಿಟ್ಟುಕೊಡುತ್ತಿದ್ದರು. 'ಪ್ರಾಚೀನ ಕಾಲದಲ್ಲಿ ರಾಜ್ಯವು ವಿದ್ಯಾಭ್ಯಾಸದ ಹೊಣೆಯನ್ನು ಪ್ರತ್ಯಕ್ಷವಾಗಿ ವಹಿಸಿದ್ದರೂ, ಅಗ್ರಹಾರಗಳನ್ನು ಸ್ಥಾಪಿಸುವುದರ ಮೂಲಕ ಪರೋಕ್ಷವಾಗಿ ಸಹಾಯ ಮಾಡಿದೆ ಎನ್ನಬಹುದು. ಹೊಟ್ಟೆ ಬಟ್ಟೆಗಳ ಚಿಂತೆಯನ್ನು ರಾಜ್ಯವು ಹೋಗಲಾಡಿಸಿದುದರಿಂದ ಅಗ್ರಹಾರಗಳ ಬ್ರಾಹ್ಮಣರು ತಮ್ಮ ಗಮನವನ್ನು ವಿದ್ಯಾದಾನದ ಕಡೆಗೆ ಕೊಡಲು ಸಾಧ್ಯವಾಯಿತು.[೨೫] ಅಲ್ಲದೆ ಆ ಊರಿನ ಸಂಪೂರ್ಣ ಆದಾಯವು ರಾಜ ಬೊಕ್ಕಸಕ್ಕೆ ಸಲ್ಲದೆ ಐಶ್ವರ್ಯವನ್ನು ಬ್ರಾಹ್ಮಣರು ಅನುಭವಿಸುತ್ತಿದ್ದರು. ಅಗ್ರಹಾರದ ಮೂಲರೂಪ 'ಅಗ್ರಹಾರ' ಎಂದಿರಬೇಕೆಂದೂ, ಅದು ಅಗ್ರ+ಆಹಾರ ಎಂಬ ಎರಡು ಪದಗಳ ಸಮಾಸವೆಂದೂ ಪ್ರೊ. ಸಿ.ಎಲ್. ನರಸಿಂಹಚಾರ್ಯರ ಅಭಿಪ್ರಾಯ, 'ಅಗ್ರ' ಎಂದರೆ ಶ್ರೇಷ್ಠ, ಆಹಾರ ಎಂದರೆ ದೇಶ ಅಥವಾ ಸ್ಥಳ. ಅಗ್ರಹಾರವೆಂದರೆ ಶ್ರೇಷ್ಠರಿಗೆ ಕೊಟ್ಟಿರುವ ಸ್ಥಳ ಅಥವಾ ಊರು ಎಂದಾರ್ಥ.[೨೬] ಅಗ್ರಹಾರಗಳಲ್ಲಿ ಇಂತಹ ವಿದ್ವಾಂಸರ ಅಥವಾ ಮಹಾಜನರ ಸಂಖ್ಯೆ ಸುಮಾರು ನೂರರಿಂದ ಸಾವಿರದವರೆಗೂ ಇದ್ದುದು ಶಾಸನಗಳಿಂದ ತಿಳಿದು ಬರುತ್ತದೆಂದು ಚಿದಾನಂದಮೂರ್ತಿಯವರು ಅಭಿಪ್ರಾಯ ಪಟ್ಟಿದ್ದಾರೆ. ಅಗ್ರಹಾರವನ್ನು ಬ್ರಾಹ್ಮಣರಿಗೆ ಮಾತ್ರ ದಾನ ಕೊಡುತ್ತಿದ್ದರೆ ಭತ್ತ ಗ್ರಾಮಗಳನ್ನು ಇತರರಿಗೂ ದಾನ ಕೊಡುತ್ತಿದ್ದರು. ಪ್ರಾಚೀನ ಕರ್ನಾಟಕದಲ್ಲಿದಂತೆ ಹರಿಹರ ತಾಲೂಕಿನಲ್ಲಿಯೂ ಸಹ ಅಗ್ರಹಾರಗಳು ವಿದ್ಯಾಕೇಂದ್ರಗಳಾಗಿ ಕಾರ್ಯನಿರ್ವಹಿಸಿದ್ದವು ಎಂಬುದನ್ನು ಈ ಕೆಳಗಿನಂತೆ ನೋಡಬಹುದು.

ಹರಿಹರ ಅನಾದಿ ಅಗ್ರಹಾರವೆಂದೇ ಗುರುತಿಸಲ್ಪಟ್ಟಿದೆ. ಇಲ್ಲಿರುವ ಬಹಳಷ್ಟು ಶಾಸನಗಳು ಹರಿಹರವನ್ನು ಅಗ್ರಹಾರ ಕೂಡಲೂರು,[೨೭] ಅನಾದಿ ಅಗ್ರಹಾರವೆಂದು ತಿಳಿಸಿವೆ. ಇಲ್ಲಿ ದಾನ ಪಡೆದ ಅಗ್ರಹಾರದ ಬ್ರಾಹ್ಮಣರು ಕೇವಲ ಪೂಜೆ ಪುನಸ್ಕಾರ, ವೇದಾಧ್ಯಯನ, ಪುರಾಣ, ಪುಣ್ಯಕಥೆ ಹೇಳುವುದಕ್ಕೆ ಮಾತ್ರ ಸೀಮಿತವಾಗದೆ ತಮಗೆ ದೊರೆತ ಭೂದಾನದ ಜಮೀನುಗಳಿಗೆ ನೀರಾವರಿ ವ್ಯವಸ್ಥೆ ಕಲ್ಪಿಸುವ ಕಾರ್ಯದಲ್ಲೂ ನಿರತರಾಗಿ, ರಾಜ್ಯದ ದೇವಾಲಯದ ಹಾಗೂ ತಮ್ಮ ಆದಾಯ ಹೆಚ್ಚಿಸಿಕೊಂಡ ಬಗ್ಗೆ ತಿಳಿಸುತ್ತದೆ. ಕ್ರಿ.ಶ. ೧೪೧೦ರ[೨೮] ವಿಜಯನಗರದ ಅರಸ

ವೀರಪ್ರತಾಪ ಮಹಾದೇವರಾಯರು ಶ್ರೀಹರಿಹರ ದೇವರಿಗೆ, ಕ್ಷೇತ್ರ ನಿವಾಸಿಗಳಾದ ಮಹಾಜನರು ಖರ್ಚುಮಾಡಿ ಹರಿಹರದ ಸೀಮೆಯೊಳಗೆ ಹರಿಯುತ್ತಿದ್ದ ಹರಿದ್ರಾ ನದಿಗೆ ಅಣೆಕಟ್ಟೆ ಕಟ್ಟಿ ದತ್ತಿಪಡೆದ ಭೂಮಿಗೆ ಕಾಲುವೆ ಮೂಲಕ ನೀರು ಹರಿಸಿ ಭೂಮಿಯೊಳಗೆ ೨ ಭಾಗ ಹರಿಹರ ದೇವರಿಗೆ ಧನವಿಕ್ಕಿ ಕಟ್ಟೆಯ ತಂದ ಮಹಾಜನರಿಗೆ ಒಂದು ಭಾಗ ಕೊಡುವಂತೆ ತೀರ್ಮಾನಿಸಿದ ಉಲ್ಲೇಖವಿದೆ. ಈ ರೀತಿಯಾಗಿ ಹರಿಹರ ಅನಾದಿ ಅಗ್ರಹಾರವೆಂದು ತಿಳಿಯುತ್ತದೆ.

ಹರಿಹರದ ಸಮೀಪವಿರುವ ಬಾನುವಳ್ಳಿಯು ಆದಿ ಅಗ್ರಹಾರವೆಂದು ಅಲ್ಲಿನ ಶಾಸನದಿಂದ[೨೯] ತಿಳಿಯುತ್ತದೆ. ಈ ಶಾಸನದಲ್ಲಿ ಮಹಾಪ್ರಧಾನ ಸರ್ವಾಧಿಕಾರಿಯಾಗಿದ್ದು ತಿಪ್ಪರಸರು ಬಾನುವಳ್ಳಿಯನ್ನು ಲಕ್ಷ್ಮೀನಾರಾಯಣಪುರ ಎಂದು ಅಗ್ರಹಾರ ಮಾಡಿ ಅಲ್ಲಿ ಲಕ್ಷ್ಮೀನಾರಾಯಣ ದೇವರನ್ನು ಪ್ರತಿಷ್ಠಾಪಿಸಿದ್ದನ್ನು ತಿಳಿಸುತ್ತದೆ ಇಲ್ಲಿ ನೂರಾನಾಲ್ಕು ಜನ ಬ್ರಾಹ್ಮಣರಿದ್ದ ಬಗ್ಗೆಯೂ ತಿಳಿಸುತ್ತದೆ. ಹರಿಹರದ[೩೦] ಒಂದು ಶಾಸನದಲ್ಲಿ ಸೋಮನಾಥ ದಂಡನಾಯಕ ಸೋಮನಾಥಪುರವೆಂಬ ಅಗ್ರಹಾರ ಮಾಡಿ ಅಲ್ಲಿ ಸೋಮನಾಥ ದೇವಾಲಯವನ್ನು ನಿರ್ಮಾಣ ಮಾಡಿ ಹರಿಹರ ದೇವಾಲಯದ ಪೂರ್ವದ್ವಾರ ನಿರ್ಮಿಸಿದ್ದಾಗಿ ತಿಳಿಸುತ್ತದೆ. ಕ್ರಿ.ಶ. ೧೩೭೯[೩೧]ರಲ್ಲಿ ವಿಜಯನಗರದ ಇಮ್ಮಡಿ ಹರಿಹರನ ಮಂತ್ರಿ ಮುದ್ದಾದಂಡಾಧೀಶ ಚಿಕ್ಕಹದಡಿ ಮುದ್ದದಂಡನಾಯಕಪುರವೆಂಬುದಾಗಿ ಹೆಸರಿಟ್ಟು ಅಗ್ರಹಾರ ಮಾಡಿ ಬ್ರಾಹ್ಮಣರಿಗೆ ದಾನ ಕೊಟ್ಟಿದ್ದನ್ನು ತಿಳಿಸುತ್ತದೆ. ಹರಿಹರ ತಾಲೂಕಿನಲ್ಲಿ ಹರಿಹರ, ಬಾನುವಳ್ಳಿ-ನಿಟ್ಟೂರು,[೩೨] ಜಿಗಳಿ,[೩೩] ದೇವರಬೆಳಕೆರೆ[೩೪] ಗ್ರಾಮಗಳೂ ಸಹ ಅಗ್ರಹಾರಗಳಾಗಿದ್ದವು.

ಬ್ರಹ್ಮಪುರಿ ಘಟಿಕಾಸ್ಥಾನ: ನಗರಗಳಲ್ಲಿ ಅಥವಾ ಪಟ್ಟಣಗಳಲ್ಲಿ ಬ್ರಾಹ್ಮಣ ವಿದ್ವಾಂಸರು ವಾಸಿಸುವ ಭಾಗವೇ ಬ್ರಹ್ಮಪರಿ[೩೫] ಬ್ರಹ್ಮಪುರಿಗಳೆಂದರೆ ಹೆಚ್ಚಾಗಿ ನಗರಗಳಿಗೆ ಸೇರಿದೆ ವಿದ್ಯಾಸಂಸ್ಥೆಗಳೆಂದು ಹೇಳಬಹುದು. ಅಗ್ರಹಾರಗಳಿಗಿಂತ ಬ್ರಹ್ಮಪುರಿಗಳ ಸಂಖ್ಯೆ ಕಡಿಮೆ.[೩೬] ಅಗ್ರಹಾರಗಳಲ್ಲಿ ವಾಸಿಸುತ್ತಿದ್ದ ಬ್ರಾಹ್ಮಣರಿಗೆ ಅಲ್ಲಿಯ ಆಡಳಿತದ ಒಡೆತನ ಅವರಿಗೆ ಸೇರಿರುತ್ತದೆ. ಬ್ರಾಹ್ಮಣರೇ ಆ ಊರುಗಳ ಒಡೆಯರು ಅದರೆ ಇಲ್ಲಿ ಬ್ರಹ್ಮಪುರಿಗಳಲ್ಲಿ ವಾಸಿಸುತ್ತಿದ್ದ ಬ್ರಾಹ್ಮಣರಿಗೆ ಅಲ್ಲಿಯ ಒಡೆತನದ ಹಕ್ಕು ಇರಲಿಲ್ಲ. ಹಾಗೂ ಅಲ್ಲಿಯ ಆದಾಯವನ್ನು ಇವರು ಅನುಭವಿಸುವಂತಿರಲಿಲ್ಲ ಏಕೆಂದರೆ ವಿದ್ಯಾಭ್ಯಾಸದ ವಿಷಯದಲ್ಲಿ ಬ್ರಹ್ಮಪುರಿಗಳು ಯಾವ ವಿಶೇಷತೆಯನ್ನು ತೋರಿರುವುದಿಲ್ಲ ಬ್ರಹ್ಮಪುರಿಗಳನ್ನು ಕುರಿತ ಇಲ್ಲಿನ ಯಾವ ಶಾಸನಗಳು ಉಲ್ಲೇಖಿಸುವುದಿಲ್ಲ. ಆದರೆ ನಿಟ್ಟೂರಿನ[೩೭] ಶಾಸನವೊಂದು ಬಲ್ಲೇಶ್ವರ ದೇವರಿಗೆ ದೇವರ ಮುಂದಿನ ಕೆರೆಯ ಕೆಳಗೆ ಇರುವ ಗದ್ದೆಯನ್ನು ಬ್ರಹ್ಮಪುರಿ ನಾರಯಣಯ್ಯಗೆ ಊರಗೌಡ ಎರೆಚಟ್ಟಯ್ಯನು ವ್ಯವಸಾಯಕ್ಕೆ ದಾನ ಕೊಟ್ಟನೆಂದು ತಿಳಿಸುತ್ತದೆ. ಬಹುಶಃ ನಿಟ್ಟೂರು ಬ್ರಹ್ಮಪುರಿಯಾಗಿತ್ತೆಂದು ತಿಳಿಯಬಹುದಾಗಿದೆ. ಅಗ್ರಹಾರಗಳಲ್ಲಿ ಕೇವಲ ವಿದ್ಯಾವಂತ ಬ್ರಾಹ್ಮಣರ ವಿದ್ಯಾಭ್ಯಾಸದ ಸೌಲಭ್ಯವಿರುತ್ತಿತ್ತು. ಅಂತಹ ಅಗ್ರಹಾರಗಳಲ್ಲಿ ಬ್ರಾಹ್ಮಣರ ಒಂದು ನಗರ ಬೇರೆ ಇರುತ್ತಿತ್ತು. ಅಂತಹುಗಳಿಗೆ ಬ್ರಹ್ಮಪರಿಗಳೆಂದು ಕರೆಯುತ್ತಿದ್ದರು.

ಪ್ರಾಚೀನ ಮತ್ತು ಮಧ್ಯಕಾಲಿನ ಸಂದರ್ಭದಲ್ಲಿ ಶಿಕ್ಷಣ ಸಂಸ್ಥೆಗಳಾಗಿ ಅಗ್ರಹಾರ ದೇವಾಲಯ, ಮಠಗಳಂತೆ ಘಟಕಸ್ಥಾನಗಳು ವಿದ್ಯಾಭ್ಯಾಸದ ಕೇಂದ್ರಗಳಾಗಿ ಪ್ರಮುಖ ಪಾತ್ರವಹಿಸಿವೆ ಇಂತಹ ಘಟಿಕಾಸ್ಥಾನಗಳನ್ನು ಹರಿಹರ ತಾಲೂಕಿನ ಯಾವ ಶಾಸನಗಳು ಉಲ್ಲೇಖಿಸುವುದಿಲ್ಲ.

ದೇವಾಲಯ-ಮಠಗಳು: ಪ್ರಾಚೀನ ಕಾಲದಿಂದಲೂ ಕರ್ನಾಟಕದಲ್ಲಿ ದೇವಾಲಯಗಳು ಅಂದಿನ ಜನತೆಯ ಭಕ್ತಿ ಮತ್ತು ನಿಷ್ಠೆಯ ಪ್ರತೀಕಗಳೆನಿಸಿದ್ದವು. ದೇವಾಲಯವು ಭಾರತೀಯ ಸಂಸ್ಕೃತಿಯ ಸಂಪೂರ್ಣ ಆವಿಷ್ಕಾರ, ಮನುಷ್ಯನ ಮೇಲೆ ಅಲ್ಲಿ ಹೆಚ್ಚಿನ ಪ್ರಭಾವ ಬೀರಿದ್ದು ಈ ದೇವಾಲಯಗಳೇ ಏಕೆಂದರೆ ದೇವಾಲಯಗಳು ಪ್ರಬಲ ಸಾಮಾಜಿಕ ಸಂಸ್ಥೆಯಾಗಿ ಜನಜೀವನವನ್ನು ನಿಯಂತ್ರಿಸುತ್ತಿದ್ದವು. ದೇವಾಲಯಗಳು ಕಲೆಗಳ ಬಹು ಪ್ರಾಚೀನ ನಿರ್ದೇಶನಗಳಾಗಿವೆ ದೇವಾಲಯಗಳ ಕಾರ್ಯಕ್ಷೇತ್ರವು ವ್ಯಾಪಕವಾಗಿದ್ದು ಜನರ ಬಾಳಿನಲ್ಲಿ ಅತ್ಯಂತ ಪ್ರಮುಖ ಪಾತ್ರವನ್ನು ವಹಿಸಿವೆ. ಇವುಗಳ ಸಾಂಸ್ಕೃತಿಕ, ಧಾರ್ಮಿಕತೆಯ ಪ್ರತೀಕಗಳೆನಿಸದೆ ಆಯಾ ಅರಸು ಮನೆತಗಳ ಕಾಲದ ಧಾರ್ಮಿಕ ಹಾಗೂ ಆರ್ಥಿಕ ಪರಿಸ್ಥಿತಿಯನ್ನು ಅನುಸರಿಸಿ ಸಮಾಜಕ್ಕೆ ಸಲ್ಲಿಸಿದ ಕೊಡುಗೆ ಅಪಾರವಾಗಿದೆ. ದೇವಾಲಯದ ನಿರ್ಮಾಣ ಉದಾತ್ತ ಸಂಸ್ಕೃತಿಯ ಸಾಧನೆಗೆ ಹಿನ್ನಲೆಯಾಗಿತ್ತು. ದೇವಾಲಯಗಳಲ್ಲಿ ಅನ್ನ ಸತ್ರಾದಿಗಳನ್ನು ನಡೆಸುವುದು ಬಡಬಗ್ಗರಿಗೆ ಸಹಾಯ ಮಾಡುವುದು ಧರ್ಮದ ಮುಖ್ಯ ಕಾರ್ಯವಾಗಿತ್ತು. ಇಂತಹ ಮಹದೊದ್ದೇಶವನ್ನು ಹೊಂದಿದ ದೇವಾಲಯಗಳು ಓದುವ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿಯೂ ಅನುಕೂಲ ಕಲ್ಪಿಸಿಕೊಟ್ಟಿತ್ತು. ಸಮಾಜದಲ್ಲಿ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ದೇವಾಲಯವು ವಹಿಸಿದ ಪಾತ್ರ ವಿಶಿಷ್ಟವಾದುದು.

ಕ್ರಿ.ಶ. ೧೦೫೪ರ ಶಾಸನದಲ್ಲಿ[೩೩೮] ಧನ್ವಂತರಿ ಪಂಡಿತ ಎಂಬ ಉಲ್ಲೇಖ ಬರುತ್ತದೆ. ಧನ್ವಂತರಿ ಉಲ್ಲೇಖ ನೇರವಾಗಿ ಆಯುರ್ವೇದ ವಿದ್ಯೆಗೆ ಮತ್ತು ವೈದ್ಯಶಾಸ್ತ್ರಕ್ಕೆ ಸೇರಿರುವುದರಿಂದ ಆ ಕಾಲದಲ್ಲಿ ವೈದ್ಯವಿದ್ಯೆ ಹಾಗೂ ಅದರ ಪಾಠ ಪ್ರವಚನಗಳನ್ನೂ ಕೂಡ ದೇವಾಲಯದ ಸ್ಥಾನಪತಿಗಳೇ ಮಾಡುತ್ತಿದ್ದಂತೆ ತೋರುತ್ತದೆ. ಶಾಸನದಲ್ಲಿ ಉಲ್ಲೇಖಿಸಿದಂತೆ ಕಲಿಯುಗದ ಧನ್ವಂತರಿ ವಿಜಯಪಂಡಿತರು ಎಂದು ಅವರ ಹೆಸರನ್ನು ಉಲ್ಲೇಖಿಸಲಾಗಿದೆ. ವಿಜಯಪಂಡಿತ ಎಂಬ ವೈದ್ಯರು ಸೋಮರಾಶಿ ಗುರುಗಳಿಗೆ ನಿವೇಶನ ನೀಡಿದನೆಂದು ಹೇಳುತ್ತದೆ. ವಿಜಯಪಂಡಿತನೇ ಇಲ್ಲಿ ವೈದ್ಯನಾಗಿದ್ದಾನೆ. ಅಂದು ಪ್ರಚಲಿತದಲ್ಲಿದ್ದ ವಿದ್ಯೆಗಳಲ್ಲಿ ಧನ್ವಂತರಿ ವಿದ್ಯೆಯೂ ಕೂಡ ಪಾಠ ಪ್ರವಚನಗಳ ಮೂಲಕ ಪ್ರಚುರಗೊಳ್ಳುತ್ತಿತ್ತು ಎಂದು ಈ ಶಾಸನದಿಂದ ತಿಳಿಯುತ್ತದೆ.

ಅಗ್ರಹಾರಗಳು, ದೇವಾಲಯಗಳು ಶೈಕ್ಷಣಿಕ ರಂಗಗಳ ಬೆಳವಣಿಗೆಗೆ ಒಂದು ತಳಹದಿಯನ್ನು ಒದಗಿಸಿಕೊಟ್ಟಂತೆ ಮಠಗಳೂ ಈ ನಾಡಿನ ವಿದ್ಯಾಭ್ಯಾಸದ ಔನ್ನತ್ಯವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸಿವೆ. ಅಂದಿನ ಕಾಲದಿಂದಲೂ ಇಂತಹ ಮಠಗಳು ವಿಪುಲವಾಗಿ ಬೆಳೆದದ್ದನ್ನು ಕಾಣುತ್ತೇವೆ. ಪ್ರಾಚೀನ ಕರ್ನಾಟಕದ ವಿದ್ಯಾಭ್ಯಾಸದಲ್ಲಿ ಕಂಡು ಬರುವ ಒಂದು ಪ್ರಮುಖವಾದ ಅಂಶವೆಂದರೆ ಊರುಗಳಲ್ಲಿ ಹಳ್ಳಿಹಳ್ಳಿಗಳಲ್ಲಿ ಅಗ್ರಹಾರಗಳೂ ಮಠಗಳೂ ಘಟಿಕಾಸ್ಥಾನಗಳೂ ನಿರ್ಮಾಣವಾಗಿ ವಿದ್ಯೆಯನ್ನು ಸಾಧ್ಯವಾದಷ್ಟು ವ್ಯಾಪಕವಾಗಿ ಮಾಡುವ ಪ್ರಯತ್ನ[೩೩೯] ನಡೆಯಿತು

ಈ ರೀತಿಯಾಗಿ ವಿದ್ಯೆಗಿದ್ದ ಪ್ರಾಮುಖ್ಯತೆಯನ್ನು ತಿಳಿಸಲು ಅನೇಕ ಶಾಸನಗಳಲ್ಲಿ ಮಾಹಿತಿ ದೊರಕುತ್ತದೆ. ಮಠಗಳು ವಿದ್ಯಾಕೇಂದ್ರಗಳಾಗಿದ್ದು ಜ್ಞಾನ ಪ್ರಸಾರದಲ್ಲಿ ನಿರತವಾಗಿದ್ದವು. ಎಂಬುದನ್ನು ಇದುವರೆಗೂ ತಾಲೂಕಿನಲ್ಲಿ ದೊರೆತ ಅಪ್ರಕಟಿತ ಶಾಸನದಿಂದ ಮಠದ ಉಲ್ಲೇಖವಿದೆ ಚಿಕ್ಕಬಿದರೆಯಲ್ಲಿ ದೊರೆತ ಅಪ್ರಕಟಿತ ಶಾಸನದಿಂದ ಮಠದ ಉಲ್ಲೇಖವಿದೆ. ಈ ಶಾಸನವು ಕ್ರಿಶ ೧೩ನೇಯ ಶತಮಾನದ ಆರಂಭಕಾಲಕ್ಕೆ ಸೇರಿದ್ದಾಗಿದೆ. ಈಗಾಗಲೇ ದೊರೆತ ಈ ಗ್ರಾಮದ ಶಾಸನಗಳಲ್ಲಿ ಬಿಲ್ಲಾಳು ಆಮ್ಮೆಯನಾಯಕನ ಉಲ್ಲೇಖ ಬಂದಿದೆ ಈ ಆಂಮ್ಮೆಯನಾಯ್ಕರ ಮಗ ಲೂಯನಾಯ್ಕನು ರುದ್ರಸೋದಿ ಲಖದೇವಂಗಳಿಗೆ ದಾರಾಪೂರ್ವಕವಾಗಿ ಕೊಟ್ಟಗಣ ಮಠದ ಕೆಯಿ ಎಂದು ಉಲ್ಲೇಖವಿದೆ.[೩೧೦] ಇದೇ ಶಾಸನ ಮೊದಲ ಬಾರಿಗೆ ತಾಲೂಕಿಗೆ ಪ್ರಾಚೀನ ಮಠದ ಉಲ್ಲೇಖ ಮಾಡುವ ದಾಖಲೆಯಾಗಿದೆ. ಇಲ್ಲಿ ಮಠ ಇದೊಂದೆ ಇದು ವಿದ್ಯಾದಾನದ ಕುರಿತು ಮಾಹಿತಿ ಓದಗಿಸುವುದಿಲ್ಲ. ಆದರೆ ಶೈಕ್ಷಣಿಕ ವ್ಯವಸ್ಥೆಯ ಕೇಂದ್ರಗಳಾಗಿದ್ದುಕೊಂಡು ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದ್ದವೆಂದು ಊಹಿಸಬಹುದು.

ಹೀಗೆ ಆಗ್ರಹಾರಗಳು, ಬ್ರಹ್ಮಪುರಿ-ಘಟಿಕಾಸ್ಥಾನ, ದೇವಾಲಯ ಹಾಗೂ ಮಠಗಳು, ಧಾರ್ಮಿಕತೆಗೆ ಎಷ್ಟು ಪ್ರಾಮುಖ್ಯತೆಯನ್ನು ನೀಡಿದ್ದವೋ ಅಷ್ಟೇ ಪ್ರಾಮುಖ್ಯತೆಯನ್ನು ಶಿಕ್ಷಣಕ್ಕೂ ನೀಡಿದ್ದವೆಂದು ಇಲ್ಲಿನ ಶಾಸನಗಳಿಂದ ತಿಳಿದು ಬರುವುದಲ್ಲದೆ ಇತರ ಸಾಮಾಜಿಕ ದೃಷ್ಟಿಯಿಂದಲೂ ಅವುಗಳು ನೀಡಿದ ಸೇವೆ ಅನನ್ಯವಾದುದಾಗಿದೆ ಇವುಗಳ ಜೊತೆಗೆ ಮೇಲಿನ ಶೈಕ್ಷಣಿಕ ಕೇಂದ್ರಗಳು ಸಂಗೀತ, ನೃತ್ಯ, ಶಿಲ್ಪಕಲೆಗಳನ್ನು ಬೆಳೆಸಿಕೊಂಡು ಬಂದಿತೆನ್ನಬಹುದು.

೩.೭ ಸಾಮಾಜಿಕ ವ್ಯವಸ್ಥೆ

ಮಾನವೀಯ ಮೌಲ್ಯಗಳನ್ನು ಅನುಷ್ಠಾನಗೊಳಿಸಿ ಮಾನವ ಮಾನವನನ್ನು ಹತ್ತಿರ ತಂದು ಜನತೆಯನ್ನು ಜೊತೆಗೂಡಿಸುವ ಪ್ರಮುಖ ತಾಣವೇ ಸಮಾಜವೆನಿಸಿದೆ. ತನ್ನೊಳಗಿನ ಸದಸ್ಯರ ಬೇಕು ಬೇಡ ಮುಂತಾದ ಅಗತ್ಯಗಳನ್ನು ಕುಟುಂಬ ನೋಡಿಕೊಳ್ಳುವಂತೆ ಇಂತಹ ಹಲವು ಕುಟುಂಬಗಳ ಅಗತ್ಯಗಳನ್ನು ನಿಯಂತ್ರಿಸುವ ಶಕ್ತಿಯಾಗಿ ಸಮಾಜ ಸ್ಥಾನ ಪಡೆದಿದೆ. ಹೀಗೆ ವ್ಯಕ್ತಿಯು ರೂಪಿಸಿ, ನಿರ್ಮಿಸಿ ಬೆಳೆಸಿಕೊಂಡಿರುವ ಸಾಮಾಜಿಕ ಬಾಂಧವ್ಯಗಳ ರೂಪಗಳು, ವೈವಿಧ್ಯಗಳು ರೂಢಿ, ಪರಂಪರೆ ಹಾಗೂ ಆಚಾರ-ವಿಚಾರಗಳ ನಡುವಣ ಸಂಬಂಧವನ್ನು ಸಮಾಜ ಹೊಂದಿದೆ. ಪ್ರಾಚೀನ ಕರ್ನಾಟಕದಲ್ಲಿ ಸಾಮಾಜಿಕ ಪ್ರಜ್ಞೆಯು ಎಚ್ಚತ್ತಿದ್ದಿತೆಂಬುದನ್ನೂ. ವ್ಯಕ್ತಿಯು ತನ್ನಷ್ಟಕ್ಕೆ ತಾನು ಬಾಳದೆ ಇತರರಿಗಾಗಿಯೂ ಬಾಳಬೇಕೆಂಬ ಅರಿವು ಅವನಿಗೆ ಸಂಪೂರ್ಣವಾಗಿ ಇದ್ದಿತೆಂಬುದನ್ನು ತೋರಿಸುವುದೇ ಆಗಿದೆ.[೩೧೧] ಈ ಆದರ್ಶವು ಪ್ರಾಚೀನ ಕಾಲದಿಂದಲೂ ಮಂದುವರೆದುಕೊಂಡು ಬಂದಿದೆ. ಭೌತಿಕ ಮತ್ತು ಭಾವನಾತ್ಮಕ ಅವಶ್ಯಕತೆಗಳಿಗೆ ಅನುಗಣವಾಗಿ ರೂಪಗೊಳ್ಳುವ ಸಮಾಜ ಮನುಕುಲದ ಸಾಂಸ್ಕೃತಿಕ ವಿಕಾಸಕ್ಕೆ ಅಗತ್ಯವಾದ ಬುನಾದಿಯನ್ನು ಕಲ್ಪಿಸುತ್ತದೆ. ಈ ರೀತಿಯಾದ ಹಿಂದಿನ ಜನಜೀವನದ ಬಗ್ಗೆ ಬೆಳಕನ್ನು ಬೀರಬಲ್ಲ. ಆಧಾರಗಳೆಂದರೆ ಶಾಸಗಳಾಗಿವೆ. ಈ ಹಿನ್ನಲೆಯಲ್ಲಿ ಸಾಮಾಜಿಕ ಜೀವನಕ್ಕೆ ಸಂಬಂಧಪಟ್ಟಂತೆ ಹರಿಹರ ತಾಲೂಕಿನ ಶಾಸನಗಳನ್ನಾಧರಿಸಿ ಈ ಪರಿಸರದ ಪ್ರಾಚೀನ ಸಮಾಜವನ್ನು ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ.

ವರ್ಣವ್ಯವಸ್ಥೆ: ವೈದಿಕ ಸಾಹಿತ್ಯದಲ್ಲಿ ವರ್ಣವ್ಯವಸ್ಥೆಯ ಉಗಮದ ಬಗ್ಗೆ ವಿವರಿಸಿದ ಋಗ್ವೇದದ ಪುರುಷ ಸೂಕ್ತದಲ್ಲಿ ಪರಮಾತ್ಮನ ಬಾಯಿಯಿಂದ ಬ್ರಾಹ್ಮಣ ಭುಜಗಳಿಂದ ಕ್ಷತ್ರಿಯ, ತೊಡೆಗಳಿಂದ ವೈಶ್ಯ, ಪಾದಗಳಿಂದ ಶೂದ್ರರು ಜನಿಸಿದರೆಂದಿದೆ[೩೪೨] ಪ್ರಾಚೀನ ಕಾಲದಲ್ಲಿ ಹುಟ್ಟಿಕೊಂಡ ವರ್ಣವ್ಯವಸ್ಥೆ ಮೊದಲೋ, ಜಾತಿವ್ಯವಸ್ಥೆ ಮೊದಲೋ ಎನ್ನುವುದಕ್ಕೆ ಅನೇಕ ತೊಡಕುಗಳಿವೆ. ವರ್ಣ ಎಂಬ ಶಬ್ದ ಜಾತಿ ಸಂಕರವಾಗಿರದೆ ಅದು ಭಾಷೆ, ಮತ, ಧರ್ಮ, ಬಣ್ಣ, ಆಕಾರಗಳನ್ನು ಸೂಚಿಸುವ ಪದವಾಗಿದೆ. ಇದು ಮಾನವನ ವ್ಯಕ್ತಿತ್ವಕ್ಕನುಗಣವಾಗಿ ಸಮಾಜದ ಏಳಿಗೆಗಾಗಿ ಆದಂತಹ ವಿಂಗಡಣೆ ಎಂದು ಸ್ಪಷ್ಟವಾಗಿ ತೋರುತ್ತದೆ. ಆದರೆ ಇದಕ್ಕಿಂತ ಪೂರ್ವದಲ್ಲಿದ್ದ ಸಿಂಧೂ ಸಂಸ್ಕೃತಿಯಲ್ಲಿ ಅನೇಕ ಕಸುಬುಗಳನ್ನು ಮಾಡುತ್ತಿದ್ದ ಜನವರ್ಗಗಳಿದ್ದವು ಅವು ಜಾತಿ ಆಧಾರದ ಮೇಲೆ ನಿಂತಿದ್ದವೆಂಬುವುದಕ್ಕೆ ಯಾವುದೇ ಆಧಾರಗಳಿಲ್ಲ.

ಬ್ರಾಹ್ಮಣರು: ಪ್ರಾಚೀನ ಕಾಲದ ವರ್ಣವ್ಯವಸ್ಥೆಯಲ್ಲಿ ಬ್ರಾಹ್ಮಣ ವರ್ಗ ಸಾಮಾಜಿಕ ಸ್ಥರಗಳಲ್ಲಿ ಮೊದಲ ಸ್ಥಾನವನ್ನು ಹೊಂದಿತ್ತು. ವಿದ್ಯಾಕ್ಷೇತ್ರದಲ್ಲಿ ರಾಜಕೀಯ ಕ್ಷೇತ್ರದಲ್ಲಿ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಅಗ್ರಸ್ಥಾನದಲ್ಲಿದ್ದವರು ಅವರು, ಅಶನ-ವ್ಯಸನಾದಿಗಳ ಚಿಂತೆಯಿಲ್ಲದೆ ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಲೆಂದು ರಾಜರು ನೂರಾರು ದತ್ತಿಗಳನ್ನು ಬ್ರಾಹ್ಮಣರಿಗೆ ಬಿಟ್ಟು ಕೊಟ್ಟಿದ್ದಾರೆ.[೩೪೩] ಇದು ಸಮಾಜದಲ್ಲಿ ಅವರಿಗಿದ್ದ ವಿಶಿಷ್ಟ ಸ್ಥಾನವನ್ನು ಗುರುತಿಸುತ್ತದೆ. ಹರಿಹರದ ಶಾಸನಗಳಲ್ಲಿ ಉಲ್ಲೆಖಿತರಾದ ಇವರು ಸಮಾಜದಲ್ಲಿ ಇವರಿಗಿದ್ದ ಪ್ರತಿಷ್ಠೆಯನ್ನು ಕುರಿತು ಮಾಹಿತಿಯನ್ನು ನೀಡಿದೆ. ಹಾಗೆಯೇ ಇವರನ್ನು ಮಹಾಜನರು ಎಂದು ಕೂಡ ಉಲ್ಲೇಖಿಸಿವೆ.

ಕ್ರಿ.ಶ. ೧೧೬೪ರ ಹರಿಹರದ ಶಾಸನದ[೩೪೪] ಬ್ರಾಹ್ಮಣರನ್ನು ಉಲ್ಲೇಖಿಸಿದ್ದು, ಕಳಚೂರ್ಯರ ಸಾಮಂತ ಉಚ್ಚಂಗಿಯ ದೊರೆ ವೀರಪಾಂಡ್ಯನ ಮಂಡಳೇಶ್ವರನಾಗಿದ್ದ ಈಶ್ವರದೇವರಸನು ದಕ್ಷಿಣಗಂಗೆ ವರಣಾಸಿ ಹೆಸರಿಗೆ ಕಾರಣನಾದ ಸ್ವಯಂಭೂ ಶಂಕರನಾರಾಯಣ ದೇವರ ಕಾರ್ಯಕ್ಕೆ ನೈವೇದ್ಯಕ್ಕೆ ಬ್ರಾಂತಿ-೩೦ ರ ಒಂದು ಕಂಪಣದಲ್ಲಿನ ಒಂದು ಊರಿನ ಹೊನ್ನನ್ನು ನೂರುನಾಲ್ಕು ಬ್ರಾಹಣರಿಗೆ ಧಾರಪೂರ್ವಕವಾಗಿ ಬಿಟ್ಟ ಉಲ್ಲೇಖವಿದೆ. ಕ್ರಿ.ಶ. ೧೧೬೭ರ[೩೪೫] ಅದೇ ಗ್ರಾಮದ ಶಾಸನವು ದಂಡನಾಥ ವಿಜಯಪೆರ್ಮಾಡಿಯ ವಿಜ್ಞಾಪನೆಯಂತೆ ಹರಿಹರ ದೇವರ-ಅಂಗಭೋಗ, ಮೂರು ಕಾಲದ ನೈವೈದ್ಯ, ಬ್ರಾಹ್ಮಣ ಭೋಜನ ಮುಂತಾದ ಅಧ್ಯಾಪನಕ್ಕಾಗಿ ಮುನ್ನೂರು ನಿಷ್ಕಾಗಳ ಕಂದಾಯ ಗೊತ್ತುಪಡಿಸಿ ಸಮಸ್ತಶಾಸ್ತ್ರಗಳನ್ನು ತಿಳಿದಿರುವ ನೂರನಾಲ್ಕು ಜನ ಬ್ರಾಹ್ಮಣರಿಗೆ ಬಿಟ್ಟುಕೊಟ್ಟ ಬಗ್ಗೆ ತಿಳಿಸುತ್ತದೆ. ಅದೇ ಗ್ರಾಮದ ಕ್ರಿ.ಶ. ೧೧೭೩ರ[೩೪೬] ರ ಮೇಲೆ ತಿಳಿಸಿದ ದಂಡನಾಥನ ಮಗ ದುರ್ಗರಸದಂಡನಾಯಕನು ಮೂಲ ಅಗ್ರಹಾರ ಕೂಡಲೂರಿನ ನೂರನಾಲ್ಕು ಮಹಾಜನಗಳಿಗೆ ಬಡ್ಡಿಯಂತೆ ಕೊಟ್ಟ ಹೊನ್ನಿಗೆ ಹತ್ತು ಗದ್ಯಾಣವನ್ನು ನೀಡಿ ಆ ಬಡ್ಡಿಯಲ್ಲಿ ಶ್ರೀ. ಶಂಕರನಾರಾಯಣದೇವರ ನಂದಾದೀವಿಗೆಯನ್ನು ಶಾಶ್ವತವಾಗಿ ನಡೆಸುವುವಂತೆ ದಾನ ನೀಡಿದ ಉಲ್ಲೇಖವಿದೆ.

ಹೀಗೆ ಬ್ರಾಹ್ಮಣರನ್ನು ಕುರಿತು ಬಾಣುವಳ್ಳಿ, ಹಿರೇಹಾಲಿವಾಣ, ದೇವರಬೆಳಕೆರೆ, ನಿಟ್ಟೂರು ಶಾಸನಗಳು ಉಲ್ಲೇಖಿಸುತ್ತವೆ. ಈ ಶಾಸನಗಳನ್ನು ಅವಲೋಕಿಸಿದಾಗ ಬ್ರಾಹ್ಮಣರು ಕೇವಲ ವೇದ ಪುರಾಣ ಪಠಣ, ಪುರೋಹಿತ ವೃತ್ತಿ, ದೇವರ ಪೂಜೆ, ಜ್ಯೋತಿಷ್ಯ ಕೇವಲ ವೃತ್ತಿಗಳಲ್ಲದೆ, ರಾಜಕೀಯವಾಗಿಯೂ ಕಾರ್ಯನಿರ್ವಹಿಸಿದ್ದು ಕಂಡು ಬರುತ್ತದೆ. ಅಲ್ಲದೆ ಮಂತ್ರಿಯಾಗಿ, ದಂಡಾಧಿಕಾರಿಗಳಾಗಿ, ಸೈನಿಕರಾಗಿಯೂ ಕಾರ್ಯ ನಿರ್ವಹಿಸಿದರೆಂದು ಇಲ್ಲಿನ ಕೆಲವು ಶಾಸನಗಳು ತಿಳಿಸುತ್ತವೆ.[೩೪೭] ಬ್ರಾಹ್ಮಣರ ಹೆಸರಿನಲ್ಲಿ ವೀರಗಲ್ಲುಗಳಿರುವುದೂ ವಿಶೇಷವಾಗಿದೆ.

ಕ್ಷತ್ರಿಯ: ವರ್ಣವ್ಯವಸ್ಥೆಯ ಪದ್ಧತಿಯಲ್ಲಿ ಎರಡನೆ ಸ್ಥಾನ ಪಡೆದವರು ಕ್ಷತ್ರಿಯರು ರಾಜತ್ವವು ಕ್ಷತ್ರಿಯರ ಭದ್ರವಾದ ತಳಹದಿಯ ಮೇಲೆ ನೆಲೆಗೊಂಡಿತ್ತು. ಇವರ ಪ್ರಮುಖ ಕಾರ್ಯಗಳಲ್ಲಿ ಮೊದಲನೆಯ ರಾಜ್ಯಾಡಳಿತವಾದರೆ, ಎರಡನೆಯದು ಆ ರಾಜ್ಯವನ್ನು ರಕ್ಷಿಸಿಕೊಂಡು ಬರುವುದೇ ರಾಜರುಗಳ ಶ್ರೇಷ್ಠ ಕರ್ತವ್ಯವಾಗಿ ಪರಿಣಮಿಸಿತ್ತು. ರಾಜ್ಯದ ಅಧಿಕಾರವನ್ನು ನೇರವಾಗಿ ನಿರ್ವಹಿಸುತ್ತಿದ್ದ ಕರ್ತವ್ಯದ ಜೊತೆಗೆ ತಮ್ಮ ಸಾಮ್ರಾಜ್ಯದ ಸುಧಾರಣೆ, ವಿಸ್ತರಣೆ, ನ್ಯಾಯ ಪರಿಪಾಲನೆ ಮಾಡುವುದು, ಪ್ರಜೆಗಳನ್ನು ರಕ್ಷಿಸುವುದು ಇವರ ಬಹು ಮುಖ್ಯವಾದ ಕರ್ತವ್ಯಗಳೆನಿಸಿದ್ದವು, ಈ ಕರ್ತವ್ಯಗಳ ಜೊತೆಗೆ ಧಾರ್ಮಿಕವಾಗಿ ಕ್ಷತ್ರಿಯರಿಗೆ ಯಜ್ಞ-ಯಾಗಾದಿಗಳನ್ನು ಮಾಡುವ ಮತ್ತು ವೇದಗಳನ್ನು ಓದುವ ಅಧಿಕಾರವಿತ್ತು. ಹಿಂದಿನ ರಾಜ್ಯದಲ್ಲಿ ಅನೇಕರು ಯಜ್ಞಗಳನ್ನು ಮಾಡುವುದರಲ್ಲಿ ಆಸಕ್ತಿಯನ್ನು ತೋರಿಸುತ್ತಿದ್ದರು.[೩೪೮] ಒಟ್ಟಿನಲ್ಲಿ ಯುದ್ಧ ಇವರ ಅವಿಭಾಜ್ಯ ಅಂಗವಾಗಿದ್ದು ಇವರನ್ನು ಚಕ್ರವರ್ತಿಗಳು ಪ್ರಭುಗಳು, ವೀರರು, ಶೂರರು, ಕಲಿಗಳು ಎಂದು ಕರೆಯಲಾಗುತ್ತಿತ್ತು.

ಹರಿಹರ ಪರಿಸರವನ್ನು ಆಳಿದ ರಾಜಮನೆತನಗಳಲ್ಲಿ ಆಳ್ವಿಕೆ ಮಾಡಿದ ಚಕ್ರವರ್ತಿಗಳಲ್ಲಿ ಹೆಚ್ಚಿನವರು ಕ್ಷತ್ರಿಯರಾಗಿದ್ದರು, ತಾಲೂಕಿನ ಯಾವುದೇ ಶಾಸನದಲ್ಲಿ ಈ ಕ್ಷತ್ರಿಯ ವರ್ಣದ ಬಗ್ಗೆ ಅಥವಾ ಇನ್ನಾವುದೇ ವಿಷಯದ ಬಗ್ಗೆ ಉಲ್ಲೇಖಗಳಿಲ್ಲ. ಆದರೆ ಇಲ್ಲಿ ರಾಜ್ಯಡಳಿತ ನಡೆಸಿದ ಕ್ಷತ್ರಿಯ ಅರಸರ ಬಗ್ಗೆ ಶಾಸನಗಳಲ್ಲಿ ಉಲ್ಲೇಖ ಬಂದಿರುವುದರಿಂದ ಅವುಗಳು ಕ್ಷತ್ರಿಯರಿಗೆ ಸಂಬಂಧಪಟ್ಟ ಶಾಸನಗಳು ಎಂದು ಊಹಿಸಬೇಕಾಗುತ್ತದೆ. ಇಲ್ಲಿ ದೊರೆತ ಶಾಸನಗಳಲ್ಲಿ ಹೆಚ್ಚಿನ ಶಾಸನಗಳು ಅರಸರು ದಾನ ಕೊಟ್ಟ ಇಲ್ಲವೆ ಬೇರೆ ವಿಷಯಕ್ಕೆ ಸಂಬಂಧಪಟ್ಟಂತೆ ಶಾಸನಗಳನ್ನು ಕೆತ್ತಿರುವುದರಿಂದ ಆ ಎಲ್ಲಾ ಶಾಸನಗಳನ್ನು ಕ್ಷತ್ರೀಯರು ಕೊರೆಯಿಸಿದ ಶಾಸನಗಳೆಂದರೆ ತಪ್ಪಾಗಲಾರದು.

ವೈಶ್ಯರು: ಸಾಮಾಜಿಕ ಜಾತಿ ವ್ಯವಸ್ಥೆಯ ಸ್ಥರವಿನ್ಯಾಸದಲ್ಲಿ ಮೂರನೇ ವರ್ಣವೇ ವೈಶ್ಯ ವರ್ಣವಾಗಿದೆ. ವ್ಯಾಪಾರ ಮಾಡುವುದೇ ಇವರ ಮುಖ್ಯ ಕುಲ ಕಸುಬಾಗಿತ್ತು. ಕಮ್ಮಾರರು, ಅಕ್ಕಸಾಲಿಗರು, ಬಡಗಿಗಳು, ಕಂಚುಗಾರರು, ವಿಶ್ವಕರ್ಮಕ್ಕೆ ಸೇರಿದವರು[೩೪೯] ಇವುಗಳಲ್ಲದೆ ಇನ್ನೂ ಅನೇಕ ಉಪಜಾತಿಗಳು ಈ ವೈಶ್ಯ ವರ್ಗಕ್ಕೆ ಸೇರಿದವುಗಳಾಗಿವೆ. ವೈಶ್ಯ ಶಬ್ದಕ್ಕೆ ಸಂವಾದಿಯಾಗಿ 'ಶೆಟ್ಟಿ' ಇಲ್ಲವೆ 'ಸೆಟ್ಟಿ' ಎಂಬ ಮುಂತಾದ ಪದಗಳಿಂದ ಸಂಭೋಧಿಸಲಾಗುತ್ತದೆ ಇವರು ವ್ಯಾಪಾರ ಮಾಡಿ ಜೀವನ ನಡೆಸುತ್ತಿದ್ದರಿಂದ ಇವರನ್ನು ವರ್ತಕರೆಂದು ಕರೆಯಲಾಗುತ್ತದೆ. ಇಂತಹ ವೈಶ್ಯ

ವರ್ಗವಾದ ಸೆಟ್ಟಿಯ ಜನಾಂಗದ ಬಗ್ಗೆ ಹರಿಹರ ತಾಲೂಕಿನ ಕೆಲವು ಶಾಸನಗಳಲ್ಲಿ ಉಲ್ಲೇಖ ಮೂಡಿ ಬಂದಿದೆ ಅವರ ಬಗ್ಗೆ ವೃತ್ತಿ ಆಧಾರಿತ ಜಾತಿಗಳು ವಿಷಯದಲ್ಲಿ ವಿವರಿಸಲಾಗಿದೆ.

ಶೂದ್ರರು: ಸಾಮಾಜಿಕ ಸ್ತರ ವಿನ್ಯಾಸದಲ್ಲಿ ಕೊನೆಯ ಸ್ಥಿತಿಯೆಂದರೆ ಶೂದ್ರರು ಅಥವಾ ಅಸ್ಪೃಶ್ಯರು ಹಿಂದೂ ಸಮಾಜಕ್ಕೆ ಅಂಟಿದ ಅಳಿಸಲಾಗದ ಈ ಕಳಂಕ ಬಹಳ ಪ್ರಾಚೀನವಾದುದು. ರಾಷ್ಟ್ರಕೂಟರ ಕಾಲಕ್ಕಿಂತ ಬಹು ಹಿಂದಿನಿಂದಲೂ ಈ ಪದ್ಧತಿ ಬೆಳೆದು ಬಂದಿದ್ದಂತೆ ತೋರುತ್ತದೆ ಅಲ್ಬೆರೂನಿ ಅಂತ್ಯಜರ ದುಸ್ಥಿತಿಯನ್ನು ಸ್ಪಷ್ಟವಾಗಿ ಉಲ್ಲೇಖಿಸಿದ್ದಾನೆ ಅವರಲ್ಲಿಯೂ ಕಸುಬುಗಳಿಗೆ ಅನುಗುಣವಾಗಿ ಅನೇಕ ವಿಭಾಗಗಳಿದ್ದುವು ಎನ್ನುತ್ತಾನೆ. ಊರಿನಲ್ಲಿ ಉತ್ತಮರು ಮಾಡುವ ಕೊಳೆಯನ್ನು ತೆಗೆದುಹಾಕಿ ಚೊಕ್ಕಟಗೊಳಿಸುವುದು ಅವರ ಕೆಲಸ, ಆದರೆ ಊರಿಗೆ ದೂರವಾಗಿ, ಉತ್ತಮರ ಸ್ಪರ್ಶಕ್ಕೂ ಅಯೋಗ್ಯರಾಗಿ ಬದುಕಬೇಕಾದುದು ಅವರ ಹಣೆಯಬರಹ, ಉತ್ತಮರು ಬರುತ್ತಿರುವಾಗ ಶೂದ್ರರು ಆ ಬೀದಿಯಲ್ಲಿ ತಲೆಯೆತ್ತಿ ನಿಲ್ಲುವುದೂ ಕೂಡಾ ಮಹಾಪರಾಧವಾಗಿತ್ತು. ಅವರನ್ನು ಯಾವಾಗಲೂ ಕೀಳು ಪ್ರಾಣಿಗಿಂತಲೂ ಕೀಳಾಗಿ ದೂರದಲ್ಲಿ ಇಟ್ಟಿರಬೇಕೆಂಬುದೇ ಧಾರ್ಮಿಕ ವಿಧಿ ರಾಜನಾದವನು ಈ ಸಂಪ್ರದಾಯವನ್ನು ಪರಿಪಾಲಿಸಿಕೊಂಡು ಬರಬೇಕಾಗಿತ್ತು. ಅದೇ ಧರ್ಮ ರಕ್ಷಣೆಯೆಂಬ ಭಾವನೆಯಿತ್ತು ಒಟ್ಟಿನಲ್ಲಿ ಈ ದುಷ್ಟತನದ ವರ್ಣನೆಯನ್ನು ಎಷ್ಟು ಹೇಳಿದರೂ ಕಡಿಮೆಯೇ ಆ ಮಟ್ಟಕ್ಕೆ ಇಳಿದಿದ್ದುವು ನಮ್ಮ ಧರ್ಮದ ಉದಾತ್ತ ತತ್ವಗಳು[೩೫೦] ಇದನ್ನು ಸಹಿಸದೇ ಇದರ ವಿರುದ್ಧ ಸಾಮಾಜಿಕ ಚಳವಳಿಯನ್ನು ಬೃಹದ್ ರೂಪದಲ್ಲಿ ಕೈಕೊಂಡ ಬಸವಣ್ಣ ಅವಕಾಶಕೊಟ್ಟರೆ ಎಲ್ಲರೂ ಬೆಳೆಯ ಬಲ್ಲರೆಂಬುದನ್ನು ಹರಳಯ್ಯ ಮೊದಲಾದ ಶೂದ್ರರ ಜೀವನದ ಉದಾತ್ತ ಪರಿವರ್ತನೆಯಿಂದ ತೋರಿಸಿಕೊಟ್ಟ, ಕೊನೆಗೆ ಹರಳಯ್ಯ ಮತ್ತು ಬ್ರಾಹ್ಮಣರ ಮಧುವರಸ ಇದರಲ್ಲಿ ರಕ್ತಸಂಬಂಧವನ್ನೂ ಏರ್ಪಡಿಸಿದ. ಸಂಪ್ರದಾಯಬದ್ಧ ಸಮಾಜ ಇದನ್ನು ಸಹಿಸಲಾರದೇ ಹೋಯಿತು. ಧರ್ಮಶಾಸ್ತ್ರಗಳ ಮತ್ತು ಶಾಸ್ತ್ರಿಗಳ ಬೆಂಬಲವನ್ನು ಪಡೆದ ರಾಜ, ಹರಳಯ್ಯ ಮಧುವರಸರನ್ನು ಶಿಕ್ಷಿಸಿದ[೩೫೧] ಹೀಗೆ ಇದು ಕ್ರಾಂತಿಯಲ್ಲಿ ಕೊನೆಗೊಂಡಿತು. ಬಸವಣ್ಣನ ಮಾನವತೆಯ ಉದ್ಧಾರದ ಆ ಕಾರ್ಯ, ಸಮಾಜದ ಮೇಲೆ ಪರಿಣಾಮವನ್ನು ಬೀರದೆ ಹೋಗಲಿಲ್ಲ. ಆದರೆ ಹಿಂದೂ ಸಮಾಜ ಒಳಿತಾಗಲೀ ಕೆಡಕಾಗಲೀ ಸಂಪ್ರದಾಯ ಸುಲಭವಾಗಿ ಬಿಟ್ಟುಕೊಡುವಂತದ್ದಲ್ಲ ಸಂಪ್ರದಾಯದ ಸರಪಳಿ ಪ್ರಗತಿಯ ಹೆಜ್ಜೆಯನ್ನು ಮತ್ತೆ ಹಿಂದಕ್ಕೆ ಎಳೆಯಿತು. ಶೂದ್ರರು ಇಂದು ಅಸ್ಪೃಶ್ಯರಾಗಿ ಉಳಿದುಕೊಂಡೇ ಬಂದಿದ್ದಾರೆ. ಶೂದ್ರ ಎನ್ನುವ ಉಲ್ಲೇಖ ಹರಿಹರದ ಯಾವ ಶಾಸನಗಳು ಉಲ್ಲೇಖಿಸುವುದಿಲ್ಲ ಸಾಮಾನ್ಯವಾಗಿ ಇರುತ್ತಿದ್ದರು ಎಂಬುದು ಅಧ್ಯಯನದಿಂದ ಗಮನಕ್ಕೆ ಬಂದಿದೆ.

ವೃತ್ತಿ ಆಧಾರಿತ ಜಾತಿಗಳು : ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ನಾಲ್ಕು ವರ್ಣಗಳೂ ಒಂದಲ್ಲ ಒಂದು ರೀತಿಯಲ್ಲಿ ತಮ್ಮ ವರ್ಗಕ್ಕೆ ಸಂಬಂಧಪಟ್ಟ ವೃತಿಯನ್ನು ಮಾಡಬೇಕಾಗುತ್ತದೆ. ಸಮಾಜದಲ್ಲಿ ಪ್ರತಿಯೊಂದು ವ್ಯಕ್ತಿಗೂ ಒಂದು ನಿರ್ದಿಷ್ಟ ಸ್ಥಾನ ಮಾನವಿದ್ದು ವೃತ್ತಿಯನ್ನವಲಂಬಿಸಲು ಅವಕಾಶವಿದ್ದಿತು. ಅದನ್ನನುಸರಿಸಿಯೇ ಅವರು ಕಾರ್ಯೋನ್ಮುಖರಾಗುತ್ತಿದ್ದರು. ವೃತ್ತಿಗೆ ಮಾನವ

ಇತಿಹಾಸದಷ್ಟು ಪ್ರಾಚೀನತೆಯಿದೆ. ವ್ಯಕ್ತಿಯ ಜೀವನಾಧಾರ ವೃತ್ತಿ ಹೀಗಾಗಿ ಮನುಕುಲದ ಚರಿತ್ರೆಯ ಆರಂಭದಿಂದಲೂ ಒಂದಿಲ್ಲೊಂದು ವೃತ್ತಿಯನ್ನು ಕೈಗೊಳ್ಳುವುದು ಅವನಿಗೆ ಅನಿವಾರ್ಯ-ಅಗತ್ಯವೆನಿಸಿದ್ದಿತು.[೩೫೨] ವೃತ್ತಿಯೇ ಮನುಷ್ಯನಿಗೆ ಜೀವಸೆಲೆ ಬದುಕು ಎಲ್ಲವೂ ಆಗಿತ್ತು. ವೃತ್ತಿಯಿಲ್ಲದ ಮನುಷ್ಯ ಬಾಳುವುದು ದುಸ್ತರವಗುತ್ತದೆ. ಹೀಗಾಗಿ ವೃತಿಯಿಲ್ಲದೆ ಮನುಷ್ಯನಿಲ್ಲ, ಮನುಷ್ಯನಿಲ್ಲದೆ ವೃತ್ತಿಯಿಲ್ಲ ಎನ್ನುವಷ್ಟರ ಮಟ್ಟಿಗೆ ಒಂದುಕ್ಕೊಂದು ಮನುಷ್ಯ ವೃತ್ತಿಗಳ ಸಂಬಂಧಗಳು ಬೆಸೆದುಕೊಂಡಿವೆ. ಇಂತಹ ವೃತ್ತಿಯನ್ನು ಆಧಾರವಾಗಿಟ್ಟುಕೊಂಡೇ ಬದುಕುವ ಅನೇಕ ಜಾತಿಗಳು ಹಿಟ್ಟಿಕೊಂಡಿವೆ ಅಂತಹ ವೃತ್ತಿಯಾಧಾರಿತ ಜಾತಿಗಳ ಉಲ್ಲೇಖಗಳು ಹರಿಹರ ತಾಲೂಕಿನ ಶಾಸನಗಳಲ್ಲಿ ಉಲ್ಲೇಖಗಳಿವೆ.

ಗಾಣಿಗರು: ಗಾಣದಿಂದ ಎಣ್ಣೆಯನ್ನು ತೆಗೆದು ಉತ್ಪಾದನೆ ಮಾಡಿದ ಎಣ್ಣೆಯನ್ನು ಮಾರಾಟ ಮಾಡಿ ಜೀವಿಸುವವರನ್ನು ಗಾಣಿಗರು ಎಂದು ಕರೆಯುತ್ತಿದ್ದರು. 'ಇವರ ಮೂಲದಲ್ಲಿ ಈಶ್ವರನು ಜಗತ್ತಿನ ಕತ್ತಲನ್ನು ತೆಗೆದುಹಾಕುವ ಅವಶ್ಯಕತೆ ಕಂಡನು. ನಿರಂತರವಾಗಿ ಬೆಳಕನ್ನು ಕಾಪಾಡಲು, ತನ್ನ ಬೆವರಿನಿಂದ ಒಬ್ಬ ಮನುಷ್ಯನನ್ನು ಸೃಷ್ಟಿಸಿ ಅವನಿಗೆ ಎಣ್ಣೆ ತೆಗೆಯುವ ಉದ್ಯೋಗಕ್ಕೆ ನಿಯಮಿಸಿದನು ಎಂದು ನಂಜುಂಡಯ್ಯ ಮತ್ತು ಐಯ್ಯರ್ ಒಂದು ಕಥೆಯನ್ನ ದಾಖಲಿಸಿದ್ದಾರೆ.[೩೫೩] ಇವರು ರೈತರ ಎಣ್ಣೆಯ ಬೀಜಗಳನ್ನು ಗಾಣಕ್ಕೆ ಹಾಕಿ ಎಣ್ಣೆಯನ್ನು ಹಿಂಡಿಕೊಂಡು ಜೀವಿಸುತ್ತಿದ್ದರು.[೩೫೪] ದೇವರ ನೈವೇದ್ಯ ಹಾಗೂ ನಿತ್ಯೋಪಯೋಗಕ್ಕೆ ಅಧಿಕವಾಗಿ ಅತ್ಯಗತ್ಯವಿದ್ದುದರಿಂದ ಪ್ರತಿಯೊಂದು ಊರುಗಳಲ್ಲಿಯೂ ಗಾಣಗಳಿದ್ದವೆಂದು ಹೇಳಬಹುದಾಗಿದೆ.

ಕ್ರಿ.ಶ. ೧೧೬೨[೩೫೫] ರ ಗಂಗನರಸಿ ಶಾಸನದಲ್ಲಿ ಮಹಾಮಂಡಳೇಶ್ವರ ವಿಜಯಪಾಂಡ್ಯ ದೇವನು ರಾಜ್ಯಭಾರ ಮಾಡುತ್ತಿದ್ದ ಕಾಲದಲ್ಲಿ ಅರಸೀಕೆರೆಯ ಕಲಿದೇವರಸ್ವಾಮಿಯ ನಂದಾದೀವಿಗೆಯು ಸೂರ್ಯ ಚಂದ್ರರಿರುವವರೆಗೆ ಬೆಳಗಲಿ ಎಂದು ತೇಜೋನಿಧಿಪಂಡಿತರಿಗೆ ಗಾಣವೊಲೆಯನ್ನು ಧಾರಾಪೂರ್ವಕವಾಗಿ ನೀಡಿದನೆಂದು ತಿಳಿಸುತ್ತದೆ. ಹರಿಹರದ ಒಂದು ಶಾಸನವು ನೂರನಾಲ್ಕು ಜನ ಬ್ರಾಹ್ಮಣರ ಸಮ್ಮುಖದಲ್ಲಿ ಸ್ಥಳದ ಸೆಟ್ಟಿಗಳು ಮತ್ತು ಐವತ್ತು ಕುಟುಂಬಗಳು ಸೇರಿ ಶ್ರೀಯೋಗೇಶ್ವರ ದೇವರ ಕೈಂಕರ್ಯಕ್ಕೆ ಅಕ್ಕಿ ಮತ್ತು ಎಣ್ಣೆಯನ್ನು[೩೫೬] ದಾನ ನೀಡಿದ ವಿವರ ತಿಳಿಯುತ್ತದೆ. ಹೀಗೆ ಇನ್ನೂ ಅನೇಕ ಶಾಸನಗಳು ಎಣ್ಣೆಯನ್ನು ಶಾಸನೋಕ್ತ ದೇವಾಲಯಗಳಲ್ಲಿ ನಂದಾದೀವಿಗೆಗೆ ದಾನ ಬಿಟ್ಟಿರುವ ಉಲ್ಲೇಖಗಳು ದೇವರಬೆಳಕೆರೆ, ನಿಟ್ಟೂರು ಶಾಸನಗಳು ಉಲ್ಲೇಖಿಸುತ್ತವೆ.

ಮಾಲಗಾರರು: ತೋಟಗಳಲ್ಲಿ ಹೂವಿನ ಗಿಡಗಳನ್ನು ಬೆಳೆಸಿ ಆ ಹೂವುಗಳನ್ನು ಆಯ್ದುಕೊಂಡು ಮಾಲೆಗಳನ್ನು ಮಾಡಿ ಸಂತೆ-ಪೇಟೆಗಳಲ್ಲಿ ಮಾರಾಟ ಮಾಡುವವರು ಮಾಲಗಾರರು, ಕ್ರಿ.ಶ. ೧೧೭೨ರ ಹರಿಹರದ ಶಾಸನದಲ್ಲಿ ವಾಸಿಸಲು ಮನೆ ಇಲ್ಲದ ಹರಿಹರ ದೇವರ ಮಾಲೆಕಾರರಿಗೆ ಊರೊಡೆಯರಾದ ನೂರನಾಲ್ಕು ಜನ ಬ್ರಾಹ್ಮಣರು ಸೇರಿ ವಸಂತರಾಮದೇವರ ಮುಂದಾಳತ್ವದಲ್ಲಿ ಸ್ಥಳವನ್ನು ಕೊಂಡು ಕೊಟ್ಟ ಬಗ್ಗೆ ಉಲ್ಲೇಖವಿದೆ. ಕ್ರಿ.ಶ. ೧೨೫೪ರ

ಹರಿಹರದ[೨೫೭] ಶಾಸನವು ಚೌಡವೆಹೆಗ್ಗಡೆಯು ತನ್ನ ಮೈದುನ ರಾಜಯ್ಯ ಹರಿಯಣ್ಣನಿಂದ ಹರಹರದೇವರ ನಂದಾದೀಪಕ್ಕೆ ಹಾಗೂ ಮಾಲೆಗೆ ನಾಲ್ಕು ಗದ್ಯಾಣಗಳನ್ನು ನೀಡಿದ್ದನ್ನು ತಿಳಿಸುತ್ತದೆ. ಇದೇ ಸ್ಥಳದಲ್ಲಿನ ಇನ್ನೊಂದು ಶಾಸನದಲ್ಲಿ ಅಣ್ಣಮವೆಗ್ಗಡೆಯ ಮಗಳು ಹೊನ್ನಿಯವ್ವೆಯು ಹರಿಹರ ದೇವರಿಗೆ ಶಾಶ್ವತವಾಗಿ ನಂದಾದೀಪ ಮತ್ತು ಹೂವಿನ ಸೇವೆ ನಡೆಯಲೆಂದು ನಾಲ್ಕು ಗದ್ಯಾಣಗಳನ್ನು ದಾನ ಬಿಟ್ಟ ಬಗ್ಗೆ ಉಲ್ಲೇಖಿಸುತ್ತದೆ.[೨೫೮] ಹೀಗೆ ಮಾಲೆಕಾರರು ದೇವರಿಗೆ ಮಾಲೆಯನ್ನು ಹಾಕುವುದಕ್ಕೆ ಗದ್ಯಾಣವನ್ನು ಹೂವಿನ ಮಾಲೆಯನ್ನು ಹಾಗೂ ತುಳಸಿ ಮಾಲೆಯನ್ನು[೨೫೯] ಹಾಕುವುದಕ್ಕೆ ದಾನ ನೀಡಿದ ಉಲ್ಲೇಖಗಳಿವೆ.

ಕಮ್ಮಟಗಾರರು: ನಾಣ್ಯಗಳನ್ನು ಟಂಕಿಸುತ್ತಿದ್ದ ಸ್ಥಳಗಳನ್ನು ಕಮ್ಮಟಗಳೆಂದೂ ಅಚ್ಚಿನ ಟಂಕಸಾಲೆಗಳೆಂದೂ ಕರೆಯುತ್ತಿದ್ದರು.[೨೬೦] ವಿಶ್ವಕರ್ಮರೆಂದು ಕರೆಸಿಕೊಳ್ಳುವ ಇವರು ಚಿನ್ನದ ಕೆಲಸಗಳನ್ನು ಮಾಡುತ್ತಿದ್ದರೂ, ರಾಜರು ಇವರನ್ನು ಕಮ್ಮಟಗಳಲ್ಲಿ ನಾಣ್ಯಗಳನ್ನು ತಯಾರಿಸಲು ನೇಮಿಸಿಕೊಳ್ಳುತ್ತಿದ್ದರು.[೨೬೧] ಇವರ ಕುರಿತು ಹರಿಹರದ ಶಾಸಗಳಲ್ಲಿ ಉಲ್ಲೇಖವಿಲ್ಲ. ಆದರೆ ಗದ್ಯಾಣ, ಮುಂತಾದ ನಾಣ್ಯಗಳನ್ನು ಉಲ್ಲೇಖಿಸಿರುವುದರಿಂದ ಕಮ್ಮಟಗಾರರಿದ್ದರೆಂದು ಊಹಿಸುಬಹುದು.

ಹಡಪದ: ಶೂದ್ರ ವರ್ಗದಲ್ಲಿ ಕೂದಲನ್ನು ಕತ್ತರಿಸುವ ಕೆಲಸ ಮಾಡುವ ಒಂದು ವರ್ಗವಿದ್ದು ಈ ವರ್ಗಕ್ಕೆ ಹಡಪದ, ನಾಯಿಂದ, ಕ್ಷೌರಿಕ ಮತ್ತು ಹಜಾಮ ಹಡಪದ ಮುಂತಾದ ಹೆಸರುಗಳಿಂದಲೂ ಸಂಭೋಧಿಸಲಾಗುತ್ತದೆ. ಜಾತಿಯ ಹುಟ್ಟಿನ ಬಗೆಗೆ ಒಂದು ಪುರಾಣ ಇದೆ. ಶಿವ ಬಹುಕಾಲದವರೆಗೆ ತಪಸ್ಸು ಮಾಡುತ್ತಾ ಕುಳಿತಿರಬೇಕಾದರೆ ಕೂದಲು ಅವನ ದೇಹದ ಮೇಲೆ ಸಾಕಷ್ಟು ಬೆಳೆಯಿತು. ಧ್ಯಾನ ಮುಗಿದ ಮೇಲೆ ಅವನು ಪಾರ್ವತಿಯನ್ನು ಮದುವೆಯಾಗಬೇಕಿತ್ತು. ಅವನ ಮೈಮೇಲೆ ಕೂದಲಿರುವುದನ್ನು ಗಮನಿಸಿ ಅವನು ತನ್ನ ಕಣ್ಣಿನಿಂದ ವ್ಯಕ್ತಿಯೊಬ್ಬನನ್ನು ಸೃಷ್ಟಿಸಿದ ಅವನು ಶಿವನನ್ನು ಸರುಪಿಯನ್ನಾಗಿಸಿದ ಅವನ ಸೇವೆಯಿಂದ ಸಂತೃಪ್ತನಾಗಿ ಅವನಿಗೆ ಸೃಷ್ಟಿಸಿದ ಅವನನ್ನು ನಯನಿಗ ಎಂದು ಕರೆಯಲಾಯಿತು. ನಿನ್ನ ಕುಟಂಬಕ್ಕೆ ಶುಭವಾಗಲಿ, ಧಾರ್ಮಿಕ, ಮದುವೆ ಹಾಗೂ ಇತರೆ ಸಮಾರಂಭಗಳಲ್ಲಿ ನಿನಗೆ ಗೌರವ ಸಿಗಲಿ ಎಂದು ಹರಸಿದ ಇವರ ಇತಿಹಾಸ ಹಡಪದ ಅಪ್ಪಣ್ಣನಿಂದ[೨೬೨] ಪ್ರಾರಂಭವಾಗುತ್ತದೆ.

ಕ್ರಿ.ಶ. ೧೧೪೯ರ ಹರಿಹರದ[೨೬೩] ಶಾಸನದಲ್ಲಿ ಚಾಲುಕ್ಯ ಚಕ್ರವರ್ತಿ ಜಗದೇಕಮಲ್ಲನ ಆಳ್ವಿಕೆಯ ಹತ್ತನೇ ವರ್ಷದಲ್ಲಿ ಶಂಕರನಾರಾಯಣದೇವರಿಗೆ ಪೂಜೆ, ನೈವೇದ್ಯ, ಸತ್ರಕ್ಕೆ ಎಂದು 'ಗುತ್ತಿವೂರನ್ನು' ಹಡಪದ ಆದಿತ್ಯಭಟ್ಟರಿಗೆ ದಾನ ನೀಡಿದ ಉಲ್ಲೇಖವಿದೆ. ಕ್ರಿ.ಶ. ೧೫೬೧ರ ಹರಿಹರದ[೨೬೪] ಶಾಸನವು. ಹರಿಹರ ಪತ್ನಿಯರಾದ ಮಹಾಲಕ್ಷ್ಮೀ ಮತ್ತು ಪಾರ್ವತಿದೇವಿಯರ ರಥೋತ್ಸವಕ್ಕಾಗಿ ಹಡಪದ ಬೈಯಪ್ಪನಾಯಕರ ಮಕ್ಕಳು ಕೃಷ್ಣಪ್ಪನಾಯಕರ ಕಾರ್ಯಕರ್ತರಾದ ವೇಲೂರ ಕಾಳಪ್ಪನಾಯಕರ ಮಕ್ಕಳು ಮಾರ್ಗಸಹಾಯನಾಯಕರು ಗಂಗನರಸಿ ಗ್ರಾಮವನ್ನು ದಾನ ನೀಡಿದ ವಿಷಯನ್ನು ತಿಳಿಸುತ್ತದೆ.

ಕಮ್ಮಾರರು: ಕಬ್ಬಿಣದ ಕೆಲಸವನ್ನು ಮಾಡುತ್ತಿದ್ದವರು ಕಮ್ಮಾರರು[೩೬೫] ಇವರು ವಿಶ್ವಕರ್ಮ ಕುಲಕ್ಕೆ ಸೇರಿದವರಾಗಿದ್ದರು. ಇವರ ಕುರಿತು ಹರಿಹರದ ಶಾಸನಗಳು ಹೆಚ್ಚಿನ ಮಾಹಿತಿಯನ್ನು ತಿಳಿಸದಿದ್ದರೂ ಬನ್ನಿಕೋಡಿನ[೩೬೬] ಶಾಸನವೊಂದು ಪೂರ್ವದ ಸಂಗೆಯನಾಯಕನ ಆಳು ಬನ್ನಿಕೋಡಿನ ತುರುಗಳನ್ನು ಹೊಡೆದುಕೊಂಡು ಹೋಗಿದ್ದರಿಂದ ಬನ್ನಿಕೋಡಿನ ಬೀರಬೋವನ ಮಗ ಬೊಮ್ಮಯನಾಯಕನು ಕಬ್ಬಿಣದ ಕೋಲಿನಿಂದ ಅವನೊಂದಿಗೆ ಹೋರಾಡಿ ತುರುಗಳನ್ನು ಮರಳಿ ಪಡೆದು ಸ್ವರ್ಗಸ್ಥನಾದ ಎಂಬ ಉಲ್ಲೇಖವಿದೆ. ಹಾಗೆಯೇ ಹರಿಹರದ[೩೬೭] ಒಂದು ಶಾಸನದಲ್ಲಿ ಹರಿಹರ ದೇವರಿಗೆ ಬೆಳ್ಳಿಯ ಹರಿವಾಣವನ್ನು ದಾನ ನೀಡಿದ ಉಲ್ಲೇಖವಿದೆ. ಕಬ್ಬಿಣದ ಕೋಲು ಮತ್ತು ಬೆಳ್ಳಿಯ ಹರಿವಾಣ ತಯಾರಿಕೆಯನ್ನು ಕಮ್ಮಾರರೇ ಮಾಡಿರಬಹುದೆಂದು ಊಹಿಸುತ್ತಾ ಈ ಪರಿಸರದಲ್ಲಿ ಕಮ್ಮಾರರು ಇದ್ದಿರಬಹುದೆಂದು ಹೇಳಬಹುದು. ಇದಕ್ಕೆ ಪೂರಕವಾಗಿ ಅಕ್ಕಸಾಲಿಗರ ಕುರಿತು ಹರಿಹರದ ಒಂದು ಶಾಸನದಲ್ಲಿ ಹರಿಹರದೇವರ ಮನೆಯ ಅಕ್ಕಸಾಲೆ[೩೬೮] ವೀರೋಜನ ಮಗನಾದ ಕರಿಯ ತಿಪ್ಪೋಜನು ಶಾಸನವನ್ನು ತಿದ್ದಿದ ಬಗ್ಗೆ ಉಲ್ಲೇಖಿಸುತ್ತದೆ.

ಸೆಟ್ಟಿಗಳು: ಸಂಸ್ಕೃತದ ವಣಜ ಶ್ರೀಷ್ಠನ್ ಪದಗಳ ಕನ್ನೆ ರೂಪ ಬಣಂಜಿಗ, ಸೆಟ್ಟಿ ಮೂಲದಲ್ಲಿ ವಣಿಜ ವೃತ್ತಿಸೂಚಕ, ಸೆಟ್ಟಿ ಪ್ರತಿಷ್ಠಾ ಸೂಚಿಯಾಗಿದ್ದು ಕ್ರಮೇಣ ಈ ಎರಡೂ ಪದಗಳು ವೃತ್ತಿವಾಚಿಯಾಗಿ ನಂತರ ಜಾತಿ ವಾಚಕವಾಗಿ ಬೆಳೆದವು ಇವರನ್ನು ಬಿರುದ ಬಣಂಜಿಗ, ವೀರಬಣಂಜಿಗ, ಸ್ಥಳದ ಹಣ್ಣವಣಿಗ, ತಳರದಯ್ಯೂರ್ವರು ವಿಭೂತಿಕುಲ ಜಾತಿ[೩೬೯] ಎಂದು ಶಾಸನಗಳು ಗುರುತಿಸಿವೆ. ಇಂತಹ ಬಣಜಿಗರು ಸ್ವಂತ ಗ್ರಾಮದಲ್ಲಿ ವ್ಯಾಪಾರ ಮಾಡುವುದಲ್ಲದೆ ಅನ್ಯಗ್ರಾಮಗಲ್ಲಿ ವ್ಯಾಪಾರಕ್ಕಾಗಿ ವಸ್ತುಗಳನ್ನು ಸಾಗಿಸಲು ಎತ್ತು, ಕುದುರೆ, ಕತ್ತೆ ಮುಂತಾದವುಗಳನ್ನು ಬಳಸುತ್ತಿದ್ದರು ಇವರನ್ನು ಸೆಟ್ಟಿ ಎಂದು ಕರೆದಿರುವುದು ಶಾಸನಗಳಿಂದ ತಿಳಿದುಬರುತ್ತದೆ.

ಕ್ರಿ.ಶ. ೧೫೧೬ರ[೩೭೦] ಮಲೆಬೆನ್ನೂರು ಶಾಸನವು ಶ್ರೀ ವೀರಭದ್ರ ಮಹಾರಾಯರು ತಮ್ಮ ವಂಶಕ್ಕೆ ಹಾಗೂ ತನಗೆ ಒಳ್ಳೆಯದಾಗಲಿ ಎಂದು ಸ್ಥಳೀಯ ಮದುವೆಯ ಸುಂಕವನ್ನು ಬಿಟ್ಟುಕೊಡುವ ಸಂದರ್ಭದಲ್ಲಿ ಸಹಾಯಕರಾದವರು ಕೂಲಂಬಿಯ ದೊಡ್ಡಗೌಡ, ಬೆನ್ನೂರ ಸೂರಿಸೆಟ್ಟಿ ಮುಂತಾದವರು ಒಂದಾಗಿ ಮಾಡಿದ ಉಲ್ಲೇಖವಿದೆ. ಇದೇ ಗ್ರಾಮದ ಇನ್ನೊಂದು ಶಾಸನದಲ್ಲಿ ಆದಿಯಪ್ಪನಾಯಕರು ಮಲೆಬೆನ್ನೂರು ಗ್ರಾಮದ ಕೆಸೆಟೆ ಪಟಣಸ್ವಾಮಿಗೌಡ ಮತ್ತು ಪ್ರಜೆಗಳಿಗೆ ಕಬ್ಬಿನ ಸುಂಕವನ್ನು ಬಿಟ್ಟ ಬಗ್ಗೆ ತಿಳಿಸುತ್ತದೆ.[೩೭೧] ಹೀಗೆ ಕಾಳಿಸೆಟ್ಟಿ[೩೭೨] ಸ್ಥಳ ಸೆಟ್ಟಿಗಳು[೩೭೩] ಹಾಗೂ ಕೋಲಬ್ಬ ಸೆಟ್ಟಿ[೩೭೪] ಗಳೆಂದು ಹರಿಹರದ ಶಾಸಗಳು ಉಲ್ಲೇಖಿಸುತ್ತವೆ ಇವರು ಅಂದರೆ ಸೆಟ್ಟಿಗಳು ವರ್ತಕರು ಆಗಿದ್ದರು.

ಕುಂಬಾರರು ಮತ್ತು ಬಡಿಗಳು: ಕುಂಬಾರ ಜನಾಂಗವು ಕುಂಬಾರಿಕೆ ವೃತ್ತಿಯ ಮೇಲೆ ಜೀವನ ಸಾಗಿಸುತ್ತಿದ್ದರು ಅವರ ವೃತ್ತಿಯೇ ಕುಂಬಾರಿಕೆ ಅಂದರೆ ಮಣ್ಣಿನ ಮಡಿಕೆಗಳನ್ನು ತಯಾರಿಸಿ ಮಾರುತ್ತಿದ್ದರು. ಇವು ಪ್ರಾಚೀನ ಕಾಲದಲ್ಲಿ ಮಾನವನಿಗೆ ಅತ್ಯಂತ ಅವಶ್ಯಕತೆಯ ವಸ್ತುಗಳಾಗಿದ್ದವು,

ಅಡುಗೆ ತಯಾರಿಸಲು, ಧಾನ್ಯ ಸಂಗ್ರಹ, ನೀರಿನ ಶೇಖರಣೆಗಾಗಿ ಉಪಯೋಗವಾಗುತ್ತಿದ್ದವು. ಇವರಿಗೆ ಸಂಬಂಧಿಸಿದಂತೆ ಹರಿಹರದ ಶಾಸನಗಳು ಉಲ್ಲೇಖಿಸುವುದಿಲ್ಲವಾದರೂ ದೇವರಬೆಳಕೆರೆಯ[೬೭೫] ಶಾಸನವೊಂದರಲ್ಲಿ 'ಸಿತಾಳಗಡುಗೆ' ಎಂಬ ಉಲ್ಲೇಖವಿದೆ ಗಡುಗೆ ಮಡಿಕೆಯ ಇನ್ನೊಂದು ರೂಪವಾದುದರಿಂದ ಇಲ್ಲಿ ಉಲ್ಲೇಖಿಸಿದ್ದೇನೆ.

ಕುಂಬಾರರಂತೆ ಬಡಗಿಗಳೂ ಶ್ರಮಜೀವಿಗಳು, ಮರಗಳಿಂದ ವಸ್ತುಗಳನ್ನು ಕೆತ್ತನೆ ಕೆಲಸ ಮಾಡುವ ವೃತ್ತಿ ಇವರದಾಗಿತ್ತು. ಅಲ್ಲದೆ ಒಕ್ಕಲಿಗನಿಗೆ ಬೇಕಾಗುವ ಎಲ್ಲಾ ಸಲಕರಣೆಗಳನ್ನು ತಯಾರಿಸುವಲ್ಲಿ ಇವರು ಪ್ರಮುಖ ಪಾತ್ರವಹಿಸಿದ್ದಾರೆ. ಕುಂಟೆ, ಕೂರಿಗೆ, ನೇಗಿಲು ಮುಂತಾದವುಗಳು ಅಲ್ಲದೆ ಮಾನವನ ಆಶ್ರಯಕ್ಕಾಗಿಯೇ ಮನೆಗಳನ್ನು ಅವಲಂಬಿಸಿದ್ದು, ಮನೆಗಳಿಗೆ ಬೇಕಾಗುವ ಬಾಗಿಲು, ಕಿಟಕಿ, ಜಂತಿ ಮುಂತಾದವುಗಳನ್ನು ತಯಾರಿಸುವ ಕಸುಬು ಇವರದಾಗಿತ್ತು. ಇಂತಹ ಬಡಿಗರಿಗೆ ಹಲವಾರು ಹೆಸರುಗಳುಂಟು ವಿಶ್ವಕರ್ಮ, ಬಡಿಗ, ಪಂಚಾಳಿ ಇತ್ಯಾದಿ ಹೆಸರುಗಳಿಂದ ಕರೆಯುತ್ತಿದ್ದರು, ಹರಿಹರ ತಾಲೂಕಿನ ಶಾಸನಗಳು ನೇರವಾಗಿ ಬಡಿಗಿಗಳ ಬಗ್ಗೆ ಉಲ್ಲೇಖಿಸುವುದಿಲ್ಲ. ಆದರೆ ಉಳುವ ಭೂಮಿಯ ಉಲ್ಲೇಖ ಬಂದಿದೆ ಅಂದರೆ ಅದಕ್ಕೆ ಸಂಬಂಧಿಸಿದ ಕೃಷಿ ಉಪಕರಣಗಳನ್ನು ಇವರು ತಯಾರಿಸಿಕೊಡುತ್ತಿದ್ದರು ಎಂದು ಊಹಿಸುವುದರ ಆಧಾರದ ಮೇಲೆ ಇಲ್ಲಿ ಬಡಗಿಗಳು ಇದ್ದರು ಎಂದು ಹೇಳಬಹುದು.

ಸ್ತ್ರೀಯರ ಸ್ಥಾನಮಾನ: ಕರ್ನಾಟಕ ಸ್ರೀಯರ ಕುರಿತಾದಂತೆ ಹೆಚ್ಚು ತೆರೆದ ಮನಸ್ಸಿನಿಂದ ಇದ್ದಂತೆ ತೋರುತ್ತದೆ. ಸಾಮಾಜಿಕವಾಗಿ, ರಾಜಕೀಯವಾಗಿ. ಧಾರ್ಮಿಕವಾಗಿ, ಹಾಗೂ ಆರ್ಥಿಕವಾಗಿ ಸ್ತ್ರೀಯರು ಉನ್ನತ ಸ್ಥಿತಿಯಲ್ಲಿದ್ದರು. ಈ ಸ್ಥಿತಿ ಎಲ್ಲಾ ಸ್ತ್ರೀಯರಿಗೂ ಅನ್ವಯಿಸಬಹುದೆ ಎಂಬ ಪ್ರಶ್ನೆಗೆ ಸ್ಪಷ್ಟ ಉತ್ತರಗಳಿಲ್ಲ. ಏಕೆಂದರೆ ಸಾಮಾನ್ಯವಾಗಿ ಶಾಸನಗಳಲ್ಲಿ ಉಲ್ಲೇಖಗೊಳ್ಳವಂತಹ ಸ್ತ್ರೀ ತೀರ ಸಾಮಾನ್ಯ ಮಹಿಳೆಯಾಗಿರದೆ ಆರ್ಥಿಕವಾಗಿ ಅಂದಿನ ಸಮಾಜದ ಮುಖ್ಯ ಭೂಮಿಕೆಯಲ್ಲಿದ್ದವಳು ಎಂದು ಹೇಳಬಹುದು. ಶಾಸನಗಳಲ್ಲಿ ಪಟ್ಟದರಸಿ, ಢಣಾಯಕಿ, ಸೂಳೆ ಮೊದಲಾದ ಉಲ್ಲೇಖಗಳನ್ನು ನೋಡುತ್ತೇವೆ. ಪ್ರತಿಯೊಬ್ಬರೂ ಕೂಡ ಅಂದಿನ ಸಾಮಾಜಿಕ ಅವಶ್ಯಕತೆಗೆ ಅನುಗುಣವಾಗಿ ಕಾರ್ಯನಿರ್ವಹಿಸುತ್ತಿದ್ದರು. ಶ್ರೀಮಂತ ಸ್ತ್ರೀಯರೂ ಕೂಡ ಸಾಮಾಜಿಕವಾಗಿ, ಧಾರ್ಮಿಕವಾಗಿ ಮುಂಚೂಣಿಯಲ್ಲಿದ್ದು ಪುರುಷರಿಗೆ ಸರಿಸಮಾನವಾಗಿ ದಾನ ದತ್ತಿಗಳನ್ನು ನೀಡುತ್ತಿದ್ದರು. ದೇವಾಲಯ ನಿರ್ಮಾಣ, ಸಂತೆ ಹಾಕಿಸುವುದು, ದೇವರ ಅಂಗ,ರಂಗ ಭೋಗದಲ್ಲಿ ಹಾಡು ಹೇಳುವುದು, ಪಾತ್ರ ಮಾಡುವುದು, ಹೀಗೆ ಹಲವಾರು ಚಟುವಟಿಕೆಗಳಲ್ಲಿ ಸ್ತ್ರೀಯರು ಸಾಮಾಜಿಕವಾಗಿ ಮುಂಚೂಣಿಯಲ್ಲಿದ್ದರು ಎಂದು ಹೇಳಬಹುದು.

ಕ್ರಿ.ಶ. ೧೧೨೫ರ ಬನ್ನಿಕೋಡದ[೬೭೬] ಶಾಸನದಲ್ಲಿ ಚಾಲುಕ್ಯ ಜಗದೇಕಮಲ್ಲನ 'ರಾಜನಾರಾಯಣ ವಕ್ಷಸ್ಥಳ ಲಕ್ಷ್ಮೀನಿಳಯಮಪ್ಪ ಶ್ರೀ ಪಟ್ಟದರಸಿ ಸೋವಲದೇವಿ' ಎಂದು ಚಾಲುಕ್ಯ ಜಗದೇಕಮಲ್ಲನ ಪಟ್ಟದರಸಿಯನ್ನು ಹೆಸರಿಸಿದೆ. ಇವಳು ಉಚ್ಚಂಗಿ ನೆಲೆವೀಡಿನಲ್ಲಿದ್ದಂತಹ ಸಂದರ್ಭದಲ್ಲಿ ಸಾಮಂತರಸು ವಿಜಯಪಾಂಡ್ಯದೇವನ ಸಮ್ಮುಖದಲ್ಲಿ ಸ್ವಯಂಭು ಕಲಿದೇವ ಮಲ್ಲಿಕಾರ್ಜುನ ದೇವರ ಧೂಪ,

ದೀಪ, ನೈವೇದ್ಯ, ನಂದಾದೀವಿಗೆಗೆ ಬೆದ್ದಲು, ಗದ್ದೆ ಇತ್ಯಾದಿಗಳನ್ನು ಹಾಗೂ ಸ್ಥಾನಪತಿ ಭಾನುಶಕ್ತಿ ಪಂಡಿತರಿಗೆ ಧಾರಪೂರ್ವಕವಾಗಿ ದಾನ ನೀಡಿದರು, ಎಂದು ತಿಳಿದು ಬರುತ್ತದೆ. ಕ್ರಿ.ಶ. ೧೧೬೧ರ ಗಂಗನರಸಿ[೩೭೭] ಶಾಸನದಲ್ಲಿ ಕಳಚೂರ್ಯ ಬಿಜ್ಜಳ ದೇವನ ಕಾಲದ ಧಾರ್ಮಿಕ ಚಟುವಟಕೆಗಳಲ್ಲಿ ಅವನ ಸೇನಾಪತಿ ಥಣ್ಣಾಯಕನ ಅರ್ಧಾಂಗಿ ಲಕ್ಷ್ಮೀ ಮಹಾದೇವಿ ಡಣ್ಣಾಯಕಿತಿಯು, ತುಂಗಭದ್ರಾ ತೀರದ ಬ್ರಹ್ಮತೀರ್ಥದ ಅರಸೀಕೆರೆಯ ಮಾದೇಶ್ವರ ದೇವರಿಗೆ ಹಾಗೂ ಸ್ಥಾನಪತಿ ತೇಜೋನಿಧಿ ಪಂಡಿತರಿಗೆ ಭೂದಾನವನ್ನು ಬಿಟ್ಟ ವಿವರಣೆ ಇದೆ. ಸಾಮಾನ್ಯವಾಗಿ ಆ ಕಾಲದಲ್ಲಿ ದಂಡನಾಯಕರ ಪತ್ನಿಯರನ್ನು ದಂಡನಾಯಕಿ, ಅಥವಾ ಡಣ್ಣಾಯಕಿತಿ ಎಂದು ಹೆಸರಿಸಲಾಗುತ್ತಿತ್ತು ಎಂಬ ಅಂಶ ಈ ಮೇಲಿನ ಉಲ್ಲೇಖದಿಂದ ತಿಳಿಯುತ್ತದೆ.

ಇನ್ನೂ ಕೆಲವು ಉಲ್ಲೇಖಗಳು ಸತಿಸಹಗಮನದ ಅಂಶಗಳನ್ನು ತಿಳಿಸುತ್ತವೆ. ಕ್ರಿ.ಶ. ೧೩೮೨ರ ವಾಸನದ[೩೭೮] ಶಾಸನದಲ್ಲಿ ಶ್ರೀ ಮುದೆಯ ಹೆಗ್ಗಡೆಯರ ಮಗ ಬಯಿಚೆಯ ಹೆಗ್ಗಡೆಯ ಮಗ ಉಂಕಗೌಡನು ಸ್ವರ್ಗಸ್ಥನಾದನು. ಆ ಉಂಕಗೌಡನ ಅರಸಿಯರಲ್ಲಿನ ಮಹಾಸತಿ ದೇಮಾಯಿಯು ಅಗ್ನಿ ಪ್ರವೇಶ ಮಾಡಿ ಸುರಲೋಕ ಪ್ರಾಪ್ತಳಾದಳು ಎಂದು ತಿಳಿಸುತ್ತದೆ. ಹಾಗೆಯೇ ಇದೇ ಗ್ರಾಮದ ಕ್ರಿ.ಶ. ೧೩೯೭ರ[೩೭೯] ಶಾಸನದಲ್ಲಿ ಮಾದಿಹೆಗ್ಗಹೆಡೆಯ ಮಗ ಬಯಿಚೆಯ ಹೆಗ್ಗಡೆ, ಆತನ ಮಗ ಉಂಕಗವುಡ, ಆತನ ಮಗ ಬೊಮ್ಮಿಯ ಗೌಡನು ಸ್ವರ್ಗಸ್ಥನಾದ ಅತನ ಸತಿ ಬಾಯಿದೇವಿ ಲಖಿಮಾಯಿಯು ಅಗ್ನಿ ಪ್ರವೇಶ ಮಾಡಿ ಸುರಲೋಕ ಪ್ರಾಪ್ತಳಾದಳು, ಹೀಗೆ ಅಂದಿನ ಸ್ತ್ರೀಯರು ಆಳ್ವಿಕೆ ಮತ್ತು ಆಳುಕು ಎರಡನ್ನು ನಿಭಾಯಿಸಿದ ಉಲ್ಲೇಖಗಳು ಈ ರೀತಿಯ ಶಾಸನಗಳಿಂದ ತಿಳಿದುಬರುತ್ತದೆ.

ಪಾಪ-ಪುಣ್ಯಗಳ ಕಲ್ಪನೆ: ಪ್ರತಿಯೊಂದು ಸಮಾಜದಲ್ಲಿಯೂ ಒಳ್ಳೆಯ ಮತ್ತು ಕೆಟ್ಟ ಅಂಶಗಳು ಇದ್ದೆ ಇರುತ್ತವೆ. ನಮ್ಮ ಸುತ್ತಮುತ್ತಲಿನ ಸಮಾಜದತ್ತ ಗಮನ ಹರಿಸಿದಾಗ ಇಂತಹ ಸಾಮಾಜಿಕ ಪ್ರಕ್ರಿಯೆಗಳ ಅನುಭವವಾಗುತ್ತದೆ. ಹೀಗಾಗಿ ಪಾಪ ಮತ್ತು ಪುಣ್ಯಗಳ ಕಲ್ಪನೆಗಳು ಜನರ, ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ ಕೆಟ್ಟ ಉದ್ದೇಶಗಳಿಂದ ನಿಯಂತ್ರಣ ಹೊಂದಬೇಕೆನ್ನುವ ದೃಷ್ಟಿಯಿಂದ ಪಾಪ-ಪುಣ್ಯ ಮೊದಲಾದವುಗಳು ಉದ್ಭವವಾದವು ಎಂದು ಹೇಳಬಹುದು. ದಾನವನ್ನು ನೀಡುವ ಮುಖ್ಯ ಉದ್ದೇಶ ತಮಗಾಗಲಿ ಅಥವಾ ಪೂರ್ವಜರಿಗೆ ಪುಣ್ಯಲಭಿಸಲಿ ಎಂಬುದಾಗಿತ್ತು. ದಾನಕ್ಕೆ ಸಂಬಂಧಿಸಿದಂತೆ ಹರಿಹರ ತಾಲೂಕಿನಲ್ಲಿ ದೊರೆತ ಶಾಸನಗಳಲ್ಲಿ ದಾನ ಶಾಸನಗಳೇ ಹೆಚ್ಚಿನ ಸಂಖ್ಯೆಯವಾಗಿವೆ. ಕ್ರಿ.ಶ. ೧೧೬೨ರ ಗಂಗನರಸಿ[೩೮೦] ಶಾಸನದಲ್ಲಿ ಅರಸೀಕೆರೆಯ ಕಲಿದೇವ ಸ್ವಾಮಿಯ ನಂದಾದೀವಿಗೆಯು ಸೂರ್ಯ ಚಂದ್ರರಿರುವವರೆಗೆ ಬೆಳಗಲಿ ಎಂದು ತೇಜೋನಿಧಿಪಂಡಿತರಿಗೆ ಗಾಣವೋಲೆಯನ್ನು ಧಾರಾಪೂರ್ವಕವಾಗಿ ನೀಡಲಾದ ದಾನ ಶಾಸನ ಇದಾಗಿದೆ ಇದನ್ನು ಪಾಲಿಸದಿರುವವನು ಗಂಗೆ ವಾರಾಣಾಸಿ ಕುರುಕ್ಷೇತ್ರದಲ್ಲಿನ ಬ್ರಾಹ್ಮಣರನ್ನು ವಧಿಸಿದ ಪಾಪ ಫಲಪ್ರದವಾಗುವುದೆಂದು ಉಲ್ಲೇಖಿಸಲಾಗಿದೆ. ಕ್ರಿ.ಶ. ೧೧೧೯ರ ಜಿಗಳಿ[೩೮೧] ಶಾಸನವು ಎಲವಟ್ಟಿಯ ಸೋಮೇಶ್ವರ ದೇವರಿಗೆ ಹಾಗೂ ನಾರಾಯಣದೇವರಿಗೆ ಗದ್ದೆ,

ಭೂಮಿಯನ್ನು ದಾನ ನೀಡಿದ ಉಲ್ಲೇಖವಿರುವ ಈ ಶಾಸನದ ಕೊನೆಯಲ್ಲಿ ದಾನವನ್ನು ಪೋಷಿಸಿದವರಿಗೆ ಗಂಗೆ ವಾರಣಾಸಿಯಲ್ಲಿ ಸಾವಿರ ಕಪಿಯಲೆಯನ್ನು ದಾನಗೈದು ಫಲದೊರಕಲಿ ಇದನ್ನು ಅಲ್ಲಗಳೆದವರಿಗೆ ಗಂಗಾಸಾಗರ, ಯಮುನಾ ಸಂಗಮದಲ್ಲಿ ಬ್ರಾಹ್ಮಣರನ್ನು ಕೊಂದ ಪಾಪ ಬರಲಿ ಎನ್ನುವ ಎಚ್ಚರಿಕೆಯನ್ನು ನೀಡಲಾಗಿದೆ.

ಕ್ರಿ.ಶ. ೧೫೨೮ರ ಮಲೇಬೆನ್ನೂರು[೩೮೨] ಶಾಸನದಲ್ಲಿ ಆದಿಯಪ್ಪನಾಯಕರನ್ನು ಮಲೆಬೆನ್ನೂರು ಗ್ರಾಮದ ಕೆಸೆಟಿ ಪಟ್ಟಣಸ್ವಾಮಿಗೌಡ ಮತ್ತು ಪ್ರಜೆಗಳಿಗೆ ಕಬ್ಬಿನ ಸುಂಕವನ್ನು ಬಿಟ್ಟ ಧರ್ಮಶಾಸನವಾಗಿದ್ದು. ಇದನ್ನು ಅಡ್ಡಿಪಡಿಸಿದವರು ತಂದೆ-ತಾಯಿಗಳು ಸಾವಿರ ವರ್ಷ ಪರ್ಯಂತ ಬ್ರಾಹ್ಮಣರ ಸಾವಿರ ಕವಿಲೆಯನ್ನು ವಾರಾಣಾಸಿಯಲ್ಲಿ ಕೊಂದ ಪಾಪಕ್ಕೆ ಹೋಗುವರು ಎಂದಿದೆ. ಹಾಗೆಯೇ ಕ್ರಿ.ಶ. ೯೯೪ರ ವಾಸನ[೩೮೩] ಶಾಸನವು ಅಹಮಲ್ಲ ದೇವನ ಕಾಲದ ಈ ಶಾಸನದಲ್ಲಿ ಬ್ರಹ್ಮರಾಸಿ ಪಂಡಿತರಿಗೆ ಆಮ್ನಾಲಯದ ವಾಸನದ ತೀರ್ಥದ ಖರ್ಚಿಗಾಗಿ ಪುಲ್ಲುಣಿಯ ಮರ್ಯಾದೆಗೆ ಸಿರಿಗೆರೆ, ಕಿರುಗೇರಿ ಮುಂತಾದ ಗ್ರಾಮಗಳನ್ನು ನೀಡಿದ ದಾನ ಶಾಸನ ಇದಾಗಿದ್ದು. ಇದನ್ನು ಕಾಪಾಡಿದಾತನಿಗೆ ಅಶ್ವಮೇದವನ್ನು ಮಾಡಿದ ಪುರುಷಾರ್ಥ ಫಲದೊರಕಲಿ ಹಾಗೂ ಇದನ್ನು ವಿರೋಧಿಸಿದವನಿಗೆ ವಾರಾಣಾಸಿ, ಕುರುಕ್ಷೇತ್ರಗಳಲ್ಲಿ ೧೦೦೦ ಕವಿಲೆಯನ್ನು ಕೊಂದ ಪಂಚ ಮಹಾಪಾಪಗಳು ಪ್ರಾಪ್ತವಾಗಲಿ ಎನ್ನುವ ಎಚ್ಚರಿಕೆ ಇದರಲ್ಲಿದೆ. ಕ್ರಿ.ಶ. ೧೨೨೩ರ ಹರಿಹರದ[೩೮೪] ಶಾಸನವೊಂದರಲ್ಲಿ ದಾನಮಾಡಿದ ಭೂಮಿಯನ್ನು ಅಪಹರಿಸುವವನು ಅರವತ್ತು ಸಾವಿರ ವರ್ಷ ಅಮೇಧ್ಯದಲ್ಲಿ ಹುಳುವಾಗಿ ಹುಟ್ಟುವನೆಂಬ ಉಲ್ಲೇಖವಿದೆ. ಇದೇ ಶಾಪಾಶಯ ಕ್ರಿ.ಶ. ೧೪೧೦ರ ಹರಿಹರದ ಇನ್ನೊಂದು ಶಾಸನದಲ್ಲಿಯೂ ಉಲ್ಲೇಖವಾಗಿದೆ.

ಕ್ರಿ.ಶ. ೧೫೫೫ರ[೩೮೫] ವಿಜಯನಗರ ಕಾಲದಲ್ಲಿ ಸದಾಶಿವದೇವ ಮಹಾರಾಯರ ಸಾಮಂತ ಹಡಪದ ಸಿಂಧುಗೋವಿಂದ, ಶೀತಕರಗಂಡ, ಧವಳಾಂಕಭೀಮ, ಮಣಿನಾಗ ಪುರಾವಧೀಶ್ವರ, ಬೈಯಪ್ಪನಾಯಕ ಮಕ್ಕಳಾದ ಕೃಷ್ಣಪ್ಪನಾಯಕರು ತಮ್ಮ ತಂದೆ ತಾಯಿಗೆ ಪುಣ್ಯವಾಗಲೆಂದು ಹರಿಹರ ಸ್ವಾಮಿಗೆ ಅತಿರಸ ನೈವೇದ್ಯವನ್ನು ಸಮರ್ಪಿಸಲು ಬೆಳ್ಳಿಯ ಹರಿವಾಣವನ್ನು ನೀಡಿ ಕೃತಾರ್ಥನಾದನು. ಈ ಧರ್ಮವನ್ನು ಪಾಲಿಸದವನಿಗೆ ಗಂಗೆಯಲ್ಲಿ ಗೋಬ್ರಾಹ್ಮಣ, ಮಾತಾಪಿತೃಗಳ ವಧಿಸಿದ ಪಾಪ ಬರಲಿ ಎಂಬ ಉಲ್ಲೇಖವಿದೆ. ಹಾಗೆಯೇ ಕಾಲಮಾನವಿಲ್ಲದ ಹಳ್ಳಿಹಾಳು ಗ್ರಾಮದ ಶಾಸನವೊಂದರಲ್ಲಿ ಯಿಬ್ಬೆಯನಾಯ್ಕನು ಮಲ್ಲಿಕಾರ್ಜುನದೇವರು, ಬುವೇಶ್ವರದೇವರ ವಿತ್ತಿಗಳನ್ನು ಬೀರೂರ. ಸಿದ್ಧದೇವರ ಮಗ ವೀರಪ್ಪಗೆ ಧಾರಾಪೂರ್ವಕವಾಗಿ ಬಿಟ್ಟಿದ್ದಾಗಿ ಉಲ್ಲೇಖಿಸಲಾಗಿದೆ. ಈ ದಾನಕ್ಕೆ ಯಾರಾದರೂ ಚ್ಯುತಿ ತಂದರೆ ಅವರಿಗೆ ಸಾವಿರ ಬ್ರಾಹ್ಮಣರನ್ನು ಕೊಂದ ಪಾಪ ಹಾಗೂ ೧೭೦೦ ಗೋವುಗಳನ್ನು ಕೊಂದ ಫಲ ಬರಲಿ ಎಂದು ಹೇಳಲಾಗಿದೆ. ಈ ಪಾಪ-ಪುಣ್ಯಗಳ ಕಲ್ಪನೆ ತನ್ನ ಶಾಸನವನ್ನು ಆಳು ಮಾಡದಿರಲಿ ಎಂಬ ಉದ್ದೇಶದಿಂದ ಶಾಸನದ ಕೊನೆಯಲ್ಲಿ ಬರೆಸುತ್ತಿದ್ದರು.

ಸಮಾಜದ ಹಿತಾಸಕ್ತಿಯನ್ನು ಕಾಪಾಡುವುದೇ ಅಂದಿನ ಜನರ ಮುಖ್ಯ ಉದ್ದೇಶವಾಗಿತ್ತು ಪ್ರಾಚೀನ ಕಾಲದಲ್ಲಿ ಮಾನವರು ಧರ್ಮದ ಕಾರ್ಯದಲ್ಲಿ ಬಹಳಷ್ಟು ನಂಜಿಕೆಯಿಟ್ಟಿದ್ದರು, ತಮ್ಮ ನಾಡಿನ ಹಿತಕ್ಕಾಗಿ ತಮ್ಮನ್ನು ತಾವು ತೊಡಗಿಸಿಕೊಂಡು ಆ ನಾಡನ್ನು ಸುಧಾರಿಸುವ ಪ್ರಯತ್ನವನ್ನು ಮಾಡುವುದು ಪ್ರತಿಯೊಬ್ಬರ ಕರ್ತವ್ಯ ಎಂದು ಭಾವಿಸಿದ್ದರು. ಈ ಮೂಲಕ ಹರಿಹರ ತಾಲೂಕಿನ ಶಾಸನ ಉಲ್ಲೇಖಿತ ಸಾಮಾಜಿಕ ಅಂಶಗಳು ಆಯಾ ರಾಜಾಡಳಿತಾವಧಿಯಲ್ಲಿ ಕೇವಲ ರಾಜಕೀಯ ದೃಷ್ಟಿಯಿಂದಷ್ಟೇ ಪ್ರಾಮುಖ್ಯತೆ ಪಡೆಯದೆ ಸಮಾಜದ ಶ್ರೇಣಿ ವ್ಯವಸ್ಥೆಯಲ್ಲಿನ ಕುಲಕಸುಬುಗಳಿಗೂ ದಾನ-ಧರ್ಮ ಅವಕಾಶಗಳನ್ನು ಕೊಡುತ್ತಾ ಬಂದಿದ್ದನ್ನು ಕಾಣಬಹುದು.

ಕೊನೆ ಟಿಪ್ಪಣಿಗಳು

೧. ಕೃಷ್ಣಕುಮಾರ್ ಸಿ.ಪಿ., ೨೦೦೧, ಶಾಸನಶಾಸ್ತ್ರ ಪ್ರವೇಶ, ಪು. ೨೫

೨. ಅದೇ, ಪು. ೨೫

೩. ಅದೇ, ಪು. ೩೨

೪. ಚಿದಾನಂದಮೂರ್ತಿ ಎಂ., ೨೦೧೫, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು. ೧೩

೫. ನಿಂಗಣ್ಣ ಪಿ.ಸಿ., (ಸಂ.), ೨೦೦೮, ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ, ಪು. ೩೨೫

೬. ಚಿದಾನಂದಮೂರ್ತಿ ಎಂ., ೨೦೧೫, ಪೂರ್ವೋಕ್ತ, ಪು. ೧೫

೭. ಕೃಷ್ಣಕುಮಾರ್ ಸಿ.ಪಿ., ೨೦೦೧, ಪೂರ್ವೋಕ್ತ, ಪು. ೫೬

೮. ಎ.ಕ.,ಸಂ.೧೧, ದಾವಣಗೆರೆ ತಾಲೂಕು ಶಾಸನಗಳು, ಪು. ೫೩-೨೧೯

೯. ಕಲಬುರ್ಗಿ ಎಂ.ಎಂ., ೧೯೮೯, ಕನ್ನಡ ನಾಮವಿಜ್ಞಾನ, ಪು. ೪೭

೧೦. ಗೋಪಾಲಕೃಷ್ಣ ವಿ., ೧೯೮೭, ಸ್ಥಳನಾಮ ಅಧ್ಯಯನಗಳು, ಪು. ೧

೧೧. ಎ.ಕ.,ಸಂ.೧೧, ಶಾ.ಸಂ, ೬೬, ದಾವಣಗೆರೆ

೧೨. ಅದೇ, ಶಾ.ಸಂ, ೨೫, ದಾವಣಗೆರೆ

೧೩. ಅದೇ, ಶಾ.ಸಂ, ೬೭, ದಾವಣಗೆರೆ

೧೪. ಅದೇ, ಶಾ.ಸಂ, ೬೪, ದಾವಣಗೆರೆ

೧೫. ಅದೇ, ಶಾ.ಸಂ, ೩೧, ದಾವಣಗೆರೆ

೧೬. ಅದೇ, ಶಾ.ಸಂ, ೨೨, ದಾವಣಗೆರೆ

೧೭. ಅದೇ, ಶಾ.ಸಂ, ೩೪, ದಾವಣಗೆರೆ

೧೮. ಅದೇ, ಶಾ.ಸಂ, ೩೯, ದಾವಣಗೆರೆ

೧೯. ಅದೇ, ಶಾ.ಸಂ, ೨೫, ದಾವಣಗೆರೆ

೨೦. ರವಿಕುಮಾರ ಕೆ. ನವಲಗುಂದ, ವರಾಹ ಲಾಂಛನ ತಾಮ್ರ ಪತ್ರೆ, ಪ್ರಜಾವಾಣಿ ಆಗಸ್ಟ್ ೦೯-೨೦೧೩

೨೧. ಎ.ಕ.ಸಂ,೧೧, ಶಾ.ಸಂ, ೩೮, ದಾವಣಗೆರೆ

೨೨. ಕಲಬುರ್ಗಿ ಎಂ.ಎಂ., (ಸಂ.), ೧೯೯೪, ಕರ್ನಾಟಕದ ಕೈಫಿಯತ್ತುಗಳು, ಪು. ೩ ೧೭೨

೨೩. ಅದೇ, ಪು. ೬೭

೨೪. ಅದೇ, ಪು. ೯೬

೨೫. ಎ.ಕ.,ಸಂ,೧೧, ಶಾ.ಸಂ, ೬೬, ದಾವಣಗೆರೆ, ಈ ಶಾಸನದಲ್ಲಿ ಉಲ್ಲೇಖವಾದ ಕರಂಜಪತ್ರ ಗ್ರಾಮದ ಉಲ್ಲೇಖ ಬಹುಶಃ ಇಂದಿನ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನಲ್ಲಿರುವ ಕಾರಿಂಜಪರ್ವತವೇ ಇರಬೇಕು ಎಂಬುದು ನನ್ನ ಅಭಿಪ್ರಾಯಾಗಿದೆ.

೨೬. ಇ.ದ.,ಸಂ,೩೦, ೨೦೧೫, ಹೆಚ್. ರಮೇಶ, ಹರಿಹರ ತಾಲೂಕಿನ ಶಾಸನೋಕ್ತ ಸ್ಥಳನಾಮಗಳು, ಪು. ೧೦೯

೨೭. ಎ.ಕ.,ಸಂ,೧೧, ಶಾ.ಸಂ, ೮೪, ದಾವಣಗೆರೆ

೨೮. ಇ.ದ.,ಸಂ,೩೦, ೨೦೧೫, ಪೂರ್ವೋಕ್ತ, ಪು. ೧೧೦

೨೯. ಎ.ಕ.,ಸಂ,೧೧, ಶಾ.ಸಂ, ೬೮, ದಾವಣಗೆರೆ

೩೦. ಕಲಬುರ್ಗಿ ಎಂ.ಎಂ.,(ಸಂ.), ೧೯೯೪, ಪೂರ್ವೋಕ್ತ, ಪು. ೯೬

೩೧. ಶಂಕರನ ಆರಾಧಕರು ನೆಲೆಸಿದ್ದ ಸ್ಥಳ ಶಂಕರನಹಳ್ಳಿಯಾಗಿತ್ತೆಂದು ಹೇಳಲಾಗುತ್ತದೆ. ಪ್ರಸಕ್ತ ಪ್ರದೇಶದಲ್ಲಿ ಸವಣೂರು ನವಾಬರು ಆಳ್ವಿಕೆಮಾಡುವ ಸಂಧರ್ಭದಲ್ಲಿ ಶೇರ್‌ಖಾನನಿಗೆ ಶಂಕರನಹಳ್ಳಿಯನ್ನು ಜಾಗೀರು ನೀಡಿದ ಮೇಲೆ ಶೇರಾಪುರವಾಗಿದ್ದಾಗಿ ತಿಳಿಯುತ್ತದೆ. ಅಂದಿನ ಶೇರಾಪುರ ಭಾಗವಾದ ಇಲ್ಲಿ ಪ್ರಶಾಂತ ನಗರ, ಸಾದಾತ್ ನಗರಗಳು ಈಗ ಹರಿಹರದ ಪಟ್ಟಣದಲ್ಲಿವೆ. ಎಂದು ಹಿ.ಗೂ. ದುಂಡ್ಯಪ್ಪ ಅವರಿಂದ ತಿಳಿದು ಬಂದ ಮಾಹಿತಿ

೩೨. ಹರಿಹರದ ಉತ್ತರ ಭಾಗವೇ ಹರ್ಲಾಪುರ ಪ್ರಸ್ತುತ ಹೊಸ ಹರ್ಲಾಪುರ, ಹಳೆ ಹರ್ಲಾಪುರ ಎಂಬುದಾಗಿ ಕರೆಯುತ್ತಾರೆ. ಹರ್ಲಾಪುರವು ಬಹುಶಃ ಪ್ರಾಚೀನ ಕಾಲದಲ್ಲಿ ಹರಿಲಾಪುರ ಆಗಿರಬಹುದು.

೩೩. ಬೆಳ್+ಅ=ಬೆಳ+ಕೆರೆ=ಬೆಳ್ಗೆರೆ> ಬೆಳಕೆರೆ, ಬೆಳ್=ನೀರು, ನೀರನ್ನು ದೇವರೆಂದು ಜನ ನಂಬಿದ್ದರು. ಗ್ರಾಮದ ಮೈಲಾರಲಿಂಗನ ಆರಾಧನೆ ಮತ್ತು ಹತ್ತಿರದಲ್ಲಿ ನೀರಿನ ಶ್ಯಾಗಲೆಹಳ್ಳ ಅಥವಾ ಹರಿದ್ರಾ ನದಿ ಇರುವುದರಿಂದ ಸಹಜವಾಗಿಯೇ ಜನರ ಬಾಯಲ್ಲಿ ದೇವರಬೆಳ್ಕೆರೆ ಎಂದು ಬಂದಿರಬೇಕು.

೩೪. ಎ.ಕ.,ಸಂ,೧೧, ದಾವಣಗೆರೆ,ಶಾ,ಸಂ, ೭೫

೩೫. ಅದೇ, ಶಾ,ಸಂ, ೭೪, ದಾವಣಗೆರೆ

೩೬. ಅದೇ, ಶಾ,ಸಂ, ೭೦, ದಾವಣಗೆರೆ

೩೭. ಅದೇ, ಶಾ,ಸಂ, ೨೨, ದಾವಣಗೆರೆ

೩೮. ಅದೇ, ಶಾ,ಸಂ, ೬೯, ದಾವಣಗೆರೆ

೩೯. ಅದೇ, ಶಾ,ಸಂ, ೧೦೮, ದಾವಣಗೆರೆ

೪೦. ಕೊಟ್ರೇಶ್ ನಾ. ಉತ್ತಂಗಿ, ೨೦೧೩, ಹರಿಹರ ದೆಳೆಗಳು, ಪು. ೨೯೧

೪೧. ಎ.ಕ.,ಸಂ,೧೧, ಶಾ,ಸಂ, ೬೧, ದಾವಣಗೆರೆ

೪೨. ಅದೇ, ಶಾ,ಸಂ, ೬೯, ದಾವಣಗೆರೆ

೪೩. ಇ.ದ.,ಸಂ.೩೦, ೨೦೧೫, ಪೂರ್ವೋಕ್ತ, ಪು. ೧೧೧

೪೪. ಎ.ಕ.,ಸಂ,೧೧, ಶಾ,ಸಂ, ೧೦೭, ದಾವಣಗೆರೆ

೪೫. ಅದೇ, ಶಾ,ಸಂ, ೧೦೬, ದಾವಣಗೆರೆ

೪೬. ಅದೇ, ಶಾ,ಸಂ, ೨೫, ದಾವಣಗೆರೆ

೪೭. ಅದೇ, ಶಾ,ಸಂ, ೧೦೭, ದಾವಣಗೆರೆ

೪೮. ಅದೇ, ಶಾ,ಸಂ, ೫೧, ದಾವಣಗೆರೆ

೪೯. ಅದೇ, ಶಾ,ಸಂ, ೧೧೫, ದಾವಣಗೆರೆ

೫೦. ಅದೇ, ಶಾ,ಸಂ, ೭೧, ದಾವಣಗೆರೆ

೫೧. ಅದೇ, ಶಾ,ಸಂ, ೧೯, ದಾವಣಗೆರೆ

೫೨. ಅದೇ, ಶಾ,ಸಂ, ೭೧, ದಾವಣಗೆರೆ

೫೩. ಅದೇ, ಶಾ,ಸಂ, ೭೭, ದಾವಣಗೆರೆ

೫೪. ಅದೇ, ಶಾ,ಸಂ, ೨೩, ದಾವಣಗೆರೆ

೫೫. ಅದೇ, ಶಾ.ಸಂ, ೧೨೨. ದಾವಣಗೆರೆ

೫೬. ಅದೇ, ಶಾ.ಸಂ, ೬೭, ದಾವಣಗೆರೆ

೫೭. ಅದೇ, ಶಾ.ಸಂ, ೨೭, ದಾವಣಗೆರೆ

೫೮. ಅದೇ, ಶಾ.ಸಂ, ೬೬, ದಾವಣಗೆರೆ

೫೯. ಅದೇ, ಶಾ.ಸಂ, ೮೪, ದಾವಣಗೆರೆ

೬೦. ಅದೇ, ಶಾ.ಸಂ, ೪೩, ದಾವಣಗೆರೆ

೬೧. ಅದೇ, ಶಾ,ಸಂ, ೫೯ ಮತ್ತು ೬೧, ದಾವಣಗೆರೆ

೬೨. ಅದೇ, ಶಾ,ಸಂ, ೩೮, ದಾವಣಗೆರೆ

೬೩. ಅದೇ, ಶಾ,ಸಂ, ೩೪, ದಾವಣಗೆರೆ

೬೪. ಅದೇ, ಶಾ,ಸಂ, ೨೭, ದಾವಣಗೆರೆ

೬೫. ಅದೇ, ಶಾ,ಸಂ, ೫೯, ದಾವಣಗೆರೆ

೬೬. ಅದೇ, ಶಾ,ಸಂ, ೧೦೩, ದಾವಣಗೆರೆ

೬೭. ಅದೇ, ಶಾ,ಸಂ, ೧೦೩, ದಾವಣಗೆರೆ

೬೮. ಅದೇ, ಶಾ,ಸಂ, ೬೬, ೮೪, ೮೫, ೮೭, ೮೮, ಮತ್ತು ೮೯, ದಾವಣಗೆರೆ

೬೯. ಅದೇ, ಶಾ,ಸಂ, ೧೦೭, ದಾವಣಗೆರೆ

೭೦. ಅದೇ, ಶಾ,ಸಂ, ೧೦೮, ದಾವಣಗೆರೆ

೭೧. ಅದೇ, ಶಾ,ಸಂ, ೬೭, ದಾವಣಗೆರೆ

೭೨. ಅದೇ, ಶಾ,ಸಂ, ೭೦, ೭೧ ಮತ್ತು ೧೦೮, ದಾವಣಗೆರೆ

೭೩. ಅದೇ, ಶಾ,ಸಂ, ೧೧೪, ದಾವಣಗೆರೆ

೭೪. ಅದೇ, ಶಾ,ಸಂ, ೧೧೩, ದಾವಣಗೆರೆ

೭೫. ಅದೇ, ಶಾ,ಸಂ, ೪೫, ದಾವಣಗೆರೆ

೭೬. ಅದೇ, ಶಾ,ಸಂ, ೧೧೪, ದಾವಣಗೆರೆ

೭೭. ಅದೇ, ಶಾ,ಸಂ, ೭೭, ದಾವಣಗೆರೆ

೭೮. ಅದೇ, ಶಾ,ಸಂ, ೪೮ ಮತ್ತು ೫೬, ದಾವಣಗೆರೆ

೭೯. ಅದೇ, ಶಾ.ಸಂ, ೭೨ ಮತ್ತು ೧೨೦, ದಾವಣಗೆರೆ

೮೦. ಅದೇ, ಶಾ.ಸಂ, ೭೪, ದಾವಣಗೆರೆ

೮೧. ಅದೇ, ಶಾ.ಸಂ, ೧೨೦, ದಾವಣಗೆರೆ

೮೨. ಅದೇ, ಶಾ.ಸಂ, ೧೪೯, ದಾವಣಗೆರೆ

೮೩. ಅದೇ, ಶಾ.ಸಂ, ೩೦, ದಾವಣಗೆರೆ

೮೪. ಅದೇ, ಶಾ.ಸಂ, ೩೦, ದಾವಣಗೆರೆ

೮೫. ಶಿವತಾರಕ್ ಕೆ.ಬಿ., ೨೦೦೧, ಕರ್ನಾಟಕದ ಪುರಾತತ್ವ ನೆಲೆಗಳು, ಪು. ೩೩೧–೩೨

೮೬. ಎ.ಕ.,ಸಂ, ೮, ಶಾ.ಸಂ, ೨೨೫, ಶಿಕಾರಿಪುರ

೮೭. ತೀಪ್ಪೆಸ್ವಾಮಿ. ಹೆಚ್., ೨೦೦೦, ದಾವಣಗೆರೆ ಜಿಲ್ಲೆಯ ದೇವಾಲಯಗಳು, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಪು. ೧೮

೮೮. ಅದೇ, ಪು. ೧೮

೮೯. ಗಿರಿಜ ಟಿ., ೧೯೯೧, ಚಿತ್ರದುರ್ಗ ಜಿಲ್ಲಾ ದರ್ಶಿನಿ, ಪು. ೨೮೭

೯೦. ಎ.ಕ.,ಸಂ,೧೧, ಶಾ.ಸಂ, ೬೭, ದಾವಣಗೆರೆ

೯೧. ಗಿರಿಜ ಟಿ., ೧೯೯೧, ಪೂರ್ವೋಕ್ತ, ಪು. ೫೬೨-೫೭೮

೯೨. ತೀಪ್ಪೇಸ್ವಾಮಿ ಹೆಚ್., ೨೦೦೦, ಪೂರ್ವೋಕ್ತ, ಪು. ೨೦

೯೩. ಅದೇ, ಪು. ೨೦

೯೪. ಅದೇ, ಪು. ೨೦

೯೫. ಲಕ್ಷ್ಮಣ್ ತೆಲಗಾವಿ, ೨೦೦೪, ಮೌರ್ಯ ಮತ್ತು ಶಾತವಾಹನಯುಗ, ಪು. ೮೬

೯೬. ಬಸವರಾಜ ಎನ್.ಅಕ್ಕಿ, ೨೦೦೪, ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿ, ಪು. ೬೫

೯೭. ಎ.ಕ.,ಸಂ,೮, ಶಾ.ಸಂ, ೧೭೬, ಶಿಕಾರಿಪುರ

೯೮. ತೀಪ್ಪೇಸ್ವಾಮಿ ಎಚ್., ೨೦೦೦, ಪೂರ್ವೋಕ್ತ, ಪು. ೨೪

೯೯. ಎ.ಕ.,ಸಂ, ೧೧, ಪೂರ್ವೋಕ್ತ, ಶಾ.ಸಂ, ೩೫, ದಾವಣಗೆರೆ

೧೦೦ ತೀಪ್ಪೇಸ್ವಾಮಿ ಎಚ್., ೨೦೦೦, ಪೂರ್ವೋಕ್ತ, ಪು. ೨೫

೧೦೧ ಎ.ಕ.,ಸಂ,೧೧, ಶಾ.ಸಂ, ೬೬, ದಾವಣಗೆರೆ

೧೦೨ ಅನಂತರಾಮು ಕೆ., ೧೯೯೭, ದಕ್ಷಿಣದ ಸಿರಿನಾಡು, ಪು. ೭

೧೦೩ ಅದೇ, ಪು. ೭

೧೦೪ ಅದೇ, ಪು. ೭

೧೦೫ ಕಪಿಶಾಸಂ, ೯, ಬಾಗಲಕೋಟೆ ಜಿಲ್ಲೆ, ಶಾ.ಸಂ, ೪೧೦, ಮಹಾಕೂಟ

೧೦೬ ಅದೇ, ಶಾ.ಸಂ, ೬೦, ಐಹೋಳೆ

೧೦೭ ಅನಂತರಾಮು ಕೆ., ೧೯೯೭, ಪೂರ್ವೋಕ್ತ, ಪು. ೮

೧೦೮ ಅದೇ, ಪು. ೮

೧೦೯ ಅದೇ, ಪು. ೮

೧೧೦ ಎ.ಕ.,ಸಂ,೧೧, ಶಾ,ಸಂ, ೬೬, ದಾವಣಗೆರೆ

೧೧೧ ಶಂಕರನಾರಾಯಣರಾವ್ ಎಚ್. ಎಂ., ೧೯೮೨, ಶ್ರೀಹರಿಹರ ದೇವಾಲಯ, ಪು. ೧೬೩

೧೧೨ ಅನಂತರಾಮು ಕೆ., ೧೯೯೭, ಪೂರ್ವೋಕ್ತ, ಪು. ೮

೧೧೩ ವಾಸುದೇವ ಬಡಿಗೇರ,೨೦೧೨,ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ,ಭಾಗ-೧, ಪು.೪೯

೧೧೪ ಎ.ಕ.,ಸಂ,೧೧, ಶಾ,ಸಂ, ೧೧೯, ದಾವಣಗೆರೆ

೧೧೫ ಇ.ದ.,ಸಂ, ೩೦, ೨೦೧೫, ರಾಘವೇಂದ್ರಚಾರಿ ಕೆ.ಎಂ., ಹರಿಹರ ತಾಲೂಕು ಹಿರೆಹಾಲಿವಾಣದಲ್ಲಿ ದೊರೆತ ಅಪ್ರಕಟಿತ ಶಾಸನ, ಪು. ೮೪

೧೧೬ ಅದೇ, ಪು. ೮೪

೧೧೭ ಎ.ಕ.,ಸಂ,೧೧, ಶಾ,ಸಂ, ೧೧೦, ದಾವಣಗೆರೆ

೧೧೮ ಸಂತೇಬೆನ್ನೂರು ಸುಮತೇಂದ್ರ ನಾಡಿಗ್, ೨೦೧೦ ದಾವಣಗೆರೆ ಜಿಲ್ಲೆ: ಇತಿಹಾಸದ ಕೆಲವು ಹೆಜ್ಜೆಗಳು, ಪು. ೧೫-೧೬

೧೧೯ ಎ.ಕ.,ಸಂ,೧೧, ಶಾ,ಸಂ, ೬೧, ದಾವಣಗೆರೆ

೧೨೦ ಅದೇ, ಶಾ,ಸಂ, ೬೧, ದಾವಣಗೆರೆ

೧೨೧ ಅದೇ, ಶಾ,ಸಂ, ೪೩, ದಾವಣಗೆರೆ

೧೨೨ ಕೊಟ್ರೇಶ್ ನಾ. ಉತ್ತಂಗಿ, ೨೦೧೩, ಹರಿಹರದೆಳೆಗಳು, ಪು. ೨೮೪

೧೨೩ ಎ.ಕ.,ಸಂ.೧೧, ಶಾ.ಸಂ, ೧೨, ದಾವಣಗೆರೆ

೧೨೪ ಅದೇ, ಶಾ.ಸಂ, ೪೫, ದಾವಣಗೆರೆ

೧೨೫ ಅದೇ, ಶಾ.ಸಂ, ೬೧, ದಾವಣಗೆರೆ

೧೨೬ ಅದೇ, ಶಾ.ಸಂ, ೮೫, ದಾವಣಗೆರೆ

೧೨೭ ಅದೇ, ಶಾ.ಸಂ, ೯೯, ದಾವಣಗೆರೆ

೧೨೮ ಸೋಮಶೇಖರ್ ಎಸ್.ವೈ., ೨೦೧೪, ಕರ್ನಾಟಕದ ಬಿರುದಾವಳಿಗಳು, ಪು. ೫೨

೧೨೯ ಎ.ಕ.,ಸಂ.೧೧, ಶಾ.ಸಂ, ೪೧, ದಾವಣಗೆರೆ

೧೩೦ ದೇಸಾಯಿ ಪಾಂಡುರಂಗರಾಯ, ೧೯೯೮, ಕರ್ನಾಟಕದ ಕಲಚೂರಿಗಳು, ಪು. ೧೦೮

೧೩೧ ವಾಸುದೇವ ಬಡಿಗೇರ, ೨೦೧೨, ಪೂರ್ವೋಕ್ತ, ಪು. ೬೦

೧೩೨ ಅದೇ, ಪು. ೬೦

೧೩೩ ಅದೇ, ಪು. ೬೧

೧೩೪ S.I.I., ಸಂ.೨೦, ಶಾ.ಸಂ.೧೩೪, ೧೧೨೯, ತದ್ದಲಬಾಗಿ, (ಜಮಖಂಡಿ. ತಾ)

೧೩೫ ವಾಸುದೇವ ಬಡಿಗೇರ, ೨೦೧೨, ಪೂರ್ವೋಕ್ತ, ಪು. ೬೧

೧೩೬ S.I.I.,ಸಂ, ೧೮, ಶಾ.ಸಂ.೧೭೬, ೧೧೫೦, ಕನ್ನೂರು, (ವಿಜಾಪುರ. ತಾ)

೧೩೭ ಎ.ಕ.,ಸಂ.೧೧, ಶಾ.ಸಂ, ೮೪, ದಾವಣಗೆರೆ

೧೩೮ ಅದೇ, ಶಾ.ಸಂ, ೪೨, ದಾವಣಗೆರೆ

೧೩೯ ಅದೇ, ಶಾ.ಸಂ, ೪೩, ದಾವಣಗೆರೆ

೧೪೦ ಅದೇ, ಶಾ.ಸಂ, ೩೩, ದಾವಣಗೆರೆ

೧೪೧ ಅದೇ, ಶಾ.ಸಂ, ೪೪, ದಾವಣಗೆರೆ

೧೪೨ ಮಂಜುನಾಥ ಹ. ಪಾಟೀಲ, ೨೦೦೨, ದಾವಣಗೆರೆ ಜಿಲ್ಲೆಯ ಶಾಸನಗಳು ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪು.೪೩,(ಅಪ್ರಕಟಿತ ಪಿಎಚ್.ಡಿ.ಮಹಾಪ್ರಬಂಧ)

೧೪೩ ಎ.ಕ.,ಸಂ.೧೧, ಶಾ.ಸಂ, ೧೦೦, ದಾವಣಗೆರೆ

೧೪೪ ಅದೇ, ಶಾ.ಸಂ, ೭೦, ದಾವಣಗೆರೆ

೧೪೫ ಅದೇ, ಶಾ.ಸಂ. ೧೦೩, ದಾವಣಗೆರೆ

೧೪೬ ಅದೇ, ಶಾ.ಸಂ. ೪೮, ದಾವಣಗೆರೆ

೧೪೭ ಅದೇ, ಶಾ.ಸಂ. ೫೯, ದಾವಣಗೆರೆ

೧೪೮ ಅದೇ, ಶಾ.ಸಂ. ೭೧, ದಾವಣಗೆರೆ

೧೪೯ ವಾಸುದೇವ ಬಡಿಗೇರ, ೨೦೧೨, ಪೂರ್ವೋಕ್ತ, ಪು. ೭೮

೧೫೦ ಎ.ಕ.,ಸಂ,೧೧, ಶಾ,ಸಂ, ೧೨೨, ದಾವಣಗೆರೆ

೧೫೧ ಅದೇ, ಶಾ,ಸಂ, ೭೭, ದಾವಣಗೆರೆ

೧೫೨ ಅದೇ, ಶಾ,ಸಂ, ೧೧೧, ದಾವಣಗೆರೆ

೧೫೩ ಅದೇ, ಶಾ,ಸಂ, ೯೯, ದಾವಣಗೆರೆ

೧೫೪ ಅದೇ, ಶಾ,ಸಂ, ೮೪, ದಾವಣಗೆರೆ

೧೫೫ ಅದೇ, ಶಾ,ಸಂ, ೮೫, ದಾವಣಗೆರೆ

೧೫೬ S.I.I., ಸಂ,೯, (ಭಾಗ-೧), ಶಾ,ಸಂ, ೫೭೨, ೧೧೬೫, ಉಚ್ಚಂಗಿದುರ್ಗ (ಹರಪನಹಳ್ಳಿ. ತಾ)

೧೫೭ ಎ.ಕ.,ಸಂ,೧೧, ಶಾ,ಸಂ, ೮೬, ದಾವಣಗೆರೆ

೧೫೮ ಅದೇ, ಶಾ,ಸಂ, ೧೧೫, ದಾವಣಗೆರೆ

೧೫೯ ಅದೇ, ಶಾ,ಸಂ, ೩೯, ದಾವಣಗೆರೆ

೧೬೦ ಅದೇ, ಶಾ,ಸಂ, ೩೨, ದಾವಣಗೆರೆ

೧೬೧ ಸೋಮಶೇಖರ್ ಎಸ್. ವೈ., ೨೦೧೪, ಪೂರ್ವೋಕ್ತ, ಪು. ೧೪೧

೧೬೨ ಅದೇ, ಪು. ೧೩೭

೧೬೩ ಅದೇ, ಪು. ೧೩೮

೧೬೪ ನಂಜುಂಡಸ್ವಾಮಿ ಎ.ಎಸ್., ೨೦೧೨, (೬ನೇ ಮುದ್ರಣ), ಹೊಯ್ಸಳರ ಇತಿಹಾಸ, ಪು. ೮

೧೬೫ ವಾಸುದೇವ ಬಡಿಗೇರ, ೨೦೧೨, ಪೂರ್ವೋಕ್ತ, ಪು. ೬೫

೧೬೬ ಸೋಮಶೇಖರ್ ಎಸ್. ವೈ., ೨೦೧೪, ಪೂರ್ವೋಕ್ತ, ಪು. ೧೨೬

೧೬೭ ವಾಸುದೇವ ಬಡಿಗೇರ, ೨೦೧೨, ಪೂರ್ವೋಕ್ತ, ಪು. ೬೫

೧೬೮ ಎ.ಕ.ಸಂ,೧೧, ಶಾ.ಸಂ, ೨೫, ದಾವಣಗೆರೆ

೧೬೯ ಇ.ದ.,ಸಂ, ೧೧,೨೦೧೫, ರಾಘವೇಂದ್ರಚಾರಿ ಕೆ.ಎಂ., ಪೂರ್ವೋಕ್ತ, ಪು. ೮೪

೧೭೦ ಎ.ಕ.ಸಂ,೧೧, ಶಾ.ಸಂ, ೩೬, ದಾವಣಗೆರೆ

೧೭೧ ಮಂಜುನಾಥ ಹ. ಪಾಟೀಲ, ೨೦೦೨, ಪೂರ್ವೋಕ್ತ, ಪು. ೪೮

೧೭೨ ಎ.ಕ.ಸಂ,೧೧, ಶಾ.ಸಂ, ೩೮, ದಾವಣಗೆರೆ

೧೭೩ ನಂಜುಂಡಸ್ವಾಮಿ ಎ.ಎಸ್., ೨೦೦೯, (೫ನೇ ಮುದ್ರಣ), ವಿಜಯನಗರದ ಇತಿಹಾಸ, ಪು.೧೮

೧೭೪ ಎ.ಕ.ಸಂ,೧೧, ಶಾ.ಸಂ, ೬೭, ದಾವಣಗೆರೆ

೧೭೫ ಅದೇ, ಶಾ.ಸಂ, ೭೮, ದಾವಣಗೆರೆ

೧೭೬ ಅದೇ, ಶಾ.ಸಂ, ೩೪, ದಾವಣಗೆರೆ

೧೭೭ ಅದೇ, ಶಾ.ಸಂ, ೬೮, ದಾವಣಗೆರೆ

೧೭೮ ಶಂಕರನಾರಾಯಣರಾವ್ ಎಚ್.ಎಂ., ೧೯೮೨, ಪೂರ್ವೋಕ್ತ, ಪು. ೩೪೪

೧೭೯ ಕೊಟ್ರೇಶ್ ನಾ ಉತ್ತಂಗಿ, ೨೦೧೩, ಪೂರ್ವೋಕ್ತ, ಪು. ೩೦೪-೩೦೫

೧೮೦ ಎ.ಕ.ಸಂ,೧೧, ಶಾ.ಸಂ, ೧೦೮, ದಾವಣಗೆರೆ

೧೮೧ ಅದೇ, ಶಾ.ಸಂ, ೨೩, ದಾವಣಗೆರೆ

೧೮೨ ಅದೇ, ಶಾ.ಸಂ, ೨೯, ದಾವಣಗೆರೆ

೧೮೩ ಅದೇ, ಶಾ.ಸಂ, ೧೦೭, ದಾವಣಗೆರೆ

೧೮೪ ಅದೇ, ಶಾ.ಸಂ, ೧೦೬, ದಾವಣಗೆರೆ

೧೮೫ ಅದೇ, ಶಾ.ಸಂ, ೨೮, ದಾವಣಗೆರೆ

೧೮೬ ಅದೇ, ಶಾ.ಸಂ, ೩೧, ದಾವಣಗೆರೆ

೧೮೭ ಅದೇ, ಶಾ.ಸಂ, ೨೭, ದಾವಣಗೆರೆ

೧೮೮ ಅದೇ, ಶಾ.ಸಂ, ೨೪, ದಾವಣಗೆರೆ

೧೮೯ ಅದೇ, ಶಾ.ಸಂ, ೨೨, ದಾವಣಗೆರೆ

೧೯೦ ಅದೇ, ಶಾ.ಸಂ, ೩೦, ದಾವಣಗೆರೆ

೧೯೧ ಅದೇ, ಶಾ.ಸಂ, ೨೮೩, ದಾವಣಗೆರೆ

೧೯೨ ಸಂತೇಬೆನ್ನೂರು ಸುಮತೀಂದ್ರ ನಾಡಿಗ್, ೨೦೧೦, ಪೂರ್ವೋಕ್ತ, ಪು. ೨೬

೧೯೩ ಎ.ಕ.ಸಂ,೧೧, ಶಾ.ಸಂ, ೩೦, ದಾವಣಗೆರೆ

೧೯೪ ಅದೇ, ಶಾ.ಸಂ,೩೦, ದಾವಣಗೆರೆ

೧೯೫ ಅದೇ, ಶಾ.ಸಂ, ೮೩, ದಾವಣಗೆರೆ

೧೯೬ ಶ್ರೀ ಕಮಲದಾನಿ ಗುರುರಾಯರು, ೨೦೧೨, ಶ್ರೀ ಹರಿಹರ ಕ್ಷೇತ್ರಮಹಾತ್ಮೆ, ಪು. ೨೦

೧೯೭ ಅದೇ, ಪು. ೨೦

೧೯೮ ನಂಜುಂಡಸ್ವಾಮಿ ಎ.ಎಸ್., ೨೦೧೨, (೨ನೇ ಮುದ್ರಣ) ಪಾಳೆಯಗಾರರು ಮತ್ತು ಒಡೆಯರ ಇತಿಹಾಸ, ಪು. ೪೫

೧೯೯ ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ ,೨೦೦೯, ಪು. ೮೨೫

೨೦೦ ಕೊಟ್ರೇಶ್ ನಾ. ಉತ್ತಂಗಿ, ೨೦೧೩, ಪೂರ್ವೋಕ್ತ, ಪು. ೩೦೪

೨೦೧ ಗೋವಿಂದಮೂರ್ತಿ ದೇಸಾಯಿ, ೧೯೯೯, ಸವಣೂರು ನವಾಬರು, ಪು. ೨೩

೨೦೨ ಸುಂದರ ಅ., ೧೯೭೯, ಪ್ರದೀಪಿಕೆ, ಪು. ೩

೨೦೩ ಶ್ರೀ ಕಮಲದಾನಿ ಗುರುರಾಯರು, ೨೦೧೨, ಪೂರ್ವೋಕ್ತ, ಪು. ೨೧

೨೦೪ ಅದೇ, ಪು. ೨೨

೨೦೫ ಗೋಪಾಲ್ ಆರ್.,೨೦೦೫, ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪು. ೨೨೧

೨೦೬ ಶ್ರೀ ಕಮಲದಾನಿ ಗುರುರಾಯರು, ೨೦೧೨, ಪೂರ್ವೋಕ್ತ, ಪು. ೨೨

೨೦೭ ಅದೇ, ಪು. ೨೨

೨೦೮ ಅದೇ, ಪು. ೨೨

೨೦೯ ನಾಗಯ್ಯ ಜೆ.ಎಂ., ೧೯೯೨, ಆರನೆಯ ವಿಕ್ರಮಾದಿತ್ಯನ ಶಾಸನಗಳು ಒಂದು ಅಧ್ಯಯನ, ಪು. ೮೭

೨೧೦ ಎ.ಕ.,ಸಂ,೧೧, ಶಾ.ಸಂ, ೭೭, ದಾವಣಗೆರೆ

೨೧೧ S.I.I., ಸಂ.೯,(೧.), ಪೀಠಿಕೆ ಭಾಗ, ಪು. ೫

೨೧೨ ಕೊಟ್ರೇಶ್ ನಾ. ಉತ್ತಂಗಿ, ೨೦೧೩, ಪೂರ್ವೋಕ್ತ, ಪು. ೩೧೭–೩೧೮

೨೧೩ ಎ.ಕ.ಸಂ.೧೧, ಶಾ.ಸಂ, ೧೨೨, ದಾವಣಗೆರೆ

೨೧೪ ಅದೇ, ಶಾ.ಸಂ, ೧೦೩, ದಾವಣಗೆರೆ

೨೧೫ ಅದೇ, ಶಾ.ಸಂ, ೭೧, ದಾವಣಗೆರೆ

೨೧೬ ಅದೇ, ಶಾ.ಸಂ, ೩೫, ದಾವಣಗೆರೆ

೨೧೭ ಅದೇ, ಶಾ.ಸಂ, ೩೫, ದಾವಣಗೆರೆ

೨೧೮ ಅದೇ, ಶಾ.ಸಂ, ೪೩, ದಾವಣಗೆರೆ

೨೧೯ ಅದೇ, ಶಾ.ಸಂ, ೧೦೩, ದಾವಣಗೆರೆ

೨೨೦ ಲಕ್ಷ್ಮಣ್ ತೆಲಗಾವಿ, (ಸಂ.), ೧೯೮೭, ಪೂರ್ವೋಕ್ತ, ಪು. ೩೮೨-೩೮೩

೨೨೧ ಎ.ಕ.ಸಂ.೧೧, ಶಾ.ಸಂ, ೬೭ ಮತ್ತು ೬೮, ದಾವಣಗೆರೆ

೨೨೨ ಅದೇ, ಶಾ.ಸಂ, ೧೦೭, ದಾವಣಗೆರೆ

೨೨೩ ಅದೇ, ಶಾ.ಸಂ, ೨೩, ದಾವಣಗೆರೆ

೨೨೪ ಅದೇ, ಶಾ.ಸಂ, ೨೩, ದಾವಣಗೆರೆ

೨೨೫ ಲಕ್ಷ್ಮಣ್ ತೆಲಗಾವಿ, (ಸಂ.), ೧೯೮೭, ಪೂರ್ವೋಕ್ತ, ಪು. ೩೮೯

೨೨೬ ಎ.ಕ.ಸಂ.೧೧, ಶಾ.ಸಂ, ೩೫, ದಾವಣಗೆರೆ

೨೨೭ ವಾಸುದೇವ ಬಡಿಗೇರ, ೨೦೧೨, ಪೂರ್ವೋಕ್ತ, ಪು. ೧೨೫

೨೨೮ ನಯಸೇನ, ಧರ್ಮಾಮೃತ, ಅಧ್ಯಾಯ-೩, ಪು.೮೪. ವಾಸುದೇವ ಬಡಿಗೇರ, ಅದೇ, ಪು.೧೨೬

೨೨೯ ಎ.ಕ.ಸಂ.೧೧, ಶಾ.ಸಂ, ೮೪, ದಾವಣಗೆರೆ

೨೩೦ ಅದೇ, ಶಾ.ಸಂ, ೭೭, ದಾವಣಗೆರೆ

೨೩೧ ಅದೇ, ಶಾ.ಸಂ, ೩೭, ದಾವಣಗೆರೆ

೨೩೨ ಅದೇ, ಶಾ.ಸಂ, ೧೨೨, ದಾವಣಗೆರೆ

೨೩೩ ಅದೇ, ಶಾ.ಸಂ, ೧೧೧, ದಾವಣಗೆರೆ

೨೩೪ ಅದೇ, ಶಾ.ಸಂ, ೧೧೫, ದಾವಣಗೆರೆ

೨೩೫ ಅದೇ, ಶಾ.ಸಂ, ೪೩, ದಾವಣಗೆರೆ

೨೩೬ ಅದೇ, ಶಾ.ಸಂ, ೪೮, ದಾವಣಗೆರೆ

೨೩೭ ಅದೇ, ಶಾ.ಸಂ, ೫೧, ದಾವಣಗೆರೆ

೨೩೮ ಅದೇ, ಶಾಸಂ, ೧೧೪, ದಾವಣಗೆರೆ

೨೩೯ ಅದೇ, ಶಾ.ಸಂ, ೭೧, ದಾವಣಗೆರೆ

೨೪೦ ಅದೇ, ಶಾ.ಸಂ, ೪೧, ದಾವಣಗೆರೆ

೨೪೧ ಅದೇ, ಶಾ.ಸಂ, ೮೫, ದಾವಣಗೆರೆ

೨೪೨ ಅದೇ, ಶಾ.ಸಂ, ೪೨, ದಾವಣಗೆರೆ

೨೪೩ ಅದೇ, ಶಾ.ಸಂ, ೬೯, ದಾವಣಗೆರೆ

೨೪೪ ಅದೇ, ಶಾ.ಸಂ, ೨೫, ದಾವಣಗೆರೆ

೨೪೫ ಅದೇ, ಶಾ.ಸಂ, ೩೬, ದಾವಣಗೆರೆ

೨೪೬ ಅದೇ, ಶಾ.ಸಂ, ೫೪, ದಾವಣಗೆರೆ

೨೪೭ ಅದೇ, ಶಾ.ಸಂ, ೫೯, ದಾವಣಗೆರೆ

೨೪೮ ಅದೇ, ಶಾ.ಸಂ, ೨೯, ದಾವಣಗೆರೆ

೨೪೯ ನಾಗಯ್ಯ ಜೆ.ಎಂ., ೧೯೯೨, ಪೂರ್ವೋಕ್ತ, ಪುಟ. ೨೭೭

೨೫೦ ಅದೇ, ಪುಟ. ೮೩

೨೫೧ ನಾಗಯ್ಯ ಜೆ.ಎಂ., ೨೦೦೨, ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ, ಪು. ೧೯೩

೨೫೨ ಅದೇ, ೧೯೯೨, ಪೂರ್ವೋಕ್ತ, ಪು. ೩೫೦

೨೫೩ ಎ.ಕ.,ಸಂ,೧೧, ಶಾ,ಸಂ, ೧೨೨, ದಾವಣಗೆರೆ

೨೫೪ ಅದೇ, ಶಾ.ಸಂ, ೬೯, ದಾವಣಗೆರೆ

೨೫೫ ಅದೇ, ಶಾ.ಸಂ, ೧೧೭, ದಾವಣಗೆರೆ

೨೫೬ ಅದೇ, ಶಾ.ಸಂ, ೫೭, ದಾವಣಗೆರೆ

೨೫೭ ಚಿದಾನಂದಮೂರ್ತಿ ಎಂ., ೨೦೦೨, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು. ೨೦೯

೨೫೮ ಅದೇ, ಪು. ೧೫೫

೨೫೯ ಕೊಟ್ರೇಶ್ ನಾ. ಉತ್ತಂಗಿ, ೨೦೧೩, ಪೂರ್ವೋಕ್ತ, ಪು. ೨೮೪-೨೮೫

೨೬೦ ಎ.ಕ.ಸಂ,೧೧, ಶಾ.ಸಂ, ೧೦೬, ದಾವಣಗೆರೆ

೨೬೧ ನಾಗಯ್ಯ ಜೆ.ಎಂ., ೧೯೯೨, ಪೂರ್ವೋಕ್ತ, ಪು. ೨೪೯

೨೬೨ ಅದೇ, ಪು. ೨೫೦

೨೬೩ ಅದೇ, ಪು. ೮೪

೨೬೪ ಎ.ಕ.,ಸಂ,೧೧, ಶಾ.ಸಂ, ೭೧, ದಾವಣಗೆರೆ

೨೬೫ ಅದೇ, ಶಾ.ಸಂ, ೩೫, ದಾವಣಗೆರೆ

೨೬೬ ಅದೇ, ಶಾ.ಸಂ, ೮೬, ದಾವಣಗೆರೆ

೨೬೭ ಅದೇ, ಶಾ.ಸಂ, ೫೬, ದಾವಣಗೆರೆ

೨೬೮ ಅದೇ, ಶಾ.ಸಂ, ೮೬, ದಾವಣಗೆರೆ

೨೬೯ ಅದೇ, ಶಾ.ಸಂ, ೬೨, ದಾವಣಗೆರೆ

೨೭೦ ಹಿರೇಮಠ ಬಿ.ಆರ್., ೧೯೮೬, ಶಾಸನಗಳಲ್ಲಿ ಕರ್ನಾಟಕದ ವರ್ತಕರು, ಪು. ೭

೨೭೧ ವಾಸುದೇವ ಬಡಿಗೇರ, ೨೦೧೨, ಪೂರ್ವೋಕ್ತ, ಪು. ೨೩೧

೨೭೨ ಚಿದಾನಂದಮೂರ್ತಿ ಎಂ., ೨೦೦೨, ಪೂರ್ವೋಕ್ತ, ಪು. ೩೬೪

೨೭೩ ಕುಲಕರ್ಣಿ ನಾಗೇಶ್ ರಂಗೋ, (ಅನು.), ಯಜ್ಞವಲ್ಕ್ಯ ಸ್ಮೃತಿ, ಪು. ೧೯೧

೨೭೪ ಎ.ಕ.,ಸಂ,೧೧, ಶಾ.ಸಂ, ೭೯, ದಾವಣಗೆರೆ

೨೭೫ ಅದೇ, ಶಾ.ಸಂ, ೮೪, ದಾವಣಗೆರೆ

೨೭೬ ಕೊಟ್ರೇಶ್ ನಾ. ಉತ್ತಂಗಿ, ೨೦೧೩, ಪೂರ್ವೋಕ್ತ, ಪು. ೨೮೪

೨೭೭ ಎ.ಕ.,ಸಂ,೧೧, ಶಾ.ಸಂ, ೬೧, ದಾವಣಗೆರೆ

೨೭೮ ಅದೇ, ಶಾ.ಸಂ, ೨೩, ದಾವಣಗೆರೆ

೨೭೯ ಅದೇ, ಶಾ.ಸಂ, ೧೧೭, ದಾವಣಗೆರೆ

೨೮೦ ಮಂಜುನಾಥ ಹ. ಪಾಟೀಲ, ೨೦೦೨, ಪೂರ್ಮೋಕ್ತ, ಪು. ೧೧೮

೨೮೧ ಎ.ಕ.,ಸಂ,೧೧, ಶಾ.ಸಂ, ೭೪, ದಾವಣಗೆರೆ

೨೮೨ ಅದೇ, ಶಾ.ಸಂ, ೨೩, ದಾವಣಗೆರೆ

೨೮೩ ಅದೇ, ಶಾ.ಸಂ, ೨೯, ದಾವಣಗೆರೆ

೨೮೪ ಅದೇ, ಶಾ.ಸಂ, ೬೧, ದಾವಣಗೆರೆ

೨೮೫ ಅದೇ, ಶಾ.ಸಂ, ೮೫, ದಾವಣಗೆರೆ

೨೮೬ ಅದೇ, ಶಾ.ಸಂ, ೩೯, ದಾವಣಗೆರೆ

೨೮೭ ಅದೇ, ಶಾ.ಸಂ, ೭೯, ದಾವಣಗೆರೆ

೨೮೮ ಅದೇ, ಶಾ.ಸಂ, ೮೪, ದಾವಣಗೆರೆ

೨೮೯ ಚಿದಾನಂದಮೂರ್ತಿ ಎಂ., ೨೦೦೨, ಪೂರ್ವೋಕ್ತ, ಪು. ೪೩೭

೨೯೦ ಅದೇ, ಪು. ೪೩೨

೨೯೧ ಎ.ಕ.,ಸಂ,೧೧, ಶಾ.ಸಂ, ೪೦, ದಾವಣಗೆರೆ

೨೯೨ ರಮೇಶನಾಯಕ, ೨೦೦೭, ಕರ್ನಾಟಕದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ, ಪು. ೧೩೯

೨೯೩ ಚಿದಾನಂದಮೂರ್ತಿ ಎಂ., ೨೦೦೨, ಪೂರ್ವೋಕ್ತ, ಪು. ೨೩೦

೨೯೪ ಎ.ಕ.,ಸಂ,೧೧, ಶಾ.ಸಂ, ೩೦, ದಾವಣಗೆರೆ

೨೯೫ ಚಿದಾನಂದಮೂರ್ತಿ ಎಂ., ೨೦೦೨, ಪೂರ್ವೋಕ್ತ, ಪು. ೩೯೫

೨೯೬ ಎ.ಕ.,ಸಂ,೧೧, ಶಾ.ಸಂ, ೭೦, ದಾವಣಗೆರೆ

೨೯೭ ಅದೇ, ಶಾ.ಸಂ, ೧೦೭, ದಾವಣಗೆರೆ

೨೯೮ ಅದೇ, ಶಾ.ಸಂ, ೧೦೬, ದಾವಣಗೆರೆ

೨೯೯ ಅದೇ, ಶಾ.ಸಂ, ೬೧, ದಾವಣಗೆರೆ

೩೦೦ ಎಚ್ಚೆಸ್ಕೆ, (ಸಂ.), ೧೯೮೨, ಅವಲೋಕನ: ಕರ್ನಾಟಕದ ಪರಂಪರೆಯ ಸಮೀಕ್ಷೆ, ಪು. ೧೫೪

೩೦೧ ತಿಪ್ಪೇರುದ್ರಸ್ವಾಮಿ ಎಚ್., ೨೦೦೩, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪು. ೧೯೫

೩೦೨ ಎಚ್ಚೆಸ್ಕೆ, (ಸಂ.), ೧೯೮೨, ಪೂರ್ವೋಕ್ತ, ಪು. ೧೫೪

೩೦೩ ಕೊಟ್ರೇಶ್ ನಾ. ಉತ್ತಂಗಿ, ೨೦೧೩, ಪೂರ್ವೋಕ್ತ, ಪು. ೨೮೫

೩೦೪ ಅದೇ, ಪು. ೨೯೬

೩೦೫ ತಿಪ್ಪೇರುದ್ರಸ್ವಾಮಿ ಎಚ್., ೨೦೦೩, ಪೂರ್ವೋಕ್ತ, ಪು. ೨೦೪

೩೦೬ ಎ.ಕ.,ಸಂ,೧೧, ಶಾ.ಸಂ, ೭೦, ದಾವಣಗೆರೆ

೩೦೭ ಅದೇ, ಶಾ.ಸಂ, ೪೩, ೩೯, ೩೩ ಮತ್ತು ೨೫, ದಾವಣಗೆರೆ

೩೦೮ ಅದೇ, ಶಾ.ಸಂ. ೪೯, ದಾವಣಗೆರೆ

೩೦೯ ಅದೇ, ಶಾ.ಸಂ. ೩೪, ದಾವಣಗೆರೆ

೩೧೦ ವಾಸುದೇವ ಬಡಿಗೇರ, ೨೦೧೨, ಪೂರ್ವೋಕ್ತ, ಪು. ೨೬೬

೩೧೧ ನಂದಿಮಠ ಎಸ್.ಸಿ., ೧೯೭೬, ಮಠ-ಸಮಾಜ-ಸಂಸ್ಕೃತಿ, ಕರ್ನಾಟಕ ಪರಂಪರೆ ಸಂ-೧, ಪು. ೧೮೨

೩೧೨ ಎ.ಕ.,ಸಂ,೧೧, ಶಾ,ಸಂ, ೭೧, ದಾವಣಗೆರೆ

೩೧೩ ಅದೇ, ಶಾ,ಸಂ, ೭೧, ದಾವಣಗೆರೆ

೩೧೪ ಅದೇ, ಶಾ,ಸಂ, ೭೭, ದಾವಣಗೆರೆ

೩೧೫ ಅದೇ, ಶಾ,ಸಂ, ೪೬, ದಾವಣಗೆರೆ

೩೧೬ ಅದೇ, ಶಾ,ಸಂ, ೧೨೦, ದಾವಣಗೆರೆ

೩೧೭ ಜಯಶಂಕರ ಎನ್., ೨೦೧೨, ಚಾಮರಾಜನಗರ ತಾಲೂಕಿನ ಇತಿಹಾಸವ ು ತ ು ಪುರಾತತ್ವ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೨೨೮ (ಅಪ್ರಕಟಿತ ಪಿಎಚ್.ಡಿ.ಮಹಾಪ್ರಬಂಧ)

೩೧೮ ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಭಾಗ-೧, ೧೯೮೪, ಪು. ೩೩೫

೩೧೯ ಮೋಹನ್‌ಕೃಷ್ಣರೈ ಕೆ., (ಸಂ.), ೨೦೧೧, ಚರಿತ್ರೆ ಅಧ್ಯಯನ, ಪು. ೧೩೬

೩೨೦ Praroah and co, 1855, A Gazetterr of south india, pharaoh and co, mudras, P, 568 ಮತ್ತು ಮೋಹನ್‌ಕೃಷ್ಣ ರೈ ಕೆ., ೨೦೧೧, ಪೂರ್ವೋಕ್ತ, ಪು. ೧೩೬

೩೨೧ ಕೊಟ್ರೇಶ್ ನಾ. ಉತ್ತಂಗಿ, ೨೦೧೩, ಪೂರ್ವೋಕ್ತ, ಪು. ೫೫೭

೩೨೨ ವಾಸುದೇವ ಬಡಿಗೇರ, ೨೦೧೨, ಪೂರ್ವೋಕ್ತ, ಪು. ೧೯೫

೩೨೩ ಅದೇ, ಪು. ೧೯೫

೩೨೪ ಎ.ಕ.,ಸಂ,೧೧, ಶಾ,ಸಂ, ೩೯, ದಾವಣಗೆರೆ

೩೨೫ ಚಿದಾನಂದಮೂರ್ತಿ ಎಂ, ೨೦೦೨, ಪೂರ್ವೋಕ್ತ, ಪು. ೨೩೮

೩೨೬ ಅದೇ, ಪು. ೨೩೦

೩೨೭ ಎ.ಕ.,ಸಂ,೧೧, ಶಾ,ಸಂ, ೩೨, ದಾವಣಗೆರೆ

೩೨೮ ಅದೇ, ಶಾ.ಸಂ. ೨೩, ದಾವಣಗೆರೆ

೩೨೯ ಅದೇ, ಶಾ,ಸಂ, ೭೦, ದಾವಣಗೆರೆ

೩೩೦ ಅದೇ, ಶಾ.ಸಂ. ೩೬, ದಾವಣಗೆರೆ

೩೩೧ ಅದೇ, ಶಾ.ಸಂ. ೩೪, ದಾವಣಗೆರೆ

೩೩೨ ಅದೇ, ಶಾ.ಸಂ. ೭೨, ದಾವಣಗೆರೆ

೩೩೩ ಅದೇ, ಶಾ.ಸಂ. ೧೨೨, ದಾವಣಗೆರೆ

೩೩೪ ಅದೇ, ಶಾ.ಸಂ. ೭೪, ದಾವಣಗೆರೆ

೩೩೫ ಚಿದಾನಂದಮೂರ್ತಿ ಎಂ., ೨೦೦೨, ಪೂರ್ವೋಕ್ತ, ಪು. ೨೩೮

೩೩೬ ಅದೇ, ಪು. ೨೩೮

೩೩೭ ಎ.ಕ.,ಸಂ,೧೧, ಪೂರ್ವೋಕ್ತ, ಶಾ,ಸಂ, ೭೧, ದಾವಣಗೆರೆ

೩೩೮ ಅದೇ, ಶಾ,ಸಂ, ೭೪, ದಾವಣಗೆರೆ

೩೩೯ ತಿಪ್ಪೇರುದ್ರಸ್ವಾಮಿ ಎಚ್., ೨೦೦೩, ಪೂರ್ವೋಕ್ತ, ಪು. ೨೧೮

೩೪೦ ಅಪ್ರಕಟಿತ ಶಾಸನ, ಚಿಕ್ಕಬಿದರೆ

೩೪೧ ಚಿದಾನಂದಮೂರ್ತಿ ಎಂ., ೨೦೦೨, ಪೂರ್ವೋಕ್ತ, ಪು. ೪೫೪

೩೪೨ ನಂಜಮ್ಮಣ್ಣಿ ಎಂ., ೧೯೮೨, ಭಾರತೀಯ ಸಾಮಾಜಿಕ ಸಂಸ್ಥೆಗಳು, ಪು. ೮೪

೩೪೩ ಚಿದಾನಂದಮೂರ್ತಿ ಎಂ., ೨೦೦೨, ಪೂರ್ವೋಕ್ತ, ಪು. ೪೮೧

೩೪೪ ಎ.ಕ.,ಸಂ,೧೧, ಪೂರ್ವೋಕ್ತ, ಶಾ,ಸಂ, ೪೩, ದಾವಣಗೆರೆ

೩೪೫ ಅದೇ, ಶಾ,ಸಂ, ೩೯, ದಾವಣಗೆರೆ

೩೪೬ ಅದೇ, ಶಾ,ಸಂ, ೩೩, ದಾವಣಗೆರೆ

೩೪೭ ಇ.ದ.,ಸಂ.೨೮, ೨೦೧೩, ಸಂತೇಬೆನ್ನೂರು ಸಮತೀಂದ್ರ ನಾಡಿಗ್, ದಾವಣಗೆರೆ ಜಿಲ್ಲೆಯ ಶಾಸನೋಕ್ತ ಪ್ರಾಚೀನ ಅಗ್ರಹಾರಗಳು, ಪು. ೨೯

೩೪೮ ತಿಪ್ಪೇರುದ್ರಸ್ವಾಮಿ ಎಚ್., ೨೦೦೩, ಪೂರ್ವೋಕ್ತ, ಪು. ೨೧೧

೩೪೯ ಅದೇ, ಪು. ೨೧೩

೩೫೦ ಅದೇ, ಪು. ೨೦೮

೩೫೧ ಅದೇ, ಪು. ೨೦೯

೩೫೨ ಹಿರೇಮಠ ಬಿ.ಆರ್., ೧೯೮೬, ಶಾಸನಗಳಲ್ಲಿ ಕರ್ನಾಟಕದ ವರ್ತಕರು, ಪು. ೬

೩೫೩ ಪ್ರಶಾಂತ್ ಹೆಚ್.ಡಿ., ೨೦೦೦, ಕರ್ನಾಟಕ ರಾಜ್ಯಕೋಶ–೪, ಜನ ಸಮುದಾಯ ಸಂಪುಟ, ಪು. ೩೭

೩೫೪ ಚಿದಾನಂದಮೂರ್ತಿ ಎಂ., ೨೦೦೨, ಪೂರ್ವೋಕ್ತ, ಪು. ೪೭೯

೩೫೫ ಎ.ಕ.,ಸಂ,೧೧, ಶಾ.ಸಂ, ೮೬, ದಾವಣಗೆರೆ

೩೫೬ ಅದೇ, ಶಾ.ಸಂ, ೬೧, ದಾವಣಗೆರೆ

೩೫೭ ಅದೇ, ಶಾ.ಸಂ, ೫೦, ದಾವಣಗೆರೆ

೩೫೮ ಅದೇ, ಶಾ.ಸಂ, ೫೭, ದಾವಣಗೆರೆ

೩೫೯ ಅದೇ, ಶಾ.ಸಂ, ೫೬, ದಾವಣಗೆರೆ

೩೬೦ ಚಿದಾನಂದಮೂರ್ತಿ ಎಂ., ೨೦೦೨, ಪೂರ್ವೋಕ್ತ, ಪು. ೪೩೨

೩೬೧ ಅದೇ, ಪು. ೪೮೭

೩೬೨ ಪ್ರಶಾಂತ್ ಹೆಚ್.ಡಿ., ೨೦೦೦, ಪೂರ್ವೋಕ್ತ, ಪು. ೧೧೫

೩೬೩ ಎ.ಕ.,ಸಂ,೧೧, ಶಾ.ಸಂ, ೪೧, ದಾವಣಗೆರೆ

೩೬೪ ಅದೇ, ಶಾ.ಸಂ, ೩೦, ದಾವಣಗೆರೆ

೩೬೫ ಚಿದಾನಂದಮೂರ್ತಿ ಎಂ., ೨೦೦೨, ಪೂರ್ವೋಕ್ತ, ಪು. ೪೮೭

೩೬೬ ಎ.ಕ.,ಸಂ,೧೧, ಶಾ.ಸಂ, ೭೬, ದಾವಣಗೆರೆ

೩೬೭ ಅದೇ, ಶಾ.ಸಂ, ೨೨, ದಾವಣಗೆರೆ

೩೬೮ ಅದೇ, ಶಾ.ಸಂ, ೩೧, ದಾವಣಗೆರೆ

೩೬೯ ಚಿದಾನಂದಮೂರ್ತಿ ಎಂ., ೨೦೦೨, ಪೂರ್ವೋಕ್ತ, ಪು. ೪೮೯

೩೭೦ ಎ.ಕ.,ಸಂ,೧೧, ಶಾ.ಸಂ, ೧೦೭, ದಾವಣಗೆರೆ

೩೭೧ ಅದೇ, ಶಾ.ಸಂ, ೧೦೬, ದಾವಣಗೆರೆ

೩೭೨ ಅದೇ, ಶಾ.ಸಂ, ೧೧೫, ದಾವಣಗೆರೆ

೩೭೩ ಅದೇ, ಶಾ.ಸಂ, ೬೧, ದಾವಣಗೆರೆ

೩೭೪ ಇ.ದ.,ಸಂ,೨೩, ೨೦೦೮, ರಾಕೇಶ ಬಿ.ಸಿ., ಹರಿಹರ ತಾಲೂಕು ಭೈರನಪಾದದ ಪ್ರಾಚೀನ ಅವೇಶಷಗಳು, ಪು. ೨೯

೩೭೫ ಎ.ಕ.,ಸಂ,೧೧, ಶಾ.ಸಂ, ೭೪, ದಾವಣಗೆರೆ

೩೭೬ ಅದೇ, ಶಾ.ಸಂ, ೭೭, ದಾವಣಗೆರೆ

೩೭೭ ಅದೇ, ಶಾ.ಸಂ, ೮೪, ದಾವಣಗೆರೆ

೩೭೮ ಅದೇ, ಶಾ.ಸಂ. ೧೧೭, ದಾವಣಗೆರೆ

೩೭೯ ಅದೇ, ಶಾ.ಸಂ. ೧೧೬, ದಾವಣಗೆರೆ

೩೮೦ ಅದೇ, ಶಾ.ಸಂ. ೮೬, ದಾವಣಗೆರೆ

೩೮೧ ಅದೇ, ಶಾ.ಸಂ. ೧೨೨, ದಾವಣಗೆರೆ

೩೮೨ ಅದೇ, ಶಾ.ಸಂ. ೧೦೬, ದಾವಣಗೆರೆ

೩೮೩ ಅದೇ, ಶಾ.ಸಂ. ೧೧೪, ದಾವಣಗೆರೆ

೩೮೪ ಅದೇ, ಶಾ.ಸಂ. ೨೫, ದಾವಣಗೆರೆ

೩೮೫ ಅದೇ, ಶಾ.ಸಂ. ೨೨, ದಾವಣಗೆರೆ

ಅಧ್ಯಾಯ ನಾಲ್ಕು

ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪ

೪.೧ ಧಾರ್ಮಿಕ ವಾಸ್ತು

೪.೨ ರಕ್ಷಣಾವಾಸ್ತು

೪.೩. ಮೂರ್ತಿಶಿಲ್ಪ

೪.೪ ಸ್ಮಾರಕ ಶಿಲ್ಪ

ಅಧ್ಯಾಯ ನಾಲ್ಕು

ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪ

ಮಾನವನು ನಿಸರ್ಗದಲ್ಲಿ ಸಹಜವಾಗಿ ದೊರೆತ ಹಣ್ಣು, ಗೆಡ್ಡೆ, ಗೆಣಸು ತಿಂದು ಗವಿಗಳಲ್ಲಿ ವಾಸಿಸಿ, ತನ್ನ ಬದುಕನ್ನು ಸಾಗಿಸುತ್ತಾ ಕಲ್ಲಿನಿಂದ ಉಪಕರಣಗಳನ್ನು ಸಿದ್ಧಪಡಿಸಿಕೊಂಡು ಪ್ರಾಣಿಗಳನ್ನ ಬೇಟೆಯಾಡಿ ಹಸಿ ಮಾಂಸವನ್ನು ಅವೇ ಉಪಕರಣಗಳಿಂದ ಮಣ್ಣನ್ನು ಉತ್ತಿ, ಅಲ್ಲಿ ಆಹಾರ ಧಾನ್ಯ ಬೆಳೆದು ಆ ನೆಲದ ಸನಿಹದಲ್ಲೇ ಗವಿಯಂತೆ ದುಂಡಾಕಾರದ ಗುಡಿಸಲುಗಳನ್ನು ಕಟ್ಟಿಕೊಂಡು, ಒಂದೆಡೆ ನೆಲೆಸಹತ್ತಿದರು. ಕಾಲನಂತರ ಕಲ್ಲು, ಕಟ್ಟಿಗೆ, ಮಣ್ಣು ಬಳಸಿ ಚೌಕಾಕಾರದ ಮತ್ತು ಆಯತಾಕಾರದ ಮನೆಗಳನ್ನು ಕಟ್ಟಿಕೊಂಡನು ಹೀಗೆ ಮಾನವನು ನೆಲೆಸಿದ ನೆಲವೇ 'ವಾಸ್ತು' ವಸ್ತುವನ್ನು ಆಶ್ರಯಿಸಿದ್ದೇ 'ವಾಸ್ತು' ಅಥವಾ 'ವಸತಿಯೋಗ್ಯ' ಭೂಮಿ ಹರಪ್ಪಾ, ಮಹೆಂಜೋದಾರೋದಂತಹ ಪ್ರದೇಶಗಳಲ್ಲಿ ನಡೆದ ಉತ್ಖನನದಲ್ಲಿ ಕಟ್ಟಡಗಳು, ಆಯತಾಕಾರದ ಉದ್ದವಾದ ಬೀದಿಗಳು, ಕಂಡುಬಂದಿವೆ. ವಾಸ್ತುವಿನ ಜೊತೆಗೆ ಅಂದವೂ ಸೇರಿ ಇದುವೇ ಕಲೆ, ಮತಗಳು ವಾಸ್ತು ಮತ್ತು ಶಿಲ್ಪಕಲೆಗೆ ಹೆಚ್ಚಿನ ಪ್ರಧಾನ್ಯತೆ ನೀಡಿದ ಫಲವಾಗಿ ವಿವಿಧ ವಿನ್ಯಾಸಗಳ ವಿವಿಧ ಕಲೆಯ ಕಟ್ಟಡಗಳು, ವಿವಿಧಾಕಾರದಲ್ಲಿ ನಿರ್ಮಾಣಗೊಂಡಿವೆ.

ದೇವಾಲಯ ಎಂಬುದು ಒಂದು ಧಾರ್ಮಿಕ ಕಟ್ಟಡ, ಸಾಮೂಹಿಕ ಪ್ರಾರ್ಥನೆ ಸಲ್ಲಿಸಲು ಅನುಕೂಲವಿರುವ ಒಂದು ಜಾಗ ಅಥವಾ ಸ್ಥಳ, ಇದಕ್ಕೆ ದೇವಾಲಯು, ದೇವಸ್ಥಾನ, ಗುಡಿ, ದೇವಮಂದಿರ, ದೇವಗಾರ, ದೇವಳ, ದೇಗುಲ ಇತ್ಯಾದಿ ಹೆಸರುಗಳಿಂದ ಕರೆಯಲಾಗುತ್ತದೆ. ಇಂಗ್ಲಿಷ್ ಭಾಷೆಯಲ್ಲಿ 'ಟೆಂಪಲ್' ಎಂಬ ಶಬ್ದಕ್ಕೆ ದೇವರು ನೆಲೆಯಾಗಿರುವ ಸ್ಥಳ[೧], ದೇವಸ್ಥಾನ, ಗುಡಿ ಎಂಬ ಅರ್ಥವೂ ಇದೆ. ನಮ್ಮ ಮನಸ್ಸಿನ ಕಲ್ಪನೆಗೂ ಮೀರಿದ ಮನಸ್ಸಿಗೆ ಯಾವುದು ಆಧಾರವಾಗುತ್ತದೆಯೋ ಅದು ದೇವರು, ಆದುದರಿಂದ ಪ್ರಾಚೀನ ಕಾಲದಲ್ಲಿ ದೇವ ಮಂದಿರಗಳ ಕಲ್ಪನೆ ಅಂದಿನ ಜನರ ಭಾವನೆಗೆ ಒಡಮೂಡಿದ್ದುದು ವಿಶೇಷವೇ ಸರಿ 'ಮಾನಸಾರ', 'ಮಯಮತ,' 'ಕಾಶ್ಯಪಶಿಲ್ಪ', 'ಅಪರಾಜಿತಪೃಚ್ಛ', 'ಸಮರಾಂಗಣ ಸೂತ್ರಧಾರ'[೨], ದಂತಹ ಶಾಸ್ತ್ರಗ್ರಂಥಗಳು ಇಡೀ ದೇವಾಲಯವನ್ನು ವಾಸ್ತು ಪುರುಷನ ಶರೀರದೊಂದಿಗೆ ಸಮೀಕರಿಸಿ ವಿವರಿಸುತ್ತವೆ. 'ಗರ್ಭಗೃಹ'ವು 'ಮುಖ' ವೆಂದು, 'ಅಂತರಾಳ' ಮತ್ತು 'ಗೂಡಮಂಟಪಗಳು',

'ಕಂಠ', 'ವಕ್ಷ', ಮತ್ತು 'ಉದರಗಳೆಂದು, 'ಗರುಡಗಂಬ'.ವನ್ನು 'ಶಿಶ್ನ'ವೆಂತಲೂ, 'ಬಲಿಪೀಠ' ವನ್ನು 'ಮೊಣಕಾಲು' ಎಂದು ಮತ್ತು 'ರಾಯಗೋಪುರ'ವನ್ನು 'ಪಾದ'ಗಳೆಂದು ವರ್ಣಿಸಿದೆ.

ಪ್ರಾಚೀನ ಭಾರತದ ವಾಸ್ತುಶಿಲ್ಪ ಚರಿತ್ರೆಯಲ್ಲಿ ದೇವಾಲಯಗಳ ಸ್ಪಷ್ಟಚಿತ್ರಣ ನಮಗೆ ಶಿಲಾಯುಗದ ಜನರ ಪ್ರಕೃತಿ ಪೂಜೆ ಮತ್ತು ಸಮಾಧಿ ಪೂಜೆಗಳಿಂದ ಸಿಗುತ್ತವೆ. ಕ್ರಮೇಣ ಈ ಪೂಜೆಗಳು ಪ್ರತಿಮಾ ರೂಪ ಪಡೆದು ಗುಂಪಿನ ಆರಾಧನೆಗಾಗಿ ದೇವಾಲಯಗಳು ನಿರ್ಮಾಣಗೊಂಡಿರಬೇಕು.[೩] ಮನುಷ್ಯನು ಪ್ರಾಣಿವರ್ಗದಿಂದ ಬೇರ್ಪಟ್ಟ ತಲೆ ಎತ್ತಿ ನಿಂತಾಗಲೇ ಧರ್ಮವು ಅವನ ನೆರವಿಗೆ ಬಂತು. ಆದಿಮಾನವನು ನಿಸರ್ಗದ ಮಡಿಲಲ್ಲಿ ಅಡಗಿರುವ ವೈಚಿತ್ರ್ಯ ಅದ್ಭುತಗಳನ್ನು ಭಯವಿಸ್ಮಿತನಾಗಿ ದಿಗ್ಭ್ರಾಂತಗೊಂಡು ಅವನಲ್ಲಿ ಭಯವೂ ಮೂಡಿತು. ಪ್ರಕೃತಿಯಲ್ಲಿ ಯಾವುದೇ ಶಕ್ತಿ ಅಡಗಿದೆಯೆಂದು ಅರಿವಾಗಿ ಅದರ ವಿಚಾರದಲ್ಲಿ ಪೂಜ್ಯಭಾವನೆ ಮೂಡಿತು. ಈ ಕಾರಣದಿಂದಲೇ ಗಿಡ,ಮರ,ನದಿ ಇತ್ಯಾದಿಗಳು ಪೂಜ್ಯನೀಯವಾದುದಲ್ಲದೇ, ಪೂಜ್ಯಸ್ಥಾನಗಳಾದವು ಅಪೂರ್ವ, ಅದ್ಭುತ, ದಿವ್ಯವೆಂದಾದುದನ್ನು ಅನುಭವಿಸುವ ಸಾಮರ್ಥ್ಯವಿರುವಂತೆಯೇ ಮನುಷ್ಯನಿಗೆ ಅದರ ಪ್ರಕೃತಿಗಳನ್ನು ಕಲ್ಪಿಸಿಕೊಳ್ಳುವ ಹವ್ಯಾಸವು ನಿಸರ್ಗಸಿದ್ಧವಾದುವೇ, ಧರ್ಮದ ನೆಲೆಯಲ್ಲಿ ಪ್ರತಿ ಕೃತಿಗಳ ಬಳಕೆಯ ಮುನ್ನ ಪ್ರಕೃತಿಸಿದ್ಧವಾದ ಪ್ರತಿಮೆಗಳನ್ನು ಬಳಸುವ ಪದ್ಧತಿ ಇದ್ದೀತು. ಇದರ ರಕ್ಷಣೆಗೆ ಕಟ್ಟಿದ ಕಟಕಟೆಯೇ ದೇಗುಲವಾಗಿ ಬೆಳವಣಿಗೆ ಹೊಂದಿತು.[೪] ಹೀಗಾಗಿ ಆದಿ ಮಾನವನು ತನಗೆ ನೆರವಾಗುವ ಪ್ರತಿಮೆಯನ್ನು ಇಟ್ಟ ಸ್ಥಳ ಅದರ ಸುತ್ತಲೂ ಕಟ್ಟಿದ ಕಟ್ಟಡ ಹಾಗೂ ಅದರ ಸುತ್ತಲಿರುವ ಪ್ರದೇಶವೂ ಪವಿತ್ರವಾಯಿತು.

ಕರ್ನಾಟಕದ ವಾಸ್ತುಶಿಲ್ಪ ಬೆಳವಣಿಗೆಯ ಶಾತವಾಹನರ ಕಾಲದ ಬೌದ್ಧ ಧರ್ಮದ ಚೈತ್ಯ, ಸ್ತೂಪ, ವಿಹಾರಗಳೊಂದಿಗೆ ಕಂಡು ಬರುತ್ತವೆ. ಬ್ರಹ್ಮಗಿರಿ, ಬನವಾಸಿ, ಸನ್ನತಿ, ಮುಂತಾದೆಡೆಗಳಲ್ಲಿ ಪ್ರಾಚೀನ ವಾಸ್ತುರಚನೆಗಳನ್ನು ನೆನೆಯಬಹುದು. ಬಾದಾಮಿ ಚಾಲುಕ್ಯರ ಕಾಲದಿಂದ ಕರ್ನಾಟಕದಲ್ಲಿ ದೇವಾಲಯಗಳ ನಿರ್ಮಾಣವು ಹೆಚ್ಚಾಯಿತು. ಮಹಾಕೂಟ–ಬಾದಾಮಿ–ಐಹೊಳೆ–ಪಟ್ಟದಕಲ್ಲುಗಳಲ್ಲಿ[೫] ಈ ಪ್ರಾಚೀನ ದೇವಾಲಯಗಳು ವಿಶೇಷವಾಗಿ ಎಲ್ಲೋರ, ಕುಕ್ಕನೂರು, ರೋಣ[೬] ಮುಂತಾದ ಸ್ಥಳಗಳಲ್ಲಿ ಕಂಡುಬರುತ್ತವೆ. ಕುರುವತ್ತಿ, ಲಕ್ಕುಂಡಿ, ಕಟಗೇರಿ, ಐಹೊಳೆಗಳಲ್ಲಿ ಕಲ್ಯಾಣ ಚಾಲುಕ್ಯರ ದೇವಾಲಯಗಳು ಕಂಡುಬರುವಂತೆ ಉತ್ತರ ಕರ್ನಾಟಕದ ಹಲವು ಭಾಗಗಳಲ್ಲಿ ಇವರ ಕಾಲದ ದೇವಾಲಯಗಳಿವೆ. ಹೊಯ್ಸಳರ ಕಾಲದ ದೇವಾಲಯಗಳಿಗೆ ದಕ್ಷಿಣ ಕರ್ನಾಟಕವು ಮುಖ್ಯ ನೆಲೆಯಾಗಿದ್ದು, ಬೇಲೂರು, ಹಳೇಬೀಡು, ಹರಿಹರ, ಸೋಮನಾಥಪುರಗಳು ಇವರ ಕಾಲದ ದೇವಾಲಯಗಳಿಗೆ ಪ್ರಸಿದ್ಧವಾಗಿವೆ. ಗಂಗರ ಕಾಲದ ದೇವಾಲಯಗಳನ್ನು ಆವನಿ, ಹೇಮಾವತಿಯಲ್ಲೂ, ವಿಜಯನಗರ ಕಾಲದ ದೇವಾಲಯಗಳನ್ನು ಹಂಪೆಯಲ್ಲಿ ಕಾಣಬಹುದು.[೭]

ಮೇಲ್ಕಂಡ ಕಾಲಘಟ್ಟಗಳ ಅಥವಾ ರಾಜಮನೆತನಗಳ ಕಾಲದ ದೇವಾಲಯಗಳನ್ನು ಆಯತಾಕಾರದಲ್ಲಿ ಇಲ್ಲವೆ ಚೌಕಾಕಾರದಲ್ಲಿ ಇಲ್ಲವೆ ನಕ್ಷತ್ರಾಕಾರದಲ್ಲಿ ಕಟ್ಟಿರುವುದು ಕಂಡು ಬಂದಿದೆ. ಗರ್ಭಗೃಹದ ಮೇಲೆ ಶಿಖರ, ಗರ್ಭಗೃಹದ ಮುಂದೆ ಮಂಟಪ, ದ್ವಾರ, ವಾಸ್ತು

ಪಸರಿಸಿದಂತೆ ವಾಸ್ತು ವಿನ್ಯಾಸದಲ್ಲಿಯೂ ವಿಕಾಸವಾಗುತ್ತಾ ಬಂದಿದೆ. ಆಯತ, ಚೌಕೋನಗಳ ಜೊತೆಗೆ ಷಟ್ಕೋನ, ಅಷ್ಟಕೋನ, ವಾಸ್ತು ಬಳಕೆಯಲ್ಲಿ ಬಂದಿದೆ. ಶಿಲ್ಪಿಗಳಿಗೂ ಕೂಡಾ ವಾಸ್ತು-ಶಿಲ್ಪಕಲೆ, ದೇವಾಲಯ ತಲವಿನ್ಯಾಸ ಇವುಗಳ ಕುರಿತು ಆಳವಾದ ಜ್ಞಾನವಿರುತ್ತಿತ್ತು.[೭] ಬಾದಾಮಿಯ ಗುಹಾದೇವಾಲಯಗಳ ಎಡ ಬಲಗಳಲ್ಲಿ ಮತ್ತು ಎದುರಿನ ಬಂಡೆಗಳ ಮೇಲೆ ಅನೇಕ ವ್ಯಕ್ತಿಗಳ ಹೆಸರುಗಳಿವೆ. ಅವುಗಳಲ್ಲಿ ಹೆಚ್ಚಾಗಿ ಶಿಲ್ಪಿಗಳ ಹೆಸರುಗಳಿರುವುದು ತಿಳಿದು ಬರುತ್ತದೆ.[೮] ಯುಗಾದಿ ಪಾಡ್ಯದಿನ ಅರುಣೋದಯ ಸಮಯದಲ್ಲಿ ಕೆಲಕ್ಷಣ ಮಾತ್ರ ಸೂರ್ಯನ ಕಿರಣಗಳು ನೇರವಾಗಿ ಚಲಿಸುವುದನ್ನು ಅಂದಿನ ಶಿಲ್ಪಿಗಳು ಅರಿತಿದ್ದರು. ಈ ನೇರ ಕಿರಣಗಳಚಲನೆಯನ್ನು ದೇವಾಲಯಗಳ ತಲವಿನ್ಯಾಸದ ಮಧ್ಯ ರೇಖೆಯನ್ನಾಗಿಸಿ, ದೇವಾಲಯ ನಿರ್ಮಾಣಕಾರರು ದೇವಾಲಯಗಳನ್ನು ಕಟ್ಟಿರುವರು. ಹೆಚ್ಚಿನ ಸಂಖ್ಯೆಯಲ್ಲಿ ದೇವಾಲಯಗಳು ಪೂರ್ವಾಭಿಮುಖವಾಗಿರುವುದೇ (ಸೂರ್ಯೋದಯಕ್ಕೆ ಅಭಿಮುಖವಾಗಿ) ಕಾರಣ.

ವಾಸ್ತು ನಿರ್ಮಾಣ ವಿನ್ಯಾಸವಾದಂತೆ ಮೂರ್ತಿಶಿಲ್ಪಗಳೂ ಸಹ ವ್ಯಾಪಕವಾದ ಅಧ್ಯಯನದಲ್ಲಿ ಪ್ರಮುಖ ಪಾತ್ರವಹಿಸಿದೆ. ಸಂಗೀತ ಮತ್ತು ನೃತ್ಯ ಕಲೆಗಳಿಗೆ ದೊರೆತ ಪ್ರೋತ್ಸಾಹಕ್ಕಿಂತಲೂ ಹೆಚ್ಚಿನ ಪ್ರೋತ್ಸಾಹವು ಮೂರ್ತಿಶಿಲ್ಪ ಕಲೆಗೆ ಲಭಿಸಿದೆ. ಆಯಾ ಅರಸು, ಸಾಮಂತ, ಗಾವುಂಡ ಮೊದಲಾದ ಮನೆತನಗಳ ಆಳ್ವಿಕೆಯ ಸಂದರ್ಭದಲ್ಲಿ ಶಿಲ್ಪಗಳಿಗೆ ಪ್ರೋತ್ಸಾಹ ದೊರೆತು ಪ್ರೌಢವಾದ ಶಿಲ್ಪಗಳು ರೂಪುಗೊಂಡು ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಹೆಚ್ಚಿಸಿದವು.[೯] ದೇವಾಲಯವನ್ನು ಪ್ರವೇಶಿಸುವುದಕ್ಕೆ ಮೊದಲೆ ಶಿಲ್ಪಗಳು ಭಕ್ತರನ್ನು ಆಕರ್ಷಿಸಬೇಕಾಗಿತ್ತು. ಜೊತೆಗೆ ಶಿಲ್ಪಗಳಿಗೆ ತಮ್ಮ ಕಲಾಚಾತುರ್ಯವನ್ನು ಪ್ರದರ್ಶಿಸಲು ಜನರಿಗೆ ಪುರಾಣ-ಪುಣ್ಯಕಥೆಗಳನ್ನು ತಿಳಿಯಪಡಿಸಲು ಸ್ಥಳಾವಕಾಶಗಳು ಬೇಕಾಗಿರುವುದರಿಂದ ದೇವಾಲಯದ ಹೊರ ಭಿತ್ತಿಗಳು ಅನೇಕ ಉಬ್ಬು ಶಿಲ್ಪಗಳಿಗೆ ಗೂಡು, ಜಾಲಂಧ್ರ, ಮತ್ತಿತರ ವಿನ್ಯಾಸಗಳಿಗೆ ಅವಕಾಶ ನೀಡಿದವು. ವಾಸ್ತು ಶಿಲ್ಪವು ದೇವತೆಗಳ ಆಲಯವನ್ನು ಕಟ್ಟಿದರೆ, ಮೂರ್ತಿಶಿಲ್ಪವೂ ಆ ದೇವತೆಗಳಿಗೆ ಕಲ್ಪನೆಗೆ ಸಾಂಕೇತಿಕವಾದ ವ್ಯಕ್ತಿ ಸ್ವರೂಪವನ್ನು ಕೊಡಲು ಪ್ರಯತ್ನಿಸಿದೆ. ಅಂದರೆ ಧಾರ್ಮಿಕ ಶ್ರದ್ಧೆಯೇ ಶಿಲ್ಪಕ್ಕೆ ಮೂಲಭೂತ ಪ್ರಚೋಧನೆಯಾಗಿ ಪರಿಣಮಿಸಿದೆ.

೪.೧ ಧಾರ್ಮಿಕ ವಾಸ್ತು

ಪ್ರಸ್ತುತ ಹರಿಹರ ತಾಲೂಕು ಪ್ರದೇಶದಲ್ಲಿ ಪ್ರಾಚೀನ ದೇವಾಲಯಗಳು ಹೆಚ್ಚಾಗಿ ಕಂಡುಬರುವುದು ಕಡಿಮೆ. ಹರಿಹರದ ಹರಿಹರೇಶ್ವರ ದೇವಾಲಯದ ನಿರ್ಮಾಣದ ಕಾಲವನ್ನು ಇಲ್ಲಿಯ ಪ್ರಾಚೀನ ದೇವಾಲಯಗಳಿಗೆ ಉದಾಹರಿಸಬಹುದು.[೧೦] ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ನಿರ್ಮಾಣಗೊಂಡಿರುವ ದೇವಾಲಯಗಳ ಸಂಖ್ಯೆ ಈ ಭಾಗದಲ್ಲಿ ಹೆಚ್ಚಾಗಿ ಕಂಡು ಬರುತ್ತವೆ. ಹರಿಹರದ (ಕೂಡಲೂರಿನ) ಸಂಗಮೇಶ್ವರ, ಹರಿಹರದ ಹರಿಹರೇಶ್ವರ, ದೇವರಬೆಳಕೆರೆಯ ಕಲ್ಲೇಶ್ವರ, ಸಾರಥಿಯ ಬಸವೇಶ್ವರ, ನಂದಿಗುಡಿಯ ಈಶ್ವರ, ಜಿಗಳಿ ರಂಗನಾಥ ದೇವಾಲಯಗಳು ಪ್ರಾಚೀನ ಕಾಲದಲ್ಲಿಯೇ ನಿರ್ಮಾಣಗೊಂಡವು ಎಂದು ಹೇಳಬಹುದು. ಹೊಯ್ಸಳ ಕಾಲದಲ್ಲಿ ಜೀರ್ಣೋದ್ಧಾರವಾದ

ಹಾಗೂ ನಿರ್ಮಾಣಗೊಂಡ ದೇವಾಲಯಗಳಲ್ಲಿ ಮುಖ್ಯವಾಗಿ ಹರಿಹರದ ಹರಿಹರೇಶ್ವರ, ನಂದಿತಾವರೆಯ ಅಮೃತಲಿಂಗ ಮಾಣಿಕೇಶ್ವರ, ಚಿಕ್ಕಬಿದರೆಯ ಕಲ್ಲೇಶ್ವರ, ಜಗಳಿಯ ರಂಗನಾಥ, ವಾಸನದ ಕೇಶವ, ಹರಿಹರದ ಲಕ್ಷ್ಮೀ ದೇವಾಲಯಗಳು ಆಕರ್ಷಕವಾಗಿವೆ. ಕೊಮಾರನಹಳ್ಳಿಯ ರಂಗನಾಥ, ಲಕ್ಷ್ಮೀ ಮತ್ತು ಬಸವೇಶ್ವರ, ಹಾಲಿವಾಣದ ಕಲ್ಲೇಶ್ವರ, ಕುಣಿಬೆಳಕೆರೆಯ ಉಮಾಮಹೇಶ್ವರ, ಮಲೆಬೆನ್ನೂರಿನ ಕಲ್ಲೇಶ್ವರ, ಯಲವಟ್ಟಿಯ ಈಶ್ವರ, ದೀಟೂರಿನ ಕಲ್ಲೇಶ್ವರ, ಧೂಳೆಹೊಳೆಯ ಗುಂಡಿಬಸವೇಶ್ವರ, ಗಂಗನರಸಿಯ ಕಲ್ಲೇಶ್ವರ ಇತ್ಯಾದಿ ದೇವಾಲಯ ವಿಜಯನಗರ ಹಾಗೂ ಪಾಳೆಯಗಾರರ ಕಾಲದ ಲಕ್ಷಣಗಳಲ್ಲಿ ನಿರ್ಮಾಣಗೊಂಡಿರುವುದು ಕಂಡುಬರುತ್ತವೆ. ದ್ರಾವಿಡ ಶೈಲಿಯ ಏಕಕೂಟ, ದ್ವಿಕೂಟ ಹಾಗೂ ತ್ರಿಕೂಟ ದೇವಾಲಯಗಳು ಈ ಭಾಗದಲ್ಲಿವೆ. ದ್ರಾವಿಡ ಎಂಬುದು ವಿಂಧ್ಯಾಚಲದ ದಕ್ಷಿಣಕ್ಕಿರುವ ಇಡೀ ಭೂಪ್ರದೇಶ[೧೧] ಹರಿಹರ ಪರಿಸರದಲ್ಲಿನ ಮಹತ್ವದ ದೇವಾಲಯಗಳ ವಾಸ್ತುಕಲೆಯನ್ನು ಗಮನಿಸುವುದಾದರೆ.

ಅಧಿಷ್ಠಾನ: ಅಧಿಷ್ಠಾನವು ದೇವಾಲಯವನ್ನು ಭರಿಸುವ ಪ್ರಮುಖ ಅಂಗ. ಇದು "ಅಧಿಷ್ಠತಿ" (ಏರಿಸು, ಆಶ್ರಯ ನೀಡು) ಎಂಬ ಪದದಿಂದ ನಿಷ್ಪನ್ನವಾಗಿದೆ.[೧೨] ಷಡ್ವರ್ಗದಲ್ಲಿ ಇದು ಮೊದಲನೆಯ ಅಂಗವಾದ ಕಾರಣ ಇದನ್ನು "ಆದ್ಯಂಗ"ವೆಂದೂ ಕರೆಯುತ್ತಾರೆ. ಅಧಿಷ್ಠಾನದ ಪ್ರಮುಖ ಅಂಗಗಳೆಂದರೆ ಉಪಾನ, ಜಗತಿ, ಕುಮುದ, ಕಪೋತ/ಮಹಾಪಟ್ಟಿ ಮತ್ತು ಪ್ರತಿ.[೧೩] ಇವುಗಳಷ್ಟೇ ಅಲ್ಲದೆ ದೇವಾಲಯದ ಅಧಿಷ್ಠಾನವು ಪದ್ಮಕರ್ಣಿಕಾ, ಕಂಟಕ, ಹಾಗೂ ವೇದಿಗಳನ್ನ ಹರಿಹರದ ಹರಿಹರೇಶ್ವರ ದೇವಾಲಯವು ಹೊಂದಿದೆ. ಇದಕ್ಕೆ ಹತ್ತಿರವಾದ ಉದಾಹರಣೆಯೆಂದರೆ ಚಿಕ್ಕಬಿದಿರೆಯ ಕಲ್ಲೇಶ್ವರ ದೇವಾಲಯದ ವಾಸ್ತುಗಳಲ್ಲಿ ಕಾಣಬಹುದು.

ಭಿತ್ತಿ: ಭಿತ್ತಿಯೆಂದರೆ ದೇವಾಲಯದ ಗೋಡೆ, ಇದು ಷಡ್ವರ್ಗ ಕ್ರಮದ ಎರಡನೇಯ ಭಾಗ. ದೇವಾಲಯದ ಭಾರಹೊರಲೆಂದು ಭಿತ್ತಿಯಲ್ಲಿ ನಿಶ್ಚಿತ ಅಂತರದಲ್ಲಿ ಕುಡ್ಯಸ್ತಂಭಗಳು ಇರುವುದಲ್ಲದೆ ಅವುಗಳ ನಡುವೆ ದೇವಕೋಷ್ಠ ಜಾಲಂಧ್ರ (ವಾತಾಯನ), ತೋರಣ, ಕುಂಬತಲಾ ಇತ್ಯಾದಿಗಳಿರುತ್ತವೆ ನಂದಿತಾವರೆ, ಹರಿಹರ ದೇವಾಲಯಗಳ ಭಿತ್ತಿಯ ಹೊರಭಾಗದಲ್ಲಿ ಅರೆಗಂಭಗಳು, ಜೋಡಿ ಅರೆಗಂಭಗಳಷ್ಟನ್ನೇ ಕೆತ್ತಿದ್ದಾರೆ. ಇನ್ನು ಕೆಲವು ಕಡೆ ಶಿಖರದ ಮಾದರಿಗಳನ್ನು ಬಿಡಿಸಲಾಗಿದೆ. ಇದೇ ದೇವಾಲಯಗಳ ಗರ್ಭಗೃಹಗಳ ಹೊರಭಾಗದ ಮಧ್ಯೆ ಭಿತ್ತಿಯಲ್ಲಿ ದೇವಕೋಷ್ಠಗಳಿದ್ದು ಕೆಲವು ದೇವಕೋಷ್ಠಗಳಲ್ಲಿ ಮೂರ್ತಿಗಳಿವೆ. ಈ ದೇವಕೋಷ್ಠಗಳನ್ನು ಉತ್ತಮ ರೀತಿಯಲ್ಲಿ ಅಲಂಕರಿಸಲಾಗಿರುತ್ತದೆ.[೧೪]

ಪ್ರಸ್ತರ: ದೇವಾಲಯದ ಷಡ್ವರ್ಗಗಳಲ್ಲಿ ಪ್ರಸ್ತರ ಮೂರನೇಯದು. ಭಿತ್ತಿಯ ಮೇಲ್ಭಾಗದಲ್ಲಿ ನಿರ್ಮಾಣವಾಗುವ ಈ ವರ್ಗವು ನಾಲ್ಕು ಅಂಗಗಳನ್ನು ಹೊಂದಿರುತ್ತದೆ. ಅವುಗಳೆಂದರೆ ಉತ್ತರ, ವಲಭಿ, ಕಪೋತ, ಮತ್ತು ವಾಜನ ಈ ವರ್ಗವು ನಾಲ್ಕು ಸ್ತರಗಳನ್ನು ಅಂದರೆ ಪದರ-ಪದರವಾಗಿ ಅಂಗಗಳನ್ನು ಹೊಂದಿರುವುದರಿಂದ ಇದಕ್ಕೆ ಪ್ರ+ಸ್ತರ=ಪ್ರಸ್ತರ ಎಂಬ ಹೆಸರು.[೧೫] ಈ ರಚನೆಯ ಮಳೆಯಿಂದ ದೇವಾಲಯವನ್ನು ರಕ್ಷಿಸುತ್ತದೆ. ಇಂತಹ ಭಾಗಗಳನ್ನು ಹರಿಹರೇಶ್ವರ ದೇವಾಲಯದ ಪ್ರಸ್ತರದಲ್ಲಿ ಕಾಣಬಹುದು.

ಗ್ರೀವ: ಪ್ರಾಸಾದದ ಮೇಲೆ ಶಿಖರವನ್ನು ಕೂಡಿಸುವುದಕ್ಕೆ ಆಧಾರವಾಗಿ ನಿರ್ಮಿಸಲಾಗುವ ಅಂಗವೇ ಗ್ರೀವ. ಇದು ಷಡ್ವರ್ಗಗಳಲ್ಲಿ ನಾಲ್ಕನೇಯದು. ಸಾಮಾನ್ಯವಾಗಿ ಇದು ಶಿಖರದ ವಿನ್ಯಾಸವನ್ನು ಹೋಲುತ್ತದೆ. ಹರಿಹರದ ಹರಿಹರೇಶ್ವರ, ಲಕ್ಷ್ಮೀ ದೇವಾಲಯಗಳು ಹಾಗೂ ನಂದಿಗುಡಿ, ಚಿಕ್ಕಬಿದಿರೆ ದೇವಾಲಯಗಳಲ್ಲಿ ಕಾಣಬಹುದು.

ಶಿಖರ: ದೇವಾಲಯದ ಐದನೇಯ ವರ್ಗ ಶಿಖರ, ಕೆಲವೊಮ್ಮೆ ಇಡೀ ಪ್ರಸಾದವನ್ನು ಶಿಖರವೆಂದು ಸಂಬೋಧಿಸುವ ವಾಡಿಕೆ ಉಂಟು. ಶಿಖರಗಳನ್ನು ಆಕಾರದ ಆಧಾರದ ಮೇಲೆ ಮೂರು ಪ್ರಕರಣಗಳಿಗಾಗಿ ವಿಂಗಡಿಸಲಾಗುತ್ತದೆ. ಚತುರಶ್ರಾಕಾರ ವಿನ್ಯಾಸವನ್ನು ಹೊಂದಿರುವ ಶಿಖರವನ್ನು "ವಿಷ್ಣುಚ್ಛಂಧ" ಶಿಖರವೆನ್ನುತ್ತಾರೆ, ವೃತ್ತಾಕಾರದ ವಿನ್ಯಾಸವನ್ನು ಹೊಂದಿರುವ ಶಿಖರವನ್ನು "ರುದ್ರಚ್ಛಂಧ" ಶಿಖರವೆನ್ನುತ್ತಾರೆ.[೧೬] ಈ ಬಗೆಯ ಶಿಖರಗಳು ನಂದಿಗುಡಿ, ಚಿಕ್ಕಬಿದಿರೆ, ಹರಿಹರದ ದೇವಾಲಯಗಳಲ್ಲಿ ಕಾಣಸಿಗುತ್ತವೆ.

ಸ್ತೂಪಿ: ಚಿಕ್ಕಬಿದಿರೆಯ ದೇವಾಲಯದ ಮೇಲ್ಭಾಗವು ಕದಂಬನಾಗರ ಶೈಲಿಯ ಶಿಖರವಾಗಿದೆ. ಊರ್ದ್ವಕ್ರಮದಲ್ಲಿ ಕೊನೆಯದಾದ ಮತ್ತು ಮುಖ್ಯವಾದ ಭಾಗವೇ ಸ್ತೂಪಿ(ಕಲಶ). ಷಡ್ವರ್ಗಗಳಲ್ಲಿ ಆರನೇಯದಾದ ಅಂಗ ಇದಾಗಿದ್ದು ಘಟ, ಗಲ ಮತ್ತು ಮುಕುಲಗಳೆಂಬ ಮುಖ್ಯ ಅಂಗಗಳಿರುತ್ತವೆ.[೧೭] ಕಲಶ ಸ್ಥಾಪನೆಯಿಂದಲೇ ದೇವಾಲಯದ ಪೂಜಾ ವಿಧಿಗಳ ಆರಂಭವಾಗುವುದರಿಂದ ಧಾರ್ಮಿಕ ದೃಷ್ಟಿಯಿಂದ ಇದು ಮುಖ್ಯ ಅಂಗವಾಗಿದೆ. ಚಿಕ್ಕಬಿದಿರೆಯ ಕಲ್ಲೇಶ್ವರ ದೇವಾಲಯದಲ್ಲಿನ ಶಿಖರದ ಮೇಲಿನ ಕಲಶ ಶಿಲೆಯದಾಗಿರುವುದು ವಿಶೇಷವಾಗಿದೆ.

ಗರ್ಭಗೃಹ: ಗರ್ಭಗೃಹವು ದೇವಾಲಯದ ಕೇಂದ್ರಭಾಗ. ಗರ್ಭಗೃಹದಲ್ಲಿ ಪ್ರಧಾನ ದೇವತಾಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿರುತ್ತದೆ. ಇಲ್ಲಿ ಪ್ರತಿಷ್ಠಾಪಿಸಲಾಗುವ ಮೂರ್ತಿಯನ್ನು "ಮೂಲಬೇರ" ಅಥವಾ "ಮೂಲಮೂರ್ತಿ" ಎನ್ನುವರು. ಗರ್ಭಗೃಹವು ಸಾಮಾನ್ಯವಾಗಿ ಚೌಕಾಕಾರವಾಗಿ ಇರುತ್ತವೆ ಆದರೆ ಶಾಸ್ತ್ರಗ್ರಂಥಗಳು ಗರ್ಭಗೃಹಗಳನ್ನು "ವೃತ್ತ" "ಚತುರಶ್ರ", "ಆಯತ", "ವೃತ್ತಾಯತ", "ಆಯತವೃತ್ತ" ಅಥವಾ "ಗಜಪೃಷ್ಠಾಕಾರ"ಗಳಲ್ಲಿ ನಿರ್ಮಿಸಬಹುದು[೧೮] ಎಂದು ಹೇಳುತ್ತವೆ. ಸಾಮಾನ್ಯವಾಗಿ ಪ್ರಸ್ತುತ ಅಧ್ಯಯನ ಕ್ಷೇತ್ರದಲ್ಲಿ ಚೌಕಾಕಾರವಾದ ಗರ್ಭಗೃಹಗಳಲ್ಲೇ ಕಂಡುಬಂದಿವೆ.

ಅಂತರಾಳ: ದೇವಾಲಯ ವಿನ್ಯಾಸದಲ್ಲಿ ಗರ್ಭಗೃಹದ ಮಾನಸೂತ್ರಕ್ಕೆ ನೇರವಾಗಿ ಗರ್ಭಗೃಹಕ್ಕೆ ಹೊಂದಿಕೊಂಡಂತೆ "ಅಂತರಾಳ"ವನ್ನು ನಿರ್ಮಿಸಲಾಗುವುದು. ಅಂತರಾಳವು ಗರ್ಭಗೃಹವನ್ನು ಭಕ್ತಾದಿಗಳು ಸಭೆ ಸೇರುವ ಗೂಢ ಮಂಟಪದಿಂದ ಬೇರ್ಪಡಿಸುವ ಅಂಕಣವಾಗಿದೆ. ಇದನ್ನು "ಶುಕನಾಸಿ"[೧೯] ಎಂದೂ ಕರೆಯುವರು. ಒಂದಕ್ಕಿಂತ ಹೆಚ್ಚಿನ ಗರ್ಭಗೃಹಗಳಿದ್ದಾಗ ಅವುಗಳ ಮುಂದೆಯೂ ಅಂತರಾಳಗಳಿರುವುದನ್ನು ಕಾಣಬಹುದು. ಪ್ರಸ್ತುತ ಅಧ್ಯಯನ ಕ್ಷೇತ್ರದ ವ್ಯಾಪ್ತಿಯ ದೇವರಬೆಳಕೆರೆ, ಚಿಕ್ಕಬಿದಿರೆ, ಕುಣಿಬೆಳಕೆರೆ, ಹಾಗೂ ಯಲವಟ್ಟಿ ದೇವಾಲಯಗಳಲ್ಲಿ ಗರ್ಭಗೃಹದ ಮುಂಭಾಗದಲ್ಲಿ ಅಂತರಾಳಗಳಿರುವುದನ್ನು ನೋಡಬಹುದು.

ನವರಂಗ: ದೇವಾಲಯಗಳಲ್ಲಿ ಗರ್ಭಗೃಹದ ಮಾನಸೂತ್ರಕ್ಕೆ ಸರಿಯಾಗಿ, ಭಕ್ತಾಧಿಗಳು ನೆರೆಯಲು ನಿರ್ಮಿಸಿರುವ ಸಭಾಂಗಣವೇ ನವರಂಗ. ಸಾಮಾನ್ಯವಾಗಿ ದೇವಾಲಯದ ಪೂಜೆಯ ಅಂಗವಾಗಿ ನೆಡೆಸಲಾಗುವ ನೃತ್ಯ, ಗಾಯನ, ಪುರಾಣ ವಾಚನ ಮೊದಲಾದ ಸೇವೆಗಳನ್ನು ನೆರವೇರಿಸಲು ರಂಗಮಂಟಪದ[೨೦] ಮಧ್ಯಭಾಗದಲ್ಲಿ ನೆಲಮಟ್ಟದಿಂಧ ಸ್ವಲ್ಪ ಎತ್ತರಕ್ಕೆ ವೇದಿಕೆಯನ್ನು ನಿರ್ಮಿಸಲಾಗುತ್ತದೆ. ಇದನ್ನು ರಂಗ ಎಂದು ಕರೆಯಲಾಗುತ್ತದೆ. ವಿನ್ಯಾಸದಲ್ಲಿ ಚತುರಶ್ರಾಕಾರವಾಗಿರುವ ಈ ಭಾಗವನ್ನು ಒಂಭತ್ತು ಅಂಕಣಗಳಾಗಿ ವಿಭಜಿಸಬಹುದು. ಹೀಗಾಗಿ ಇದನ್ನು 'ನವರಂಗ'ವೆಂದೂ ಕರೆಯುತ್ತಾರೆ. ನವರಂಗವು ವಿಶಾಲವಾದ ರಚನೆಯನ್ನು ಹೊಂದಿದ್ದು ಹೆಚ್ಚು ಅಲಂಕೃತಗೊಂಡಿರುತ್ತವೆ. ಹರಿಹರ ತಾಲೂಕಿನ ಚಿಕ್ಕಬಿದಿರೆಯ ಕಲ್ಲೇಶ್ವರ, ನಂದಿತಾವರೆಯ ಅಮೃತಲಿಂಗ ಮಾಣಿಕೇಶ್ವರ ದೇವಾಲಯದ ನವರಂಗದಲ್ಲಿ ಕೋಷ್ಠಗುಡಿಗಳಿರುವುದನ್ನು ಕಾಣಬಹುದು. ಹಾಗೆಯೇ ನಂದಿಗುಡಿ ಮತ್ತು ಚಿಕ್ಕಬಿದಿರೆ ದೇವಾಲಯಗಳ ನವರಂಗದಲ್ಲಿನ ಮಧ್ಯಭಾಗದ ವೇದಿಕೆಯಲ್ಲಿ ನಂದಿಗಳಿವೆ.

ಮುಖಮಂಟಪ: ದೇವಾಲಯದ ಮಾನಸೂತ್ರಕ್ಕೆ ಹೊಂದಿಕೊಂಡಂತೆ ನವರಂಗ ಪ್ರವೇಶದ್ವಾರಕ್ಕೆ ನಿರ್ಮಿಸಲಾಗುವ ತೆರೆದ ಮಂಟಪವೇ ಮುಖಮಂಟಪ. ಇದನ್ನು ಮುಖ್ಯ ಪ್ರವೇಶದ್ವಾರವಲ್ಲದೆ ಉಪದ್ವಾರಗಳಿಗೂ ನಿರ್ಮಿಸಲಾಗುವುದು. ಮುಖಮಂಟಪವು ಸಾಮಾನ್ಯವಾಗಿ ಒಂದು ಅಂಕಣ ವಿಸ್ತಾರವಾಗಿದ್ದು ನಾಲ್ಕು ಕಂಬಗಳನ್ನು ಹೊಂದಿರುತ್ತದೆ. ಆದುದರಿಂದ ಇದನ್ನು 'ಮುಖಚತುಷ್ಕಿ' ಎಂದು ಕರೆಯುತ್ತಾರೆ.[೨೧] ಈ ಮುಖಮಂಟಪದಲ್ಲಿ ಭಕ್ತಾದಿಗಳು ಕುಳಿತುಕೊಳ್ಳಲು ಅನುಕೂಲವಾಗುವಂತೆ ಕಕ್ಷಾಸನಗಳನ್ನು ನಿರ್ಮಿಸಿರುತ್ತಾರೆ. ಹರಿಹರ ದೇವಾಲಯದಲ್ಲಿ ಮುಖಮಂಟಪವನ್ನು ಕಾಣಬಹುದು.

ನಂದಿಮಂಟಪ: ದೇವಾಲಯಗಳಲ್ಲಿ ಹೊಂದಿಕೊಂಡಂತೆ ಇಲ್ಲವೆ ಪ್ರತ್ಯೇಕವಾದ ನಂದಿಮಂಟಪಗಳು ಇರುತ್ತವೆ ಇವು ಶೈವ ದೇವಾಲಯದಲ್ಲಿ ಕಂಡುಬರುತ್ತವೆ. ನಂದಿಮಂಟಪವನ್ನು ನಂದಿತಾವರೆಯಲ್ಲಿ ಕಾಣಬಹುದು.

ಮಹಾಮಂಟಪ: ದೇವಾಲಯಕ್ಕೆ ಹೊಂದಿಕೊಂಡಂತೆ ಅತಿ ವಿಶಾಲವಾದ ಮತ್ತು ಹಲವಾರು ಅಂಕಣಗಳನ್ನು ಹೊಂದಿರುವ ಮಂಟಪಗಳನ್ನು ಮಹಾಮಂಟಪವೆನ್ನುತ್ತಾರೆ. ಮಹಾಮಂಟಪವನ್ನು ಗೂಢಮಂಟಪದ ಪ್ರಧಾನ ದ್ವಾರಕ್ಕೆ ಹೊಂದಿಕೊಂಡಂತೆ ನಿರ್ಮಿಸಲಾಗಿದ್ದು, ಇದು ಗೂಢ ಮಂಟಪಕ್ಕಿಂತ ಹೆಚ್ಚು ವಿಶಾಲವಾಗಿರುತ್ತದೆ ಈ ಕಾರಣದಿಂದಲೇ ಇದನ್ನು ಮಹಾಮಂಟಪವೆಂದು ಕರೆಯುವರು ಹರಿಹರದ ಹರಿಹರೇಶ್ವರ ದೇವಾಲಯವು ಮಹಾಮಂಟಪವನ್ನು ಹೊಂದಿದೆ.[೨೨]

ಕಂಬ(ಸ್ತಂಭ): ಕಂಬದಲ್ಲಿ ಪೀಠ, ಪಾದ, ದಂಡ, ದಂಡಾಗ್ರ(ಕಲಶ, ತಾಟಿಕಾ, ಘಟ, ಮಂಡಿ, ಫಲಕ), ವೀರಕಂಡ, ಬೋದಿಗೆ–ಈ ಭಾಗಗಳಿದ್ದು ಇವುಗಳಲ್ಲೂ ಉಪವಿಧಗಳಿವೆ. ಅಲ್ಲದೆ ರುಚಕ ಕಂಬ, ಪಾಲಿಕಾ ಕಂಬ, ಶ್ರೀಕಾರ ಕಂಬ, ಸಂಯೋಗ ಕಂಬ, ಕೋಷ್ಠ ಕಂಬ, ಮಿಶ್ರಿತ ಸ್ತಂಭ, ಚಿತ್ರಖಂಡ ಸ್ತಂಭ, ಪದ್ಮಕಾಂತ ಸ್ತಂಭ, ಇತ್ಯಾದಿ ಕಂಬ ಪ್ರಕಾರಗಳು ಇವೆ. ಹರಿಹರ ದೇವಾಲಯದಲ್ಲಿ ಹೆಚ್ಚಾಗಿ ಶ್ರೀಕಾರ ಕಂಬ ಇದೆ. [ಉರುಟಣೆಯಿಂದ ತಿರುಗಿಸಿ ಸಿದ್ಧಪಡಿಸಲಾದ ಸ್ತಂಭಗಳು].

ವಿತಾನ(ಮುಚ್ಚಿಗೆ): ವಿತಾನ ಎಂದರೆ ದೇವಾಲಯದ ಮೇಲ್ಛಾವಣಿ ಇವು ಅಲಂಕೃತವಾಗಿರುತ್ತವೆ. ಸರಳವಾದ ಪದ್ಮಾಲಂಕರಣದಿಂದ ಓಡಿದು ಅತಿ ವಿಶಾಲವಿನ್ಯಾಸವುಳ್ಳ ಭುವನೇಶ್ವರಿಯವರೆಗೂ (ವಿತಾನ,ಮುಚ್ಚಿಗೆ) ನಾನಾ ಪ್ರಕಾರವಾದ ವಿತಾನಗಳನ್ನು ಕಾಣುತ್ತೇವೆ. ಇದರಲ್ಲಿ ಅಷ್ಟದಿಕ್ಪಾಲಕರು, ಮತ್ತಿತ್ತರ ಶಿಲ್ಪಗಳು, ಪದ್ಮ ಮಂಡಲ ಮುಂತಾದವುಗಳನ್ನು ಕೆತ್ತಲಾಗಿರುತ್ತದೆ. ಗರ್ಭಗೃಹ, ಅಂತರಾಳ, ನವರಂಗದ ಮೇಲ್ಕಟ್ಟಿಗೆಗೆ ಎ.ಎಂ.ಅಣ್ಣಿಗೇರಿಯವರು 'ಛತ್ತು' ಎಂದು ಕರೆದಿದ್ದಾರೆ. ಹರಿಹರದ ಲಕ್ಷ್ಮೀ ದೇವಾಲಯದ ಮುಖ ಮಂಟಪದ ವಿತಾನದಲ್ಲಿ ಅರಳಿದ ತಾವರೆಯಿಂದ ಇಳಿಬಿದ್ದ ಮೊಗ್ಗಿನ ಅಲಂಕಾರವನ್ನು ಕಾಣಬಹುದು.

ದ್ವಾರ: ದ್ವಾರವು ಲಲಾಟ,ಉತ್ತರಾಂಗ, ದ್ವಾರಶಾಖಾ, ಪೇದ್ಯಾಪಿಂಡ, ಉದುಂಬರ ಮತ್ತು ಚಂದ್ರಶಿಲಾಗಳಿಂದ ಕೂಡಿದ್ದು, ದ್ವಾರ ಶಾಖೆಯಲ್ಲಿ ವಿವಿಧ ಅಲಂಕರಣೆಗಳಿರುತ್ತವೆ ಅಂತೇ ತೋರಣದಲ್ಲೂ ಪತ್ರ, ಮಕರ, ಚಿತ್ರ, ಎಂಬ ವಿವಿಧಾಲಂಕರಣಗಳನ್ನು ಗುರುತಿಸಬಹುದು. ದೇವಾಲಯದ ಅವಶ್ಯಾಕಾಂಗಗಳಲ್ಲಿ ದ್ವಾರವು ಒಂದಾಗಿದ್ದು ಗರ್ಭಗೃಹ, ನವರಂಗ ಇತ್ಯಾದಿಗಳು ದ್ವಾರಯುಕ್ತವಾಗಿರುತ್ತವೆ ದ್ವಾರದ ಕೆಳಭಾಗದಲ್ಲಿ ದ್ವಾರಪಾಲಕರಿರುವುದು ಸಹಜ ಇದನ್ನು ತಿಪ್ಪೇಸ್ವಾಮಿ ಎಚ್ ರವರು ಮಧ್ಯಭಾಗವೆಂದು ಕರೆದಿದ್ದಾರೆ.[೨೩] ದೇವಾಲಯಗಳ ಪೆದ್ಯಾಭಾಗದಲ್ಲಿ ದ್ವಾರಪಾಲಕ ಶಿಲ್ಪಗಳು ಆಯಾ ಪಂಥಗಳಿಗನುಗುಣವಾಗಿ ಕಂಡುಬರುತ್ತವೆ. ಆದರೆ ಹರಿಹರದ ಹರಿಹರೇಶ್ವರ ದೇವಾಲಯದ ದ್ವಾರಗಳ ಬಲಬದಿಯಲ್ಲಿ ಶೈವದ್ವಾರಪಾಲಕರು ಎಡಬದಿಯಲ್ಲಿ ವೈಷ್ಣವ ದ್ವಾರಪಾಲಕರಿದ್ದಾರೆ.

ದೀಪಸ್ತಂಭ: ಹರಿಹರದ ಹರಿಹರೇಶ್ವರ ದೇವಾಲಯದ ಮುಂಭಾಗದಲ್ಲಿ ದೀಪಸ್ತಂಭಗಳಿವೆ.

ಪ್ರಕಾರ: ದೇವಾಲಯಗಳ ಸುತ್ತ ಪ್ರಕಾರವು ಇರುತ್ತದೆ. ಪ್ರಕಾರದ ಒಳಗೆ ಪರಿವಾರ ದೇವತೆಗಳ ಮಂಟಪಗಳು ಅಥವಾ ಆಯತಗಳು ಇರುತ್ತವೆ. ಪ್ರಕಾರಕ್ಕೆ ಮಧ್ಯದ್ವಾರವಿದ್ದು ಅದರ ಮೇಲ್ಭಾಗದಲ್ಲಿ ಗೋಪುರವಿರುತ್ತದೆ. ಪ್ರಕಾರದ ಒಳಭಾಗದಲ್ಲಿ ಸುತ್ತ ಆವೃತ್ತಮಂಟಪವು ಮುಂಭಾಗದಲ್ಲಿ ಪ್ರತೋಲಿಯಾ ಇರುತ್ತದೆ. ಹರಿಹರದ ಹರಿಹರೇಶ್ವರ ದೇವಾಲಯದ ಸುತ್ತಲೂ ಪ್ರಕಾರಗೋಡೆ ಇದ್ದು ದಕ್ಷಿಣ ಮತ್ತು ಪೂರ್ವದಲ್ಲಿ ಮಹಾದ್ವಾರಗಳಿವೆ. ದ್ವಾರಗಳ ಮೇಲಿನ ಮೂಲಗೋಪುರಗಳು ನಾಶವಾಗಿವೆ. ಕೊಮಾರನಹಳ್ಳಿಯ ರಂಗನಾಥ ದೇವಾಲಯದಲ್ಲಿ ಗೋಪುರವನ್ನು ಕಾಣುತ್ತೇವೆ. ಹರಿಹರ ತಾಲೂಕಿನ ದೇವಾಲಯಗಳನ್ನ ವಾಸ್ತುಶೈಲಿಯ ದೃಷ್ಟಿಯಿಂದ ಪ್ರಮುಖವಾಗಿರುವಂತಹವುಗಳನ್ನು ಈ ಮುಂದಿನಂತೆ ಗುರುತಿಸಲಾಗಿದೆ.

ಸಂಖ್ಯೆ : ೧

ಹೆಸರು : ಈಶ್ವರ ದೇವಾಲಯ

ಗ್ರಾಮ : ನಂದಿಗುಡಿ

ತಾಲೂಕು : ಹರಿಹರ

ಕಾಲಮಾನ : ಕ್ರಿ.ಶ. ೧೦ನೇ ಶತಮಾನ[೨೪]

ನಂದಿಗುಡಿ ಗ್ರಾಮವು ಹರಿಹರದಿಂದ ಹೊನ್ನಾಳಿ ಮಾರ್ಗದಲ್ಲಿ ಸುಮಾರು ಒಂಭತ್ತು ಕಿ.ಮೀ. ಅಂತರದ ಎಕ್ಕೆಗೊಂದಿ ಕ್ರಾಸ್‌ನಿಂದ ಪಶ್ಚಿಮಕ್ಕೆ ಹದಿನಾರು ಕಿ.ಮೀ ದೂರದಲ್ಲಿದೆ. ಗ್ರಾಮದ ದಕ್ಷಿಣಭಾಗದಲ್ಲಿರುವ ಈ ದೇವಾಲಯವು ಉತ್ತರಕ್ಕೆ ಪ್ರವೇಶದ್ವಾರವಿದ್ದು ಮೂಲಗರ್ಭಗುಡಿ ಪೂರ್ವಾಭಿಮುಖವಾಗಿದೆ. ಗ್ರಾನೈಟ್, ಚಪ್ಪಡಿ, ನೀಲಿಛಾಯೆಯ ಬಳಪದ ಶಿಲೆಯಿಂದ[೨೪] ನಿರ್ಮಾಣವಾಗಿದೆ. ಮೇಲಿನ ಶಿಖರಭಾಗ ಉಳಿದಿಲ್ಲ, ದೇವಾಲಯವು ಬಹುತೇಕವಾಗಿ ಜೀರ್ಣೋದ್ಧಾರಗೊಂಡಿದೆ. ತಳವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಒಳಗೊಂಡಿದ್ದು, ಈ ದೇವಾಲಯವನ್ನು ಕುರಿತು ಹಿಂದೆ ಅಧ್ಯಯನ ಮಾಡಿದಂತಹ ಡಾ.ಎಚ್.ತಿಪ್ಪೇಸ್ವಾಮಿ, ಅವರು ಮೂಲತಃ ಇದು ಮೂರು ಗರ್ಭಗೃಹಗಳಿದ್ದು, ತ್ರಿಕೂಟಾಚಲ ದೇವಾಲಯವೆಂದು ಇಲ್ಲಿನ ವಾಸ್ತು ಅವಶೇಷಗಳಿಂದ ಗುರುತಿಸಿದ್ದಾರೆ.[೨೫] ಪೂರ್ವ ಮತ್ತು ಪಶ್ಚಿಮದಲ್ಲಿ ಗರ್ಭಗೃಹಗಳಿದ್ದು ಮೂರ್ತಿಗಳಿವೆ. ಆದರೆ ದಕ್ಷಿಣ ಭಾಗದಲ್ಲಿ ಗರ್ಭಗೃಹದಷ್ಟೇ ಅಳತೆಯ ಖಾಲಿ ಜಾಗವಿದೆ. ಆ ಗರ್ಭಗೃಹದ ದ್ವಾರ ವಿತ್ತೆಂದು ಹೇಳಲು ಗೋಡೆಯ ಕುರುಹುಗಳಿವೆ ಎಂದಿದ್ದಾರೆ. ಆದರೆ ನಾನು ಕ್ಷೇತ್ರಕಾರ್ಯ ಕೈಗೊಂಡ ಸಂದರ್ಭದಲ್ಲಿ ದೇವಾಲಯದ ಒಳಗಡೆ ದಕ್ಷಿಣ ದಿಕ್ಕಿನಲ್ಲಿ ಆ ರೀತಿಯ ಅಂಶಗಳು ಕಂಡುಬರಲಿಲ್ಲ.[೨೬] ಕಾರಣ ಅಷ್ಟೊತ್ತಿಗಾಗಲೆ ದೇವಾಲಯದ ಒಳಗೋಡೆಗೆ ಟೈಲ್ಸನ್ನು ಹಾಕಿದ್ದರು. ಆದರೂ ದೇವಾಲಯದ ಹೊರಭಾಗದ ದಕ್ಷಿಣ ದಿಕ್ಕಿನಲ್ಲೂ ಗುರುತಿಸುವ ಅಂಶಗಳು ಕಾಣಲಿಲ್ಲ.

ಪಶ್ಚಿಮ ಗರ್ಭಗೃಹವು ಚೌಕಾಕಾರವಾಗಿದ್ದು, ಪೂರ್ವಾಭಿಮುಖವಾಗಿದೆ ಅದರಲ್ಲಿ ಒಂದು ಚಿಕ್ಕಲಿಂಗವಿದೆ. ವಿಮಾನದಲ್ಲಿ ಪದ್ಮದ ಅಲಂಕರಣವಿದೆ. ಪ್ರವೇಶದ್ವಾರವು ಸರಳ ಶಾಖೆಗಳಿಂದ ಅಲಂಕೃತಗೊಂಡಿದ್ದು, ಲಲಾಟದಲ್ಲಿ ಗಜಲಕ್ಷ್ಮೀ ಶಿಲ್ಪವಿದೆ ಇದಕ್ಕೆ ಹೊಂದಿಕೊಂಡಂತೆ ಮುಂಭಾಗದಲ್ಲಿರುವ ಆಯತಾಕಾರದ ಅಂತರಾಳದಲ್ಲಿ ಚಿಕ್ಕನಂದಿಯಿದೆ. ಇದರ ದ್ವಾರದ ಕೆಳಭಾಗದ ಅಕ್ಕ ಪಕ್ಕದಲ್ಲಿ ಶೈವದ್ವಾರಪಾಲಕರಿರುವರು. ದ್ವಾರವು ಸ್ತಂಭ, ಲತಾ, ಪದ್ಮ, ಶಾಖೆಗಳಿಂದ ಅಲಂಕೃತಗೊಂಡಿದೆ. ಪದ್ಮಶಾಖೆಗೆ ಹೊಂದಿಕೊಂಡಂತೆ ವೃತ್ತಾಕಾರದ ಸುರುಳಿಯೊಳಗೆ ಜಾಲಂಧ್ರಗಳನ್ನು ಕೊರೆದು ಮಾಡಲಾಗಿದೆ. ಬಲಭಾಗದ ಅಥವಾ ದಕ್ಷಿಣ ಭಾಗದ ಶಾಖೆಯಲ್ಲಿ ಹಾರುತ್ತಿರುವ ನಾಲ್ಕು ಜನ ವಿಧ್ಯಾಧರರಿದ್ದು ಅದರಲ್ಲಿ ಇಬ್ಬರೂ ತುತ್ತೂರಿ ಊದುತ್ತಿರುವವರಿದ್ದಾರೆ. ಯಕ್ಷಯಕ್ಷಿಯರ ಶಿಲ್ಪಗಳೂ ಇವೆ. ಎಡಭಾಗವನ್ನು ಏಳು ಅಡಿ ಉದ್ದದಲ್ಲಿ ಅಲಂಕಾರಯುಕ್ತವಾಗಿ ಚಿತ್ರಿಸಲಾಗಿದೆ. ಮಧ್ಯದಲ್ಲಿ ನಾಟ್ಯಶಿವನಿದ್ದು ಆತ ಒಂದು, ಆರು ಕೈಗಳನ್ನು ಹೊಂದಿ ನಾಟ್ಯವಾಡುತ್ತಿದ್ದಾನೆ, ಬ್ರಹ್ಮನು ದೇವಿಯೊಡನೆ ಹಾಗೂ ಎಡಭಾಗದಲ್ಲಿ ವಿಷ್ಣುವು ತನ್ನ ದೇವಿಯೊಡನೆ ನಿಂತಿರುವ ರೀತಿಯಲ್ಲಿವೆ. ಈ ಮೂರ್ತಿಯ ಎಡ ಬಲದಲ್ಲಿ ನಾಲ್ಕು ಪಾದವುಳ್ಳ ಮಕರಗಳಿವೆ. ಮಕರ ಹಿಂಭಾಗದಲ್ಲಿ ಸಿಂಹ ಮತ್ತು ವ್ಯಾಲಗಳ ರಚನೆಗಳು ಕಂಡುಬರುತ್ತವೆ.

ಪೂರ್ವಭಾಗದ ಗರ್ಭಗೃಹದಲ್ಲಿ ಸ್ಥಾನಿಕ ಸೂರ್ಯ ಮೂರ್ತಿಯಿದೆ. ಅದರ ಬಳಿ ಚಿಕ್ಕನಂದಿ ಮತ್ತು ಲಿಂಗದ ಶಿಲ್ಪಗಳಿವೆ ಇದರ ದ್ವಾರವು ಅಲಂಕೃತವಾಗಿರದೆ ನಿರಾಲಂಕೃತವಾಗಿದೆ.

ನವರಂಗದ ಮಧ್ಯದಲ್ಲಿ ಚಾಲುಕ್ಯ ಶೈಲಿಯ ನಾಲ್ಕು ಅಲಂಕೃತ ದುಂಡನೆಯ ಕಂಬಗಳಿವೆ. ಕೆಳಭಾಗದಲ್ಲಿ ಚೌಕಾಕಾರದ ಪೀಠ ಹಲವಾರು ಬಳೆಗಳ ದುಂಡನೆಯ ದಿಂಡು ಹಾಗೂ ಬೋಧಿಗೆಯನ್ನು ಹೊಂದಿವೆ. ಬೋಧಿಗೆ ಮತ್ತು ತೊಲೆಗಳು ಅಲಂಕೃತಗೊಂಡಿರದೆ ಸಾಧಾರಣವಾಗಿವೆ.[೫೮] ವಿತಾನದಲ್ಲಿ ಪದ್ಮವಿದೆ ನವರಂಗದ ಮಧ್ಯದಲ್ಲಿ ಮುಖ್ಯ ಗರ್ಭಗೃಹಕ್ಕೆ ಅಭಿಮುಖವಾಗಿ ಕುಳಿತ ನಂದಿಯ ಶಿಲ್ಪವಿದೆ[೫೯] ಹಾಗೆಯೇ ಸಪ್ತಮಾತೃಕೆಯರು, ಗಣಪತಿ, ಮಹಿಷಾಮರ್ದಿನಿ, ಶಿಲ್ಪಗಳು ನವರಂಗದ ಪಶ್ಚಿಮದಲ್ಲಿ ಕಂಡುಬರುತ್ತವೆ. ಉತ್ತರಾಭಿಮುಖವಾಗಿರುವ ಈ ದೇವಾಲಯದ ಪ್ರವೇಶದ್ವಾರವು ಅಲಂಕೃತವಾಗಿಲ್ಲ.[೬೦] ಗರ್ಭಗೃಹದ ಮೇಲ್ಭಾಗದಲ್ಲಿ ಇತ್ತೀಚಿಗೆ ನಿರ್ಮಿಸಿರುವ ಚಿಕ್ಕದಾದ ಶಿಖರವಿದೆ. ದೇವಾಲಯದ ಪಕ್ಕದಲ್ಲಿರುವ ಆಲದ ಮರದ ಕೆಳಗೆ ಭೈರವ ಮೂರ್ತಿ ಇದೆ.[೬೧]

ಸಂಖ್ಯೆ : ೨

ಹೆಸರು : ಬಸವೇಶ್ವರ ದೇವಾಲಯ

ಗ್ರಾಮ : ಸಾರಥಿ

ತಾಲೂಕು : ಹರಿಹರ

ಕಾಲಮಾನ : ಕ್ರಿ.ಶ.೧೧ನೇ ಶತಮಾನ[೬೨]

ಸಾರಥಿಯ ಬಸವೇಶ್ವರ ದೇವಾಲಯ ಕ್ರಿ.ಶ.೧೧ನೇ ಶತಮಾನದಲ್ಲಿ ಹಸಿರು ಬಳಪದ ಶಿಲೆಯಿಂದಾಗಿ ರಚನಾತ್ಮಕವಾಗಿದೆ. ಪಶ್ಚಿಮ, ಪೂರ್ವ ಮತ್ತು ಉತ್ತರ ದಿಕ್ಕಿನಲ್ಲಿ ಮೂರು ಗರ್ಭಗೃಹಗಳನ್ನು ಹೊಂದಿದ್ದು ಪಶ್ಚಿಮ ಗರ್ಭಗೃಹದಲ್ಲಿ ಲಿಂಗ, ಪೂರ್ವ ಗರ್ಭಗೃಹದಲ್ಲಿ ಕೇಶವ ಹಾಗೂ ಉತ್ತರ ದಿಕ್ಕಿನ ಗರ್ಭಗೃಹದಲ್ಲಿ ಸೂರ್ಯ ಶಿಲ್ಪಗಳು ಇವೆ. ದೇವಾಲಯ ಅಂತರಾಳ ಮತ್ತು ನವರಂಗಳಿಂದ ಕೂಡಿದ್ದು ಮುಖ್ಯದ್ವಾರ ದಕ್ಷಿಣಾಭಿಮುಖವಾಗಿದೆ. ಅಧಿಷ್ಠಾನವು ಉಪಾನ, ಪದ್ಮ, ಕುಮುದ, ಕಪೋತ, ಭಾಗಗಳನ್ನು ಹೊಂದಿದೆ. ಭಿತ್ತಿಯಲ್ಲಿ ಅರೆಗಂಭಗಳ ಅಲಂಕರಣೆ ಬಿಟ್ಟರೆ ಯಾವುದೇ ರೀತಿಯ ಶಿಲ್ಪಗಳು ಇಲ್ಲ, ಪ್ರಸ್ತರದ ಕೊನೆಯ ಭಾಗ ಮಾತ್ರ ಉಳಿದಿದ್ದು ಅದರ ಮೇಲಿನ ಯಾವ ಭಾಗ ಕಾಣುವುದಿಲ್ಲ. ಗರ್ಭಗೃಹದ ಶಿಖರವೂ ಸಂಪೂರ್ಣವಾಗಿ ನಾಶವಾಗಿದೆ.

ಪಶ್ಚಿಮ ಗರ್ಭಗೃಹದಲ್ಲಿ ಲಿಂಗವಿದ್ದು, ವಿತಾನದಲ್ಲಿ ಪದ್ಮವಿದೆ. ಅದರ ದ್ವಾರದ ಲಲಾಟದಲ್ಲಿ ಗಜಲಕ್ಷ್ಮೀ ಶಿಲ್ಪವಿದ್ದು ದ್ವಾರದಲ್ಲಿ ಸ್ತಂಭದ ಅಲಂಕಾರವಿದೆ. ಸರಳವಾದ ಅಂತರಾಳವಿದೆ. ಇದರ ವಿತಾನದಲ್ಲಿ ಪದ್ಮವಿದೆ. ಇದರ ದ್ವಾರವೂ ಸಹ ಸಾಧಾರಣವಾಗಿದೆ. ಪೂರ್ವ ಗರ್ಭಗೃಹದಲ್ಲಿ ಕೇಶವನ ಮೂರ್ತಿ ಇದೆ. ಇದರ ದ್ವಾರವೂ ಸಹ ಸಾಧಾರಣವಾಗಿದೆ. ಹಾಗೂ ಉತ್ತರದ ಗರ್ಭಗೃಹದಲ್ಲಿ ಸೂರ್ಯನ ಮೂರ್ತಿ ಇದ್ದು ಈ ಗರ್ಭಗೃಹದ ದ್ವಾರವು ಅಲಂಕೃತವಾಗಿಲ್ಲ. ನವರಂಗದಲ್ಲಿ ನಾಲ್ಕು ವೃತ್ತಾಕಾರ ಮತ್ತು ಚೌಕಾಕಾರದ ಕಂಬಗಳಿವೆ. ಮಧ್ಯದ ವೇದಿಕೆಯಲ್ಲಿ ನಂದಿ ಇದೆ. ವೃತ್ತಾಕಾರದ ಕಂಬಗಳ ದಂಡ ಭಾಗವು ಆಭರಣಗಳಿಂದ ಹಾಗೂ ಪುಷ್ಪಗಳಿಂದ

ಅಲಂಕರಿಸಿದ ರೀತಿ ಇದೆ. ಈ ಕಂಬಗಳ ವಿತಾನದಲ್ಲಿ(ಮುಚ್ಚಿಗೆ) ಪದ್ಮಗಳ ಅಲಂಕರಣೆ ಇದೆ. ಅಂತರಾಳದ ದ್ವಾರದ ಎಡಬಲದಲ್ಲಿ ಕೋಷ್ಠಗುಡಿಗಳಿದ್ದು ಬಲ ಕೋಷ್ಠಗುಡಿಯಲ್ಲಿ ಗಣಪತಿ, ಎಡಕೋಷ್ಠಗುಡಿಯಲ್ಲಿ ಮಹಿಷಮರ್ದಿನಿ ಮೂರ್ತಿಗಳಿವೆ.

ಉತ್ತರದ ಗರ್ಭಗೃಹದ ಬಲಭಾಗದಲ್ಲೊಂದು ಕೋಷ್ಠಗುಡಿಯಿದ್ದು ಅದರಲ್ಲಿ ಆಸೀನ ಭೈರವ ಮೂರ್ತಿ ಇದೆ. ನವರಂಗದ ವಿತಾನದಲ್ಲಿ ಯಾವುದೇ ಅಲಂಕಾರವಿಲ್ಲ ದೇವಾಲಯದ ದಕ್ಷಿಣ ಭಾಗದಲ್ಲಿ ಪ್ರವೇಶದ್ವಾರವಿದೆ. ದ್ವಾರವು ಲತಾ, ಕಂಬ, ಪುಷ್ಪ, ಶಾಖೆಗಳಿಂದ ಅಲಂಕೃತವಾಗಿದೆ. ಲಲಾಟ ಮತ್ತು ದ್ವಾರಬಂಧದಲ್ಲಿ ಯಾವುದೇ ಶಿಲ್ಪಗಳಿಲ್ಲ. ನವರಂಗದಲ್ಲಿ ಇಳಿಬಿಟ್ಟಿರುವ ಘಂಟೆಯಲ್ಲಿ 'ನಂಜಕೃಷ್ಣಪ್ಪ' ಬಸವಣ್ಣ ದೇವರಿಗೆ ಕೊಟ್ಟಿದ್ದು ಎಂದಿದೆ.[೩೩] ದೇವಾಲಯದ ವಾಸ್ತು ಲಕ್ಷಣಗಳ ಆಧಾರದಿಂದ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಿರ್ಮಿತವಾಗಿದೆಯೆಂದು ಹೇಳಬಹುದಾಗಿದೆ.

ಸಂಖ್ಯೆ : ೩

ಹೆಸರು : ಕಲ್ಲೇಶ್ವರ ದೇವಾಲಯ

ಗ್ರಾಮ : ದೇವರ ಬೆಳೆಕೆರೆ

ತಾಲೂಕು : ಹರಿಹರ

ಕಾಲಮಾನ : ಕ್ರಿ.ಶ.ಸು.೧೧ನೇ ಶತಮಾನ[೩೪]

ದೇವರಬೆಳಕೆರೆ ಗ್ರಾಮಕ್ಕೆ ಸೇರಿದ ಹಳೆಹಾಳುವಾಳದಲ್ಲಿ ದೀಟೂರು ಸಿದ್ಧಪ್ಪನ ಜಮೀನಿನಲ್ಲಿ ಈ ದೇವಾಲಯ ಒಂದು ದಿಬ್ಬದಲ್ಲಿ ಗಿಡಗಂಟೆಗಳಿಂದ ಮುಚ್ಚಿದೆ. ಪೂರ್ವಾಭಿಮುಖವಾಗಿರುವ ದೇವಾಲಯ ಗರ್ಭಗೃಹ, ಅಂತರಾಳ, ನವರಂಗ ಹಾಗೂ ರಂಗಮಂಟಪವನ್ನು ಹೊಂದಿದೆ.[೩೫] ಗರ್ಭಗೃಹದಲ್ಲಿ ಲಿಂಗವಿದ್ದು ಅದರ ಮುಂಭಾಗದಲ್ಲಿ ನಂದಿ ವಿಗ್ರಹವಿದೆ. ವಿತಾನದಲ್ಲಿ ಪದ್ಮವಿದೆ. ಗರ್ಭಗೃಹದ ದ್ವಾರದ ಲಲಾಟದಲ್ಲಿ ಗಜಲಕ್ಷ್ಮೀ ಶಿಲ್ಪವಿದ್ದು ಕಂಬಶಾಖೆಯೊಂದನ್ನು ಹೊರತುಪಡಿಸಿ ಉಳಿದ ಶಾಖೆಗಳನ್ನು ಅಲಂಕರಿಸಿಲ್ಲ. ಗರ್ಭಗೃಹದ ಅಂತರಾಳವು ಆಯತಾಕಾರವಾಗಿದೆ. ದೇವಾಲಯದ ಹೊರಭಾಗದಲ್ಲಿ ಅಧಿಷ್ಠಾನವು ಭೂಮಿಯಲ್ಲಿ ಮುಚ್ಚಿರುವುದರಿಂದ ಅಲ್ಲಿನ ಭಾಗಗಳನ್ನು ಗುರುತಿಸುವುದು ಕಷ್ಟ.[೩೬] ಭಿತ್ತಿಯನ್ನು ಹಸಿರು ಬಳಪದ ಶಿಲೆಯನ್ನು ಹಾಗೂ ಗ್ರಾನೈಟ್ ಶಿಲೆಯನ್ನು ಬಳಸಿ ಕಟ್ಟಲಾಗಿದೆ. ಉತ್ತರ ಭಾಗದ ಭಿತ್ತಿಯು ಕುಸಿದು ಬಿದ್ದು ಹೋಗಿದೆ, ಗರ್ಭಗೃಹಕ್ಕೆ ಯಾವುದೇ ಶಿಖರವಿಲ್ಲ.[೩೭]

ನವರಂಗದಲ್ಲಿ ನಾಲ್ಕು ಬಳಪದ ಕಲ್ಲಿನ ಆಯತಾಕಾರದ ಕಂಬಗಳಿವೆ ಈ ಕಂಬಗಳ ಮೇಲೆ ಯಾವುದೇ ಶಿಲ್ಪಗಳಿಲ್ಲ. ನವರಂಗ ಮಧ್ಯದಲ್ಲಿ ರಂಗಮಂಟಪವಿದೆ. ಅಂತರಾಳ ಬಲ ಹಾಗೂ ಎಡಬದಿಗೆ ಎರಡು ದೇವಕೋಷ್ಠಗುಡಿಯಿದ್ದು ಅದರಲ್ಲಿ ಸಪ್ತಮಾತೃಕೆಯ ಶಿಲ್ಪವಿದೆ ಮುಖ್ಯದ್ವಾರವು ಪೂರ್ವಾಭಿಮುಖವಾಗಿದ್ದು ದ್ವಾರಬಂಧ, ಕಂಬ, ಜಾಲಂಧ್ರ, ಆಧರಿಸಿ ಈ ದೇವಾಲಯ ಕಲ್ಯಾಣ ಚಾಲುಕ್ಯರ ಸಮಕಾಲೀನ ದೇವಾಲಯ ಎಂದು ಹೇಳಬಹುದು.[೩೮]

ಸಂಖ್ಯೆ : ೪

ಹೆಸರು : ಕಲ್ಲೇಶ್ವರ

ಗ್ರಾಮ : ಚಿಕ್ಕಬಿದರೆ

ತಾಲೂಕು : ಹರಿಹರ

ಕಾಲಮಾನ : ಕ್ರಿ.ಶ.೧೩ನೇ ಶತಮಾನ್

ಗ್ರಾಮದ ವಾಯುವ್ಯ ದಿಕ್ಕಿಗೆ ದೊಡ್ಡ ಬಣ್ಣಿನಾಗಪ್ಪನ ಹೊಲದ ಮೂಲೆಯಲ್ಲಿ ತುಂಗಭದ್ರ ನದಿಯ ಬಲ ದಡಕ್ಕೆ ಹೊಂದಿಕೊಂಡು ಇರುವ ಕಲ್ಲೇಶ್ವರ ದೇವಾಲಯವು ಪೂರ್ವಾಭಿಮುಖವಾಗಿದೆ.[೪೦] ಬಳಪದ ಶಿಲೆಯಿಂದ ನಿರ್ಮಿತವಾಗಿದ್ದು ಚೌಕಾಕಾರದ ತಳವಿನ್ಯಾಸ, ಗರ್ಭಗೃಹ, ಅಂತರಾಳ ನವರಂಗ ಹಾಗೂ ರಂಗಮಂಟಪವನ್ನು ಹೊಂದಿದೆ. ದೇವಾಲಯವು ಜೀರ್ಣೋದ್ಧಾರಗೊಂಡಿದ್ದು ಹೊರಭಾಗದ ಅಧಿಷ್ಠಾನವು ಪದ್ಮ, ಉಪಾನ, ಕಪೋತಗಳಿಂದ ಕೂಡಿದೆ(ಇದರ ಬಹುತೇಕ ಭಾಗ ಮುಚ್ಚಿದೆ) ದೇವಾಲಯದ ಹೊರಭಿತ್ತಿಯ ಮೇಲಿನ ಕಪೋತ ಭಾಗವು ದೇವಾಲಯದ ಸುತ್ತಲೂ ಹೊರ ಚಾಚಿದ ರೀತಿಯಲ್ಲಿದ್ದು ಶಿಖರವು ಕದಂಬನಾಗರ ಶೈಲಿಯಲ್ಲಿದ್ದು ಈಗ ಕೇವಲ ಎಂಟು ತಲಗಳು ಮಾತ್ರ ಶಿಖರದಲ್ಲಿ ಉಳಿದಿವೆ. ಅದರ ಮೇಲಿನ ಕಲಶ ಭಾಗ ನಾಶವಾಗಿದೆ.[೪೧]

ಗರ್ಭಗೃಹವು ಚೌಕಾಕಾರವಾಗಿದ್ದು ಅದರಲ್ಲಿ ಗರ್ಭಗೃಹದ ವಿತಾನದಲ್ಲಿ ಪದ್ಮವಿದೆ. ದ್ವಾರವು ಅಲಂಕಾರವಿಲ್ಲದೆ ಸರಳವಾಗಿದೆ. ಲಲಾಟ ಬಿಂಬದಲ್ಲಿ ಪದ್ಮಾಸನದಲ್ಲಿ ಕುಳಿತ ಲಕ್ಷ್ಮೀ ಶಿಲ್ಪವಿದ್ದು ಅದರ ಎಡಬಲದಲ್ಲಿ ಚಾಮರ ಹಿಡಿದ ಸ್ತ್ರೀಯರ ಶಿಲ್ಪಗಳಿವೆ ಆಯತಾಕಾರದ ಅಂತರಾಳದಲ್ಲಿ ನಂದಿ ವಿಗ್ರಹವಿದೆ. ಇಲ್ಲಿನ ಲಲಾಟ ಬಿಂಬದಲ್ಲಿ ಗಣೇಶನಿದ್ದಾನೆ ದ್ವಾರ ಸಾಧಾರಣವಾಗಿದ್ದು ದ್ವಾರದ ಪಕ್ಕದಲ್ಲಿ ಆಯತಾಕಾರದ ಜಾಲಂಧ್ರಗಳನ್ನು(ದ್ವಾರದ ಎಡಬಲದಲ್ಲಿ) ಕೆತ್ತಲಾಗಿದೆ.

ನವರಂಗದಲ್ಲಿ ನಾಲ್ಕು ಕಂಬಗಳಿದ್ದು ಅವುಗಳು ಆಯತ, ವೃತ್ತಾಕಾರ, ಚತುರಸ್ರ, ಅಷ್ಟಭುಜಪಟ್ಟಿಕೆ, ಹೊರಚಾಚಿದ ವೃತ್ತಪಟ್ಟಿಕೆ ಹಾಗೂ ಪುನಃ ಚೌಕಾಕಾರದ ಭಾಗವನ್ನು ಹೊಂದಿದ್ದು ಅದರ ಮೇಲೆ ಕುಂಬಾಕೃತಿ ಮತ್ತು ಚೂಪಾದ ವೃತ್ತಾಕಾರದ ಬೋಧಿಗೆಗಳು ಕಾಣುತ್ತವೆ. ಈ ನವರಂಗದ ಪಶ್ಚಿಮ ದಿಕ್ಕಿನಲ್ಲಿ ಎರಡು, ಉತ್ತರ ಪೂರ್ವದಲ್ಲಿ ತಲಾ ಒಂದೊಂದು ಕೋಷ್ಠಗುಡಿಗಳಿವೆ. ನವರಂಗದ ಪಶ್ಚಿಮ ಭಾಗದ(ಎಡ) ದೇವ ಕೋಷ್ಠದಲ್ಲಿ ಗಣಪತಿ ಮೂರ್ತಿ ಇದ್ದು ಉಳಿದ ಕೋಷ್ಠಗುಡಿಗಳಲ್ಲಿ ಯಾವುದೇ ಮೂರ್ತಿಗಳಿಲ್ಲ. ನವರಂಗದ ವಿತಾನವು ಆಯತಾಕಾರವಾಗಿದ್ದು ಅದರಲ್ಲಿ ತಾವರೆಯನ್ನು ಕೆತ್ತಲಾಗಿದೆ ನವರಂಗದ ಪೂರ್ವ ದ್ವಾರದಲ್ಲಿ ಕಂಬ ಶಾಖೆ ಮಾತ್ರವಿದ್ದು ಉಳಿದಂತೆ ಯಾವ ಅಲಂಕಾರ ಕಂಡುಬರುವುದಿಲ್ಲ. ಲಲಾಟ ಬಿಂಬ ಖಾಲಿ ಇದ್ದು ಅದರ ಎಡಬದಿಯಲ್ಲಿ ಇಳಿಬಿದ್ದ ತಾವರೆಯ ಮೊಗ್ಗಿನಾಕೃತಿಯ ಅಲಂಕರಣವಿದೆ.

ಸಂಖ್ಯೆ : ೫

ಹೆಸರು : ಅಮೃತಲಿಂಗ ಮಾಣಿಕೇಶ್ವರ

ಗ್ರಾಮ : ನಂದಿತಾವರೆ

ತಾಲೂಕು : ಹರಿಹರ

ಕಾಲಮಾನ : ಕ್ರಿಶ. ೧೨೨೦

ನಂದಿತಾವರೆ ಗ್ರಾಮವು ಹರಿಹರದಿಂದ ಶಿವಮೊಗ್ಗಕ್ಕೆ ಹೋಗುವ ಮಾರ್ಗದಲ್ಲಿ ಸುಮಾರು ಹನ್ನೆರಡು ಕಿ.ಮೀ. ಅಂತರದಲ್ಲಿದೆ. ಅಮೃತಲಿಂಗ ಮಾಣಿಕೇಶ್ವರ ದೇವಾಲಯವು ಗ್ರಾಮದ ಪೂರ್ವಭಾಗದಲ್ಲಿದ್ದು, ಪೂರ್ವಾಭಿಮುಖವಾಗಿದೆ. ದೇವಾಲಯವು ನವರಂಗ ದ್ವಾರಬಂಧದ ಬಳಿಯಿರುವ ಶಾಸನವು ಹೊಯ್ಸಳ ಅಧಿಕಾರಿಯಾದ ಮಾಣಿಕಣ್ಣ ಎನ್ನುವನು ಕ್ರಿಶ. ೧೨೨೦ರಲ್ಲಿ ಶ್ರೀಅಮೃತಲಿಂಗ ಮಾಣಿಕೇಶ್ವರ ದೇವರಿಗೆ ಅನೇಕ ವಿಧವಾದ ದತ್ತಿಗಳನ್ನು ನೀಡಿದನೆನ್ನುವ ವಿವರ ತಿಳಿಯುತ್ತದೆ.[೨] ಶಾಸನದಲ್ಲಿ ಕನ್ನೇಶ್ವರ ಎಂದು ಈ ಕಲ್ಲೇಶ್ವರ ಲಿಂಗವನ್ನು ಕರೆಯಲಾಗಿದೆ. ದೇವಾಲಯವು ತಳವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ ಹಾಗೂ ಈಚೆಗೆ ನಿರ್ಮಿಸಿದ ಮುಖಪಂಟಪವಿದೆ. ಮೂಲಗರ್ಭಗೃಹದ ಎದುರಿನಲ್ಲಿ ಪ್ರತ್ಯೇಕ ನಂದಿಮಂಟಪವಿದ್ದು ಆ ಮಂಟಪಕ್ಕೇ ತೆರೆದ ಅಂತರಾಳವೊಂದನ್ನು ನಂತರ ಕಾಲಕ್ಕೆ ನಿರ್ಮಿಸಿದ್ದಾರೆ.[೩] ಉತ್ತರ ಮತ್ತು ದಕ್ಷಿಣದಲ್ಲಿ ಪ್ರವೇಶದ್ವಾರಗಳಿವೆ[೪] ಏರುವಿನ್ಯಾಸದಲ್ಲಿ ದೇವಾಲಯವು ಅಧಿಷ್ಠಾನ ಮೇಲೆ ನಿರ್ಮಾಣಗೊಂಡಿದೆ. ಅಧಿಷ್ಠಾನ ಭಾಗದಲ್ಲಿ ಐದು ಚಿತ್ರಪಟ್ಟಿಕೆಗಳಿವೆ. ಅಧಿಷ್ಠಾನದಲ್ಲಿ ಮೊದಲ ಕೆಳಪಟ್ಟಿಕೆಯಲ್ಲಿ ಹಂಸಗಳ ಸಾಲಿದೆ. ಅದರ ಮೇಲಿನ ಪಟ್ಟಿಕೆಯಲ್ಲಿ ಲತಾ ಪಟ್ಟಿಕೆ ಇದೆ. ಅದರ ಮೇಲಿನ ಪಟ್ಟಿಕೆಯಲ್ಲಿ ಗಜಧರ(ಆನೆಗಳ ಸಾಲು ಪಟ್ಟಿ), ಸಳ ಹುಲಿಯನ್ನು ಕೊಲ್ಲುತ್ತಿರುವಂತೆ ಹಾಗೆ ವಿಭಿನ್ನ ಭಂಗಿಯಲ್ಲಿ ಮನುಷ್ಯರನ್ನು ಈ ಪಟ್ಟಿಕೆಯಲ್ಲಿ ಬಿಡಿಸಲಾಗಿದೆ ಅದರ ಮೇಲೆ ಮತ್ತೊಂದು ಲತಾ ಪಟ್ಟಿಕೆಯ ಸಾಲಿದೆ[೫] ಎಡ ಭಾಗದ ಭಿತ್ತಿಯ(ಉತ್ತರ ಗೋಡೆ) ಅಧಿಷ್ಠಾನ ಭಾಗದಲ್ಲಿ ಮಕರದಿಂದ ಅಲಂಕೃತವಾದ ಪ್ರನಾಳವಿದೆ.

ದೇವಾಲಯದ ಭಿತ್ತಿಯ ಸುತ್ತಲೂ ಅರೆಗಂಭಗಳಿವೆ. ಅದರಲ್ಲಿ ಕೋಷ್ಠಗುಡಿಗಳಿದ್ದು ಆ ಕೋಷ್ಠಗುಡಿಗಳ ಮೇಲೆ ಶಿಖರದ ನಮೂನೆಗಳಿವೆ. ದೇವಾನುದೇವತೆಗಳನ್ನು ಭಿತ್ತಿಯು ಅರೆಗಂಭಗಳ ಬಳಿ ಚಿತ್ರಿಸಲಾಗಿದೆ. ಬಲಭಾಗದ ಭಿತ್ತಿ(ದಕ್ಷಿಣ ಭಾಗ)ಯಲ್ಲಿ ವಜ್ರಗದೆ ಮತ್ತು ಫಲಗಳನ್ನು ಹಿಡಿದು ನಿಂತ ಇಂಧ್ರ, ಈತನ ಕಾಲಿನ ಬಳಿಯ ಮೂಲೆಯಲ್ಲಿ ಆನೆಯಿದೆ ಚತುರ್ಭುಜಧಾರಿ ಶಿವ ನೃತ್ಯ ಮಾಡುತ್ತಿದ್ದು ಕೈಗಳಲ್ಲಿ ತ್ರಿಶೂಲ, ಡಮರುಗಗಳಿವೆ. ಇವೇ ಆಯುಧಗಳನ್ನು ಹಿಡಿದು ನಿಂತಿರುವ ಭೈರವನು ಸಹ ಇದ್ದಾನೆ. ಕಮಲ, ಶ್ರುಕ್ ಅಥವಾ ಶ್ರುವ್ ಹಿಡಿದು ನಿಂತಿರುವ ಬ್ರಹ್ಮ, ಆತನ ಕಾಲ ಬಳಿ ಹಂಸಗಳಿವೆ.[೬] ನೃತ್ಯ ಮಾಡುತ್ತಿರುವ ಗಣಪತಿಯ ಕಾಲಿನ ಕೆಳಭಾಗ ತ್ರುಟಿತವಾಗಿದೆ. ಅಲಂಕಾರಗೊಂಡ ರತಿ, ಮನ್ಮಥರಿದ್ದು ಮಧ್ಯದಲ್ಲಿ ದೇವಕೋಷ್ಠಗುಡಿಯಿದ್ದು,

ಇದರಲ್ಲಿ ಮೂರ್ತಿ ಇಲ್ಲ.[೪೭] ಈ ದೇವಕೋಷ್ಠದ ದ್ವಾರದಲ್ಲಿ ಚಾಮರ ಹಿಡಿದು ನಿಂತಿರುವ ದೇವತಾಮೂರ್ತಿಯಿದೆ.

ದೇವಾಲಯದ ಪಶ್ಚಿಮ ಭಾಗದ ಗೋಡೆ (ಗರ್ಭಗೃಹದ ಹಿಂಭಾಗ) ಯಲ್ಲೂ ಅರೆಗಂಭಗಳ ಮಧ್ಯೆ ಕೆಲವು ಶಿಲ್ಪಗಳು ಇವೆ. ಅರ್ಧನಾರೀಶ್ವರ, ಕೈಗಳು ತ್ರುಟಿತವಾಗಿವೆ. ಕಾಲಿನ ಬಳಿ ನಂದಿ ಇದೆ. ಕನ್ನಡಿಯನ್ನು ಕೈಯಲ್ಲಿ ಹಿಡಿದು ಸ್ನಾನ ಮಾಡುತ್ತಿರುವ ಮೋಹಿನಿ ಶಿಲ್ಪವಿದೆ. ದಕ್ಷಿಣಾ ಮೂರ್ತಿ ಹಾಗೂ ತ್ರಿಭಂಗದಲ್ಲಿ ನಿಂತ ಮೋಹಿನಿ ಇದೆ. ಇಲ್ಲಿಯು ಒಂದು ದೇವಕೋಷ್ಠ ಇದ್ದು ಅದರಲ್ಲಿ ಮೂರ್ತಿ ಇಲ್ಲ ದ್ವಾರದಲ್ಲಿ ಚಾಮರ ಹಿಡಿದ ಇಬ್ಬರು ಸ್ತ್ರೀಯರಿದ್ದಾರೆ. ಇಲ್ಲಿ ಮಂಗನೊಡನೆ, ಮಾವಿನಹಣ್ಣಿನ ಗೊಂಚಲನ್ನು ಹಿಡಿದು ಹಾಗೂ ಗಿಳಿಯೊಂದಿಗೆ ಇರುವ ಮೋಹಿನಿ ಶಿಲ್ಪಗಳಿವೆ.

ದೇವಾಲಯದ ಉತ್ತರಭಾಗದ ಭಿತ್ತಿ(ಎಡಭಾಗ)ಯಲ್ಲಿ ಮೊನಚು, ಕೋಲು, ಪಾಶ, ಫಲ ಹಿಡಿದು ನಿಂತಿರುವ ದೇವತಾಪುರುಷನಿದ್ದು ಆತನ ಕಾಲಿನ ಬಳಿ ತ್ರುಟಿತ ನಾಲ್ಕು ಕಾಲಿನ ಪ್ರಾಣಿಯಿದೆ. ತ್ರುಟಿತವಾದ ಶಿವ ನಿಂತಿದ್ದಾನೆ. ಕಾಲಿನ ಬಳಿ ನಂದಿ ಇದೆ. ಬಲಗೈನಲ್ಲಿ ಬಾಣವನ್ನು ಎಡಗೈನಲ್ಲಿ ಕಪಿ ಧ್ವಜವನ್ನು ಹಿಡಿದಿರುವ ಅರ್ಜುನನ ಶಿಲ್ಪವಿದೆ. ದ್ವಿಭುಜದಾರಿಯಾದ ಭೀಮನ ಕೈನಲ್ಲಿ ಗದೆ ಮತ್ತು ಫಲ ತ್ರುಟಿತವಾಗಿದೆ.[೪೮] ಇಲ್ಲೊಂದು ದೇವಕೋಷ್ಠವಿದ್ದು ಅದರಲ್ಲಿ ಭೈರವಿಯ ಮೂರ್ತಿಯಿದ್ದು ಆಕೆ ಅಲಂಕೃತಳಾಗಿದ್ದಾಳೆ. ಈ ದೇವಕೋಷ್ಠದ ದ್ವಾರದಲ್ಲಿ ಚಾಮರ ಹಿಡಿದ ಸ್ತ್ರೀಯರಿದ್ದಾರೆ. ಧನುರ್ಧಾರಿ ಮಹಿಳೆ,[೪೯] ದ್ವಿಭುಜಧಾರಿ ಪಾರ್ವತಿ, ಖಡ್ಗ, ತ್ರಿಶೂಲ, ಡಮರುಗ, ಪಾನಪಾತ್ರೆ ಮತ್ತು ಮನುಷ್ಯನ ತಲೆ ಹಿಡಿದಿರುವ ದುರ್ಗೆ ನೃತ್ಯ ಮಾಡುತ್ತಿದ್ದಾಳೆ ಮೇಲೆ ವಿಶ್ಲೇಷಿಸಿದಂತಹ ಎಲ್ಲಾ ಶಿಲ್ಪಗಳು ಬಳೆಗಳಿಂದ ಅಲಂಕೃತವಾಗಿವೆ ಕೆಲವು ಶಿಲ್ಪಗಳಿಗೆ ಯಜ್ಞೋವೀತಗಳಿವೆ.[೫೦] ಶಿಲ್ಪಗಳ ಮುಂದೆ ಎರಡು ಕಡೆ ಕಾಣಬರುವ ಭಿತ್ತಿಯು ಈಚೆಗೆ ನಿರ್ಮಿಸಿದ್ದಾರೆ.

ಭಿತ್ತಿಯ ಮೇಲ್ಭಾಗದ ಪ್ರಸ್ತರದಲ್ಲಿ ಕೆಲವು ಪ್ರಾಣಿಗಳನ್ನು ಚಿತ್ರಿಸಲಾಗಿದೆ. ಪ್ರಸ್ತರದ ಮೇಲೆ ನೂತನವಾಗಿ ಗೋಡೆ ನಿರ್ಮಿಸಿದ್ದಾರೆ ಈಗ ಗರ್ಭಗೃಹದ ಮೇಲೆ ಮೂಲಶಿಖರವಿಲ್ಲ. ಚೌಕಾಕಾರದ ಗರ್ಭಗೃಹದಲ್ಲಿ ಲಿಂಗವಿದೆ. ಇದರ ಲಲಾಟ ದ್ವಾರವು ಸಾಧಾರಣವಾಗಿದೆ. ಅಂತರಾಳದ ದ್ವಾರವು ಸಹ ಸಾಧಾರಣವಾಗಿದ್ದು, ಎಡಬಲದಲ್ಲಿ ಶೈವ ದ್ವಾರಪಾಲಕರಿದ್ದಾರೆ. ಲಲಾಟ ಬಿಂಬದಲ್ಲಿಗಜಲಕ್ಷ್ಮಿ ಶಿಲ್ಪವಿದೆ. ದ್ವಾರದ ಎರಡು ಕಡೆಗಳಲ್ಲಿ ಪುಷ್ಪ ಕೃತಿಯ ಹತ್ತಿರ ಮೂಲಸ್ಥಾನ ಜಾಲಾಂಧ್ರಗಳು ಪ್ರತಿಭಾಗದಲ್ಲಿವೆ. ಲಲಾಟದ ಮೇಲೆ ಉತ್ತರಾಂಗದ ಮಧ್ಯದಲ್ಲಿ ಎಂಟು ಕೈಗಳನ್ನು ಹೊಂದಿದ ನಾಟ್ಯ ಮಾಡುತ್ತಿರುವ ನಟರಾಜ ಶಿಲ್ಪವಿದೆ.[೫೧] ಈ ಶಿಲ್ಪದ ಕಾಲಿನ ಬಳಿ ಅಂಧಕಾಸುರನ ಶಿಲ್ಪವಿದೆ. ಬಲದಲ್ಲಿ ತ್ರಿಮುಖ ಬ್ರಹ್ಮ, ಎಡದಲ್ಲಿ ವಿಷ್ಣು ನಿಂತಿರುವಂತಿದೆ. ನವರಂಗದಲ್ಲಿ ವೃತ್ತಾಕಾರದ ತಿರುಗಣಿಯಂತ್ರದಿಂದ ತಿರುಗಿಸಿ ಮಾಡಿದ ಸುಂದರ ಕಂಬಗಳಿವೆ. ಇವುಗಳಿಗೆ ಹೊಂದಿಕೊಂಡಂತೆ ರಂಗಮಂಟಪವಿದೆ. ಕಂಬಗಳು ಚೌಕಾಕಾರದ ಪೀಠ, ಘಂಟ, ಮತ್ತು ಕುಂಭ ಮಾದರಿಯ

ದಿಂಡು, ಕುಷನ್, ಬೋಧಿಗೆ ಹಾಗೂ ಬಲಗ್ಯೆ ಅಭಾಕಸ್‌ನ್ನು ಹೊಂದಿವೆ.[೫೨] ನವರಂಗದ ವಿತಾನದಲ್ಲಿ ಒಂದು ಸಾಲಿಗೆ ಮೂರು ಜನರಂತೆ ಮಧ್ಯದಲ್ಲಿ ನಟರಾಜನನ್ನು ಸೇರಿಸಿ, ಅಷ್ಟದಿಕ್ಪಾಲಕರನ್ನು ಇಲ್ಲಿ ಕೆತ್ತಿದ್ದಾನೆ. ಇಲ್ಲಿಯೇ ವಿವಿಧ ಸಂಗೀತ ಉಪಕರಣಗಳನ್ನು ಹಿಡಿದಿರುವ ವ್ಯಕ್ತಿಗಳನ್ನು ಕೆತ್ತಲಾಗಿದೆ.

ನವರಂಗದ ದ್ವಾರ ಮತ್ತು ಲಲಾಟ ಬಿಂಬವು ಸರಳವಾಗಿದೆ. ನವರಂಗದಲ್ಲಿ ಕುಳಿತಭಂಗಿಯ ಸರಸ್ವತಿ, ಸಪ್ತಮಾತೃಕೆ, ಗಣಪತಿ, ಮಹಿಷಮರ್ದಿನಿ, ಷಣ್ಮುಖಿ, ಉಮಾಮಹೇಶ್ವರಿ ಹಾಗೂ ನಾಗನಾಗಿಣಿಯರ ಮೂರ್ತಿಗಳಿವೆ. ಪೂರ್ವದ ಪ್ರತ್ಯೇಕ ನಂದಿಮಂಟಪದಲ್ಲಿ ಹೊಯ್ಸಳರ ಕಾಲಕ್ಕೆ ಸೇರಿದ ಬೃಹತ್ ನಂದಿ ಇದೆ. ಈ ಮಂಟಪಕ್ಕೆ ಜಾಲಾಂಧ್ರಗಳು ಇವೆ. ಉತ್ತರ ಮತ್ತು ದಕ್ಷಿಣದಲ್ಲಿ ಪ್ರವೇಶದ್ವಾರಗಳಿದ್ದು ಅವುಗಳನ್ನು ಇತ್ತೀಚೆಗೆ ನಿರ್ಮಿಸಿದ್ದಾರೆ. ದೇವಾಲಯದಲ್ಲಿನ ಕಂಬಗಳ ಅಲಂಕರಣೆ ಜಾಲಾಂಧ್ರ ವಿನ್ಯಾಸ, ಮುಚ್ಚಿಗೆಯಲ್ಲಿನ ವಿವಿಧ ಶಿಲ್ಪ ಹಾಗೂ ದೇವಕೋಷ್ಠ ಇವುಗಳು ಹೊಯ್ಸಳರ ಕಾಲದ ದೇವಾಲಯ[೫೩] ಎಂಬುದನ್ನು ಸ್ಪಷ್ಟಪಡಿಸುತ್ತವೆ.

ಸಂಖ್ಯೆ : ೬

ಹೆಸರು : ರಂಗನಾಥ ದೇವಾಲಯ

ಗ್ರಾಮ : ಜಿಗಳಿ

ತಾಲೂಕು : ಹರಿಹರ

ಕಾಲಮಾನ : ಕ್ರಿ.ಶ.೧೧ನೇ ಶತಮಾನದ ಅಂತ್ಯಭಾಗ[೫೪]

ಈ ದೇವಾಲಯಕ್ಕೆ ಉತ್ತರ ಹಾಗೂ ಪಶ್ಚಿಮ ದಿಕ್ಕಿನಲ್ಲಿ ಎರಡು ಗರ್ಭಗೃಹಗಳಿದ್ದು ಅವುಗಳ ಮುಂದೆ ಅಂತರಾಳಗಳಿವೆ. ಈ ಅಂತರಾಳಗಳ ಮುಂದೆ ಒಂದೇ ನವರಂಗವಿದ್ದು ಉತ್ತರ ಮತ್ತು ಪೂರ್ವ ದಿಕ್ಕಿನಲ್ಲಿ ಎರಡು ದ್ವಾರಗಳಿವೆ. ದೇವಾಲಯದ ಹೊರಭಾಗದ ಅಧಿಷ್ಠಾನವು ಸರಳವಾಗಿದ್ದು ಹೊಸ ಭಿತ್ತಿಯು ಚಪ್ಪಡಿ ಕಲ್ಲುಗಳಿಂದ ನಿರ್ಮಿತವಾಗಿದೆ. ಭಿತ್ತಿ ಭಾಗದಲ್ಲಿ ಯಾವುದೇ ಶಿಲ್ಪಗಳಿಲ್ಲ ಉತ್ತರ ಗರ್ಭಗೃಹದ ಮೇಲೆ ಇತ್ತೀಚೆಗೆ ನಿರ್ಮಾಣ ಮಾಡಿದ ಶಿಖರವಿದೆ ಮೂಲಶಿಖರವಿಲ್ಲ.

ಪಶ್ಚಿಮ ಭಾಗದ ಗರ್ಭಗೃಹ ಚೌಕಾಕಾರವಾಗಿದ್ದು ಅದರಲ್ಲಿ ಲಿಂಗವಿದೆ. ಇದರ ದ್ವಾರದ ಕೆಳಭಾಗದಲ್ಲಿ ಕಂಬಗಳ ಅಲಂಕಾರವಿದೆ. ದ್ವಾರವು ಪುಷ್ಪಲತೆಗಳಿಂದ ಕೂಡಿದ ಏಕಶಾಖೆಪಟ್ಟಿಯಿದೆ. ಲಲಾಟದ ಆಯತಾಕಾರದ ಪಟ್ಟಿಕೆಯಲ್ಲಿ ಗಜಲಕ್ಷ್ಮೀ ಶಿಲ್ಪವಿದ್ದು. ಗಜಲಕ್ಷ್ಮಿಯ ಎರಡು ಬದಿಗೂ ಅರೆಗಂಭಗಳನ್ನು ಕೆತ್ತಲಾಗಿದೆ. ಈ ಗರ್ಭಗೃಹದ ಮುಂದಿನ ಅಂತರಾಳವು ಆಯತಾಕಾರವಾಗಿದ್ದು ಅದರಲ್ಲಿ ನಂದಿ ಇದೆ ಅಂತರಾಳದಲ್ಲಿ ಗಣಪತಿ ಶಿಲ್ಪವಿದೆ. ಇದರ ದ್ವಾರದ ಲಲಾಟದಲ್ಲಿ ಗಜಲಕ್ಷ್ಮೀ ಶಿಲ್ಪವಿದ್ದು ಅದರ ಎರಡು ಬದಿಗೂ ಕುಂಬಗಳನ್ನು ಕೆತ್ತಲಾಗಿದೆ.

ಚೌಕಾಕಾರದ ಉತ್ತರದ ಮುಖ್ಯಗರ್ಭಗೃಹದಲ್ಲಿ ಸ್ಥಾನಿಕ ವಿಷ್ಣು ಮೂರ್ತಿ ಇದೆ ಗರ್ಭಗೃಹದ ವಿತಾನದಲ್ಲಿ ಅರಳಿದ ಪದ್ಮವಿದೆ ಇದರ ದ್ವಾರದ ಕೆಳಭಾಗದಲ್ಲಿ ಪುಷ್ಪ, ಫಲಗಳನ್ನು ಹಿಡಿದು

ನಿಂತಿರುವ ಚಾಮರಧಾರಿಣಿಯರನ್ನು ಸ್ತಂಭಗಳ ಮೇಲಿನ ಲತಾ ತೋರಣದ ಮಧ್ಯದಲ್ಲಿ ಕೆತ್ತಲಾಗಿದೆ. ದ್ವಾರವು ರತ್ನ, ಸ್ತಂಭ, ಪುಷ್ಪ ದಳಗಳ ಶಾಖೆಯಿಂದ ಕೂಡಿದ್ದು ಮೊದಲಿನ ಶಾಖೆ ಲಲಾಟ ಬಿಂಬದವರೆಗೂ ಮುಂದುವರೆದಿದೆ. ಲಲಾಟಬಿಂಬದಲ್ಲಿ ಗಜಲಕ್ಷ್ಮೀಯನ್ನು ಚೌಕಾಕಾರದ ಪಟ್ಟಿಕೆಯಲ್ಲಿ ಕೆತ್ತಲಾಗಿದೆ ಈ ಗರ್ಭಗೃಹದ ಮುಂದಿನ ಅಂತರಾಳವು ತೆರೆದ ರೀತಿಯಲ್ಲಿದೆ.

ನವರಂಗದಲ್ಲಿ ನಾಲ್ಕು ಕಂಬಗಳಿದ್ದು ಚೌಕ, ಅಷ್ಟಕಾರದಲ್ಲಿವೆ, ನವರಂಗದ ವಾಯುವ್ಯ ಭಾಗದಲ್ಲಿನ ಕಂಬವೊಂದರ ಚೌಕ ಪಟ್ಟಿಕೆಯಲ್ಲಿ ಆನೆಯ ಮೇಲೆ ಕುಳಿತ ಹಾಗೂ ಮಾವುತನ ಶಿಲ್ಪವಿದೆ ಇಲ್ಲಿನ ಬೋಧಿಗೆಗಳು ಅಲಂಕಾರಯುಕ್ತವಾಗಿಲ್ಲ ನವರಂಗದ ವಿತಾನದಲ್ಲಿ ಪದ್ಮ, ಏಡಿ, ನಾಗಬಂಧಗಳನ್ನು ಕೆತ್ತಲಾಗಿದೆ ನವರಂಗದ ಉತ್ತರ ಹಾಗೂ ಪೂರ್ವ ಭಾಗದ ಎರಡೂ ದ್ವಾರಗಳೂ ಸರಳವಾಗಿವೆ. ಪೂರ್ಭಾಗದ ದ್ವಾರದ ಲಲಾಟದಲ್ಲಿ ಗಜಲಕ್ಷ್ಮೀ ಶಿಲ್ಪ ಕೆತ್ತಲಾಗಿದೆ. ದೇವಾಲಯಕ್ಕೆ ಹೊಂದಿಕೊಂಡಂತೆ ಒಂದು ಮಂಟಪವಿದೆ. ಈ ಮಂಟಪದ ಒಟ್ಟು ಉದ್ದಕ್ಕೆ ಐದು ಕಲ್ಲಿನ ಕಂಬಗಳು ಮತ್ತು ಅಡ್ಡಕ್ಕೆ ನಾಲ್ಕು ಕಂಬಗಳಿದ್ದು ಒಟ್ಟು ೨೦ ಅಂಕಣಗಳಿವೆ. ಇದರಲ್ಲಿರುವ ೨ ಅಂಕಣಗಳಿಗೆ ಪ್ರತ್ಯೇಕ ಗೋಡೆ ನಿರ್ಮಿಸಿದ್ದಾರೆ. ಈ ಕಂಬಗಳು ಕೆಳಭಾಗದಲ್ಲಿ ಚತುರ್ಮುಖವಾಗಿದ್ದು ಮೇಲಿನ ಅರ್ಧವು ಅಷ್ಟಮುಖವಾಗಿದೆ. ಕಂಬದ ಮೇಲ್ಭಾಗದಲ್ಲಿ ನಂದಿಗಳನ್ನು ಹೊಂದಿಸಿದ ಸ್ಥಾನದಲ್ಲಿ ಕೆಳಮುಖವಾಗಿ ಅರಳಿದ ಕಮಲದಳದಂತಿದೆ. ಈ ಮಂಟಪ ೧೯ ನೇ ಶತಮಾನದ ಮಧ್ಯಭಾಗದಲ್ಲಿ ನಿರ್ಮಿಸಲಾಗಿದೆ[೫೫] ಎಂದಿದ್ದಾರೆ. ಶ್ರೀಮತಿ ಚಂದನಾ ವೈ ನೀಲಪ್ಪನವರು ಮಂಟಪದ ವಿವರಣೆಗೂ ಪೂರ್ವದ ವಿವರಣೆಗಳ ದೇವಾಲಯದ ವಾಸ್ತುಲಕ್ಷಣಗಳ ಆಧಾರದ ಮೇಲೆ ಇದು ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿ ನಿರ್ಮಾಣವಾಗಿದೆ ಎಂದು ಹೇಳಬಹುದು.

ಸಂಖ್ಯೆ : ೭

ಹೆಸರು : ಕೇಶವ ದೇವಾಲಯ

ಗ್ರಾಮ : ವಾಸನ

ತಾಲೂಕು : ಹರಿಹರ

ಕಾಲಮಾನ : ಕ್ರಿ.ಶ. ೧೨ನೇ ಶತಮಾನ ಕೊನೆಯ ಭಾಗ[೫೬]

ಗ್ರಾಮದ ವಾಯುವ್ಯಭಾಗದ ನದಿಯ ಬಳಿ ಜಮೀನೊಂದರಲ್ಲಿ ಈ ದೇವಾಲಯದಲ್ಲಿ ಗರ್ಭಗೃಹ ಮಾತ್ರ ಉಳಿದಿದೆ. ದೇವಾಲಯದ ಹೊರಭಾಗದಲ್ಲಿನ ಅಧಿಷ್ಠಾನ ಭೂಮಿಯಲ್ಲಿ ಹೂತು ಹೋಗಿದೆ. ಹಾಗಾಗಿ ಅಧಿಷ್ಠಾನ ವಿವಿಧ ಭಾಗಗಳು ಕಾಣಿಸುವುದಿಲ್ಲ. ಸರಳವಾದ ಭಿತ್ತಿಯಿದ್ದು ಅದರಲ್ಲಿ ಯಾವುದೇ ಅಲಂಕಾರವಿಲ್ಲ ದೇವಾಲಯದ ಮೇಲಿನ ಶಿಖರವೀಗ ಕಾಣುವುದಿಲ್ಲ. ಚೌಕಾಕಾರವಾದ ಗರ್ಭಗೃಹದಲ್ಲಿ ಕೇಶವನ ಮೂರ್ತಿಯಿದೆ ಈ ಮೂರ್ತಿಯ ಬಳಿಯೇ ಒಂದು ಲಿಂಗವೂ ಇದೆ. ಗರ್ಭಗೃಹದ ವಿತಾನದಲ್ಲಿ ಪದ್ಮವಿದೆ. ದ್ವಾರವೂ ರತ್ನ, ಪುಷ್ಪ, ಸ್ತಂಭ, ಲತಾ ಶಾಖೆಗಳಿಂದ ಅಲಂಕೃತವಾಗಿದೆ. ಈ ಎಲ್ಲಾ ಶಾಖೆಗಳು ಲಲಾಟದವರೆಗೂ

ಮುಂದುವರೆದಿದೆ ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವನ್ನು ಕೆತ್ತಲಾಗಿದೆ. ದೇವಾಲಯದ ಹೊರಭಾಗದಲ್ಲಿ ಮಹಿಷಮರ್ದಿನಿ, ಸಪ್ತಮಾತೃಕೆಯರು, ನಂದಿ, ಗಣಪತಿ ಮೂರ್ತಿಗಳು, ವೀರಗಲ್ಲು ಮತ್ತು ಮಾಸ್ತಿಕಲ್ಲುಗಳಿವೆ. ತಿಪ್ಪೇಸ್ವಾಮಿ.ಎಚ್., ಇವರು ದೇವಾಲಯದ ವಾಸ್ತು ಲಕ್ಷಣವನ್ನು ಗಮನದಲ್ಲಿಟ್ಟುಕೊಂಡು ಇದು ಹೊಯ್ಸಳರ ಕಾಲದಲ್ಲಿ ನಿರ್ಮಿತವಾದ ದೇವಾಲಯವೆಂದು ಹೇಳಿದ್ದಾರೆ.[೫೭] ಆದರೆ ಇದೇ ದೇವಾಲಯದ ಕಾಲಮಾನವಿಲ್ಲದ ಒಂದು ಶಾಸನ "ಚಾಲುಕ್ಯ ವಿಕ್ರಮ ವರ್ಷ" ವೆಂದಷ್ಟೆ ಇದ್ದು ಮುಂದುವರೆದು ಶಾಸನದ ತೀರ್ತ್ಥದ ರಾಮೇಶ್ವರ ದೇವರ್ಗ್ಗೆ ಎಂದಿದೆ. ಬಹುಶಃ ಕಲ್ಯಾಣ ಚಾಲುಕ್ಯರ ಕಾಲದ ದೇವಾಲಯವಿದಾಗಿರಬೇಕು ಎಂಬುದು ನನ್ನ ಅನಿಸಿಕೆ.

ಸಂಖ್ಯೆ : ೮

ಹೆಸರು : ಹರಿಹರೇಶ್ವರ ದೇವಾಲಯ

ಗ್ರಾಮ : ಹರಿಹರ

ತಾಲೂಕು : ಹರಿಹರ

ಕಾಲಮಾನ : ಕ್ರಿ.ಶ.೧೦–೧೩ನೇ ಶತಮಾನ[೫೮]

ಹರಿಹರ ನಗರದ ಹರಿಹರೇಶ್ವರ ದೇವಾಲಯ ಪ್ರಸಿದ್ಧ ವಾಸ್ತು ಕೃತಿಯಾಗಿದೆ. ನಗರದ ಪಶ್ಚಿಮ ಭಾಗದಲ್ಲಿದ್ದು ತುಂಗಭದ್ರಾ ನದಿಯ ಬಲದಂಡೆಯ ಮೇಲಿದೆ. ದೇವಾಲಯವನ್ನು ಕುರಿತು ಅದರ ನಿರ್ಮಾಣದ ಬಗೆಗೆ ಹಾಗೂ ಗರ್ಭಗೃಹದಲ್ಲಿರುವ ಹರಿಹರೇಶ್ವರ ಶಿಲ್ಪದ ಬಗೆಗೆ ಹಲವಾರು ವಿದ್ವಾಂಸರು ವಿಭಿನ್ನ ನೆಲೆಗಳಿಂದ ಅಧ್ಯಯನ ಮಾಡಿದ್ದಾರೆ. ಈ ದೇವಾಲಯ ಯಾವ ಕಾಲದಲ್ಲಿ ನಿರ್ಮಾಣವಾಯಿತೆಂದು ಹೇಳಲು ಕಷ್ಟವಾದರೂ ಕೂಡ ಕ್ರಿ.ಶ. ೧೦೯೮ರಿಂದ[೫೯] ದೇವಾಲಯಕ್ಕೆ ಸಂಬಂಧಿಸಿದ ದಾಖಲೆಗಳು ದೊರೆಯುತ್ತವೆ. ಕಲ್ಯಾಣ ಚಾಲುಕ್ಯ, ಉಚ್ಚಂಗಿಯ ಪಾಂಡ್ಯರು, ದೇವಗಿರಿಯ ಯಾದವರು, ಹೊಯ್ಸಳರು ಮತ್ತು ವಿಜಯನಗರದ ಅರಸರ ಹಲವಾರು ಶಾಸನಗಳು ಇಲ್ಲಿ ದೊರೆತಿವೆ.[೬೦] ದೇವಾಲಯದ ಹೆಚ್ಚಿನ ಬೆಳವಣಿಗೆಗಳು ಹೊಯ್ಸಳರ ಆಳ್ವಿಕೆಯಲ್ಲಿಯೇ ಆಗಿರುವುದು ಶಾಸನಗಳಿಂದ ಹಾಗೂ ದೇವಾಲಯದ ವಾಸ್ತುಲಕ್ಷಣಗಳಿಂದ ಸ್ಪಷ್ಟವಾಗುತ್ತದೆ.

ಈ ದೇವಾಲಯವು ಗರ್ಭಗೃಹ, ಅಂತರಾಳ, ನವರಂಗ, ತೆರೆದ ಮಹಾಮಂಟಪ ಹಾಗೂ ಮುಖಮಂಟಪವನ್ನು ಒಳಗೊಂಡಿದೆ. ಅಧಿಷ್ಠಾನವು, ಉಪಾನ, ಪದ್ಮ, ಕರ್ಣಿಕಾ, ಕಪೋತ, ಕಂಟಕ, ವೇದಿಗಳಿಂದ ಕೂಡಿದೆ. ಈ ಅಧಿಷ್ಠಾನದ ಕೆಳಪಟ್ಟಿಯ ಭಾಗದಲ್ಲಿ ಲತಾ ಸುರುಳಿಗಳ ನಡುವೆ ಸ್ತ್ರೀ ಮತ್ತು ಪುರುಷರ ಶಿಲ್ಪಗಳನ್ನು ಕೆತ್ತಲಾಗಿದೆ. ಹಾಗೇ ಇದರ ಮೇಲಿನ ಪಟ್ಟಿಯಲ್ಲಿ ಪುಷ್ಪಗಳನ್ನು ಅಲಂಕರಿಸಲಾಗಿದೆ. ಭಿತ್ತಿಯು ಅರೆಗಂಭಗಳಿಂದ ಹಾಗೂ ಆ ಅರೆಗಂಭಗಳ ಮೇಲೆ ಶಿಖರದ ಮಾದರಿಗಳನ್ನು ಕೆತ್ತಲಾಗಿದೆ. ದಕ್ಷಿಣ ಹಾಗೂ ಪಶ್ಚಿಮ ಭಾಗದ ದೇವಕೋಷ್ಠಗುಡಿಗಳ ಮೇಲೆ ಶಿಖರದ ಮಾದರಿಗಳನ್ನು ಕೆತ್ತಲಾಗಿದೆ. ದಕ್ಷಿಣ ಹಾಗೂ ಪಶ್ಚಿಮ ಭಾಗದ ದೇವಕೋಷ್ಠಗಳ

ದ್ವಾರ ಲಲಾಟದಲ್ಲಿ ಗಜಲಕ್ಷ್ಮೀ ಶಿಲ್ಪವನ್ನು ಕೆತ್ತಲಾಗಿದೆ. ಈ ಮೂರು ದೇವಕೋಷ್ಠಗಳ ದ್ವಾರದಲ್ಲಿ ಕೆತ್ತಿದ ದ್ವಾರಪಾಲಕ ಶಿಲ್ಪಗಳು ನಶಿಸುತ್ತಿವೆ ಮತ್ತು ಈ ದೇವಕೋಷ್ಠಗಳಲ್ಲಿ ಈಗ ಮೂರ್ತಿಗಳಿಲ್ಲ.

ಭಿತ್ತಿ ಮೇಲಿನ ಪ್ರಸ್ತರದ ಕಪೋತ ಭಾಗವು ಹೊರಚಾಚಿ ಕೆಳಭಾಗದ ರೀತಿಯಲ್ಲಿದೆ. ಇದು ಮಹಾಮಂಟಪದ ಸುತ್ತಲೂ ಹೆಚ್ಚು ಹೊರಬಾಗಿದ್ದು ಆಂಗ್ಲ ವರ್ಣಮಾಲೆಯ "ಎಸ್" ಆಕಾರದಲ್ಲಿದೆ.[೫೯] ಕಪೋತದ ಭಾಗದಲ್ಲಿ ಜೋಡಿ ಆನೆಗಳನ್ನು ಕೆತ್ತಲಾಗಿದೆ. ಹಾಗೆಯೇ ಮೇಲುಗಡೆ ಕೂಟ, ಪಂಜರಗಳನ್ನು ಹಾಗೂ ಕೀರ್ತಿ ಮುಖಗಳನ್ನು ಕೆತ್ತಲಾಗಿದೆ. ಗರ್ಭಗೃಹದ ಮೇಲೆ ಮೂಲಶಿಖರವಿಲ್ಲ, ಈ ದೇವಾಲಯದ ಗರ್ಭಗೃಹದ ಮೇಲಿನ ಶಿಖರವು ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿತವಾದ ದ್ರಾವಿಡ ಶೈಲಿಯ ತ್ರಿತಲದಲ್ಲಿದೆ. ಬಹುಶಃ ಇದು ನಂತರದ ರಚನೆಯಾಗಿರಬೇಕು. ಆದರೆ ಸಳ ಹುಲಿಯನ್ನು ಕೊಲ್ಲುತ್ತಿರುವ ಶಿಲ್ಪವನ್ನು ಸುಖನಾಸಿಯಲ್ಲಿ ಈ ಶಿಖರಕ್ಕೆ ಹೊಂದಿಕೊಂಡಂತೆ ಇಟ್ಟಿದ್ದಾರೆ. ನವರಂಗದ ಉತ್ತರ ದ್ವಾರದ ಸ್ವಲ್ಪ ವಿಸ್ತರಿಸಿದ ಭಾಗದಲ್ಲಿ ಕಾಲಭೈರವನ ದೇವಾಲಯ ಇದೆ. ಈ ದೇವಾಲಯದ ಅಧಿಷ್ಠಾನವು ಉಪಾನ, ಪದ್ಮ, ಕರ್ಣಿಕ, ಕಪೋತ, ಕಂಟಕ ಭಾಗಗಳಿಂದ ಕೂಡಿದೆ. ಇದರ ಭಿತ್ತಿಯು ಸರಳವಾಗಿದೆ. ಭಿತ್ತಿಯ ಮೇಲಿನ ಕಪೋತ ಭಾಗ ಸ್ವಲ್ಪ ಹೊರಬಾಗಿದ್ದು ಮೇಲ್ಗಡೆ ಶಿಖರದ ಯಾವ ಕುರುಹುಗಳು ಇಲ್ಲ. ಈ ಕಾಲದ ಭೈರವ ದೇವಾಲಯ ಹರಿಹರೇಶ್ವರ ದೇವಾಲಯಕ್ಕೆ ಪೂರಕವಾಗಿಯೇ ರಚನೆಗೊಂಡಿದೆ.

ಮಹಾಮಂಟಪ ಪ್ರವೇಶಿಸಲು ಪೂರ್ವ, ಉತ್ತರ ಹಾಗೂ ದಕ್ಷಿಣದಲ್ಲಿ ಪ್ರವೇಶ ದ್ವಾರಗಳಿವೆ. ಮಹಾಮಂಟಪದ ಕಕ್ಷಾಸನದ ಹೊರಭಾಗದಲ್ಲಿ (ಹೊರ ಭಿತ್ತಿಯಲ್ಲಿ) ಆರು ಪಟ್ಟಿಕೆಗಳಿಂದ ಅಲಂಕರಿಸಲಾಗಿದೆ.[೬೦] ಕೆಳಗಿನ ಮೊದಲ ಪಟ್ಟಿಯಲ್ಲಿ ಸುರುಳಿಗಳ ನಡುವೆ ಪುರುಷರನ್ನು ಹಾಗೂ ಹಂಸಗಳನ್ನು ಕೆತ್ತಲಾಗಿದೆ. ಎರಡನೆಯ ಪಟ್ಟಿಕೆಯಲ್ಲಿ ಆನೆ, ಕುದುರೆ, ಒಂಟೆಗಳ ಮೇಲೆ ಸವಾರಿ ಮಾಡುತ್ತಿರುವ ಯೋಧರ ಶಿಲ್ಪಗಳನ್ನು ಕೆತ್ತಲಾಗಿದೆ. ಮೂರನೆಯ ಪಟ್ಟಿಕೆಯಲ್ಲಿ ಅರೆಗಂಭಗಳ ಮಧ್ಯದಲ್ಲಿ ಸ್ತ್ರೀ ಪುರುಷರ ಶಿಲ್ಪಗಳು ಕೆತ್ತಲ್ಪಟ್ಟಿವೆ. ನಾಲ್ಕನೆಯ ಪಟ್ಟಿಕೆಯಲ್ಲಿ ಶಿಖರದ ವಿವಿಧ ಮಾದರಿಗಳನ್ನು ಬಿಡಿಸಲಾಗಿದೆ. ಶಿಖರಗಳ ಮಧ್ಯದಲ್ಲಿ ನೆಗೆಯುತ್ತಿರುವ ಸಿಂಹಗಳ ಕೆತ್ತನೆ ಮಾಡಲಾಗಿದೆ. ಐದನೆಯ ಪಟ್ಟಿಕೆಯಲ್ಲಿ ಜೋಡಿ ಅರೆಗಂಭಗಳ ನಡುವೆ ಸಂಗೀತಗಾರರ, ವಾದ್ಯದವರ, ನರ್ತನಗೈಯುತ್ತಿರುವ ಸ್ತ್ರೀ ಶಿಲ್ಪಗಳಿವೆ. ಅಲ್ಲಲ್ಲಿ ಮಹಿಷಮರ್ದಿನಿ, ಈಶ್ವರ, ವಿಷ್ಣು, ಬ್ರಹ್ಮ, ಗಣೇಶ, ಭೈರವ, ಮೊದಲಾದ ದೇವತಾ ಮೂರ್ತಿಗಳನ್ನು ಕೆತ್ತಲಾಗಿದೆ.[೬೧] ಕೊನೆಯ ಆರನೇ ಪಟ್ಟಿಕೆಯಲ್ಲಿ ವೃತ್ತಾಕಾರದ ಹೂಬಳ್ಳಿಗಳ ಸಾಲು ಅದರಲ್ಲಿ ಲತಾ ಹಾಗೂ ಪುಷ್ಪಗಳನ್ನು ಮನೋಜ್ಞವಾಗಿ ಅಲಂಕರಿಸಲಾಗಿದೆ.[೬೨] ದೇವಾಲಯದ ಪೂರ್ವದ್ವಾರಕ್ಕೆ ಅಭಿಮುಖವಾಗಿ ಎರಡು ದೀಪಸ್ತಂಭಗಳಿವೆ ಕಲ್ಲಿನ ಕಟ್ಟೆಯ ಮೇಲೆ ನಿಲ್ಲಿಸಲಾದ ಈ ದೀಪಸ್ತಂಭಗಳ ಎಣ್ಣೆ ಹಾಗೂ ಬತ್ತಿಗಳನ್ನಿಡಲು ಮುಂಚಾಚಿದ ಗುಳಿಗಳುಳ್ಳ ಏಣುಗಳಿವೆ. ಒಂದೊಂದು ಕಂಬಕ್ಕೂ ಸುಮಾರು ಎಪ್ಪತ್ತೈದು ಇಂತಹ ಕಂಬಗಳು ಏಳುಗಳಿದ್ದು, ಇವು ದೀಪ ಹಚ್ಚಲು ಸಹಾಯಕವಾಗಿವೆ.[೬೩] ಅಷ್ಟಮುಖಗಳನ್ನು ಹೊಂದಿದ ಇವು ವೃತ್ತಾಕಾರವಾಗಿವೆ.

ದೇವಾಲಯವು ವಿಶಾಲವಾದ ಪ್ರಾಕಾರವನ್ನು ಹೊಂದಿದ್ದು, ಪೂರ್ವದಲ್ಲಿ ಪ್ರವೇಶ ದ್ವಾರವೂ ಇದೆ. ಇದೇ ಪ್ರಕಾರದಲ್ಲಿ ಮತ್ತೊಂದು ಹರಿಹರೇಶ್ವರ ದೇವಾಲಯವಿದೆ. ಇದೊಂದು ಹೊಯ್ಸಳರ ಕಾಲದ ಬಾಗಿಲುವಾಡ ಮತ್ತು ಕಂಬಗಳನ್ನು ಉಪಯೋಗಿಸಿ ನಿರ್ಮಿಸಿದ ಚಿಕ್ಕ ದೇವಾಲಯವಾಗಿದೆ. ಇದು ಏಕಕೂಟ ದೇವಾಲಯವಾಗಿದ್ದು ಅಧಿಷ್ಠಾನ, ಸರಳವಾದ ಭಿತ್ತಿಗಳನ್ನು ಹೊಂದಿದೆ. ಈ ದೇವಾಲಯದಲ್ಲಿ ಒಂದು ಹರಿಹರನ ಶಿಲ್ಪ ಇದೆ. ಮುಖ್ಯ ದೇವಾಲಯದ ಪ್ರವೇಶದ್ವಾರವನ್ನು ಹೊಯ್ಸಳರ ಇನ್ನೊಬ್ಬ ಅಮಾತ್ಯ ಸೋಮದಂಡಾಧಿಪತಿಯು ಕ್ರಿ.ಶ. ೧೨೬೮ರಲ್ಲಿ ದೇವಸ್ಥಾನದ ಚೆಲುವನ್ನು ಇಮ್ಮಡಿಸಲು ಐದು ಅಂತಸ್ತುಗಳಿಂದ ಶೋಭಿಸುವಂತೆ ಮಾಡಿದನೆಂದು ಶಾಸನವೊಂದು ಉಲ್ಲೇಖಿಸುತ್ತದೆ.[೬೭] ಆದರೆ ಗೋಪುರದ ಮೇಲಿನ ಅಂತಸ್ತುಗಳು ನಾಶವಾಗಿ ಇದೊಂದು ಸಾಧಾರಣ ದ್ವಾರಮಂಟಪದಂತೆ ಕಂಡುಬರುತ್ತದೆ. ದೇವಾಲಯದಲ್ಲಿನ ಗರ್ಭಗೃಹವು ಚೌಕಾಕಾರವಾಗಿದ್ದು ಇದರಲ್ಲಿ ಹರಿಹರೇಶ್ವರನ ಮೂರ್ತಿ ಇದೆ. ಗರ್ಭಗೃಹ ವಿತಾನದಲ್ಲಿ ಪದ್ಮವಿದೆ. ದ್ವಾರದ ಕೆಳಭಾಗದಲ್ಲಿ ಕಂಬದ ಅಲಂಕಾರವಿದ್ದು ಉಳಿದಂತೆ ದ್ವಾರದಲ್ಲಿ ಯಾವುದೇ ಅಲಂಕಾರವಿಲ್ಲ. ಗರ್ಭಗೃಹ ಮುಂದಿರುವ ಅಂತರಾಳವು ಆಯತಾಕಾರವಾಗಿದ್ದು ಇದರಲ್ಲಿ ಯಾವ ಮೂರ್ತಿಗಳು ಇಲ್ಲ. ಇದರ ವಿತಾನದಲ್ಲಿ ಪದ್ಮವಿದೆ ದ್ವಾರದ ಬಲಗಡೆ ಕೆಳಭಾಗದಲ್ಲಿ ಶೈವ, ಎಡಭಾಗದಲ್ಲಿ ವೈಷ್ಣವ ಒಂದು ಭಾಗಕ್ಕೆ ಇಬ್ಬರಂತೆ ಒಟ್ಟು ನಾಲ್ಕು ಜನ ದ್ವಾರಪಾಲಕರಿದ್ದಾರೆ.

ದ್ವಾರವು ಪುಷ್ಪ, ಲತಾ, ಸ್ತಂಭ, ಶಾಖಾಗಳಿಂದ ಕೂಡಿದ್ದು ಸ್ತಂಭ ಶಾಖೆಯ ಎರಡು ಕಡೆ ಒಂದು ಏಳರಂತೆ ಒಂದೊಂದರಲ್ಲೂ ಎರಡು ಸಾಲಿನ ಜಾಲಾಂಧ್ರಗಳಿವೆ. ಈ ಜಾಲಾಂಧ್ರಗಳನ್ನು ಪುಷ್ಪಗಳಿಂದ ಅಲಂಕರಿಸಲಾಗಿದೆ. ಮೊದಲಿನ ಎರಡೂ ಶಾಖೆಗಳು ಲಲಾಟದವರೆಗೂ ಮುಂದುವರೆದಿದ್ದು ಚೌಕಾಕಾರದ ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವನ್ನು ಕೆತ್ತಲಾಗಿದೆ. ಗಜಲಕ್ಷ್ಮಿ ಪಟ್ಟಿಕೆಯ ಎರಡೂ ಬದಿಗೂ ಕಮಲದ ಮೊಗ್ಗು ಇಳಿಬಿದ್ದ ರೀತಿಯ ಅಲಂಕಾರವಿದೆ. ಅಂತರಾಳ ದ್ವಾರದ ಎರಡೂ ಬದಿಗೂ ಎರಡು ಕೋಷ್ಠಗುಡಿಗಳಿವೆ. ಅವುಗಳಲ್ಲಿ ಈಗ ಮೂರ್ತಿಗಳಿಲ್ಲ. ನವರಂಗದಲ್ಲಿ ಬಳಪದ ಶಿಲೆಯ ತಿರುಗಣಿಯಂತ್ರದಿಂದ ಹೊಳಪಾಗಿಸಿದ ಘಂಟಾಕೃತಿಯ ನಾಲ್ಕು ಕಂಬಗಳಿವೆ. ಪೀಠದ ಮೇಲೆ ನಿಂತಿರುವ ಈ ಕಂಬಗಳ ಕೆಳಭಾಗ ಚೌಕಾಕಾರದಲ್ಲಿದ್ದು ಅದರ ಮೇಲೆ ಸುಮಾರು ಹನ್ನೊಂದು ವೃತ್ತಗಳುಳ್ಳ ಭಾಗವಿದೆ. ಅದರ ಮೇಲೆ ತಿರುಗಿ ಹಾಕಿದ ಬೋಗುಣಿಯಂತೆ ಮಧ್ಯೆ ಉಬ್ಬಿದ ವೃತ್ತವಿದೆ. ಈ ವೃತ್ತಾಕಾರದ ಭಾವು ಪತ್ರ ಹಾಗೂ ಮಾಲಾಲಂಕಾರದಿಂದ ಕೂಡಿದೆ. ಈ ಕಂಬಗಳ ಮೇಲಿನ ಬೋಧಿಗೆಗಳು ಪುಷ್ಪದಳಗಳಿಂದ ಅಲಂಕೃತವಾಗಿವೆ. ಈ ನಾಲ್ಕು ಕಂಬಗಳ ಮಧ್ಯದ ಮೇಲಿನ ವಿತಾನದಲ್ಲಿ ಅಷ್ಠದಿಕ್ಪಾಲಕರನ್ನು ಅವರ ವಾಹನ ಸಮೇತರಾಗಿ ಕೆತ್ತಲಾಗಿದೆ.[೬೮] ಈ ಅಷ್ಠದಿಕ್ಪಾಲಕರ ಮಧ್ಯದ ಪಟ್ಟಿಕೆಯಲ್ಲಿದ್ದ ಶಿಲ್ಪ ಈಗ ನಾಶವಾಗಿ ಹೋಗಿದೆ.[೬೯]

ನವರಂಗದ ಉಳಿದ ವಿತಾನಗಳಲ್ಲಿ ಕಮಲದ ಮೊಗ್ಗುಗಳನ್ನು ಕಾಣಬಹುದು. ನವರಂಗಕ್ಕೆ ಉತ್ತರ, ದಕ್ಷಿಣ, ಹಾಗೂ ಪೂರ್ವದಿಂದ ಪ್ರವೇಶಿಸಲು ದ್ವಾರಗಳಿವೆ. ಉತ್ತರ ಪ್ರವೇಶ ದ್ವಾರವು ಲತಾ, ಪುಷ್ಪ ಹಾಗೂ ಸ್ತಂಭಶಾಖೆಗಳಿಂದ ಅಲಂಕೃತಗೊಂಡಿದ್ದು ದ್ವಾರಪಾಲಕರಿದ್ದಾರೆ. ಲಲಾಟದಲ್ಲಿ

ಗಜಲಕ್ಷ್ಮೀ ಶಿಲ್ಪವಿದೆ. ದಕ್ಷಿಣ ದ್ವಾರವು ಉತ್ತರ ದ್ವಾರದ ಅಲಂಕರಣ ರೀತಿಯಲ್ಲಿಯೇ ಇದೆ. ಆದರೆ ಈ ದ್ವಾರದ ಮುಂದೆ ನಾಲ್ಕು ಕಂಬಗಳ ಮುಖಮಂಟಪಕ್ಕೆ ಕಕ್ಷಾಸನವನ್ನು ಕಲ್ಪಿಸಲಾಗಿದೆ. ಇನ್ನೂ ನವರಂಗದ ಪೂರ್ವ ಪ್ರವೇಶದ್ವಾರವು ಹಲವಾರು ಶಾಖೆಗಳಿಂದ ಅಲಂಕೃತಗೊಂಡಿದೆ. ರತ್ನ, ಪುಷ್ಪ, ಸ್ತಂಭ, ಸುರುಳಿಯೊಳಗೆ ನಾಗದಂಪತಿಗಳನ್ನು ಚಿತ್ರಿಸಿದ ನಾಗಶಾಖೆ, ಯಾಳಿಶಾಖೆಗಳಿಂದ ಕೂಡಿದೆ.[೭೦] ಮೊದಲ ಮೂರು ಶಾಖೆಗಳು ಲಲಾಟದವರೆಗೂ ಮುಂದುವರೆದಿದ್ದು ಲಲಾಟದಲ್ಲಿ ಗಜಲಕ್ಷ್ಮೀ ಶಿಲ್ಪವಿದೆ. ಚೌಕಾಕಾರದ ಈ ಪಟ್ಟಿಕೆಯ ಇಕ್ಕೆಲಗಳಲ್ಲಿ ಇಳಿಬಿದ್ದ ಕಮಲದ ಮೊಗ್ಗಿನ ಸುಂದರ ಅಲಂಕಾರವಿದೆ. ಉತ್ತರಾಂಗವನ್ನು ಪುಷ್ಪ, ಲತಾ, ಹಾಗೂ ಸ್ತಂಭಗಳಿಂದ ಅಲಂಕರಿಸಲಾಗಿದೆ. ಮಧ್ಯದಲ್ಲಿ ಹರಿಹರೇಶ್ವರ ಮತ್ತು ಇಕ್ಕೆಲಗಳಲ್ಲಿ ಕೆಲವು ಧ್ಯಾನಾಸಕ್ತಿ ಮೂರ್ತಿಗಳನ್ನು ಕೆತ್ತಲಾಗಿದ್ದು ಇವುಗಳನ್ನು ಕೀರ್ತಿಮುಖಗಳಿಂದ ಸಿಂಗರಿಸಲಾಗಿದೆ. ಪ್ರಸ್ತುತ ದ್ವಾರಬಂಧದ ದ್ವಾರಪಾಲಕರ ಕೆತ್ತನೆಯಲ್ಲಿಯೂ ಸಹ ಶೈವ ಮತ್ತು ವೈಷ್ಣವ ಸಂವೇದನೆಗಳಿಗೆ ಪೂರಕವಾಗಿ ದ್ವಾರಬಂಧದ ಬಲಭಾಗದಲ್ಲಿ ದ್ವಾರಪಾಲಕನ ಪಕ್ಕದಲ್ಲಿ ಶಿವನ ಶಿಲ್ಪವೂ ಎಡಭಾಗದ ದ್ವಾರಪಾಲಕನ ಪಕ್ಕದಲ್ಲಿ ವಿಷ್ಣುವಿನ ಶಿಲ್ಪವೂ[೭೧] ಕಂಡುಬರುತ್ತದೆ.

ನವರಂಗದ ಮುಂದಿನ ಮಹಾಮಂಟಪವನ್ನು ಪ್ರವೇಶಿಸಲು ಪೂರ್ವ, ಉತ್ತರ, ಮತ್ತು ದಕ್ಷಿಣ ಭಾಗಕ್ಕೆ ಚಿಕ್ಕ ಪ್ರವೇಶದ್ವಾರಗಳಿವೆ. ಹಾಗೆಯೇ ನೈರುತ್ಯ ಮತ್ತು ವಾಯುವ್ಯ ಮೂಲೆಗಳಲ್ಲಿಯೂ ಎರಡು ಚಿಕ್ಕ ಪ್ರವೇಶದ್ವಾರಗಳನ್ನು ಕಲ್ಪಿಸಲಾಗಿದೆ ಮಹಾಮಂಟಪದಲ್ಲಿ ಒಟ್ಟು ಅರವತ್ತೆಂಟು ನಯವಾದ ವಿಭಿನ್ನ ಶೈಲಿಯ ಕಂಬಗಳಿವೆ. ಇವುಗಳು ದಪ್ಪವಾಗಿರುವುದರಿಂದ ಸಭಾಮಂಟಪವು ಎತ್ತರವಾಗಿ ಕಂಡುಬರದೆ ಕುಳ್ಳಾದಂತೆ ಭಾಸವಾಗುತ್ತದೆ. ಕಂಬಗಳ ಪೀಠದ ಮೇಲಿನ ಭಾಗ ಚೌಕಾಕಾರವಾಗಿದ್ದು ಅದರ ಮೇಲಿನ ಕಂಬಗಳ ರಚನೆ ನವರಂಗದ ಕಂಬಗಳಂತೆಯೇ ಕಂಡುಬರುತ್ತದೆ. ಬೋಧಿಗೆಯು ಪುಷ್ಪಗಳಿಂದ ಅಲಂಕೃತಗೊಂಡಿದೆ. ಮಹಾಮಂಟಪದ ಮಧ್ಯ ವಿತಾನದಲ್ಲಿ ಅರಳಿ ಮುಗುಚಿದ ಕಮಲದ ಹಾಗೂ ಮಧ್ಯದಲ್ಲಿ ಕಮಲದ ಮೊಗ್ಗಿನ ಆಕಾರವಿದೆ. ಸುತ್ತಲೂ ಲತಾ, ಪುಷ್ಪಗಳಿವೆ. ಮಹಾಮಂಟಪದ ಸುತ್ತಲೂ ಹೊರಚಾಚಿದ ಕಪೋತದ ಬಲಭಾಗದಲ್ಲಿ ಪುಷ್ಪ, ಸಖನ ಮೇಲೆ ಬಿದ್ದ ಹುಲಿ, ಆನೆ ಹಾಗೂ ಸಿಂಹಗಳನ್ನು ಮತ್ತು ಕೀರ್ತಿಮುಖಗಳನ್ನು ಕೆತ್ತಲಾಗಿದೆ. ಮಹಾಮಂಟಪದ ಪೂರ್ವ ಪ್ರವೇಶದ್ವಾರದ ಮುಂಭಾಗದಲ್ಲಿ ನಂತರ ಕಾಲದಲ್ಲಿ ನಿರ್ಮಿಸಿದ ಚಿಕ್ಕ ಮುಖಮಂಟಪವಿದೆ.[೭೨] ಈ ದೇವಾಲಯಕ್ಕೆ ಕಾಲಕಾಲಕ್ಕೆ ಬಂದಂತಹ ಅರಸರು ಅಪಾರ ದಾನದತ್ತಿಗಳನ್ನು ಬಿಟ್ಟು ಅದರ ಉಳುವಿಗೆ ಕಾರಣರಾಗಿದ್ದಾರೆ.[೭೩]

ಹರಿಹರೇಶ್ವರ ದೇವಾಲಯದ ವಾಸ್ತುಶಿಲ್ಪವು ಸಾಕಷ್ಟು ಪ್ರಾಮುಖ್ಯತೆಯಿಂದ ಕೂಡಿರುವುದು ಇವತ್ತಿನವರೆಗೂ ನಡೆದ ಅಧ್ಯಯನದಿಂದ ಸ್ಪಷ್ಟವಾಗುತ್ತದೆ. ಆದರೆ ಇದರ ಮೂಲ ನಿರ್ಮಾಣದ ಕುರಿತು ಹೆಚ್ಚಿನ ಚರ್ಚೆ ಮಾಡಬೇಕಾದ ಅವಶ್ಯಕತೆ ಇದೆ. ಪ್ರಾರಂಭದಲ್ಲಿ ಈ ದೇವಾಲಯದ ಮೂಲ ನಿರ್ಮಾಣ ಬಾದಾಮಿ ಚಾಲುಕ್ಯರ ಕಾಲದಲ್ಲಿ ಆಗಿರಬಹುದೆಂದು ತೋರುತ್ತದೆ. ಕಾರಣ ಇಂದು ಹರಿಹರೇಶ್ವರ ದೇವರ ನಾಮದಿಂದಲೇ ಪ್ರಸ್ತುತ ನಗರವನ್ನು (ಹರಿಹರ ಎಂದು)

ಗುರುತಿಸುವುದು ನಮಗಾಗಲೇ ಗೊತ್ತಿರುವ ವಿಚಾರ. ಬಾದಾಮಿ ಚಾಲುಕ್ಯರ ಕಾಲದ ಕ್ರಿ.ಶ.೬೯೪ರ ಶಾಸನದಲ್ಲಿಯೂ ಸಹ ಹರೀಷಪುರದ[೫೪] ಉಲ್ಲೇಖವಿದೆ. ಅಂದರೆ ಇಂದು ಇರುವಷ್ಟು ಭವ್ಯವಾದ ದೇವಾಲಯವಿಲ್ಲದಿದ್ದರು ಸ್ವಲ್ಪ ಮಟ್ಟಿಗೆ ದೇವಾಲಯವಿದ್ದಿರುವ ಸಾಧ್ಯತೆಯಿದೆ. ಇದಕ್ಕೆ ಪೂರಕವಾಗಿ ಹರಿಹರ ಪರಿಸರದ ಬೇರೆ ಬೇರೆ ಶಾಸನಗಳನ್ನು ಗಮನಿಸಿದಾಗ ದೇವಾಲಯಕ್ಕೆ ಸಂಬಂಧಿಸಿದ ಮಾಹಿತಿಗಳು ಲಭ್ಯವಾಗುತ್ತವೆ.

ಕ್ರಿ.ಶ. ೧೦೩೦ರ ಶಾಸನವೊಂದರಲ್ಲಿ "ತೆಲಿಗಿಯ ಊರೊಡೆಯನಾದ ಕಣ್ಣಿಮಯ್ಯನು ಬಿಕ್ಕೀಗನಕೆರೆಯ ಕರಿಗೌಡನಿಗೆ ಕೂಡಲೂರ ಶಂಕರನಾರಾಯಣ ದೇವರ[೫೫] ಸಮ್ಮುಖದಲ್ಲಿ ಗದ್ದೆಯನ್ನು ದಾನ ನೀಡುತ್ತಾನೆ ಎಂದಿದೆ. ಕ್ರಿ.ಶ.೧೯೮ರ ಶಾಸನದಲ್ಲಿ "ತುಂಗಭದ್ರೆಯ ಶ್ರೀಶಂಕರನಾರಾಯಣ ದೇವರ ದೇಗುಲದ ಖಣ್ಡಸ್ಫುಟಿತ ನವಕರ್ಮ್ಮಕ್ಕಂ"[೫೬] ಎಂದು ಉಲ್ಲೇಖವಿದೆ. ಕ್ರಿ.ಶ. ೧೧೦೦ರ ಶಾಸನದಲ್ಲಿ "ಶ್ರೀ ಮಾಚ್ಚಾಳುಕ್ಯ ವಿಕ್ರಮ ವರ್ಷದ ೨೫ ನೇಯ ವಿಕ್ರಮ ಸಂವತ್ಸರದ ಜೇಷ್ಠದಮಾವಾಸೆ ಸೋಮವಾರ ಸೂರ್ಯಗ್ರಹಣ ನಿಮಿತ್ತಮಾಗಿ ಕಡಲೂರ ಸಂಕರನಾರಾಯಣ ದೇವರ ತೀರ್ಥದಲು........ಕೆ...ಗೌಡಿಕೆಸ್ಥಾನಂ ಮು.... ಧಾರಾಪೂರ್ವಕಂ ಮಾಡಿ ಸರ್ವನಮಸ್ಯವಾಗಿಬಿಟ್ಟರು".[೫೭] ಎಂದಿದೆ ಹಾಗೆಯೇ ಕ್ರಿ.ಶ. ೧೧೫೨ರ ಶಾಸನದಲ್ಲಿ "ನೂರುಂಬಾಡಸಾಮದ....... ಸುಂಕವೆಗ್ಗಡೆವರಸರು ಮಂನೆಯದ ಸುಂಕವೆರ್ಗ್ಗಡೆ ಬಂಮದೇವಮಂ ಮಹಾನಾಡು ನಾನಾದೇಸಿಗಳು ಮಿರ್ದ್ದ ಶ್ರೀಮತು ಹರಿಹರ ದೇವರುತ್ತರದ ಗೊಟ್ಟಗಡಿಯ ನಾಗಗಾವುಂಡನ ಬಸದಿಗೆ[೫೮] ಎಂದು ಉಲ್ಲೇಖವಿದೆ.

ಈ ಶಾಸನಗಳಲ್ಲಿನ ಉಲ್ಲೇಖಗಳು ದೇವಾಲಯವಿದ್ದುದರ ಕುರಿತು ಮಾಹಿತಿ ನೀಡುತ್ತವೆ. ಚಾಲುಕ್ಯರು. ಕಲಚೂರಿಗಳು, ಹೊಯ್ಸಳರು, ಯಾದವರು ಈ ದೇವಾಲಯ ಉನ್ನತಿಗಾಗಿ ಹಲವಾರು ದಾನಗಳನ್ನು ನೀಡಿ ಸಾಕಷ್ಟು ಜಿರ್ಣೋದ್ಧಾರಗೊಳಿಸಿದ್ದಾರೆ.

ಸಂಖ್ಯೆ : **೯**

ಹೆಸರು : **ಸಂಗಮೇಶ್ವರ**

ಗ್ರಾಮ : **ಹರಿಹರ (ಕೂಡಲೂರು)**[೫೯]

ತಾಲೂಕು : **ಹರಿಹರ**

ಕಾಲಮಾನ : **ಕ್ರಿ.ಶ ೧೧-೧೨ನೇ ಶತಮಾನದ ಊಹೆ.**

ಪ್ರಸ್ತುತ ದೇವಾಲಯವು ಹರಿಹರದಲ್ಲಿ ತುಂಗಭದ್ರೆಗೆ ಹರಿದ್ರಾ ನದಿ ಸಂಗಮಗೊಳ್ಳವ ದಡದಲ್ಲಿದೆ. ಭೂಗತವಾಗಿರುವ ದೇವಾಲಯಕ್ಕೆ ಸುತ್ತಲೂ ಚಿಕ್ಕದಾದ ಪ್ರಕಾರ ಕಟ್ಟೆ, ದೇವಾಲಯಕ್ಕೆ ಇಳಿಯಲು ಮೆಟ್ಟಿಲುಗಳನ್ನು ಮಾಡಿಸಿದ್ದಾರೆ. ದೇವಾಲಯ ಚೌಕಕಾರದ ಗರ್ಭಗೃಹವನ್ನು ಮಾತ್ರ ಹೊಂದಿದ್ದು. ಪೂರ್ವಾಭಿಮುಖವಾಗಿದೆ ಗರ್ಭಗುಡಿಯಲ್ಲಿ ಶಿವಲಿಂಗವಿದೆ. ಎದುರಿಗೆ ನಂದಿ ವಿಗ್ರಹವಿದ್ದು ದೇವಾಲಯದ ಶಿಖರವಿಭಾಗ ಪಿರಮಿಡ್ (ತ್ರಿಭುಜ) ಆಕಾರವಾಗಿದೆ.[೬೦] ಕ್ರಿ.ಶ.

೧೧೪೪ರ ಹರಿಹರದ[೪೧] ಶಾಸನದಲ್ಲಿ ಉಲ್ಲೇಖವಾದ ಶ್ರೀಯೋಗೇಶ್ವರ ದೇವಾಲಯ ಬಹುಶಃ ಇದೇ ಇರಬಹುದು.

ಸಂಖ್ಯೆ : ೧೦

ಹೆಸರು : ಲಕ್ಷ್ಮೀ ದೇವಾಲಯ

ಗ್ರಾಮ : ಹರಿಹರ

ತಾಲೂಕು : ಹರಿಹರ

ಕಾಲಮಾನ : ಕ್ರಿ.ಶ.೧೨೭೭[೪೨].

ಈ ದೇವಾಲಯವು ಗರ್ಭಗೃಹ ಮತ್ತು ತೆರೆದ ಮುಖಮಂಟಪವನ್ನು ಹೊಂದಿದೆ ಅಧಿಷ್ಠಾನವು ಉಪಾನ, ಪದ್ಮ, ಕರ್ಣಿಕಾ, ಕಪೋತ ಭಾಗಗಳಿಂದ ಕೂಡಿದ್ದು ಸರಳವಾಗಿದೆ ಅಧಿಷ್ಠಾನದ ಮೇಲಿನ ಪ್ರತಿ ಭಾಗದಲ್ಲಿ ಯಾವುದೇ ಅಲಂಕರಣವಿರದೆ ಪ್ರಸ್ತರದಲ್ಲಿನ ಕಪೋತ ಭಾಗವು ಗರ್ಭಗೃಹದ ಸುತ್ತಲೂ ಸ್ವಲ್ಪ ಕೆಳಬಾಗಿದ ರೀತಿಯಲ್ಲಿದೆ. ಮುಖ ಮಂಟಪದ ಸುತ್ತಲೂ, ಅದು ಹೆಚ್ಚು ಹೊರಬಾಗಿದ್ದು. ಅಂಗ್ಲ ವರ್ಣಮಾಲೆಯ ಎಸ್. ಆಕಾರದಲ್ಲಿದೆ[೪೩] ಪಕ್ಕದಲ್ಲಿರುವ ಹರಿಹರೇಶ್ವರ ದೇವಾಲಯದ ಮುಖಮಂಟಪದ ಸುತ್ತಲೂ ಕೂಡ ಇದೇ ಆಕಾರದಲ್ಲಿದೆ. ಕಪೋತದ ಮೇಲೆ ಕೂಟ ಹಾಗೂ ಪಂಜರಗಳು ಇದ್ದರೂ ಸಹ ಅವು ಅಲಂಕಾರಯುಕ್ತವಾಗಿರದೆ ಸರಳವಾಗಿದೆ. ಗರ್ಭಗೃಹದ ಮೇಲೆ ನಂತರದ ಕಾಲದಲ್ಲಿ ನಿರ್ಮಿಸಿದ ಶಿಖರವಿದೆ. ಮುಖಮಂಟಪದಲ್ಲಿ ಕಕ್ಷಾಸನವಿದೆ. ಇದರ ಹೊರಭಾಗದ ಮಧ್ಯ ಪಟ್ಟಿಕೆಯಲ್ಲಿ ಚಿಕ್ಕ ಒಂಟಿ ಕಂಬಗಳನ್ನು ಬಿಡಿಸಿ. ಅದರ ಮೇಲೆ ಶಿಖರದ ವಿವಿಧ ಮಾದರಿಗಳನ್ನು ಕೆತ್ತಲಾಗಿದೆ. ಹಾಗೆ ಮೇಲಿನ ಪಟ್ಟಿಕೆಯಲ್ಲಿ ಜೋಡಿ ಕಂಬಗಳನ್ನು ಹಾಗೂ ಪುಷ್ಪಗಳನ್ನು ಅಲಂಕಾರಯುತವಾಗಿ ಬಿಡಸಲಾಗಿದೆ.

ಗರ್ಭಗೃಹವು ಚೌಕಾಕಾರವಾಗಿದ್ದು. ಅದರಲ್ಲಿ ಲಕ್ಷ್ಮೀ ವಿಗ್ರಹಕ್ಕೆ ಬದಲಾಗಿ ನಂತರ ಕಾಲದಲ್ಲಿ ಪ್ರತಿಷ್ಠಾಪಿಸಿದ ಮಹಿಷಮರ್ದಿನಿ ಶಿಲ್ಪ ಇದೆ. ಕ್ರಿಶ. ೧೨೭೭ರ ಶಾಸನದಲ್ಲಿ ಲಕ್ಷ್ಮೀ ನಾರಾಯಣ ದೇಗುಲ[೪೪] ಕಟ್ಟಿಸಿದ ಉಲ್ಲೇಖವಿದೆ. ಮಹಿಷಮರ್ದಿನಿ ಮೂರ್ತಿಯನ್ನು ಪೇಷ್ವೆಗಳ ಕಾಲದಲ್ಲಿ ಸುಬೇದಾರ್ ಲಕ್ಷ್ಮಣಹರಿ ಎಂಬಾತ ಪ್ರತಿಷ್ಠಾಪಿಸಿದನೆಂದು ಸ್ಥಳೀಯರು ಹೇಳುತ್ತಾರೆ.[೪೫] ಗರ್ಭಗೃಹದ ವಿತಾನದಲ್ಲಿ ಪದ್ಮವಿದೆ ದ್ವಾರವು ಸ್ತಂಭಶಾಖೆಯಿಂದ ಕೂಡಿದೆ. ಸ್ತಂಭಶಾಖೆಯ ಎರಡು ಬದಿಗೂ ಜಾಲಂಧ್ರಗಳಿವೆ. ಮುಖಮಂಟಪಕ್ಕೆ ತಾಗಿದಂತೆ ಗರ್ಭಗೃಹದ ದ್ವಾರದ ಎರಡೂ ಬದಿಗೂ ಇತ್ತೀಚಿಗೆ ನಿರ್ಮಿಸಿದ ಕಾರ್ತಿಕೇಯ ಹಾಗೂ ಗಣಪತಿಯ ಚಿಕ್ಕ ಗುಡಿಗಳಿವೆ.[೪೬]

ಮುಖಮಂಟಪಕ್ಕೆ ಪೂರ್ವ, ಉತ್ತರ ದಕ್ಷಿಣಗಳಲ್ಲಿ ಪ್ರವೇಶದ್ವಾರಗಳಿದ್ದು ಆ ದ್ವಾರಗಳನ್ನು ಘಂಟೆ ಹೊಡೆದು ಪ್ರವೇಶಿಸಲು ಸೋಪಾನಗಳಿವೆ. ಮುಖಮಂಟಪವು ಇಪ್ಪತ್ತು, ಬಳಪದ ಕಲ್ಲಿನ ಕಂಬಗಳಿಂದ ಕೂಡಿದೆ ಈ ಕಂಬಗಳು ಚೌಕ ಹಾಗೂ ವೃತ್ತಾಕಾರವಾಗಿದ್ದು ವೃತ್ತಕಾರದ ಭಾಗದಲ್ಲಿ ಘಂಟೆ ಹಾಗೂ ಬಳೆಗಳ ಅಲಂಕಾರವಿದೆ. ಮೇಲ್ಭಾಗದಲ್ಲಿ ಮಾಲಾಲಂಕಾರವಿದೆ. ಈ ಕಂಬಗಳ

ಮೇಲಿನ ಬೋಧಿಗೆಗಳು ಪುಷ್ಪ ಹಾಗೂ ಪುಷ್ಪದಳಗಳಿಂದ ಅಲಂಕೃತವಾಗಿದ್ದು ಇವುಗಳನ್ನು ತಿರುಗಣೆ ಯಂತ್ರದಿಂದ ತಯಾರಿಸಲಾಗಿದೆ. ಮಧ್ಯದ ನಾಲ್ಕು ಕಂಬಗಳ ಮೇಲಿನ ವಿತಾನದಲ್ಲಿ ಅರಳಿದ ಕಮಲದಳಗಳಿಂದ ಇಳಿಬಿದ್ದ ಕಮಲದ ಮೊಗ್ಗು ಇದೆ. ಮುಖ ಮಂಟಪದ ಒಳಭಾಗದ ಸುತ್ತಲೂ ಕಕ್ಷಾಸನಗಳಿವೆ ಮಧ್ಯದ ನಾಲ್ಕು ಕಂಬಗಳನ್ನು ಬಿಟ್ಟು ಉಳಿದ ಕಂಬಗಳು ಈ ಕಕ್ಷಾಸನದ ಮೇಲೆ ಇವೆ. ಮೆಲ್ಭಾಗದ ಕಪೋತದಲ್ಲಿನ ಒಳಭಾಗದಲ್ಲಿ ಸುತ್ತಲೂ ಲತಾ ಪುಷ್ಪಗಳ ಅಲಂಕರಣೆ ಮಾಡಲಾಗಿದೆ. ಮಂಟಪಕ್ಕೆ ಪ್ರವೇಶಿಸಲು ಉತ್ತರ ದಕ್ಷಿಣ ಹಾಗೂ ಪೂರ್ವದಲ್ಲಿ ಪ್ರವೇಶದ್ವಾರಗಳಿವೆ. ಇಡೀ ದೇವಾಲಯವನ್ನು ಬಳಪದ ಶಿಲೆಯಿಂದ ನಿರ್ಮಿಸಿದ್ದಾರೆ.

ಸಂಖ್ಯೆ : ೧೧

ಹೆಸರು : ಈಶ್ವರ ದೇವಾಲಯ

ಗ್ರಾಮ : ಕೊಕ್ಕನೂರು

ತಾಲೂಕು : ಹರಿಹರ

ಕಾಲಮಾನ : ಕಲ್ಯಾಣ ಚಾಲುಕ್ಯರ ಆರಂಭಕಾಲ[೮೭]

ಈ ದೇವಾಲಯವು ೨ ಗರ್ಭಗೃಹ, ಅಂತರಾಳ, ಸಭಾಮಂಟಪ ಹಾಗೂ ಪ್ರಕಾರ ಗೋಡೆಯನ್ನು ಹೊಂದಿದ್ದು ಇದೊಂದು ದ್ವಿಕೂಟಾಚಲ ದೇವಾಲಯವಾಗಿದೆ. ಮುಖ್ಯ ಗರ್ಭಗೃಹ ಪೂರ್ವಕ್ಕೆ ಮುಖ ಮಾಡಿದ್ದು. ಚೌಕಕಾರವಾಗಿದೆ. ವಿತಾನದಲ್ಲಿ ಅರಳಿದ ಕಮಲವಿದೆ. ಗರ್ಭಗೃಹದಲ್ಲಿ ಪಾಣಿಪೀಠದ ಮೇಲೆ ಶಿವಲಿಂಗವಿದೆ ಲಿಂಗದ ಮೇಲೆ ಬ್ರಹ್ಮ ಸೂತ್ರದ ಗೆರೆಗಳನ್ನು ಗಮನಿಸಬಹುದು. ಲಿಂಗವು ಆರಂಭದ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾಗಿದೆ.[೮೮] ಗರ್ಭಗೃಹದ ದ್ವಾರ ಸರಳವಾದ ಅಲಂಕರಣದಿಂದ ಕೂಡಿದೆ ಈ ಗರ್ಭಗೃಹದ ಎದುರಿಗೆ ಮತ್ತೊಂದು ಗರ್ಭಗೃಹವಿದೆ. ಇಲ್ಲಿ ಸೂರ್ಯನ ವಿಗ್ರಹವಿದೆ ಇಲ್ಲಿ ಸೂರ್ಯನ ವಿಗ್ರಹವಿದ್ದು ಇದರ ಪಕ್ಕದಲ್ಲಿ ಸ್ತ್ರೀ ವಿಗ್ರಹ, ಕಾರ್ತಿಕೇಯನ ಶಿಲ್ಪಗಳನ್ನು ಕೆತ್ತಲಾಗಿದೆ. ಸೂರ್ಯನ ಪೀಠದ ಕೆಳಗೆ ಹಾಗೂ ದ್ವಾರದ ಲಲಾಟದಲ್ಲಿ ಗಜಲಕ್ಷ್ಮೀ ಶಿಲ್ಪವನ್ನು ಕಾಣಬಹುದು. ಈ ಗರ್ಭಗೃಹದಲ್ಲಿ ವಿತಾನ ಸರಳವಾಗಿದೆ.

ಮೂಲ ಗರ್ಭಗೃಹದ ಮುಂದೆ ಅಂತರಾಳವಿದ್ದು. ಇದರಲ್ಲಿನ ವಿತಾನವು ಸರಳವಾದ ಅಲಂಕಾರವನ್ನು ಹೊಂದಿದೆ. ಅಂತರಾಳದಲ್ಲಿ ಅಗಲದ ಪೀಠದ ಮೇಲೆ ಎರಡು ಜೋಡಿ ನಂದಿಗಳನ್ನು ಇರಿಸಲಾಗಿದೆ. ಅಂತರಾಳದ ದ್ವಾರಗಳು ಸರಳವಾಗಿದ್ದು. ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಅಂತರಾಳದ ಮುಂದಿರುವ ಸಭಾಮಂಟಪದ ಮಧ್ಯದಲ್ಲಿ ನಾಲ್ಕು ಕಂಬಗಳು ಇವೆ. ಸಭಾ ಮಂಟಪದ ವಿತಾನದಲ್ಲಿ ಅರಳಿದ ಕಮಲವಿದೆ ಕಂಬದ ಕೆಳಭಾಗ ಚೌಕಕಾರವಾಗಿದ್ದು. ನಡುವೆ ಅಷ್ಟಕಾರದಿಂದ ಕೂಡಿ ಮೇಲ್ಭಾಗದಲ್ಲಿ ಬೋದಿಗೆಗಳು ಇವೆ. ಈ ಸಭಾ ಮಂಟಪಕ್ಕೆ ದಕ್ಷಿಣಾಭಿಮುಖವಾಗಿ ದ್ವಾರವಿದೆ. ದೇವಾಲಯವು ಪ್ರಕಾರ ಗೋಡೆಯನ್ನು ಹೊಂದಿದೆ. ದೇವಾಲಯದಲ್ಲಿ

ಗಣಪತಿ, ನಾಗರ ಶಿಲ್ಪಗಳು, ಮಹಾಕಾಳಿ, ಪ್ರಕಾರ ಗೋಡೆಯ ಹೊರಗಡೆ ಬಲಭಾಗಕ್ಕೆ ಕೋಣನತಲೆ ಮುಂತಾದ ಶಿಲ್ಪಗಳು[೮೯] ಕಂಡು ಬರುತ್ತವೆ. ಈ ದೇವಾಲಯವು ಆರಂಭದ ಕಲ್ಯಾಣ ಚಾಲುಕ್ಯರ ಕಾಲದ ಲಕ್ಷಣವನ್ನು ಹೊಂದಿವೆ.[೯೦]

ಮೇಲಿನ ದೇವಾಲಯಗಳ ಜೊತೆಗೆ ಮಠಗಳು ಇರುತ್ತಿದ್ದವು ಮತ್ತು ಮಠಗಳು ಪ್ರಮುಖ ವಿದ್ಯಾಕೇಂದ್ರಗಳಾಗಿದ್ದು, ಮಠಗಳಲ್ಲಿ ಸದಾ ಇರುತ್ತಿದ್ದ ತಪೋಧನರು, ಬಂದು ಹೋಗುತ್ತಿದ್ದ ಅತಿಥಿ ಅಭ್ಯಾಗತರು, ವಿದ್ಯಾರ್ಥಿಗಳು, ಉಪಾದ್ಯಾಯರು ಇವರುಗಳ ಆಹಾರಕ್ಕೆ ಸಮರ್ಕವಾದ ಏರ್ಪಾಡುಗಳನ್ನು ಮಾಡವುದು ಅವಶ್ಯವಾಗಿತ್ತು. ಮಠಗಳಿಗೆ ಅನ್ನದಾನ ಮತ್ತು ವಿದ್ಯಾದಾನಗಳಿಗೆ ನೀಡಿದ ದಾನಗಳನ್ನು ಆಯಾ ಮಠಗಳ ಆಚಾರ್ಯರೇ ಸ್ವೀಕರಿಸುತ್ತಿದ್ದರು. ಕಲ್ಯಾಣ ಚಾಲುಕ್ಯ ಹಾಗೂ ಹೊಯ್ಸಳರ ಕಾಲದಲ್ಲಿ ದೇವಾಲಯಗಳ ಭಾಗಗಳಾಗಿ ಮಠಗಳು ಬೆಳವಣಿಗೆ ಹೊಂದಿದವು. ಲಾಕುಳ ಶೈವಸಿದ್ಧಾಂತದ ಹಿನ್ನೆಲೆಯಲ್ಲಿ ನೇಮಕಗೊಂಡ ಸ್ಥಾನಪತಿಗಳು ಸಾಮಾನ್ಯವಾಗಿ ಪಂಡಿತರೇ ಆಗಿರುತ್ತಿದ್ದರು. ಇವರು ದೇವಾಲಯ ಪ್ರಧಾನ ಆರ್ಚಕರಾಗಿ, ಆಡಳಿತಗಾರರಾಗಿ, ಮಠದ ಮುಖ್ಯಸ್ಥರಾಗಿ ಹಾಗೂ ಬಾಲವಟುಗಳಿಗೆ ವಿದ್ಯಾರ್ಜನೆ ನೀಡುವ ಗುರುಗಳಾಗಿ ಕೂಡ ಕಾರ್ಯನಿರ್ವಹಿಸುತ್ತಿದ್ದರು. ಹರಿಹರ[೯೧] ಶಾಸನವೊಂದರಲ್ಲಿ ಸ್ಪಷ್ಟವಾಗಿ ವಿದ್ಯಾಲಯದ ವಿವರಣೆಯನ್ನು ನೀಡುತ್ತದೆ. 'ಅಕ್ಷರ ಶಿಕ್ಷ', ವ್ಯಾಕರಣ, ಮೀಮಾಂಸ, ವೇದಾಂತ, ವ್ಯಾಖ್ಯಾನ, ಋಗ್ವೇದ, ಯಜುರ್ವೇದ ಅಧ್ಯಾಪನಾರ್ಥವಾಗಿ ದಾನ ನೀಡಿದ ಉಲ್ಲೇಖವಿದೆ.

ಮೇಲೆ ಹೆಸರಿಸಿದ ಅಧ್ಯಾಪನಗಳು ಹರಿಹರದಲ್ಲಿ ನಡೆಯುತ್ತಿದ್ದವು ಎಂದು ಹಾಗೂ ತಪೋಧನರು, ನೈಮಿಷ್ಠಿಕರು ಪರಿವ್ರಾಜಕರು ಸ್ಪಷ್ಟವಾಗಿ ಕಾಳಮುಖ ಗುರುಗಳನ್ನು ಶಾಸನ ಸ್ಪಷ್ಟ ಪಡಿಸುತ್ತದೆ. ದೇವರಬೆಳಕೆರೆಯ ಕ್ರಿ.ಶ. ೧೦೫೪ರ ಶಾಸನದಲ್ಲಿ[೯೨] ಧನ್ವಂತರಿ ಪಂಡಿತ ಎಂಬ ಉಲ್ಲೇಖ ಬರುತ್ತದೆ. ಧನ್ವಂತರಿ ಉಲ್ಲೇಖ ನೇರವಾಗಿ ಆಯುರ್ವೇದ ವಿದ್ಯೆಗೆ ಮತ್ತು ವೈದ್ಯ ಶಾಸ್ತ್ರಕ್ಕೆ ಸೇರಿರುವುದರಿಂದ ಆ ಕಾಲದಲ್ಲಿ ಅದರ ವಿದ್ಯೆ ಹಾಗೂ ಪಾಠ ಪ್ರವಚನಗಳನ್ನೂ ಕೂಡ ದೇವಾಲಯದ ಸ್ಥಾನಪತಿಗಳೇ ಮಾಡುತ್ತಿದ್ದಂತೆ ತೋರುತ್ತದೆ. ಶಾಸನದಲ್ಲಿ ಉಲ್ಲೇಖಿಸಿದಂತೆ ಕಲಿಯುಗದ ಧನ್ವಂತರಿ ವಿಜಯಪಂಡಿತರು ಎಂದು ಅವರ ನವೇಶನ ನೀಡಿದನೆಂದು ಹೇಳುತ್ತದೆ. ವಿಜಯ ಪಂಡಿತನೇ ಇಲ್ಲಿ ವೈದ್ಯನೆಂದು ಹೆಸರನ್ನು ಉಲ್ಲೇಖಿಸಲಾಗಿದೆ. ವಿಜಯ ಪಂಡಿತ ಎಂಬ ವೈದ್ಯರು ಸೋಮರಾಶಿ ಗುರುಗಳಿಗೆ ನಿವೇಶನ ನೀಡಿದನೆಂದು ಹೇಳುತ್ತದೆ ವಿಜಯ ಪಂಡಿತನೇ ಇಲ್ಲಿ ವೈದ್ಯನೆಂದು ಸ್ಪಷ್ಟವಾಗಿ ಹೇಳಬಹುದು. ಅಂದು ಪ್ರಚಲಿತದಲ್ಲಿದ್ದ ವಿದ್ಯೆಗಳಲ್ಲಿ ಧನ್ವಂತರಿ ವಿದ್ಯೆಯೂ ಕೂಡ ಪಾಠ ಪ್ರವಚನಗಳ ಮೂಲಕ ಪ್ರಚುರಗೊಳ್ಳುತ್ತಿದ್ದವು ಎಂದು ಹೇಳಬಹುದು.

ಈ ರೀತಿಯ ಪಾಠ ಪ್ರವಚನಗಳನ್ನು ಹರಿಹರ ಪರಿಸರದ ಪ್ರಾಚೀನ ದೇವಾಲಯ ಮತ್ತು ಮಠಗಳಷ್ಟೆ ಅಲ್ಲದೆ ಅಗ್ರಹಾರಗಳೂ ವಿದ್ಯಾ ಪ್ರಸಾರಕ್ಕೆಂದೇ ರೂಪಗೊಂಡು ಕಾರ್ಯ ನಿರ್ವಹಿಸುತ್ತಿದ್ದವು ಹಾಗೆಯೇ ದೇವಾಲಯಗಳು ಸಾಮಾಜಿಕ, ಧಾರ್ಮಿಕ, ಹಾಗೂ ಆರ್ಥಿಕ ಕೇಂದ್ರಗಳಾಗಿ ಜನಸಾಮಾನ್ಯರ ಬದುಕಿನಲ್ಲಿ ವಿಶೇಷ ಮಹತ್ವ ಪಡೆದಿದ್ದುವು.

ಕ್ರಿ.ಶ. ೧೨೨೪ರಲ್ಲಿ ಹೊಯ್ಸಳರ ೨ನೇ ವೀರನರಸಿಂಹನ ಮಂತ್ರಿ ಪೋಲಾಳ್ವನು ಹರಿಹರೇಶ್ವರ ದೇವಾಲಯವನ್ನು ಕಟ್ಟಿಸಿದನೆಂಬ ಉಲ್ಲೇಖವಿದೆ. ಆದರೆ ದೇವರನ್ನ ಪ್ರತಿಷ್ಠಾಪಿಸಲಿಲ್ಲ ಸ್ಕಂದಪುರಾಣದ ಕಾಶಿಖಂಡದಲ್ಲಿ ಬರುವ ಹರಿಹರ ಮಹಾತ್ಮೆಯಲ್ಲಿ ಹರಿಹರೇಶ್ವರನನ್ನು ಬ್ರಹ್ಮಪ್ರತಿಷ್ಠೆಯೆಂದು ಹೇಳಿದ್ದರೂ ಶಾಸನಗಳಲ್ಲಿ ದೇವರನ್ನು ಸ್ವಯಂಭೂ ಶಂಕರನಾರಾಯಣ, ಪ್ರಸನ್ನ ಶಂಕರನಾರಾಯಣ, ಹರಿಶಂಕರ, ಚೆಲ್ವವೆತ್ತಾ ಹರಿಹರ ಪರಮರ್ ಎಂದು ಬಗೆಬಗೆಯಾಗಿ ವರ್ಣಿಸಿರುವ ವಿಷಯವನ್ನು ತಿಳಿಸುತ್ತದೆ. ಇಷ್ಟು ಜನಪ್ರಿಯವಾದ ದೇವರಿಗೆ ಅಥವಾ ಮೂರ್ತಿಗೆ ಒಂದು ದೇವಾಲಯವಿರಲಿಲ್ಲವೆಂದು ತೋರುತ್ತದೆ. ಇದ್ದರೂ ಅದು ಚಿಕ್ಕದ್ದಾಗಿರಬೇಕು. ರಾಣೆಬೆನ್ನೂರು ತಾಲೂಕಿನ ಮುದೆನೂರು (ಕ್ರಿ.ಶ.೧೮೯೮), ನದಿಹರಳಹಳ್ಳಿ (ಕ್ರಿ.ಶ.೧೧೭೨), ಹಾಗೂ ಹರಪನಹಳ್ಳಿ ತಾಲೂಕಿನ ತೆಲಗಿ (ಕ್ರಿ.ಶ.೧೦೩೬), ಉಚ್ಚಂಗಿದುರ್ಗ (ಕ್ರಿ.ಶ.೧೧೦೦), ದ ಶಾಸನಗಳು 'ಹರಿಹರದ ಸಂಕರನಾರಾಯಣ' (ಹರಿಹರೇಶ್ವರ), 'ಹರಿಹರದೇವಾಲಯದುತ್ತರಕ್ಕೇ' ಎಂದು ಉಲ್ಲೇಖಿಸುತ್ತವೆ ಹಾಗಾಗಿ ಹರಿಹರೇಶ್ವರ ದೇವರಿಗೆ ಚಿಕ್ಕದಾದ ಒಂದು ದೇವಾಲಯವಿತ್ತು ಎಂಬ ನಿರ್ಧಾರಕ್ಕೆ ಬರಬಹುದು ಆದರೆ ಪೋಲಾಳ್ವನ ಶಾಸನ ಸ್ವತಃ ದೇವಾಲಯ ನಿರ್ಮಾಣ ಮಾಡಿದ ಬಗ್ಗೆ ತಿಳಿಸುತ್ತದೆ.

ಹರಿಹರ ದೇವರಿಗೆ ಅಂಗಭೋಗ, ರಂಗಭೋಗಕ್ಕೆ ರಾಜರು, ದಂಡನಾಯಕರು, ಸ್ಥಳೀಯರು ದಾನ ದತ್ತಿಗಳನ್ನ ಬಿಟ್ಟ ಬಗ್ಗೆ ಶಾಸನಾಧಾರಗಳಿವೆ. ಪೆರ್ಮಾಡಿರಾಯ ಎಂಬ ರಾಜನು ದೇವಾಲಯವನ್ನು ಕಟ್ಟಿಸಲು ಮುಂದಾದಾಗ ಹರಿಹರ ಈ ರಾಜನ ಸ್ವಪ್ನದಲ್ಲಿ ಬಂದು ಮುಂದೆ ಒಬ್ಬ ಭಕ್ತ ಹುಟ್ಟಿ ನನಗಾಗಿ ದೇವಾಲಯವನ್ನು ಕಟ್ಟಿಸುತ್ತಾನೆ. ಈಗ ನೀನು ಈ ಪ್ರಯತ್ನವನ್ನು ನಿಲ್ಲಿಸು ಎಂದು ಆಜ್ಞೆ ಮಾಡುತ್ತಾನೆ. ನಂತರ ಸುಂದರವಾದ ದೇವಾಲಯವನ್ನು ನನಗಾಗಿ ಕಟ್ಟಿಸು ಎಂದು ಪೋಲಾಳ್ವನಿಗೆ ಅಪ್ಪಣೆ ಮಾಡಿದಾಗ ಬಹುಶಃ ಪೋಲಾಳ್ವನು ಆಗೀನ ಕಾಲಕ್ಕೆ ಇದ್ದಂತಹ ಚಿಕ್ಕದಾದ ದೇವಾಲಯವನ್ನು ಕೆಡವಿಸಿ ಹರಿಹರ ದೇವರಿಗೆ ಬೃಹತ್ ದೇವಾಲಯವನ್ನ ನಿರ್ಮಿಸಿದ್ದಾನೆ. ಇಲ್ಲಿಗೆ ಪೋಲಾಳ್ವನೇ ಈಗೀನ ಭವ್ಯ ದೇವಾಲಯದ ನಿರ್ಮಾತೃ ಎಂದು ಹೇಳಬಹುದು.

ಮೂರನೇಯ ನರಸಿಂಹನ ಸೇನಾಪತಿ ಗಾಯಿಗೋವಳ ಸೋಮದಂಡಾಧಿನಾಥನು ಹರಿಹರ ದೇವಾಲಯಕ್ಕೆ ಪೂರ್ವದ್ವಾರದಲ್ಲಿ ಐದು ಸುವರ್ಣ ಕಲಶ ಸಹಿತ ಐದಂತಸ್ತಿನ ಗೋಪುರ ಮಾಡಿಸಿದ್ದಾನೆ. ಇಲ್ಲಿಂದ ಈ ದೇವಾಲಯಕ್ಕೆ ಮುಂದೆ ಬಂದ ಹಲವಾರು ರಾಜರು, ಅನೇಕ ವಿಧವಾದ ದಾನದತ್ತಿಗಳನ್ನ ನೀಡಿದ್ದಾರೆ. ಆದರೆ ಹೊಯ್ಸಳ-ಯಾದವ ರಾಜ್ಯಗಳ ಆಂತರಿಕ ಕಲಹ, ದುಸ್ಥಿತಿಗಳ ಲಾಭವನ್ನು ಪಡೆದು ಉತ್ತರದ ಮಹಮ್ಮದಿಯರು ದಕ್ಷಿಣಕ್ಕೆ ನುಗ್ಗಿ ಯಾದವರನ್ನು ಸೋಲಿಸಿ, ಹೊಯ್ಸಳರ ರಾಜಧಾನಿಯಾದ ಮೇಲು ದಾಳಿಮಾಡಿ ಅನೇಕ ದೇವಾಲಯಗಳಿಗೆ ಹಾನಿಯುಂಟು ಮಾಡಲಾಗಿದೆ ಇದರಲ್ಲಿ ಹರಿಹರ ದೇವಾಲಯವೂ ಸೇರಿದೆ. ದೇವಾಲಯವು ಹೊಯ್ಸಳರ ಕಾಲದ ವೈಭವವನ್ನ ಕಳೆದುಕೊಂಡು ದೇವಾಲಯಕ್ಕೆ ನೇರವಾಗಿ ಯಾವುದೇ ಆರ್ಥಿಕ

ಸಂಪನ್ಮೂಲವಿಲ್ಲದೆ ಹೋಯಿತು ಆದರೂ ವಿಜಯನಗರ ಕಾಲದಲ್ಲಿ ದೇವಾಲಯದ ಸುತ್ತಲೂ ದೇವಾಲಯ ನಿರ್ಮಾಣ ಕಾರ್ಯ ಹಾಗೂ ದೀಪಸ್ತಂಭಗಳ ನಿರ್ಮಾಣವಾಗುತ್ತವೆ.

ವಿಜಯನಗರದ ಒಂದು ಶಾಸನ (ಕ್ರಿ.ಶ.೧೩೭೯) ಮೂವತ್ತಾರು ವೃತ್ತಿಗಳನ್ನ ದಾನ ಮಾಡಿದ ವಿವರವಿದೆ. ಅದರಲ್ಲಿ ೧೨ ವೃತ್ತಿಯನ್ನ ಶ್ರೀಹರಿಹರ ದೇವರಿಗೆ ದಾನ ನೀಡಿದ ಬಗ್ಗೆ ಹೆಸರಿಸಿದೆ. ಕ್ರಿ.ಶ. ೧೩೮೨ರ ಶಾಸನದಲ್ಲಿ ಹರಿಹರದ ಸೀಮೆಯಲ್ಲಿದ್ದ ಶಾಂಕರಿಪುರವೆಂಬ ಗ್ರಾಮವನ್ನು ಶ್ರೀಹರಿಹರ ದೇವಾಲಯದಲ್ಲಿ ಪ್ರತಿ ನಿತ್ಯವೂ ವೇದಶಾಸ್ತ್ರ ಪಾರಾಯಣವಾಗಬೇಕೆಂಬ ಉದ್ದೇಶದಿಂದ ಗ್ರಾಮದಲ್ಲಿದ್ದ ೬೦ ವೃತ್ತಿಗಳಲ್ಲಿ ೨ ವೃತ್ತಿಗಳನ್ನ ದಾನ ನೀಡಿದ್ದಾರೆ. ಕ್ರಿ.ಶ. ೧೪೭೯ರ ಶಾಸನದಲ್ಲಿ ಹರಿಹರ ದೇವಾಲಯಕ್ಕೆ ರಾಮಚಂದ್ರ ಬಾದಾಮಿ ಪ್ರಭುವರ್ಮನ ಹೆಂಡತಿ ಸೌಭಾಗ್ಯವತಿ ತುಳಜಾಬಾಯಿ ಧರ್ಮ ಮಾರ್ಗದ ಗಂಡನಿಗೆ ಒಳ್ಳೆಯದಾಗಲಿ ಎಂಬ ಉದ್ದೇಶಕ್ಕೆ ಕಲ್ಲಿನ ಬೃಹದಾಕಾರದ ದೀಪಸ್ತಂಭಗಳನ್ನು ಮಾಡಿಸಿದ ವಿಷಯವನ್ನು ತಿಳಿಸುತ್ತದೆ. ಕ್ರಿ.ಶ. ೧೫೩೪ರ ಶಾಸನದಲ್ಲಿ ಅವಸರದ ಚಂದ್ರಶೇಖರಯ್ಯನು ತನ್ನ ಮಾವ ಅವಸರದ ದೇಮರಸಯ್ಯನ ಹೆಸರಿನಲ್ಲಿ ಹರಿಹರ ದೇವಾಲಯದ ಉತ್ತರಭಾಗದಲ್ಲಿ ದೇವಾಲಯವೊಂದನ್ನು ಕಟ್ಟಿಸಿ ದೇಮೇಶ್ವರ ದೇವರನ್ನು ಪ್ರತಿಷ್ಠೆ ಮಾಡಿದುದನ್ನು ಈ ಶಾಸನ ತಿಳಿಸುತ್ತದೆ.

ವಿಜಯನಗರ ಕಾಲದಲ್ಲಿ ವೈಭವವನ್ನು ಕ್ರಮಕ್ರಮವಾಗಿ ಹೊಂದುವ ಸ್ಥಿತಿಯನ್ನು ಮುಟ್ಟುತ್ತಿತ್ತು. ಹರಿಹರದಲ್ಲಿ ವೇದಶಾಸ್ತ್ರಪಾರಂಗತರಾದ ಬ್ರಾಹ್ಮಣರಿದ್ದು, ದೇವಾಲಯದಲ್ಲಿ ಸ್ವಾಮಿಯ ಯಾವ ಕೈಂಕರ್ಯಕ್ಕೂ ಲೋಪಬಂದಿರಲಿಲ್ಲ ಇದನ್ನು ಸಮರ್ಥಿಸುವ ಒಂದೆರಡು ಕಾರಣಗಳನ್ನು ಇಲ್ಲಿ ನಿರೂಪಿಸಬಹುದು ವಿಜಯನಗರದ ಅರಸರಿಗೂ ಮಹಮ್ಮದೀಯರಿಗೂ ಕಾಳಗಗಳಾಗುತ್ತಿದ್ದುದು ಕೃಷ್ಣಾ ನದಿಯ ಪ್ರದೇಶದಲ್ಲಿ ತುಂಗಭದ್ರೆಯ ದಕ್ಷಿಣದಲ್ಲಿದ್ದ ಹರಿಹರದ ನೆಮ್ಮದಿಗೆ ಭಂಗ ಬರುತ್ತಿದ್ದ ಪ್ರಮೇಯ ಇರುತ್ತಿರಲಿಲ್ಲ ಹಾಗೆಯೇ ವಿಜಯನಗರ ಅರಸರ ಹರಿಹರ ಪರಿಸರದ ಸ್ಥಳೀಯ ಅಧಿಕಾರಿಗಳು ಅಕ್ಕಸಾಲೆಯ ಕೆಲಸ ಮಾಡುತ್ತಿದ್ದವರಿಗೂ, ಶಾಸನ ತಿದ್ದಿದವರಿಗೂ ಭೂಮಿಯನ್ನ (ಅವಸರದ ದೀಕ್ಷಿತರು ಶ್ರೀಹರಿಹರ ದೇವಾಲಯಕ್ಕೆ ಸಂಬಂಧಿಸಿದಂತೆ ಅಕ್ಕಸಾಲೆಯ ಕೆಲಸ ಮಾಡುತ್ತಿದ್ದ ನಿರೋಜನ ಮಗ ಕರಿಯ ತಿಪ್ಪೋಜನಿಗೆ ಈ ಶಾಸನವನ್ನು ತಿದ್ದಿದುದಕ್ಕೆ ಬೆಳವಡಿಯ ಗ್ರಾಮದ ಎರೆಭೂಮಿಯನ್ನ ಕೊಟ್ಟಂತೆ ಹೇಳಿದೆ) ದಾನ ಕೊಟ್ಟ ಬಗ್ಗೆ ದಾಖಲೆಗಳಿವೆ. ಹಾಗಾಗಿ ಹರಿಹರ ದೇವಾಲಯ ತನ್ನ ಆರಂಭದ ವೈಭವವನ್ನು ಮತ್ತೆ ಗಳಿಸುತ್ತಾ ಬಂದಿತು ಎಂದು ಹೇಳಬಹುದು.

೪.೨ ರಕ್ಷಣಾವಾಸ್ತು

ಮಾನವನು ತನ್ನ ನಾಗರಿಕತೆಯ ಪ್ರಗತಿಯ ಪಥದಲ್ಲಿ ನಡೆದಂತೆ ತನ್ನ ಮತ್ತು ತನ್ನ ಸಮುದಾಯದ ಲೌಕಿಕ ಸಂಪತ್ತನ್ನು ಬೆಳೆಸುತ್ತಾ ನಡೆದು ಹಲವು ಕಿರು ಸಮುದಾಯಗಳು ಒಂದೆಡೆಯಲ್ಲಿ ನೆಲೆಗೊಂಡಾಗ ವಿವಿಧ ವಿಶಿಷ್ಟ ಹಿತಾಸಕ್ತಿಯ ಸಮಾಜಗಳು ನಿರ್ಮಾಣಗೊಂಡು ಸಾಮ್ರಾಜ್ಯಗಳು ಉದಯವಾಗುವುದಕ್ಕಿಂತ ಮೊದಲು ಸಮಾಜದ ಜನರು ಸಣ್ಣ ಸಣ್ಣ ಗುಂಪುಗಳಾಗಿ

ವಾಸಿಸುತ್ತಿದ್ದರು.[೯] ಕಾಲಕ್ರಮೇಣ ಈ ಗುಂಪುಗಳಲ್ಲಿ ಜನಸಂಖ್ಯೆ ಹೆಚ್ಚಾಗಿ ಅಥವಾ ಬೇರೆ ಗುಂಪುಗಳ ಜೊತೆಗೂಡಿ ಊರುಗಳಾದವು ಈ ಪ್ರಕ್ರಿಯೆಗೆ ಮೂಲ ಕಾರಣ ಮನುಷ್ಯನ ಸಮಾಜ ಜೀವಿತ ಪ್ರಜ್ಞೆಯ ಪರಿಣಾಮವಾಗಿ ತನ್ನ ಸುತ್ತಲಿನ ಪರಿಸರದ ಅಭದ್ರತೆ ಬಗ್ಗೆ ಯೋಚಿಸಿದ ಅಂತೆಯೇ ನೆಲೆ ನಿಂತಿದ್ದ ಊರಿನ ರಕ್ಷಣೆಗಾಗಿ ಕೋಟೆ ಕಟ್ಟಿಕೊಳ್ಳುವ ಅವಶ್ಯಕತೆ ಕಂಡು ಬಂದಿತು. ಊರುಗಳು ಬೆಳೆದು ಹಲವಾರು ಊರುಗಳು ಒಟ್ಟುಗೂಡಿ ರಾಜ್ಯಗಳು ಸ್ಥಾಪನೆಯಾದ ಮೇಲೆ ಆಳುವ ಅರಸರು ತಮ್ಮ ರಾಜ್ಯಗಳನ್ನು ಸಂರಕ್ಷಿಸಿಕೊಳ್ಳಲು ರಾಜಧಾನಿಗಳಲ್ಲಿ ಹಾಗೂ ಗಡಿ ಪ್ರದೇಶಗಳಲ್ಲಿ ಬೃಹತ್ ಆಕಾರದ ಕೋಟೆಗಳನ್ನು ಕಟ್ಟಿಸಿದರು. ಹೀಗಾಗಿ ಪ್ರಾಚೀನ ಕಾಲದ ಮಾನವನ ರಕ್ಷಣೆಯ ಕಾರ್ಯದಲ್ಲಿ ಕೋಟೆ ಮಹತ್ತರ ಪಾತ್ರವಹಿಸಿದೆ ಹಿಂದೆ ಯುದ್ಧಗಳು ನಡೆದಾಗ ಹೊರಗಿನ ಆಕ್ರಮಣ ತಡೆಯಲು ಕೋಟೆ ಕಟ್ಟಿಸಿಕೊಳ್ಳುವುದು ಅವಶ್ಯವಾಗಿತ್ತು ಕೋಟೆಯು ರಾಜಕೀಯವೆಂಬ ದೇಹದ ಪ್ರಮುಖ ಹಾಗೂ ಅನಿವಾರ್ಯವಾದ ಅಂಗವಾಗಿದ್ದಿತು ಯಾವುದೇ ರಾಜ್ಯದ ರಾಜಧಾನಿಯ ದೇಹದಲ್ಲಿನ ಹೃದಯವಿದ್ದಂತೆ ರಾಜಧಾನಿಯನ್ನು ವಶಪಡಿಸಿಕೊಂಡರೆ ಸಾಮಾನ್ಯವಾಗಿ ಒಂದು ರಾಜ್ಯವು ತನ್ನ ಅಸ್ತಿತ್ವನ್ನೇ ಕಳೆದುಕೊಳ್ಳುತ್ತಿದ್ದಿತು. ಆದುದರಿಂದ ಕೋಟೆ ಅಥವಾ ದುರ್ಗದ ನಿರ್ಮಾಣವು ರಕ್ಷಣೆಯ ದೃಷ್ಟಿಯಿಂದ ಅತ್ಯವಶ್ಯವಾಗಿತ್ತು.

ಹರಿಹರ ಐತಿಹಾಸಿಕವಾಗಿ ಪ್ರಸಿದ್ಧಿಯನ್ನು ಪಡೆದಿರುವುದರಿಂದ ಇಲ್ಲಿ ಅನೇಕ ಅರಸುಮನೆತನಗಳ ಆಳ್ವಿಕೆ ನಡೆಸಿರುವುದನ್ನು ಕಾಣುತ್ತೇವೆ. ವಿಭಿನ್ನ ಕಾಲಘಟ್ಟದಲ್ಲಿ ಆಳ್ವಿಕೆ ನಡೆಸಿದ ಅರಸರುಗಳು ಈ ಭಾಗದಲ್ಲಿ ಅನೇಕ ಕೋಟೆಗಳನ್ನು ನಿರ್ಮಿಸಿದ್ದಾರೆ. ಪ್ರಮುಖವಾಗಿ ಐರಣಿ ಕೋಟೆ, ಉಚ್ಚಂಗಿದುರ್ಗ ಕೋಟೆ, ಜರೆಕಟ್ಟೆ ಕೋಟೆ ಇತ್ಯಾದಿಗಳು ಇಂದಿಗೂ ಸಹ ಉತ್ತಮ ಸ್ಥಿತಿಯಲ್ಲಿದ್ದು ಈ ಭಾಗದ ಐತಿಹಾಸಿಕ ಮಹತ್ವವನ್ನು ಸಾರುತ್ತಿವೆ. ಅದೇ ರೀತಿಯಲ್ಲಿ ಹರಿಹರ ತಾಲೂಕಿನ ಸುತ್ತಮುತ್ತಲ ಗ್ರಾಮಗಳಲ್ಲಿನ ಕೋಟೆಗಳನ್ನು ವಿವಿಧ ಕಾಲಘಟ್ಟಗಳಲ್ಲಿ ನಿರ್ಮಿಸಿದ್ದಾರೆ. ಹೆಚ್ಚಿನ ಗ್ರಾಮಗಳಲ್ಲಿ ಕೋಟೆಗಳು ಶಿಥಿಲಗೊಂಡು ನಶಿಸಿಹೋಗಿದ್ದರೆ ಮತ್ತೆ ಕೆಲವು ಗ್ರಾಮಗಳಲ್ಲಿ ಐತಿಹಾಸಿಕತೆಯ ಮಹತ್ವ ಸಾರುವ ಕೋಟೆಯ ಅವಶೇಷಗಳಾದ ಬುರುಜು, ಕಂದಕಗಳು ಉಳಿದುಕೊಂಡಿವೆ. ಅವುಗಳಲ್ಲಿ ಹರಿಹರ, ಬನ್ನಿಕೋಡು, ಮೂಗಿನಗೊಂದಿ, ತಿಮ್ಮಾಲಾಪುರ ಗ್ರಾಮಗಳಲ್ಲಿ ಕಂಡುಬರುತ್ತದೆ.

ಹರಿಹರ ಕೋಟೆ

ಹರಿಹರ ಐತಿಹಾಸಿಕ ಸ್ಥಳವಾಗಿದ್ದು ಇಲ್ಲಿನ ಪ್ರಾಚೀನ ಕಾಲದ ಅನೇಕ ಕುರುಹುಗಳಲ್ಲಿ ಕೋಟೆಯ ಅವಶೇಷಗಳೂ ಕೂಡ ಸೇರುತ್ತವೆ. ಹರಿಹರ ಕೋಟೆ ಜಲದುರ್ಗವಾಗಿದ್ದು ತುಂಗಭದ್ರಾ ನದಿಯು ತುಂಬಿದಾಗ ಕೋಟೆಯ ಉತ್ತರ ಹಾಗೂ ದಕ್ಷಿಣ ದಿಕ್ಕಿನಲ್ಲಿರುವ ಕಂದಕದಿಂದ ಕೋಟೆಯ ಸುತ್ತಲೂ ನೀರು ಹರಿಯುತ್ತಿತ್ತು ಎಂಬುದಾಗಿ ಕೋಟೆಯ ರಚನೆಯಿಂದ ತಿಳಿಯಬಹುದು. ಪ್ರಸ್ತುತ ಕೋಟೆಗೆ ಸಂಬಂಧಿಸಿದ ಹಲವಾರು ಅವಶೇಷಗಳು ನಶಿಸಿಹೊಗಿದ್ದು ಹರಿಹರೇಶ್ವರ ದೇವಾಲಯದ ಸುತ್ತಮುತ್ತಲು ಇರುವ ಪ್ರದೇಶವನ್ನು ಕೋಟೆ ಪ್ರದೇಶವೆಂದೆ ಕರೆಯಲಾಗುತ್ತಿದೆ[೯] ನದಿಯ ದಡದಲ್ಲಿ ಕೋಟೆಯ ಎತ್ತರವಾದ ಗೋಡೆ, ಕೋಟೆಯ ಮಧ್ಯದಲ್ಲಿರುವ ಹರಿಹರೇಶ್ವರ

ದೇವಾಲಯದಿಂದ ನದಿಗೆ ಇಳಿಯುತ್ತಿದ್ದ ಸುರಂಗದಾರಿ, ಉತ್ತರ ಹಾಗೂ ದಕ್ಷಿಣ ದಿಕ್ಕಿನಲ್ಲಿ ಸ್ವಲ್ಪ ಮಟ್ಟಿಗೆ ಉಳಿದುಕೊಂಡಿರುವ ಕಂದಕ ಮಾತ್ರ ಕೋಟೆ ಕುರುಹುಗಳಾಗಿವೆ. ಬೃಹತ್ತಾದ ಕೋಟೆಯ ಅವಶೇಷಗಳನ್ನು ಹೊಂದಿರುವ ಈ ಕೋಟೆಯನ್ನು ಯಾರು ಯಾವಾಗ ಕಟ್ಟಿಸಿದರೆಂಬುದಕ್ಕೆ ಸ್ಪಷ್ಟವಾದ ದಾಖಲೆಗಳು ಇಲ್ಲವಾದರೂ ಕ್ರಿ.ಶ ೧೨೮೦ರ ಹರಿಹರ[೯೫] ಶಾಸನವೊಂದರಲ್ಲಿ ದೇವಾಲ್ಯದ ಸಂಮುಖದ ಕಲ್ಲಕೋಟೆಯಿಂದ ಮೂಡಣಮನೆ .. . . . [೯೬] ಎಂಬ ಉಲ್ಲೇಖವಿದೆ. ಕೋಟೆಯ ಬಗ್ಗೆ ಮತ್ತಾವ ಶಾಸನಾಧಾರಗಳು ದೊರೆಯುವುದಿಲ್ಲ.

ಈ ಪ್ರದೇಶ ವಿಜಯನಗರ ಕಾಲದ ಒಂದು ಆಡಳಿತ ಸಿಮೆಯಾಗಿತ್ತು.[೯೭] ಎನ್ನುವುದು ಸ್ಪಷ್ಟ ವಿಜನಗರದ ಅರಸರು ತಮ್ಮ ಆಡಳಿತ ಕೇಂದ್ರದ ಸುತ್ತಲೂ ರಕ್ಷಣಾ ಗೋಡೆಗಳನ್ನು ಭದ್ರಪಡಿಸಿಕೊಳ್ಳುತ್ತಿದ್ದರು[೯೮] ಈ ದೃಷ್ಠಿಯಿಂದ ಇಲ್ಲಿರುವ ಕೋಟೆಯ ಪ್ರಾಚೀನ ಕಾಲದಲ್ಲೆ ನಿರ್ಮಾಣವಾಗಿದ್ದರೂ ವಿಜಯನಗರ ಅರಸರ ಕಾಲದಲ್ಲಿ ಬಲಿಷ್ಠವಾಗಿರಬಹುದು. ಕ್ರಿ.ಶ. ೧೫೬೫ರಲ್ಲಿ ವಿಜಯನಗರದ ಅರಸರು ತಾಳಿಕೋಟೆ ಯುದ್ದದಲ್ಲಿ ಸೋತ ನಂತರ ವಿಜಯನಗರ ಸಾಮ್ರಾಜ್ಯವು ಸ್ಥಳೀಯ ನಾಯಕರ ವಶದಲ್ಲಿ ಉಳಿಯಿತು. ಆಗ ಹರಿಹರ ಗ್ರಾಮ ಮತ್ತು ಅದರ ಸುತ್ತಲಿನ ಪ್ರದೇಶವು ಇಕ್ಕೇರಿರಾಜರ ವಶಕ್ಕೆ ಬಂದಿತು[೯೯] ಈ ಪ್ರದೇಶವನ್ನು ಮುಂದೆ ಬಿದನೂರು ನಾಯಕರು ಅವರಿಂದ ಕಸಿದು ಕೊಂಡರು, ಆಗ ಚಿತ್ರದುರ್ಗದ ಪಾಳೆಯಗಾರರು ಇವರನ್ನು ಸೋಲಿಸಿ ಈ ಪ್ರದೇಶವನ್ನು ತಮ್ಮ ಹತೋಟಿಗೆ ತೆಗೆದುಕೊಂಡರು. ವಿಜಾಪುರ ಸುಲ್ತಾನರ ಸೈನಿಕರ ದೊಡ್ಡ ಗುಂಪು ಹರಿಹರ ಕೋಟೆಯನ್ನು ಮುತ್ತಿ ಅದನ್ನು ಸಂಪೂರ್ಣವಾಗಿ ಆಕ್ರಮಿಸಿದರು.[೧೦೦]

ಕೋಟೆ ಪಶ್ಚಿಮ ದಿಕ್ಕಿನ ಉತ್ತರ ಭಾಗದಲ್ಲಿ ದೇವಾಲಯದ ಕಡೆಯಿಂದ ತುಂಗಭದ್ರಾನದಿಗೆ ಇಳಿದು ನೀರನ್ನು ತರುತ್ತಿದ್ದ ಸುರಂಗ ಮಾರ್ಗವಿದೆ. ಈ ಮಾರ್ಗ ಯುದ್ಧ ತಂತ್ರಕ್ಕನುಗಣವಾಗಿ ನಿರ್ಮಿಸಲಾಗಿದೆ. ಸ್ಥಳೀಯರು ಹೇಳುವ ಹಾಗೆ ಈ ಮಾರ್ಗದಿಂದ ಬ್ರಾಹ್ಮಣರು ತುಂಗಭದ್ರಾ ನದಿ ನೀರನ್ನು ತರುತ್ತಿದ್ದರು ಎಂದು ತಿಳಿಸುತ್ತಾರೆ. ಕೋಟೆಯಲ್ಲಿ ಉಳಿದು ಕೊಂಡಿರುವ ಏಕೈಕಮಾರ್ಗ (ಬಾಗಿಲು) ಇದೊಂದೆ ಕೋಟೆಯ ಅವಶೇಷಗಳಿಂದ ಆಯತಾಕಾರದ ಕೋಟೆ ಇದಾಗಿದ್ದು ಕೋಟೆಗೆ ೫೦–೬೦ ಸೆಂ.ಮೀ ಅಗಲ ಮತ್ತು ೬೦–೭೦ ಸೆಂ.ಮಿ. ಉದ್ದ ವಿರುವ ಕಲ್ಲುಗಳನ್ನು ಬಳಸಿ ಕೋಟೆಯನ್ನು ಕಟ್ಟಲಾಗಿದೆ. ನದಿ ದಂಡೆಯ ಕಡೆಗೆ ಈಗಲೂ ಕೋಟೆ ಗೋಡೆ ಸಂಪೂರ್ಣವಾಗಿ ಗೋಚರಿಸುತ್ತದೆ.

ಕೊತ್ತಲಗಳು

ಕೊತ್ತಲ ಎಂದರೆ ಕೋಟೆಯ ಮೇಲ್ಭಾಗ ಅಥವಾ ಕೋಟೆಯ ಮೇಲೆ ಸೈನಿಕರು ನಿಂತು ಕಾಯುವ ಎತ್ತರ ಪ್ರದೇಶ ಎಂಬ ಅರ್ಥವನ್ನು ಒಳಗೊಂಡಿದೆ. ಕೊತ್ತಲಕ್ಕೆ ಬುರುಜು, ಕೊತ್ತಲ, ಕೊತ್ತಲ ಮತ್ತು ಕಾವಲು ಗೋಪುರ ಎಂದೂ ಕರೆಯುತ್ತಾರೆ. ಕೊತ್ತಲದ ಸ್ವರೂಪ ಮತ್ತು ಮಹತ್ವವನ್ನು ವಿವರಿಸುವ ಪ್ರಾಚೀನ ದಾಖಲೆಗಳು ಕ್ರಿಪೂ. ೩ನೇ ಶತಮಾನದಿಂದಲೇ ಕಂಡುಬರುತ್ತವೆ. ಕೌಟಿಲ್ಯದ ಅರ್ಥಶಾಸ್ತ್ರದಲ್ಲಿ ಕೋಟೆಗೆ ಅಂಟಿಕೊಂಡು ಕೊತ್ತಲಗಳಿರಬೇಕು

ಅವುಗಳಿಗೆ ಮೆಟ್ಟಿಲುಗಳಿರಬೇಕು ಎರಡು ಕೊತ್ತಲಗಳ ನಡುವಿನ ಅಂತರ ಮೂವತ್ತು ದಂಡುಗಳು ಇರಬೇಕು ಕೊತ್ತಲಕ್ಕ ಮೇಲೆ ಭಾವಣಿ ಹಾಕಿರಬೇಕೆಂದು ಹೇಳಿದ್ದಾನೆ.[೧೧೧] ಹೀಗೆ ಅನೇಕ ಪ್ರಾಚೀನ ಸಾಹಿತ್ಯ ಕೃತಿಗಳಲ್ಲಿ ಕೋಟೆಕೊತ್ತಲಗಳ ವಿವರ ದೊರೆಯುತ್ತದೆ. ರಾಜ್ಯದ ರಾಜಧಾನಿಗಳಲ್ಲಿ ಸಣ್ಣಪುಟ್ಟ ಪಾಳೆಪಟ್ಟುಗಳ ಆಡಳಿತ ಕೇಂದ್ರದಲ್ಲಿ ತಮ್ಮ ಹಾಗೂ ಜನರ ರಕ್ಷಣೆಗಾಗಿ ಕೋಟೆಗಳನ್ನು ಹಾಗೆಯೇ ಗ್ರಾಮಗಳಲ್ಲಿ ಜನರು ಕೂಡ ತಮ್ಮ ಜನರ ರಕ್ಷಣೆಗಾಗಿ ಗ್ರಾಮಸಂಬಂದಿ ಸ್ಮಾರಕಗಳಾದ ಕೊತ್ತಲ, ಹುಡೆವು, ಬುರುಜಗಳುನ್ನು ನಿರ್ಮಿಸಿಕೊಳ್ಳುತ್ತಿದ್ದರು. ಈ ಕೊತ್ತಲಗಳು ವೃತ್ತಾಕಾರ, ಚೌಕಾಕಾರ ಆಯತ ಆಕೃತಿಯಲ್ಲಿದ್ದು. ೪೦-೫೦ ಅಡಿ ಎತ್ತರದವರೆಗಿನ ಹುಡೆವುಗಳನ್ನು ಕಾಣಬಹುದು.

ಈ ಹುಡೆವುಗಳಿಂದ ಕೋಟೆಗೋಡೆಗೆ ರಕ್ಷಣೆ ಹಾಗೂ ಯುದ್ಧ ನಡೆಯುವ ಸನ್ನಿವೇಶ ಬಂದಾಗ ಇವು ಆಯಕಟ್ಟಿನ ರಚನೆಗಳಾಗಿದ್ದವು. ಹರಿಹರ ತಾಲೂಕಿನ ಅನೇಕ ಗ್ರಾಮಗಳಲ್ಲಿ ಕೊತ್ತಲ ಅಥವಾ ಬುರುಜುಗಳನ್ನು ಕಾಣಬಹುದು. ಮೂಗಿನಗೊಂದಿಯ ತುಂಗಭದ್ರಾನದಿಯ ಬಲದಂಡೆಯ ಮೇಲೆ ಒಂದು ಬುರುಜು ಕಂಡುಬರುತ್ತದೆ. ಗ್ರಾನೈಟ್ ಶಿಲೆಗಳನ್ನು ಬಳಸಿಕೊಂಡು ಬುರುಜನ್ನು ನಿರ್ಮಿಸಿದ್ದಾರೆ. ೧೫ ಅಡಿ ಎತ್ತರದ ಈ ಬುರುಜು ಚೌಕಕಾರವಾಗಿದೆ. ಬುರುಜನ್ನು ನಿರ್ಮಿಸಿರುವ ಕಲ್ಲುಗಳ ಮಧ್ಯದಲ್ಲಿ ಸಣ್ಣ ಚಕ್ಕೆ ಕಲ್ಲು ಹಾಗೂ ಮಣ್ಣನ್ನು ಬಳಸಿ ಗೋಡೆಯನ್ನು ನಿರ್ಮಿಸಿದ್ದಾರೆ. ಇದೇ ರೀತಿಯಾಗಿ ತಿಮ್ಮಾಲಾಪುರ ಗ್ರಾಮದ ಮಧ್ಯದಲ್ಲಿ ಗ್ರಾನೈಟ್ ಶಿಲೆಗಳನ್ನು ಬಳಸಿ ನಿರ್ಮಿಸಿದ ಬುರುಜು ಕಂಡು ಬರುತ್ತದೆ ೧೨ ಅಡಿ ಎತ್ತರವಿರುವ ಈ ಬುರುಜು ವಿಜಯನಗರೋತ್ತರ ಕಾಲದ್ದಾಗಿದೆ. ಬಗ್ಗಡನಾಳು ಪ್ರದೇಶದಲ್ಲಿಯೂ ಸಹ ಒಂದು ಕೊತ್ತಲವಿದೆ.

ಸೈನಿಕರು ಈ ಬುರುಜುಗಳ ಮೇಲೆ ನಿಂತು ಶತ್ರುಗಳನ್ನು ದೂರದಿಂದಲೇ ವೀಕ್ಷಿಸಿ ದಾಳಿಕೋರರನ್ನು ಸದೆ ಬಡೆಯಲು ಸಹಾಯಕಾರಿಯಾಗಿದ್ದು. ಗ್ರಾಮಗಳ ರಕ್ಷಣೆಗೂ ಸಹ ಸಹಾಯಕವಾಗಿವೆ. ಇದುವರೆಗೂ ಚರ್ಚಿಸಿದಂತಹ ಕೋಟೆ-ಕೊತ್ತಲಗಳು ಸಂರಕ್ಷಣೆಯಿಲ್ಲದೆ ಅಳಿವಿನ ಹಂಚಿನಲ್ಲಿವೆ ಹರಿಹರ ಕೋಟೆಯು ಹರಿಹರೇಶ್ವರ ದೇವಾಲಯ ಹಾಗೂ ನಂತರ ರಚನೆಗೊಂಡ ಇದೇ ದೇವಾಲಯ ಪ್ರಾಂಗಾಣದ ದೇವಾಲಯಗಳ ಸುತ್ತ ರೂಪಗೊಂಡಿರುವುದರಿಂದ ಈ ಕೋಟೆ ಧಾರ್ಮಿಕ ಕೇಂದ್ರಗಳನ್ನು ರಕ್ಷಣೆ ಮಾಡುವುದೇ ಮುಖ್ಯವಾಗಿತ್ತು ಎಂದು ತಿಳಿಯುತ್ತದೆ.

೪.೩ ಮೂರ್ತಿಶಿಲ್ಪ

'ಮೂರ್ತಿ' ಎಂಬ ಶಬ್ದಗಳನ್ನೊಳಗೊಂಡು ಅದಕ್ಕೆ ಪರ್ಯಾಯವಾಗಿ ಬಳಸಿದ ಶಬ್ದಗಳಲ್ಲಿ ಅದೊಂದು ಭೌತಿಕ ವಸ್ತು ಎಂಬಂತೆಯೇ ಗ್ರಹಿಸಲಾಗುತ್ತದೆ ಏಕೆಂದರೆ 'ದೇವತಾಮೂರ್ತಿ' ಎಂಬ ಶಬ್ದದಲ್ಲಿ 'ಮೂರ್ತಿಯೇ ದೇವತೆಯಲ್ಲ' ಮೂರ್ತಿ ದೇವತೆಯದು ಈ ಕುರಿತು ಇರುವ 'ಪ್ರತಿಮಾ', 'ಬಿಂಬ', 'ಪ್ರತಿಕೃತಿ', 'ವಿಗ್ರಹ' ಮುಂತಾದ ಶಬ್ಧಗಳು ಇದನ್ನು ಇನ್ನೂ ಸ್ಪಷ್ಟವಾಗಿ ಸೂಚಿಸುತ್ತವೆ ಇಲ್ಲೆಲ್ಲ ಒಂದು ನಿರಾಕಾರ ಕಲ್ಪನೆಯನ್ನು ಯಥಾವತ್ತಾಗಿ ಅನುಕರಿಸಿದ 'ಸಾಕಾರ ವಸ್ತು' ಎಂಬ

ಪರಿಕಲ್ಪನೆಯಿದೆ.[೧೦೨] 'ಅರ್ಚ್ಯ' ಎಂಬ ಶಬ್ದ 'ಪೂಜಿಸಲ್ಪಡುವಂಥದ್ದು' ಎಂದಾದರೆ ಬೇರ ಕೂಡ ಅದೇ ಅರ್ಥವನ್ನು ಕೊಡುತ್ತದೆ. 'ತನು' 'ವಪು' ಮುಂತಾದ ಶಬ್ದಗಳು ಮೂರ್ತಿಯನ್ನು ದೇಹವನ್ನಾಗಿ ಗ್ರಹಿಸುವಲ್ಲಿ ಹಾಗೂ ದೇವರನ್ನು ಅದರ ಆತ್ಮವನ್ನಾಗಿ ಪ್ರತ್ಯೇಕಿಸುತ್ತವೆ.[೧೦೩] ಮೂರ್ತಿ ಎಂಬ ಪದಕ್ಕೆ ಸಮನಾರ್ಥವಾಗಿ 'ಪ್ರತಿಮೆ' ಎಂಬ ಪದ ಪ್ರಯೋಗದಲ್ಲಿದೆ ಹಾಗೆಯೇ ಮೂರ್ತಿಶಾಸ್ತ್ರವನ್ನು 'ಪ್ರತಿಮಾಶಾಸ್ತ್ರ' ಎಂದೂ ಕರೆಯಲಾಗುತ್ತದೆ.

ಶಾಸ್ತ್ರೀಯ ಸಂಪ್ರದಾಯಕ್ಕನುಗುಣವಾಗಿ ದೇವತಾ ಮೂರ್ತಿಗಳು ರೂಪಗೊಳ್ಳುತ್ತವೆ. ಮೂರ್ತಿಶಿಲ್ಪಕ್ಕೆ ಪ್ರಾಗಿತಿಹಾಸ ಕಾಲದಿಂದಲೂ ಆಧಾರಗಳೂ ದೊರಕುತ್ತವೆ. ಕರ್ನಾಟಕದ ವಿವಿಧ ನೆಲೆಗಳ ಉತ್ಖನನದಿಂದ ಹಲವಾರು ಮಾಹಿತಿಗಳು ದೊರಕಿವೆ. ಕುಪ್ಪಗಲ್, ಪಿಕ್ಲಿಹಾಳ, ಸಂಗನಕಲ್ಲು, ತೆಕ್ಕಲಕೋಟೆ, ನೆಲೆಗಳಲ್ಲಿ ನೂತನ ಶಿಲಾಯುಗ, ಶಿಲಾತಾಮ್ರಯುಗಕ್ಕೆ ಸೇರಿದ ಸುಡಾವೆ ಮಣ್ಣಿನ ಗೊಂಬೆಗಳು ದೊರೆತಿವೆ.[೧೦೪] ಅವುಗಳಲ್ಲಿ ಎತ್ತು. ಕುರಿ, ಪಕ್ಷಿ, ಮನುಷ್ಯ ಕೃತಿಗಳು ಪ್ರಮುಖವಾಗಿ ದೊರಕಿವೆ. ಇವು ಅಂದಿನ ಧಾರ್ಮಿಕ ನಂಬಿಕೆ ಭಾವನೆ ಮತ್ತು ಪರಂಪರೆಯನ್ನು ಸೂಚಿಸುವ ಆಕರಗಳಾಗಿರುವುದಷ್ಟೆ ಅಲ್ಲದೆ ಕರ್ನಾಟಕ ಮೂರ್ತಿಶಿಲ್ಪದ ಪೂರ್ವಭಾವಿ ಹಂತವನ್ನು ಸೂಚಿಸುತ್ತವೆ.[೧೦೫] ರಾಮಾಯಣ, ಮಹಾಭಾರತಗಳಲ್ಲಿ ದೇವಾಲಯಗಳ ಉಲ್ಲೇಖ ಬರುವುದರಿಂದ ಆ ಕಾಲದಲ್ಲಿಯೇ ವಿಗ್ರಹರಾಧನೆ ತಕ್ಕಮಟ್ಟಿಗೆ ಪ್ರಚಲಿತವಾಗಿರಬೇಕೆನಿಸುತ್ತದೆ.[೧೦೬] ವೇದೋತ್ತರ ಕಾಲದ ಗೃಹ್ಯಸೂತ್ರಗಳಲ್ಲಿ ಮೂರ್ತಿಪೂಜೆಯ ಮೊದಲ ಉಲ್ಲೇಖ ಸಿಗುತ್ತದೆ. ನಂತರದ ಸಾಹಿತ್ಯವಾದ ಶತರುದ್ರೀಯದಲ್ಲಿ ಬ್ರಾಹ್ಮಣ ಸಂಸ್ಕೃತಿಯ ಕೆಲ ಮುಖ್ಯ ದೇವತೆಗಳಾದ ವಿಷ್ಣು, ಶಿವ, ಬ್ರಹ್ಮ, ಕುಮಾರ, ವಕ್ರತುಂಡ, ದುರ್ಗ, ಆದಿತ್ಯ ಮುಂತಾದ ದೇವತೆಗಳ ಉಲ್ಲೇಖ ಬರುತ್ತದೆ ಹಾಗೂ ದೇವತಾನಯಗಳಿಗೆ ಗ್ರಾಂಥಿಕ ಆಧಾರಗಳು ಆ ಕಾಲದಲ್ಲೇ ಸಿಗುತ್ತದೆ.[೧೦೭]

ಐತಿಹಾಸಿಕ ಯುಗದಲ್ಲಿ ಶಾತವಾಹನರು, ಕದಂಬರು, ಬಾದಾಮಿ ಚಾಲುಕ್ಯರು ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಉಚ್ಚಂಗಿಪಾಂಡ್ಯರು, ಹೊಯ್ಸಳರು ಮತ್ತು ವಿಜಯನಗರದ ಅರಸರು ಮೂರ್ತಿಶಿಲ್ಪದ ಬೆಳೆವಣಿಗೆಗೆ ವಿಶೇಷ ಪ್ರೋತ್ಸಾಹ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಹರಿಹರ ತಾಲೂಕಿನಲ್ಲಿ ವಿವಿಧ ಕಾಲಘಟ್ಟಗಳಲ್ಲಿ ನಿರ್ಮಿಸಲಾದ ಶೈವ, ವೈಷ್ಣವ, ಶಾಕ್ತ ಪಂಥದ ಮೂರ್ತಿಶಿಲ್ಪಗಳು ಕ್ಷೇತ್ರಕಾರ್ಯದಲ್ಲಿ ದೊರೆತಿವೆ. ದೊರೆತ ಮೂರ್ತಿ ಶಿಲ್ಪಗಳನ್ನು ೪ ರೀತಿಯಾಗಿ ವಿಂಗಡಿಸಲಾಗಿದೆ ಅವು ಕೆಳಗಿನಂತಿವೆ.

೧. ಶೈವ ಮೂರ್ತಿಶಿಲ್ಪಗಳು

೨. ವೈಷ್ಣವ ಮೂರ್ತಿಶಿಲ್ಪಗಳು

೩. ಶಾಕ್ತ ಮೂರ್ತಿಶಿಲ್ಪಗಳು

೪. ಇತರೆ ಮೂರ್ತಿಶಿಲ್ಪಗಳು

೪.೩.೧ ಶೈವ ಮೂರ್ತಿಶಿಲ್ಪಗಳು

ಹರಿಹರ ತಾಲೂಕಿನ ದೊರೆತ ಶೈವಮೂರ್ತಿಗಳಿಗೆ ಸಂಬಂಧಿಸಿದಂತೆ ಶಿವಲಿಂಗದ ಹೊರತಾಗಿರುವ ಸ್ಥಾನಿಕ, ಆಸೀನ ಮೂರ್ತಿಗಳು ಇಲ್ಲಿ ಪ್ರಧಾನವಾಗಿವೆ. ಶಿವನ ರೂಪವೆಂದು ಭಾವಿಸಲಾಗಿರುವ ಲಿಂಗ ಹಾಗೂ ಅತನ ವಾಹನವಾದ ನಂದಿಗಳು ಪ್ರತಿಯೊಂದು ಶೈವ ದೇವಾಲಯದಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ. ಹಾಗೇ ಉಮಾಮಹೇಶ್ವರ, ಶೈವದ್ವಾರಪಾಲಕರು, ಭೈರವ, ಗಣೇಶ, ಕಾರ್ತಿಕೇಯ ಮೂರ್ತಿಗಳು ತಾಲೂಕಿನ ದೇವಾಲಯಗಳಲ್ಲಿ ಕಂಡುಬರುತ್ತಿದ್ದು ಅವುಗಳಲ್ಲಿ ಪ್ರಮುಖ ಮೂರ್ತಿಗಳನ್ನು ಪ್ರತ್ಯೇಕವಾಗಿ ಈ ಕೆಳಗಿನ ರೀತಿಯಲ್ಲಿ ಅಧ್ಯಯನ ಮಾಡಿ ವಿವರಿಸಲಾಗಿದೆ.

ಶಿವಲಿಂಗಗಳು: ಜಿಗಳಿ, ದೇವರಬೆಳಕೆರೆ, ನಂದಿಗುಡಿಗಳಲ್ಲಿ ವಿಭಿನ್ನ ಕಾಲಘಟ್ಟದಲ್ಲಿ ನಿರ್ಮಿತವಾದ ವೈವಿಧ್ಯಮಯ ಶಿವಲಿಂಗಗಳು ಕಂಡು ಬರುತ್ತವೆ. ಧೂಳೆಹೊಳೆಯ ಗುಂಡಿ ಬಸವೇಶ್ವರ ದೇವಾಲಯದ ತಾಲೂಕಿನಲ್ಲಿ ಅತ್ಯಂತ ದೊಡ್ಡದಾದ ಶಿವಲಿಂಗವೆಂದು ಹೇಳಬಹುದು.

ನಂದಿ ಮೂರ್ತಿಗಳು: ನಂದಿಗುಡಿ, ನಂದಿತಾವರೆಗಳಲ್ಲಿ ಪ್ರತ್ಯೇಕನಂದಿ ಮಂಟಪಗಳು ಇವೆ. ಲಿಂಗಕ್ಕೆ ಮುಖ ಮಾಡಿರುವ ಇಲ್ಲಿನ ನಂದಿ ಮೂರ್ತಿಗಳನ್ನು ಅಲಂಕಾರ ರಹಿತ ನಂದಿಗಳು ಹಾಗೂ ಅಲಂಕಾರಸಹಿತ ನಂದಿಗಳೆಂದು ವಿಭಾಗಿಸಲಾಗಿದೆ. ಅಲಂಕಾರರಹಿತ ನಂದಿಗಳು ಜಿಗಳಿ, ವಾಸನಗಳಲ್ಲಿ ಕಂಡು ಬರುತ್ತವೆ. ಇವು ಸಾಧಾರಣ ನಂದಿಗಳಾಗಿದ್ದು. ತಲೆಯನ್ನು ತಗ್ಗಿಸಿ ಲಿಂಗಕ್ಕೆ ಎದುರಾಗಿದ್ದು ಮುಂದಿನ ಬಲಗಾಲನ್ನು ಮಡಿಚಿ ಎಡಗಾಲನ್ನು ಮುಂದೆ ಚಾಚಿ ಒಂದು ಕಡೆ ವಾಲಿ ಮಲಗಿದ ರೀತಿ ಇರುತ್ತವೆ. ಪ್ರಾಚೀನ ಕಾಲದ ಈ ನಂದಿಗಳ ಭುಜವು ಅಷ್ಟೇನು ಎತ್ತರವಾಗಿರುವುದಿಲ್ಲ ಹಾಗೂ ಕೊರಳಲ್ಲಿ ಸಾಧಾರಣ ಗಂಟೆ ಸರವೊಂದಿದ್ದು ಬಾಲವು ಬಾಗಿದ ರೀತಿ ಇರುತ್ತದೆ ಇನ್ನೂ ಅಲಂಕಾರ ಸಹಿತ ನಂದಿಗಳು ನಂದಿತಾವರೆ ವಾಸನ, ಹರಿಹರ, ಜಿಗಳಿ, ದೇವರಬೆಳಕೆರೆ ಮೊದಲಾದೆಡೆ ಮಧ್ಯಯುಗಕ್ಕೆ ಸೇರಿದ ನಂದಿಮೂರ್ತಿಗಳು ಕಾಣಬರುತ್ತವೆ. ನಂದಿಗುಡಿ ಧೂಳೆಹೊಳೆ, ನಂದಿತಾವರೆಯ ನಂದಿಗಳು ಎತ್ತರದ ದೃಷ್ಟಿಯಿಂದಲೂ ಸೌಂದರ್ಯ ದೃಷ್ಟಿಯಿಂದಲೂ ಆಕರ್ಷಣೀಯವಾಗಿವೆ.[೧೦೮] ನಂದಿಗುಡಿಯ ನಂದಿ ಸುಮಾರು ೪ ಅಡಿ ೧೮ ಇಂಚು, ನಂದಿತಾವರೆಯದು ೪ ಅಡಿ ಎತ್ತರರವಾಗಿದ್ದು[೧೦೯], ಈ ನಂದಿಗಳ ಉದ್ದವು ಸುಮಾರು ಒಂದೆ ಆಗಿದ್ದು, ವಿನೀತ ಭಾವದಿಂದ ತಲೆ ತಗ್ಗಿಸಿ ಲಿಂಗಕ್ಕೆ ಎದುರಾಗಿ ಬಲಗಾಲನ್ನು ಮುಂದೆ ಚಾಚಿ, ಎಡಗಾಲ ಮೇಲೆ ಒರಗಿ ಮಲಗಿಕೊಂಡ ಗಂಟೆಸರ ಹಾಗೂ ಮೈಯನ್ನು ಅಲಂಕಾರ ಬಟ್ಟೆಯಿಂದ ಮುಚ್ಚಿ ಅಲಂಕರಿಸಿರುವುದು ವಿಶೇಷತೆ ಕೆಲವೊಮ್ಮೆ ಬಾಲವನ್ನು ಕೆಳಕ್ಕೆ ಬಿಡದೆ ಹಾಗೆ ಡುಬ್ಬದ ಬಳಿ ಗಂಟು ಹಾಕಿ ಕಟ್ಟಿರುವುದನ್ನು ಕಾಣಬಹುದು.

ಉಮಾಮಹೇಶ್ವರ ಮೂರ್ತಿಶಿಲ್ಪ ನಂದಿತಾವರೆಯ ಮಾಣಿಕೇಶ್ವರ ದೇವಾಲಯದ ಗರ್ಭಗುಡಿಯಲ್ಲಿದೆ.

೧ ಊರು : ನಂದಿತಾವರೆ

೨ ತಾಲೂಕು : ಹರಿಹರ

೩ ಹೆಸರು : ಉಮಾಮಹೇಶ್ವರ

೪ ಸ್ಥಳ : ಅಮೃತಲಿಂಗ ಮಾಣಿಕೇಶ್ವರ ದೇವಾಲಯದಲ್ಲಿದೆ

೫ ಕಾಲ : ಕ್ರಿಶ ೧೨-೧೩ನೇ ಶತಮಾನ

೬ ಬಳಸಿದ ಶಿಲೆ : ಕಪ್ಪು ಶಿಲೆ

ಪಾಣಿ ಪೀಠದ ಮೇಲೆ ಸ್ಥಾನಿಕವಾಗಿರುವ ಈ ಮೂರ್ತಿಯು ಚತುರ್ಭುಜಧಾರಿಯಾಗಿದ್ದು ಕಿರಿಟ ಮುಕುಟಧಾರಿಯಾಗಿದೆ ಶಿವನ ಎಡತೊಡೆ ಮೇಲೆ ಉಮೆಯು ಕುಳಿತಿದ್ದು ದುಂಡಾಕಾರವಾಗಿ ಆಲಂಕರಿಸಿದ ತಲೆಗೂದಲು ಅದರ ಹಿಂಭಾಗದಲ್ಲಿ ಕಲಾತ್ಮಕ ಶಿರಶ್ಚಕ್ರ ಕಟ್ಟಿರುವಂತಿದೆ ಕಿವಿಯಲ್ಲಿ ಪತ್ರ ಕುಂಡಲ, ಕೊರಳಲ್ಲಿ ಕಂಠಾಭರಣ, ಕೊರಳಹಾರ, ಕೇಯೂರ, ಕೈಕಡಗ, ಎಡಗೈಯಲ್ಲಿ ಫಲ ಉಮೆಯು ತನ್ನ ಬಲಗೈನಿಂದ ಶಿವನ ಬೆನ್ನಿನ ಹಿಂಭಾಗವನ್ನು ಬಳಸಿ ಹಿಡಿದಿದ್ದಾಳೆ. ಶಿವನ ಕಾಲಿನಲ್ಲಿ ಕಡಗ, ಪಾದಸರಗಳಿವೆ ಮಂದಹಾಸ ಬೀರುತ್ತಿರುವ ಮುಖ, ಭುಜಕೀರ್ತಿ ಯಜ್ಞೋಪವೀತ ಉದರ ಬಂಧಗಳಿವೆ. ಮೇಲಿನ ಬಲಗೈನಲ್ಲಿ ತ್ರಿಶೂಲವಿದ್ದು ಎಡಗೈಯಲ್ಲಿ ಡಮರುಗವಿದೆ ಕೆಳಗಿನ ಬಲಗೈನಲ್ಲಿ ವರದ ಮುದ್ರೆಯಲ್ಲಿದ್ದು ಕೆಳ ಎಡಗೈಯು ಉಮೇಯ ಭಜವನ್ನು ಹಿಡಿದಿದೆ ಮಣಿಗಳ ಆಲಂಕಾರಿಕ ಕಟಿಬಂಧವಿದ್ದು ಅದರಲ್ಲಿ ಒಂದು ಭಾಗವು ಕಾಲಿನ ಮಧ್ಯದಲ್ಲಿ ಇಳಿಬಿದ್ದಿದೆ ಕಾಲಿನ ಬೆರಳುಗಳಲ್ಲಿ ಉಂಗುರಗಳಿವೆ ಈ ಮೂರ್ತಿಯ ಲಕ್ಷಣಗಳ ಆಧಾರದ ಮೇಲೆ ಹೊಯ್ಸಳರ ಕಾಲದ್ದು ಎಂದು ಹೇಳಬಹುದು.

ಭೈರವ ಮೂರ್ತಿಗಳು

೧ ಊರು : ನಂದಿಗುಡಿ

೨ ತಾಲೂಕು : ಹರಿಹರ

೩ ಹೆಸರು : ಭೈರವ

೪ ಸ್ಥಳ : ಗ್ರಾಮದ ಬಸವೇಶ್ವರ ದೇವಾಲಯದ ಹಿಂಭಾಗದಲ್ಲಿ

೫ ಕಾಲ : ಕ್ರಿಶ ೧೦ನೇ ಶತಮಾನ

೬ ಬಳಸಿದ ಶಿಲೆ : ಕಪ್ಪು ಶಿಲೆ

ಪಾಣಿ ಪೀಠದ ಮೇಲೆ ಸ್ಥಾನಿಕವಾಗಿರುವ ಈ ಮೂರ್ತಿಯು ಚತುರ್ಭುಜದಾರಿಯಾಗಿದೆ ಬಲಗೈಗಳಲ್ಲಿ ಖಡ್ಗ, ತ್ರಿಶೂಲ ಹಿಡಿದಿದ್ದಾನೆ. ಎಡಗೈ ಮುಂದಿನದು ಮಾತ್ರ ಕಾಣುತ್ತಿದೆ ಕಪಾಲವನ್ನು ಹಿಡಿದಿದ್ದು ಜಟಾಮುಕಟಧಾರಿಯಾದ ಭೈರವ ಕಂಠಹಾರ, ಮಣಿಸರ, ಕಾಲ್ಗಡಗ

ಇತ್ಯಾದಿ ಆಭರಣಗಳಿಂದ ಅಲಂಕೃತಗೊಂಡಿದೆ.

೧ ಊರು : ಸಾರಥಿ

೨ ತಾಲೂಕು : ಹರಿಹರ

೩ ಹೆಸರು : ಭೈರವ

೪ ಸ್ಥಳ : ಗ್ರಾಮದ ಬಸವೇಶ್ವರ ದೇವಾಲಯದಲ್ಲಿದೆ.

೫ ಕಾಲ : ಕ್ರಿ.ಶ ೧೧ನೇ ಶತಮಾನ[೧೧೦]

೬ ಬಳಸಿದ ಶಿಲೆ : ಕಪ್ಪು ಶಿಲೆ

ಚತುರ್ಭುಜಧಾರಿ ಭೈರವನು ನಗ್ನನಾಗಿ ಸರ್ಪದ ಮೇಲೆ ಅಂದರೆ ಸುಖಾಸನದಲ್ಲಿ ಕುಳಿತಿರುವುದು ಈ ಮೂರ್ತಿಯ ವಿಶೇಷ. ಕೆದರಿದ ಜಟೆ, ಕಿವಿಯಲ್ಲಿ ಕುಂಡಲ ಭುಜಕೀರ್ತಿ ಎದೆಹಾರ, ಉದರಬಂಧ, ರುಂಡಮಾಲೆಯ ಯಜ್ಞೋಪವೀತ, ಕಟಿಹಾರವಿದ್ದು, ತ್ರಿಶೂಲ ಡಮರುಗ, ಖಡ್ಗ, ಪಾದ ಪಾತ್ರೆಯನ್ನು ಕೈಗಳಲ್ಲಿ ಹಿಡಿದಿದೆ ಸರ್ಪಕೇಯೂರ, ಕೈಕಡಗ ಹಾಗೂ ಕಾಲಿನಲ್ಲಿ ಕಡಗ, ಪಾದ ಸರಗಳನ್ನು ಈ ಮೂರ್ತಿ ಧರಿಸಿದೆ ಭೈರವನು ಕುಳಿತ ಮಧ್ಯಭಾಗದಲ್ಲಿ ಎರಡು ಸರ್ಪಗಳು ಎಡಬಲದಲ್ಲಿ ಹೆಡೆ ಬಿಚ್ಚಿರುವುದು ವಿಶೇಷವಾಗಿದೆ ಎಡ ತೊಡೆಯ ಬಳಿಯೂ ಮತ್ತೊಂದು ಹೆಡೆ ಬಿಚ್ಚಿದ ಸರ್ಪವಿದ್ದು. ಮೂರ್ತಿ ಹಿಂಭಾಗದ ಸುತ್ತಲೂ ಅಲಂಕಾರವಿಲ್ಲದ ಪ್ರಭಾವಳಿ ಇದೆ ಈ ಮೂರ್ತಿಯ ಲಕ್ಷಣಗಳು ಕಲ್ಯಾಣ ಚಾಲುಕ್ಯರ ಶಿಲ್ಪ ಶೈಲಿಗೆ ಹೋಲಿಕೆಯಾಗುತ್ತವೆ.[೧೧೧] ಹಾಗಾಗಿ ಅವರ ಕಾಲದ್ದೆಂದು ಹೇಳಬಹುದು.

೧ ಊರು : ದೇವರ ಬೆಳಕರೆ

೨ ತಾಲೂಕು : ಹರಿಹರ

೩ ಹೆಸರು : ಭೈರವ

೪ ಸ್ಥಳ : ಗ್ರಾಮದ ದಕ್ಷಿಣ ದಿಕ್ಕಿಗಿರುವ ಕಲ್ಲೇಶ್ವರ ದೇವಾಲಯದಲ್ಲಿದೆ

೫ ಕಾಲ : ಕ್ರಿ.ಶ ೧೧ನೇ ಶತಮಾನ[೧೧೨]

೬ ಬಳಸಿದ ಶಿಲೆ : ಕಪ್ಪು ಶಿಲೆ

ಪಾಣಿಪೀಠದ ಮೇಲೆ ಸ್ಥಾನಿಕವಾಗಿರುವ ಈ ಮೂರ್ತಿಯು ಚತುರ್ಭುಜಧಾರಿಯಾಗಿದ್ದು ಜಟಾಮಕುಟಧಾರಿಯಾಗಿದೆ. ಕಿವಿಯಲ್ಲಿ ಸರ್ಪಕುಂಡಲಗಳಿದ್ದು ಕೊರಳಲ್ಲಿ ಕಂಠಾಭರಣ, ಮೊಣಕಾಲವರೆಗೆ ಇಳಿಬಿದ್ದ ರುಂಡಮಾಲೆ, ಉದರವನ್ನು ಸುತ್ತುವರಿದ ಹಾಗೂ ಕಟಿ ಬಂಧಗಳಿವೆ ಎದೆಹಾರ, ಯಜ್ಞೋಪವಿತ, ಮೊಣಕಾಲಿನ ಎರಡು ಕಾಲನ್ನು ಸುತ್ತುವರಿದ ಸರ್ಪವಿದ್ದು ಕಾಲ್ಕಡಗ ಹಾಗೂ ಪಾದರಕ್ಷೆಗಳನ್ನು ಈ ಮೂರ್ತಿಗಳು ಧರಿಸಿದೆ ಎಡ ಮೊಣಕಾಲಿನ ಕೆಳಭಾಗ ತ್ರುಟಿತವಾಗಿದೆ. ಈ

ಮೂರ್ತಿಯು ಮೇಲಿನ ಕೈಗಳಲ್ಲಿ ಹಿಡಿದ ಆಯುಧಗಳು ತ್ರುಟಿತವಾಗಿರುವುದರಿಂದ ಅವು ಯಾವ ಆಯುಧಗಳೆಂದು ತಿಳಿಯುವುದು ಕಷ್ಟಕರ ಆದರೂ ಉಳಿದರ್ಧ ಭಾಗದಿಂದ ತ್ರಿಶೂಲ ಡಮರುಗಗಳು ಇರಬಹುದೆಂದು ಗುರುತಿಸಬಹುದಾಗಿದೆ. ಕೆಳಗಿನ ಕೈಗಳ ಮುಂಭಾಗ ತ್ರುಟಿತವಾಗಿರುವುದರಿಂದ ಆ ಕೈಗಳಲ್ಲಿ ಹಿಡಿದ ಆಯುಧಗಳು ಸಹ ಯಾವುವೆಂದು ತಿಳಿಯುವುದಿಲ್ಲ ಭುಜಕೀರ್ತಿ ಸರ್ಪಕೇಯೂರ, ಕೈಗಡಗಳನ್ನು ಧರಿಸಿದ ಈ ಮೂರ್ತಿಯ ಹಿಂಭಾಗದಲ್ಲಿನ ಪ್ರಭಾವಳಿಯ ಮೇಲಿನ ಭಾಗ ತ್ರುಟಿತವಾಗಿದೆ.

ಗಣಪತಿ ಮೂರ್ತಿಗಳು

೧ ಊರು : ಚಿಕ್ಕಬಿದರೆ

೨ ತಾಲೂಕು : ಹರಿಹರ

೩ ಹೆಸರು : ಗಣಪತಿ

೪ ಸ್ಥಳ : ಗ್ರಾಮದ ಪಶ್ಚಿಮ ದಿಕ್ಕಿನ ತುಂಗಭದ್ರಾ ನದಿ ದಂಡೆಯ ಮೇಲಿರುವ ಕಲ್ಲೇಶ್ವರ ದೇವಾಲಯದಲ್ಲಿದೆ

೫ ಕಾಲ : ಕ್ರಿ.ಶ. ೧೧ನೇ ಶತಮಾನ[೧೧೩]

೬ ಬಳಸಿದ ಶಿಲೆ : ಕಪ್ಪುಶಿಲೆ

ಪಾಣಿಪೀಠದ ಮೇಲೆ ಸುಖಾಸನದಲ್ಲಿರುವ ಈ ಮೂರ್ತಿಯು ಕೀರಿಟಧಾರಿ ಹಾಗೂ ಚತುರ್ಭುಜಧಾರಿಯಾಗಿದೆ ಮೇಲಿನ ಕೈಗಳಲ್ಲಿ ಅಂಕುಶ, ಪಾಶ, ಕೆಳಗಿನ ಕೈಗಳಲ್ಲಿ ಮೋದಕ ಪಾತ್ರ ಹಿಡಿದಿದ್ದು ಮೋದಕ ಪಾತ್ರೆಯ ಮೇಲೆ ಸೊಂಡಿಲಿದ್ದು, ಕೈಕಡಗ, ಕಾಲ್ಗಡಗಗಳನ್ನು ಧರಿಸಿದೆ. ಉದರ ಭಾಗದಲ್ಲಿ ಒಂದು ರಂಧ್ರವಿರುವುದರಿಂದ ಉದರ ಭಾಗದಲ್ಲಿನ ಅಲಂಕಾರಿಕ ಆಭರಣ ಇತ್ಯಾದಿಗಳು ಗೋಚರಿಸುವದಿಲ್ಲ ಯಜ್ಞೋಪವಿತ ಕಾಣುವುದಿಲ್ಲ ಪ್ರಭಾವಳಿ ಆಲಂಕಾರವಾಗಿರದೆ ಸಾಧಾರಣವಾಗಿದೆ ಪಾದ ಸರಗಳಿದ್ದು ವಿನಾಯಕನ ವಾಹನ ಪೀಠದಲ್ಲಿ ನಿಂತಿರುವಂತೆ ಕೆತ್ತಲಾಗಿದೆ.

೧ ಊರು : ಸಾರಥಿ

೨ ತಾಲೂಕು : ಹರಿಹರ

೩ ಹೆಸರು : ಗಣಪತಿ

೪ ಸ್ಥಳ : ಗ್ರಾಮದ ಬಸವೇಶ್ವರ ದೇವಾಲಯದಲ್ಲಿದೆ

೫ ಕಾಲ : ಕ್ರಿ.ಶ ೧೦-೧೧ನೇ ಶತಮಾನ

೬ ಬಳಸಿದ ಶಿಲೆ : ಕಪ್ಪು ಶಿಲೆ

ಚತುರ್ಭುಜಧಾರಿಯಾದ ಗಣಪತಿ ಮೂರ್ತಿಯು ಸುಖಾಸನದಲ್ಲಿದೆ ಕಪ್ಪು ಶಿಲೆಯಲ್ಲಿ ಕೆತ್ತಲ್ಪಟ್ಟು ಈ ಮೂರ್ತಿಯ ಮೇಲಿನ ಕೈಗಳಲ್ಲಿ ಅಂಕುಶ, ಪಾಶ, ಕೆಳಗಿನ ಕೈಗಳು ಭಗ್ನವಾಗಿದ್ದು ಕೆಳಗಿನ ಎಡಗೈವರೆಗೆ ಸೊಂಡಿಲಿದೆ ಕೈಗಡಗ, ಕಾಲ್ಗಡಗಗಳನ್ನು ಧರಿಸಿದ ಉದರ ಭಾಗದಲ್ಲಿ ರಂಧ್ರವಿದೆ ಪ್ರಭಾವಳಿ ಅಲಂಕಾರಿಕವಾಗಿರದೆ ಸಾಧರಣವಾಗಿದೆ ಹೊಟ್ಟೆಯುಳ್ಳ ಲಂಬೋಧರನು ನಾಗಯಜ್ಞೋಪವೀತ ಧರಿಸಿದ್ದಾನೆ ಕೊರಳಲ್ಲಿ ಕಂಠಿಹಾರ ಧರಿಸಿದ್ದಾನೆ ಗಣಪತಿಯ ವಾಹನ ಮೂಷಕ ಈ ಮೂರ್ತಿಯ ಪೀಠದಲ್ಲಿ ಕಂಡುಬರುವುದಿಲ್ಲ ಈ ರೀತಿಯ ಗಣಪತಿ ಮೂರ್ತಿಗಳು ನಂದಿಗುಡಿ ಹಾಗೂ ದೇವರಬೆಳಕೆರೆ ಗ್ರಾಮದ ಪ್ರಾಚೀನ ದೇವಾಲಯಗಳಲ್ಲಿ ಮೇಲಿನ ಲಕ್ಷಣಗಳನ್ನು ಹೊಂದಿದ ಮೂರ್ತಿಶಿಲ್ಪಗಳಿವೆ.

ಕಾರ್ತಿಕೇಯ ಮೂರ್ತಿಗಳು

ಸ್ಕಂದ ಪುರಾಣವು ಕಾರ್ತಿಕೇಯ ಮಹತ್ವದ ದ್ಯೋತಕವಾಗಿದೆ ಈ ಪುರಾಣವು ತಿಳಿಸುವಂತೆ ಜನಪದ ಕಥೆ ಹೀಗಿದೆ: ಶಿವನ ಮುಖಗಳಿಂದ ಈ ಪುರಾಣವು ತಿಳಿಸುವಂತೆ ಸ್ಕಂದನ ಜನನದ ಕಥೆ ಹೀಗಿದೆ– ಶಿವನ ಮುಖಗಳಿಂದ ಹೊರಹೊಮ್ಮಿದ ಆರು ಕಳೆಗಳನ್ನು ಅಗ್ನಿ ಮತ್ತು ವಾಯುವು ಹೊತ್ತು ತಂದು ಸರವಣ ಸರೋವರದಲ್ಲಿ ಹಾಕಿದರು ಗಂಗೆಯು ಶಿವನ ಕಳೆಗಳ ತೇಜವನ್ನು ಸಹಿಸಲಾರದೆ. ತೆರೆಗಳ ಮೂಲಕ ಬಳಿಯಲ್ಲಿದ್ದ ವನದೆಡೆಗೆ ತಳ್ಳಿದಳು ಈ ವನದಲ್ಲಿ ಜನಿಸಿದ ಕುಮಾರನು 'ಸರವಣಭವ'ನಾದನು [ಇದರಿಂದ ಈ ವನವು 'ಸರವಣವನ'ವೆನಿಸಿತು] ಅಲ್ಲಿದ್ದ ಆರು ಜನ ಕೃತ್ತಿಕೆಯರು ಮೊದಲು ಮಗವನ್ನು ಕಂಡು ಪೋಷಿಸಿದರು ಕೃತ್ತಿಕೆಯರು ಪೋಷಣೆ ಪಡೆದವನು ಕಾರ್ತಿಕೇಯನೆನಿಸಿದನು[೧೧೪] ಹರಿಹರ ತಾಲೂಕಿನಲ್ಲಿ ಧೂಳೆಹೊಳೆ ಹಾಗೂ ನಂದಿತಾವರೆ ಗ್ರಾಮದ ದೇವಾಲಯಗಳಲ್ಲಿ ಮಾತ್ರ ಕಾರ್ತಿಕೇಯನ ಮೂರ್ತಿಶಿಲ್ಪಗಳು ಕಂಡುಬರುತ್ತವೆ.

೧ ಊರು	:	ಧೂಳೆಹೊಳೆ
೨ ತಾಲೂಕು	:	ಹರಿಹರ
೩ ಹೆಸರು	:	ಕಾರ್ತಿಕೇಯ
೪ ಸ್ಥಳ	:	ಗ್ರಾಮದ ಗುಂಡಿ ಬಸವೇಶ್ವರ ದೇವಾಲಯದಲ್ಲಿದೆ.
೫ ಕಾಲ	:	ಕ್ರಿ.ಶ. ೧೧ನೇ ಶತಮಾನದ
೬ ಬಳಸಿದ ಶಿಲೆ	:	ಕಪ್ಪು ಶಿಲೆ

ಪಾಣಿಪೀಠದ ಮೇಲೆ ಚತುರ್ಭುಜಧಾರಿಯಾದ ಈ ಮೂರ್ತಿಯು ಕಿರಿಟಮಕುಟಧಾರಿಯಾಗಿದೆ ಹಾಗಾಗಿ ಇವನ ಈ ರೂಪವನ್ನು ರಾಜಸಿಕ ರೂಪವೆನ್ನುವರು.[೧೧೫] ಕಾರ್ತಿಕೇಯ ನವಿಲಿನ ಮೇಲೆ ಕುಳಿತಿದ್ದು. ನವಿಲು ತನ್ನ ಬಲಗಡೆ ಮುಖ ಮಾಡಿದೆ ಕಾರ್ತಿಕೇಯ ಅಕ್ಷಮಾಲಾ, ಅಂಕುಶ, ಪಾಶ ಹಾಗೂ ಫಲಗಳನ್ನು ಹಿಡಿದಿರುವನು ಹಾರ ಸರ, ಉಪವೀತ, ಭುಜಬಂಧ,

ಕಾಲ್ಗಡಗ ಇತ್ಯಾದಿ ಆಭರಣಗಳಿಂದ ಅಲಂಕೃತಗೊಂಡಿದ್ದು. ಸುತ್ತಲೂ ಸಾಧಾರಣವಾದ ಪ್ರಭಾವಳಿ ಇದೇ ಲಕ್ಷಣವನ್ನು ಹೊಂದಿದಂತಹ ಕಾರ್ತಿಕೇಯನ ಇನ್ನೊಂದು ಮೂರ್ತಿಶಿಲ್ಪ ತಾಲೂಕಿನ ನಂದಿತಾವರೆಯ ಅಮೃತ ಲಿಂಗ ಮಾಣೀಕ್ಕೇಶ್ವರ ದೇವಾಲಯದಲ್ಲಿದೆ ಈ ಶಿಲ್ಪದಲ್ಲಿ ನವಿಲು ಕಾರ್ತಿಕೇಯನ ಎಡಗಡೆಗೆ ಮುಖ ಮಾಡಿದೆ.

ದ್ವಾರ ಪಾಲಕ ಮೂರ್ತಿಗಳು

ಹರಿಹರ ತಾಲೂಕಿನ ನಂದಿಗುಡಿ, ಹರಿಹರ ದೇವಾಲಯಗಳಲ್ಲಿ ದೇವಾಲಯದ ದ್ವಾರಬಾಗಿಲು, ಅಂತರಾಳ ಹಾಗೂ ಗರ್ಭಗೃಹದ ದ್ವಾರದ ಎಡಬಲದಲ್ಲಿ ದ್ವಾರಪಾಲಕರಿರುವುದನ್ನು ಕಾಣಬಹುದು. ತಾಲೂಕಿನ ನಂದಿಗುಡಿಯಲ್ಲಿ ಎರಡು ಸುಂದರ ಪ್ರತ್ಯೇಕ ಶೈವ ದ್ವಾರಪಾಲಕ ಶಿಲ್ಪಗಳವೆ.[೧೧೬]

೧ ಊರು : ನಂದಿಗುಡಿ

೨ ತಾಲೂಕು : ಹರಿಹರ

೩ ಹೆಸರು : ದ್ವಾರಪಾಲಕರು

೪ ಸ್ಥಳ : ಗ್ರಾಮದ ಬಸವೇಶ್ವರ ದೇವಾಲಯ

೫ ಕಾಲ : ೧೦ನೇ ಶತಮಾನ

೬ ಬಳಸಿದ ಶಿಲೆ : ಹಸಿರು ಛಾಯೆಯ ಬಳಪದ ಶಿಲೆ[೧೧೭]

ದೇವಾಲಯದ ಅಂತರಾಳ ದ್ವಾರದ ಎಡ ಮತ್ತು ಬಲದಲ್ಲಿ ಎರಡು ಶೈವ ಮೂರ್ತಿಳಿದ್ದು ಅವು ಅಲಂಕಾರ ಹಾಗೂ ಸೂಕ್ಷ್ಮತೆಯ ದೃಷ್ಟಿಯಿಂದ ಮಹತ್ವದ ಸ್ಥಾನಪಡೆದಿದೆ. ಬಲಭಾಗದ ಮೂರ್ತಿಯು ಚತುರ್ಭಜಧಾರಿಯಾಗಿದ್ದು ಜಟೆಯ ಭುಜದ ಮೇಲೆ ಇಳಿಬಿದ್ದಿದೆ ಕೊರಳಲ್ಲಿ ಕಂಠಿಹಾರ, ಎದೆಯ ಮೇಲೆ ಅನೇಕ ಬಗೆಯ ಹಾರಗಳಿದ್ದು ಯಜ್ಞೋಪವೀತವಿದೆ. ಮೊಣಕಾಲಿನಿಂದ ಕೆಳಗೆ ಇಳಿಬಿದ್ದಿರುವ ಹಾರವಿದೆ. ಸರ್ಪಕೇಯೂರ ಕೈಗಡಗಗಳಿದ್ದು ಮೇಲಿನ ಬಲಗೈಯಲ್ಲಿ ತ್ರಿಶೂಲ ಎಡಗೈಯಲ್ಲಿ ಡಮರುಗ, ಕೆಳಬಲಗೈ ಅಭಯ ಮುದ್ರೆಯಲ್ಲಿದ್ದು ಕೆಳ ಎಡಗೈಯಲ್ಲಿ ಗದೆ ಇದೆ ಗದೆ ಮತ್ತು ತ್ರಿಶೂಲಗಳಿಗೆ ಸರ್ಪಗಳು ಸುತ್ತುವರಿದು ಹೆಡೆಬಿಚ್ಚಿವೆ.[೧೧೮]

ನಡುವಿನಲ್ಲಿ ನಡುಬಂಧ, ಮಣಿಸರಗಳಿಂದ ಅಲಂಕೃತವಾದ ಉಡುಪು ಎರಡು ಕಾಲಿನ ಮಧ್ಯ ಇಳಿಬಿದ್ದ ಇಳಿಬಟ್ಟೆ ಇದೆ ಕಾಲಿನಲ್ಲಿ ಕಾಲ್ಗಡಗ ಪಾದಸರಗಳಿವೆ ತೋರಣವನ್ನು ತುಂಬಾ ಸೂಕ್ಷವಾಗಿ ಲತಾ–ಪದ್ಮಗಳಿಂದ ಅಲಂಕರಿಸಿರುವುದು ವಿಶೇಷವಾಗಿದೆ ಈ ಎಲ್ಲಾ ಲಕ್ಷಣಗಳನ್ನು ಎಡಭಾಗದ ಮೂರ್ತಿಯೂ ಹೊಂದಿದ್ದು ಸಾಮೀಪ್ಯತೆಯನ್ನು ಪಡೆದುಕೊಂಡಿದೆಯಾದರೂ ಕೈಯಲ್ಲಿ ಹಿಡಿದಿರುವ ಆಯುಧ ಮತ್ತು ಮುದ್ರೆಯಲ್ಲಿ ಸ್ವಲ್ಪ ಮತ್ತು ವ್ಯತ್ಯಾಸ ಕಂಡುಬರುತ್ತದೆ ಬಲಗಾಲಿನ ಮೇಲೆ ದೇಹದ ಭಾರವನ್ನೆಲ್ಲಾ ಬಿಟ್ಟು ಸ್ಥಾನಿಕವಾಗಿರುವ ಈ ಮೂರ್ತಿಯ ಮೇಲಿನ ಎಡಬಲದಲ್ಲಿ ತ್ರಿಶೂಲ ಮತ್ತು ಡಮರಿದೆ ಕೆಳಬಲಗೈಯಲ್ಲಿ ಗದೆ ಇದ್ದು ಎಡಗೈ ಅಭಯ,

ಮುದ್ರೆಯಲ್ಲಿರುವುದು. ಈ ಮೂರ್ತಿಯ ವಿಶೇಷತೆಯಾಗಿದೆ ಉಬ್ಬಕೆತ್ತನೆಯ ಪ್ರಧಾನ್ಯ ಅಂಗಾಂಗಳನ್ನು ಜಡಿಸಿದ ರೀತಿ ಕಾರ್ಯಕ್ಕೆ ತನ್ನ ಮುಖಭಾಗ ಉಬ್ಬಿದ ಗಲ್ಲ ಇವುಗಳನ್ನು ಆಧಾರವಾಗಿಟ್ಟುಕೊಂಡು ಈ ಮೂರ್ತಿ ಕಲ್ಯಾಣ ಚಾಲುಕ್ಯರ ಕಾಲಕ್ಕೆ[೧೧೯] ಸೇರಿದ್ದೆಂದು ಹೇಳಬಹುದು.

ಹರಿಹರದ ಹರಿಹರೇಶ್ವರ ದೇವಾಲಯದ ಗರ್ಭಗೃಹ ದ್ವಾರದ ಬಲಗಡೆ ಕೆಳಭಾಗದಲ್ಲಿ ಶೈವ ಎಡಭಾಗದಲ್ಲಿ ವೈಷ್ಣವ ಒಂದು ಭಾಗಕ್ಕೆ ಇಬ್ಬರಂತೆ ಒಟ್ಟು ನಾಲ್ಕು ದ್ವಾರಪಾಲಕರ ಶಿಲ್ಪಗಳಿವೆ. ಇದೇ ದೇವಾಲಯದ ನವರಂಗದ ಉತ್ತರ ಹಾಗೂ ದಕ್ಷಿಣ ಭಾಗದ ದ್ವಾರದ ಎಡಬಲದಲ್ಲಿಯೂ ದ್ವಾರಪಾಲಕರಿವುದನ್ನು ಕಾಣಬಹುದು. ಅದರೆ ಪ್ರಸ್ತುತ ನವರಂಗದ ಪೂರ್ವ ಪ್ರದೇಶ ದ್ವಾರದ ಬಲಭಾಗದಲ್ಲಿ ದ್ವಾರದಪಾಲಕನ ಪಕ್ಕದಲ್ಲಿ ಶಿವನ ಶಿಲ್ಪವೂ ಎಡ ಭಾಗದ ದ್ವಾರಪಾಲಕನ ಪಕ್ಕದಲ್ಲಿ ವಿಷ್ಣುವಿನ ಶಿಲ್ಪಗಳೂ ಕಂಡುಬರುತ್ತದೆ.

೪.೩.೨ ವೈಷ್ಣವ ಮೂರ್ತಿಶಿಲ್ಪಗಳು

ಪ್ರಸುತ್ತ ಪ್ರದೇಶದಲ್ಲಿ ವೈಷ್ಣವ ಶಿಲ್ಪಗಳು ಶೈವ ಶಿಲ್ಪಗಳಷ್ಟೇ ಸಮಪ್ರಮಾಣದಲ್ಲಿ ದೊರೆಯುತ್ತವೆ ಕ್ರಿಶ ೫ನೇ ಶತಮಾನದಿಂದಲೂ ವೈಷ್ಣವ ಶಿಲ್ಪಗಳು ಈ ಪ್ರದೇಶದಲ್ಲಿ ಕಾಣಿಸಿವೆ. ಇಲ್ಲಿ ಪ್ರಾಚೀನ ಕಾಲದ ಶೈವ ಮತ್ತು ವೈಷ್ಣವ ಶಿಲ್ಪವಾದ ಎಂದರೆ ಹರಿಹರದ ಹರಿಹರ ಶಿಲ್ಪ ಇದು ಚಾಲುಕ್ಯ ಪೂರ್ವ ಕಾಲಕ್ಕೆ ಸೇರಿದ್ದಾಗಿದೆ.[೧೨೦] ನಂತರ ಕಲ್ಯಾಣದ ಚಾಲುಕ್ಯ, ಹೊಯ್ಸಳರ ಕಾಲಕ್ಕೆ ಸಂಬಂಧಿಸಿದಂತೆಯು ಸಾಕಷ್ಟು ವೈಷ್ಣವ ಶಿಲ್ಪಗಳು ಕಂಡುಬಂದಿವೆ. ತಾಲೂಕಿನ ಸಾರಥಿ, ನಂದಿತಾವರೆ, ಜಗಳಿ, ನಂದಿಗುಡಿ, ವಾಸನ ಗ್ರಾಮದ ದೇವಾಲಯಗಳಲ್ಲಿ ಸ್ಥಾನಿಕ, ದೇವಿಸಹಿತ ಆಸೀನ ಮೂರ್ತಿಗಳು ಕಂಡುಬರುತ್ತವೆ.

೧ ಊರು : ನಂದಿತಾವರೆ

೨ ತಾಲೂಕು : ಹರಿಹರ

೩. ಹೆಸರು : ಕೇಶವ

೪ ಸ್ಥಳ : ಅಮೃತಲಿಂಗ ಮಾಣಿಕೇಶ್ವರ ದೇವಾಲಯದಲ್ಲಿದೆ

೫ ಕಾಲ : ಕ್ರಿ.ಶ. ೧೨ನೇ ಶತಮಾನ[೧೨೧]

೬ ಬಳಸಿದ ಶಿಲೆ : ಬಳಪದ ಶಿಲೆ

ಚತುರ್ಭುಜಧಾರಿ ಕೇಶವ ತನ್ನ ಕೈಗಳಲ್ಲಿ ಪದ್ಮ, ಶಂಖ, ಚಕ್ರ ಮತ್ತು ಗದಾಗಳನ್ನು ಹಿಡಿದಿರುವನು, ತಲೆಯ ಹಿಂಭಾಗ ಪ್ರಭಾಮಂಡಲ ಉದ್ದನೆಯ ಕಿರೀಟ ಹಾರ, ಸರ, ಉಪವೀತ, ಉದ್ದನೆಯ ವೈಜಯಂತಿ, ಕೈಗಡಗ, ಕಾಲ್ಗಡಗ, ಕಂಕಣ ಕಿಂಕಣಿ ಮುಂತಾದ ಅಭರಣಗಳಿಂದ ಅಲಂಕೃತಗೊಂಡಿರುವನು. ಶಿಲ್ಪದ ಸುತ್ತಲೂ ಅಲಂಕಾರಿಕ ಸ್ತಂಭ ಮಕರ ತೋರಣವಿದೆ. ಶಿಲ್ಪದ ಇಕ್ಕೆಲಗಳಲ್ಲಿ ಶ್ರೀದೇವಿ ಭೂದೇವಿಯಯರುವರು, ಇವರುಗಳೂ ಸಹ ವಿವಿಧ ಆಭರಣಗಳಿಂದ

ಅಲಂಕೃತಗೊಂಡಿರುವರು, ಶಿಲ್ಪದ ಪೀಠದಲ್ಲಿ ಗರುಡ ಶಿಲ್ಪ ಇರುವುದು ಶಿಲ್ಪದ ಶೈಲಿಯನ್ನು ಗಮನಿಸಿದರೆ ತುಂಬಾ ಅಲಂಕಾರಿಕವಾಗಿದೆ ಇದೇ ರೀತಿಯ ಪ್ರತಿಮಾ ಲಕ್ಷಣಗಳನ್ನು ಹೊಂದಿದಂತಹ ಸಾರಥಿ ಬಸವೇಶ್ವರ ದೇವಾಲಯದ ಕೇಶವನ ಶಿಲ್ಪವೂ ನಂದಿತಾವರೆಯೂ ಕೇಶವನ ಶಿಲ್ಪದ ಸಾಮ್ಯತೆಯನ್ನು ಹೊಂದಿದೆಯಾದರೆ ಶಿಲ್ಪದ ಪಾಣಿಪೀಠ ಬಿಂಬದಲ್ಲಿ ಅಂಜಲಿ ಹಸ್ತನಾದ ಗರುಡನಿದ್ದಾನೆ ಇದೇ ಲಕ್ಷಣಗಳನ್ನು ಹೊಂದಿದಂತಹ ಕ್ರಿ.ಶ. ೧೧ನೇ ಶತಮಾನದ ಜಿಗಳಿಯ ಕೇಶವ[೧೨] ಮೂರ್ತಿಶಿಲ್ಪವು ಗ್ರಾಮದ ರಂಗನಾಥ ದೇವಾಲಯದಲ್ಲಿದ್ದು ಕೇಶವ ಮೂರ್ತಿಯೇ ರಂಗನಾಥ ಎಂದು ಪೂಜೆಗೊಳ್ಳುತ್ತಿದೆ.

೧. ಊರು : ದೇವರಬೆಳಕೆರೆ

೨ ತಾಲೂಕು : ಹರಿಹರ

೩ ಹೆಸರು : ಕೇಶವ

೪ ಸ್ಥಳ : ಗ್ರಾಮದ ಮೈಲಾರಲಿಂಗೇಶ್ವರ ದೇವಾಲಯದಲ್ಲಿದೆ

೫ ಕಾಲ : ಕ್ರಿಶ ೧೦ನೇ ಶತಮಾನ

೬ ಬಳಸಿದ ಶಿಲೆ : ಬಳಪದ ಕಲ್ಲು[೧೩]

ಪಾಣಿ ಪೀಠದ ಮೇಲೆ ಸಮಭಂಗಿಯಲ್ಲಿ ಸ್ಥಾನಿಕವಾದ ಚತುರ್ಭುಜಧಾರಿಯಾದ ಈ ಮೂರ್ತಿ ಕಿರಿಟಮಕುಟಧಾರಿಯಾಗಿದೆ. ಶಿರಶ್ಚಕ್ರ ಕೊರಳಲ್ಲಿ ಕಂಠಾಭರಣ, ಕೊರಳಹಾರ ಹಾಗೂ ಯಜ್ಞೋಪವೀತಗಳನ್ನು ಈ ಮೂರ್ತಿಧರಿಸಿದೆ ಮೇಲಿನ ಕೈಗಳಲ್ಲಿ ಶಂಖ, ಚಕ್ರಗಳಿದ್ದು ಕೆಳಗಿನ ಕೈಗಳು ತ್ರುಟಿತವಾಗಿರುವುದರಿಂದ ಆ ಕೈಗಳಲ್ಲಿ ಹಿಡಿದ ಆಯುಧಗಳು ಕಾಣರುತ್ತಿಲ್ಲ. ನಡುವಿನಲ್ಲಿ ನಡುಬಂಧವಿದ್ದು ಧೋತಿಯ ಮೇಲೆ ಮಣಿ ಸರಗಳ ಅಲಂಕಾರವಿದೆ ಮೊಣಕಾಲವರೆಗೆ ಇಳಿಬಿದ್ದ ವೈಜಯಂತಿ ಮಾಲೆ ಇದ್ದು ಭಜುದಲ್ಲಿ ಭೂಜಕೀರ್ತಿ, ಕೇಯೂರ ಹಾಗೂ ಕೈಕಡಗಗಳಿವೆ ಕಾಲಿನಲ್ಲಿ ದಪ್ಪನೆಯ ಕಾಲ್ಗಡಗ ಪಾದಸರಗಳಿವೆ ಕಾಲಿನ ಬಳಿ ಚಾಮರಧಾರಿಣಿಯರಿದ್ದಾರೆ ಸುತ್ತಲೂ ಪ್ರಭಾವಳಿ ಇದೆ ಅದು ಲತಾ–ತೋರಣಗಳಿಂದ ಅಲಂಕೃತವಾಗಿದೆ. ಈ ಮೂರ್ತಿಯ ಲಕ್ಷಣಗಳ ಆಧಾರದ ಮೇಲೆ ಇದು ಕಲ್ಯಾಣ ಚಾಲುಕ್ಯರ ಆರಂಭಕಾಲಕ್ಕೆ ಸೇರಿದ್ದೆಂದು ತಿಪ್ಪೇಸ್ವಾಮಿ.ಎಚ್., ಇವರು ಅವರ ಅಪ್ರಕಟಿತ ಪಿಎಚ್.ಡಿ.ಯ "ದಾವಣಗೆರೆ ಜಿಲ್ಲೆಯ ದೇವಾಲಯಗಳು"[೧೪] ಎಂಬ ಮಹಾಪ್ರಬಂಧದಲ್ಲಿ ಉಲ್ಲೇಖಿಸಿದ್ದಾರೆ.

೧ ಊರು : ವಾಸನ

೨ ತಾಲೂಕು : ಹರಿಹರ

೩ ಹೆಸರು : ಮಾಧವ

೪ ಸ್ಥಳ : ಕೇಶವ ದೇವಾಲಯದಲ್ಲಿದೆ

೫ ಕಾಲ : ಕ್ರಿ.ಶ. ೧೧ನೇ ಶತಮಾನ

೬ ಬಳಸಿದ ಶಿಲೆ : ಹಸಿರು ಬಳಪದ ಶಿಲೆ

ಸ್ಥಳಿಯರಿಂದ ವಿಷ್ಣುವೆಂದು ಕರೆಯಲ್ಪಡುವ ಈ ಮೂರ್ತಿ ಚತುರ್ಭುಜಧಾರಿಯಾಗಿದ್ದು ಸಮಭಂಗಿಯಲ್ಲಿ ಸ್ಥಾನಿಕವಾಗಿದ್ದು ಕಿರೀಟಧಾರಿಯಾದ ಮೂರ್ತಿಯ ತಲೆಗೂದಲು ಭುಜದ ಮೇಲೆ ಇಳಿಜಿದ್ದು ಹರಡಿದಂತಿವೆ ಕಿವಿಯಲ್ಲಿ ಮಕರ ಕುಂಡಲ, ಕೊರಳಲ್ಲಿ ಕಂಠಾಭರಣ, ಕೊರಳ ಹಾರಗಳಿದ್ದು ಉದರ ಬಂಧವೂ ಸಹ ಇದೆ ಎಡಭುಜದಿಂದ ಹಾದು ಬಂದು ಬಲಗೈಯ ತೋಳಿನ ಬಳಿ ಇಳಿಬಿದ್ದ ಯಜ್ಞೋಪವೀತ ಹಾಗೂ ಮೊಣಕಾಲಿನವರೆಗೆ ಇಳಿಬಿದ್ದ ವೈಜಯಂತಿಮಾಲೆ ಅಲ್ಲದೆ ಭುಜಕೀರ್ತಿ, ಕೇಯೂರ, ಕೈಕಡಗಗಳಿವೆ. ಮೇಲಿನ ಬಲಗೈಯಲ್ಲಿ ಚಕ್ರವನ್ನು ಪ್ರಯೋಗಿಸುತ್ತಿರುವ ರೀತಿಯಲ್ಲಿದ್ದರೆ ಶಂಖವನ್ನು ಬೆರಳಿನಿಂದ ಹಿಡಿದಿರುವ ಮೂರ್ತಿಯ ಎಡಗೈಯಲ್ಲಿ ಚಕ್ರ ವಿಶೇಷವಾಗಿದೆ ಬಲ ಕೆಳ ಕೈನಲ್ಲಿ ಗದೆ ಇದ್ದು ಅದರ ಕೆಳಭಾಗ ತ್ರುಟಿತವಾಗಿದೆ ಎಡಗೈ ಕಟ್ಯಾವಲಂಬಿತವಾಗಿದ್ದು ಕೈ ಬೆರಳುಗಳಲ್ಲಿ ಉಂಗುರಗಳಿವೆ ನಡುವಿನಲ್ಲಿ ಆನೇಕ ಬಗೆಯ ಮಣಿಸರಗಳಿಂದ ಅಲಂಕೃತವಾದ ಧೋತಿ ಇದೆ ಮೊಣಕಾಲಿನಿಂದ ಕೆಳಭಾಗ ಅಂದರೆ ಪಾದ ಭಾಗ ತ್ರುಟಿತವಾಗಿದೆ. ಮೂಲತಃ ಬೇರೆಡೆ ಇದ್ದ ಈ ಮೂರ್ತಿಯನ್ನು ಇತ್ತೀಚೆಗೆ ಸಿದ್ದಪಡಿಸಲಾದ ಬೇರೆ ಪಾಣಿಪೀಠದಲ್ಲಿಟ್ಟು ಜೋಡಿಸಲಾಗಿದೆ.[೧೨೫] ಎಂದು ತಿಪ್ಪೇಸ್ವಾಮಿಯವರು ಹೇಳಿದ್ದಾರೆ ಪ್ರಭಾವಳಿ ತ್ರುಟಿತವಾಗಿದ್ದು ಮೂಲ ಪ್ರಭಾವಳಿಯಲ್ಲಿನ ಅಲಂಕಾರ ಸರ್ಪತೋರಣದ ಕೆಳಭಾಗ ಮಾತ್ರ ಕಾಣ ಬರುತ್ತದೆ. ಈ ಮೂರ್ತಿಯ ಲಕ್ಷಣಗಳ ಆಧಾರದ ಮೇಲೆ ಇದು ಕಲ್ಯಾಣ ಚಾಲುಕ್ಯರ ಕಾಲದ್ದೆಂದು ಹೇಳಬಹುದು.

೧ ಊರು : ಸಾರಥಿ

೨ ತಾಲೂಕು : ಹರಿಹರ

೩ ಹೆಸರು : ಸೂರ್ಯ

೪ ಸ್ಥಳ : ಗ್ರಾಮದ ಬಸವೇಶ್ವರ ದೇವಾಲಯದ ಉತ್ತರದ ಕೋಷ್ಠಗುಡಿಯಲ್ಲಿದೆ

೫ ಕಾಲ : ಕ್ರಿ.ಶ ೧೦ನೇ ಶತಮಾನ

೬ ಬಳಸಿದ ಶಿಲೆ : ಕಪ್ಪು ಶಿಲೆ

ಪಾಣಿಪೀಠದ ಮೇಲೆ ಸಮಭಂಗದಲ್ಲಿ ನಿಂತ ಈ ಮೂರ್ತಿ ದ್ವಿಭುಜಧಾರಿಯಾಗಿದ್ದು ಕಿರೀಟಮುಕುಟಧಾರಿಯಾಗಿದೆ ಮಕರ ಕುಂಡಲ, ಕಂಠಾಭರಣ, ಯಜ್ಞೋಪವೀತ ಎಡಗಾಲಿನ ಮೇಲೆ ಇಳಿಜಿದ್ದ ಉಪವೀತ, ವೈಜಯಂತಿಯಾರ ಮತ್ತು ಉದರಬಂಧವನ್ನು ಈ ಮೂರ್ತಿಧರಿಸಿದೆ.

ಭುಜಬಂಧ, ಕೇಯೂರ, ಕೈಗಡಗಗಳಿದ್ದು, ಕೈಗಳಲ್ಲಿ ಪದ್ಮವಿದೆ ನಡುಬಂಧವಿದೆ ಮಣಿಸರದಿಂದ ಅಲಂಕೃತವಾದ ಇಳಿವಸ್ತ್ರ ಇದ್ದು ಕಾಲ್ಗಡಗ ಹಾಗೂ ಪಾದಸರಗಳಿವೆ ಉಷೆ ಪ್ರತ್ಯುಷೆಯರು ತಮ್ಮ ಬಲಗೈಯಲ್ಲಿ ಚಾಮರ ಹಿಡಿದು ಎಡಗೈ ಕಟ್ಯಾವಲಂಬಿತರಾಗಿ ನಿಂತಿದ್ದಾರೆ. ಸೂರ್ಯ ನಿಂತಿರುವ ಪೀಠ ಬಿಟ್ಟು ಕೆಳಗೆ ಏಳು ಅಶ್ವಗಳನ್ನು ಕೆತ್ತಲಾಗಿದೆ ಮೇಲೆ ಸೂರ್ಯ ಸಮಭಂಗದಲ್ಲಿ ನಿಂತಿದ್ದಾನೆ. ಸುತ್ತಲೂ ಸರ್ಪಾಲಂಕೃತ ಪ್ರಭಾವಳಿ ಇದ್ದು ಇದೆ ಲಕ್ಷಣಗಳನ್ನು ಜಿಗಳಿಯ ಸೂರ್ಯನಾರಾಯಣ ಮೂರ್ತಿಯು ಹೊಂದಿದ್ದು ಈ ಮೂರ್ತಿ ಕ್ರಿ.ಶ. ೧೨ನೇ ಶತಮಾನಕ್ಕ[೧೨೬] ಸೇರಿದ್ದಾಗಿದೆ ಇದೇ ಕಾಲಮಾನಕ್ಕೆ ಸೇರಿದ ನಂದಿಗುಡಿ ಹಾಗೂ ಕೊಕ್ಕನೂರು ಗ್ರಾಮಗಳಲ್ಲಿನ ಸೂರ್ಯ ಮೂರ್ತಿಗಳು ಮೇಲಿನ ಲಕ್ಷಣಗಳನ್ನೆ ಹೊಂದಿವೆ.

೧ ಊರು : ಕುಣಿಬೆಳಕೆರೆ

೨ ತಾಲೂಕು : ಹರಿಹರ

೩ ಹೆಸರು : ಸೂರ್ಯನಾರಾಯಣ

೪ ಸ್ಥಳ : ಗ್ರಾಮದ ಉಮಾಮಹೇಶ್ವರ ದೇವಾಯದಲ್ಲಿದೆ

೫ ಕಾಲ : ಕ್ರಿ.ಶ ೧೦ನೇ ಶತಮಾನ

೬ ಬಳಸಿದ ಶಿಲೆ : ಹಸಿರು ನೀಲಿ ಛಾಯೆಯ ಕಪ್ಪುಶಿಲೆ

ಪಾಣಿಪೀಠದ ಮೇಲೆ ಸಮಭಂಗದಲ್ಲಿ ಸ್ಥಾನಿಕವಾಗಿರುವ ಈ ಮೂರ್ತಿ ಕಿರೀಟ ಮಕುಟಧಾರಿಯಾಗಿದೆ ಮಕರ ಕುಂಡಲ, ಕಂಠಾಭರಣ, ಯಜ್ಞೋಪವೀತ, ಎಡಗಾಲೀನ ಮೇಲೆ ಇಳಿಬಿದ್ದ ಉಪವೀತ, ವೈಜಯಂತಿಹಾರ ಮತ್ತು ಉದರ ಬಂಧವನ್ನು ಈ ಮೂರ್ತಿ ಧರಿಸಿದೆ ದ್ವಿಭುಜಧಾರಿಯಾದ ಈ ಮೂರ್ತಿಗೆ ಭುಜಬಂಧ ಕೇಯೂರ, ಕೈಕಡಗಗಳಿದ್ದು ಕೈಗಳಲ್ಲಿ ಪದ್ಮವಿದೆ ನಡುಬಂಧವಿದೆ ಮಣಿಸರದಿಂದ ಅಲಂಕೃತವಾದ ಇಳಿವಸ್ತ್ರ ಇದ್ದು ಕಾಲ್ಗಡಗ ಹಾಗೂ ಪಾದಸರಗಳಿವೆ ಉಷೆ ಮತ್ತು ಪ್ರತ್ಯೂಷೆಯರು ತಮ್ಮ ಬಲಗೈಯಲ್ಲಿ ಚಾಮರ ಹಿಡಿದು ಎಡಗೈ ಕಟ್ಯಾವಲಂಭಿರಾಗಿ ನಿಂತಿದ್ದಾರೆ ಸುತ್ತಲೂ ಸರ್ಪಾಲಂಕೃತ ಪ್ರಭಾವಳಿ ಇದೆ ಪೀಠದಲ್ಲಿ ಏಳು ಅಶ್ವಗಳನ್ನು ಓಡಿಸುತ್ತಿರುವ ಅರುಣನಿದ್ದು ಆ ರಥಪೀಠದ ಮೇಲೆ ಸೂರ್ಯನಾರಾಯಣ ಸ್ಥಾಪಕನಾಗಿದ್ದಾನೆ ಈ ಪರಿಸರದಲ್ಲಿನ ಇತರೆ ಸೂರ್ಯ ಮೂರ್ತಿಗಳ ಪ್ರತಿಮಾಲಕ್ಷಣಗಳನ್ನು ಹೊಂದಿದ ಈ ಮೂರ್ತಿಯು ಕ್ರಿ.ಶ. ೧೦-೧೧ನೇ ಶತಮಾನಕ್ಕೆ ಸೇರಿದ್ದು ಎಂದು ಹೇಳಬಹುದು.

೧ ಊರು : ಬಾನುವಳ್ಳಿ

೨ ತಾಲೂಕು : ಹರಿಹರ

೩ ಹೆಸರು : ಲಕ್ಷ್ಮೀನಾರಾಯಣ

೪ ಸ್ಥಳ : ಗ್ರಾಮದ ಲಕ್ಷ್ಮೀನಾರಾಯಣ ದೇವಾಲಯದಲ್ಲಿದೆ

೫ ಕಾಲ : ಕ್ರಿ.ಶ. ೧೩೭೬ರ

೬ ಬಳಸಿದ ಶಿಲೆ : ಬಳಪದ ಶಿಲೆ

ಪಾಣಿಪೀಠದ ಮೇಲೆ ತನ್ನ ಎಡತೊಡೆಯ ಮೇಲೆ ಲಕ್ಷ್ಮಿಯನ್ನು ಕುರಿಸಿಕೊಂಡ ನಾರಾಯಣಮೂರ್ತಿ ಆಸೀನ ಭಂಗಿಯಲ್ಲಿದೆ ಕಿರೀಟಮಕುಟಧಾರಿಯಾಗಿದೆ ಮಕರ ಕುಂಡಲ, ಕಂಠಾಭರಣ, ಯಜ್ಞೋಪವೀತ, ಉದರಂಬಂಧವನ್ನು ಮೂರ್ತಿ ಧರಿಸಿದ್ದು. ಲಕ್ಷ್ಮೀ ತನ್ನ ಬಲಗೈನಿಂದ ನಾರಾಯಣನ ನಡುವನ್ನು ಹಿಡಿದಿದ್ದಲ್ಲದೆ ನಾರಾಯಣನು ಕೂಡ ತನ್ನ ಕೆಳಗಿನ ಎಡಗೈನಿಂದ ಲಕ್ಷ್ಮೀಯ ನಡುವನ್ನು ಹಿಡಿದಿದೆ ಚತುರ್ಭುಜಧಾರಿಯಾದ ಈ ಮೂರ್ತಿಗೆ ಭುಜಬಂಧ, ಕೇಯೂರ, ಕೈಕಡಗಗಳಿದ್ದು ಮೇಲಿನ ಬಲಗೈನಲ್ಲಿ ಪದ್ಮ ಕೆಳಗಿನ ಬಗಲಗೈನಲ್ಲಿ ಶಂಖ ಹಾಗೂ ಎಡಗಡೆಯ ಕೈನಲ್ಲಿ ಮೊಗ್ಗು ಕೆಳಗಿನ ಎಡಗೈ ಕಟ್ಯಾವಲಂಬಿತವಾಗಿದೆ ಸುತ್ತಲೂ ಯಾವುದೇ ಪ್ರಭಾವ ಇರದೆ ಶಿಲ್ಪವೊಂದಿದ್ದು ಹೊಯ್ಸಳರ ಕಾಲದ ಲಕ್ಷಣಗಳನ್ನು ಹೊಂದಿದೆ.

ಹನುಮಂತ ಮೂರ್ತಿ ಶಿಲ್ಪಗಳು

ಕರ್ನಾಟಕದಲ್ಲಿ ಹನುಮಂತ ದೇವರ ದೇವಾಲಯಗಳು ಹಾಗೂ ಮೂರ್ತಿಗಳು ಇಲ್ಲದ ಗ್ರಾಮಗಳೇ ಇಲ್ಲ ಎಂದು ಹೇಳಬಹುದು ಇದಕ್ಕೆ ಹರಿಹರ ತಾಲೂಕು ಹೊರತೇನಲ್ಲ.

೧ ಊರು : ಬಾನುವಳ್ಳಿ

೨ ತಾಲೂಕು : ಹರಿಹರ

೩ ಹೆಸರು : ಹನುಮಂತ

೪ ಸ್ಥಳ : ಗ್ರಾಮದ ಹನುಮಂತ ದೇವಾಲಯದಲ್ಲಿದೆ.

೫ ಕಾಲ : ಕ್ರಿ.ಶ. ೧೫೬೨ರ

೬ ಬಳಸಿದ ಶಿಲೆ : ಕಣ ಶಿಲೆ

ಇದೊಂದು ಉಬ್ಬು ಶಿಲ್ಪವಾಗಿದ್ದು ಹನುಮಂತ ಎಡಗಡೆ ಮುಖ ಮಾಡಿದ್ದಾನೆ ಬಾಲವು ತನ್ನ ತಲೆಯ ಮೇಲಿಂದ ಮುಖದ ಮುಂದಕ್ಕೆ ಇಳಿದು ಸುತ್ತವರಿಕೊಂಡಿದೆ ವೀರಗಾಸೆಯನ್ನು ತೊಟ್ಟಿರುವ ಹನುಮಂತ ಕಾಲುಗಳಲ್ಲಿ ಕಲ್ಗಡಗ, ಅಭಯ ಮುದ್ರೆ ಎಡಗೈ ಕಟ್ಯಾವಲಂಭಿತವಾಗಿದೆ ಯಜ್ಞೋಪವೀತವಿರುವುದು ವಿಶೇಷವಾಗಿದೆ ಕಿವಿಗಳಲ್ಲಿ ಪತ್ರಕುಂಡಲ ನಡುವಿನಲ್ಲಿ ಕಟಿವಸ್ತ್ರ ಕೈಗಳಲ್ಲಿ ಕಂಕಣಧರಿಸಿದ್ದಾನೆ.

೧ ಊರು : ಗುತ್ತೂರು

೨ ತಾಲೂಕು : ಹರಿಹರ

೩ ಹೆಸರು : ಹನುಮಂತ

೪ ಸ್ಥಳ : ಗ್ರಾಮದ ಪಶ್ಚಿಮ ದಿಕ್ಕಿಗಿರುವ ತುಂಗಭದ್ರಾ ನದಿ ದಂಡೆಯ ಮೇಲಿದೆ

೫ ಕಾಲ : ಕ್ರಿ.ಶ. ಸುಮಾರು ೧೬-೧೭ನೇ ಶತಮಾನ

೬ ಬಳಸಿದ ಶಿಲೆ : ಕಣ ಶಿಲೆ

ಶಿಲ್ಪದಲ್ಲಿ ಹನುಮಂತ ಎಡಗಡೆ ಮುಖಮಾಡಿದ್ದಾನೆ ಬಾಲವು ತನ್ನ ತಲೆಯ ಮೇಲಿಂದ ಮುಖದ ಮುಂದಕ್ಕೆ ಇಳಿದಿದೇ ಬಾಲದ ತುದಿಯಲ್ಲಿ ಘಂಟೆಯಿರುವುದು ವಿಶೇಷ ವೀರಗಾಸೆಯನ್ನು ತೊಟ್ಟಿರುವ ಹನುಮಂತ ಕಾಲುಗಳಿಗೆ ಕಾಲ್ಗಡಗಳನ್ನು ಧರಿಸಿದೆ ಮೂರ್ತಿಯ ಎರಡು ಕಾಲುಗಳ ಮಧ್ಯೆ ಚಿಕ್ಕದಾಗ ಒಂದು ಶಿಲ್ಪವಿದೆ ಈ ರೀತಿಯ ವಿವಿಧ ಮಾದರಿಯ ಪ್ರತಿ ಮಾಲಕ್ಷಣಗಳನ್ನು ಹೊಂದಿದ ಅನೇಕ ಹನುಮಂತನ ಮೂರ್ತಿಶಿಲ್ಪಗಳು ತಾಲೂಕಿನ ಸಾರಥಿ, ಕೆಂಚನಹಳ್ಳಿ, ಬುಳ್ಳಾಪುರ, ಕೊಂಡಜ್ಜಿ, ಹರಿಹರ ಮುಂತಾದ ಗ್ರಾಮಗಳಲ್ಲಿ ಕಂಡುಬರುತ್ತವೆ.

೪.೩.೩ ಶಾಕ್ತ ಮೂರ್ತಿಗಳು

ಮಹಿಷಮರ್ಧಿನಿ ಮೂರ್ತಿಗಳು

ಮಹಿಷಮರ್ಧಿನಿ ಶಿಲ್ಪಗಳು ನಂದಿತಾವರೆಯ ಅಮೃತಲಿಂಗ ಮಾಣಿಕೇಶ್ವರ, ಸಾರಥಿಯ ಬಸವೇಶ್ವರ, ವಾಸನದ ಕೇಶವ, ಧೂಳೆಹೊಳೆಯ ಗುಂಡಿಬಸವೇಶ್ವರ ದೇವಾಲಯ ಇತ್ಯಾದಿ ಕಡೆಗಳಲ್ಲಿ ಕಂಡು ಬಂದಿವೆ.

೧ ಊರು : ನಂದಿತಾವರೆ

೨ ತಾಲೂಕು : ಹರಿಹರ

೩ ಹೆಸರು : ಮಹಿಷಮರ್ಧಿನಿ

೪ ಸ್ಥಳ : ಗ್ರಾಮದ ಅಮೃತಲಿಂಗ ಮಾಣಿಕೇಶ್ವರ ದೇವಾಲಯದಲ್ಲಿದೆ

೫ ಕಾಲ : ಕ್ರಿ.ಶ. ೧೩ನೇ ಶತಮಾನ

೬ ಬಳಸಿದ ಶಿಲೆ : ಕಪ್ಪು ಶಿಲೆ

ಈ ಶಿಲ್ಪ ಹೊಯ್ಸಳ ಕಾಲದ ಶಿಲ್ಪಗಳಿಗೆ ಉತ್ತಮ ಉದಾಹರಣೆಯಾಗಿದೆ.[೧೫] ಅಷ್ಟಭುಜಧಾರಿಯಾದ ದೇವಿತನ್ನ ಕೈಗಳಲ್ಲಿ ಆಯುಧಗಳನ್ನು ಹಿಡಿದಿರುವಳು ತನ್ನ ಮುಂದಿನ ಬಲಗೈಯಲ್ಲಿ ಹಿಡಿದಿರುವ ಉದ್ದನೆಯ ಈಟಿಯಿಂದ ಮಹಿಷನ ಎದೆಗೆ ತಿವಿದಿರುವಳು, ಮತ್ತೊಂದೆಡೆ ಎಡ ಕೆಳ ಕೈಯಲ್ಲಿ ಮಹಿಷನನ್ನ ಹಿಡಿದಿರುವಳು ಮಹಿಷನು ಅವಳಿಂದ ತಪ್ಪಿಸಿಕೊಳ್ಳಲು ಯತ್ನಿಸುವಂತಿದೆ ದೇವಿಯ ಕಿರೀಟ, ಕುಂಡಲ, ಹಾರ, ಸರ, ಕೈಗಡಗ, ಕಾಲ್ಗಡಗ, ಇತ್ಯಾದಿ ಆಭರಣಗಳಿಂದ ಅಲಂಕೃತಗೊಂಡಿರುವಳು ಶಿಲ್ಪದ ಸುತ್ತಲೂ ಪ್ರಭಾವಳಿ ಇದೆ ಈ ಕಾಲದ ಶಿಲ್ಪಗಳಲ್ಲಿ ಈ ಅಂಶವನ್ನು ಸಾಮಾನ್ಯವಾಗಿ ಕಾಣಬಹುದು.

೧ ಊರು : ವಾಸನ

೨ ತಾಲೂಕು : ಹರಿಹರ

೩ ಹೆಸರು : ಮಹಿಷಮರ್ದಿನಿ

೪ ಸ್ಥಳ : ಕೇಶವ ದೇವಾಲಯದ ಎಡಬದಿಯಲ್ಲಿದೆ

೫ ಕಾಲ : ಕ್ರಿ.ಶ. ೧೧-೧೨ನೇ ಶತಮಾನ[೨೦]

೬ ಬಳಸಿದ ಶಿಲೆ : ಕಪ್ಪು ಶಿಲೆ

ಪೀಠದ ಮೇಲೆ ಆಲೀಢ ಭಂಗಿಯಲ್ಲಿ ನಿಂತಿರುವ ಈ ಮೂರ್ತಿ ಕರಂಡ ಮಕುಟಧಾರಿಯಾಗಿದ್ದು ಕಿವಿಯಲ್ಲಿ ಕುಂಡಲಗಳಿವೆ ಶಿರಶ್ಚಕ್ರಧರಿಸಿರುವ ಈ ಮೂರ್ತಿಯ ಕೊರಳಲ್ಲಿ ಕಂಠಾಭರಣದೊಡನೆ ಅನೇಕ ಬಗೆಯ ಹಾರಗಳು ಹಾಗೂ ಕುಚ ಬಂಧವಿದೆ ಚುತುರ್ಭುಜಧಾರಿಯಾದ ಈ ಮೂರ್ತಿಯ ಕೈಗಳಲ್ಲಿ ಕಡಗ, ಬಳೆ, ಕೇಯೂರ, ಭುಜಕೀರ್ತಿಗಳಿವೆ ಮೇಲಿನ ಕೈಗಳಲ್ಲಿ ಶಂಖ, ಚಕ್ರ, ಕೆಳಗಿನ ಬಲಗೈಯಲ್ಲಿನ ತ್ರಿಶೂಲದಿಂದ ಮಹಿಷ ತಿವಿಯುವ ರೀತಿಯಲ್ಲಿ ಹಿಡಿದಿದೆ ಕೆಳಗಿನ ಎಡಗೈನಿಂದ ಮಹಿಷನ ತಲೆಯನ್ನು ಹಿಡಿದು ಕೆಳಕ್ಕೆ ಒತ್ತುವಂತಿದೆ ಕಟಿಬಂಧವನ್ನು ಧರಿಸಿದ ಈ ಮೂರ್ತಿ ಕಾಲಿನಲ್ಲಿ ಕಡಗ, ಪಾದಸರ, ಕಾಲುಂಗರಗಳನ್ನು ಧರಿಸಿದ್ದು ಮೂರ್ತಿಯು ತನ್ನ ಬಲಗಾಲಿನಿಂದ ಮಹಿಷನನ್ನು (ಕೋಣ) ತುಳಿಯುತ್ತಿದ್ದು ಆಕೆಯ ಎಡಗಾಲು ಪೀಠದ ಮೇಲಿದೆ ಮಹಿಷನ ತಲೆಯ ಮೇಲಿಂದ ಅಸುರ ಉದಯಿಸುವಂತಿದ್ದು ಕೈಗಳಲ್ಲಿ ಗುರಾಣಿ ಖಡ್ಗ ಹಿಡಿಯಲಾಗಿದೆ ಹಿಂಬದಿಯಿಂದ ಸಿಂಹವು ಕೋಣನ ಮೇಲೆ ಎರಗುವಂತಿದೆ.

ಸಾರಥಿ ಹಾಗೂ ಧೂಳೆಹೊಳೆಯ ಮಹಿಷಮರ್ದಿನಿ ಶಿಲ್ಪಗಳು ಮೇಲಿನ ಪ್ರತಿಮಾಲಕ್ಷಣಗಳನ್ನು ಹೊಲುತ್ತವೆ ಅದರೆ ಧೂಳೆಹೊಳೆಯ ಗುಂಡಿಬಸವೇಶ್ವರ ದೇವಾಲಯದ ಎಡಬದಿಗಿರುವಂತಹ ಎರಡು ಮಹಿಷಮರ್ದಿನಿ ಶಿಲ್ಪಗಳು ಒಂದೇ ಕಾಲಘಟ್ಟದವುಳಾಗಿದ್ದು ನಿರೂಪಣಾ ಶೈಲಿಯಲ್ಲಿ ಭಿನ್ನವಾಗಿದೆ ಎರಡು ಶಿಲ್ಪಗಳಿಗೆ ಎಣ್ಣೆಯನ್ನು ಹಚ್ಚಿದ್ದರಿಂದ ಭಾಗಗಳು ಸ್ವಲ್ಪದ ಮಟ್ಟಿಗೆ ತ್ರುಟಿತವಾಗಿದೆ.

ಸಪ್ತಮಾತೃಕಾ ಮೂರ್ತಿಶಿಲ್ಪಗಳು

ಸಪ್ತಮಾತೃಕಾ ಮೂರ್ತಿಶಿಲ್ಪಗಳು ತಾಲೂಕಿನ ನಂದಿಗುಡಿ, ವಾಸನ, ಧೂಳೆಹೊಳೆ ಹಾಗೂ ನಂದಿತಾವರೆಗಳಲ್ಲಿ ಕಂಡು ಬಂದಿವೆ.

೧ ಊರು : ನಂದಿತಾವರೆ

೨ ತಾಲೂಕು : ಹರಿಹರ

೩ ಹೆಸರು : ಸಪ್ತಮಾತೃಕೆಯರು

೪ ಸ್ಥಳ : ಅಮೃತಲಿಂಗ ಮಾಣಿಕೇಶ್ವರ ದೇವಾಲಯದ ನವರಂಗದಲ್ಲಿದೆ

೫ ಕಾಲ : ಕ್ರಿ.ಶ. ೧೩ನೇ ಶತಮಾನ

೬ ಬಳಸಿದ ಶಿಲೆ : ಬಳಪದ ಶಿಲೆ

ಈ ಶಿಲ್ಪಿಗಳನ್ನು ಬಳಪದ ಕಲ್ಲಿನಲ್ಲಿ ಕೆತ್ತಲಾಗಿದೆ ವಿಷಮಿ ಚತುಷ್ಕೋನ ಪೀಠದ ಮೇಲೆ ಲಲಿತಾಸನದಲ್ಲಿ ಕ್ರಮವಾಗಿ ಕುಳಿತ ಈ ಮೂರ್ತಿಗಳು ಕಿರೀಟ ಮಕುಟಧಾರಿಗಳಾಗಿವೆ.

ಬ್ರಾಹ್ಮಿ, ಮಹೇಶ್ವರಿ, ಕೌಮಾರಿ ಅಥವಾ ಕಾರ್ತಿಕೇಯಿ, ವೈಷ್ಣವಿ, ವರಾಹಿ, ಇಂದ್ರಾಣಿ, ಚಾಮುಂಡಿ, ಬ್ರಾಹ್ಮಿಯ ಬಲಭಾಗದಲ್ಲಿ ವೀರಭದ್ರ ಚಾಮುಂಡಿಯ ಎಡಭಾಗದಲ್ಲಿ ಗಣೇಶನ ಶಿಲ್ಪಗಳಿವೆ. ಎಲ್ಲ ಶಿಲ್ಪಗಳ ಕಿವಿಯಲ್ಲಿ ಕುಂಡಲ, ಕೊರಳಿನಲ್ಲಿ ಹಾರಗಳಿದ್ದು ವೀರಭದ್ರನ ಮೇಲಿನ ಕೈಗಳಲ್ಲಿ ತ್ರಿಶೂಲ, ಡಮರುಗ, ಕೆಳಗಿನ ಬಲಗೈ ವರದ ಮುದ್ರೆಯಲ್ಲಿದ್ದು ಎಡಗೈಯಲ್ಲಿ ಫಲವಿದೆ ಬ್ರಾಹ್ಮಿಯು ಮೂರು ಮುಖಗಳನ್ನು ಹೊಂದಿದ್ದು ಮೇಲಿನ ಕೈಗಳಲ್ಲಿ ಅಂಕುಶ, ಪಾಶ, ಕೆಳಗಿನ ಬಲಗೈ ವರದ ಮುದ್ರೆಯಲ್ಲಿದ್ದ ಎಡಗೈಯಲ್ಲಿ ಪುಸ್ತಕವಿದೆ ಬ್ರಾಹ್ಮಿಯ ವಾಹನ ಹಂಸ[೧೬೧] ಮಹೇಶ್ವರಿಯ ಮೇಲೀನ ಕೈಗಳಲ್ಲಿ ತ್ರಿಶೂಲ ಮತ್ತು ಡಮರುಗಳಿದ್ದು ಕೆಳಗಿನ ಬಲಗೈ ವರದ ಮುದ್ರೆಯಲ್ಲಿಯೂ ಹಾಗೂ ಎಡಗೈಯಲ್ಲಿ ಫಲವಿದೆ ತಲೆಯ ಮೇಲೆ ಜಟಾಮುಕುಟವಿದ್ದು ನಂದಿ ಇವಳ ವಾಹನವಾಗಿದೆ.[೧೬೨]

ಕೌಮಾರಿಯು ಮೂರು ಮುಖಗಳನ್ನು ಹೊಂದಿದ್ದು ಮೇಲಿನ ಕೈಗಳಲ್ಲಿ ಬಾಣಗಳನ್ನು ಹಿಡಿದಿದ್ದು, ಕೆಳಗಿನ ಬಲಗೈಯಲ್ಲಿ ಪದ್ಮ, ಎಡಗೈಯಲ್ಲಿ ಫಲವಿದೆ ಇವಳ ವಾಹನ ನವಿಲು[೧೬೩] ವೈಷ್ಣವಿಯ ಮೇಲಿನ ಕೈಗಳಲ್ಲಿ ಶಂಖ, ಚಕ್ರ, ಕೆಳಗಿನ ಬಲಗೈ ವರದ ಮುದ್ರೆಯಲ್ಲಿದ್ದು ವೈಷ್ಣವಿಯ ವಾಹನ ಗರುಡ[೧೬೪] ವರಾಹಿಯ ಮೇಲಿನ ಕೈಗಳಲ್ಲಿ ಬಾಣಗಳನ್ನು ಹಿಡಿದಿದ್ದು ಕೆಳಗಿನ ಕೈಗಳಲ್ಲಿ ವಜ್ರ ಮತ್ತು ಫಲಗಳಿವೆ. ಅಭಯ ಖಡ್ಗ, ಖೇಟಕ, ದಂಡ, ಪಾಶ, ಮತ್ತು ವರದ ಮುದ್ರೆಯಲ್ಲಿದೆ ಇವಳ ವಾಹನ ಗರುಡ[೧೬೫] ಇಂದ್ರಾಣಿಯು ಚತುರ್ಭುಜಧಾರಿಯಾಗಿದ್ದು ಮೂರು ಕಣ್ಣುಗಳನ್ನು ಹೊಂದಿದೆ ತನ್ನ ಕೈಗಳಲ್ಲಿ ಕ್ರಮವಾಗಿ ಅಭಯ, ಶಕ್ತಿ, ವಜ್ರ ಮತ್ತು ವರದ ಮುದ್ರೆಯಲ್ಲಿದ್ದು ಕಿರೀಟವನ್ನು ಧರಿಸಿದ ಇಂದ್ರಾಣಿಯ ವಾಹನ ಆನೆ[೧೬೬] ಚಾಮುಂಡಿ ಮೂರ್ತಿಯ ಮೇಲಿನ ಕೈಗಳಲ್ಲಿ ತ್ರಿಶೂಲ, ಡಮರು, ಕೆಳಗಿನ ಕೈಗಳಲ್ಲಿ ಖಡ್ಗ ಮತ್ತು ಕಪಾಲಗಳಿವೆ ಇವಳ ವಾಹನ ಗೂಬೆ ಅಥವಾ ಗಿಡುಗ[೧೬೭] ಕೊನೆಯಲ್ಲಿ ಗಣೇಶನ, ಮೇಲಿನ ಕೈಗಳಲ್ಲಿ ಅಂಕುಶ, ಪಾಶಗಳಿದ್ದು ಕೆಳಗಿನ ಕೈಗಳಲ್ಲಿ ದಂತ ಮತ್ತು ಮೋದಕ ಪಾತ್ರೆಯಿದೆ.

ಈ ಎಲ್ಲಾ ಮೂರ್ತಿಗಳು ಚುತುರ್ಭುಜಧಾರಿಗಳಾಗಿದ್ದು ವೀರಭದ್ರ, ಗಣೇಶನನ್ನು ಹೊರತುಪಡಿಸಿ ಉಳಿದ ಎಲ್ಲಾ ಮೂರ್ತಿಗಳಿಗೂ ಕುಚಬಂಧಗಳಿವೆ. ಚಾಮುಂಡಿಗೆ ರುಂಡ ಮಾಲೆಯ ಯಜ್ನೋಪವೀತವಿದೆ ಹಾಗೆಯೇ ಕಾವಿಬಂಧವಿದ್ದು ಹಾಗೆಯೇ ಇಳಿವಸ್ತ್ರ ಎರಡು ಕಾಲಿ ಮಧ್ಯದಿಂದ ಇಳಿಬಿದ್ದಿದೇ ಲಲಿತಾಸನದಲ್ಲಿರುವ ಈ ಮೂರ್ತಿಗಳಿಗೆ ಪಾದಗಳಲ್ಲಿ ಕಾಲ್ಗಡಗ ಹಾಗೂ ಪಾದಸರಗಳಿವೆ ಇದೇ ಶಿಲ್ಪ ಲಕ್ಷಣಗಳನ್ನು ಹೊಂದಿದ ನಂದಿಗುಡಿ ವಾಸನ, ಹಾಗೂ

ಧೂಳೆಹೊಳೆಯ ಸಪ್ತಮಾತೃಕೆಯರ ಶಿಲ್ಪಗಳು ಸಾಮಾನ್ಯವಾಗಿ ಇದೇ ಲಕ್ಷಣಗಳನ್ನು ಹೊಂದಿವೆಯಾದರು ಮೇಲಿನ ಶಿಲ್ಪದಲ್ಲಿ ಕೌಮಾರಿ ಶಿಲ್ಪದಲ್ಲಿ ಮೂರು ಮುಖಗಳನ್ನು ಹೊಂದಿದೆ. ಆದರೆ ಉಳಿದ ಗ್ರಾಮಗಳಲ್ಲಿ ದೊರೆತ ಶಿಲ್ಪಗಳಲ್ಲಿ ಕೌಮಾರಿಗೆ ಒಂದೇ ಮುಖವಿರುವುದು ಕಂಡುಬರುತ್ತದೆ. ನಿರೂಪಣಾ ಶೈಲಿಯಲ್ಲಿ ಯಾವುದೇ ಬದಲಾವಣೆ ಇರದೆ ಇವೆಲ್ಲಾ ಕ್ರಿ.ಶ. ೧೦-೧೧ನೇ ಶತಮಾನಕ್ಕೆ ಸೇರಿದ ಶಿಲ್ಪಗಳಾಗಿವೆ.

ಸರಸ್ವತಿ ಮೂರ್ತಿಶಿಲ್ಪ

ಸರಸ್ವತಿ ಮೂರ್ತಿಶಿಲ್ಪಗಳು ಹೆಚ್ಚಾಗಿ ದೊರೆಯದೆ ಕೇವಲ ಒಂದು ಶಿಲ್ಪ ಮಾತ್ರ ದೊರೆತಿದೆ ಅದು ನಂದಿತಾವರೆಯ ಅಮೃತಲಿಂಗ ಮಾಣಿಕೇಶ್ವರ ದೇವಾಲಯದಲ್ಲಿದೆ.

೧ ಊರು	:	ನಂದಿತಾವರೆ
೨ ತಾಲೂಕು	:	ಹರಿಹರ
೩ ಹೆಸರು	:	ಸರಸ್ವತಿ
೪ ಸ್ಥಳ	:	ಗ್ರಾಮದ ಅಮೃತಲಿಂಗ ಮಾಣಿಕೇಶ್ವರ ದೇವಾಲಯದಲ್ಲಿದೆ
೫ ಕಾಲ	:	ಕ್ರಿ.ಶ. ೧೪ನೇ ಶತಮಾನ
೬ ಬಳಸಿದ ಶಿಲೆ	:	ಬಳಪದ ಶಿಲೆ

ಪಾಣಿ ಪೀಠದ ಮೇಲೆ ಚತುರ್ಭುಜಧಾರಿಯಾದ ಮೂರ್ತಿಯ ಕೈಗಳಲ್ಲಿ ಅಕ್ಷಮಾಲ, ಪಾಶ, ಅಂಕುಶ ಹಾಗೂ ಪುಸ್ತಕಗಳನ್ನು ಹಿಡಿದಿರುವಳು ತೆಳುವಾದ ಮೈಕಟ್ಟು ಹೊಂದಿರುವ ಶಿಲ್ಪವು ಉದ್ದನೆಯ ಕಿರೀಟ, ಕುಂಡಲ, ಹಾರ, ಸರ ಭುಜಭಂದ, ತೋಳಬಂದಿ, ಕಾಲ್ಗಡಗ ಇತ್ಯಾದಿ ಆಭರಣಗಳಿಂದ ಅಲಂಕೃತಗೊಂಡಿರುವಳು, ಶಿಲ್ಪದ ಸುತ್ತಲೂ ಸ್ತಂಭ, ಮಕರ ತೋರಣವಿದೆ ಪೀಠದಲ್ಲಿ ವಾಹನವಾದ ಹಂಸವನ್ನು ಕೆತ್ತಲಾಗಿತ್ತು ಶಿಲ್ಪ ನಿರೂಪಣಾ ಶೈಲಿ ಗಮನಿಸಿದ್ದರೆ. ಕ್ರಿ.ಶ. ೧೪ನೇ ಶತಮಾನದ ರಚನೆ ಎನ್ನಬಹುದು.

೪.೩.೪ ಇತರೆ ಮೂರ್ತಿಶಿಲ್ಪಗಳು

ಹರಿಹರ ಮೂರ್ತಿಗಳು

ಎಡ ಅರ್ಧಭಾಗದಲ್ಲಿ ವಿಷ್ಣು, ಬಲ ಅರ್ಧಭಾಗಕ್ಕೆ ಶಿವ, ಇವರಿಬ್ಬರಿಂದ ಸೇರ್ಪಡೆಯಾದ ಮೂರ್ತಿಗಳನ್ನು ಹರಿಹರೇಶ್ವರ ಮೂರ್ತಿಗಳೆಂದು ಕರೆಯುತ್ತಾರೆ. ವಿಷ್ಣು ಧರ್ಮೋತ್ತರ ಪುರಾಣ ಮತ್ತು ದೇವತಾ ಮೂರ್ತಿ ಪ್ರಕರಣ ಗ್ರಂಥಗಳು ಈ ಮೂರ್ತಿಯ ಕುರಿತು ಉಲ್ಲೇಖಿಸುತ್ತವೆ.[೧೩೮] ವಾಮನ ಪುರಾಣ ಸುಪ್ರಭೇದಾಗಮಗಳು[೧೩೯] ಕೂಡ ಈ ಮೂರ್ತಿಯನ್ನು ಉಲ್ಲೇಖಿಸುತ್ತವೆ. ಹರಿಹರರಲ್ಲಿ ಭೇದವಿಲ್ಲ ಅವರಿಬ್ಬರೂ ಒಂದೇ[೧೪೦] ಎಂಬುದನ್ನು ತೋರಿಸಲು ಈ ರೀತಿಯ ಪರಂಪರೆಯು ಹುಟ್ಟಿರಬೇಕೆನಿಸುತ್ತದೆ.

೧ ಊರು : ಹರಿಹರ

೨ ತಾಲೂಕು : ಹರಿಹರ

೩ ಹೆಸರು : ಹರಿಹರೇಶ್ವರ

೪ ಸ್ಥಳ : ಹರಿಹರೇಶ್ವರ ದೇವಾಲಯದ ಗರ್ಭಗುಡಿಯಲ್ಲಿದೆ

೫ ಕಾಲ : ಕ್ರಿಶ. ಸು. ೨-೬ನೇ ಶತಮಾನ[೧೪೧]

೬ ಬಳಸಿದ ಶಿಲೆ : ಬಳಪದ ಶಿಲೆ

ಕೂರ್ಮ ಪೀಠದ ಮೇಲೆ[೧೪೨] ಸಮಭಂಗಿಯಲ್ಲಿ ಈ ಮೂರ್ತಿ ನಿಂತಿದ್ದು ಅಡಿಯಿಂದ ಮುಡಿಯವರೆಗೆ ಹರಿಹರವನ್ನು ಪ್ರತ್ಯೇಕಿಸುವ ಚಿಹ್ನೆಗಳು ಈ ವಿಗ್ರಹದಲ್ಲಿ ಕಾಣಬರುತ್ತವೆ.[೧೪೩] ಮೂರ್ತಿಯ ಬಲಭಾಗಕ್ಕೆ ಜಟಾಧಾರಿ ಶಿವ ಆ ಜಟೆಯಲ್ಲಿ ಅರ್ಧಚಂದ್ರ ಕಿವಿಯಲ್ಲಿ ಸರ್ಪಕುಂಡಲಗಳಿವೆ ಹಣೆಯಲ್ಲಿ ಅರ್ಧಹಣೆಗಣ್ಣಿದೆ ಕೈಗಳಲ್ಲಿ ಕಡಗ, ಮೇಲಿನ ಕೈಯಲ್ಲಿ ತ್ರಿಶೂಲವಿದ್ದು. ಕೆಳಗಿನ ಕೈ ಅಭಯ ಮುದ್ರೆಯಲ್ಲಿದೆ ಹುಲಿ ಚರ್ಮದ ಹೊದಿಕೆ ಅರ್ಧ ಭಾಗಕ್ಕಿದ್ದು ಪಾದಭಾಗ ತ್ರುಟಿತವಾಗಿರುವುದರಿಂದ ಕಾಣಬರುವುದಿಲ್ಲ ಕಾಲಿನ ಬಲಭಾಗಕ್ಕೆ ಕಿರೀಟ ಮಕುಟಧಾರಿ ಪಾರ್ವತಿ ಅಭಯಮುದ್ರೆಯಲ್ಲಿದ್ದಾಳೆ ಎಡಗೈಯಲ್ಲಿ ಖಡ್ಗ ಹಿಡಿದು ಅಲಂಕಾರ ಭೂಷಿತವಾದ ಈ ಶಿಲ್ಪವೂ ಸ್ಥಾನಿಕವಾಗಿದೆ ಪಾರ್ವತಿಯ ಕೆಳಭಾಗಕ್ಕೆ ಗಣೇಶ ಆಸೀನನಾಗಿರುವಂತೆ ಉಬ್ಬು ಶಿಲ್ಪವನ್ನು ಕೆತ್ತಲಾಗಿದೆ.

ಕಿರೀಟಮುಕುಟಧಾರಿಯಾದ ವಿಷ್ಣುವಿನ ಮೂರ್ತಿಯ ಅರ್ಧಭಾಗ ಎಡಕ್ಕಿದೆ ಕಿವಿಯಲ್ಲಿ ಮಕರ ಕುಂಡಲವಿದ್ದು ಕೊರಳಲ್ಲಿ ವಿವಿಧ ಬಗೆಯ ಹಾರಗಳಿವೆ ಕೈಗಳಲ್ಲಿ ಕೇಯೂರ ಕೈಕಡಗ ಮೇಲಿನ ಕೈಯಲ್ಲಿ ಚಕ್ರವಿದ್ದು ಎಡಗೈಯಲ್ಲಿ ಶಂಖವನ್ನು ಹಿಡಿದಿರುವಂತೆ ಕೆತ್ತಲಾಗಿದೆ ಈ ಶಂಖವನ್ನು ಹಿಡಿದಿರುವ ರೀತಿ ವಿಶೇಷವಾಗಿದೆ ವಿಷ್ಣುವಿನ ಎಡಗಾಲಿನ ಭಾಗಕ್ಕೆ ಕಿರೀಟ ಮಕುಟಧಾರಿಯಾದ ಲಕ್ಷ್ಮೀ ಶಿಲ್ಪವಿದೆ ಬಲಗೈ ಅಭಯ ಮುದ್ರೆಯಲ್ಲಿದ್ದು ಎಡಗೈಯನ್ನು ಇಳಿಬಿಟ್ಟ ರೀತಿಯಲ್ಲಿದೆ ಲಕ್ಷ್ಮೀ ಕೆಳಭಾಗಕ್ಕೆ ಋಷ್ಯಶೃಂಗ[೧೪೪] ಸಮಭಂಗಿಯಲ್ಲಿ ನಿಂತಿದ್ದು ಸುತ್ತಲೂ ಪ್ರಭಾವಳಿ ಇದೆ.

ಎಡಗಡೆ ಭುಜ ಮೂಗು ಮತ್ತು ಬಾಯಿ ಭಾಗವು ತ್ರುಟಿತವಾಗಿದೆ. ಅದನ್ನು ಇತ್ತೀಚಿಗೆ ಸಿಮೆಂಟ್‌ನಿಂದ ಸರಿಪಡಿಸಲಾಗಿದೆ. ಬಲತೋಳು ಮತ್ತು ಎಡಗಡೆಯ ಭುಜ ಹಾಗೂ ಆ ತೋಳುಗಳನ್ನು ಈಚೆಗೆ ಹೊಸದಾಗಿ ಮೂಲ ಕೈಗಳೊಡನೆ ಜೋಡಿಸಲಾಗಿದೆ.[೧೪೫] ಈ ಮೂರ್ತಿಯ ಲಕ್ಷಣಗಳ ಆಧಾರದ ಮೇಲೆ ಇದು ಬಾದಾಮಿ ಚಾಲುಕ್ಯರ ಕಾಲದ್ದೆಂದು ಹೇಳಬಹುದು.[೧೪೬] ಮೂರ್ತಿಯ ಪ್ರತಿಮಾ ಲಕ್ಷಣಗಳನ್ನು ಆಧರಿಸಿ ವಿದ್ವಾಂಸರು ವಿವಿಧ ಕಾಲಘಟ್ಟಗಳನ್ನು ಗುರುತಿಸಿದ್ದಾರೆ.

ಮೂರ್ತಿಯ ಮುಕುಟ, ಆಭರಣಗಳ ಶೈಲಿ, ಧೋತ್ರ ಉಟ್ಟ ರೀತಿ, ಮತ್ತು ಕಟಿಸೂತ್ರ ಮಾದರಿ, ದೈಪಿಕ, ಯಜ್ಞೋಪವೀತ ಹಾಗೂ ವೈಜಯಂತಿ ಇಲ್ಲದಿರುವಿಕೆ ಇವುಗಳೆಲ್ಲವುಗಳಿಂದ ಈ ಮೂರ್ತಿ ಐದು ಇಲ್ಲವೆ ಆರನೇ ಶತಮಾನದ ಅದಿ ಭಾಗದೆಂದು ಅ. ಸುಂದರ ಅವರು ಅಭಿಪ್ರಾಯ ಪಟ್ಟಿದ್ದಾರೆ.[೧೪೭] ಗರ್ಭಗೃಹದಲ್ಲಿ ಭವ್ಯವಾದ ಆದರೆ ಭಿನ್ನವಾದ ಹರಿಹರ ಮೂರ್ತಿ ಇದೆ ಸ್ವಲ್ಪ ಮಟ್ಟಿಗೆ ತೆಳುಹಸಿರಿನ ಅಗ್ನಿ ಶಿಲೆಯ[೧೪೮] ಮೂರ್ತಿ ಇದು ಆರು ಅಡಿಗಳಿಗಿಂತಲೂ ಹೆಚ್ಚಿನ ಪ್ರಮಾಣದ್ದೆಂದು[೧೪೯] ಹೇಳಿ ಮೂರ್ತಿಯ ಲಕ್ಷಣಗಳನ್ನು ಗಮನಿಸಿದರೆ ಇದು ಕಲ್ಯಾಣ ಚಾಲುಕ್ಯರ ಆರಂಭಕಾಲಕ್ಕೆ ಸೇರಿದ ಮೂರ್ತಿ ಎನಿಸುತ್ತದೆ. ಎಂದು ಉಲ್ಲೇಖಿಸಿದ್ದಾರೆ.[೧೫೦] ಇದೇ ವಾದವನ್ನು ಎಂ.ಎಚ್. ಕೃಷ್ಣರವರು ಇದಕ್ಕೂ ಪೂರ್ವದಲ್ಲಿ ಉಲ್ಲೇಖಿಸಿದ್ದಾರೆ.[೧೫೧]

ಹರಿಹರದ ಶಾಸನಗಳಲ್ಲಿ ಬನವಾಸಿ ಕದಂಬರಿಂದ ಮೊದಲಾಗಿ, ಬಾದಾಮಿ ಚಾಲುಕ್ಯರು, ಕಲ್ಯಾಣದ ಚಾಲುಕ್ಯರು, ಉಚ್ಚಂಗಿ ಪಾಂಡ್ಯರು, ಹೊಯ್ಸಳರನ್ನೊಳಗೊಂಡಂತೆ ಬ್ರಿಟಿಷ್ ಆಡಳಿತದವರೆಗೂ ದಾಖಲೆಗಳು ದೊರೆಯುವುದರಿಂದ ಅಲ್ಲದೆ ಈ ಶಿಲ್ಪವು ೫ ಅಥವಾ ೬ನೇ ಶತಮಾನದ ಆದಿ ಭಾಗದಲ್ಲಿ ನಿರ್ಮಾಣಗೊಂಡಿರುವ ಸಾಧ್ಯತೆ ಇದೆ[೧೫೨] ಎನ್ನುವ ಅ. ಸುಂದರ ಅವರ ಅಭಿಪ್ರಾಯವನ್ನು ಒಪ್ಪಬಹುದಾಗಿದೆ. ಈ ಮೂರ್ತಿಯ ಬಗೆಗೆ ಇತ್ತೀಚಿಗೆ ಡಾ. ಜಗದೀಶ್ ಅವರು ಶೋಧಿಸಿರುವಂತೆ ಕದಂಬರ ಅರಸ ಕಾಕುಸ್ಥವರ್ಮನ ಮೊಮ್ಮಗನು ಹರಿಹರದಲ್ಲಿ ಪಟ್ಟಾಭಿಷಿಕ್ತನಾಗಿದ್ದಾನೆ ಎಂದು ಹರಿಹರ ಶ್ರೀನಿವಾಸರಾವ್[೧೫೩] ಉಲ್ಲೇಖಿಸಿದ್ದಾರೆ ಇದು ನಿಜವೇ ಆಗಿದ್ದಲ್ಲಿ ಹರಿಹರ ಪಟ್ಟಣ ಸಾಂಸ್ಕೃತಿಕವಾಗಿ ರಾಜಕೀಯವಾಗಿ ಕ್ರಿ.ಶ. ೧೨ನೇ ಶತಮಾನಕ್ಕೆ ಸೇರುತ್ತದೆ.

ಕಾಷ್ಠ ಮೂರ್ತಿಗಳು

ಮರದಲ್ಲಿ ಮೂರ್ತಿಗಳನ್ನು ಕೆತ್ತುವುದು ಇತರೆ ಮೂರ್ತಿಶಿಲ್ಪಗಳ ಪರಂಪರೆಯಂತೆ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಮರದಿಂದ ತಯಾರಿಸಲಾದ ಮೂರ್ತಿಗಳನ್ನು ಕಾಷ್ಠಶಿಲ್ಪವೆಂದು ಹೇಳಲಾಗುತ್ತದೆ. ಕಾಷ್ಠ ಶಿಲ್ಪವನ್ನು ನಾವು ಗುರುತಿಸಬೇಕಾದರೆ ದೇವಾಲಯಗಳ ಬಳಿ ಇರುವ ರಥಗಳನ್ನು ಗಮನಸಬೇಕಾಗುತ್ತದೆ ಹರಿಹರ ತಾಲ್ಲೂಕಿನಲ್ಲಿ ಸಾರಥಿ, ವಾಸನ[೧೫೪] ಧೂಳೆಹೊಳೆ ಮತ್ತು ಬಾನುವಳ್ಳಿಗಳಲ್ಲಿ ದೇವಾಲಯ ಹಾಗೂ ರಥದಲ್ಲಿ ಕೆತ್ತಿದ ಮೂರ್ತಿಗಳು ಕಾಣಬರುತ್ತದೆ.

೪.೪. ಸ್ಮಾರಕ ಶಿಲ್ಪ

'ಸ್ಮಾರಕ ಶಿಲ್ಪ' ಎಂಬ ಪದ ನಿರ್ದಿಷ್ಟ ಪ್ರದೇಶಕ್ಕೆ ಸೀಮಿತವಾಗಿಲ್ಲ. ಇದರ ವ್ಯಾಪ್ತಿ ದೊಡ್ಡದು ಸ್ಮಾರಕ ಶಿಲ್ಪ ಎಂದರೆ ಒಂದು ಮಾಧ್ಯಮದ ಮೂಲಕ ಉದ್ದ, ಅಗಲ ಮತ್ತು ದಪ್ಪವನ್ನು ತೋರಿಸುವ ಆಕೃತಿ ಎನ್ನಬಹುದು ಈ ಆಕೃತಿ ಕಲ್ಲಿನದಾಗಿರಬಹುದು. ಮರದ ಕೆತ್ತನೆ ಇರಬಹುದು. ಸ್ಮಾರಕ ಶಿಲ್ಪಕ್ಕೆ ತನ್ನದೇ ಅದ ಕಟ್ಟಳೆಗಳು ಇದ್ದರೂ ಕೂಡ ಕೆಲವೊಮ್ಮೆ ಶಿಲ್ಪದಲ್ಲಿ ನಡೆದು ಬಂದ ಜನರ ನಂಬಿಕೆ ಆಚರಣೆಗಳೆ ಇಲ್ಲಿ ಪ್ರಧಾನವಾಗಿರುತ್ತದೆ. ಅಂದರೆ ಶಾಸ್ತ್ರಬದ್ಧವನ್ನೊಳಗೊಂಡ ಚೌಕಟ್ಟು ಸ್ಮಾರಕ ಶಿಲ್ಪದಲ್ಲಿ ಕಂಡು ಬರುವುದಿಲ್ಲ ಸ್ಮಾರಕ ಶಿಲ್ಪಗಳು

ಹೆಚ್ಚಾಗಿ ಶಾಸನ ರಹಿತ ಶಿಲ್ಪಗಳನ್ನೆ ಅಧ್ಯಮನ ಮಾಡುತ್ತೇವೆಯಾದರು ಸಂದರ್ಭನುಸಾರವಾಗಿ ಶಾಸನಶಿಲ್ಪಗಳು ಕೂಡ ಪ್ರಸ್ತುತ ಅಧ್ಯನಕ್ಕೆ ಬಳಗಾಗುತ್ತವೆ. ಶಾಸನ ಶಿಲ್ಪದ ಅಧ್ಯಯನ ಅಂದರೆ ಶಾಸನಗಳ ಮೇಲಿರುವ ಉಬ್ಬ ಶಿಲ್ಪಗಳ ಅಧ್ಯಯನವೇ ಆಗಿದೆ.[೧೫೫] ಇತಿಹಾನಕ್ಕೆ ಕೈಗನ್ನಡಿಯಂತಿರುವ ಸ್ಮಾರಕ ಶಿಲ್ಪಗಳು ರಾಜಕೀಯ ಆಡಳಿತಕ್ಕಷ್ಟೆ ಪ್ರತಿಬಿಂಬತವಾಗಿರದೆ ಜನಸಾಮಾನ್ಯರ ನಿರೂಪಿತ ಬದಕನ್ನ ವ್ಯಕ್ತಪಡಿಸುವ ಮಾಧ್ಯಮಗಳಾಗಿವೆ.

ನಾವು ಒಂದು ಸ್ಮಾರಕ ಶಿಲ್ಪವನ್ನು ನೋಡುವಾಗ ನಮ್ಮ ಮನಸ್ಥಿನಲ್ಲಿ ಮೂಡುವ ಭಾವನೆಗಳೇ ಬೇರೆ ಬೇರೆಯಾಗಿರುತ್ತದೆ. ಶಾಸನ ಶಿಲ್ಪ ನೋಡಿದಾಗ ಮನಸ್ಸಿನಲ್ಲಿ ಮೂಡುವ ಕಲ್ಪನೆಗಳೇ ಬೇರೆಯಾಗಿರುತ್ತದೆ. ಅಂದರೆ ಧಾರ್ಮಿಕ ಹಿನ್ನೆಲೆಯಿಂದ ನಿರ್ಮಿಸಿದ ಶಿಲ್ಪವಾದರೆ ಹೆಚ್ಚಿನ ಮಟ್ಟಿಗೆ ನಮ್ಮ ಭಾವನೆಗಳೂ ಧಾರ್ಮಿಕ ಚೌಕಟ್ಟಿಗೆ ಸಿಮಿತವಾಗುತ್ತದೆ. ಸ್ಮಾರಕ ಶಿಲ್ಪಗಳಲ್ಲಿ ಮೇಲ್ಭಾಗದಲ್ಲಿ ಆಯಾಯ ಧರ್ಮಕ್ಕನುಗುಣವಾಗಿ ದೇವರನ್ನ ಕೆತ್ತಲಾಗಿರುತ್ತದೆ. ಉದಾಹರಣೆಗೆ ಶಿವಲಿಂಗವನ್ನು ನೋಡಿದಾಗ ಧಾರ್ಮಿಕ ಭಾವನೆಗಳು ಮೂಡುತ್ತದೆ ಆದರೆ ದೇವಾಲಯದ ಶಿಖರದಲ್ಲೊ ಅಧಿಷ್ಠಾನದಲ್ಲೋ ಹೆಣ್ಣಿನ ಅಥವಾ ಕಾಮಕ್ರೀಡೆಯಲ್ಲಿ ತೊಡಿಗಿದ ಶಿಲ್ಪಗಳನ್ನು ನೋಡಿದಾಗ ಅಥವಾ ರತಿ ಮನ್ಮಥರನ್ನು ನೋಡಿದಾಗ ನಮ್ಮ ಮನಸ್ಸಿನಲ್ಲಿ ಮೂಡುವ ಭಾವನೆಗಳೇ ಬೇರೆ ಬೇರೆಯಾಗಿರುತ್ತದೆ ಮನಸ್ಸಿನಲ್ಲಿ ಮೂಡುವ ಭಾವನೆ ಏನೇ ಇರಲಿ ಸ್ಮಾರಕ ಶಿಲ್ಪದ ಮೂಲಕ ಮೂಡಿದ ಶಿಲ್ಪಗಳು ಅಂದಿನ ಸಮಾಜದ ಸಂಸ್ಕೃತಿಯ ಪ್ರತಿಬಿಂಬವಾಗಿದೆ. ಮುಖ್ಯವಾಗಿ ಇವು ಅಂದಿನ ನಂಬಿಕೆ ಆಚರಣೆಗಳೇ ಅಗಿರುತ್ತವೆ.

ಸ್ಮಾರಕ ಶಿಲ್ಪ ಅಥವಾ ಶಾಸನ ಶಿಲ್ಪದ ಕತೆಯು ಶಿಲ್ಪಿಯ ಅಥವಾ ಕಲಾಕುರಸ ಕಲೆಯನ್ನು ಬಿಂಬಿಸುತ್ತವೆ. ಶಾಸನ ಕಲೆ ಎಂಬುದು ವಸ್ತುವಿನ ನಿರ್ಮಾಣವನ್ನು ಅವಲಂಭಿಸಿದೆ. ಅಂದರೆ ಕಲ್ಲಿನಲ್ಲಿ ನಿರ್ಮಿತವಾಗುವ ಕಲಾ ಸೌಂದರ್ಯ ಬೆಣಚು ಕಲ್ಲಿನಿಂದ ಆಗಲಿಕ್ಕಿಲ್ಲ[೧೫೬] ಹೀಗಾಗಿ ಕಲಾ ಸೌಂದರ್ಯ ಎಂಬುದು ಶಿಲ್ಪಿಯ ಸಾಮಾಥ್ಯದೊಂದಿಗೆ ಯಾವ ಕಲ್ಲೆಂಬುದು ಇಲ್ಲಿ ಪ್ರಾಧ್ಯಾನ್ಯತೆ ಪಡೆಯುತ್ತದೆ. ಶಾಸನದಲ್ಲಿ ಶಿಲ್ಪಕಲೆ ಮೂಡಲು ಕಾರಣ ಅಕ್ಷರದಿಂದ ತಿಳಿಯದ ವಿಷಯವನ್ನು ಕಲೆಯಿಂದ ತಿಳಿಯ ಬಹುದಾಗಿದೆ. ಶಾಸನದಲ್ಲಿ ಉಬ್ಬು ಶಿಲ್ಪ ಮಾಡಲು ಇದೂ ಒಂದು ಕಾರಣವಾದರೆ ಇನ್ನೊಂದು ಕಾರಣ ಜನಪದರ ನಂಬಿಕೆಗಳೇ ಕಾರಣವಿರಬಹುದು. ಸ್ಮಾರಕ ಶಿಲ್ಪದ ನಿರ್ಮಾಣ ಮಾಡುವಾಗ ಕಲಾಕಾರ ಅಥವಾ ಶಿಲ್ಪ ಶಿಲೆ, ಮರವನ್ನು ಮಾಧ್ಯವಾಗಿ ಬಳಸುತ್ತಾನೆ. [ಪ್ರಸ್ತುತ ಅಧ್ಯಯನ ಕ್ಷೇತ್ರದಲ್ಲಿ ಮರ (ಕಾಷ್ಠ)ದ ಮಾಧ್ಯಮದಿಂದ ಮಾಡಿದ ಸ್ಮಾರಕ ಶಿಲ್ಪಗಳು ಪ್ರತ್ಯೇಕವಾಗಿ ಕಂಡು ಬರುವುದಿಲ್ಲ.] ಅಂದರೆ ಶಿಲ್ಪಿಯ ಸಾಮಾರ್ಥ್ಯಕ್ಕೆ ತಕ್ಕಂತೆ ಸ್ಮಾರಕ ಶಿಲ್ಪ ಅಥವಾ ಶಾಸನದಲ್ಲಿ ನಿರ್ಮಾಣಗೊಳ್ಳುತ್ತದೆ. ಹೆಚ್ಚಿನ ಮಟ್ಟಿಗೆ ಶಾಸನಶಿಲ್ಪದಲ್ಲಿ ಶಿಲೆಯೇ ಮಾಧ್ಯಮವಾಗಿ ಬಳಕೆಯಾಗಿದೆ ಎನ್ನಬಹುದು.

ಸ್ಮಾರಕ ಶಿಲ್ಪಕ್ಕೂ ಮತ್ತು ಶಾಸನ ಶಿಲ್ಪಕ್ಕೂ ಇರುವ ವ್ಯತ್ಯಾಸವೆಂದರೆ ಶಾಸನ ಸಹಿತ ಶಿಲ್ಪಗಳಿಗೆ ಶಾಸನ ಶಿಲ್ಪಗಳು, ಎಂದರೆ ಶಾಸನ ರಹಿತ ಶಿಲ್ಪಗಳಿಗೆ ಸ್ಮಾರಕ ಶಿಲ್ಪಗಳು ಎನ್ನಲಾಗುತ್ತದೆ. ಶಾಸನ

ರಹಿತ ಇರುವ ಶಿಲ್ಪಗಳಿಗೆ ಶಾಸನ ಎಂಬ ಪದವನ್ನು ಉಲ್ಲೇಖ ಮಾಡುವ ಅವಶ್ಯಕತೆಯಿಲ್ಲ ಎಂಬುದು ನನ್ನ ಅಭಿಪ್ರಾಯವಾಗಿದೆ. ಪ್ರಸ್ತುತ ವಿಷಯ ಅಧ್ಯಯನ ಹರಿಹರ ತಾಲ್ಲೂಕಿನ ಸಂಬಂಧಿಸಿದೆ. ಇಲ್ಲಿ ದೊರೆತ ಸ್ಮಾರಕ ಶಿಲ್ಪಗಳನ್ನು ಈ ಕೆಳಗಿನಂತೆ ವಿಂಗಡಿಸಿಕೊಂಡು ವಿಶ್ಲೇಷಲಾಗಿದೆ.

೧. ವೀರಗಲ್ಲು

೨. ತುರುಗೋಳ್ ವೀರಗಲ್ಲು

೩. ಮಹಾಸತಿಗಲ್ಲು

೪.೪.೧ ವೀರಗಲ್ಲು

ಯುದ್ಧದಲ್ಲಿ ಹೋರಾಡಿ ಮಡಿದ ನಂತರ ಆತನ ನೆನಪಿಗಾಗಿ ನಿಲ್ಲಿಸುತ್ತಿದ್ದಾ ಕಲ್ಲುಗಳೇ ವೀರಗಲ್ಲುಗಳು ಯುದ್ಧದಲ್ಲಿ ಸೋಲುವುದು ಅಥವಾ ಗೆದ್ದು ಬರುವುದು ಎರಡಕ್ಕೂ ಸಮಾನ ಗೌರವವಿದೆ ಮೃತ್ಯಕ್ಷಣಿಕ. ದುಃಖ ತಂದರೆ ಮಾನಭಂಗ ದಿನನಿತ್ಯವೂ ದುಃಖವನ್ನುಂಟುಮಾಡುತ್ತದೆ.[೧೫೭] ಯುದ್ಧದಲ್ಲಿ ಗೆದ್ದರೆ ಇಹಲೋಕ, ಸತ್ತರೆ ಪರಲೋಕದಲ್ಲಿ ಸುಖಿಸಬಹುದು.

ಜಿತೇನ ಲಭ್ಯತೇ ಲಕ್ಷ್ಮೀ ಮೃತೇನಾಪಿ ಸುರಾಂಗನಾ

ಕ್ಷಣ ವಿಧ್ವಂಸಿನಿ ಕಾಯೇಕಾ ಚಿಂತಾ ಮರಣೇರಣೆ[೧೫೮]

ಯುದ್ಧದಲ್ಲಿ ಹೋರಾಡುವುದರಿಂದ ಆಗುವ ಫಲ ಈ ಶ್ಲೋಕದಲ್ಲಿದೆ. ವೀರನ ಪರಾಕ್ರಮಗಳನ್ನು ಉಲ್ಲೇಖಿಸುವ ವೀರಗಲ್ಲುಗಳಲ್ಲಿ ಸಾಮಾನ್ಯವಾಗಿ ಮೂರು ಹಂತಗಳಿರುತ್ತವೆ. ಕೆಳಗಿನ ಹಂತದಲ್ಲಿ ಅವನ ಹೋರಾಟದ ಚಿತ್ರ, ಮಧ್ಯದ ಹಂತದಲ್ಲಿ ಆತನನ್ನು ಕೈಲಾಸಕ್ಕೆ ಕರೆದುಕೊಂಸು ಹೋಗುತ್ತಿರುವ ದೇವತಾ ಸ್ತ್ರೀಯರು, ಮೇಲಿನ ಪಟ್ಟಿಕೆಯಲ್ಲಿ ಆತನು ಶಿವಸಾನಿಧ್ಯವನ್ನು ಪಡೆದು ಪೂಜೆ ಮಾಡುತ್ತಿರುವ ದೃಶ್ಯ ಸಾಮಾನ್ಯವಾಗಿ ಚಿತ್ರಿತವಾಗಿರುತ್ತದೆ. ವೀರನು ದೇವಲೋಕ ಸೇರಿದ ಮರಷನಾದುದರಿಂದ ವೀರಗಲ್ಲಿಗೆ ಪೂಜೆ ಸಲ್ಲಿಸಲು ದತ್ತಿಬಿಟ್ಟಿರುವ ಉದಾಹರಣೆಯೂ ಇದೆ[೧೫೯]

ವೀರಗಲ್ಲುಗಳಲ್ಲಿ ಶಾಸನ ಶಿಲ್ಪಗಳು ಮತ್ತು ಸ್ಮಾರಕ ಶಿಲ್ಪಗಳು ಎಂದು ಎರಡು ವಿಧಗಳಿವೆ. ಶಿಲ್ಪದ ಜೊತೆ ಶಾಸನ ಇರುವುದು. ಶಾಸನೋಕ್ತ ಶಿಲ್ಪ ಶಾಸನಗಳು ಇಲ್ಲದೇ ಒಂದೇ ವೀರಶಿಲ್ಪವಾದರೆ ಅವು ಸ್ಮಾರಕಶಿಲ್ಪ ತುರುಗೊಳ್ ಪೆಣ್ಬುಯಲ್, ಊರಳಿವು, ಗಡಿಕಾಳಗ ಶಿಲ್ಪ, ಕಳ್ಳರೊಡನೆ ಹೋರಾಟ ನಿರತರ ಶಿಲ್ಪ ಹಂದಿಬೇಟೆ ಶಾಸನ ಶಿಲ್ಪ. ಹುಲಿಬೇಟೆ ಶಾಸನಶಿಲ್ಪ. ಹಾವುಬೇಟೆ, ಆನೆ ಬೇಟೆ, ಮೊಸಳೆ ಹೋರಾಟ ಶಿಲ್ಪ, ಜಿಂಕೆ ಬೇಟೆ ಶಿಲ್ಪ ನಾಯಿ–ಹಂದಿ ಹೋರಾಟಶಿಲ್ಪ. ನಾಯಿ–ಹುಲಿ ಹೋರಾಟಶಿಲ್ಪ. ವೀರಸ್ತಂಭ ಶಿಲ್ಪ ಇವೆಲ್ಲಾ ಸ್ಮಾರಕ ಶಿಲ್ಪಗಳಾಗಿವೆ. ಪ್ರಸ್ತುತ ಅಧ್ಯಯನ ಕ್ಷೇತ್ರದಲ್ಲಿ ದೊರೆತ ಶಾಸನೋಕ್ತ ವೀರಗಲ್ಲು ಶಿಲ್ಪ ಹಾಗೂ ವೀರಗಲ್ಲು ಸ್ಮಾರಕ ಶಿಲ್ಪಗಳನ್ನು ಕೆಳಗಿನಂತೆ ವಿಶ್ಲೇಷಿಸಲಾಗಿದೆ.

ಚಿಕ್ಕಬಿದರೆಯಲ್ಲಿನ ಕಲ್ಲೇಶ್ವರ ದೇವಾಲಯ ಬಳಿಯಿರುವ ಮತ್ತೊಂದು ವೀರಗಲ್ಲಿನಲ್ಲಿ ಭರ್ಜಿ ಹಿಡಿದು ಪರಸ್ಪರ ಯುದ್ಧದಲ್ಲಿ ತೊಡಗಿರುವಂತೆ, ನಂತರ ಮರಣ ಹೊಂದಿದ ವೀರನನ್ನು ಕೈಲಾಸಕ್ಕೆ ಕೊಂಡೊಯ್ಯುತ್ತಿರುವ ದೃಶ್ಯ ಉಳಿದ ವೀರಗಲ್ಲುಗಳಲ್ಲಿ ಕಾಣಬಹುದು. ಇಲ್ಲಿಕಂಡು ಬರುವಂತಹ ವೀರಗಲ್ಲುಗಳಲ್ಲಿ ಹೋರಾಡಿ ಮಡಿದ ವ್ಯಕ್ತಿಗಳ ಹೆಸರುಗಳು ಇಲ್ಲಿನ ವೀರಗಲ್ಲು ಶಾಸನಗಳಿಂದ ತಿಳಿದುಬರುತ್ತದೆ. ಕ್ರಿ.ಶ. ೧೨೬೫ರ ವೀರಗಲ್ಲು ಶಾಸನದಲ್ಲಿ ಶಾಸದಲ್ಲಿ[೧೬೦] ಅಮ್ಮೆಯನಾಯ್ಕ ಮತ್ತು ಕ್ರಿ.ಶ. ೧೨೬೭ರ ವೀರಗಲ್ಲು[೧೬೧] ಶಾಸನದಲ್ಲಿ ಅಮ್ಮೆಯನಾಯ್ಕನ ಮಗ ಮಾಹಿನಾಯಕ ಹಾಗೆಯೇ ಕಾಲಮಾನವಿಲ್ಲದ ವೀರಗಲ್ಲು ಶಾಸನದಲಿ[೧೬೨] ಪಾಯಿನಾಯಕನ ಮಗ ಲೂಯಿನಾಯಕ ಎಂದಿದೆ. ವಾಸನದಲ್ಲಿನ ಚನ್ನಕೇಶವ ದೇವಾಲಯ ಬಳಿಯ ವೀರಗಲ್ಲಿನ ಕೆಳಭಾಗದಲ್ಲಿ ವೀರನೊಬ್ಬ ಜಟಾಮಕಟಧಾರಿಯಾಗಿದ್ದು ಕೈಯಲ್ಲಿ ಕಡಗ, ಕೇಯೂರಧರಿಸಿದ್ದ ಎಡಗೈಯಲ್ಲಿ ಗುರಾಣಿ, ಖಡ್ಗ ಹಿಡಿದು ಶತ್ರುಗಳೊಡನೆ ಹೋರಾಡುತ್ತಿದ್ದಾನೆ. ಆಲೀಢ್ ಭಂಗಿಯಲ್ಲಿರುವ ಈ ಮೂರ್ತಿ ನಡುವಿಗೆ ನಡುಬಂಧ, ಕಠಾರಿ ಧರಿಸಿದೆ. ಕಾಲಿನಲ್ಲಿ ಕಡಗವಿದ್ದು ಇತರ ರೊಡನೆ ಹೋರಾಡುತ್ತಿದ್ದಾನೆ. ಆತನ ಕಾಲಕೆಳಗೆ ಇಬ್ಬರು ಮರಣ ಹೊಂದಿದ್ದು ಅವರನ್ನು ತುಳಿಯುತ್ತಲೆ ಹೋರಾಡುತ್ತಿದ್ದಾನೆ. ಎರಡನೇ ಹಂತದಲ್ಲಿ ಪುಷ್ಪಕ ವಿಮಾನದಲ್ಲಿ ಈ ವೀರನನ್ನು ಕುಳ್ಳಿರಿಸಿಕೊಂಡು ನಾಲ್ಕು ಜನ ಅಪ್ಸರೆಯರು ಕೈಲಾಸಕ್ಕೆ ಕರೆದೊಯ್ಯುತ್ತಿದ್ದಾರೆ. ಇಲ್ಲಿನ ಇಬ್ಬರೂ ಅಪ್ಸರೆಯರು ಚಾಮರವನ್ನು ಹಿಡಿದ್ದಾರೆ. ಮೂರನೇ ಹಂತದಲ್ಲಿ ವೀರನು ಕೈಲಾಸದಲ್ಲಿ ಅಂಜಲಿ ಬದ್ಧನಾಗಿ ಪದ್ಮಾಸನದಲ್ಲಿ ಕುಳಿತಿರುವಂತೆ ಕೆತ್ತಲಾಗಿದೆ. ಅಲ್ಲಿಯೇ ಇರುವ ಲಿಂಗಕ್ಕೆ ಯತಿಯೊಬ್ಬ ಪೂಜಿಸುತ್ತಿರುವಂತಿದೆ. ಆ ಯತಿಯು ಕಿವಿಯಲ್ಲಿ ಕುಂಡಲ, ಯಜ್ಞೋಪವಿತಗಳನ್ನು ಧರಿಸಿದ್ದಾನೆ. ಲಿಂಗದ ಮುಂದೆ ನಂದಿ ಇದ್ದು. ಅದರ ಮೇಲ್ಭಾಗದಲ್ಲಿ ಸೂರ್ಯ-ಚಂದ್ರರಿದ್ದಾನೆ. ಇಲ್ಲಿನ ವೀರ ಯಜ್ಞೋಪವೀತ ಧರಿಸಿದ್ದು. ಜಟೆಯನ್ನು ವಿಶೇಷ ರೀತಿಯಲ್ಲಿ ಆಲಂಕರಿಸಿರುವಂತೆ ಕೆತ್ತಲಾಗಿರುವುದು ವಿಶೇಷ ಕ್ರಿ.ಶ. ೧೧೬೨ರ ವೀರಗಲ್ಲು ಇದಾಗಿದೆ.[೧೬೩]

ಗಂಗನರಸಿ ಗ್ರಾಮದ ಕಲ್ಲೇಶ್ವರ ದೇವಾಲಯದ ವೀರಗಲ್ಲು ಶಾಸನವು[೧೬೪] ಹೊಯ್ಸಳ. ದೊರೆ ವಿಷ್ಣುವರ್ಧನ ಹಾಗೂ ಶ್ರೀಮಹಾದೇವರಾಯರ ಕಾಲ [ಕ್ರಿ.ಶ. ೧೨೬೫) ದ್ದಾಗಿದ್ದು ಇದರಲ್ಲಿ ಬೆಯಿದೇವನೆಂಬುವನು ಉರುವತ್ತಿಯ ಕಲ್ಲವೆಗ್ಗಡೆಯೊಂದಿಗೆ ಹೋರಾಡಿ ಸ್ವರ್ಗಸ್ಥನಾಗಿದ್ದರಿಂದ ಅರಸೀಕೆರೆಯ ಕಲಿದೇವರ ತಾಣದಲ್ಲಿ ನಿಲ್ಲಿಸಿದ ವೀರಗಲ್ಲು ಇದಾಗಿದೆ. ಆತನ ಮಗ ಸೋವಿದೇವನಿಗೆ ಆ ವೀರನ ಅಂಗಭೋಗ ಪೂಜೆಗಳನ್ನು ನಡೆಸಿಕೊಂಡು ಹೋಗಲು ಭೂಮಿಯನ್ನು ನೀಡಿದ ವೀರಗಲ್ಲುದಾನ ಶಾಸನವಾಗಿದೆ.

೪.೪.೨ ತುರುಗೋಳ್ ವೀರಗಲ್ಲು

ಹಸುಗಳನ್ನು ಕಳ್ಳರಿಂದ ಅಥವಾ ಕ್ರೂರ ಪ್ರಾಣಿಗಳಿಂದ ರಕ್ಷಿಸುವುದಕ್ಕೋಸ್ಕರ ಹೋರಾಡಿ ಮಾಡಿದ ವೀರರ ಸ್ಮಾರಕಗಳನ್ನು ತುರುಗೋಳ್ ವೀರಗಲ್ಲು ಎಂದು ಕರೆಯಲಾಗುತ್ತದೆ ತುರುಗೋಳ್ ವೀರಗಲ್ಲಿನ ಶಿಲ್ಪದಲ್ಲಿ ಬೆನ್ನಹಿಂದೆ ಹಸುಗಳನ್ನು ಹಿಂದಕ್ಕೆ ಮುಖಮಾಡಿರುವಂತೆ ಕಂಡರಿಸಲಾಗಿದೆ.

ವೀರನು ಆ ಹಸುಗಳನ್ನು ರಕ್ಷಿಸಿ ಓಂದಕ್ಕೆ ಕಳುಹಿಸಿದನು ಎಂಬ ಅರ್ಥವನ್ನು ಈ ಶಿಲ್ಪಗಳು ಸಂಕೇತಿಸುತ್ತವೆ.

ಕನ್ನಡ ಕವಿ ರನ್ನನು ತನ್ನ ಗದಾಯುದ್ಧ ಕಾವ್ಯದಲ್ಲಿ.

ತುರುಗೋಳೊಳ್ ಪೆಣ್ಬುಯ್ಯಲೊ

ಳೆರೆವೆಸದೊಳ್ ನಂಟನೆಡರೊಳೊರಳಿವಿನೊಳಂ॥

ತರೆಸಂದು ಗಂಡುತನಮನೆ

ನೆರೆಪನಿಂದವಂ ಗಂಡನಲ್ಲನೆಂತುಂ ಷಂಡಂ॥[೧೩]

ಎಂದು ಹೇಳಿರುವನು, ಈ ಪದ್ಯದ ಆಧಾರದಿಂದ ಆ ಕಾಲದಲ್ಲಿ ತುರುಗಳನ್ನು ರಕ್ಷಿಸುವುದು. ಸ್ತ್ರೀಯರ ಮಾನ ಕಾಪಾಡುವುದು. ಊರುಗಳನ್ನು ರಕ್ಷಿಸುವುದು ಗಂಡಸರ ಪರಮ ಕರ್ತವ್ಯವಾಗಿತ್ತೆಂದು ತಿಳಿಯುತ್ತದೆ. ಯಾವ ಕಾರಣದಿಂದಲಾದರೂ ಶತ್ರುಗಳು ದನಗಳನ್ನು ಅಪಹರಿಸಿದಾಗ ಆ ದನಗಳನ್ನು ರಕ್ಷಿಕೊಳ್ಳಲು ಪ್ರಾಣವನ್ನು ಲೆಕ್ಕಸದೆ ಹೋರಾಡುತ್ತಿದ್ದರು.[೧೪] ಆ ಹೋರಾಟದಲ್ಲಿ ಕೆಲವರು ಗೆದ್ದು ಹಿಂತಿರುಗಿ ಬಂದರೆ ಮತ್ತೆ ಕೆಲವರು ಸಾನ್ನಪುತ್ತಿದ್ದರು. ಇಂತಹ ವೀರರ ನೆನಪಿಗಾಗಿ ನಿಲ್ಲಿಸಿದ ವೀರಗಲ್ಲುಗಳನ್ನು ನಾವು ಸುಲಭವಾಗಿ ಗುರುತಿಸಬಹುದು. ವೀರಗಲ್ಲುಗಳ ಹೋರಾಟದ ಹಂತದಲ್ಲಿ ಯಾವುದಾದರೂ ಒಂದು ಕಡೆ ಕೆಲವು ದನಗಳು ನಿಂತಿರುವಂತೆ ಚಿತ್ರಸಿರುತ್ತಾರೆ. ಒಂದರಿಂದ ಎಂಟು ಹತ್ತುದನಗಳವರೆಗೂ ಚಿತ್ರಿಸಿರುತ್ತಾರೆ.[೧೫] ನಂತರದ ಕಾಲದ ವೀರಗಲ್ಲುಗಳಲ್ಲಿ ಹೋರಾಟದ ಹಂತದಲ್ಲಿ ಪ್ರಧಾನವಾಗಿಯೇ ಸಾಲಾಗಿ ನಿಂತಿರುವಂತೆ ಬಿಡಿಸಲಾಗಿರುತ್ತದೆ.

ತುರುಗಳನ್ನು ಬಿಡಿಸಿಕೊಂಡು ಬರಲು ಹೋರಾಡಿದ ವೀರನ ಸ್ಮರಾಣಾರ್ಥವಾಗಿ ನೆಟ್ಟ ವೀರಗಲ್ಲುಗಳು ದೇವರಬೆಳಕೆರೆಯ ಕ್ರಿಶ. ೧೨೭೮[೧೬] ತುರುಗೋಳ್ ಶಾಸನದಲ್ಲಿ "ಚಿಕ್ಕಬೆಳುಕರಿಯ ತುರುಹರಿಯಲು ಶಿವಲೋಕ ಪ್ರಾಪ್ತನಾದ ಕುರುಬರ ಚಂದಗವಡಂಗೆ. . . ." ಎಂದಿದೆ. ಚಿಕ್ಕ ಬೆಳುಕರಿಯ ತುರುಗಳನ್ನು ಕಾಪಾಡಿ ಶಿವಲೋಕ ಪ್ರಾಪ್ತನಾದ ಕುರುಬರ ಚಂದಗೌಡ. ಇಲ್ಲಿನ ತುರುಗಳನ್ನು ಕಳ್ಳರೊಡನೆ ಹೋರಾಡಿ ಮಡಿದ ಅಂಶ ಶಾಸನದಲ್ಲಿ ಉಲ್ಲೇಖವಾಗಿದೆ. ಬನ್ನಿಕೋಡು ಗ್ರಾಮದ ತುರುಗೋಳ್ ವೀರಗಲ್ಲು ಶಾಸನದಲ್ಲಿ ಬಿಂನ್ನಿಕೋಡಬೀರಬೋವನ ಮಗ ಬೊಂಮಯ ನಾಯಕನು ಆ ಬಂನಿಕೋಡ ತುರುವನ್ನು ಮೂಡಣ ಸಂಗೆಯನಾಯಕಯಾಳು ಕುದುರೆ ಬಂದುಕೊಂಡು ಹೋದಲಿ ಮಯಿಗಲಿತನದಲುಹಿಮ್ಮೆಟ್ಟಿಸಿ ಕಬ್ಬುನದ ಕೋಲುಕೊಂಡು ಹರಿದು ತರುವ ಮರಳಿಸಿ ಸುರಲೋಕ ಪ್ರಾಪ್ತನಾದ ಬಗ್ಗೆ ಉಲ್ಲೇಖವಿದೆ.

ರಾಜನಹಳ್ಳಿ ಗ್ರಾಮದ ಕಲ್ಲೇಶ್ವರ ದೇವಾಲಯದ ಬಲಬಿದಿಯಲ್ಲಿರುವ ತುರುಗೋಳ್ ವೀರಗಲ್ಲುಗಳು ಮೂರು ಹಂತಗಳನ್ನು ಒಳಗೊಂಡಿವೆ. ಕೆಳಭಾಗ ಸ್ವಲ್ಪ ನೆಲದಲ್ಲಿ ಹೊತು ಹೋಗಿದೆ. ಮೊದಲನೆ ಹಂತದಲ್ಲಿ ವೀರನು ಶತ್ರುಗಳ ವಿರುದ್ಧ ಬಾಣಗಳನ್ನು ಬಿಡುತ್ತ ಹೋರಾಡುವ ಶಿಲ್ಪವಿದು ಶತ್ರುಗಳು ಸಹ ವೀರನಿಗೆ ಬಾಣ ಬಿಡುತ್ತಿರುವ ಶಿಲ್ಪಗಳು ಇವೆ. ವೀರನ

ಬೆನ್ನ ಹಿಂದೆ ದನಗಳನ್ನು ಕೆತ್ತಲಾಗಿದೆ. ವೀರನು ದನಗಳನ್ನು ಕಳ್ಳರಿಂದ ರಕ್ಷಿಸುತ್ತಿದ್ದಾನೆ ಎಂದು ಈ ಶಿಲ್ಪವು ಸಂಕೇತಿಸುತ್ತದೆ. ಎರಡನೇ ಹಂತದಲ್ಲಿ ಸತ್ತ ವೀರನನ್ನು ಚಾಮರ ಹಿಡಿದ ಸಖಿಯರು ಮಂಟಪದಲ್ಲಿ ಕೂರಿಸಿಕೊಂಡು ಸ್ವರ್ಗಕ್ಕೆ ಕರೆದೊಯ್ಯುತ್ತಿದ್ದಾರೆ. ಮೂರನೇ ಹಂತದಲ್ಲಿ ಆ ವೀರನು ಸ್ವರ್ಗದಲ್ಲಿ ತನ್ನ ಇಷ್ಟದೇವತೆ ಶಿವಲಿಂಗದ ಬಳಿ ಕುಳಿತು ಪೂಜಿಸುತ್ತಿರುವ ಶಿಲ್ಪ ಹಾಗೂ ಒಬ್ಬ ಯತಿಯ ಶಿಲ್ಪ ಮತ್ತು ಶಿವಲಿಂಗಕ್ಕೆ ಎದುರಾಗಿ ಪಕ್ಕದಲ್ಲಿ ನಂದಿಯನ್ನು ಕೆತ್ತಲಾಗಿದೆ. ಇದೇ ರೀತಿಯ ಇನ್ನೊಂದು ತುರುಗೋಳ್ ಸ್ಮಾರಕ ಇದೇ ತುರುಗೋಳ್ ವೀರಗಲ್ಲುವಿನ ಹಿಂಭಾಗದಲ್ಲಿದೆ. ಯಲವಟ್ಟಿಯ ಕೆರೆಯ ಪಕ್ಕದಲ್ಲಿನ ಗದ್ದೆಯಲ್ಲಿರುವ ಕಲ್ಲೇಶ್ವರ ದೇವಾಲಯದ ಬಲಬದಿಗಿರುವ ತುರುಗೋಳ್ ವೀರಗಲ್ಲು ಮೂರು ಹಂತಗಳನ್ನು ಹೊಂದಿದ್ದು ಶಿಲ್ಪಗಳು ಅಲ್ಲಲ್ಲಿ ತ್ರುಟಿತವಾಗಿದೆ.

ಗುತ್ತೂರು ಗ್ರಾಮದ ಉತ್ತರ ದಿಕ್ಕಿಗೆ ಅಂಗಡಿ ಈರಣ್ಣ ಹಾಗೂ ವಜ್ರಪ್ಪರ ಹೊಲದಲ್ಲಿನ ಬೇವಿನ ಮರದ ಕೆಳಗೆ ತುರುಗೊಳ್ ವೀರಗಲ್ಲು ಇದೆ. ೬ ಅಡಿ ೪ ಇಂಚು ಉದ್ದ ૩ ೧/೨ ಅಡಿ ಅಗಲ ಇರುವ ಈ ವೀರಗಲ್ಲು ಮೂರು ಹಂತಗಳನ್ನು ಒಳಗೊಂಡಿದೆ. ಮೊದಲನೆಯ ಹಂತದಲ್ಲಿ ವೀರನು ಶತ್ರುಗಳು ವಿರುದ್ಧ ಬಾಣಗಳನ್ನು ಬಿಡುತ್ತಾ ಹೋರಾಡುವ ಶಿಲ್ಪವಿದ್ದು. ಶತ್ರುಗಳು ಸಹ ವೀರನಿಗೆ ಬಾಣ ಬಿಡುತ್ತಿರುವ ಶಿಲ್ಪಗಳು ಇವೆ. ವೀರನ ಬೆನ್ನ ಹಿಂದೆ ದನಗಳನ್ನು ಕೆತ್ತಲಾಗಿದೆ. ದನಗಳ ಕೆಳಗೆ ರಣರಂಗದಲ್ಲಿ ಸತ್ತು ಬಿದ್ದಂತಹ ಶತ್ರುವಿನ ಶಿಲ್ಪವಿದೆ. ವೀರನು ದನಗಳನ್ನು ಕಳ್ಳರಿಂದ ರಕ್ಷಿಸುತ್ತಿದ್ದಾನೆ. ಎಂದು ಈ ಶಿಲ್ಪವು ಸಂಕೇತಿಸುತ್ತದೆ. ಎರಡನೆ. ಹಂತದಲ್ಲಿ ಸತ್ತ ವೀರನನ್ನು ಚಾಮರ ಹಿಡಿದ ಸಖಿಯರು ಸ್ವರ್ಗಕ್ಕೆ ಕರೆದೊಯ್ಯುತ್ತಿದ್ದಾರೆ. ವೀರನು ಕಿರೀಟಧರಿಸಿದ್ದು. ಎಡ ಮತ್ತು ಬಲ ಸಖಿಯರು ಚಾಮರ ಬಿಸುತ್ತಾ ಗಗನದ ಕಡೆ ಹಾರುವಂತೆ ಶಿಲ್ಪವನ್ನು ಕೆತ್ತಲಾಗಿದೆ. ಸ್ಮಾರಕದ ಮೇಲೆ ಎಣ್ಣೆಯನ್ನು ಹಾಕಿರುವುರಿಂದ ಸಖಿಯರ ಪಕ್ಕದಲ್ಲಿನ ಶಿಲ್ಪವನ್ನು ಗುರುತಿಸುವುದು ಕಷ್ಟ ಮೂರನೇ ಹಂತದಲ್ಲಿ ಆ ವೀರನು ಸ್ವರ್ಗದಲ್ಲಿ ತನ್ನ ಇಷ್ಟ ದೇವತೆ ಶಿವಲಿಂಗವನ್ನು ಕುಳಿತು ಪೂಜಿಸುತ್ತಿರುವ ಶಿಲ್ಪ ಹಾಗೂ ಅಕ್ಕಪಕ್ಕದಲ್ಲಿ ಎರಡು ಶಿಲ್ಪಗಳನ್ನು ಕೆತ್ತಲಾಗಿದೆ.

ಬನ್ನಿಕೋಡು ಗ್ರಾಮದ ಗೌಡರ ಮನೆಯೊಂದರ ಹತ್ತಿರ ತುರುಗೋಳ್ ವೀರಗಲ್ಲಿದ್ದು ೬ ಅಡಿಯನ್ನು ಎತ್ತರವಿರುವ ಈ ತುರುಗೋಳ್ ವೀರಗಲ್ಲು ಮೂರು ಹಂತಗಳನ್ನು ಹೊಂದಿದೆ. ಮೊದಲ ಹಂತದಲ್ಲಿ ತುರುಗಳನ್ನ ವೀರ ತನ್ನ ಬೆನ್ನಹಿಂದೆ ನಿಲ್ಲಿಸಿಕೊಂಡು ಶತ್ರುಗಳ ಜೊತೆ ಹೋರಾಡುತ್ತಿರುವ ಶಿಲ್ಪಗಳನ್ನು ಕೆತ್ತಲಾಗಿದೆ. ಕೆಳಗಡೆ ಒಬ್ಬ ಯೋಧ ಬಿದ್ದಿದ್ದಾನೆ. ಎರಡನೆ ಹಂತದಲ್ಲಿ ಸಖಿಯರು ವೀರನ್ನು ಮಂಟಪದಲ್ಲಿ ಕೂರಿಸಿಕೊಂಡು ಹೋಗುವ ಶಿಲ್ಪಗಳನ್ನು ಕೆತ್ತಲಾಗಿದೆ. ಮೂರನೆ ಹಂತದಲ್ಲಿ ವೀರ ಕೈಮುಗಿದು ಧ್ಯಾನಸಕ್ತನಾಗಿದ್ದಾನೆ. ಹಾಗೂ ಒಬ್ಬ ಯತಿ ಶಿವಲಿಂಗಕ್ಕೆ ಪೂಜೆ ಮಾಡುವ ಶಿಲ್ಪವಿದೆ. ಶಿವಲಿಂಗದ ಪಕ್ಕದಲ್ಲಿ ನಂದಿಯಿದೆ ಹಾಗೆಯೇ ನಂದಿಯ ಮೇಲುಗಡೆ ಚಿಕ್ಕದಾದ ಇನ್ನೊಂದು ಯತಿಯ ಶಿಲ್ಪವಿದೆ. ಮೇಲಿನ ಹಂತಗಳನ್ನು ಒಳಗೊಂಡಂತಹ ತುರುಗೋಳ್ ವೀರಗಲ್ಲುಗಳು ತಾಲೂಕಿನ ದೇವರ ಬೆಳಕೆರೆ, ನಂದಿಗುಡಿ

ಹಾಗೂ ಯಲವಟ್ಟಿ ಗ್ರಾಮಗಳಲ್ಲೂ ಕಂಡು ಬರುತ್ತದೆ. ಯಲವಟ್ಟಿಯ ಕೆರೆಯ ಗದ್ದೆಯಲ್ಲಿನ ಕಲ್ಲೇಶ್ವರ ದೇವಾಲಯದ ಬಲಬದಿಗಿರುವ ತುರುಗೋಳ್ ವೀರಗಲ್ಲು ಮೇಲಿನ ಮೂರು ಹಂತಗಳನ್ನು ಹೊಂದಿದ್ದು ಶಿಲ್ಪಗಳು ಅಲಲ್ಲಿ ತ್ರುಟಿತವಾಗಿವೆ. ಈ ತುರುಗೋಳ್ ಸ್ಮಾರಕಗಳು ಪಶುಪಾಲನೆಯ ಮಹತ್ವ ದನಗಳಿಗೆ ಅಂದು ನೀಡಿದ್ದು. ಪ್ರಾಧಾನ್ಯತೆ ಮತ್ತು ಮೌಲ್ಯಗಳು ತಿಳಿಯುತ್ತವೆಯಲ್ಲದೆ ಗ್ರಾಮ ಸಂಸ್ಕೃತಿಯ ವೀರಪರಂಪರೆ ಅದಕ್ಕೆ ರಾಜಕೀಯವಾಗಿ, ಸಾಮಾಜಿಕವಾಗಿ, ಹಾಗೂ ಅರ್ಥಿಕವಾಗಿ ದೊರೆತ ಗೌರವ ಪ್ರೋತ್ಸಾಹಗಳು ಗಮನೀಯವಾಗಿವೆ.

ಊರಳಿವಿಗೆ ಸಂಬಂಧಿಸಿದಂತೆ ಕುಂಬಳೂರು ಗ್ರಾಮದ ವೀರಶೈವ ರುದ್ರಭೂಮಿಯಲ್ಲಿ ಇತ್ತಿಚೆಗೆ ಕಟ್ಟಲಾದ ಈಶ್ವರ ದೇವಾಲಯದ ಬಳಿ ಶಾಸನೋಕ್ತ ವೀರಗಲ್ಲನ್ನು ಇರಿಸಲಾಗಿದೆ.[೧೪] ೪ ಅಡಿ ಎತ್ತರವಿರುವ ತುರುಗೋಳ್ ವೀರಗಲ್ಲನ್ನು ಹಸಿರು ಮಿಶ್ರಿತ ನೀಲಿ ಛಾಯೆಯ ಬಳಪದ ಶಿಲೆಯಲ್ಲಿ ಕೆತ್ತಿರುವುದನ್ನು ಕಾಣಬಹುದು.[೧೫] ಕೆಳಗಿನ ಹಂತದಲ್ಲಿ ವೀರನ ಹೋರಾಟದ ದೃಶ್ಯವಿದೆ. ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಕರೆದೊಯ್ಯುತ್ತಿರುವುದು ಮಧ್ಯದ ಪಟ್ಟಿಕೆಯಲ್ಲಿದ್ದಾರೆ ಮೇಲಿನ ಪಟ್ಟಿಕೆಯಲ್ಲಿ ವೀರ ಕೈಲಾಸ ಸೇರಿರುವುದನ್ನು ಕೆತ್ತಲಾಗಿದೆ. ಕುಂಬೂರ ಊರಳಿವಿನ ಕಾಳಗದಲ್ಲಿ ನಾರಣಪನು ಮರಣ ಹೊಂದಿದನು. ಎಂದು ಇದರಲ್ಲಿರುವ ಶಾಸನದಿಂದ ತಿಳಿಯುತ್ತದೆ. ಈ ತುರುಗೋಳ್ ವೀರಗಲ್ಲಿನ ಕೆಳಗಿನ ಪಟ್ಟಿಕೆಯಲ್ಲಿ ಹೋರಾಡುತ್ತಿರುವ ವೀರನ ಹಿಂಬದಿಯಲ್ಲಿ ೪ ತರುಗಳನ್ನು ತೋರಲಾಗಿದೆ. ಶಿಲ್ಪದ ಹಿನ್ನೆಲೆಯಲ್ಲಿ ನೋಡಿದರೆ ಇದೊಂದು ತುರುಗೋಳ್ ವೀರಗಲ್ಲಿನಂತೆ ಕಾಣತ್ತದೆ. ಆದರೆ ಶಾಸನದಲ್ಲಿ 'ಪೊರಳಿವು' ಎಂಬ ಉಲ್ಲೇಖವಿರುವುದರಿಂದ ಇದು ಊರಳಿವಿಗೆ ಸಂಬಂಧಪಟ್ಟ ವೀರಗಲ್ಲು ಎನ್ನುವುದು ಸ್ಪಷ್ಟ[೧೬] ಕಳ್ಳರು ತುರುಗಳನ್ನು ಕದ್ದು, ಸ್ತ್ರೀಯರನ್ನು ಮಾನಭಂಗಗೊಳಿಸಿ, ಊರನ್ನು ನಾಶಪಡಿಸುತ್ತಿದ್ದರು. ಇದನ್ನು ಊರಳಿವು ಅಥವಾ ಊರಿನ ನಾಶ[೧೭] ಎನ್ನಲಾಗುತ್ತದೆ.

೪.೪.೩ ಮಹಾಸತಿಗಲ್ಲು

ಮಹಾಸತಿ ಕಲ್ಲನ್ನು ಮಾಸ್ತಿಕಲ್ಲು ಎಂತಲೂ ಕರೆಯುತ್ತಾರೆ. ವೀರಗಲ್ಲು ಗಂಡಿನಶೌರ್ಯ, ಹೋರಾಟ, ತ್ಯಾಗದ ಸಂಕೇತವಾಗಿ ಮಾತೃದೇವತಾಸ್ಥಾನದಲ್ಲಿ ಜನಪದದರಲಿರುವ ನಂಬಿಕೆ, ಪತಿವ್ರತೆಯಾದ ಹೆಣ್ಣು ತನ್ನ ಪತಿ ಸತ್ತಾಗ ಪತಿಯೊಂದಿಗೆ ಸಹಗಮನ ಮಾಡುತ್ತಿದ್ದಳು ಇವಳ ಸ್ಮರಣೆಗಾಗಿ ನೆಟ್ಟ ಕಲ್ಲುಗಳೇ ಮಹಾ ಸತಿಗಲ್ಲಗಳು, ಮಹಾಸತಿಯಾಗುವ ಪದ್ಧತಿಯಲ್ಲಿ ಎರಡು ವಿಧ, ೧ ಸಹಗಮನ ಅಂದರೆ ಸಹ ಮರಣ ೨. ಅನುಗಮನ ಗಂಡ ಸತ್ತ ಸುದ್ದಿ ಕೇಳಿ ಚಿತೆ ನಿರ್ಮಿಸಿಕೊಂಡು ಅವನಿಗೆ ಪ್ರಿಯವಾದ ವಸ್ತುಹಿಡಿದು ಚಿತೆ ಏರುವುದು ಅನುಗಮನ ಮತ್ತೆ ಮಾಸ್ತಿ ಶಿಲ್ಪದಲ್ಲಿ ಎರಡು ಬಗೆಯಿರುತ್ತದೆ. ೧. ಒಕ್ಕೈ ಮಾಸ್ತಿಕಲ್ಲು ಕಂಬದಿಂದ ಒಂದು ಕೈ ಹೊರಬಂದು ಎತ್ತಿದರೆ ಅದು ಒಕ್ಕೈ ಮಾಸ್ತಿಕಲ್ಲು, ಇಕ್ಕೈಮಾಸ್ತಿಕಲ್ಲು ಒಟ್ಟಾರೆ ಮಹಾಸತಿಕಲ್ಲುಗಳ ಸಂಕೇತ ಹೆಚ್ಚಿನ ಮಟ್ಟಿಗೆ ಬಲಗೈ ಎತ್ತಿದಕ್ಕೂ ಇರುತ್ತದೆ. ಮುಂಗೈಗೆ ಬಳೆ ಅಂಗೈಯಲ್ಲಿ ಸಾಮಾನ್ಯವಾಗಿ ನಿಂಬೆಹಣ್ಣು ಹಿಡಿದಿರುತ್ತದೆ. ಮಹಾಸತಿಯ ಬಲಗೈಶುಭದ ಸೌಭಾಗ್ಯದ ಧನ್ಯ ಜೀವನದ ಸಂಕೇತ[೧೮] ಬಲಗೈ

ಹಸ್ತತೋರಿಸುವುದು ತಾನು ಸ್ವರ್ಗಕ್ಕೆ ಹೋಗತ್ತಿರುವ ಸಂಕೇತ. ಕಂಬವನ್ನು ತೋರಿಸುವುದು. ಇದು ದೈವತ್ವದ ಪ್ರತೀಕ. ದೈವ ಇರುವ ಸ್ಥಾನ ಅಂದರೆ ಮಹಾಸತಿ ಆದವರು ದೈವತ್ವದ ಹಂತಕ್ಕೆ ಏರಿದ್ದಾಳೆ ಎಂಬುದವುದರ ಸಂಕೇತ ಕೆಲವೊಮ್ಮೆ ಮಹಾಸತಿ ಕಲ್ಲುಗಳು ಸೂರ್ಯ, ಚಂದ್ರರ ಕಲಾಕೃತಿಗಳನ್ನು ಒಳಗೊಂಡಿರುತ್ತದೆ. ಇನ್ನೂ ಕೆಲವೊಮ್ಮೆ ಸ್ವಾಭಾವಿಕ ಸತಿ ಶಿಲ್ಪಗಳು ಕುಳಿತ ಸ್ತ್ರೀ-ಪುರಷ ಅಥವಾ ನಿಂತ ಸ್ತ್ರೀಯಾಗಿ ಮಾತ್ರ ಕೆತ್ತಲ್ಪಟ್ಟಿರುತ್ತದೆ.[೧೬೪] ವೀರಯೋಧನ ಮಡಿದಿಯಾದಲ್ಲಿ ವೀರ ಹೋರಾಟದ ಭಂಗಿಯಲ್ಲಿ ಹೊರಟಂತೆ ಅಥವಾ ವೀರ ಮಹಿಳೆಯ ರೂಪದಲ್ಲಿ ಕೆತ್ತಿರುವುದು ಮಹಾಸತಿಕಲ್ಲುಗಳ ಸಾಮಾನ್ಯ ಲಕ್ಷಣಗಳಾಗಿವೆ.

ದಕ್ಷಿಣ ಭಾರತದಲ್ಲಿ ಕ್ರಿ.ಶ. ೧೦ನೇ ಶತಮಾನದವರೆಗೆ ಸಹಗಮನ ಪದ್ಧತಿ ಹೆಚ್ಚು ಪ್ರಚಲಿತ ಇರಲಿಲ್ಲ. ಪಶ್ಚಿಮ ಕರಾವಳಿಯಲ್ಲಿ ಅರಬ್ಬಿ ಪರ್ವತ ಸುಲೇಮಾನ್ ಪ್ರವಾಸ ಮಾಡಿ ಹೇಳಿದಂತೆ ವಿರಳವಾಗಿ ರಾಣಿಯರು ತಮ್ಮ ಪತಿಯ ಜೊತೆ ಚಿತೆ ಏರುತ್ತಿದ್ದರು. ಇದರಲ್ಲಿ ಬಲವಂತ ಇರಲಿಲ್ಲ. ಚಿತೆ ಏರುವುದು ಅವರ ಇಷ್ಟವಾಗಿತ್ತು.[೧೬೫] ಆದರೆ ಕರ್ನಾಟಕದಲ್ಲಿ ಸಹಗಮನಗಕ್ಕೆ ಸಂಬಂಧಿಸಿದಂತೆ ಪ್ರಾಚೀನ ಉದಾಹರಣೆ ೬ನೇ ಶತಮಾನದ ಕವಡಿ ಶಾಸನ ಬಹುಶ ಕದಂಬರವಿವರ್ಮನ ರಾಣಿಯ ಸಹಗಮನ ಸೂಚಿಸುತ್ತಿದ್ದ ಪ್ರಥಮ ದಾಖಲೆಯಾಗಿದೆ.[೧೬೬] ಹರಿಹರ ತಾಲೂಕಿನ ದೊರೆತ ಮಾಸ್ತಿಶಿಲ್ಪಗಳಿಗೆ ಸಂಬಂಧಿಸಿದಂತೆ ಈ ಕೆಳಗಿನಂತೆ ತಿಳಿಸಲಾಗಿದೆ.

ವಾಸನದ ಚನ್ನಕೇಶವ ದೇವಾಲಯ ಮುಂಭಾಗದಲ್ಲಿ ಮಧ್ಯಕಾಲಿನ ಯುಗಕ್ಕೆ ಸೇರಿದ ಎರಡು ಮಹಾಸತಿ ಸ್ಮಾರಕಗಳೆರಡೂ ಸಮಾನ ಲಕ್ಷಣಗಳನ್ನು ಹೊಂದಿವೆ. ಸತಿಹೋದ ಸ್ತ್ರೀಯನ್ನು ಇಬ್ಬರು ಅಪ್ಸರೆಯರು ತಮ್ಮ ಹೆಗಲ ಮೇಲೆ ಕೈಗಳನ್ನು ಹಾಕಿಕೊಂಡು ಕರೆದೊಯ್ಯುವಂತಿದೆ. ಬಲ ಅಪ್ಸರೆ ತನ್ನ ಬಲಗೈಯನ್ನು ಮೇಲಕ್ಕೆತ್ತಿದ್ದಾಳೆ ಎಡ ಅಪ್ಸರೆ ತನ್ನ ಎಡಗೈಯನ್ನು ಇಳಿಬಿಟ್ಟಿದ್ದಾಳೆ ಎರಡನೆ ಹಂತದಲ್ಲಿ ಅಪ್ಸರೆಯರು ಪುಷ್ಪಕ ವಿಮಾನದಲ್ಲಿ ಆ ಸ್ತ್ರೀಯನ್ನು ಕುಳ್ಳಿರಿಸಿಕೊಂಡಿದ್ದಾರೆ. ಮೂರನೇ ಹಂತದಲ್ಲಿ ಕೈಲಾಸದಲ್ಲಿ ಆ ಸ್ತ್ರೀಯು ಪದ್ಮಾಸನದಲ್ಲಿ ಅಂಜಲಿ ಹಸ್ತಗಳಾಗಿ ಕುಳಿತಿರುವಂತಿದೆ ಅಲ್ಲಿ ಶಿವಲಿಂಗ ನಂದಿ, ಸೂರ್ಯ ಚಂದ್ರರಿದ್ದಾರೆ. ಸತಿ ಹೋದ ಸ್ತ್ರೀ ತನ್ನ ಕೇಶರಾಶಿಯನ್ನು ತುರುವಿನ ರೀತಿಯಲ್ಲಿ ಕಟ್ಟಿದ್ದು ಕಿವಿಗಳಲ್ಲಿ ಓಲೆ ಹಾಗೂ ಕೊರಳಲ್ಲಿ ಅನೇಕ ಬಗೆಯ ರೀತಿಯಲ್ಲಿ ಬಗೆಯ ಸರಗಳಿವೆ. ಸೀರೆಯನ್ನು ಕಚ್ಚೆಯ ರೀತಿಯಲ್ಲಿ ಧರಿಸಿರುವುದು ಹಾಗೂ ಕಾಲಿನಲ್ಲಿ ಕಾಲ್ಗಡಗಗಳಿರುವುದನ್ನು ನೋಡಬಹುದು.

ವಾಸನದ ಕ್ರಿ.ಶ. ೧೩೮೨[೧೬೭] ರ ವೀರಗಲ್ಲು ಶಾಸನದಲ್ಲಿ ಶ್ರೀ ಮುದೆಯ ಹೆಗ್ಗಡೆಯ ಮಗ ಬಯಿಚೆಯ ಹೆಗ್ಗಡೆಯ ಮಗ ಉಂಡಗೌಡನು ಸ್ವರ್ಗಸ್ಥಾನಾದನು. ಆ ಉಂಕಗೌಡನ ಅರಸಿಯಲ್ಲಿ ಮಹಾಸತಿ ಹೇಮಾಯಿಯು ಅಗ್ನಿಪ್ರವೇಶ ಮಾಡಿ ಸುರಲೋಕ ಪ್ರಾಪ್ತಳಾದಳು ಎಂದಿದೆ. ಹಾಗೆಯೇ ಇದೇ ಗ್ರಾಮದ ಕ್ರಿ.ಶ.[೧೬೮] ೧೪೭೭ರ ವೀರಗಲ್ಲು ಶಾಸನದಲ್ಲಿ ಮುದೆಯ ಹೆಗ್ಗಡೆಯ ಮಗ ಬಯಿಚೆಯ ಹೆಗ್ಗಡೆ ಆತನ ಮಗ, ಉಂಕಗವುಡ, ಆತನ ಮಗ ಬೊಮ್ಮಿಯಗೌಡನು ಸ್ವರ್ಗಸ್ಥನಾದ. ಆಹರಿಯಗೌಡನ ಅರಸಿಯರ ಮಹಾಸತಿ ಬಾಯಿದೇವಿ ಲಖಮಾಯಿಯು

ಅಗ್ನಿಪ್ರವೇಶ ಮಾಡಿ ಸುರಲೋಕ ಪ್ರಾಪ್ತಳಾದಳು ಮೇಲಿನ ಎರಡು ಶಾಸನಗಳಲ್ಲಿ ಉಲ್ಲೇಖವಾಗಿರುವಂತಹ ಮನೆತನಗಳು ಒಂದೇ ಆಗಿವೆ. ಬಹುಶಃ ಮೇಲೆ ಉಲ್ಲೇಖಿಸಿದ ಮಹಾಸತಿ ಶಿಲ್ಪಗಳಲ್ಲಿ ಮಹಾಸತಿಯರು ಪ್ರಾಯಶಹಃ ದೇವರಾಯಿಯು ಹಾಗೂ ಬಾಯಿದೇವಿ ಲಖಿಮಾಯಿಯು ಇರಬಹುದು? ಯಾಕೆಂದರೆ ಹಾಗೂ ಒಂದೇ ಸಮಾನ ಲಕ್ಷಣಗಳನ್ನು ಹೊಂದಿದ ಮಹಾಸತಿ ಶಿಲ್ಪಗಳಿಗಧಾರವಾಗಿ ಅಭಿಪ್ರಾಯ ಪಡೆಯಾಗಿದೆ. ಕರ್ನಾಟಕದಲ್ಲಿ ದೊರೆಯುವ ಸತಿಶಿಲ್ಪಗಳಲ್ಲಿ ಈ ಸತಿಶಿಲ್ಪ ವಿಶೇಷವೆನ್ನ ಬಹುದು.[೧೮೯] ಏಕೆಂದರೆ ಸತಿಹೋದ ಸ್ತ್ರೀಯರನ್ನು ಅಪ್ಸರೆಯರು ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವ ದೃಶ್ಯವನ್ನು ವಾಸನದ. ಈ ಶಿಲ್ಪಿಗಳಲ್ಲಿ ಕೆತ್ತಿರುವುದು ಶಿಲ್ಪದ ದೃಷ್ಟಿಯಿಂದ ವಿಶೇಷ ಹಾಗೂ ಮಹತ್ವದಾಯಕವೆನ್ನುಬಹುದಾಗಿದೆ.

ದೀಟೂರು ಗ್ರಾಮದ ಕಲ್ಲೇಶ್ವರ ದೇವಾಲಯದ ಬಲಬದಿಯಲ್ಲಿ ಗಿಡಗಳ ಪೊದೆಯಲ್ಲಿರುವ ಮಾಸ್ತಿಕಲ್ಲು ವಿಶಿಷ್ಟವಾಗಿದ್ದು. ೩ ಅಡಿ ಎತ್ತರ ೧ ೧/೨ ಅಡಿ ಅಗಲ ಇರುವ ಬಳಪದ ಶಿಲೆಯಲ್ಲಿ ಕೆತ್ತಿದ್ದಾರೆ. ಮಹಾಸತಿಯ ಶಿಲ್ಪವೊಂದೆ ಇದರಲ್ಲಿದೆ. ತನ್ನ ಬಲಗೈಯನ್ನು ಮೇಲಕ್ಕೆತ್ತಿದ್ದಾಳೆ ಹಾಗೆ ಎಡಗೈಯನ್ನು ಇಳಿಬಿಟ್ಟಿದ್ದಾಳೆ ತನ್ನ ಕೇಶರಾಶಿಯನ್ನು ತುರುಬಿನ ರೀತಿನಲ್ಲಿ ಕಟ್ಟಿದ್ದು ಕಿವಿಯಲ್ಲಿ ಓಲೆ ಹಾಗೂ ಕೊರಳಲ್ಲಿ ಸರವಿದೆ. ಕಾಲಿನಲ್ಲಿ ಕಾಲ್ಗಡಗಳಿವೆ.

ಕೊಕ್ಕನೂರು ಗ್ರಾಮದ ಒಳಗೆ ಹೋಗುವ ದಾರಿಯ ಎಡಬದಿಗೆ ವೀರ ಮಾಸ್ತಿಕಲ್ಲು ಇದೆ. ವೀರಮಾಸ್ತಿಕಲ್ಲುಗಳಿಗೆ ಸಂಬಂಧಿಸಿದಂತೆ ಯುದ್ಧದಲ್ಲಿ ಹೋರಾಡಿ ಮಡಿದ ವ್ಯಕ್ತಿಯ ಪತ್ನಿಯ ಸಹಗಮನ ಮಾಡಿದ್ದರೆ ಅಂತಹ ಸಂದರ್ಭಗಳಲ್ಲಿ ಹೋರಾಡಿ ಮಡಿದ ವೀರನಿಗೂ ಪ್ರಾಮುಖ್ಯತೆಯಿರುವುದರಿಂದ ಆತನ ಪತ್ನಿಯು ಸಹಗಮನ ಮಾಡಿರುವುದರಿಂದ ಆ ಮಹಾಸತಿಗೂ ಪ್ರಾಮುಖ್ಯತೆಯಿರುತ್ತದೆ. ಆದ್ದರಿಂದ ಆ ವೀರ ಮತ್ತು ಆನತ ಪತ್ನಿ ಇಬ್ಬರ ಶಿಲ್ಪಿಗಳಿಗೂ ಪ್ರಾಮುಖ್ಯತೆಯಿರುವಂತೆ ಕೆತ್ತಿರುತ್ತಾರೆ. ಇಂತಹದೊಂದು ವೀರ ಮಾಸ್ತಿ ಶಿಲ್ಪವನ್ನು ಕೊಕ್ಕನೂರು ಗ್ರಾಮದಲ್ಲಿ ಕಾಣಬಹುದು. ಬಳಪದ ಶಿಲೆಯಲ್ಲಿ ನಿರ್ಮಿಸಿದ ಈ ಶಿಲ್ಪದಲ್ಲಿ ವೀರನು ಆಯುಧ ಪಾಣಿಯಾಗಿ ಹೋರಾಟದ ಭಂಗಿಯಲ್ಲಿ ನಿಂತಿದ್ದು ಆತನ ಪತ್ನಿಯು ತನ್ನ ಬಲಗೈಯ್ಯನ್ನು ಮೇಲೆತ್ತಿ ಅಭಯ ಹಸ್ತವನ್ನು ತೋರುತ್ತಿರುವಂತೆ ನಿಂತಿದ್ದಾಳೆ. ಕೇದಿಗೆ ಹೂಗಳಿಂದ ಅಲಂಕೃತಳಾಗಿದ್ದಾಳೆ. ಶಿಲ್ಪವು ಅರ್ಧಭಾಗ ಹೊಡೆದು ಹೋಗಿರುವುದರಿಂದ ಶಿಲ್ಪದ ಭಾಗಗಳನ್ನು ಗುರುತಿಸುವುದು ಕಷ್ಟ

ನಾಗ-ನಾಗಿಣಿಯರ ಶಿಲ್ಪ

ಕರ್ನಾಟಕದಲ್ಲಿ ನಾಗಾರಾಧನೆಯು ಬಹು ಹಿಂದಿನಿಂದಲೂ ರೂಢಿಯಲ್ಲಿದೆ ಆದಿ ಇತಿಹಾಸ ಕಾಲಕ್ಕೆ ಸೇರಿದ ಬನವಾಸಿಯ ನಾಗಪ್ರತಿಮೆ ಪ್ರಸಿದ್ಧವಾದುದ್ದಾಗಿದೆ.[೧೯೦] ಮೇಲಿನ ಭಾಗ ಮಾನವದೇಹ, ಕೆಳಗಿನ ಭಾಗ ಸರ್ಪದ್ದಾಗಿರುವ ಮೂರ್ತಿಗಳು ಇವಾಗಿರುತ್ತವೆ. ನಾಗ-ನಾಗಿಣಿಯರ ಶಿಲ್ಪಗಳು ವಾಸನ, ನಂದಿತಾವರೆ, ಮಲೆಬೆನ್ನೂರು, ಧೂಳೆಹೊಳೆ ಜಿಗಳಿ, ಚಿಕ್ಕಬಿದರೆ ದೇವಾಲಯಗಳಲ್ಲಿ ದೊರೆಯುತ್ತವೆ. ಕಾಲಮಾನದ ದೃಷ್ಟಿಯಿಂದ ಮಧ್ಯಯುಗಕ್ಕೆ ಸೇರಿದವುಗಳಾಗಿವೆ ವಾಸನದಲ್ಲಿ ಏಳು ಹೆಡೆಯ ನಾಗಶಿಲ್ಪವಿದೆ.

ಕೊನೆ ಟಿಪ್ಪಣಿಗಳು

೧. ಇಂಗ್ಲಿಷ-ಕನ್ನಡ ನಿಘಂಟು, ೨೦೦೭,(ಪರಿಷ್ಕೃತ), ೧-೪, ಏಕೀಕೃತ ಸಂಪುಟ, ಮೈಸೂರು ವಿಶ್ವವಿದ್ಯಾಲಯ, ಪು.೧೩೮೫
೨. ಮನೋಜ್ ಜಿ., ೨೦೧೫, ದೇವಾಲಯ ವಾಸ್ತು ವಿಜ್ಞಾನ, ಪು.೧೧
೩. ರಾಮಚಂದ್ರರಾವ್ ಎಸ್.ಕೆ., ೨೦೧೦, ಭಾರತದ ದೇವಾಲಯ ನೆಲೆ-ಹಿನ್ನೆಲೆ, ಪು.೭
೪. ಅದೇ, ಪು.೮
೫. ಅದೇ, ಪು.೪೪
೬. ಅದೇ, ಪು.೪೫
೭. ಅಪರ್ಣ ಕೂ.ಸ., ೧೯೯೯, ದೇವಾಲಯ ವಾಸ್ತು ಶಿಲ್ಪ ಪರಿಚಯ, ಪು.೮-೧೦
೮. ಪಾಡಿಗಾರ ಶ್ರೀನಿವಾಸ, ಚಾಲುಕ್ಯರ ಕಾಲದ ಸ್ಥಪತಿ- ಶಿಲ್ಪಿಗಳು, ನಾಯಕರತ್ನ ಶ್ರೀಬಿ.ಕೆ. ಗುಡದಿನ್ನಿ ಅವರ ಅಭಿನಂದನ ಗ್ರಂಥ, ಡಾ. ಬಿ.ಎನ್. ಶೇಶೆ(ಸಂ.) ೧೯೯೭, ಪು.೨೦
೯. ಗೋಪಾಲರಾವ್ ಎಚ್.ಎಸ್.,೧೯೯೩, ಶಾಸನಗಳು ಹಿನ್ನೆಲೆಯಲ್ಲಿ ಕಲ್ಯಾಣ ಚಾಲುಕ್ಯರ ಕಾಲದ ದೇವಾಲಯಗಳು ಒಂದು ಸಾಂಸ್ಕೃತಿಕ ಅಧ್ಯಯನ, ಪು.೨೪೫
೧೦. ಸುರೇಶ್ ಬಿ.,೨೦೦೯, ಚಿತ್ರದುರ್ಗ- ದಾವಣಗೆರೆ ಜಿಲ್ಲೆಗಳ ದೇವಾಲಯಗಳು, ಪು.೧೨೩
೧೧. ಮನೋಜ್ ಜಿ., ೨೦೧೫, ಪೂರ್ವೋಕ್ತ, ಪು.೧೩
೧೨. ಅದೇ,ಪು.೪೭
೧೩. ಅದೇ, ಪು.೪೭
೧೪. ತಿಪ್ಪೇಸ್ವಾಮಿ ಎಚ್., ೨೦೦೧, ದಾವಣಗೆರೆ ಜಿಲ್ಲೆ ದೇವಾಲಯಗಳು, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೭೨
೧೫. ಮನೋಜ್ ಜಿ., ೨೦೦೫, ಪೂರ್ವೋಕ್ತ, ಪು. ೭೯
೧೬. ಅದೇ, ಪು.೮೮
೧೭. ತಿಪ್ಪೇಸ್ವಾಮಿ ಎಚ್.,೨೦೦೧, ಪೂರ್ವೋಕ್ತ, ಪು.೭೩
೧೮. ಮನೋಜ್ ಜಿ., ೨೦೧೫, ಪೂರ್ವೋಕ್ತ, ಪು.೧೬
೧೯. ಅದೇ, ಪು.೨೦
೨೦. ಅದೇ, ಪು.೨೨

೨೧. ಅದೇ, ಪು.೨೬

೨೨. ಅದೇ, ಪು.೩೬

೨೩. ತಿಪ್ಪೇಸ್ವಾಮಿ ಎಚ್.೨೦೦೧, ಪೂರ್ವೋಕ್ತ, ಪು.೭೭

೨೪. M.A.R., ೧೯೩೮, ಪು. ೬೫

೨೫. ತಿಪ್ಪೇಸ್ವಾಮಿ ಎಚ್.೨೦೦೧, ಪೂರ್ವೋಕ್ತ, ಪು.೮೧

೨೬. ಅದೇ, ಪು.೮೨

೨೭. ಅದೇ, ಪು.೮೨

೨೮. M.A.R., ೧೯೩೮, ಪು.೬೯

೨೯. ಸುರೇಶ್ ಬಿ., ೨೦೦೯, ಪೂರ್ವೋಕ್ತ, ಪು.೧೪೩

೩೦. M.A.R., ೧೯೩೮, ಪು.೬೯

೩೧. ಅದೇ, ಪು.೬೯

೩೨. ತಿಪ್ಪೇಸ್ವಾಮಿ ಎಚ್., ೨೦೦೧, ಪೂರ್ವೋಕ್ತ, ಪು. ೯೮

೩೩. ಅದೇ, ಪು. ೯೯

೩೪. ಕ್ಷೇತ್ರಕಾರ್ಯದಲ್ಲಿ ಗಮನಿಸಿದ ಘಂಟೆ ಶಾಸನ ಇದಾಗಿದ್ದು ನಂಜಕೃಷ್ಣಪ್ಪ ಎಂಬಾತ ಬಹುಶಃ ಸ್ಥಳೀಯ ಗೌಡನಿರಬೇಕು.

೩೫. ತಿಪ್ಪೇಸ್ವಾಮಿ ಎಚ್., ೨೦೦೧, ಪೂರ್ವೋಕ್ತ, ಪು.೯೯

೩೬. ಅದೇ, ಪು.೯೯ ಮತ್ತು ಎ.ಕ.,ಸಂ,೧೧, ಶಾ.ಸಂ,೭೪, ದಾವಣಗೆರೆ

೩೭. ಅದೇ, ಪು.೧೦೦

೩೮. ಅದೇ, ಪು.೧೦೦

೩೯. ಎ.ಕ.,ಸಂ, ೧೧, ಶಾ,ಸಂ,೧೦೩, ದಾವಣಗೆರೆ

೪೦. ದಿನಾಂಕ:೨೮-೬-೨೦೧೪ ರಂದು ಚಿಕ್ಕಬಿದರೆಯಲ್ಲಿ ಕ್ಷೇತ್ರಕಾರ್ಯಕೈಗೊಂಡ ಸಂಧರ್ಭದಲ್ಲಿ ಹಿರೇಬಿದರೆಯ ಮೂಗನಬಸಪ್ಪ ಅವರಿಂದ ಹೊಲದ ವಿಳಾಸ ತಿಳಿದು ಬಂದಿದೆ.

೪೧. ತಿಪ್ಪೇಸ್ವಾಮಿ ಎಚ್., ೨೦೦೧, ಪೂರ್ವೋಕ್ತ, ಪು.೧೦೧

೪೨. ಎ.ಕ.ಸಂ,೧೧, ಶಾ,ಸಂ,೬೯, ದಾವಣಗೆರೆ

೪೩. ಶ್ರೀಕಂಠಶಾಸ್ತ್ರೀ ಎಸ್., ೧೯೬೯, ಹೊಯ್ಸಳವಾಸ್ತುಶಿಲ್ಪ, ಪು.೮೩

೪೪. ಹಾ.ಮಾ.ನಾಯಕ, (ಸಂ.), ೧೯೭೯, ಕನ್ನಡ ವಿಷಯ ವಿಶ್ವಕೋಶ, ಪು.೮೩೪ ಮತ್ತು ಕನ್ನಡ ವಿಶ್ವಕೋಶ, ಸಂ.೧೦ ಪು.೧೩

೪೫. ಶ್ರೀಕಂಠಶಾಸ್ತ್ರಿ.ಎಸ್., ೧೯೭೫, ಪೂರ್ವೋಕ್ತ, ಪು.೫೬

೪೬. M.A.R., ೧೯೩೮, ಪು.೮೫

೪೭. M.A.R., ೧೯೬೮, ಪೂರ್ವೋಕ್ತ, ಪು.೫೬

೪೮. M.A.R., ೧೯೩೮, ಪು.೬೫

೪೯. ಈ ಧನುರ್ಧಾರಿ ಮಹಿಳೆಯನ್ನು ಎಂ.ಎ.ಆರ್., ೧೯೩೮, ಪು.೬೬ ರಲ್ಲಿ ಪಾರ್ವತಿಯೆಂದು ಗುರುತಿಸಲಾಗಿದೆ

೫೦. ತಿಪ್ಪೇಸ್ವಾಮಿ ಎಚ್., ೨೦೦೧, ಪೂರ್ವೋಕ್ತ, ಪು.೧೧೮

೫೧. ಹಯವದನರಾವ್ ಸಿ., ೧೯೩೦, ಮೈಸೂರು ಗೆಸೆಡೆಯರ್, ಸಂ.ಪು.೨ ಭಾಗ–೧, ಪು.೨೧೮–೨೧೯

೫೨. ಸುರೇಶ್ ಬಿ., ೨೦೦೯, ಪೂರ್ವೋಕ್ತ, ಪು.೧೪೫

೫೩. ತಿಪ್ಪೇಸ್ವಾಮಿ ಎಚ್., ೨೦೦೧, ಪೂರ್ವೋಕ್ತ, ಪು.೧೧೯

೫೪. ಅದೇ, ಪು.೧೩೬

೫೫. ಇ.ದ.ಸಂ.,೧೨, ೧೯೯೭, ಶ್ರೀಮತಿ ಚಂದನಾ ವೈ ನೀಲಪ್ಪ, ಜಿಗಳಿಯ ಅಪ್ರಕಟಿತ ದೇಗುಲಶಾಸನ ಶಿಲ್ಪ, ಪು.೪೮

೫೬. ತಿಪ್ಪೇಸ್ವಾಮಿ ಎಚ್., ೨೦೦೧, ಪೂರ್ವೋಕ್ತ, ಪು.೧೪೦

೫೭. ಅದೇ, ಪು.೧೪೦

೫೮. ಕ್ರಿ.ಶ. ೧೦ ರಿಂದ ೧೩ನೇ ಶತಮಾನದವರೆಗೂ ಹರಿಹರೇಶ್ವರ ದೇವಾಲಯದ ನಿರ್ಮಾಣದ ಉಲ್ಲೇಖಗಳನ್ನು ಕಾಣಬಹುದು ಕ್ರಿ.ಶ. ೧೨೨೪ರಲ್ಲಿ ಹೊಯ್ಸಳರ ೨ನೇ ವೀರನಾರಸಿಹನ ಮಂತ್ರಿ ಪೋಲಾಳ್ವನು ಕಟ್ಟಿಸಿದನು ಎಂಬ ಉಲ್ಲೇಖಕ್ಕೂ ಪೂರ್ವದ ಶಾಸನಗಳಾದ ರಾಣೇಬೆನ್ನೂರು ತಾಲೂಕಿನ ಮುದೆನೂರು ಗ್ರಾಮದ ಕ್ರಿ.ಶ. ೧೦೯೮ರ ಕಲ್ಯಾಣ ಚಾಲುಕ್ಯರ ಶಾಸನ, ಅದೇ ತಾಲೂಕಿನ ನದಿಹರಳಹಳ್ಳಿ ಗ್ರಾಮದ ಕ್ರಿ.ಶ. ೧೧೭೨ ರ ಶಾಸನ ಹಾಗೂ ಹರಪನಹಳ್ಳಿ ತಾಲೂಕಿನ ಉಚ್ಚಂಗಿದುರ್ಗ, ತೆಲಿಗಿಯ ಶಾಸನಗಳು ಹರಿಹರದ ಸಂಕರನಾರಾಯಣ(ಹರಿಹರೇಶ್ವರ) ದೇವಾಲಯವನ್ನು ಉಲ್ಲೇಖಿಸುತ್ತದೆ.

೫೯. S.I.I, Vol-18 mudernur,101, A.D,1098, P.108

೬೦. ಎ.ಕ.ಸಂ.೧೧, ಶಾ.ಸಂ.೨೨–೫೯, ದಾವಣಗೆರೆ

೬೧. ಅಲೆಕ್ಸಾಂಡರ್ ರೇ,೧೮೯೬, ಚಾಲುಕ್ಯನ್ ಆರ್ಕಿಟೆಕ್ಚರ್, ಪು.೩೪

೬೨. ತಿಪ್ಪೇಸ್ವಾಮಿ ಎಚ್., ೨೦೦೧, ಪೂರ್ವೋಕ್ತ, ಪು.೧೫೮-೧೫೯

೬೩. ಅದೇ, ಪು.೧೫೯

೬೪. ಅದೇ, ಪು.೧೫೯

೬೫. ಶಂಕರನಾರಾಯಣರಾವ್ ಎಚ್.ಎಂ., ೧೯೮೨, ಶ್ರೀಹರಿಹರ ದೇವಾಲಯ ಪು.೧೪೧

೬೬. ಮಂಜನಾಥ ಡಿ., ೧೯೯೭, ಮಧ್ಯಕಾಲದಲ್ಲಿ ದೇವಾಲಯದ ಆಶ್ರಯ ಪಾಲನೆ ಮತ್ತು ನಿರ್ವಹಣೆ ಹರಿಹರ ದೇವಾಲಯ ಒಂದು ಅಧ್ಯಯನ, ಅಪ್ರಕಟಿತ ಎಂ.ಫಿಲ್. ಪ್ರಬಂಧ, ಪು.೩೫

೬೭. ಎ.ಕ.,ಸಂ,೧೧, ಶಾ,ಸಂ,೩೫, ದಾವಣಗೆರೆ

೬೮. ಅನಂತಾಲ್ವರ್ ಎಂ.ಎ.,(ಸಂ.) ಮತ್ತು ಅಲೇಕ್ಸಾಂಡರ್ ರೇ(ಸಂ,ಸಂ.),೧೯೧೮, ಇಂಡಿಯನ್ ಆರ್ಕಿಟೆಕ್ಚರ್, ಪು.೨೭೬

೬೯. ಶಂಕರನಾರಾಯಣರಾವ್ ಎಚ್.ಎಂ., ೧೯೮೨, ಪೂರ್ವೋಕ್ತ, ಪು,೧೩೮ ಅಷ್ಟದಿಕ್ಪಾ ಮಧ್ಯದಲ್ಲಿ ಪಟ್ಟಿಕೆಯಲ್ಲಿ ಮೊದಲು ಹರಿಹರೇಶ್ವರ ಶಿಲ್ಪವಿತ್ತೆಂದು ನಂತರ ಅಲ್ಲಿನ ಶಿಲ್ಪವನ್ನು ತೆಗೆದು ಬೇರೆಡೆ ಸ್ಥಾಪಿಸಿದರಂತೆ ಎಂದು ಹರಿಹರ ದೇವಾಲಯದ ಪುಸ್ತಕದಲ್ಲಿ ಉಲ್ಲೇಖವಾಗಿದೆ. ಇದೇ ರೀತಿ ಅಷ್ಟದಿಕ್ಪಾಲಕರ ಶಿಲ್ಪಗಳನ್ನು ಹತ್ತಿರದ ನಂದಿತಾವರೆಯ ಅಮೃತಲಿಂಗ ಮಾಣಿಕೇಶ್ವರ ದೇವಾಲಯದಲ್ಲೂ ಸಹ ಕಾಣಬಹುದು.

೭೦. M.A.R., ೧೯೩೮, ಪು.೭೧

೭೧. ಸುರೇಶ್ ಬಿ., ೨೦೦೯, ಪೂರ್ವೋಕ್ತ, ಪು.೧೮೨

೭೨. ಅದೇ, ಪು.೧೮೨

೭೩. ಎ.ಕ.,ಸಂ,೧೧, ಶಾ.ಸಂ,೨೩,೨೮,೪೫,೫೭, ದಾವಣಗೆರೆ

೭೪. ಎ.ಕ.,ಸಂ,೧೧, ಶಾ,ಸಂ,೬೬, ದಾವಣಗೆರೆ

೭೫. ಕ.ವಿ.ಶಾ.ಸಂ.೧, ಹರಪನಹಳ್ಳಿ, ಶಾ,ಸಂ,೪೦

೭೬. S.I.I, vol-18, muderun,101, A.D, 1098, P.108

೭೭. ಕವಿಶಾಸಂ.೧, ಹರಪನಹಳ್ಳಿ ಶಾ.ಸಂ೭. ಪು.೪೬೫,-೪೬೬

೭೮. SII, vol-18, Nadiharlahalli, 183, A.D,1172, P.210

೭೯. ಎರಡು ನದಿಗಳ ಸಂಗಮದಲ್ಲಿನ ಗ್ರಾಮಕ್ಕೆ ಕೂಡಲೂರು ಎಂಬುದು ಸಾಮಾನ್ಯ.

೮೦. ಇ.ದ.,ಸಂ.೨, ೧೯೯೩, ಚಂದನ್ (ಸಿಲ್ವಿಯಾ), ಹರಿಹರದ ಸಂಗಮೇಶ್ವರ ದೇವಾಲಯ, ಪು.೫೨

೮೧. ಎ.ಕ.,ಸಂ,೧೧, ಶಾ.ಸಂ,೪೧, ದಾವಣಗೆರೆ

೮೨. ಅದೇ, ಶಾ.ಸಂ,೫೯, ದಾವಣಗೆರೆ

೮೩. ತಿಪ್ಪೇಸ್ವಾಮಿ ಎಚ್., ೨೦೦೧, ಪೂರ್ವೋಕ್ತ, ಪು.೧೫೧

೮೪. ಎ.ಕ.,ಸಂ, ೧೧, ಶಾ.ಸಂ, ೫೯, ದಾವಣಗೆರೆ

೮೫. ತಿಪ್ಪೇಸ್ವಾಮಿ ಎಚ್. ೨೦೦೧, ಪುರ್ವೋಕ್ತ, ಪು.೧೫೧

೮೬. ಅದೇ,ಪು.೧೫೧

೮೭. ಇ.ದ.,ಸಂ೨೫, ೨೦೧೦, ರಾಕೇಶ್ ಬಿ.ಸಿ., ಕೊಕ್ಕನೂರಿನ ಈಶ್ವರ ದೇವಾಲಯ, ಪು.೧೬೨

೮೮. ಅದೇ, ಪು.೧೬೦

೮೯. ಅದೇ, ಪು.೧೬೨

೯೦. ಅದೇ, ಪು.೧೬೨

೯೧. ಎ.ಕ.,ಸಂ,೧೧, ಶಾ.ಸಂ,೩೯, ದಾವಣಗೆರೆ

೯೨. ಅದೇ, ಶಾ.ಸಂ,೭೪, ದಾವಣಗೆರೆ

೯೩. ಬೆಟಗೇರಿ ಕೃಷ್ಣಶರ್ಮ, ೧೯೮೩, ಕರ್ನಾಟಕ ಜನಜೀವನ, ಪು.೫೩

೯೪. ಕ್ಷೇತ್ರಕಾರ್ಯದಲ್ಲಿ ತಿಳಿದು ಬಂದ ಮಾಹಿತಿ.

೯೫. ಎ.ಕ.,ಸಂ,೧೧, ಶಾ.ಸಂ,೫೯, ದಾವಣಗೆರೆ

೯೬. ಅದೇ, ಶಾ.ಸಂ,೫೯, ದಾವಣಗೆರೆ

೯೭. ಅದೇ, ಶಾ.ಸಂ,೬೮, ದಾವಣಗೆರೆ

೯೮. ಶಿವಶಂಕರ ಎಂ.ಎಲ್., ೧೯೯೭, ಪಾಟೀಲ್ ಸಿ.ಎಸ್., ವಿಜಯನಗರ ಸಾಮ್ರಾಜ್ಯದಲ್ಲಿ ನಗರ ಬೆಳವಣಿಗೆ, ಸಂ.೨, ಪು.೯

೯೯. ಶ್ರೀ ಕಮಲದಾನಿ ಗುರುರಾಯರು, ೨೦೧೨, ಹರಿಹರ ಕ್ಷೇತ್ರಮಹಾತ್ಮೆ, ಪು.೨೦

೧೦೦. ಅದೇ, ಪು.೨೦

೧೦೧. ಕೊಟ್ರೇಶ್ ಎಂ., ೨೦೧೧, ಬಳ್ಳಾರಿ ಜಿಲ್ಲೆಯ ಕೋಟೆಗಳು, ಪು.೩೧

೧೦೨. ತಿಪ್ಪೇಸ್ವಾಮಿ ಎಚ್., ೨೦೦೧, ಪೂರ್ವೋಕ್ತ, ಪು.೧೭೫,-ಮೂರ್ತಿಶಾಸ್ತ್ರ ಗಂಥಗಳಲ್ಲಿ ಸಾಧಾರಣವಾಗಿ ಸಿಗುವ ಶಬ್ದ 'ಪ್ರತಿಮಾ' ಹೋಲುವಂಥದ್ದು ಅನುಸರಿಸಿದ್ದು ಪಡಿಯಚ್ಚು ಎಂಬ ಅರ್ಥ ಬರುತ್ತದೆ. ಪ್ರತಿಕೃತಿ ಪ್ರತಿ+ಕೃತಿ. ಒಂದಕ್ಕೆ ಪ್ರತಿಯಾಗಿ ಮತ್ತೊಂದನ್ನು ಮಾಡಿದ್ದು ಎಂಬ ಅರ್ಥವನ್ನು ಕೊಡುತ್ತದೆ. ವಿಗ್ರಹ, ವಿ+ಗ್ರಹ, ಪ್ರತ್ಯೇಕಿಸಿದ ಆಕಾರ ಎಂಬುರ್ಥವನ್ನು ಕೊಡುತ್ತದೆ. ಪು. ೨೬೭

೧೦೩. ರಾಜರಾಂ ಹೆಗಡೆ, ೧೯೯೨, ಅರಿವು ಬರಹ, ಸಂ.೩, ಭಾಗ-೧(ಲೇಖನ) ಭಾರತೀಯ ಮೂರ್ತಿ ಶಾಸ್ತ್ರ, ಧರ್ಮ ದೇವರಾಧನೆ ಹಾಗೂ ಸಾಂಸ್ಕೃತಿಕ ರಾಜಕೀಯದ ವತಿಹಾಸಿಕ ವಿಶೇಷಣೆ, ಪು.೩೬

೧೦೪. ರಾಮಚಂದ್ರರಾವ್ ಎಸ್.ಕೆ., ೧೯೯೨, ಪ್ರತಿಮಾಕೋಶ, ಸಂ.೬, ಪು. ೨೧೩

೧೦೫. ಪ್ರೋ.ಷೇಕ್ ಅಲಿ, ಸುಂದರ ಅ., (ಸಂ.), ೧೯೯೮, ಕರ್ನಾಟಕ ಚರಿತ್ರೆ ಸಂ,೧ (ಲೇಖನ) ಪ್ರಾಗಿತಿಹಾಸ ಕಾಲದ ನಿರ್ಮಿತಿ ಮತ್ತು ಚಿತ್ರಕಲೆ, ಪು.೨೪೨

೧೦೬. ರಾಜಾರಂ ಹೆಗಡೆ, ೧೯೯೨, ಪೂರ್ವೋಕ್ತ, ಪು.೭೨

೧೦೭. ಅದೇ, ಪು. ೭೮

೧೦೮. M.A.R., ೧೯೩೮, ಪು.೬೮

೧೦೯. ತಿಪ್ಪೇಸ್ವಾಮಿ ಎಚ್., ೨೦೦೧, ಪೂರ್ವೋಕ್ತ, ಪು.೧೮೪

೧೧೦. ಅದೇ, ಪು.೧೯೪

೧೧೧. ಅದೇ, ಪು.೧೯೪

೧೧೨. ಅದೇ, ಪು.೧೯೩

೧೧೩. ಅದೇ, ಪು.೧೯೫

೧೧೪. ವಸಂತ ಲಕ್ಷ್ಮಿ ಕೆ., ೨೦೦೮, ಕರ್ನಾಟಕದ ಶೈವ ಶಿಲ್ಪಗಳು, ಪು.೧೪೭-೧೪೮.

೧೧೫. ಅದೇ, ಪು.೧೪೯

೧೧೬. M.A.R., ೧೯೩೮, ಪು.೭೦

೧೧೭. ತಿಪ್ಪೇಸ್ವಾಮಿ ಎಚ್., ೨೦೦೧, ಪೂರ್ವೋಕ್ತ, ಪು. ೨೦೦

೧೧೮. M.A.R., ೧೯೩೮, ಪು.೭೦

೧೧೯. ತಿಪ್ಪೇಸ್ವಾಮಿ ಎಚ್., ೨೦೦೧, ಪೂರ್ವೋಕ್ತ, ಪು. ೨೦೧

೧೨೦. ಶಿವಶಂಕರ ಎಂ.ಎಲ್., ೧೯೯೭, ಚನ್ನಬಸಪ್ಪ ಎಸ್. ಪಾಟೀಲ್, (ಸಂ.), ಕದಂಬ ಅಧ್ಯಯನ, ಪು. ೨೯-೩೦

೧೨೧. ಸುರೇಶ್ ಬಿ., ೨೦೦೯, ಪೂರ್ವೋಕ್ತ, ಪು. ೨೪೪

೧೨೨. ಶಿವ್ಪೇಸ್ವಾಮಿ ಎಚ್., ೨೦೦೧, ಪೂರ್ವೋಕ್ತ, ಪು. ೨೦೭

೧೨೩. ಅದೇ, ಪು.೨೦೮

೧೨೪. ಅದೇ, ಪು.೨೦೮

೧೨೫. ಅದೇ, ಪು.೨೧೦

೧೨೬. ಎ.ಕ.,ಸಂ,೧೧, ಶಾ,ಸಂ,೧೨೨, ದಾವಣಗೆರೆ

೧೨೭. ಅದೇ, ಶಾ,ಸಂ,೭೦, ದಾವಣಗೆರೆ

೧೨೮. ಕೊಟ್ರೇಶ್ ನಾ ಉತ್ತಂಗಿ, ೨೦೧೩, ಹರಿಹರದೆಳೆಗಳು, ಪು.೩೦೪

೧೨೯. ಸುರೇಶ್ ಬಿ., ೨೦೦೯, ಪೂರ್ವೋಕ್ತ, ಪು.೨೫೬

೧೩೦. ಸುರೇಶ್ ಬಿ., ೨೦೦೯, ಪೂರ್ವೋಕ್ತ, ಪು. ೨೩೬

೧೩೧. Gopinatha Rao T.A., 1961, Elements of Hindu Iconography, vol.-2, P. 383

೧೩೨. Ibid, P. 387

೧೩೩. Ibid, P. 387

೧೩೪. Ibid, P. 384

೧೩೫. Ibid, p. 388

೧೩೬. Ibid, p. 385

೧೩೭ Ibid, p.386

೧೩೮. Ibid .P.334

೧೩೯. ವಸಂತಲಕ್ಷ್ಮೀ ಕೆ., ೨೦೦೮, ಪೂರ್ವೋಕ್ತ, ಪು.೧೧೫-೧೧೬

೧೪೦. ರಾಮಚಂದ್ರರಾವ್ ಎಸ್.ಕೆ., ೧೯೭೫, ಮೂರ್ತಿಶಿಲ್ಪನೆಲೆ-ಹಿನ್ನೆಲೆ, ಪು. ೧೩೦

೧೪೧. ಹರಿಹರೇಶ್ವರ ಮೂರ್ತಿಯ ಕುರಿತು ಇದುವರೆಗೂ ನಡೆದ ಅಧ್ಯಯನದಿಂದ ಮೂರ್ತಿಯು ಕ್ರಿ.ಶ.೨ ರಿಂದ ೬ನೆ ಶತಮಾನದಲ್ಲಿ ರಚಿತವಾದದ್ದೆಂದುಹೇಳಲಾಗಿದೆ.

೧೪೨. ಶಂಕರನಾಯಣರಾವ್ ಎಚ್.ಎಂ., ೧೯೮೨, ಪೂರ್ವೋಕ್ತ, ಪು.೧೩೦

೧೪೩. ಮಂಜುನಾಥ ಡಿ., ೧೯೯೭, ಪೂರ್ವೋಕ್ತ, ಪು.೫೭

೧೪೪. ಶಂಕರನಾರಾಯಣರಾವ್ ಎಚ್ ಎಂ., ೧೯೮೨, ಪೂರ್ವೋಕ್ತ, ಪು. ೯೧ ಮತ್ತು ಅಲೆಕ್ಸಾಂಡರ್ ಠೇ, ೧೮೯೬, ಪೂರ್ವೋಕ್ತ, ಪು.೩೪

೧೪೫. M.A.R., ೧೯೩೮, ಪು.೭೧

೧೪೬. ಸುರೇಶ್ ಬಿ., ೨೦೦೯, ಪೂರ್ವೋಕ್ತ, ಪು.೨೪೮

೧೪೭. ಕೆ. ವೆಂಕಟರಾಯಾಚಾರ್ಯರ ಸನ್ಮಾನ ಗಂಥ, ೧೯೭೯, ಸುಂದರ ಅ., ಪ್ರದೀಪಿಕೆ, ಪು. ೪

೧೪೮. ಶಂಕರನಾರಾಯಣರಾವ್ ಎಚ್.ಎಂ., ೧೯೮೨, ಪೂರ್ವೋಕ್ತ, ಪು.೧೩೪

೧೪೯. ಅದೇ, ಪು.೧೩೫

೧೫೦. ಅದೇ, ಪು.೧೩೬

೧೫೧. M.A.R., ೧೯೧೨, ಪು.೨೧

೧೫೨. ವೆಂಕಟರಾಯಾಚಾರ್ಯರು ಕೆ., ೧೯೭೯, ಪೂರ್ವೋಕ್ತ, ಪು.೪

೧೫೩. ಇ.ದ.ಸಂ.೨೯, ೨೦೧೪, ಹರಿಹರ ಶ್ರೀನಿವಾಸರಾವ್, ಹರಿಹರದ ಹರಿಹರೇಶ್ವರ ಮೂರ್ತಿಶಿಲ್ಪ ಇತ್ತೀಚಿನ ವಿಶ್ಲೇಷಣೆ, ಪು.೧೭೯

೧೫೪. ಗಿರಿಜ ಟಿ., ೨೦೦೧, ದಾವಣಗೆರೆ. ಇದು ನಮ್ಮ ಜಿಲ್ಲೆ, ಪು.೪೫೬-೪೭೩

೧೫೫. ಪರಮಶಿವಮೂರ್ತಿ ಡಿ.ವಿ., ೧೯೯೯, ಕನ್ನಡ ಶಾಸನಶಿಲ್ಪ, ಪು.೭

೧೫೬. ಭಟ್‌ಸೂರಿ ಕೆ.ಜಿ., ೨೦೧೧, ಹಾಡುವಳ್ಳಿ ಜೈನ ಶಾಸನ ವಾಸ್ತು-ಮೂರ್ತಿಶಿಲ್ಪ, ಪು.೬೮

೧೫೭. Karnataka Inscriptions, ಸಂ.೧, ಶಾ.ಸಂ.೮

೧೫೮. ಭಟ್‌ಸೂರಿ ಕೆ.ಜಿ., ೨೦೧೧, ಪೂರ್ವೋಕ್ತ, ಪು.೭೩

೧೫೯. M.A.R., ೧೯೨೬, ಪು, ೫೮ ಮತ್ತು ಭಟ್‌ಸೂರಿ ಕೆ.ಜಿ., ೨೦೧೧, ಪೂರ್ವೋಕ್ತ, ಪು.೭೩

೧೬೦. ಎಂ.ಕ.ಸಂ.೧೧, ಶಾ.ಸಂ.೧೦೦, ದಾವಣಗೆರೆ

೧೬೧. ಅದೇ, ಶಾ.ಸಂ.೧೦೨, ದಾವಣಗೆರೆ

೧೬೨. ಅದೇ, ಶಾ.ಸಂ.೧೦೧, ದಾವಣಗೆರೆ

೧೬೩. ಅದೇ, ಶಾ.ಸಂ.೧೧೫, ದಾವಣಗೆರೆ

೧೬೪. ಅದೇ, ಶಾ.ಸಂ,೮೭, ದಾವಣಗೆರೆ

೧೬೫. ಪರಮಶಿವಮೂರ್ತಿ ಡಿ.ವಿ., ೨೦೧೧, ತುರುಗೊಳ್ ಸಂಕಥನ, ಪು.೧೪

೧೬೬. ಅದೇ, ಪು.೨೯

೧೬೭. ಅದೇ, ಪು.೩೦

೧೬೮. ಎ.ಕ.,ಸಂ, ೧೧, ಶಾ,ಸಂ,೭೫, ದಾವಣಗೆರೆ

೧೬೯. ಇ.ದ.,ಸಂ,೩೦, ೨೦೧೫, ನಾಗರಾಜಪ್ಪ ಎಸ್., ಕುಂಬಳೂರು ಗ್ರಾಮದ ಅಪ್ರಕಟಿತ ತುರುಗೋಳ್ ಊರಳಿವಿನ ಸ್ಮಾರಕಗಳು, ಪು.೬೪

೧೭೦. ಅದೇ, ಪು.೬೪

೧೭೧. ಅದೇ, ಪು.೬೬

೧೭೨. ಪರಮಶಿವಮೂರ್ತಿ ಡಿ.ವಿ., ೧೯೯೯, ಪೂರ್ವೋಕ್ತ, ಪು. ೯೦

೧೭೩. ಚಿದಾನಂದಮೂರ್ತಿ ಎಂ., ೧೯೯೬, ಕನ್ನಡ ಶಾಸನಗಳು ಸಾಂಸ್ಕೃತಿಕ ಅಧ್ಯಯನ, ಪು. ೩೫೩

೧೭೪. ಪರಮಶಿವಮೂರ್ತಿ ಡಿ.ವಿ., ೧೯೯೯, ಪೂರ್ವೋಕ್ತ, ಪು.೯೦

೧೭೫. ಭಟ್‌ಸೂರಿ ಕೆ.ಜಿ., ೨೦೧೧, ಪೂರ್ವೋಕ್ತ, ಪು. ೭೫-೭೬

೧೭೬. ಎ.ಕ.ಸಂ, ೮, ಶಾ,ಸಂ,೫೨೩, ಸೊರಬ

೧೭೭. ಎ.ಕ.,ಸಂ,೧೧, ಶಾ,ಸಂ,೧೧೭, ದಾವಣಗೆರೆ

೧೭೮. ಅದೇ, ಶಾ,ಸಂ,೧೧೬, ದಾವಣಗೆರೆ

೧೭೯. ತಿಪ್ಪೇಸ್ವಾಮಿ ಎಚ್., ೨೦೦೧, ಪೂರ್ವೋಕ್ತ, ಪು.೨೫೫

೧೮೦. ಸಿಂದಗಿ ರಾಜಶೇಖರ್, ೧೯೮೮, ಕರ್ನಾಟಕ ವಾಸ್ತುಶಿಲ್ಪ ಮತ್ತು ಚಿತ್ರಕಲೆ, ಪು.೧೦

ಅಧ್ಯಾಯ ಐದು

ನಂಬಿಕೆ ಮತ್ತು ಆಚರಣೆ

೫.೧ ಸ್ಥಳಪುರಾಣ

೫.೨ ಐತಿಹ್ಯ

೫.೩ ಜಾತ್ರೆ ಮತ್ತು ಉತ್ಸವ

ಅಧ್ಯಾಯ ಐದು

ನಂಬಿಕೆ ಮತ್ತು ಆಚರಣೆ

ಒಂದು ಸಮಾಜದ ವ್ಯಕ್ತಿಗಳು ಪರಂಪರಾಗತವಾಗಿ ನಡೆಸಿಕೊಂಡು ಬರುವ ನಿರ್ದಿಷ್ಟವಾದ ನೀತಿ ನಡತೆಗಳಿಗೆ ಆ ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ಬದ್ಧನಾಗಿ ನಡೆದುಕೊಳ್ಳಬೇಕು.ಈ ನಡವಳಿಕೆ ಹೆಚ್ಚು ಕಾಲ ರೂಢಿಗೆ ಬಂದಾಗ ಆಚಾರ ಎನಿಸಿಕೊಳ್ಳುತ್ತದೆ[೧]. ಸಮಾಜವು ವ್ಯವಸ್ಥಿತವಾಗಿ ನಡೆಯಲು ಜನಪದರು ಕೆಲವೊಂದು ಆಚಾರಗಳನ್ನು ರೂಢಿಗೆ ತಂದರು ಅಂತಹ ಆಚಾರಗಳಲ್ಲಿ ನಂಬಿಕೆಗಳು ಗಣನೀಯವಾದ ಪಾತ್ರವಹಿಸುತ್ತವೆ. ನಂಬಿಕೆಗಳೇ ಸಂಪ್ರದಾಯಗಳಿಗೆ ಮೂಲ. ಮಾನವ ಸಂಸ್ಕೃತಿಯ ಅವಿಭಾಜ್ಯ ಅಂಗವಾದ ನಂಬಿಕೆಯು ಈತನ ಜೀವನ ವಿಧಾನ ವಿವಿಧ ನಡವಳಿಕೆಗಳನ್ನು ಪ್ರತಿಬಿಂಬಿಸುತ್ತದೆ. ಇವುಗಳ ವ್ಯಾಪ್ತಿ ಗ್ರಾಮೀಣ ಜನರಿಗೆ ಮಾತ್ರ ಸೀಮಿತವಾಗಿದೆ. ಹೀಗಾಗಿ ನಂಬಿಕೆಗಳ ಹರವು ಮಾನವ ಸಂಸ್ಕೃತಿಯಲ್ಲಿ ಮಾತ್ರವಲ್ಲದೆ ಮಾನವ ನಾಗರಿಕತೆಯಲ್ಲೂ ಕಂಡುಬರುತ್ತದೆ. ಈ ಆಚಾರಗಳಿಗೆ ನಿಯಮ, ಸರಿ ತಪ್ಪುಗಳ ಭಾವನೆ ಮತ್ತು ಸೂಕ್ತ ಅಸೂಕ್ತವೆಂಬ ನಿರ್ಬಂಧಗಳು ಸೇರಿಕೊಳ್ಳುತ್ತದೆ.[೨] ಒಬ್ಬ ವ್ಯಕ್ತಿ ನಂಬುವ ತತ್ವ, ಸಿದ್ಧಾಂತ, ಮತ ಏನೇ ಇರಲಿ, ಅವನ ಆಚರಣೆ, ಅಷ್ಠಾನುಷ್ಠಾನ ನಿತ್ಯ ಜೀವನದಲ್ಲಿ ತನ್ನ ಕೆಲಸ ಕಾರ್ಯಗಳ ರೀತಿ ಇವು ಬಹಳ ಮುಖ್ಯ ಇಂಥ ಆಚರಣೆಯಿಂದಲೇ ಆತ ಧರ್ಮವನ್ನು ರಕ್ಷಿಸಿದಂತೆ ಆಗುವುದು. ಆಚಾರ ಇಷ್ಟು ಮುಖ್ಯವಾದುದರಿಂದ ಭಾರತದಲ್ಲಿ ಅತಿ ಪ್ರಾಚೀನ ಕಾಲದಲ್ಲೇ ಇದನ್ನು ನಿಯಮಿಸುವ ಧರ್ಮ ಶಾಸ್ತ್ರಗಳು ಜನ್ಮ ತಾಳಿದವು.[೩] ಈ ರೀತಿಯ ಧರ್ಮಶಾಸ್ತ್ರಗಳು ಭಾರತೀಯರ ಜೀವನದಲ್ಲಿ ಪ್ರಬಲವಾಗಿ ಧಾರ್ಮಿಕ ನಂಬಿಕೆಗಳಾಗಿ ಕೆಲಸ ಮಾಡುತ್ತವೆ. ಇದು ಮಾನವನ ಸಾಮೂಹಿಕ ಬದುಕಿನ ಸಂದರ್ಭದಲ್ಲೇ ಹುಟ್ಟಿರಬೇಕು ಇವುಗಳ ಹುಟ್ಟಿನ ಹಿಂದೆ ಜೀವನಾನುಭವವಿದೆ. ಪ್ರಕೃತಿಯಲ್ಲಿ ನಡೆಯಲು ಅನೇಕ ಘಟನೆಗಳ ಕುರಿತಾದ ಅಪೂರ್ವ ಕಲ್ಪನೆ ಅತಿಮಾನುಷ ಶಕ್ತಿಯ ಭಯ ಇತ್ಯಾದಿಗಳು ನಂಬಿಕೆಗಳ ಹುಟ್ಟಿಗೆ ಕಾರಣವಾಗಿರುವುದು.[೪]

ಗ್ರಾಮೀಣ ಪ್ರದೇಶಗಳಲ್ಲಿ ದೇವರಿಗೆ ಹರಕೆ ಮಾಡಿಕೊಳ್ಳುವ ಪದ್ಧತಿ ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿರುವುದು ಕಾಣಬರುತ್ತದೆ ರೋಗರುಜಿನಗಳನ್ನು ವಾಸಿ ಮಾಡುತ್ತಾನೆ. ಎಂಬುದು ಅವನ ನಂಬಿಕೆ ಇದರಿಂದ ಅವರು ಹಲವಾರು ರೀತಿಯ ಆಚರಣೆಗಳನ್ನು ಆಚರಿಸುತ್ತಾ ಬಂದಿದ್ದು

ತಿಳಿದುಬರುತ್ತದೆ. ಹರಕೆ ಕಟ್ಟಿಕೊಂಡರೆ ದೇವರು ರಕ್ಷಿಸುತ್ತಾನೆ. ಎಂಬ ನಂಬಿಕೆಯೇ ಅವರ ನೆಮ್ಮದಿಗೆ ಕಾರಣವಾಗಿದೆ. ರೋಗ ನಿವಾರಣೆಯಲ್ಲಿ ಮಹತ್ತರವಾದ ಪಾತ್ರವಹಿಸಿದ್ದು ಕಾಣಬರುತ್ತದೆ. ನಂಬಿಕೆಗಳು ಹಳ್ಳಿಗಳಲ್ಲಿ ಆಚಾರ–ವಿಚಾರ ಮತ್ತು ಪದ್ಧತಿಗಳಲ್ಲಿ ಪ್ರಚಲಿತವಾಗಿದೆ. ಐತಿಹಾಸಿಕವಾಗಿ ಇವುಗಳನ್ನು ಗಮನಿಸಿದರೆ, ಬಹುತೇಕ ನಂಬಿಕೆಗಳು ಪ್ರಕೃತಿ ಮೂಲವಾಗಿ ಹುಟ್ಟಿಕೊಂಡವುಗಳೇ ಆಗಿವೆ. ಈ ನಂಬಿಕೆಗಳು ಮಾನವನ ಜೀವನವನ್ನು ನಿಯಂತ್ರಿಸುವ ಪ್ರಬಲಶಕ್ತಿಗಳಾಗಿ ಬೆಳೆದು ಉಳಿದುಕೊಂಡು ಬಂದಿವೆ.[೫]

ಕೆಲವು ಸಲ ನಂಬಿಕೆಗಳು ಪ್ರಾಯಶ್ಚಿತ ರೂಪವಾಗಿ ಹುಟ್ಟಿಕೊಂಡಿರಲೂಬಹುದು. ಉದಾಹರಣೆಗೆ ಜನಸಾಮಾನ್ಯರು. ತಮ್ಮ ತಪ್ಪಿಗೆ ಜ್ಞಾನಿಗಳಲ್ಲಿಗೆ ಹೋಗಿ ಪಾಪಕ್ಕೆ ಪರಿಹಾರವೇನು? ಎಂದು ತಿಳಿದುಕೊಂಡು ಅಲ್ಲಿ ಸಿಕ್ಕಿದ ಪರಿಹಾರವೇ ಒಂದು ನಂಬಿಕೆಯಾಗಿ ಕಾಲಾನುಕ್ರಮದಲ್ಲಿ ಬೆಳೆದಿರುವ ಸಾಧ್ಯತೆ ಇದೆ. ಮಕ್ಕಳಾಗದವರು ಅಶ್ವಥ ಮರವನ್ನು ಪೂಜಿಸಿದರೆ ಮಕ್ಕಾಳಾಗುತ್ತವೆ ಅಥವಾ ತಪಸ್ಸು ಮಾಡಿದರೆ ಪಾಪ ಪರಿಹಾರವಾಗುತ್ತದೆ ಎಂಬ ನಂಬಿಕೆಗಳು ಈ ರೀತಿಯಲ್ಲಿ ಬಹುಮಟ್ಟಿಗಿರಬಹುದು ಪ್ರಾಚೀನ ಮಾನವ ಅಕ್ಷರಸ್ಥನಾಗಿಲ್ಲದಿದ್ದರೂ ಅವನದೇ ಆದ ಧಾರ್ಮಿಕ ನಂಬಿಕೆ ಹಾಗೂ ಆಚರಣೆಗಳೂ ಇದ್ದವು ಎಂಬುದನ್ನು ನಾವಿಲ್ಲಿ ಮರೆಯಲು ಹಾಗಿಲ್ಲ.

ನಾವಿಲ್ಲಿ ತನ್ನ ನೇರವಾದ ಅನುಭವಕ್ಕೆ ಬಂದ ಅನೇಕ ವಸ್ತು ಸಂಗತಿಗಳನ್ನು ತಮ್ಮ ನಂಬಿಕೆಗೆ ಮೂಲ ದ್ರವ್ಯವಾಗಿ ಪರಿಭಾವಿಸಿ ಅದನ್ನೆ ಅಚಲ ನಿಷ್ಠೆಯಲ್ಲಿ ಪರಿವರ್ತಿಸಿಕೊಂಡು ಆ ವಸ್ತುವನ್ನು ದೈವೀಕರಣಗೊಳಿಸಿ ಪೂಜಿಸುವ ಪರಂಪರೆ ಪ್ರಪಂಚದ ಅನೇಕ ಜನಪದ ವೃಂದಗಳಲ್ಲಿರುವುದನ್ನು ಕಾಣುತೇವೆ. ತಮ್ಮ ಜೀವನಕ್ಕೆ ಈ ಅದ್ಭುತ ದೈವೀ ಶಕ್ತಿಗಳು ಹಿತಸಮೃದ್ಧಿಗಳನ್ನು ಉಂಟು ಮಾಡುಬೇಕು ಎಂದು ಸ್ತುತಿಸುವುದು ಎಳ್ಳುಜೀರಿಗೆ ಬೆಳೆಯುವ ಭೂಮಿತಾಯಿಯನ್ನು 'ಎದ್ದೊಂದುಗಳಿಗೆನೆನೆದೇನ' ಎನ್ನುವಲ್ಲಿ ಎದ್ದು ಕಾಣುತ್ತದೆ. ಹಾಗೆ ಮಾಡದಿದ್ದರೆ ಈ 'ದೈವ' ನಮ್ಮ ಮೇಲೆ ಅನಿಷ್ಟವನ್ನು ತಂದೀತು ಆದುದರಿಂದ ಅದರ ಪ್ರಾರ್ಥನೆ ಜನಪದರು ಅಗಣಿತ ಆಚರಣೆಗಳಲ್ಲಿ ಪ್ರಧಾನವಾಗಿ ಕಾಣುವುದು ಸ್ತುತಿ ಮನುಷ್ಯನ ವಾಸ್ತವ ಜೀವನದಲ್ಲಿ ಉಂಟಾಗುವ ಆತಂಕ ಕಷ್ಟಗಳನ್ನು ನಿವಾರಿಸುವಲ್ಲಿ ಇಂದು ಮೆಚ್ಚುಗೆಯ ಮಧ್ಯಸ್ಥಿಕೆ ವಹಿಸುವ ಹಾಗೆ ಅಥವಾ ಆತ ದೈವೀ ಶಕ್ತಿಗಳ ಕೃಪೆಯಿಂದ ಕೋರುವ ಹಾಗೆ ಈ ಪ್ರಾರ್ಥನೆ. ದೇವರ ಮಕ್ಕಳಂತೆ ಏನು ಮಾಡಬೇಕು ಎನ್ನುವುದು ಅವರಿಗೆ ಹೇಳಬೇಕಾದುದು ಅಗತ್ಯ.[೬]

ಸಂಸ್ಕತಿಯ ಪುನರುತ್ಥಾನವೆ ಹಬ್ಬ ಎಂದು ಕರೆಯುತ್ತೇವೆ. ಅದು ತನ್ನದೇ ಆದಂತಹ ನಂಬಿಕೆ ಮತ್ತು ಆಚರಣೆಗಳ ಮೇಲೆ ನಿಂತು ಸಂಪ್ರದಾಯಗಳನ್ನು ಪ್ರತಿಬಿಂಬಿಸುತ್ತದೆ. ಜನಪದ ಸಂಸ್ಕತಿಗೆ ಆಚರಣೆಯೇ ಬೆನ್ನೆಲುಬು ಆಚರಣೆ ಇಲ್ಲದೆ ಯಾವ ದೈವದ ಅಸ್ತಿತ್ವವೂ ಸಾಧ್ಯವಿಲ್ಲ. ಜನಪದ ಧರ್ಮ ಎಂಬುದು ಇಂದು ಆಚರಣೆಯ ಧರ್ಮವಾಗಿ ಮಾರ್ಪಾಡುಗೊಳ್ಳುತ್ತದೆ ಇದರಿಂದ ದೇವತೆಗೂ ಸಮಾಜಕ್ಕೂ ಸಂಬಂಧದಲ್ಲಿ ಅಭಿನಯಗೊಳ್ಳುವ ಕ್ರಮದ ಆಚರಣೆಗಳ್ನು ಹಾಗೂ ಅದರ ಸ್ವರೂಪವನ್ನು ತಿಳಿಸುವಲ್ಲಿ ಅದು ಸಹಾಯಕವಾಗಿದೆ. ಸಂಪ್ರದಾಯ ಅಂಗೀಕರಿಸಿದ

ಧಾರ್ಮಿಕ ಮತ್ತು ಯಾಂತ್ರಿಕ ಆಚರಣೆಗಳ ಮೊತ್ತವೇ ಆಚರಣೆ. ನಂಬಿಕೆ ಆಚರಣೆಯ ಬೆನ್ನೆಲುಬು ನಂಬಿಕೆಯ ಸಿದ್ಧಾಂತದ ಆಚರಣೆಯನ್ನು ಮುಂದುವರೆಸಿಕೊಂಡು ಹೋಗುವಂತೆ ಮಾಡುತ್ತದೆ.[೬] ಹಬ್ಬದ ಸಂದರ್ಭದಲ್ಲಿ ಆಚರಿಸುವ ಆಚರಣೆಗಳು ಆ ಗ್ರಾಮದ ಹಾಗೂ ಅಲ್ಲಿಯ ದೇವತೆಯ ಮಹತ್ವವನ್ನು ಪ್ರತಿಬಿಂಬಿಸುತ್ತದೆ. ಜನರು ಭಯಭಕ್ತಿಯಿಂದ ಆಚರಣೆಗಳನ್ನು ಆಚರಿಸಿ ಪ್ರತಿಯೊಂದರಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದನ್ನು ಕಾಣುತ್ತೇವೆ ಪ್ರಸ್ತುತವಾಗಿ ಗ್ರಾಮಗಳಲ್ಲಿ ಆಚರಣೆಗಳು ರೂಢಿಯಲ್ಲಿವೆ.

ಭಾವನೆ ಮತ್ತು ಆಲೋಚನೆಯ ರೂಪದಲ್ಲಿ ನಂಬಿಕೆಯಿದ್ದು ಕ್ರಿಯಾರೂಪದಲ್ಲಿ ಆಚರಣೆ ಇರುತ್ತದೆ ಒಟ್ಟನಲ್ಲಿ ನಂಬಿಕೆ ಮತ್ತು ಆಚರಣೆಗಳಿಗೆ ಪರಸ್ಪರ ಸಂಬಂಧವಿದ್ದು ಒಂದನ್ನೊಂದು ಪ್ರತಿನಿಧಿಸುತ್ತವೆ ಎನ್ನಬಹುದು.[೭] ಈ ನಂಬಿಕೆ ಆಚರಣೆಯ ಸಂಸ್ಕೃತಿಯಲ್ಲಿ ಹರಿಹರ ತಾಲೂಕಿನ ಸ್ಥಳಪುರಾಣ, ಐತಿಹ್ಯ, ಜಾತ್ರೆ, ಉತ್ಸವ ಮತ್ತು ಧಾರ್ಮಿಕ ಆಚರಣೆಗಳು ಸಮಾವೇಶಗೊಂಡಿವೆ ಗ್ರಾಮ ಅಥವಾ ಸಮುದಾಯದ ಸಂಸ್ಕೃತಿಯನ್ನು ತಿಳಿದುಕೊಳ್ಳುವಲ್ಲಿ ಈ ಎಲ್ಲಾ ಕ್ಷೇತ್ರಗಳು ನಿರ್ಧರಿತ ಅಂಶಗಳಾಗಿವೆ. ಸಂಸ್ಕೃತಿ ಎಂಬುದು ನಿಂತ ನೀರಲ್ಲ, ಅದು ಹರಿಯುವ ಹೊಳೆಯಾಗಿದೆ ಗ್ರಾಮದಿಂದ ಗ್ರಾಮಕ್ಕೆ ಪ್ರದೇಶದಿಂದ ಪ್ರದೇಶಕ್ಕೆ ಬದಲಾವಣೆಯಾಗಿ ಬೆಳೆಯುತ್ತಿರುವುದು ವಿಶೇಷವಾಗಿದೆ. ಮನುಷ್ಯ ಅಕ್ಷರ ಬಲ್ಲವನಾಗುತ್ತಿದ್ದಂತೆಯೇ ಪರಂಪರಾಗತ ಕಲೆ, ನಂಬಿಕೆ, ಆಚರಣೆ, ಉತ್ಸವ ಮುಂತಾದ ಚಟುವಟಿಕೆಗಳು ದೂರಾಗುವ ಅಪಾಯದ ಸನ್ನಿವೇಶ ಪ್ರಸ್ತುತ ದಿನಗಳಲ್ಲಿ ನಿರ್ಮಾಣವಾಗಿದೆ ಈ ಹಿನ್ನೆಲೆಯಲ್ಲಿ ಅವುಗಳ ಕುರಿತ ಅಧ್ಯಯನಕ್ಕೆ ಹೆಚ್ಚು ಮಹತ್ವ ನೀಡುವುದು ಅತ್ಯವಶ್ಯಕವಾಗಿದೆ.

೫.೧. ಸ್ಥಳಪುರಾಣ

ಪ್ರಕೃತಿಯ ರಹಸ್ಯವನ್ನು, ಜೀವನಾಂತರಂಗವನ್ನು ವಿವರಿಸಲು ನಮ್ಮಲ್ಲಿ ಮೊದಲು ವೇದಗಳು ಹುಟ್ಟಿಕೊಂಡರೆ, ವೇದಾಂತರಂಗವನ್ನು ವಿವರಿಸಲು ಆಗಮಗಳು, ಉಪನಿಷತ್ತುಗಳು ಹುಟ್ಟಿಕೊಂಡವು. ಉಪನಿಷತ್ತುಗಳಿಂದ ಶಾಸ್ತ್ರಗಳನ್ನು ರಚಿಸಿದಂತೆ, ಜನಸಾಮಾನ್ಯರಿಗೆ ಶಾಸ್ತ್ರಗಳು ಸುಲಭವಾಗಿ ಅರ್ಥವಾಗಲು ಕಥಾರೂಪದಲ್ಲಿ ಹೇಳಲು ಪುರಾಣಗಳನ್ನು ಸೃಷ್ಟಿಸಲಾಯಿತು. ಜನಸಾಮಾನ್ಯರ ಮನಸ್ಸನ್ನು ಒಲಿಸಿಕೊಳ್ಳಲು ಅಪೂರ್ವವಾದ ಕಥೆ ಸೃಷ್ಟಿಸಿದರು. ಇದನ್ನು ನಾವು ದೇವಿಮಹಾತ್ಮೆ, ಹಾಗೂ ಶಿವಪುರಾಣಗಳಲ್ಲಿ ಕಾಣುತ್ತೇವೆ. ಭಯದ ಮೂಲಕ ಭಕ್ತಿ ಹುಟ್ಟಿಸುವುದು ಗುರಿಯಾಗಿದೆ ಹೀಗೆ ಹುಟ್ಟಿದ ಭಕ್ತಿ ನೆಲೆಯೂರುವಂತೆ ಮಾಡುವುದು ಪುರಾಣಗಳ ನೆಲೆಯೂರಿದ ಭಕ್ತಿ ಪೀಳಿಗೆಯಿಂದ ಪೀಳಿಗೆಗೆ ಮುಂದುವರೆದುಕೊಂಡು ಹೋಗುವಂತೆ ಮಾಡುವುದೇ ಪುರಾಣಗಳ ಹುಟ್ಟಾಗಿದೆ.[೮] ಪುರಾಣದ ಪ್ರಭಾವ ನಮ್ಮ ಜೀವನದ ಮೇಲೆ ಆಗಿರುವುದನ್ನು ಗಮನಿಸಿದಾಗ ಆಶ್ಚರ್ಯವೆನಿಸುತ್ತದೆ. ಈ ಹಿನ್ನೆಲೆಯಲ್ಲಿ ಹರಿಹರ ಕೂಡ ಪೌರಾಣಿಕ ಇತಿಹಾಸದಲ್ಲಿ ಮಹತ್ವದ ಪಾತ್ರವಹಿಸಿದೆ. ರಾಮಾಯಣ ಮಹಾಭಾರತದಲ್ಲಿ ವಿಷ್ಣು ಶಿವ (ಹರಿಹರ) ದೇವತೆಗಳ ಧಾರ್ಮಿಕ

ಸಂಘರ್ಷಗಳು, ಒಂದು ಕಡೆ ಹರಿಹರ ಏಕೀಭವದಿಂದ ದುಷ್ಟ ಶಕ್ತಿಗಳನ್ನು ನಿರ್ಮೂಲನಗೊಳಿಸಿದ ಹಲವಾರು ಘಟನೆಗಳು ಈ ಪರಿಸರದಲ್ಲಿ ಬೆಳೆದಿವೆ ಹಾಗಾಗಿ ಹರಿಹರ ತಾಲೂಕಿನ ಸ್ಥಳಪುರಾಣಗಳನ್ನು ವಿಶ್ಲೇಷಣಾತ್ಮಕವಾಗಿ ಗಮನಿಸಬಹುದು.

ಗುಹಾರಣ್ಯ ಕ್ಷೇತ್ರ: ಪುರಾತನ ಕಾಲದಲ್ಲಿ ಗುಹಾರಣ್ಯ ಕ್ಷೇತ್ರದ ಅತ್ಯಂತ ಪವಿತ್ರವಾದ ತಂಗಭದ್ರೆಯ ದಡದ ಮೇಲೆ ಗುಹಾಸುರನು ಇಂದ್ರಿಯಗಳನ್ನು ನಿಗ್ರಹಿಸಿ, ಬ್ರಹ್ಮ ದೇವನನ್ನು ಕುರಿತು ತಲೆಕೆಳಗಾಗಿ ನಿಂತು ತೊಂಬತ್ತಾರು ವರ್ಷಗಳ ಕಾಲ, ತಪಸ್ಸನ್ನು ಆಚರಿಸಿದನು. ಆ ತಪಸ್ಸಿಗೆ ಸುಪ್ರಿತನಾದ ಬ್ರಹ್ಮನು ಪ್ರತ್ಯಕ್ಷನಾಗಿ ಗುಹಾಸುರನಿಗೆ ಅವನಿಷ್ಟವಾದ ವರವನ್ನು ಅನುಗ್ರಹಿಸಿದ್ದರಿಂದ ಗುಹಾಸುರನು ಲೋಕಕಂಟಕನಾಗಿ, ಸುರರಿಗೂ, ನರರಿಗೂ, ಬ್ರಾಹ್ಮಣ, ಋಷಿಮುನಿಗಳಿಗೂ ಹಿಂಸಿಸತೊಡಗಿದನು. ಗುಹಾಸುರನ ಕಾಟವನ್ನು ಸಹಿಸಲಾರದ ದೇವತೆಗಳು ಕ್ಷೀರಸಾಗರದಲ್ಲಿ ಯೋಗನಿದ್ರೆಯಲ್ಲಿದ್ದ ಮಹಾವಿಷ್ಣುವಿನಲ್ಲಿಗೆ ಹೋಗಿ, ಸ್ತೋತ್ರಗಳಿಂದ ಅವನನ್ನು ಒಲಿಸಿ, ತಮ್ಮ ಕಷ್ಟಗಳನ್ನು ಅವನಲ್ಲಿ ತೋಡಿಕೊಂಡರು. ಅವರ ಪ್ರಾರ್ಥನೆಯನ್ನು ಕೇಳಿದ ವಿಷ್ಣು, ಕೈಲಾಸಕ್ಕೆ ತೆರಳಿ ಶಿವನೊಡನೆ ಆಲೋಚಿಸಿ, ತಾವಿಬ್ಬರೂ ಹರಿಹರರಾಗಿ ರಾಕ್ಷಸನನ್ನು ಸಂಹರಿಸಬೇಕಂಬ ನಿರ್ಧಾರಕ್ಕೆ ಬಂದರು ತಮ್ಮ ನಿರ್ಧಾರದಂತೆ ವಿಷ್ಣು ಶಿವರು ಹರಿಹರೈಕ ರೂಪಧರಿಸಿ, ಗುಹಾಸುರನೊಡನೆ. ಹತ್ತುಸಾವಿರ ವರ್ಷಗಳವರೆಗೆ ಯುದ್ಧ ನಡೆಯುತ್ತದೆ. ಕೊನೆಯಲ್ಲಿ ಹರಿಹರನು ಪಾಶುಪತಸ್ತ್ರದಿಂದ ವಧೆ ಮಾಡಿದ ನಂತರ ಈ ಪ್ರದೇಶವು ಹರಿಹರಕ್ಷೇತ್ರವಾಯಿತು ವಧೆ ಮಾಡುವತನಕ ಈ ಪ್ರದೇಶ ಗುಹಾರಣ್ಯಕ್ಷೇತ್ರವಾಗಿತ್ತು.[೧೦]

ಕುಂಭಾಕ್ಷೇತ್ರ: ಹರಿಹರ ಕ್ಷೇತ್ರದಲ್ಲಿ ಕುಂಭಾಸುರನೆಂಬ ರಾವಣನ ಮಗ ರಾಮಬಾಣದಿಂದ ತಪ್ಪಿಸಿಕೊಂಡು ಜೀವಭಯದಿಂದ ಸಮುದ್ರದಲ್ಲಿ ಬಿದ್ದು, ಬಂದು ಒಂದು ಗುಹಾಪ್ರವೇಶವನ್ನು ಮಾಡಿಕೊಂಡುಯಿರುವಲ್ಲಿ. ಕೆಲವು ದಿನದ ಮೇಲೆ ಅವನು ಹನ್ನೆರಡು ಅಕ್ಷೋಣಿ ಸೈನ್ಯವನ್ನು ಸೇರಿಸಿಕೊಂಡು, ಸಮಸ್ತ ದೇಶಗಳನ್ನ ಆಕ್ರಮಿಸಿಕೊಂಡ. ಆ ಸಂದರ್ಭದಲ್ಲಿ ಪಾಂಡವರು ವನವಾಸ ನಿಮಿತ್ತ ಸಹ್ಯಾದ್ರಿ ಪರ್ವತಯಿಳಿದು ಗೋಕರ್ಣಾದಿ ಕ್ಷೇತ್ರಗಳನ್ನು ನೋಡಿಕೊಳ್ಳುತ್ತಾ, ಶ್ರೀ ಕೋಟೀಶ್ವರನ ದರ್ಶನಕ್ಕಾಗಿ ಬಂದು ಸ್ನಾನಮಾಡುವ ವೇಳೆಯಲ್ಲಿ ಇಲ್ಲಿ ಇದ್ದ ಸಮಸ್ತ ಋಷಿಗಳು ಆ ರಾಕ್ಷಸನ ಉಪದ್ರವ ಹೇಳಿದರು. ಆಗ ಧರ್ಮರಾಯನಿಂದ ಭೀಮಸೇನನಿಗೆ ಅಪ್ಪಣೆಯಾಗಿ ಕುಂಭಾಸುರನ ಸಂಹಾರಮಾಡಲು ಹರಿಹರ ಕ್ಷೇತ್ರವು ಕುಂಭಾಕ್ಷೇತ್ರವೆಂದು[೧೧] ಹೆಸರಾಯಿತು. ಮೊದಲು ಕುಂಭದಿಂದ ಈಶ್ವರ ಅವಿರ್ಭೂತವಾಗಿದ್ದರಿಂದ ಈ ಕ್ಷೇತ್ರಕ್ಕೆ ಕಂಭಕಾಸಿಯೆಂಬ ಹೆಸರು ಆಗಿ ಮಹಾಕ್ಷೇತ್ರ ಆಗಿತ್ತು. ಅಲ್ಲಿ ಪಾಂಡವರಿಂದ ಕೇಶವ ದೇವರನ್ನು ಸ್ಥಾಪಿಸಲಾಯಿತು.[೧೨] ಎನ್ನುವ ಉಲ್ಲೇಖವಿದೆ ಈ ಉಲ್ಲೇಖದಿಂದ ಇಲ್ಲಿ ಪರಮ ಶಿವಭಕ್ತ ರಾವಣನ ಮಗನೂ ಶಿವಭಕ್ತನಾಗಿ, ಹರನನ್ನು ಸ್ಥಾಪಿಸಿಕೊಂಡು ಇಲ್ಲಿ ವಾಸವಾಗಿದ್ದನು. ನಂತರ ಪಾಂಡವರು ಹರಿಯನ್ನು ಸ್ಥಾಪಿಸಿದರು ಎಂದು ತಿಳಿಯುತ್ತದೆ.

ಲಿಂಗಾಪುರ ಗ್ರಾಮ: ಹರಿಹರರಾಯ ಎಂಬಾತನು ಗಜದೇಶದಿಂದ ಬಂದು ದೊಡ್ಡಕ್ಷೇತ್ರದಲ್ಲಿ ಅಗ್ರಹಾರ, ದೇವಾಲಯ ಮಾಡಬೇಕೆಂದು ಯೋಚಿಸಿ ಹುಡುಕಿದಾಗ, ತುಂಗಾಮಧ್ಯಗಡ್ಡೆಯಲ್ಲಿ ಋಷಿ ಆಶ್ರಮ ಇರುವುದು ಕಂಡು ಈ ಸ್ಥಳದಲ್ಲಿ ಅಗ್ರಹಾರ ಮಾಡಬೇಕೆಂದು ನದಿ ಉಪದ್ರವ ಆಗದಂತೆ ಕಲ್ಲು ಕಟ್ಟಿಸಬೇಕೆಂದು ಪ್ರಯತ್ನಮಾಡಿ ಕಟ್ಟಿಸುಯಿದ್ದಲ್ಲಿ, ಆ ರಾಮ ಇರುವ ಈ ಸ್ಥಳದಲ್ಲಿ ಆಶ್ರಮಕ್ಕೆ ಯೋಗ್ಯದ ಹೊರತು. ನರಮನ್ಯುಷ್ಯನಿಗೆ ಯೋಗ್ಯವಲ್ಲ, ಕಲಿಯುಗ ಅಂತ್ಯ ಪರಿಯಂತ ತಪಸ್ಸು ಮಾಡುತ್ತ ಇರುತ್ತೇವೆ. ಇಲ್ಲಿ ನೀವು ಈ ಯೋಚನೆ ಮಾಡಬ್ಯಾಡಿ. ಅಂತ ಋಷಿಗಳು ಸ್ವಪ್ನದಲ್ಲಿ ಆಜ್ಞಾಪಿಸಿದ್ದರಿಂದ, ಋಷಿಗಳ ವಾಕ್ಯವನ್ನು ಜ್ಞಾಪಿಸಿ ತಂದುಕೊಂಡು ಈ ಆಶ್ರಮದಲ್ಲಿ ಪಟ್ಟಣ ಕಟ್ಟಿಸುವುದ ಬಿಟ್ಟು ಬಂದು ಈ ಆಶ್ರಮಕ್ಕೆ ಸಮೀಪವಾದ ದಕ್ಷಿಣಭಾಗದ ತೀರದಲ್ಲಿ ಲಿಂಗಾಪುರ ಗ್ರಾಮದಲ್ಲಿ 'ಮಂಡವ್ಯ ಅಗ್ರಹಾರ' ಎಂದು ಹೆಸರು ಇಟ್ಟು ಹರಿಹರ ದೇವಸ್ಥಾನ ಕಟ್ಟಿಸಿದ, ಈ ಅಗ್ರಹಾರಕ್ಕೆ ದೇವರ ಪೂಜೆ ಬ್ರಾಹ್ಮಣರಿಗೆ ಸಹ ಉತ್ತರವಾಗಬೇಕೆಂದು ಅರಸರುಗಳಿಗೆ ವಿಳಂಬಿ ಸಂವ ತ್ಸರ ಆಷಾಢ ಶು-೧೫ ರಲು ನಿರೂಪ ಹೇಳಿಕೊಂಡು ಬಿಡಿ ಶಿವ[೦೩] ಎನ್ನುವ ಉಲ್ಲೇಖವಿದೆ.

ಇಲ್ಲಿ ಆಕರಿಸಿರುವ ಪುರಾಣಗಳಲ್ಲಿ ಈ ಕ್ಷೇತ್ರದ ಹೆಸರು ಕ್ರಮವಾಗಿ ಗುಹಾರಣ್ಯ ಕ್ಷೇತ್ರ, ಕುಂಭಾಕ್ಷೇತ್ರ, ಲಿಂಗಾಪುರ ಗ್ರಾಮಗಳೆನ್ನುವುದು ತಿಳಿಯುತ್ತದೆ. ಮೊದಲ ಸ್ಥಳ ಪುರಾಣದಲ್ಲಿ ಮಾತ್ರ ಹರಿ ಮತ್ತು ಹರರು ಒಂದಾಗಿ ಏಕರೂಪ ತಾಳಿ ಗುಹಾಸುರನನ್ನು ವಧೆಮಾಡಿರುವುದು ತಿಳಿದರೆ, ಉಳಿದ ಸ್ಥಳಪುರಾಣಗಳಲ್ಲಿ ಹರಿಹರನ ಪ್ರಸ್ತಾಪವೇ ಬರುವುದಿಲ್ಲ. ಕುಂಭಾಕ್ಷೇತ್ರದ ಸ್ಥಳಪುರಾಣದಲಿ ಹರಿಕ್ಷೇತ್ರ [ಬ್ರಾಹ್ಮಣರು ನೆಲೆಸಿದ್ದ ಸ್ಥಳ] ವಾಗಿದ್ದ ಇಲ್ಲಿ ಕುಂಭಾಸುರನು ಹರನನ್ನು ಸ್ಥಾಪಿಸಿಕೊಂಡು ತನ್ನ ಸಾಮ್ರಾಜ್ಯ ಕಟ್ಟಿಕೊಳ್ಳಲು ಯತ್ನಿಸುತ್ತಿದ್ದಾಗ ಪಾಂಡವರಿಂದ ಅವನು ಕೊಲ್ಲಲ್ಪಟ್ಟ ಮೇಲೆ ಪುನಃ ಕೇಶವನನ್ನು ಸ್ಥಾಪಿಸಲಾಗುತ್ತದೆಯಾದರು. ಇದು ಕುಂಭಾಕ್ಷೇತ್ರವಾಗಿಯೇ ಉಳಿಯುತ್ತದೆ ಇಲ್ಲಿ ಒಂದು ಅಂಶವನ್ನು ಗಮನಿಸಬೇಕಾಗುತ್ತದೆ. ತ್ರೇತಾಯುಗದ ರಾಮಾಯಣ ಕಾಲವು ದ್ವಾಪರಯುಗದ ಮಹಾಭಾರತ ಕಾಲಕ್ಕಿಂತ ಮೊದಲು ಬರುವುದರಿಂದ ರಾಮಾಯಣ ಕಾಲದ ಕೊಂಡಿಯಾದ ಕುಂಭಾಸುರನು ಹರನನ್ನು ಸ್ಥಾಪಿಸಿಕೊಂಡು ಆರಾಧಿಸುತ್ತಾ ಇದ್ದ. ಈ ಸ್ಥಳದಲ್ಲಿ ಮಹಾಭಾರತ ಕಾಲದ ಪಾಂಡವರಿಂದಾಗಿ ಹರಿಯ ಆರಾಧನೆ ಆರಂಭಗೊಳ್ಳುತ್ತದೆ ಎನ್ನುವುದ್ನನ್ನ ಕೈಫಿಯತ್ತಿನ[೦೪] ವಿವರಣೆಯಿಂದ ತಿಳಿಯತ್ತದೆ. ನಂತರದಲ್ಲಿ ಹರಿಹರರಾಯನು ಲಿಂಗಾ(ಹರ)ಪು ಗ್ರಾಮದಲ್ಲಿ ಅಗ್ರಹಾರ ಮತ್ತು ಹರಿಹರ ದೇವಾಲಯ ಕಟ್ಟಿಸಿದುದು ತಿಳಿಯುತ್ತದೆ. ಅಂದರೆ ಇಲ್ಲಿ ಹರಿ ಹರನ ಸಂಪ್ರದಾಯಸ್ಥರ ಸಂಘರ್ಷವು ನಿರಂತರವಾಗಿ ನಡೆಯುತ್ತಾ ಬಂದು ಅಂತಿಮವಾಗಿ ಅವರಲ್ಲಿ ಸಾಮರಸ್ಯ ಮೂಡಿ ಇಬ್ಬರೂ ಒಂದಾಗಿ ಹರಿ ಮತ್ತು ಹರರನ್ನು ಏಕರೂಪವಾಗಿಸಿಕೊಂಡು ಹರಿಹರನ ಉದಯಕ್ಕೆ ಕಾರಣವಾಗಿದೆ ಎನ್ನುವುದನ್ನ ತಿಳಿಯಬಹುದು.

ಸಾರಥಿ ಕ್ಷೇತ್ರ: ತುಂಗಾಭದ್ರಾ ನದಿಯ ಬಲದಂಡೆಯಲ್ಲಿರುವ ಸಾರಥಿಗೆ ನದಿಯ ಎಡದಂಡೆಯ ಮೇಲಿನ ಐರಣಿಕೋಟೆಯಿಂದ ಆಳ್ವಿಕೆ ನಡೆಸುತ್ತಿದ್ದ ರಾಜರ ಸೈನ್ಯದಲ್ಲಿ ಕುದುರೆಗಳ

ಸಾರಥ್ಯ ನೋಡಿಕೊಳ್ಳುತ್ತಿದ್ದವರು ಈ ಸ್ಥಳದಲ್ಲಿ ವಾಸವಾಗಿದ್ದ ಕಾರಣ ಈ ಸ್ಥಳಕ್ಕೆ ಸಾರಥಿ ಎಂಬ ಹೆಸರು ಬಂದಿತು ಎಂಬುದು ತಿಳಿಯುತ್ತದೆ. ಪುರಾಣ ಉಲ್ಲೇಖದಂತೆ ದ್ವಾಪರಯುಗದಲ್ಲಿ ಶ್ರೀಕೃಷ್ಣ ಪರಮಾತ್ಮನು ತನ್ನ ಸಾರಥಿಯೊಂದಿಗೆ ಐರಣಿ ಕ್ಷೇತ್ರಕ್ಕೆ ಬಂದು ಒಂದು ದಿನ ನೆಲೆಸುತ್ತಾನೆ. ಆ ಸಂದರ್ಭದಲ್ಲಿ ಶ್ರೀಕೃಷ್ಣನು ಐರಣಿ ಕ್ಷೇತ್ರದಲ್ಲಿ ವಾಸ್ತವ್ಯ ಹೂಡಿದರೆ ರಥದ ಸಾರಥಿ ತುಂಗಭದ್ರಾ ನದಿಯ ಬಲದಂಡೆಯಲ್ಲಿ ನೆಲೆಸಿರುತ್ತಾನೆ ಹಾಗಾಗಿ ಈ ಕ್ಷೇತ್ರ ಸಾರಥಿ ಎಂದಾಯಿತು.

ಕೊಮಾರನಹಳ್ಳಿ: ಪೂರ್ವದಲ್ಲಿ ಸೂರ್ಯನ ಸಾರಥಿ ಅರುಣ, ವಿಷ್ಣುವಿನ ವಾಹನ ಗರುಡ ಇವರಿಬ್ಬರು ಅಣ್ಣತಮ್ಮಂದಿರು, ಅರುಣ ವಿಷ್ಣುವನ್ನು ಕೇಳಿಕೊಳ್ಳುತ್ತಾನೆ. ನನ್ನ ಅಣ್ಣ ಗರುಡನನ್ನು ನಿನ್ನ ಸಾರಥಿಯನ್ನಾಗಿ ಮಾಡಿಕೊಂಡು ನಿತ್ಯ ನಿನ್ನ ಸನ್ನಿಧಿಯಲ್ಲಿ ಇರುವ ಹಾಗೆ, ನನಗೂ ಸಹ ನಿನ್ನ ಸನ್ನಿಧಿಯಲ್ಲಿರುವ ಹಾಗೆ ಅವಕಾಶ ಕೊಡು ಅಂತ ಕೇಳಿಕೊಂಡಾಗ ಆಗ ವಿಷ್ಣು ಅರುಣನಿಗೆ ಅಭಯ ನೀಡುತ್ತಾನೆ ಕಲಿಯುಗದಲ್ಲಿ ನಿನ್ನ ಆಸೆ ಈಡೇರಲಿ ಅಂತ, ಹಾಗಾಗಿ ಅರುಣ ಕಲಿಯುಗದಲ್ಲಿ ಹೆಳವನಾಗಿ ಅವತಾರವಾಗ್ತಾನೆ. ಹೆಳವ ಪ್ರತಿದಿನ ಅರಣ್ಯದಲ್ಲಿ ಧನ ಕಾಯುಲು ಹೋಗ್ತಿರ್ತಾನೆ. ಅದರಲ್ಲೊಂದು ಹಸು ಬೇರೆಯಾಗಿ ಬಂದು ಹುತ್ತದಲ್ಲಿ ಸ್ವಾಮಿ ಇರ್ತಾನೆ ಅದಕ್ಕೆ ಹಾಲು ಕರಿಯುತ್ತಿರುತ್ತದೆ. ಮನೆಯಲ್ಲಿ ಹೆಳವನ ಮೇಲೆ ಅನುಮಾನ ಪಡುತ್ತಾರೆ. ನೀನೆ ಆಕಳಿನ ಹಾಲನ್ನು ಕರೆದುಕೊಂಡು ಕುಡಿತಾ ಇದಿಯಾ ಅಂತಾ. ಇದೇನ್ ವಿಚಿತ್ರ ಅಂತ ಹೇಳಿ ಆಕಳನ್ನು ಹಿಂಬಾಲಿಸಿಕೊಂಡು ಹೋಗ್ತಾನೆ. ಹುತ್ತದ ಹತ್ತಿರ ಆಕಳು ಹಾಲು ಕೊಡುತ್ತಿರುವುದು ಗೋಚರವಾಗುತ್ತದೆ. ಆಗ ಆ ಹೆಳವ ಹುತ್ತಾನ ಅಗೆದು ನೋಡುತ್ತಾನೆ. ಎರಡು ಮೂರ್ತಿಗಳು ಕಾಣುತ್ತವೆ. ರಂಗ ಮತ್ತು ಲಿಂಗ (ಹರಿಹರ) ಇದೇನ್ ಕಲ್ಲು ಬಂಡೆ ಅಂತ ಹೋಗ್ತಾನೆ. ಅವತ್ತು ರಾತ್ರಿ ಹೆಳವನ ಕನಸಲ್ಲಿ ಸ್ವಾಮಿ ಗೋಚರವಾಗಿ ನೀನು ಯಾರು, ಜನ್ಮ ತಾಳಲಿಕ್ಕೆ ಏನ್ ಕಾರಣ ಅಂತ. ಯಾಕೆ ಅಂದ್ರ ಸ್ವಾಮಿ ಸನ್ನಿಧಿಯಲ್ಲಿ ಇರಬೇಕೆಂದು ಆಪೇಕ್ಷಪಟ್ಟ ಪ್ರಕಾರವಾಗಿ ಸ್ವಾಮಿಯೇ ಇಲ್ಲಿ ಉದ್ಭವವಾಗಿರುತ್ತಾನೆ. ಆಗ ಹೆಳವನಿಗೆ ಜ್ಞಾನೋದಯವಾಗಿ ರಂಗ ಮತ್ತು ಲಿಂಗ ಉದ್ಭವರಾದ ಸ್ಥಳದ ಪಕ್ಕದಲಿಯೇ ಕೆರೆ ಕಟ್ಟಿಸುತ್ತಾನೆ. ದೇವರ ಹೆಸರಿಗಿಂತ ಮುಂಚೆ ಭಕ್ತನ ಹೆಸರು ಕೊನೆತಕ ಉಳಿಯಲಿ ಎನ್ನುವ ಉದ್ದೇಶಕ್ಕೋಸ್ಕರ ಸ್ವಾಮಿಗೆ ಹೆಳವನಕಟ್ಟೆ ರಂಗನಾಥ ಎಂದು ಕರೆಯುವ ಪ್ರತೀತಿ ಇದೆ.

ಈ ಅರುಣ ಮತ್ತು ಗರುಡರ ಪುರಾಣ ಉಲ್ಲೇಖ ಬೆಳಕಿಗೆ ಬಂದಿದ್ದು ಹೆಳವನಕಟ್ಟೆ ಗಿರಿಯಮ್ಮನವರ ಕಾಲದಲ್ಲಿ ಗಿರಿಯಮ್ಮ ಅಂದ್ರೆ ದ್ವಾಪರಯುಗದಲ್ಲಿ ದೇವಕಿ ಅವತಾರ ಕೃಷ್ಣ ಪರಮಾತ್ಮನಿಗೆ ಜನ್ಮ ಕೊಡ್ತಾಳೆ ವಿನಃ ಅವನ ಬಾಲ್ಯದ ದಿನಗಳನ್ನು ನೋಡಿರುವುದಿಲ್ಲ. ಯಶೋಧ ದೇವಿ ಅತ್ರ ದೇವಕಿ ನಂದಗೋಕುಲ ಬೇಡ್ತಾಳೆ ಆಗ ಯಶೋಧ ದೇವಿ ದೇವಕಿಯ ಆಸೆಯನ್ನು ಸ್ವಾಮಿಯಲ್ಲಿ ಹೇಳಿದಾಗ ಕಲಿಯುಗದಲ್ಲಿ ಅವಳ ಆಸೆಯನ್ನು ಈಡೇರಿಸುತ್ತೇನೆ ಎಂದು ಹೇಳುತ್ತಾನೆ. ಅದರ ಪ್ರಕಾರವಾಗಿ ದೇವಕಿ ದೇವಿ ಗಿರಿಯಮ್ಮಳಾಗಿ ರಾಣಿಬೆನ್ನೂರಿನ ಬೀಷ್ಟಪ್ಪ ಜೋಯಿಸರ ಮಗಳಾಗಿ ಜನ್ಮ ತಾಳುತ್ತಾಳೆ. ಪ್ರಾಪ್ತವಯಸ್ಕಳಾದ ಮೇಲೆ ಗಿರಿಯಮ್ಮನನ್ನು

ಮಲೇಬೆನ್ನೂರಿನ ತಿಪ್ಪರಸ ಎನ್ನುವ ವರನಿಗೆ ಕೊಟ್ಟು ವಿವಾಹಮಾಡುತ್ತಾರೆ. ತವರು ಮನೆ ರಾಣೆಬೆನ್ನೂರು, ಗಂಡನ ಮನೆ ಮಲೆಬೆನ್ನೂರು, ಮದುವೆಯಾಗ್ತದೆ ಮದುವೆಯಾದ ಮೊದಲ ರಾತ್ರಿ ಗಿರಿಯಮ್ಮ ಸರ್ಪರೂಪದಲ್ಲಿ ಗೋಚರವಾಗುತ್ತಾಳೆ. ಇದೇನ್ ಅಂತ ಹೇಳಿ ಭಯ ಪಟ್ಟು ತಿಪ್ಪರಸನು ಹೊರಬರ್ತಾನೆ ಆಗ ಗಿರಿಯಮ್ಮ ನಾನು ಅಜೀವ ಪರಿಯಂತ ಬ್ರಹ್ಮಚಾರಿಣಿಯಾಗಿ ಇರ್ತನೆ ಹಾಗಾಗಿ ನಿಮ್ಮ ವಂಶೋದ್ಧರಕ್ಕಾಗಿ ನೀವು ಇನ್ನೊಂದು ಮದುವೆ ಮಾಡ್ಕೊಳ್ಳಿ ಅಂತ ಹೇಳಿ ಸ್ವತಃ ಅವರೆ ನಿಂತು ಮದುವೆ ಮಾಡ್ತಾರೆ.

ಪ್ರತಿದಿನ ಗಿರಿಯಮ್ಮ ರಂಗನಾಥ ಸ್ವಾಮಿಯನ್ನು ಸ್ತುತಿಸುತ್ತ ಇದ್ರೆ, ಸ್ವಾಮಿ ರಂಗನಾಥ ಮಗುವಾಗಿ ಗಿರಿಯಮ್ಮರ ತೊಡೆಮೇಲೆ ಆಟವಾಡ್ತಾ ಇರ್ತಾರೆ. ಯಾಕೆ ಅಂದ್ರೆ ಅಭಯ ಕೊಟ್ಟ ಪ್ರಕಾರವಾಗಿ ಸ್ವಾಮಿ ನಡೆದು ಕೊಳ್ತಾರೆ. ಒಂದು ಬಾರಿ ಮಂತ್ರಾಲಯದ ಮೂರನೆ ಯತಿಗಳಾದ ಸುಮತೇಂದ್ರ ತೀರ್ಥರು ರಂಗನಾಥನ ಸನ್ನಿಧಿಗೆ ಬಂದಿರ್ತಾರೆ ಸ್ವಾಮಿ ಪೂಜೆಯಾದ ನಂತರ ಮೊದಲನೆ ತೀರ್ಥ ಪ್ರಸಾದವನ್ನು ಸುಮತೇಂದ್ರ ತೀರ್ಥರು ಗಿರಿಯಮ್ಮನಿಗೆ ಕೊಡ್ತಾರೆ. ಆಗ ಅಲ್ಲಿದ್ದ ಪಂಡಿತರೆಲ್ಲ ಅವಹೇಳನ ಮಾಡ್ತಾರೆ. ಒಂದು ಹೆಣ್ಣಿಗೆ ಮೊದಲು ಆದ್ಯತೆಯನ್ನು ಕೊಟ್ರಲ್ಲಾ ಅವಳಿಗೆ ಮೊದಲು ಪ್ರಾಶಸ್ತ್ಯ ಕೊಟ್ರಲ್ಲ ಅಂತ, ಆಗ ಅಲ್ಲಿದ್ದ ಗಿರಿಯಮ್ಮ ಸ್ವಾಮಿ ಅತ್ರ ಕಣ್ಣೀರಾಕಿದಾಗ ಅಲಂಕಾರಿಕವಾಗಿದ್ದ ರಂಗನಾಥ ಸ್ವಾಮಿ ಮಾಯವಾಗಿ ಗಿರಿಯಮ್ಮನ ತೊಡೆ ಮೇಲೆ ಮಗುವಾಗಿ ಆಟ ಆಡ್ತಾರೆ. ಆಗ ಅಲ್ಲಿದ್ದ ಪಂಡಿತರೆಲ್ಲ ಗಿರಿಯಮ್ಮನಿಗೆ ಶಿರಸಾಷ್ಟಾಂಗ ನಮಸ್ಕಾರ ಮಾಡುತ್ತಾರೆ. ಎಂಬ ಪ್ರತೀತಿ ಇದೆ. ಹೆಳವನಕಟ್ಟೆ ರಂಗನಾಥ ಸ್ವಾಮಿ ಇರುವ ಸ್ಥಳವನ್ನು ಸ್ಕಂದಪುರಾಣ ಹಾಗೂ ಅರುಣಾಚಲ ಮಹಾತ್ಮೆಯಲ್ಲಿ ಅರುಣಗಿರಿ ಎಂದು ಕರೆಯುತ್ತಾರೆ. ಹೆಳವನಕಟ್ಟೆ ಗಿರಿಯಮ್ಮನವರು ರಂಗನಾಥನನ್ನು ಮಗುವಾಗಿ ಆಟ–ಆಡಿಸಿದಂತಹ ಸ್ಥಳ ಇದಾಗಿದ್ದು, ಕುಮಾರ ಅಂದ್ರೆ ಮಗು ಮೊದಲು ಕುಮಾರ ಇದ್ದದ್ದು ಕಾಲನಂತರ ಕೊಮಾರ ಆಗಿದೆ.[೧೫]

ಈ ತಾಲೂಕಿನ ಸ್ಥಳ ಪ್ರಧಾನ ಸ್ಥಳಪುರಾಣಗಳು ವಿಶ್ಲೇಷಣೆಯಿಂದ ತಮ್ಮ ಸ್ಥಳಗಳ ಶ್ರೇಷ್ಠತೆಯನ್ನು ಆ ಪರಿಸರದಲ್ಲಿ ಮೆರೆಯಲು ರಾಮಾಯಣ, ಮಹಾಭಾರತ, ಸ್ಕಂದ ಪುರಾಣಗಳ ಕಾಲದಿಂದಲೂ ವಾಸಸ್ಥಾನವಾಗಿದ್ದು. ಆ ಕಾಲದ ಪ್ರಮುಖ ಧಾರ್ಮಿಕ ಕ್ಷೇತ್ರಗಳಾಗಿದ್ದುವು ಎಂಬುದು ತಿಳಿದುಬರುತ್ತದೆ.

೫.೨ ಐತಿಹ್ಯ

ಐತಿಹ್ಯವೆಂದರೆ "ಪರಂಪರೆಯಿಂದ ಬಂದಿರುವುದು" ಪುರಾಣ, ಚರಿತ್ರೆ, ಪ್ರಮಾಣವಿಲ್ಲದೆ ಪರಂಪರೆಯಿಂದ ಬಂದ ಮಾತು ಹೇಳುವುದು "ಐತಿಹ್ಯಂ ಇತಿಹಾಸವೆನಿಸುಗುಂ"[೧೬] ಎಂಬ ಕನ್ನಡ ಸಾಹಿತ್ಯ ಪರಿಷತ್ ನಿಂಘಂಟಿನ ಹೇಳಿಕೆಯನ್ನು ಗಮನಿಸಬಹುದು. 'ಐತಿಹ್ಯ'ವು 'ಇತಿಹ'ದಿಂದ ಬಂದಿತೆಂದು ಹೇಳಿ ಅದಕ್ಕೆ 'Oral traditional, a legal, a tale'[೧೭] ಎಂಬ ಅರ್ಥಕೊಡಲಾಗಿದೆ. 'ಐತಿಹ್ಯ' ಪದ ಲೆಜೆಂಡ್ ಎಂಬುದಕ್ಕೆ ಸಂವಾದೀಯವಾಗಿ ಇಂದು ಬಳಕೆಯಾಗುತ್ತಿದೆ. ಆದರೆ ಮೂಲತ: ಲೆಜೆಂಡ್ ಎಂಬುದು ಲ್ಯಾಟಿನ್[೧೮] ಭಾಷೆಯ ಪದವಾಗಿದೆ. ಅದಕ್ಕೆ Things to be

Read ಎಂಬ ಅರ್ಥ ಇರುವುದು ತಿಳಿದು ಬರುತ್ತದೆ. ಈ ಅರ್ಥಕ್ಕೆ ಸಮನಾದ ವಿಷಯಗಳೆಂದರೆ ಪ್ರಾರ್ಥನಾ ಮಂದಿರಗಳಲ್ಲಿ ಪಠನ ಮಾಡಬಹುದಾದ ವಿಷಯವೇ ಆಗಿದ್ದಿತು ಎಂಬ ವಿವರಣೆ, ನಿಘಂಟುಗಳಿಂದ ತಿಳಿದು ಬರುತ್ತದೆ. ಯಾವುದೇ ಆಧಾರಗಳಿಲ್ಲದೆ ಐತಿಹ್ಯ ಹುಟ್ಟಿರಲಾರದು ಅವಶೇಷ, ಪಳೆಯುಳಿಕೆ, ವಸ್ತು, ವ್ಯಕ್ತಿ, ಘಟನೆ, ಸ್ಥಳ, ಕೆರೆಕಟ್ಟೆ, ಗುಡ್ಡಬೆಟ್ಟ ಹೀಗೆ ಯಾವುದು ಬೇಕಾದರು ಐತಿಹ್ಯಕ್ಕೆ ಒಳಗಾಗಬಹುದು. ಹೀಗೆ ಭೌತಿಕ ಆಧಾರಗಳ ಹಲವು ವಿಷಯಗಳನ್ನಾಧರಿಸಿ ಆಯಾ ಸಂಸ್ಕೃತಿಗನುಸಾರವಾಗಿ ಐತಿಹ್ಯಗಳು ಹುಟ್ಟಿಕೊಂಡಿವೆ. ಇಂತಹ ಐತಿಹ್ಯಗಳು ನಿರೂಪಿಸುವ ನಿರೂಪಕನ ದೃಷ್ಟಿಯನ್ನು ಒಳಗೊಂಡಿರುತ್ತದೆ.

ನಮ್ಮ ಸಂಸ್ಕೃತಿಯಲ್ಲಿ ನಂಬಿಕೆ, ಸಂಪ್ರದಾಯ, ಆಚರಣೆಗಳು, ದೈವಿಕ ಆರಾಧನೆಗಳು ಹಾಸುಹೊಕ್ಕಾಗಿರುವುದನ್ನು ಕಾಣುತ್ತೇವೆ. ಇಂದು ಜನರಲ್ಲಿ ಪ್ರಚಲಿತವಿರುವ ಅನೇಕ ನಂಬಿಕೆ, ಆಚಾರ–ವಿಚಾರಗಳನ್ನು ಒಳಗೊಂಡ ಕಥೆಗಳು ಐತಿಹ್ಯಗಳಲ್ಲಿ ಕಂಡುಬರುವ ಸಂಗತಿ ಸಾಮಾನ್ಯವಾದುದು. ಅನೇಕ ಪ್ರಾಕೃತಿಕ ವೈಚಿತ್ರ್ಯಗಳು, ಚಾರಿತ್ರಿಕ ಸ್ಥಳಗಳು ಜನರ ದೃಷ್ಟಿಯಿಂದ ಮರೆಯಾಗದಂತೆ ನೋಡಿಕೊಳ್ಳುವಲ್ಲಿ ಐತಿಹ್ಯಗಳು ವಹಿಸಿರುವ ಪಾತ್ರ ಅಪಾರ. ಐತಿಹ್ಯಗಳು ಮಾನವನ ಸಾಮಾಜಿಕ ಜೀವನಕ್ಕೆ ಹತ್ತಿರವಾದ ಹಾಗೂ ನಡೆಯಬಹುದಾದ ಮೌಖಿಕ ಸಾಹಿತ್ಯದ ಘಟನೆಯ ತುಣುಕುಗಳಂತೆ ಕಂಡುಬರುತ್ತವೆ.[೧೯] ಪ್ರಸ್ತುತ ಅಧ್ಯಯನ ಪರಿಸರದಲ್ಲಿ ಸಂಗ್ರಹಿಸಿದ ಐತಿಹ್ಯಗಳು ಈ ಕೆಳಗಿನಳಂತಿವೆ.

ದೇವರ ಬೆಳಕೆರೆ: ಎರಡು ಹಳ್ಳಿಗಳ ಸಂಗಮವಾದ ಈ ಪ್ರದೇಶವು ಫಲವತ್ತಾಗಿಯೂ ಪವಿತ್ರ ಸ್ಥಳವೂ ಆಗಿದ್ದು. ಗಿಡಮರಗಳಲ್ಲಿ ತುಂಬಿತ್ತಲ್ಲದೆ ಹುಲುಸಾದ ಹುಲ್ಲು ಬೆಳೆಯತ್ತಿತ್ತು. ಹಾಗಾಗಿ ಸುತ್ತಲಿನ ಗ್ರಾಮಗಳ ದನಗಳು ಹಸುಗಳನ್ನು ಮೇಯಿಸಲು ಇಲ್ಲಗೆ ಬರುತ್ತಿದ್ದರು. ಅದರಲ್ಲಿ ಗುಳದಳ್ಳಿಯ ಪಟೇಲರ ಹಸುವು ಕೆರೆಯ ಸನಿಹದಲ್ಲಿದ್ದ ಪೆಳೆಯಲ್ಲಿನ ಹುತ್ತಕ್ಕೆ ಪ್ರತಿದಿನವೂ ಹಾಲು ಸುರಿಸಿ ಬರುತ್ತಿದ್ದರಿಂದ ಮನೆಯಲ್ಲಿ ಹಾಲು ಕೊಡುತ್ತಿರಲಿಲ್ಲ. ಇದರಿಂದ ಕೋಪಗೊಂಡ ಪಟೇಲರು ಆಳಿಗೆ ಬೈದು, ಅದರ ಪತ್ತೆಗಾಗಿ ಹಸುಗಳು ಮುಂದೆ ಹೋದ ಮೇಲೆ ಹಿಂದಿನಿಂದ ಇತರೆ ಆಳುಗಳೊಂದಿಗೆ ಹೋಗಿ ಪರೀಕ್ಷಿಸಿದಾಗ, ಹಸುವು ಪೆಳೆಯೊಳಗೆ ಹೋಗಿ ಸ್ವಲ್ಪ ಹೊತ್ತಿನಲ್ಲಿ ವಾಪಸ್ಸು ಬಂದದ್ದನ್ನು ನೋಡಿ ಪೆಳೆಯನ್ನು ಬಯಲು ಮಾಡಿ ನೋಡಿದಾಗ ಹಸುವು ಹುತ್ತಕ್ಕೆ ಹಾಲು ಸುರಿಸಿರುವುದು ಕಾಣುತ್ತದೆ. ಅದನ್ನು ಕಂಡು ಆಶ್ಚರ್ಯಗೊಂಡ ಆಳು ಪಟೇಲರಿಗೆ ತಿಳಿಸುತ್ತಾನೆ. ಪಟೇಲರು ಪೆಳೆಯನ್ನೆಲ್ಲಾ ತೆಗೆಸಿ ಹುತ್ತವನ್ನು ಪರೀಕ್ಷಿಸಲಾಗಿ ಅದರಲ್ಲಿ ಸುಂದರ ಉದ್ಭವಲಿಂಗ ಇರುವುದನ್ನು ಕಾಣುತ್ತಾರೆ. ಅದನ್ನು ತಿಳಿದ ಸುತ್ತಲಿನ ಗ್ರಾಮಸ್ಥರು ಮತ್ತು ಬೆಳಕೆರೆ ಜನರು ಸೇರಿ ಚಿಕ್ಕಗುಡಿ ಕಟ್ಟುವ ಬಗ್ಗೆ ಸಮಾಲೋಚಿಸುತ್ತಿರುವಾಗ ಒಬ್ಬ ಬಾಲಕನ ಮೈಮೇಲೆ ದೇವರು ಬಂದು ನಾವು ಮೈಲಾರಲಿಂಗ ಮತ್ತು ಗಂಗ ಮಾಳವ್ವ ನಾವು ಇಲ್ಲಿಯೇ ನೆಲೆಸುತ್ತೇವೆ[೨೦] ಎಂದು ಹೇಳಿತಂತೆ.

ಕಡಾರನಾಯಕನಹಳ್ಳಿ: ಹಿಂದೆ ಪಾಳ್ಯದ ದಂಡಿನಲ್ಲಿದ್ದಂತಹ ಕಠಾರಿವೀರ ನಾಯಕನ ಕುಟುಂಬವು ಇಲ್ಲಿಗೆ ಬಂದು ನೆಲೆಸಿದ್ದರಿಂದ ಕಠಾರಿನಾಯಕನಹಳ್ಳಿ ಕಠಾರಿನಾಯಕನಹಳ್ಳಿ ಆಗಿ ಇಂದು ಕಡಾರನಾಯಕನಹಳ್ಳಿ ಆಗಿರುವುದಾಗಿ ಐತಿಹ್ಯವಿದೆ.

ಧೂಳೆಹೊಳೆ: ಶ್ರೀರಾಮನು ವನವಾಸ ನಿಮಿತ್ತ ಸಂಚರಿಸುತ್ತಿರುವಾಗ ಇಲ್ಲಿನ ಇಂಗ್ಳಾರ ಕೊನೆ ಎಂದು ಹೇಳುವ ಸ್ಥಳದಲ್ಲಿ ಕೆಲಕಾಲ ವಾಸವಾಗಿದ್ದನೆಂದೂ ಅದೇ ಸ್ಥಳದಲ್ಲಿ ಯಜ್ಞ ಮಾಡುತ್ತಿದ್ದಾನೆಂದೂ, ಅದರಿಂದಾಗಿ ಆ ಪ್ರದೇಶವೆಲ್ಲ ಧೂಳಿನಿಂದ ಕೂಡಿರುತ್ತಿತ್ತೆಂದೂ[೨೧], ಆದರಿಂದಾಗಿ ಧೂಳಿನಹಳ್ಳಿಯಾಗಿ ನಂತರದಲ್ಲಿ ಧೂಳೆಹೊಳೆ ಆಗಿರುವುದೆಂದು ಹೇಳುವುದಾಗಿಯೂ ಹಾಗೂ ಧೂಳಾವತಿ ಪಟ್ಟಣ ಆಗಿತ್ತೆಂದು ಹೇಳುವ ಐತಿಹ್ಯಗಳು ಇವೆ.

ನಂದಿಗಾವಿ: ಪೂರ್ವದ ಕಡೆಯಿಂದ ನಂದಿಯೊಂದಿಗೆ ಬಂದಂತಹ ಬಸಪ್ಪನ ಪರಿವಾರವು ಸಂಚರಿಸುತ್ತಾ ನದಿಯ ದಡ ಅನುಸರಿಸಿ ಬರುತ್ತಿರುವಾಗ ಅಲ್ಲಲ್ಲಿ ಕೆಲಕಾಲ ತಂಗಿ ಮುಂದೆ ಸಾಗಿದ್ದು, ತಂಗಿದ್ದ ಆ ಸ್ಥಳಗಳಲ್ಲಿ ಆತನ ಕುರುಹುಗಳನ್ನು ಈಗಲೂ ಕಾಣಬಹುದಾಗಿದೆ. ಹೀಗೆ ಹೋಗುತ್ತಿರುವಾಗ ಜೊತೆಯಲ್ಲಿದ್ದ ನಂದಿಯು ಇಲ್ಲಿನ ಗವಿಯಲ್ಲಿ ಹೊಕ್ಕು ವಿಶ್ರಮಿಸುತ್ತದೆ. ಹಾಗಾಗಿ ಇಲ್ಲಿ ಕೆಲಕಾಲ ಆ ಬಸಪ್ಪನ ಪರಿವಾರವು ವಾಸಿಸುತ್ತಿರುತ್ತದೆ. ಸದಾ ನಂದಿಯೊಂದಿಗೆ ಇರುತ್ತಿದ್ದ ಬಸಪ್ಪನು ನಂದಿಬಸಪ್ಪ, ನಂದ್ಯಪ್ಪ ಎಂದೇ ಹೆಸರಾಗಿದ್ದರು. ರಾಜಮಹಾರಾಜರು, ಪಾಳೆಯಗಾರರು, ಊರಗೌಡರು ಸಾಕುತ್ತಿದ್ದ ಹಸುಗಳು ಬೆದೆ (ನಿಸೆ) ಬಂದಾಗ ಆ ಬಸಪ್ಪನ ಹೋರಿಯಿಂದ ಕಟ್ಟಿಸಿಕೊಂಡು ಹೋಗುತ್ತಿದ್ದರು. ಆ ನಂದ್ಯಪ್ಪನ ನಂದಿಯು ವಿಶ್ರಮಿಸಿದ ಗವಿಯ ಸ್ಥಳದಲ್ಲಿ ನೆಲೆಸಿದ್ದರಿಂದಾಗಿ ಆ ಸ್ಥಳವು ನಂದಿಯ ಗಾವಿ, ನಂದಿಗಾವಿ ಆಗಿರುವುದಾಗಿ ಹೇಳಲಾಗುತ್ತದೆ.

ಹರಲಾಪುರ: ದಂತಕಥೆಯಂತೆ ಮಹಾವಿಷ್ಣು (ಹರಿ) ಮತ್ತು ಈಶ್ವರ (ಹರ) ರು ಒಂದಾಗಿ ಹರಿಹರನಾಗಿ ಗುಹಾರಣ್ಯದಲ್ಲಿದ್ದಂತಹ ಗುಹಾಸುರನೊಂದಿಗೆ ಸೆಣಸಾಡಿ ಅವನನ್ನು ಹರಣ ಮಾಡಿದ್ದಾಗಿ ತಿಳಿದು ಬರುತ್ತದೆ. ಆಗ ಗುಹಾಸುರನೊಂದಿಗೆ ಸೆಣಸಾಡುತ್ತ ಸುತ್ತಲ ಭಾಗದಲ್ಲೆಲ್ಲಾ ಕಾದಾಡಿ ಕೊನೆಯ ಕ್ಷಣದಲ್ಲಿ ಈ ಸ್ಥಳದಲ್ಲಿ ಅವನನ್ನು ಹರಣ ಮಾಡಿದ್ದರಿಂದಾಗಿ[೨೨] ಈ ಪ್ರದೇಶವು ಹರಣಪುರ ಎಂದಾಗಿ ಕಾಲಾಂತರದಲ್ಲಿ ಹರಣಪುರವು ಹರಲಾಪುರವಾಗಿರುವುದಾಗಿ ತಿಳಿದುಬರುತ್ತದೆ.

ಸಾಲಕಟ್ಟೆ: ಜನಪದರ ಒಂದು ಮಾತಿನಂತೆ ಇಲ್ಲಿನ ಮೂಲಸ್ಥರು ಸಾಲ ಮಾಡಿ ತಮ್ಮ ಜೋಡಿ ಜಮೀನುಗಳನ್ನು ಕಳೆದುಕೊಂಡಿದ್ದರಿಂದ ಈ ಹೆಸರು ಬಂದಿತೆಂದು, ಇನ್ನೊಂದು ಹೇಳಿಕೆಯಂತೆ ಇಲ್ಲಿ ಸಾಲು ಸಾಲು ಕಮ್ಮಾರರ ಕುಲುಮೆಗಳಿದ್ದುದರಿಂದ[೨೩] ಈ ಹೆಸರು ಬಂದಿತೆಂದು ಹೇಳಲಾಗುತ್ತದೆ.

ಹಿಂಡಸಘಟ್ಟ: ಇಲ್ಲಿ ಒಬ್ಬ ಹೆಣ್ಣು ಮಗಳಿದ್ದು ಹಸು ಮೇಯಿಸುತ್ತಾ ಹಸುಗಳಿಗಾಗಿ ಕೆರೆಯನ್ನು ಸಹ ಕಟ್ಟಿಸುತ್ತಾಳೆ. ಅದಕ್ಕೆ ಹೆಂಗಸಿನ ಕಟ್ಟೆ ಅಂತ ಕರೆದು ಆ ಹೆಂಗಸಿನ ಕಟ್ಟೆಯೇ ಹಿಂಡಸಘಟ್ಟೆಯಾಗಿದೆ. ನೊಳಂಬ ರಾಜನಾದ ಶ್ರೀ ನಂದಿಮಲ್ಲಯ್ಯನು ಹಿಂಡೆದ ಇರುವ ಹಸುಗಳನ್ನು ಒಂದೆಡೆ ಕಟ್ಟುತ್ತಿದರ್ದ. ಹಿಂಡುವ ಹಸುಗಳನ್ನು ಇನ್ನೊಂದೆಡೆ ಕಟ್ಟುತ್ತಿದ್ದರು ಎಂಬುದಾಗಿಯೂ. ಹಿಂಡುವ ಹಸುಗಳನ್ನು ಕಟ್ಟುತ್ತಿದ್ದ ಸ್ಥಳವೇ "ಹಿಂಡುವ ಹಸುವಿನ ಕಟ್ಟೆ ಹಿಂಡಸ್ಕಟ್ಟೆ"[೨೪] ಎಂದಾಗಿದೆ.

ಜಿಗಳಿ: ಹಿಂದೆ ಇಲ್ಲಿ ತುಂಬಾ ಜಿಗಣೆ ಹುಳುಗಳು ಇದ್ದುದರಿಂದ ಇದಕ್ಕೆ ಜಿಗಣೆ ಎಂದು ಕರೆದು ನಂತರದಲ್ಲಿ ಜಿಗಳಿ ಆಗಿರುವುದಾಗಿಯೂ, ಹಾಗೆಯೇ ಈ ಸ್ಥಳದಲಿ ಜಿಗಳಿ ಎನ್ನುವ ಹುಲ್ಲು ಜಾತಿಯ ಸಸ್ಯ ಹೆಚ್ಚಾಗಿ ಬೆಳೆಯುತ್ತಿದ್ದುದರಿಂದ ಜಿಗಳಿ ಎಂದಾಯಿತು.

ಗುತ್ತೂರು: ಹಿಂದೆ ಇಲ್ಲಿ ಮಿಲಿಟರಿ (ಸೈನ್ಯ) ದಂಡು ಗಸ್ತು ಹೊಡೆಯುತ್ತಿದ್ದುದರಿಂದಾಗಿ ಇದನ್ನು ಗಸ್ತು ಊರು, ದಂಡುಗುಸ್ತೂರು, ದಂಡುಗುತ್ತೂರು ಎಂದು ಹೆಸರಾಗಿ ನಂತರದಲ್ಲಿ ಗುತ್ತೂರು ಆಗಿರುವುದಾಗಿಯೂ, ಮತ್ತು ದಂಡು ಇದ್ದ ಗುರುತು ಈ ಸ್ಥಳದಲ್ಲಿದ್ದುದರಿಂದಾಗಿ ದಂಡುಗುರ್ತೂರು ಆಗಿ ಗುತ್ತೂರು ಆಗಿರುವುದಾಗಿಯೂ ಹೇಳಲಾಗುತ್ತದೆ. ಒಂದು ಐತಿಹ್ಯದ ಪ್ರಕಾರ ಬಳ್ಳಾರಿ ಕಡೆಯಿಂದ ಬಂದಂತಹ ಗುತ್ತಿ ಪರಿವಾರವು ಕೆಲಕಾಲ ಇಲ್ಲಿವಾಸವಾಗಿದ್ದು ನಂತರದಲ್ಲಿ ಹೊನ್ನಾಳಿ ತಾಲೂಕಿನ ಬೆಳಗುತ್ತಿ ಕಡೆಗೆ ಪ್ರಯಾಣ ಬೆಳೆಸಿದ್ದಾಗಿ ತಿಳಿದುಬರುತ್ತದೆ.[೨೫] ಆ ಗುತ್ತಿ ಪರಿವಾರವು ಇಲ್ಲಿ ನೆಲೆಸಿದ್ದರಿಂದಾಗಿ ಇದು ಗುತ್ತಿವೂರು ಆಗಿ ನಂತರದಲ್ಲಿ ಗುತ್ತೂರು ಆಗಿರುವುದಾಗಿ ತಿಳಿದುಬರುತ್ತದೆ.

ಗಂಗನರಸಿ: ಹಿಂದೆ ಇದು ಗಂಗರರಸ ಒಂದು ಪಟ್ಟಣವಾಗಿತ್ತೆಂದೂ, ಆ ಅರಸನ ಅರಸಿಯೊಬ್ಬಳಾಗಿದ್ದ ಗಂಗಾದೇವಿಯು ಇಲ್ಲಿ ವಾಸಿಸುತ್ತಿದ್ದಳೆಂದೂ, ಅದರಿಂದಾಗಿ ಗಂಗನ ಅರಸಿ ಆಗಿರುವುದಾಗಿ ಐತಿಹ್ಯವಿದೆ.[೨೬] ಇನ್ನೊಂದು ಐತಿಹ್ಯದಂತೆ ಹಿಂದೆ ಗಂಗಮ್ಮ ಮತ್ತು ಬಸಪ್ಪನವರು ತಮ್ಮ ಪರಿವಾರದೊಂದಿಗೆ ಬರುವಾಗ ತುಂಗಭದ್ರಾನದಿ ತುಂಬಿ ಹರಿಯುತ್ತಿದ್ದು ಗಂಗಮ್ಮನು ಭಕ್ತಿಯಿಂದ ಗಂಗೆಯನ್ನು ಪ್ರಾರ್ಥಿಸಿದಾಗ ತುಂಬಿದ ಹೊಳೆಯು ಇಬ್ಭಾಗವಾಗಿ ಅವರನ್ನು ದಾಟಲು ದಾರಿ ಮಾಡಿಕೊಟ್ಟದ್ದಾಗಿಯೂ ಹಾಗೆಯೇ ನದಿ ದಾಟಿದ ಪರಿವಾರ ಇಂದಿನ ಗಂಗನರಸಿ ಸ್ಥಳಕ್ಕೆ ಬಂದು ನೆಲೆಸಲಾಯಿತು. ಗಂಗಮ್ಮನ ಜೊತೆ ಇದ್ದ ಬಸಪ್ಪನು ಕಾಗೆಗಳಿಗೆ ಅನ್ನ, ಹುಗ್ಗಿಯನ್ನು ಹಾಕಿಕೊಳ್ಳುತ್ತಾ ಇಲ್ಲಿಯವರೆಗೆ ಕರೆದು ತಂದಿದ್ದರಿಂದ ಆತನನ್ನು ಕಾಗೆಬಸಪ್ಪನೆಂದು ಕರೆಯುತ್ತಿದ್ದಾರೆಂದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಗಂಗನರಸಿ ಗ್ರಾಮದ ಚನ್ನಪ್ಪ ಎಂಬುವವರಿಂದ ತಿಳಿದುಬಂದಿತು.ಇದಕ್ಕೆ ಸಾಕ್ಷಿ ಎಂಬಂತೆ ಗ್ರಾಮದಲ್ಲಿ ಕಾಣುವಂತ ಕಾಗೆ, ನಂದಿ, ಸೂರ್ಯ ಹಾಗೂ ಬಳ್ಳಿಯ ಕೆತ್ತನೆ ಇರುವ ಕಲ್ಲು ಕಂಬವನ್ನು ಕಾಗೆಬಸಪ್ಪ ದೇವರು[೨೭] ಎಂದೇ ನಂಬಿಕೊಂಡು ಬಂದಿರುವ ಸ್ಥಳೀಯರು ಆ ಕಲ್ಲನ್ನು ಪೂಜಿಸುತ್ತಾರೆ.

ಕೊಕ್ಕನೂರು: ಐತಿಹ್ಯ-೧, ಕುಕ್ಕುಟ ರಕ್ಕಸನಿಗೆ ತಕ್ಕ ಶಾಸ್ತಿ: ಈಗಿನ ಕೊಕ್ಕನೂರು ಗ್ರಾಮದಲ್ಲಿ ಕುಕ್ಕುಟವೆಂಬ ಬಲಾಢ್ಯ ರಕ್ಕಸವಾಗಿದ್ದನಂತೆ. ಕುಕ್ಕಟ ದೈತ್ಯನು ಸುತ್ತಮುತ್ತಲಿನ ಭಾಗದ ನಿವಾಸಿಗಳಿಗೆ ಪ್ರಜೆಗಳಿಗೆ ಮೇಲಿಂದ ಮೇಲೆ ವಿನಾಃ ಕಾರಣ ಪೀಡಿಸುತ್ತಿದ್ದನು. ತನಗೆ ಇಷ್ಟ ಬಂದಲ್ಲಿ ನುಗ್ಗಿ ಲಗ್ಗೆಯಿಟ್ಟು ದನಕರುಗಳನ್ನು ಲಪಟಾಯಿಸಿ, ತನ್ನ ಹಿಂಸಾಚಾರದಿಂದ ಭಯ ಹುಟ್ಟಿಸುತ್ತಿದನು. ಎಲ್ಲಾ ಗ್ರಾಮಸ್ಥರೂ ಕುಕ್ಕುಟನ ಹಾವಳಿಯಿಂದಾಗಿ ಭಯದ ನೆರಳಿನಲ್ಲಿ ಬದುಕುತ್ತಿದ್ದರು. ಜೀವಭಯದಿಂದ ತಳಮಳಿಸುತ್ತಿದ್ದರು. ಈ ದೈತ್ಯನ ಹೆಸರು ಹೇಳಲು, ಕೇಳಲು ಕೂಡ ಹೆದರುತ್ತಿದ್ದರು. ಬರಬರುತ್ತಾ ಕುಕ್ಕುಟನ ಹಾವಳಿ ಮಿತಿಮೀರಿತು. ಪ್ರಜೆಗಳು ಬದುಕುವುದೇ

ಕಷ್ಟವಾಯಿತು. ಕೊಕ್ಕನೂರಿನ ಆ ಕಾಲದಲ್ಲಿ ಆಯಕಟ್ಟಿನ ತಾಣಗಳಲ್ಲಿ ಕೋತಿಗಳು ಕಾಣಿಸಿಕೊಂಡು ಮರೆಯಾಗಿತ್ತಿದ್ದವು ಕೆಲ ಗ್ರಾಮಸ್ಥರು ಹಿರಿಯರು ಆ ಕೋತಿಗಳ ಬಳಿ ಹೋಗಿ ಮಾತನಾಡಿಸಬೇಕೆಂದರೆ ಅವು ಗಾಬರಿಯಾಗಿ ಚದುರಿ ಹೋಗುತ್ತಿದ್ದವು. ಆದರೂ ಗ್ರಾಮಸ್ಥರು ಆ ಕೋತಿಗಳ ಬೆನ್ನುಬಿಡದೆ ಅವುಗಳನ್ನು ತಡೆದು ಈ ರೀತಿಯಾಗಿ ಪ್ರಾರ್ಥಿಸಿದರು. "ಹೇ ವಾನರ ಸೈನ್ಯವೇ, ನೀವು ರಾಮಾಯಣ ಕಾಲದ ಪ್ರಬಲ ಶಕ್ತಿಯನ್ನು ಪ್ರಯೋಗಿಸಿ ಈ ಕುಕ್ಕುಟ ರಕ್ಕಸನನ್ನು ಯಮಲೋಕಕ್ಕೆ ಅಟ್ಟಿರಿ. ನೀವೇ ಆಂಜನೇಯ ರೂಪತಾಳಿ ಕುಕ್ಕುಟನ ಹಾವಳಿಗೆ ಮಟ್ಟಾ ಹಾಕಿರಿ. ನಿಮಗೆ ನಾವು ಶರಣು ಬಂದಿರುವೆವು. ನಮ್ಮನ್ನು ಕಾಪಾಡಿ, ದಯೆ ತೋರಿಸಿ."[೨೮] ಎಂದು ಕೇಳಿಕೊಂಡರು.

ಆಂಜನೇಯನಿಗೆ ಈ ಮೊರೆ ಕೇಳಿಸಿತು ದುಷ್ಟರನ್ನು, ಲೋಕಕಂಟಕರನ್ನು ಸದೆಬಡಿಯುವ ಗುಣವುಳ್ಳ ಆಂಜನೇಯ ಸ್ವಾಮಿಯು ಕುಕ್ಕುಟ ದೈತ್ಯನಿಗೆ ತಕ್ಕ ಶಾಸ್ತಿ ಮಾಡಲು ಸಿದ್ಧನಾದನು. ಸೂಕ್ತ ಸಮಯ ಕಾಯುತ್ತಿದ್ದನು. ಪುನಃ ಕುಕ್ಕುಟನು ಒಂದು ಗ್ರಾಮಕ್ಕೆ ನುಗ್ಗಿ ಹಾಹಾಕಾರವೆಬ್ಬಿಸಿದನು. ಇದನ್ನೇ ಕಾಯುತ್ತಿದ್ದ ಆಂಜನೇಯನು ಬಿರುಗಾಳಿಯಂತೆ ನುಗ್ಗಿ ಕುಕ್ಕುಟ ರಕ್ಕಸನಿಗೆ ತನ್ನ ಗದೆಯಿಂದ ಬೆನ್ನಿಗೆ ಪ್ರಹಾರ ಮಾಡಿದನು. ಈ ಅನಿರೀಕ್ಷಿತ ದಾಳಿಯಿಂದ ತತ್ತರಿಸಿದ ಕುಕ್ಕಟನು ಅಟ್ಟಹಾಸದಿಂದ ಕೇಕೆ ಹಾಕುತ್ತ ಆಂಜನೇಯನತ್ತ ನುಗ್ಗಿ ಮುಷ್ಟಿಕಾಳಗಕ್ಕೆ ಸಿದ್ಧನಾದನು ಆಂಜನೇಯನು ತನನ ವಜ್ರಮುಷ್ಠಿಯ ಹೊಡೆತ-ಬಡಿತಗಳಿಂದ ಕುಕ್ಕಟನನ್ನು ಹಣ್ಣುಗಾಯಿ ನೀರುಗಾಯಿ ಮಾಡಿದನು. ಎಡೆಬಿಡದೆ ಆಂಜನೇಯನ ಪ್ರಹಾರಗಳಿಂದ ಕುಕ್ಕಟನು ನೆಲಕ್ಕೆ ಬಿದ್ದನು. ಆಂಜನೇಯನು ಆತನ ಎದೆಯ ಮೇಲೆ ತನ್ನ ಬಲಗಾಲಿಟ್ಟು ತನ್ನ ಇಡೀ ಶರೀರದ ಭಾರ ಹಾಕಿ ಹಿಸುಕತೊಡಗಿದನು.

ಆ ಕ್ಷಣದಲಿ ಕುಕ್ಕುಟನಿಗೆ ಜ್ಞಾನೋದಯವಾಯಿತು. ಕುಕ್ಕುಟನು ಆಂಜನೇಯನನ್ನು ಗುರುತಿಸಿ, ಸಂತೋಷದಿಂದ ಹೀಗೆ ಪ್ರಾರ್ಥಿಸಿದನು. "ಹೇ ಮಹಾನುಭಾವನೇ ನೀನು ಆಂಜನೇಯನೆಂಬುದು ನನಗೆ ತಿಳಿದು ನಾನು ಸಂತೋಷಗೊಂಡೆನು. ಕಾರಣ ಈಗ ನನ್ನ ಶಾಪ ವಿಮೋಚನೆಯಾಯಿತು. ನನ್ನ ಪೂರ್ವ ಜನ್ಮದ ಕೆಟ್ಟ ಕರ್ಮಗಳಿಂದ ನನಗೆ ಈ ಶಾಪವಿತ್ತು. ಅದಕ್ಕೆ ನನಗೆ ಈ ರಕ್ಕಸ ರೂಪ ಬಂದಿತ್ತು. ನನ್ನನ್ನು ಕ್ಷಮಿಸು. ನ್ನನುಸ್ನ ಪ್ರಾಣ ಹೋಗುವ ಮೊದಲು ನನ್ನ ಈ ಪ್ರಾರ್ಥನೆಯನ್ನು ಮನ್ನಿಸು ಹಾಗೂ ವರ ನೀಡಿ ನನ್ನ ಆಸೆ ಪೂರೈಸು. ನಿನ್ನಿಂದ ನನ್ನ ಪ್ರಾಣಪಕ್ಷಿ ಹಾರಿಹೋದರೆ ನಾನೇ ಧನ್ಯ ನಾನೇ ಭಾಗ್ಯಶಾಲಿ. ಈ ಪ್ರದೇಶಕ್ಕೆ 'ಕುಕ್ಕುಟನ ಊರು' ಎಂದು ಶಾಶ್ವತವಾಗಿ ನಾಮಕರಣವಾಗಲಿ ಮತ್ತು ನೀನು ಈ ಪ್ರದೇಶದಲ್ಲಿ ಸ್ಥಿರವಾಗಿ ನೆಲೆಸಿ ನಿನ್ನ ದರ್ಶನದ ಲಾಭ ಇಲ್ಲಿಯ ಪ್ರಜೆಸಳಿಗೆ ನೀಡು"[೨೯] ಎಂದನು. ಆಂಜನೇಯನು ಇದಕ್ಕೆ ಸಮ್ಮತಿಸಿ 'ತಥಾಸ್ತು' ಎಂದನು ಕುಕ್ಕುಟನ ಪ್ರಾಣಪಕ್ಷಿ ಹಾರಿಯೋಯಿತು. ಕುಕ್ಕುಟನ ಆಸೆಯಂತೆ ಈ ಪ್ರದೇಶಕ್ಕೆ ಕುಕ್ಕುಟನ ಊರು ಎಂಬ ಹೆಸರನ್ನು ದಯಪಾಲಿಸಿ ತಾವು ಅಲ್ಲಿಯೇ ಸ್ಥಿರವಾಗಿ ನಿಂತು, ಈ ಐತಿಹ್ಯ ಕೊಕ್ಕನೂರು ಹೆಸರಿಗೆ ಪೂರಕವಾಗಿದೆ.

ಐತಿಹ್ಯ-೨ ಕೊಕ್ಕುಟಗಳ ಗ್ರಾಮ ಕೊಕ್ಕನೂರು: ಇಲ್ಲಿ ಕುಟುಂಬಗಳು ಪ್ರೀತಿಗಾಗಿ ಪಾರಿವಾಳ ಹಾಗೂ ನವಿಲುಗಳನ್ನು ಸಾಕಿ ಸಲಹುತ್ತಿದ್ದರು. ಬರಬರುತ್ತಾ ಹೆಚ್ಚಿನ ಸಂಖ್ಯೆಯಲ್ಲಿ ಉತ್ತಮ ಕೋಳಿ ತಳಿಗಳನ್ನು ಸಾಕುವ ಪರಿ ಪಾಠವಿಟ್ಟುಕೊಂಡು. ಈ ಎಲ್ಲಾ ಪಕ್ಷಿ ಸಂಕುಲಗಳನ್ನು ಹವ್ಯಾಸಕ್ಕಾಗಿ ಮತ್ತು ಪ್ರೀತಿಗಾಗಿ ಮಾತ್ರ ಸಾಕುತ್ತಿದ್ದರು. ಆದರೆ ಅವುಗಳಿಗೆ ಹಿಂಸೆ ಕೊಡುತ್ತಿರಲಿಲ್ಲವಂತೆ. ಮುಂದಿನ ದಶಕಗಳಲ್ಲಿ ಹಿಂಡುಹಿಂಡಾಗಿ ಕೋಳಿಗಳನ್ನು ಸಾಕಲು ಪ್ರಾರಂಭಿಸಿದರು. ಪ್ರತಿ ಮನೆಯವರು ಕೋಳಿ ಸಾಕುವ ಪದ್ಧತಿ ಮುಂದುವರೆಯಿತು. ಈ ಗ್ರಾಮವು ಕೋಳಿಗಳಿಂದಲೇ ತುಂಬಿಹೋಯಿತು. ಎಲ್ಲಿ ನೋಡಿದರೂ ಕೋಳಿತಳಿ ಕಂಡು ಬರತೊಡಗಿತು. ಇದರಿಂದ ಕೋಳಿ ಸಾಕುವ ಊರು ಮುಂದೆ 'ಕೊಕ್ಕಟ ಊರು'[೨೦] ಆಗಿ ಪ್ರಸಿದ್ಧಿಯಾಯಿತು. ನಂತರದ ವರ್ಷಗಳಲ್ಲಿ ' ಕೊಕ್ಕುಟ ಊರು'[೨೧] ಈ ಪದ ಬದಲಾಗಿ ಕೊಕ್ಕನೂರು ಎಂದೇ ನಾಮಕರಣವಾಯಿತು.[೨೨] ಈಗಿನ ಕೊಕ್ಕನೂರು ಈ ಐತಿಹ್ಯಕ್ಕೆ ಹೊಂದಿಕೆಯಾಗಿರುತ್ತದೆ.

ಈ ತಾಲೂಕಿನ ಸ್ಥಳ ಪ್ರಧಾನ ಐತಿಹ್ಯಗಳ ವಿಶ್ಲೇಷಣೆಯಿಂದ ಐತಿಹಾಸಿಕ ಘಟನೆಗಳ ಕಾಲದಿಂದಲೂ ರಾಜಕೀಯ ಕೇಂದ್ರ ಸ್ಥಾನಗಳಾಗಿದ್ದು ಐತಿಹಾಸಿಕ ಕಾಲದ ಪ್ರಮುಖ ಕೇಂದ್ರಗಳಾಗಿದ್ದವು ಎಂಬುದು ತಿಳಿದುಬರುತ್ತದೆ.

೫.೩. ಜಾತ್ರೆ ಮತ್ತು ಉತ್ಸವ

ಮನುಕುಲದ ಪ್ರಮುಖವಾದ ಕಸುಬೆಂದರೆ ವ್ಯವಸಾಯ. ವ್ಯವಸಾಯದ ಆವಿಷ್ಕಾರದಿಂದಲೇ ಹಿಂದೆ ನಾಗರಿಕತೆ ತಿಳಿಯದೇ ಅಂಧಕಾರದಲ್ಲಿದ್ದ ಜನರು ನಾಗರಿಕ ಮಾನವನಾಗಲು ಸಾಧ್ಯವಾದುದು. ಬೇಟೆ ಆಡುತ್ತಾ ಪ್ರಾಣಿಗಳ ಹುಡುಕಾಟದಲ್ಲಿ ತೊಡಗಿದ್ದ ಅವರಿಗೆ ವ್ಯವಸಾಯದಿಂದಾಗಿ ಒಂದೆಡೆ ನೆಲೆ ನಿಲ್ಲಲು ಆಯೋಜಿಸಲು ಹಾಗೆ ಸಂಸ್ಕೃತಿಯೊಂದನ್ನು ರೂಪಿಸಿಕೊಳ್ಳಲು ಸಾಧ್ಯವಾಯಿತು. ನಂಬಿಕೆ ಮತ್ತು ಆಚರಣೆಗಳು ಕಾಲದಿಂದ ಕಾಲಕ್ಕೆ ಜನಾಂಗದಿಂದ ಜನಾಂಗಕ್ಕೆ ಮುಂದುವರೆದುಕೊಂಡು ಬಂದಂತಾಗಿದೆ. ಮಾನವನಿಗೆ ದೈವದ ಕಲ್ಪನೆ ಬಂದಾಗಿನಿಂದಲೂ ಅದನ್ನು ಆರಾಧಿಸುವ ಒಂದಲ್ಲಾ ಒಂದು ರೀತಿಯ ಆಚರಣೆಗಳನ್ನು ವ್ಯವಸ್ಥಿತವಾಗಿ ರೂಪಿಸುತ್ತಲೇ ಬಂದಿದ್ದಾನೆ ಇಂತಹ ಆಚರಣೆಗಳಲ್ಲಿ ಜಾತ್ರೆ ಮತ್ತು ಉತ್ಸವಗಳು ಪ್ರಮುಖವಾದ ಸ್ಥಾನವನ್ನು ಪಡೆದಿದ್ದು ಇಂದಿಗೂ ಸಾಂಸ್ಕೃತಿಕ ಮಹತ್ವವನ್ನು ಪಡೆದಿವೆ. ಜನಸಾಮಾನ್ಯರಿಗೆ ಅವರ ದೈನಂದಿನ ಜೀವನದ ಯಾಂತ್ರಿಕತೆಯನ್ನು ನೀಗಿಸಿ ಹೊಸ ಉತ್ಸಾಹ ಉಲ್ಲಾಸಗಳನ್ನು ನೀಡುವುದಲ್ಲದೆ ಸಮುದಾಯದ ಸಾಧನೆಗೆ ನೆರವಾಗುತ್ತದೆ. ಪ್ರಕೃತಿಯ ಆರಾಧಕರಾದ ನಮ್ಮ ಪೂರ್ವಿಕರು ಪ್ರಕೃತಿಯ ಬಗ್ಗೆ ಪುರಾಣ, ಕಥೆಗಳ ಜೊತೆಗೆ, ಪುಣ್ಯಪುರುಷರನ್ನು ಸೃಷ್ಟಿಸಿಕೊಂಡು ಬಂದಿದ್ದಾರೆ. ಮಳೆ ಕೊಡುವ ಮುಗಿಲು ದೇವ, ಬೆಳೆಕೊಡುವ ಭೂಮಿತಾಯಿ ಹುಲ್ಲುಸೊಪ್ಪು ತಿಂದು ಹಾಲು ಕೊಡುವ ಗೋಮಾತೆ. ಹಣ್ಣು ಹಂಪಲುಗಳನ್ನು ಕೊಡುವ ಪ್ರಕೃತಿಯನ್ನು ಪ್ರೀತಿಯಿಂದ ಪೂಜಿಸಿದರೆ, ಮಾರಿ, ಮಸಣಿ, ಚೌಡಿಯನ್ನು ಅನೇಕ ಆಚರಣೆಯ ಮೂಲಕ ಪೂಜಿಸುತ್ತಾ ಬಂದಿದ್ದಾರೆ.

ಪ್ರತಿವರ್ಷ ಸುಗ್ಗಿ ಕಾಲ ಮುಗಿದು ಅದರ ಫಲ ಕೈಸೇರಿದ ಮೇಲೆ ರೈತರು ಬಿಡುವಾಗಿರುವ ಕಾಲದಲ್ಲಿ ಕೃಷಿಯಿಂದ ಕೈಗೆ ಬಂದ ಫಲಕ್ಕಾಗಿ ದೇವರಿಗೆ ಕೃತಜ್ಞತೆ ಸಲ್ಲಿಸುವುದು ಮತ್ತು ಮುಂದಿನ ವರ್ಷವೂ ಇದೆ ರೀತಿ ಫಲ ಸಿಗುವಂತೆ ಪ್ರಾರ್ಥನೆ ಸಲ್ಲಿಸುವುದು ಮೊದಲಾದ ಕಾರಣಗಳಿಗಾಗಿ ಯಾವುದೇ ಒಂದು ಸ್ಥಳದ ಜನರು ಮಾತ್ರವಲ್ಲದೆ ಅವರ ಬಂಧುಬಳಗ ಬಾಂಧವರು ಸೇರಿದಂತೆ ಎಲ್ಲರೂ ಒಂದೆಡೆ ಸೇರಿ ಸಂತೋಷ ಸಡಗರದಿಂದ ಕಲೆತು ಪ್ರೀತಿ, ವಿಶ್ವಾಸಗಳಿಂದ ಅನುಭವಗಳನ್ನು ಹಂಚಿಕೊಳ್ಳುವ ದೃಷ್ಟಿಯಿಂದ ಜನಸಮೂಹಗಳು ಸೇರಲ್ಪಟ್ಟವು. ಆ ಸಮೂಹಗಳೇ ಮುಂದೆ ಬೃಹದಾಕಾರದ ಜಾತ್ರೆಗಳಾಗಿ ವೈವಿಧ್ಯಮಯ ರೀತಿಯಲ್ಲಿ ರೂಪತಳೆದವೆನಿಸುತ್ತದೆ. ಜಾತ್ರೆಗಳು ಒಂದು ಗ್ರಾಮಕ್ಕೆ ಸೀಮಿತವಾಗಿದ್ದರೂ ಕೆಲವೊಂದು ಜಾತ್ರೆಗಳನ್ನು ಸುತ್ತಮುತ್ತಲಿನ ಗ್ರಾಮದವರು ಸೇರಿ ಆಚರಿಸುತ್ತಾರೆ. ಸಾಮಾನ್ಯವಾಗಿ ಇಂತಹ ಜಾತ್ರೆಗಳು ಎಲ್ಲರಿಗೂ ಗೊತ್ತಿರುತ್ತವೆ. ಎಲ್ಲರೂ ಒಟ್ಟಾಗಿ ಭಾಗವಹಿಸಿ ಜಾತ್ರಾ ಮಹೋತ್ಸವವನ್ನು ಶ್ರದ್ಧಾ ಭಕ್ತಿಯಿಂದ ಆಚರಿಸುತ್ತಾರೆ.

ಜಾತ್ರೆ ಎಂದು, ಹೇಗೆ, ಯಾವ ರೂಪದಲ್ಲಿ ಹುಟ್ಟಿತು? ಅದರ ವಿಕಾಸ ಹೇಗೆ ಎಂಬಿತ್ಯಾದಿ ಪ್ರಶ್ನೆಗಳು ಸರಳವಾಗಿ ಕಂಡರೂ ಉತ್ತರಿಸುವುದು ಕಷ್ಟ. ಜಾತ್ರೆ ಎಂದರೇನು? ಎಂಬ ಪ್ರಶ್ನೆಗೆ ವಿದ್ವಾಂಸರು ವಿವಿಧ ವ್ಯಾಖ್ಯಾನಗಳನ್ನು ನೀಡಿದ್ದಾರೆ. ಜಾತ್ರೆ ಮತ್ತು ಉತ್ಸವಗಳನ್ನು ಕುರಿತು ಮೊದಲು ಅಧ್ಯಯನ ಪ್ರಾರಂಭಿಸಿದ ಬ್ರಿಟಿಷ್ ಜಾನಪದ ವಿದ್ವಾಂಸರು ಅಲ್ಲಿನ Festivals ಕುರಿತು ಅಧ್ಯಯನ ಮಾಡಿದರು. ಜಾತ್ರೆಗಳು ಜನಪದ ಜೀವನದ ಅವಿಭ್ಯಾಜ್ಯ ಅಂಗಗಳಾಗಿರುವಂತೆಯೇ ಜನಪದ ಸಂಸ್ಕೃತಿಯ ವಿಕಾಸಕ್ಕೆ ಚೈತನ್ಯದಾಯಿಗಳಾಗಿವೆ. ಅವುಗಳ ತಾಯಿಬೇರು ಭೂತಕಾಲದ ಗರ್ಭದಲ್ಲಿ ಹೂತುಕೊಂಡಿದ್ದರೂ ಅವು ಆದಿಮಾನವನ ಕಾಲದಿಂದಲೇ ಧಾರ್ಮಿಕಾಚರಣೆಗಳ ಒಂದು ಪ್ರಮುಖ ಭಾಗವಾಗಿ ರೂಢಿಯಲ್ಲಿ ಇದ್ದಿರಬೇಕೆಂದು ತೋರುತ್ತದೆ. ಸಾಮಾನ್ಯವಾಗಿ ಆದಿಮಾನವನ ಕಾಲದ ದೇವತಾ ಆರಾಧನೆಯೇ ಮೊದಲಾದ ಧಾರ್ಮಿಕಾಚರಣೆಗಳು ಸಾಮೂಹಿಕವಾಗಿಯೇ ನಡೆಯುತ್ತಿದ್ದಿರಬೇಕು. ಅವನು ನಿರಂತರವಾಗಿ ಅಲೆಮಾರಿತನದಿಂದ ಪಾರಾಗಿ ತಾತ್ಕಲಿಕವಾಗಿಯಾದರೂ ನೀರು, ನೆರಳು ಫಲವತ್ತಾದ ನೆಲ ಕಂಡ ಕಡೆ ನೆಲೆಯೂರಿದ ನಂತರ ಅಲೆಮಾರಿ ಜನ ಬುಡಕಟ್ಟಿನ ಜನವಾಗಿ ಪರಿವರ್ತನೆಗೊಂಡ ಸಂದರ್ಭದಲ್ಲಿ ಜಾತ್ರೆಗಳು ಸರಳ ಮೂಲಾವಸ್ಥೆಯಲ್ಲಿ ಕಾಣಿಸಿಕೊಂಡಿರಬೇಕು.[೨೨]

ಇನ್ನೂ ದೇವಾಲಯಗಳ ಇತಿಹಾಸದೊಡನೆ ಜಾತ್ರೆಗಳ ಇತಿಹಾಸಕ್ಕೆ ಸಂಬಂಧ ಕಲ್ಪಿಸುವುದು ಉಂಟು. ವೇದಗಳ ಕಾಲದಲ್ಲಿ ದೇವಾಲಯಗಳಿಲ್ಲದಿದ್ದರೂ ಜಾತ್ರೆ, ಉತ್ಸವಗಳ ಇರಲಿಲ್ಲವೆಂದು ಹೇಳುವುದು ಕಷ್ಟ. ಸಾಮಾನ್ಯವಾಗಿ ಗ್ರಾಮದೇವತೆಗಳಿಗೆ ದೇವಾಲಯಗಳಿರುತ್ತಿರಲಿಲ್ಲ. ಊರ ಹೊರಗೆ ಎತ್ತರವಾದ ಜಗುಲಿಯ ಮೇಲೆ ಕಟ್ಟಿರುತ್ತಿದ್ದರು. ಗ್ರಾಮದೇವತೆಗಳು ಊರಿನ ಹೊರಗಿದ್ದುಕೊಂಡೆ ಊರಿನ ಕ್ಷೇಮವನ್ನು ನೋಡಿಕೊಳ್ಳುತ್ತಿರುವ ದೇವತೆಗಳಿಗೆ ವೇದಪೂರ್ವ ಕಾಲದಿಂದಲೂ ಪೂಜೆಯ ಜೊತೆ ಜೊತೆಗೆ ಅವುಗಳಿಗೆ ಸಂಬಂಧಿಸಿದ ಜಾತ್ರೆಗಳು ಅವಿರತವಾಗಿ ನಡೆಯುತ್ತಿದ್ದಿರಬೇಕು. "ಊರಿನ ಆದಿದೈವಕ್ಕೆ ತೃಪ್ತಿಯಾಗುವಂತೆ ತ್ರಿಕಾಲ ಶುದ್ಧಿಯಾಗಿ ಪೂಜೆಸಲ್ಲಿಸಿದರೆ ದೇವರ

ಹೆಸರಿನಲ್ಲಿ ದಾನ, ಧರ್ಮ, ಅನ್ನಸಂತರ್ಪಣೆಗಳನ್ನು ನೇರವೇರಿಸಿದರೆ ಭಕ್ತರು ದೇವತೆಯ ಕೃಪಾದೃಷ್ಟಿಗೆ ಒಳಗಾಗುತ್ತಾರೆಂಬ ನಂಬಿಕೆ ಇದೆ. ಸಾಮೂಹಿಕರಾಧನೆಯ ಅರ್ಚನೆ ಮತ್ತು ಉತ್ಸವಗಳಿಂದ ಊರಿಗೆ ರೋಗರುಜಿನಿಗಳು ಸುಳಿಯದಂತೆ ದೇವತೆಯ ಕಾವಲು ದೊರೆಯುತ್ತದೆಂಬ ಮಳೆ ಬೆಳೆಗಳಾಗಿ ನೆಲಫಲವತ್ತಾಗಿ ಸಂಪತ್ತು ವೃದ್ಧಿಸುತ್ತದೆಂಬ ಯಾವುದೇ ಆದಿವ್ಯಾದಿ, ಕ್ಷಾಮ, ಡಾಮರ ಶತ್ರುಭಯಗಳಿಂದ ಊರು ಪಾರಾಗುತ್ತದೆಂಬ ನಂಬಿಕೆಯೇ ಜಾತ್ರೆ ಮತ್ತು ಉತ್ಸವಗಳ ಉಗಮ ವಿಕಾಸಗಳಿಗೆ ಸ್ಫೂರ್ತಿಯಾಗಿದೆ.[೨೯]

ಜಾತ್ರೆ ಮತ್ತು ಉತ್ಸವ ಎನ್ನುವುದಕ್ಕೆ ಇಂಗ್ಲಿಷನಲ್ಲಿ Festivals ಎಂದು ಕರೆಯಲಾಗಿದೆ.[೩೦] ಪರಿಸರ ಜನರ ಮನೋಧರ್ಮ ವಿಶೇಷ ಸಂದರ್ಭ ಹಾಗೂ ನಿರ್ದಿಷ್ಟ ಸಂಸ್ಕೃತಿಯ ಹಿನ್ನೆಲೆಯಲ್ಲಿ ಜಾತ್ರೆಗಳು ಉಗಮಗೊಳ್ಳುತ್ತವೆ. ಒಂದು ಕುಟುಂಬ ಸಮಾಜ ಆಚರಿಸುವ ಹಲವು ಹಬ್ಬಗಳಲ್ಲಿ ಒಬ್ಬೊಬ್ಬರು ಒಂದೊಂದು ರೀತಿ ಆಚರಣೆ ಮಾಡುವುದನ್ನು ಕಾಣಬಹುದು. ಕೃಷಿಯನ್ನೇ ಪ್ರಧಾನ ವೃತ್ತಿಯನ್ನಾಗಿ ಮಾಡಿಕೊಂಡಿರುವ ಈ ಜನರಿಗೆ ಬಿಡುವಿನ ವೇಳೆ ಅತ್ಯಂತ ಕಡಿಮೆ ಅನುಗಾಲವೂ ಯಾವುದಾದರು ಕೃಷಿ ಕೆಲಸ ಇದ್ದೆ ಇರುತ್ತದೆ. ಇಂತ ಏಕತಾನದ ಬದುಕಿನ ಜರೂರಿನಲ್ಲಿ ಇವರು ತಮ್ಮ ಪರಿಸರದಲ್ಲಿಯೇ ಸುಖ ಸಂತೋಷದಿಂದಲೂ ಕೆಲವು ದಿನಗಳನ್ನು ಗುರುತಿಸಿಕೊಂಡಿದ್ದಾರೆ ಇದೆ ಜಾತ್ರೆ ಮತ್ತು ಉತ್ಸವಗಳಾಗಿವೆ.[೩೧]

ಭಾರತೀಯ ಸಂಸ್ಕೃತಿ ನೀಡಿದ ಹಬ್ಬಗಳಲ್ಲಿ ಸಾಕಷ್ಟು ವೈಶಿಷ್ಟ್ಯಗಳಿವೆ. ಹಬ್ಬಗಳೆಲ್ಲವು ಭಕ್ತಿಪ್ರಧಾನ ಹಾಗೂ ಜ್ಞಾನಪ್ರಧಾನ ಶ್ರದ್ಧೆಯಿಂದ ನಡೆಸುವ ಹಬ್ಬಗಳು ಭಗವಂತನ ಆರಾಧನೆಗಳೇ ಆಗಿವೆ. ಕಾಟಾಚಾರಕ್ಕೆ ಆಚರಿಸಿದರೆ ಯಾವ ಫಲಗಳು ದೊರೆಯುವುದಿಲ್ಲ. ಭಕ್ತಿ, ಧ್ಯಾನ, ಪೂಜೆಗಳಿಂದ ಚತುರ್ವಿಧ. ಪರುಷಾರ್ಥಗಳು ಸಿದ್ದಿಸಲು ಜಾತ್ರೆ ಮತ್ತು ಉತ್ಸವಗಳು ಶ್ರದ್ಧಾಪೂರ್ವಕವಾಗಿರಬೇಕು.[೩೨] ಜಾತ್ರೆ ಮತ್ತು ಉತ್ಸವಗಳು ಗಾಢವಾದ ನಂಬಿಕೆಗಳಿಂದ ಜರಗುವ ಧಾರ್ಮಿಕ, ಸಾಂಸ್ಕೃತಿಕ ಸಾಮಾಜಿಕ ಮತ್ತು ವೈಯುಕ್ತಿಕ ಸಾಧನೆಯನ್ನು ನಿರ್ಮಿಸುವುದಾಗಿದೆ. ಮಾನವನ ಮನಸ್ಸು ಶುಚಿಯಾಗುವಂತೆ ಪ್ರೇರಣೆಯನ್ನು ನೀಡುವ ಪ್ರಮುಖ ಮಾರ್ಗಗಳಾಗಿದೆ. ಏನೇಯಾದರು ಜಾತ್ರೆ ಮತ್ತು ಉತ್ಸವಗಳು ಒಂದೇ ನಾಣ್ಯದ ಎರಡು ಮುಖವಿದ್ದಂತೆ ಒಂದಕ್ಕೊಂದು ಅವಿನಾಭಾವ ಸಂಬಂಧವನ್ನು ಹೊಂದಿವೆ. ಹಾಗೆಯೇ ಹರಿಹರ ತಾಲೂಕಿನ ಜಾತ್ರೆ ಮತ್ತು ಉತ್ಸವಗಳು ಕೂಡ ಕೆಲವೊಂದು ವಿಶೇಷತೆಯನ್ನು ಒಳಗೊಂಡಿದೆ. ಅವುಗಳನ್ನು ಇಲ್ಲಿ ಕಾಣಬಹುದಾಗಿದೆ.

ಹರಿಹರದ ಊರಮ್ಮ ದೇವಿ ಜಾತ್ರೆ: ಪ್ರಸಕ್ತ ಅಧ್ಯಯನದ ಕೇಂದ್ರಬಿಂದು ಹರಿಹರ ನಗರದಲ್ಲಿ ನಡೆಯುವ ಊರಮ್ಮ ಗ್ರಾನಮದೇವತೆ ಜಾತ್ರೆ ಈ ಪರಿಸರದಲ್ಲಿ ಅತಿ ವಿಶಿಷ್ಟತೆಯಿಂದ ನಡೆಯತ್ತದೆ. ಎರುಡು ವರ್ಷ ತುಂಬಿ ಮೂರನೇ ವರ್ಷದಲ್ಲಿ ಮಾಘಶುದ್ಧ ಪ್ರತಿಪದ ದಲ್ಲಿ ನಡೆಯುತ್ತದೆ. ಈ ಜಾತ್ರೆಯ ದೃಷ್ಟಿಯಿಂದ ಹರಿಹರವು ಮುಖ್ಯವಾಗಿ ಮಹಜೇನಹಳ್ಳಿ ಹಾಗೂ ಕಸಬಾ ಎಂಬ ಗ್ರಾಮಗಳಿಂದ ಐಕ್ಯವಾಗಿವೆ. ಈ ಎರಡೂ ಗ್ರಾಮಗಳ ಜನತೆಯೂ ಒಗ್ಗೂಡಿ

ತಮ್ಮ ಗ್ರಾಮಗಳು ಸಂಗಮಿಸುವ ಗಡಿ ರೇಖೆಯಾದ ಹರಿಹರೇಶ್ವರ ದೇವಾಲಯದ ಮಾರ್ಗದಲ್ಲಿ ನಿರ್ಮಿತವಾದ ಮಂಟಪದಲ್ಲಿ ಜಾತ್ರೆಯನ್ನು ಆಚರಿಸುತ್ತಾರೆ.[೩೮] ಎಲ್ಲಾ ಗ್ರಾಮಗಳಲ್ಲಿ ಒಂದು ಚರಗವಾದರೆ ಇಲ್ಲಿ ಎರಡು ಚರಗದ ಹಬ್ಬ ತುಂಬಾ ವಿಶಿಷ್ಟವಾದುದು. ಎರಡು ಗ್ರಾಮಗಳ ಗಡಿಯ ರೇಖೆಯಲ್ಲಿ ನಡೆಯತ್ತದೆ.

ಸಭೆ ಸೇರುವುದು: ಊರಮ್ಮನ ಹಬ್ಬವನ್ನು ಆಚರಿಸಲು ಸಾರ್ವಜನಿಕರು ಮಹಜೇನಹಳ್ಳಿ ಮತ್ತು ಕಸಬಾದ ಗ್ರಾಮದ ಗೌಡರು ಮತ್ತು ಶಾನುಭೋಗರಿಗೆ ತಿಳಿಸುತ್ತಾರೆ. ಕಸಬಾ ಗ್ರಾಮದ ಗುಡಿಯಲ್ಲಿ ಎಲ್ಲಾ ಭಕ್ತಾದಿಗಳು ನೆರೆಯುಂತೆ ಹಲಗೆ ಸಾರಿಸಲಾಗುತ್ತದೆ. ಆ ಸಭೆಯಲ್ಲಿ ಗೌಡರಾದಿಯಾಗಿ ಎರಡು ಗ್ರಾಮಗಳ ಹಿರಿಯರು ಸಕಲವರ್ಗದ ಜನರ ಒಪ್ಪಿಗೆ ಪಡೆದು, ಜಾತ್ರೆ ಮಾಡುವ ತೀರ್ಮಾನಗಳನ್ನು ಪ್ರಕಟಿಸುತ್ತಾರೆ. ಪ್ರತಿ ಮೂರು ವರ್ಷಗಳಿಗೊಮ್ಮೆ ನಡೆಯುವ ಈ ಜಾತ್ರೆಯು ಮಾಘಶುದ್ಧ ಪ್ರತಿಪದದಲ್ಲಿ ಆಚರಿಸಲ್ಪಡಬೇಕೆಂದು ತೀರ್ಮಾನವಿದೆ. ಜೋಯಿಸರಿಂದ ಆ ಮಿತಿಯನ್ನು ತಿಳಿಯುತ್ತಾರೆ. ಈ ಜಾತ್ರೆಯ ಉಸ್ತವಾರಿ ನೋಡಿಕೊಳ್ಳಲು ಎರಡೂ ಗ್ರಾಮದವರು ಸೇರಿ ಸಮಿತಿಯನ್ನು ರಚಿಸುತ್ತಾರೆ.

ಡಬ್ಬಿ ಗಡಿಗೆ ಪೂಜೆ: ಶುದ್ಧವಾದ ತಂಬಿಗೆ ಅಥವಾ ಮೃತ್ತಿಕೆಯ ಕುಂಭವನ್ನು ದೇವಿಯ ಎದುರಿಗೆ ಸ್ಥಾಪಿಸುತ್ತಾರೆ. ಗೋಮಯದಿಂದ ನೆಲಸಾರಿಸಿ ರಂಗವಲ್ಲಿಯ ಮೇಲೆ ಸುಳಿಬಾಳೆ ಎಲೆ ಹಾಕಿ, ಅದರ ಮೇಲೆ ಅಕ್ಕಿ ಸುರುವಿ ಸದರಿ ಕುಂಭ ಸ್ಥಾಪಿಸಿ ಪೂಜಿಸಿ ಹಿರಿಯರಿಂದ ಮೊದಲು ದಕ್ಷಿಣೆ ಹಾಕಿಸಿ ಸರ್ವರು ಮಂತ್ರಾಕ್ಷತೆ ಪುಷ್ಪಾಂಜಲಿ ಧೂಪ ದೀಪ ಆರತಿ ಮಾಡಿ ಉಘೇ ಉಘೇ ಎಂದು ಜಯ ಘೋಷಮಾಡಿ ಸಾರ್ವಜನಿಕರಿಂದ ಕಾಣಿಕೆ ವಸೂಲಿಗೆ ಸಿದ್ದರಾಗುತ್ತಾರೆ. ಮೊದಲು ನಡೆದುಬಂದ ಪದ್ಧತಿಯಂತೆ ಮೂರ್ಕಲ್ ಮಹಾಲಿಂಗಪ್ಪನವರ ಮನೆಗೆ ಹೋಗುತ್ತಾರೆ. ಅಲ್ಲಿಂದ ಐದು ಮನೆ ಕಾಣಿಕೆ ಸ್ವೀಕರಿಸುವ ಶಾಸ್ತ್ರ ಮಾಡಿ ಮುಗಿಸುತ್ತಾರೆ. ಮರು ದಿನದಿಂದ ಒಂದೊಂದು ತಿಂಗಳು ಕಸಬಾ ಮತ್ತು ಮಹಜೇನಹಳ್ಳಿಯವರು ಕುಂಭವನ್ನು ತೆಗೆದುಕೊಂಡು ಊರಲ್ಲಿ ಬೇರೆ ಬೇರೆಯಾಗಿ, ವರ್ತಕರಿಂದ ಹಣವನ್ನು ರೈತರಿಂದ ಜೋಳವನ್ನು ಸಂಗ್ರಹಿಸುತ್ತಾರೆ.[೩೯] ಎರಡು ಸೇರಿಸಿ ಸಮಾಸಮವಾಗಿ ಹಂಚಿಕೊಂಡು ಖರ್ಚು ವೆಚ್ಚದ ವ್ಯವಸ್ಥೆ ಮಾಡುತ್ತಾರೆ.

ಜಾತ್ರೆಗಾಗಿ ಊರಮ್ಮ ಆಯಗಾರರ ಮನೆಗೆ ಹೋಗಿ ಸಿದ್ಧತೆ ಮಾಡುತ್ತಾಳೆ. ರಂಗ ಹಾಕಲು ರಾಣಿಗನು, ಗೌಡರಲ್ಲಿ ಜೋಳ, ಬಣಕಾರರಲ್ಲಿ ಕೋಣದ ಮಿಣಿ, ಜೋಳ, ಕುಂಬಾರನಲ್ಲಿ ಮಡಿಕೆ, ಘಟ್ಟಿ ಗಡಿಗಿ, ನೇಕಾರನಲ್ಲಿ ರಂಗ ಸುತ್ತಲು ನೂಲು, ಮೇದಾರನಲ್ಲಿ ಮೊರ, ಪಟ್ಟಿ, ಕುರುಬರಲ್ಲಿ ಚರಗದ ಮರಿ, ಹರಿ ಜನರು ತಮಟೆ, ಮಡಿವಾಳರು ಮಡಿ ಬಟ್ಟೆ, ಗಾಣಿಗರಲ್ಲಿ ಎಣ್ಣೆ, ಬಡಗಿಯಲ್ಲಿ ಉತ್ಸವಕ್ಕೆ ರಥ ಮುಂತಾದವುಗಳನ್ನು ಸಿದ್ದಪಡಿಸಿ ಹಬ್ಬಕ್ಕೆ ಬರಬೇಕೆಂದು ಕರೆಸಿ ಕೇಳುತ್ತಾಳೆ. ಹಿಂದೆ ದೇವಿ ತನ್ನ ಹಬ್ಬದ ಸಿದ್ಧತೆ ಮಾಡಿಕೊಳ್ಳುತ್ತಾಳೆ ಎಂಬ ಭಾವನೆಯಿಂದ ವರ್ತಿಸುತ್ತಿದ್ದರು. ಕಾಲ ಬದಲಿಸಿದಂತೆಲ್ಲಾ ಸಂಪ್ರದಾಯಗಳಲ್ಲಿ ಸ್ವಲ್ಪ ಪರಿವರ್ತನೆಯಾಗಿದೆ. ಜಾತ್ರೆಯ ವ್ಯವಸ್ಥಾಪಕರೇ ಎಲ್ಲವನ್ನು ಸಿದ್ಧಪಡಿಸುತ್ತಾರೆ.

ಕೇಲು: ಕೇಲು ಮೂರ್ತಿ ಪೂಜೆಗಿಂತ ಶ್ರೇಷ್ಠವಾಗಿದೆ. ಪ್ರಾಚೀನವಾದ ಕಲಶ ಪೂರ್ಣ ಕುಂಭ, ಘಟ ಇವು ಶರೀರದ ಹಾಗೂ ಗರ್ಭದ ಸಂಕೇತವಾಗಿದೆ. ವ್ರತ ಮತ್ತು ಶುಭ ಕಾರ್ಯಗಳಲ್ಲಿ ವರ್ಣ ಮಂಡಲ ಬಿಡಿಸಿ ಗಂಧೋದಕ ತುಂಬಿ ಸ್ಥಾಪಿಸಿ ಅರಿಸಿನ, ಕುಂಕುಮಗಳಿಂದ ಹಸಿರು ಬಳೆಯೊಂದಿಗೆ ಪೂಜಿಸುತ್ತಾರೆ. ಇದು ಭಾರತೀಯ ಕಲಾ ಸಂಕೇತ, ಸಂತಾನ ಲಕ್ಷ್ಮೀ ಹಾಗೂ ಸಮೃದ್ಧೀಯ ಸಂಕೇತವಾಗಿದೆ. ಮಾತೃದೇವೋಭವ ಕಾಲದಲ್ಲಿ ಕಲ್ಪಿತವಾದ ಈ ಪೂಜೆ ಮಾತೃಪೂಜೆಗೆ ಪ್ರಾಮುಖ್ಯತೆಯ ಸ್ಥಾನ ಉಳಿಸಿಕೊಂಡು ಬಂದಿದೆ. ಕೇಲಿನ ಮುಖದಲ್ಲಿ ವಿಷ್ಣು, ಕಂಠದಲ್ಲಿ ರುದ್ರ, ಮೂಲದಲ್ಲಿ ಬ್ರಹ್ಮ, ಮಧ್ಯದಲ್ಲಿ ಮಾತೃಗಣಗಳು, ಸರ್ವಸಾಗರ, ಸಪ್ತದ್ವೀಪ, ವೇದ ಕಲಶ ಕೇಲುಗಳಲ್ಲಿ ನೆಲೆಸಿವೆ.[೪೦]

ಪೂಜಾರಿ: ಊರಮ್ಮ ದೇವಿಯನ್ನು ಆಚಾರ್ ಮನೆತನದವರೇ ಪೂಜೆ ಮಾಡುತ್ತಾ ಬಂದಿದ್ದಾರೆ. ಮನೆಯಲ್ಲಿ ಏನಾದರು ಸೂತಕವಾದರೆ ಅವರ ಸಂಬಂಧಿಕರಿಂದ ಅಂದು ಪೂಜೆ ನಡೆಸುತ್ತಾರೆ. ಹರಿಹರ ಆಚಾರ್ ಮನೆಯವರು ಅಮರಾವತಿ, ಹಲಸಬಾಳು, ಹರಗನಹಳ್ಳಿಗೂ ಸಹ ಪೂಜಾರಿಗಳಾಗಿದ್ದಾರೆ.

ದೇವಿಯನ್ನು ಕರೆತರುವುದು: ಊರಮ್ಮ ಯಾವ ಗ್ರಾಮದಲ್ಲಿ ಇರುವಳೆಂದು ತಿಳಿದು ಗ್ರಾಮದ ಮುಖಂಡರು ದೇವಿಯನ್ನು ಪೂಜಿಸಿ ಕರೆಯಲಿಕ್ಕೆ ಕಳಿಸುತ್ತಾರೆ. ಹೋಗುವವರು ಎಡೆಗಾಗಿ ಅಕ್ಕಿ, ಹಣ್ಣು, ಕಾಯಿ, ಕರ್ಪೂರ ಒಯ್ಯುತ್ತಾರೆ. ದೇವಿಗೆ ಎಡೆ ಮಾಡಿ ನಂತರ ಇಂತಹ ದಿವಸ ದೇವಿಯನ್ನು ಕರೆಯಲಿಕ್ಕೆ ಬರುತ್ತೇವೆಂದು ಹೇಳಿ ಬರುತ್ತಾರೆ. ನಂತರ ಎರಡು ಗ್ರಾಮದ ಐದೈದು ಜನ ಮತ್ತು ಪೂಜಾರಿಯು ದೇವಿಯ ಪೆಟ್ಟಿಗೆಯ ಮೇಲಿನ ಹೊದಿಕೆಯ ಬಟ್ಟೆಯೊಂದಿಗೆ ಹೋಗುತ್ತಾರೆ.

ಅಲ್ಲಿಯ ಗೌಡರ ಮನೆಯಿಂದ ಆರತಿ ಬರುತ್ತದೆ. ಹಿರಿಯರ ಸಮಕ್ಷಮದಲ್ಲಿ ಪೂಜೆ ನಡೆಯುತ್ತದೆ. ಅಲ್ಲಿಯ ಪೂಜಾರಿ ಹರಿಹರದ ಪೂಜಾರಿಯನ್ನು ಗರ್ಭಗುಡಿಯಲ್ಲಿ ಕರೆದು ದೇವರ ಮೂರ್ತಿಯನ್ನು ತೋರಿಸಿ ಜೋಪಾನ ಎಂದು ತಾವು ಅಲಂಕರಿಸಿದ ವಸ್ತ್ರ, ವಡವೆ ತೆಗೆದುಕೊಂಡು ದಿಗಂಬರ ರೂಪದ ಅಮ್ಮನ ಬಿಡಿಭಾಗಗಳನ್ನು ಪುಟ್ಟಿಯಲ್ಲಿ ತುಂಬುತ್ತಾರೆ. ಬಿಳಿ ಬಟ್ಟೆಯ ಹೊದಿಕೆಯಿಂದ ಪುಟ್ಟಿಯನ್ನು ಕಟ್ಟಿ ಕುಂಕುಮ ಅರಿಶಿಣ ಹೂಗಳಿಂದ ಸಿಂಗರಿಸುತ್ತಾರೆ. ನಂತರ ಪೂಜಿ ಆಯಾ ಗ್ರಾಮದವರು, ಗಡಿಯವರೆಗೆ ಮೆರವಣಿಗೆಯಿಂದ ತರುತ್ತಾರೆ. ಗಡಿಯ ಬೇವಿನ ಕಟ್ಟೆಯ ಮೇಲೆ ಇಳಿಸುತ್ತಾರೆ. ಗೌಡರಿಗೆ ಮಾತ್ರ ಅಮ್ಮನ ಮುಖ ತೋರಿಸಿ ನಮ್ಮ ಪೂಜಾರಿಗೆ ಕೊಡುತ್ತಾರೆ. ಅನ್ಯ ಜಾತಿಯವರು, ನಡತೆ ಸರಿಯಿಲ್ಲದವರು ಪುಟ್ಟಿ ಹೊರುವಂತಿಲ್ಲ. ಇದು ಆದಿಯಿಂದಲೂ ನಡೆದು ಬಂದ ಪದ್ಧತಿ. ಸ್ವಲ್ಪದೂರ ನಡೆದು ಜೊತೆಗೆ ಬಂದ ಲಿಂಗಾಯಿತರಿಗೆ ಪುಟ್ಟಿಯನ್ನು ಪೂಜಾರಿಯು ಹೊರಿಸುತ್ತಾನೆ. ಎಲ್ಲರೂ ಉಧೋ.... ಉಧೋ... ಎಂದು ವೇಗವಾಗಿ ನಡೆಯುತ್ತಾರೆ ಇತರೆಯವರು ಹಿಂಬಾಲಿಸುತ್ತಾರೆ ಆ ಗ್ರಾಮದವರು ತಮ್ಮ ಮನೆಗಳಿಗೆ ಹಿಂದಿರುಗುತ್ತಾರೆ.

ಸಾಮಾನ್ಯವಾಗಿ ಹರಿಹರದವರು ಹಲುವಾಗಲೂ ಗ್ರಾಮದಿಂದ ದೇವಿಯನ್ನು ಕರೆಯುತ್ತಾರೆ. ಅವರುಗಳು ನಂದ್ಯಾಲ ಕಡತಿ ಮಾರ್ಗವಾಗಿ ಸಾರಥಿಗೆ ಬರುತ್ತಾರೆ. ಅಲ್ಲಿ ಒಂದು ರಾತ್ರಿ ಉಳಿಯುತ್ತಾರೆ. ಬೆಳಗ್ಗೆ ಉಡಿತುಂಬಿದ ಅಕ್ಕಿಯಿಂದ ಅಲ್ಲೇ ಅಡಿಗೆ ಮಾಡಿ ನೈವೇದ್ಯಮಾಡಿ ಬಂದ ಭಕ್ತರೊಂದಿಗೆ ಪ್ರಸಾದ ಸ್ವೀಕರಿಸಿ ಅಲ್ಲಿಂದ ಬೀಳ್ಕೊಡುತ್ತಾರೆ. ಹಲುವಾಗಲಿನಿಂದ ಬಂದ ಊರಮ್ಮನ ಪುಟ್ಟ ಹರಿಜನ ಕೇರಿಯ ಕಟ್ಟೆಯಲ್ಲಿ ಕುಳಿತು ಪೂಜೆಗೊಳ್ಳುತ್ತಾಳೆ. ಹರಿಜನ ಹೆಣ್ಣು ಮಕ್ಕಳ ಸೋಬಾನ ಪದಗಳೊಂದಿಗೆ ಹನುಂತದೇವರ ಗುಡಿಗೆ ಬರುತ್ತಾಳೆ. ಆಯಾ ಗೌಡರಿಗೆ ತಿಳಿಸುತ್ತಾರೆ ಅಲ್ಲಿಂದ ಆರತಿ ಬರುತ್ತದೆ. ವಾಲಗದೊಂದಿಗೆ ಊರಿನ ಗಡಿಯಲ್ಲಿ ಒಂದು ಕುರಿಮರಿ ಕಡಿದು ಹೊಳೆಗೆ ಹೋಗಿ ಪೂಜೆ ಮುಗಿಸಿಕೊಂಡು ಮಹಜೇನಹಳ್ಳಿಯ ಗುಡಿಗೆ ಕರೆತರುತ್ತಾರೆ. ಆದಿಶಕ್ತಿ ರಾಕ್ಷಸರನ್ನು ಸಂಹರಿಸಿದ ಮರಣಕಾಲದಲ್ಲಿ ರಾಕ್ಷಸರು ನಾವು ಅಗಸಿ ಬಾಗಿಲಲ್ಲಿ ಇರುವುದಾಗಿ ನಮಗೆ ಬಲಿ ನೀಡಿದರೆ ನಮಗೆ ಶಾಂತಿ ಸಿಗುವುದಾಗಿ ಕೇಳಿ ಕೊಂಡರಂತೆ ಅಂದಿನಿಂದ ಕುರಿಬಲಿ ಕೊಡುವ ಪದ್ಧತಿ ಬೆಳೆದು ಬಂದಿದೆ.[೪೧] ಜಾತ್ರೆಗಾಗಿ ಕರೆತಂದಾಗ ಮಹಜೇನಹಳ್ಳಿಯ ಗಡಿಯಲ್ಲಿ ವಾಸ್ತವ್ಯ ಮಾಡುತ್ತಾಳೆ ಹಬ್ಬ ನಾಲ್ಕು, ಐದು ದಿನವಿದ್ದಾಗ ಕಸಬಾದವರು ಕರೆದುಕೊಂಡು ಹೋಗಿ ಹೊಸದಾಗಿ ಬಣ್ಣ ಹಾಕಿಸುತ್ತಾರೆ ದೃಷ್ಟಿಗೆ ಕುರಿಮರಿ ಬಲಿ ನೀಡುತ್ತಾರೆ ಹೊಳೆಗೆ ಹೋಗಿ, ಪೂಜೆ. ಅಭಿಷೇಕ ಮಾಡಿಸಿ ಎರಡು ದಿನ ಮುಂಚಿತವಾಗಿ ಮಹಜೇನಹಳ್ಳಿ ಗಡಿಗೆ ದೇವಿಯನ್ನು ಕರೆತರುತ್ತಾರೆ.

ಸಾರುಹಾಕುವುದು: ಇದಕ್ಕೆ ಊರುರ ಕರಿಕಟ್ಟುವುದು ಎನ್ನುತ್ತಾರೆ. ಬೇವಿನಸೊಪ್ಪು ಊರ ಸುತ್ತಲೂ ರೋಗ ಬರದಿರಲೆಂದು ಇಡುತ್ತಾರೆ. ಊರಿನಲ್ಲಿ ಸುತ್ತಲೂ ಪಾರಿ ಬೇಲಿ ಹಾಕಿ ಕಟ್ಟುಮಾಡುತ್ತಾರೆ. ಅನ್ನ, ನೀರು, ಎಣ್ಣೆ, ಅರಿಶಿಣ-ಕುಂಕುಮ, ಬಂಡಿ ಬೇಸಾಯ ತೊಗಲು ಮುಟ್ಟು, ಮೆಟ್ಟು, ಊರೊಳಗೆ ಬರಬಾರದು ಹೊರಗೆ ಹೋಗಬಾರದು. ಸೊಂಕು ರೋಗ ಹರಡಬಾರದು ಎಂದು ಹಗಲಿರುಳು ಕಾಯುತ್ತಾರೆ. ೩ ರಿಂದ ೯ ದಿನ ಸಾರುವ ಪದ್ಧತಿ ಎಲ್ಲಾ ಹಳ್ಳಿಗಳಲ್ಲಿ ಇದೆ ಆದರೆ ಹರಿಹರ ನಗರವಾಗಿರುವುದರಿಂದ ಈ ರೀತಿಯ ಆಚರಣೆ ಇಲ್ಲಿ ಇಲ್ಲ, ಹಾಗಾಗಿ ಸಂಪ್ರದಾಯವನ್ನು ನಡೆಸಲು ಚೌತಿ ಮನೆಯನ್ನೇ ಆಯ್ಕೆ ಮಾಡಿಕೊಂಡು ಸಾರು ಹಾಕುವ ಶಾಸ್ತ್ರ ಮಾಡುತ್ತಾರೆ.

ಬಾಬುದಾರರಿಗೆ ವರದಿ ಕಳಿಸುವುದು: ಎರಡು ಗ್ರಾಮದವರ ಬಾಬುದಾರರನ್ನ ಕರೆಸುವ ಕಾರ್ಯ ಪ್ರಾರಂಭವಾಗುತ್ತದೆ. ಆಸಾದಿಯವರಿಗೆ, ಬೇಗಾರ, ಪೋತರಾಜನಿಗೆ, ಚಲುವಾದಿ, ಕುಂಬಾರ, ತಳವಾರ, ಅಗಸ, ಕೊರಮ, ಮುಂತಾದ ಸಂಬಂದಪಟ್ಟವರಿಗೆ ವೀಳ್ಯ ಕಳುಹಿಸುತ್ತಾರೆ ಪೂಜಾರಿಗೆ ಪೂಜೆ, ನೈವೇದ್ಯ ಇತ್ಯಾದಿಗೆ ಬಾಬುಕೊಡುತ್ತಾರೆ.

ಸೋಮವಾರ ಮೂರು ಘಟ್ಟಗಡಿಗೆ[೪೨] ಗುಡಿಗೆ ತಂದು ಅಕ್ಕಿಯ ಮೇಲೆ ಸಾಲಾಗಿ ಇಡುತ್ತಾರೆ. ಪ್ರತಿ ಗಡಿಗೆಯಲ್ಲಿ ಕೊಬ್ಬರಿ ಬಟ್ಟಲು, ಉತ್ತತ್ತಿ, ಬೆಟ್ಟಡಿಕೆ, ನಿಂಬೇಹಣ್ಣು, ಅರಿಶಿನಕೊಂಬು, ಕರೇಬಂಟ, ಐದು ಬಳೆ ಬಿಚ್ಚೋಲೆ, ದಕ್ಷಿಣೆ ಹಾಕಿ ಬಾಯಿ ಮುಚ್ಚಬೇಕು. ಜೋಗವ್ವಗಳ

ಪಡ್ಲಿಗಿಯಲ್ಲಿ ಅದೇ ರೀತಿ ಸಾಮಾನುಗಳನ್ನು ಹಾಕುತ್ತಾರೆ. ಗ್ರಾಮದ ಮುಖಂಡರು ಮತ್ತು ದೇವರಿಗೆ ಕಂಕಣ ಕಟ್ಟುತ್ತಾರೆ. ಪೂಜಿಸಿದ ನಂತರ ಘಟ್ಟಗಡಿಗೆಗಳನ್ನು ಮೆರವಣಿಗೆಯ ಮೂಲಕ ತಂದು ಮಹಜೇನಹಳ್ಳಿ ಘಟ್ಟಗಡಿಗೆಯನ್ನು ಬಣಕಾರನ ಮನೆಯಲ್ಲಿ ಇಡುತ್ತಾರೆ. ತಳವಾರ ಅದನ್ನು ಹೊರುವವನು ಕಸಬಾ ಘಟ್ಟಗಡಿಗೆಯನ್ನು ಲಿಂಗಾಯತರ ಮನೆಯಲ್ಲಿ ಇಡುತ್ತಾರೆ. ಇದರಂತೆ ಹರಿಜನಕೇರಿಯ ಘಟ್ಟಗಡಿಗೆಯನ್ನು ಘಟ್ಟಗಡಿಗೆಯ ಮನೆತನದಲ್ಲಿ ತಂದು ಸ್ಥಾಪಿಸುತ್ತಾರೆ. ಮಂಗಳವಾರ ಬೆಳಗಿನಿಂದ ಒಂದ್ಹೊತ್ತು ನಡೆಸಬೇಕೆಂದು, ಅಲಕ್ಷ್ಯ ಮಾಡಬಾರದು ಎಂದು ಬಿಗಿಮಾಡಿ ಹೇಳಿಬರುತ್ತಾರೆ. ಈ ಎಲ್ಲಾ ಘಟ್ಟಗಡಿಗೆಗಳನ್ನು ೫ ಸೇರು ಜೋಳದ ರಾಶಿಯ ಮೇಲೆ ಸ್ಥಾಪಿಸುತ್ತಾರೆ. ಸೋಮವಾರ ಸಾಯಂಕಾಲ ಎರಡೂ ಗ್ರಾಮಗಳ ಸಚ್ಚಾರಿತ್ರ್ಯವುಳ್ಳ ಹಾಗೂ ಅಂಗವಿಕಲತೆ ಹೊಂದದ ಐದು ಜನ ದಂಪತಿಗಳಿಗೆ ಒಂದ್ಹೊತ್ತು ಇರಲು ತಿಳಿಸುತ್ತಾರೆ. ಆಯಾ ದಂಪತಿಗಳ ಮನೆಗೆ ಹೋಗಿ ಮಡಿಯಿರುವ ದಂಪತಿಗಳನ್ನು ಮಣಿಯ ಮೇಲೆ ಕೂಡಿಸಿ, ಕಂಕಣ ಕಟ್ಟುತ್ತಾರೆ. ಅರಿಶಿಣ, ಕುಂಕುಮ ಹಚ್ಚಿ ಅಡಿಕೆ ಎಲೆ, ಉತ್ತತ್ತಿ ಉಡಿ ತುಂಬಿ ಕಳಸ ಬೆಳಗುತ್ತಾರೆ.[೪೩]

ಉಡಿ ತುಂಬುವುದು: ಮಂಗಳವಾರ ಉದಯಕ್ಕೆ ಊರಮ್ಮ ಮಡಿಯುಟ್ಟು ಉಡಿ ತುಂಬಿಸಿಕೊಳ್ಳಲು ಸಿದ್ಧವಾಗಿರುತ್ತಾಳೆ. ಬೆಳಿಗ್ಗೆ ಸುಮಾರು ೧೦ ಘಂಟೆಗೆ ಜೋಯಿಸರಿಂದ ಅಭಿಷೇಕ ನಡೆಯುತ್ತದೆ, ಎರಡು ಗ್ರಾಮದ ಗೌಡರಿಂದ ಉಡಕ್ಕಿ ಮಂಗಳವಾದ್ಯದೊಂದಿಗೆ ಬರುತ್ತವೆ. ದೊಡ್ಡ ಹರಿವಾಣದಲ್ಲಿ ಅರ್ಧ ಸೇರು ಅಕ್ಕಿ ೫ ಕೊಬರಿ ಬಟ್ಲು, ಉತ್ತತ್ತಿ, ಅರಿಶಿಣಕೊಂಬು, ನಿಂಬೆಹಣ್ಣು, ಬೆಟ್ಟಡಿಕೆ, ಬಳೆ, ಬಿಚ್ಚೋಲೆ, ಕರಿಮಣಿ, ಕಣ ಹಣ್ಣುಕಾಯಿ ಹೂವಿನೊಂದಿಗೆ ಗೌಡರು ಅಮ್ಮನ ಮುಂದೆ ಇಟ್ಟು ಮಡಿಲು ಅಥವಾ ಉಡಿ ತುಂಬುವ ಶಾಸ್ತ್ರ ಮಾಡುತ್ತಾರೆ. ಅಲ್ಲಿಂದ ಸರ್ವಭಕ್ತಾದಿಗಳಿಂದ ಉಡಿ ತುಂಬುವ ಕಾರ್ಯಕ್ರಮ ಪ್ರಾರಂಭವಾಗುತ್ತದೆ.

ರಂಗ ಹಾಕುವುದು: ದೇವಾಲಯದ ಹಂದರದಲ್ಲಿ ರಾಣಿಗ ರಂಗ ಹಾಕುತ್ತಾನೆ ಸದ್ರಿರಂಗವನ್ನು ಎಷ್ಟುದಿನ ಸಾರು ಹಾಕುತ್ತಾರೋ ಅಷ್ಟು ಬಣ್ಣಗಳಿಂದ ರಂಗಹಾಕುವ ಪದ್ಧತಿ ಇದೆ. ರಂಗದ ನಾಲ್ಕು ಮೂಲೆಗೂ ಅಡಿಕೆ ಎಲೆ ದಕ್ಷಿಣೆ ಇಡುತ್ತಾರೆ ಮಧ್ಯ ಅಡಿಕೆ ಎಲೆಯೊಂದಿಗೆ ಕೊಬ್ಬರಿ ಬಟ್ಟಲು,ಉತ್ತತ್ತಿ, ಅರಿಶಿಣಕೊಂಬು ಇಡುತ್ತಾರೆ. ಪೂಜಾರಿ ಪೂಜೆಮಾಡುತ್ತಾನೆ.

ಚೌತ ಮನೆ: ಮಹಜೇನಹಳ್ಳಿ ಮತ್ತು ಕಸಬಾ ಗ್ರಾಮಗಳ ಮಧ್ಯದಲ್ಲಿ ಅಂದರೆ ಹರಿಹರೇಶ್ವರ ದೇವಾಲಯದ ರಥ ಬೀದಿಯಲ್ಲಿ ಬೃಹತ್ ಹಂದರ ಹಾಕಿ ಸಿಂಗರಿಸಿ ಅದರಲ್ಲಿ ಚೌಕದ ಪಟ್ಟಿ ನಿರ್ಮಿತವಾಗಿರುತ್ತದೆ. ಈ ಚೌತ ಮನೆಯೆ[೪೪] ಚೌತಮನೆಯಾಗಿದೆ ಅದರ ಮೇಲೆ ದೇವಿಯನ್ನು ಪ್ರತಿಷ್ಠಾಪಿಸುತ್ತಾರೆ.

ಅರಣಿ ಸ್ಥಾಪನೆ: ಬಣ್ಣ ಬಳಿದ ಐದು ಕುಂಭಗಳಲ್ಲಿ ಕೊಬ್ಬರಿ ಬಟ್ಟಲು, ಉತ್ತತ್ತಿ, ಅರಿಶಿಣಕೊಂಬು, ಅಡಿಕೆ, ಕರೆಬಂಟ ಅಂದರೆ ಗೇರು, ಎರಡು ಬಳೆ, ಬಿಚ್ಚೋಲೆ, ದಕ್ಷಿಣೆ ಹಾಕಿ ಅದರ ಮೇಲೆದೀಪದ ಪಣತಿ ಇಡುತ್ತಾರೆ. ಮಧ್ಯದ ಕಳಸ ಅಥವಾ ಅರಿಣಿ ನಾರಾಯಣ ದೇವರಾದ್ದರಿಂದ ಗೋವಿಂದ ನಾಮದ ಜಯಕಾರದೊಂದಿಗೆ ಪೂಜಿಸುತ್ತಾನೆ.

ಚರಗದ ಜೋಳ: ರೈತರು ನೀಡಿದ ಜೋಳದ ಚೀಲಗಳು ಸಿದ್ಧವಾಗಿರುತ್ತವೆ. ಹಗಲಿನಲ್ಲಿ ರೈತರು ಉತ್ಸಾಹದೊಂದಿಗೆ ಮೆರವಣಿಗೆಯಲ್ಲಿ ಜೋಳ ತಂದು ಎರಡು ಬಾರಿ ಕೊಪ್ಪರಿಗೆಗಳಲ್ಲಿ ಬೇಯಿಸುತ್ತಾರೆ. ಎರಡು ಗ್ರಾಮದ ಕೊಪ್ಪರಿಗೆಗಳೂ ಅಕ್ಕಪಕ್ಕದಲ್ಲಿ ಇರುತ್ತವೆ. ಒಂದು ಕಾಳು ಸಿಡಿದು ಪಕ್ಕದ ಕೊಪ್ಪರಿಗೆಗೆ ಹೋಗದಂತೆ ನೋಡಿಕೊಳ್ಳುತ್ತಾರೆ ಜೊತೆಗೆ ತೌಡು, ಸುಂಕಸೇರಿಸುತ್ತಾರೆ.

ಮಾಂಗಲ್ಯಧಾರಣೆ: ಮಂಗಳವಾರ ಬೆಳಿಗ್ಗೆಯಿಂದ ಮಧ್ಯರಾತ್ರಿಯವರೆಗೆ ದೇವಿಗೆ ಉಡಿ ತುಂಬುವ ಕಾರ್ಯ ನಡೆದಿರುತ್ತದೆ. ಎಲ್ಲಾ ಭಕ್ತರಿಂದ ಮುಗಿದ ಮೇಲೆ ಎರಡು ಗ್ರಾಮದ ಶಾನುಭೋಗರ ಮನೆಯಿಂದ ವೈಭವದಿಂದ ಮಾಂಗಲ್ಯ ಮತ್ತು ಉಡಕ್ಕಿ ಬರುತ್ತದೆ ಶಾನುಭೋಗರಿಂದ ದೇವಿಗೆ ಮಾಂಗಲ್ಯಧಾರಣೆ ನಡೆಯುತ್ತದೆ.

ಜಂಗಮರ ಪಾದ ಪೂಜೆ: ಗುಡಿಯಿಂದ ಜಂಗಮರನ್ನು ವಾಲಗದೊಂದಿಗೆ ಕರೆತರುತ್ತಾರೆ. ಚೌತಮನೆಯಲ್ಲಿ ಕುಳಿಸಿ ಅವರ ಪಾದ ಪೂಜೆ ಮಾಡಿ ಪಾದೋದಕದಿಂದ ಶುದ್ಧೀಕರಿಸಿ ಚೌತಮನೆ ಸ್ಥಾಪನೆ ಮಾಡುತ್ತಾರೆ.

ಚರಗದ ರಾಶಿ: ಜಾತ್ರೆಯಲ್ಲಿ ಕೋಣನ ಬಲಿ ನಂತರ ಮಾಡುವ ಆಚರಣೆ. ಕೋಣನ ನಂತರ ಕೊಪ್ಪರಿಗೆಗಳಲ್ಲಿನ ಬೆಂದ ಜೋಳವನ್ನು ಚೌತ ಮನೆಯ ಒಳಗಡೆ ತಂದು ಸುರುವಿ ರಾಶಿ ಮಾಡುವರು. ಅದಕ್ಕೆ ಕಡಿದ ಕೋಣನ ರಕ್ತ ಬೆರೆಸುತ್ತಾರೆ. ಅದನ್ನೇ 'ಚರಗ' ಎನ್ನುತ್ತಾರೆ.[೪೫] ಚರಗದ ರಾಶಿ ಮಾಡುವುದರಲ್ಲೂ ಒಂದು ವೈಶಿಷ್ಟ್ಯವಿದೆ. ಚರಗದ ರಾಶಿಯನ್ನು ಮಾಡುವ ಸಮಯ ಬಂದಾಗ ಎರಡು ಗ್ರಾಮಗಳ ಜನರ ನಡುವೆ ಕೊಪ್ಪರಿಗೆಯನ್ನು ಮೊದಲು ಎಳೆಯುವ ಶಕ್ತಿಯ ಜಿದ್ದಾ-ಜಿದ್ದಿನ ಸ್ಪರ್ಧೆ ನಡೆಯುತ್ತದೆ. ಮೊದಲು ಮಹಜೇನಹಳ್ಳಿ ಅದರ ಹಿಂದೆ ಕಸಬಾದ ಕೊಪ್ಪರಿಗೆ ಹಂದರದ ಒಳಗೆ ಎಳೆಯುತ್ತಾರೆ. ಎರಡೂ ಗ್ರಾಮಗಳ ಗೌಡರು ತಮ್ಮ ತಮ್ಮ ಕೊಪ್ಪರಿಗೆಗಳಲ್ಲಿನ ಕಾಳನ್ನು ಒಂದೊಂದು ಹಿಡಿ ತೆಗೆದುಕೊಂಡು ರಾಶಿ ಮಾಡುವ ಸ್ಥಳಗಳಲ್ಲಿ ಹಾಕುತ್ತಾರೆ. ನಂತರ ಕೊಪ್ಪರಿಗೆಯನ್ನು ಕಾಳನ್ನು ಇಬ್ಬರೂ ಪ್ರತ್ಯೇಕ ಸುರುವಿ ಎರಡು ರಾಶಿ ಮಾಡುವಲ್ಲಿಯು ಕುತೂಹಲವಿರುತ್ತದೆ. ನಮ್ಮದು ಬೇಗ ರಾಶಿಯಾಗಬೇಕೆಂದು. ಒಂದು ಕಾಳು ಸಹ ಬೇರೆ ರಾಶಿಗೆ ಸೇರದಂತೆ ಎಚ್ಚರ ವಹಿಸುತ್ತಾರೆ. ಈ ರೀತಿ ಪ್ರತಿಯೊಂದು ಆಚರಣೆಯಲ್ಲೂ ವಿಭಿನ್ನತೆಯನ್ನು ತೋರಿಸುತ್ತಾರೆ. ಆ ರಾಶಿಗಳಿಗೆ ಉಡುದಾರ ಕಟ್ಟಿ ಅರಿಶಿಣ, ಕುಂಕುಮ ಹಚ್ಚಿ ಪೂಜಿಸುತ್ತಾರೆ.

ಅನ್ನ ಸಂತರ್ಪಣೆ: ಎರಡೂ ಗ್ರಾಮದವರು ಸಿದ್ಧಪಡಿಸಿದ ಅಡಿಗೆಯನ್ನು ಬೇರೆ ಬೇರೆಯಾಗಿ ಸಾರ್ವಜನಿಕರಿಗೆ ಚೌತ ಮನೆಯಲ್ಲಿ ಅನ್ನ ಸಂತರ್ಪಣೆ ಏರ್ಪಡಿಸಲಾಗುತ್ತದೆ.

ದೇವಿಯನ್ನ ದೇವಾಲಯದಿಂದ ಚೌತಮನೆಗೆ ಕರೆತರುವುದು: ಮಹಜೇನಹಳ್ಳಿ ಮತ್ತು ಕಸಬಾ ಗ್ರಾಮಸ್ಥರು ಸೇರಿ ಮಹಜೇನಹಳ್ಳಿಯ ದೇವಾಲಯಕ್ಕೆ ಬರುತ್ತಾರೆ. ಪೂಜಾರರ ಮನೆಯಿಂದ ಹೋಳಿಗೆ ಎಡೆಯನ್ನು ಒಂದು ಹೊಸ ಮೊರದಲ್ಲಿ ಸುಳಿ ಬಾಳೆ ಎಲೆಯಲ್ಲಿ ಎಡೆ ಮಾಡಿ ದೇವಿಗೆ

ನೈವೇದ್ಯ ಮಾಡಿ ಅದರ ಮೇಲೆ ಹೊಸ ಮೊರದಿಂದ ಮುಚ್ಚುತ್ತಾರೆ. ಅದರ ಮಾಲೆ ಕಣಕದ ದೀಪ ಹೊತ್ತಿಸುತ್ತಾರೆ ಪೂಜಾರಿ ದೇವಿಗೆ ನಿವಾಳಿಸಿ ಮೊರವನ್ನು ರಾಣಿಗನಿಗೆ ಹೊರಲು ಕೊಡುತ್ತಾನೆ. ದೇವಿಯನ್ನು ರಾಣಿಗ ಹೊಗಳುತ್ತಿರುತ್ತಾನೆ. ಮೊದಲು ಮಹಜೇನಹಳ್ಳಿಯ ಗೌಡರ ಮನೆಗೆ ಘಟ್ಟಗಡಿಗೆ ತರಲು ಮಂಗಳ ವಾದ್ಯಗಳೊಂದಿಗೆ ದೇವಿಯ ಸಮೇತ ಸರ್ವರು ಆಗಮಿಸುತ್ತಾರೆ. ಗೌಡರ ಮನೆಯ ಪಂಚಕಲಶಗಳೊಂದಿಗೆ ಐದು ಜನ ದಂಪತಿಗಳ ಸಮೇತ ಘಟ್ಟಗಡಿಗೆಯ ಸಹಿತ ಕಸಬಾ ಗೌಡರ ಮನೆಗೆ ಬರುತ್ತಾರೆ.[೪೬] ಪಂಚಕಳಶ ಘಟ್ಟಗಡಿಗೆಯೊಂದಿಗೆ ಶಿವಮೊಗ್ಗ ವೃತ್ತದಿಂದ ಚಾತ ಮನೆಗೆ ಬಂದು ದೇವಿಯನ್ನು ಪೀಠದ ಮೇಲೆ ಮುಹೂರ್ತಗೊಳಿಸುತ್ತಾರೆ.

ಒಪ್ಪತ್ತು ಬಿಡುವುದು: ಚೌತ ಮನೆ ಬಲಭಾಗದಲ್ಲಿ ನೆಲ ಸಾರಿಸಿರಂಗಹಾಕಿ ೫ ಸೇರು ಜೋಳದ ಮೇಲೆ ತಂದ ಘಟ್ಟಗಡಿಗೆಗಳನ್ನು ಇಟ್ಟು ಪೂಜಿಸುತ್ತಾರೆ. ಹಬ್ಬದ ಸಮಿತಿಯವರು ಘಟ್ಟಗಡಿಗೆಗಳಲ್ಲಿ ಕೊಬ್ಬರಿ ಇತ್ಯಾದಿ ಇಟ್ಟ ವಸ್ತುಗಳನ್ನು ಹೊರುವವರು ತೆಗೆದು ಶುದ್ಧ ನೀರನ್ನು ಹಾಕಿರುತ್ತಾರೆ. ಐದು ದಿನದ ನಂತರ ತಳವಾರ ಅಲ್ಲಿಯೇ ಸುರುವಿ ಗಡಿಗೆ ಹೊಯ್ಯುತ್ತಾನೆ.[೪೭] ಒಂದ್ಹೊತ್ತಿನ ಮತ್ತೈದೆಯರೊಂದಿಗೆ ಗಂಗೆ ಪೂಜೆ ಮಾಡಿ ನೀರು ತರುತ್ತಾರೆ. ದೇವಿಯ ಹತ್ತಿರ ಸ್ಥಾಪಿಸಿ ಹೊಸ ಬಟ್ಟೆ ಹಾಕುತ್ತಾರೆ. ಇದಕ್ಕೆ ಗಂಗಾ ದೇವಿಯ ಸ್ಥಾಪನೆ ಎನ್ನುವರು.[೪೮] ಹತ್ತು ಜನ ದಂಪತಿಗಳು ಲಿಂಗ ಪೂಜೆ ಮಾಡಿಯಾದ ಮೇಲೆ ಉಡಿ ತುಂಬುತ್ತಾರೆ. ದೇವಿಗೆ, ಗಂಗಾ ದೇವಿಗೆ, ಘಟ್ಟಗಡಿಗೆಗೆ ಎಡೆಮಾಡಿ ಜಂಗಮರೊಂದಿಗೆ ಎಲ್ಲರೂ ಸೇರಿ ಪೂಜೆ ಮಾಡುತ್ತಾರೆ. ದಂಪತಿಗಳು ಹಾಗೂ ಘಟ್ಟಗಡಿಗೆ ತಂದವರು ತಮ್ಮ ಮನೆಗಳಿಗೆ ಹಿಂದಿರುಗಿದ ನಂತರ ಅವರು ಒಂದ್ಹೊತ್ತಿನ ಉಪವಾಸ ಬಿಡುತ್ತಾರೆ.

ಹರಿಜನ ಕೇರಿಯ ಘಟ್ಟಗಡಿಗೆ: ಊರಮ್ಮನನ್ನು ಬಿಟ್ಟು ಉಳಿದ ಎಲ್ಲರೂ ಸಕಲ ವಾದ್ಯಗಳೊಂದಿಗೆ ಹರಿಜನ ಕೇರಿಗೆ ಹೋಗುತ್ತಾರೆ ಬಹು ವರ್ಷಗಳ ಹಿಂದೆ ಇವರೊಂದಿಗೆ ಊರಮ್ಮ ಹೋಗುತ್ತಿದ್ದಳಂತೆ. ಈಗ ಇಲ್ಲ ಕೆಲವು ಗ್ರಾಮಗಳಲ್ಲಿ ಈಗಲೂ ಆ ರೂಢಿ ಇದೆ. ಘಟ್ಟ ಗಡಿಗೆ ಹೊರುವ ಮನೆತನದವರು ಸಮಿತಿಯಿಂದ ಬಂದ ಎಣ್ಣೆ ತುಪ್ಪದಲ್ಲಿ ಸ್ನಾನ ಮಾಡಿ ಒಂದ್ಹೊತ್ತು ಇರುತ್ತಾರೆ. ಘಟ್ಟಗಡಿಗೆ ಸ್ಥಾಪಿಸಿ ಬೇವಿನಸೊಪ್ಪು, ಹೊಂಬಾಳೆ ಕಟ್ಟಿರುತ್ತಾರೆ. ಒಳಗಿನಿಂದ ಪೂಜೆ ನಡೆಸಿರುತ್ತಾರೆ. ಮುಟ್ಟು ಚಟ್ಟು ಆಗದಂತೆ ಎಚ್ಚರ ವಹಿಸುತ್ತಾರೆ. ಚೌತ ಮನೆಯ ಮೆರವಣಿಗೆ ಬಂದ ಮೇಲೆ ಘಟ್ಟ ಗಡಿಗೆ ಹೊತ್ತು ನಡೆಯುತ್ತಾರೆ. ಹಿಂದೆ ಜೀವಂತ ಕೋಣ ಜೊತೆಗೆ ಕರೆದೊಯ್ಯುತ್ತಿದ್ದರು. ಈಗ ಬಲಿ ನಿಲ್ಲಿಸಿರುವುದರಿಂದ ಕಣಕದ ಕೋಣ ತರುತ್ತಾರೆ.[೪೯] ಒಂದ್ಹೊತ್ತಿನ ಐದು ಜನ ದಂಪತಿಗಳು ಸಾಗುತ್ತಾರೆ. ಆಗಾಗ ನಿವಾಳಿಸುತ್ತಾ ಮೆರವಣಿಗೆಯಿಂದ ಚೌತ ಮನೆಗೆ ಬರುತ್ತಾರೆ. ಚೌತ ಮನೆಯಲ್ಲಿ ಆಸಾದಿ ನಿರ್ಮಿಸಿದ ದೊಡ್ಡ ರಂಗದ ಮಧ್ಯೆ ಘಟ್ಟಗಡಿಗೆ ಸ್ಥಾಪಿಸಿ ಪೂಜಿಸುತ್ತಾರೆ. ಇದನ್ನು ಆಸಾದಿ ಕಾಯುತ್ತಾನೆ.

ರಾಣಿಗ: ಗ್ರಾಮ ದೇವತೆಯ ಪೂಜಾರಿಯನ್ನು ರಾಣಿಗ, ಆಸಾದಿ, ಗೇಣಿಗರು ಎಂದು ಕರೆಯುತ್ತಾರೆ. ಊರ ದೇವತೆಯ ಉತ್ಸವಗಳಲ್ಲಿ ದೇವತೆಯ ಮುಂದೆ ಇರುತ್ತಾನೆ. ಆದರೆ ಇಲ್ಲಿ

ದೇವತೆಯ ರಾಣಿಗನ ಕಾರ್ಯ ಭಿನ್ನವಾಗಿದ್ದು ಊರಮ್ಮಳನ್ನು ಆಸಾದಿಗಳು ಮುಟ್ಟುವಂತಿಲ್ಲ. ದೂರದಿಂದಲೇ ಸೇವೆಸಲ್ಲಿಸಬೇಕು ಇಲ್ಲಿ ಆಚಾರರು ಪೂಜಾರಿಗಳಾಗಿರುತ್ತಾರೆ.

ದೊಡ್ಡ ಬಲಿ: ಬೆಳಗಿನ ಜಾವದಲ್ಲಿ ಲೋಕ ಕಲ್ಯಾಣಾರ್ಥ ದೇವಿಗೆ ಕೋಣವನ್ನು ಬಲಿ ಕೊಡುವ ಸಿದ್ದತೆ ನಡೆಯುತ್ತದೆ. ಈಗ ನಾಗರೀಕತೆ ಬೆಳೆದಂತೆ ಹಾಗೂ ಸರ್ಕಾರದ ಆದೇಶಕ್ಕೆ ಮಣಿದು ಬಲಿಯನ್ನು ನೀಡುವುದಿಲ್ಲ. ಕಣಕದ ಅಥವಾ ಹಿಟ್ಟಿನ ಕೋಣ ಕಡಿಯುತ್ತಾರೆ.[೫೦]

ದೇವಿಗೆ ವಿಧವಾ ಪ್ರಾಪ್ತಿ: ಕೋಣ ಕಡಿದ ಮೇಲೆ ದೇವಿಯು ವಿಧವೆ ಆಗುತ್ತಾಳೆಂದು ಆಕೆಯ ತಾಳಿ ತೆಗೆದು ಬಳೆಗಳನ್ನು ಒಡೆಯುತ್ತಾರೆ. ಇದನ್ನು ದೇವಿಯ ಜೋಗತಿಯರು ಸಹ ದೇವಾಲಯದ ಆವರಣದಲ್ಲಿ ಬಳೆಗಳನ್ನು ತೆಗೆದು ವಿಧವಾ ಪ್ರಾಪ್ತಿಗೊಳಗಾಗುವುದು ಕಾಣುತ್ತದೆ. ಆ ಕೋಣನ ರೂಪ ಗಂಡನಿದ್ದುದರಿಂದ ಕೋಣನ ವಧೆಯ ನಂತರ ದೇವಿಗೆ ವಿಧವಾ ಪ್ರಾಪ್ತಿ ಸಹಜವಾಗಿದೆ. ಇದರ ಪ್ರತೀಕವಾಗಿ ಅಮ್ಮನಿಗೆ ಅಮಂಗಲ ಮಾಡಿ ಪರದೆ ಕಟ್ಟುವ ಪದ್ದತಿ ಬೆಳೆದು ಬಂದಿದೆ. ನಂತರ ಎರಡೂ ಗ್ರಾಮದ ಸುತ್ತಲೂ ಚರಗ ಚೆಲ್ಲುತ್ತಾರೆ.

ಕೋಣ ಬಿಡುವುದು: ಜಾತ್ರೆಯ ನಂತರ ಶುಕ್ರವಾರ ಕೋಣ ಬಿಡುವ ಪದ್ದತಿ ಇದೆ. ಇದಕ್ಕೆ ಪಟ್ಟದ ಕೋಣ ಅಥವಾ ಊರಮ್ಮನ ಕೋಣ ಎನ್ನುತ್ತಾರೆ. ಮರಿ ಕೋಣವನ್ನು ತಂದು ಅಮ್ಮನ ಮುಂದೆ ಕಂಕಣ ಕಟ್ಟಿ ಊರಲ್ಲಿ ಬಿಡುತ್ತಾರೆ. ಈಗ ಬಲಿ ಕೊಡುವ ಪದ್ಧತಿ ಇಲ್ಲದ್ದರಿಂದ ಇವು ಯಾವೂ ನಡೆಯುವುದಿಲ್ಲ.[೫೧] ಪರಸ್ಥಳದವರು ಊರಮ್ಮಳನ್ನು ಕರೆದುಕೊಂಡು ಹೋಗಲು ಎಡೆಮಾಡಿಸಿರುತ್ತಾರೆ. ಹಬ್ಬದ ಕಾರ್ಯವೆಲ್ಲಾ ಮುಗಿದ ಮೇಲೆ ತುಂಬು ಹೃದಯದಿಂದ ಪುಟ್ಟಿಯಲ್ಲಿ ತುಂಬಿ ಗಡಿಯ ತನಕ ಕಳಿಸಿಬರುತ್ತಾರೆ. ಊರಮ್ಮ ದೇವಿಯ ಜಾತ್ರೆಯನ್ನು ಆಚರಿಸುವಲ್ಲಿ ಈ ಗ್ರಾಮಗಳ ಜನತೆ ತೋರುವ ಉತ್ಸಾಹ, ಸಂಭ್ರಮ ದೇವಿಯ ಬಗೆಗೆ ಅವರಲ್ಲಿರುವ ಭಕ್ತಿ-ಭಾವಗಳಿಗೆ ಜಾತ್ರೆ ಕೈಗನ್ನಡಿಯಾಗಿದೆ.

ಬುಳ್ಳಾಪುರದ ವನೆತಮ್ಮನ ಜಾತ್ರೆ: ಹರಿಹರದಿಂದ ಹರಪನಹಳ್ಳಿ ರಸ್ತೆಯಲ್ಲಿ ಹತ್ತು ಕಿ.ಮಿ ಸಾಗಿದರೆ ಕೊಂಡಜ್ಜಿ ರಸ್ತೆ ಮೂಲಕ ಮೂರು ಕಿ.ಮಿ ಪಯಣಿಸಿದರೆ ಬುಳ್ಳಾಪುರ ಗ್ರಾಮವಿದೆ ಏಪ್ರಿಲ್ ತಿಂಗಳಿನಲ್ಲಿ ಈ ವನೆತಮ್ಮನ ಜಾತ್ರೆ ಜರುಗುತ್ತದೆ ಇದು ಪ್ರತಿ ೩ ರಿಂದ ೫ ವರ್ಷಕ್ಕೊಮ್ಮೆ ೯ ದಿನಗಳ ಕಾಲ ನಡೆಯುತ್ತದೆ.

ಸಾರುಹಾಕುವುದು: ಗ್ರಾಮ ದೇವತೆ ವನೆತಮ್ಮನ ಜಾತ್ರೆಯು ಇಂತಹ ದಿನ ಇದೆ ಎಂದು ಇಡೀ ಊರಿನ ಜನರಿಗೆ ವಿಷಯ ತಿಳಿಸಿ ಬರುವುದೇ ಸಾರುಹಾಕುವುದು ಎನ್ನುತ್ತಾರೆ ಈ ಸಾರುವಿಕೆಯಿಂದಲೇ ಹಬ್ಬದ ಆರಂಭವಾಗುವುದು.

ಸಭೆ ಸೇರುವುದು: ವನೆತಮ್ಮ ದೇವಿಯ ಜಾತ್ರೆಗೆ ಗ್ರಾಮದ ಜನರನ್ನು ಮಾನಸಿಕವಾಗಿ ಸಿದ್ಧಗೊಳಿಸುವುದಕ್ಕಾಗಿ, ಜನರಿಗೆ ಹಬ್ಬದ ಸೂಚನೆಯನ್ನು ಕೊಡುವುದಕ್ಕಾಗಿ, ಜೊತೆಗೆ ಅವರು ಪಾಲಿಸಬೇಕಾದ ವಿಧಿ ನಿಷೇಧಗಳನ್ನು ತಿಳಿಸುವುದಕ್ಕಾಗಿ, ಮನೆಗೆ ಒಬ್ಬೊಬ್ಬರೂ ಒಂದೊಂದು

ಸಾಮೂಹಿಕ ಜವಾಬ್ದಾರಿಯನ್ನು ಹೊತ್ತು ಹಬ್ಬ ನಡೆಯಲು ಊರಿನ ಮುಖಂಡರು, ಪೂಜಾರಿ ಹಾಗೂ ಗ್ರಾಮಸ್ಥರು ಗ್ರಾಮದ ವನೆತಮ್ಮ ದೇವಾಲಯದಲ್ಲಿ ಸಭೆ ಸೇರುವರು.[೨೨]

ಕೋಣ ಕಡಿಯುವುದು: ಸೋಮವಾರ ಪೂಜೆಯೆಲ್ಲಾ ಆರಂಭವಾಗಿ ಮಂಗಳವಾರ ಕೋಣವನ್ನು ಸಿಂಗರಿಸಿ ಮೆರವಣಿಗೆ ಮಾಡಿ ರಾತ್ರಿ ೨ ಗಂಟೆಯ ಸುಮಾರಿಗೆ ವನೆತಮ್ಮನ ದೇವಾಲಯದ ಬಳಿಗೆ ಬರುತ್ತದೆ. ಅಷ್ಟೊತ್ತಿಗಾಗಲೇ ದೇವರು ಗುಡಿದುಂಬಿರುತ್ತದೆ. ಹೀಗೆ ಬಂದ ಕೋಣಕ್ಕೆ ಪೂಜಾರಿ ತೀರ್ಥಹಾಕಿ, ಕುಂಕುಮ, ಭಂಡಾರ ಇಟ್ಟು ಕೊರಳಿಗೆ ಹೂವಿನ ಹಾರ ಹಾಕುತ್ತಾನೆ. ಆಗ ಹರಿಜನಾಂಗಕ್ಕೆ ಸೇರಿದವರು ಕೋಣವನ್ನು ಕಡಿಯುವರು. ಅಂದು ಆತ ವಿಶೇಷವಾಗಿ ಮಡಿ ಬಟ್ಟೆ ಹಾಕಿಕೊಂಡು ತಲೆಗೆ ಪೇಟ ಸುತ್ತಿರುತ್ತಾನೆ ಕೋಣವನ್ನು ಕಡಿದ ಕೂಡಲೇ ಆ ರಕ್ತಸಿಕ್ತ ತಲೆಯನ್ನು ತಂದು ವನೆತಮ್ಮನ ಮುಂದೆ ಇಡುತ್ತಾರೆ ಅದರ ಮೇಲೆ ಹಸಿ ಸಗಣಿ ಇಟ್ಟು ಅದರ ಮೇಲೆ ದೀಪ ಇಟ್ಟು ಅದನ್ನ ಅಂಟಿಸುತ್ತಾರೆ ಜೊತೆಗೆ ಕೋಣದ ಹೊಟ್ಟೆಯನ್ನು ಬಗೆದು ಅದರ ಕೊಬ್ಬಿನ ಅಂಶವನ್ನು ತೆಗೆದು ಆ ದೀಪಕ್ಕೆ ಹಾಕಲಾಗುತ್ತದೆ.

ಚರಗ ಹೊಡೆಯುವುದು: ವನೆತಮ್ಮನ ಜಾತ್ರೆಯಲ್ಲಿ ಕೋಣ ಬಲಿಯಾದ ನಂತರ ಗ್ರಾಮದ ಜನರೆಲ್ಲಾ ಸೇರಿ ಹಾಕಿದ ಜೋಳವನ್ನು ಬೇಯಿಸಿ ಅದಕ್ಕೆ ಕೋಣದ ರಕ್ತವನ್ನು ಬೆರೆಸಿ ಊರ ಸುತ್ತಲೂ ಎಸೆಯುತ್ತಾರೆ ಇದನ್ನೆ ಚರಗ ಎನ್ನುತ್ತಾರೆ ಚರಗ ಚೆಲ್ಲುವವರ ಮುಖಗಳು ಕುಂಕುಮ ಬಳಿದುಕೊಂಡಿರುತ್ತಾರೆ ಹುಲಿಗ್ಯೋ ಹುಲಿಗ್ಯೋ ಎಂದು ಕೂಗುತ್ತಾ ಸಿಡಿಲಿನ ಕೇಕೆ ಹೊಡೆದು ಆರ್ಭಟಿಸುತ್ತಾ ಗ್ರಾಮದ ಗಡಿಯ ಸುತ್ತ ಚರಗ ಚೆಲ್ಲವರು ಊರಿಗೆ ರೋಗ, ವಿಘ್ನ, ಬರದಿರಲಿ, ಶಾಂತಿ, ನೆಲೆಸಿ, ವೃದ್ಧಿಸಲಿ ಎಂದು ಹುಲಿಗ್ಯೋ ಎಂದು ಕೂಗುತ್ತಾರೆ. ಲಾಟಿಕೋಲು, ಕುಣಿತ, ರಣ ಕೇಕೆಯೊಂದಿಗೆ ಹಲಗೆಯ ಬಡಿತ ಚರಗವನ್ನು ಎಸೆಯುತ್ತಾ ಜನಗಳ ಓಡಾಟದ ರಭಸ ಒಂದು ಕ್ಷಣ ಆದಿಮಾನವನ ಕಾಲದ ನೆನಪು ತರಿಸುತ್ತದೆ.[೨೩]

ಗಟೆ ಕುದುರಿಸುವುದು: ಒಂದು ಕಪ್ಪು ಗಡಿಗೆಗೆ ಎರಡು ಕಣ್ಣು, ಕ್ವಾರೆ ಮೀಸೆ ಕಂಕಣ ಒಂದು ಮೂಗನ್ನು ಹುಣಸೆಹಣ್ಣಿನಿಂದ ಆಕಾರ ಮಾಡುತ್ತಾರೆ. ಇದನ್ನು 'ಗಟೆ' ಎನ್ನುವರು.[೨೪] ವನೆತಮ್ಮ ದೇವಿಗೆ ಸಂಬಂಧಿಸಿದಂತೆ ಮೊದಲು ಗಟೆಯನ್ನು ಗೌಡರ ಮನೆಯಲ್ಲಿ ಮಾಡಿ ದೇವಾಲಯಕ್ಕೆ ತರುತ್ತಾರೆ. ಹೀಗೆ ನಾಯಕ, ಕುರುಬ ಹಾಗೂ ಹರಿಜನರು ಗಟೆಯನ್ನು ತರುತ್ತಾರೆ. ಅದನ್ನು ದೇವಾಲಯದಲ್ಲಿ ಕುದುರಿಸುತ್ತಾರೆ.

ಕೋಣ ಬಿಡುವುದು: ಕೋಣವನ್ನು ಬಲಿಕೊಟ್ಟಾಗ ದೇವಿ ವನೆತಮ್ಮ ರಂಡೆ ಆಗುತ್ತಾಳೆ ಎಂಬುದು ಇಲ್ಲಿಯವರ ನಂಬಿಕೆಯಾಗಿದ್ದು ಹಾಗೆಯೇ ಮುಂದಿನ ಜಾತ್ರೆಗೆ ಕೋಣದ ಮರಿಯನ್ನು ಪಟ್ಟದ ಕೋಣವಾಗಿ ಬಿಟ್ಟಾಗ ದೇವಿ ಮತ್ತೆ ಮುತ್ತೈದೆಯಾಗುತ್ತಾಳೆ. ಎಂಬುದನ್ನು ಸಹ ನಂಬುತ್ತಾರೆ. ಹಾಗಾಗಿ ಹಬ್ಬ ಮುಗಿದು ೯ನೇ ದಿವಸ ಪಟ್ಟದ ಕೋಣವನ್ನು ಬಿಡುವ ಮೂಲಕ ದೇವಿ ವನೆತಮ್ಮನನ್ನು ಮುತ್ತೈದೆಯನ್ನಾಗಿ ಮಾಡಲಾಗುತ್ತದೆ. ಕಟ್ಟು ನಿಟ್ಟಾದ ದೇವರು ಸಂತಾನ ಭಾಗ್ಯ ನೀಡುತ್ತದೆ. ರೋಗರುಜಿನ ತುರುತ್ತದೆ ಮತ್ತು ವಾಸಿ ಮಾಡುತ್ತದೆ. ಮಳೆಬೆಳೆಗೆ ಮೂಲ

ಕಾರಣ, ಹೊಸದಾಗಿ ಮದುವೆಯಾದ ಗಂಡು ಹೆಣ್ಣುಗಳು ಮಡೆ ಹೊತ್ತರೆ ವರ್ಷ ತುಂಬುವುದರೊಳಗಾಗಿ ಮಕ್ಕಳಾಗುತ್ತವೆಂದು ನಂಬಲಾಗಿದ್ದು ಹಾಗಾಗಿ ಬೇವಿನ ಉಡುಗೆ, ಪ್ರಾಣಿಬಲಿ, ಫಲ ಒಪ್ಪಿಸುವುದು ಮುಂತಾದ ಹರಕೆಗಳನ್ನು ಹೊರುತ್ತಾರೆ.

ಹರಿಹರದ ಆರೋಗ್ಯಮಾತೆಯ ಉತ್ಸವ: ಹರಿಹರದಲ್ಲಿನ ಸೇಂಟ್ ಮೇರಿ ಚರ್ಚ್ ಕ್ರೈಸ್ತ ಆರಾಧಕರ ಪವಿತ್ರ ಕ್ಷೇತ್ರವಾಗಿದೆ. ಪ್ರತಿ ವರ್ಷ ಸೆಪ್ಟೆಂಬರ್ ತಿಂಗಳಿನಲ್ಲಿ ಆರೋಗ್ಯಮಾತೆಯ ದೊಡ್ಡ ಉತ್ಸವ ನಡೆಯುತ್ತದೆ. ಅದರ ಅಂಗವಾಗಿ ಹತ್ತು ದಿನಗಳವರೆಗೆ ಪೂಜಾರಾಧನೆ ನಡೆಯುತ್ತದೆ. ಎಂಟನೇ ದಿನದಲ್ಲಿ ಹೂವಿನ ತೇರಿನಲ್ಲಿ ದೇವಿಯನ್ನು ಇಟ್ಟು ಎಳೆಯಲಾಗುತ್ತದೆ. ಜಾತಿಮತ ಭೇಧವಿಲ್ಲದೆ ಹಿಂದೂ ಸಂಪ್ರದಾಯದಲ್ಲಿ ಉತ್ಸವವನ್ನು ಆಚರಿಸಲಾಗುತ್ತಿದೆ.

ಹರಿಹರದ ಲಕ್ಷ್ಮೀ ಪಾರ್ವತಿಯರ ಶಾಸನೋಕ್ತ ಉತ್ಸವ: ಹರಿಹರದ ಲಕ್ಷ್ಮೀ ಪಾರ್ವತಿಯರ ಉತ್ಸವವು ಮಾಘ ಶುದ್ಧ ರಥಸಪ್ತಮಿಯಂದು ಬೆಳಿಗ್ಗೆ ಸೂರ್ಯ ಮಂಡಲದಿಂದ ಅಲಂಕೃತವಾದ ವಾಹನದಲ್ಲಿ ರಥೋತ್ಸವವು ಹಾಗೂ ಶ್ರೀಹರಿಹರದೇವರ ರಥೋತ್ಸವವು ಜರಗುತ್ತಿತ್ತು ಹಾಗಾಗಿ ವಿಜಯನಗರದ ಅರಸ ಶ್ರೀವೀರಪ್ರತಾಪ ಮಹಾರಾಜರ ಸಾಮಂತರಾಗಿದ್ದು ಮಣಿನಾಗಪುರದ ಬೈಯಪ್ಪನಾಯಕರ ಮಕ್ಕಳಾದ ಕೃಷ್ಣಪ್ಪನಾಯಕರಿಗೆ ಸಹಾಯಕರಾಗಿದ್ದ ವೇಲೂರು ಕಾಳಪ್ಪ ನಾಯಕರ ಮಕ್ಕಳು ಮಾರ್ಗಸಹಾಯ ನಾಯಕರು ಗಂಗನರಸಿ ಗ್ರಾಮವನ್ನು ದತ್ತಿ ಬಿಟ್ಟ ವಿಚಾರ ಕ್ರಿ.ಶ. ೧೫೬೧ರ[೫೫] ಗಂಗನರಸಿ ಶಾಸನದಿಂದ ತಿಳಿದುಬರುತ್ತದೆ.

ಪ್ರಸ್ತುತದಿನಗಳಲ್ಲಿ ಲಕ್ಷ್ಮೀ ಪಾರ್ವತಿಯರ ಬದಲಾಗಿ ಹರಿಹರೇಶ್ವರ ದೇವರ ಉತ್ಸವವು ನಡೆಯುತ್ತದೆ. ಮಾಘ ಶುದ್ಧ ದಶಮಿಯಿಂದ ಹಿಡಿದು ಕೃಷ್ಣ ಪಾಂಡ್ಯ ಪೂರ್ತಿ ನಡೆಯುವ ರಥೋತ್ಸವದ ಅಂಗವಾಗಿ, ದಶಮಿಯಂದು ಅಂಕುರಾರ್ಪಣ ಮತ್ತು ಧ್ವಜಾರೋಹಣ, ತ್ರಯೋದಶಿಯಂದು ಕಲ್ಯಾಣೋತ್ಸವ ಪೌರ್ಣಮಿಗೆ ರಥೋತ್ಸವಗಳು ನಡೆಯುತ್ತದೆ. ದಶಮಿಯಂದು ಚತುರ್ದಶಿಯವರೆಗೆ ಉತ್ಸವ ಮೂರ್ತಿಯನ್ನು ಪ್ರತಿ ರಾತ್ರಿ ನಂದಿ, ಗರುಡ, ಹನುಮಂತ, ಅಶ್ವ, ಗಜಾರೂಢರಾಗಿ ಚಿಕ್ಕ ರಥದಲ್ಲಿ ಮೆರವಣಿಗೆ ಮಾಡಲಾಗುತ್ತದೆ ತ್ರಯೋದಶಿಯಂದು ದೇವಾಲಯದಲ್ಲಿ ಕಲ್ಯಾಣೋತ್ಸವ ನಡೆಯುತ್ತದೆ.

ಹರಿಹರದ ಕಾರಣಿಕ: ಕಾರಣಿಕ ಎಂದರೆ ಪವಾಡ ಎಂದಾರ್ಥ.[೫೬] ಒಬ್ಬ ದೈವ ಸಂಭೂತನಾದ ವ್ಯಕ್ತಿಯು ದೇವರ ಹೆಸರಲ್ಲಿ ಹೇಳು ಭವಿಷ್ಯವಾಣಿಯೇ ಕಾರಣಿಕವಾಗಿದೆ. ಈ ವಾಣಿಯು ಆ ಒಂದು ವರ್ಷದೊಳಗೆ ಸತ್ಯವಾಗುವುದು ಎಂಬ ನಂಬಿಕೆಯು ಜನಜನಿತವಾಗಿದೆ. ಪ್ರತಿಯೊಂದು ಕಡೆ ನಡೆಯುವ ಕಾರಣಿಕವು ನಿರ್ದಿಷ್ಟವಾಗಿ ಒಂದು ವಿಷಯಕ್ಕೆ ಸಂಬಂದಿಸಿದ್ದು ಎಂದು ನಂಬಲಾಗುತ್ತದೆ. ಶ್ರಾವಣ ಮಾಸದಲ್ಲಿ ಸಿರಿಯಾಳ ಷಷ್ಠಿಯಂದು ಹರಿಹರದಲ್ಲಿ ತುಂಗಾಭದ್ರ ನದಿ ತೀರದ ಯೋಗೀಶ್ವರ ದೇವಾಲಯದ ಬಯಲು ಪ್ರದೇಶದಲ್ಲಿ ಕಾರಣಿಕ ನಡೆಯತ್ತದೆ. ತಾಲೂಕಿನ ೧೩ ಗ್ರಾಮಗಳ ಉತ್ಸವ ಮೂರ್ತಿಗಳು ಈ ಬಯಲು ಪ್ರದೇಶಕ್ಕೆ ಬರುತ್ತವೆ.[೫೭] ಮುಖ್ಯವಾದ ಪಾತ್ರವನ್ನ ಎಲವಟ್ಟಿ ಹನುಮಂತಪ್ಪ ಇಲ್ಲಿ ವಹಿಸಿರುತ್ತಾನೆ. ಈ ದೇವರ

ಪೂಜಾರಿಯೇ ಕಾರಣಿಕ ಹೇಳುವಾತನಾಗಿದ್ದು ಸುಮಾರು ಮೂರು ದಿವಸಗಳಿಂದ ಉಪವಾಸವಿರುತ್ತಾನೆ. ನೆಟ್ಟ ಬಾಣಗಳ ಮೇಲೆ ನಿಂತು ಪೂಜಾರಿ ಕಾರಣಿಕವನ್ನು ಹೇಳುತ್ತಾನೆ. ೧೯೯೫ರಲ್ಲಿ ನಡೆದ ಕಾರಣಿಕವು ತಿಳಿದು ಬಂದಿದೆ. "ಬಂಗಾರದ ಚೌಕ ಛಿದ್ರವಾಧೀತು ಛಿದ್ರವಾದ ಚೌಕ ಮತ್ತೆ ದುಂಡಾದೀತು ಎಚ್ಚರಲೇ"[೨೪] ಎಂದು ತಿಳಿದುಬಂದಿದೆ.

ಬಾನುವಳ್ಳಿ ಬಸವಣ್ಣ ದೇವರ ಕಾರಣಿಕವು ಶ್ರಾವಣ ಮಾಸದ ಕೊನೆಯ ಸೋಮವಾರ ಎಕ್ಕೆಗೊಂದಿ ಗ್ರಾಮದಲ್ಲಿ ನಡೆಯುತ್ತದೆ. ನಂದಿತಾವರೆಯಲ್ಲಿ ದುರ್ಗಾಂಬಿಕೆ ಕೆಂಡದರ್ಚನೆ ನಡೆಯುವಾಗ, ದುರ್ಗಾಂಬಿಕೆಯು ಮೈಮೇಲೆ ಬಂದ ವ್ಯಕ್ತಿಯು ಹಾಕಿದ್ದ ಕೆಂಡದಲ್ಲಿ ಕುಳಿತು ಎಲ್ಲಾ ದೇವರುಗಳ ಸಮ್ಮುಖದಲ್ಲಿ ಕಾರ್ಣಿಕ ಹೇಳುವುದು ವಿಶಿಷ್ಟವಾದುದು ಅದೇ ಗ್ರಾಮದ ಬಸವೇಶ್ವರ ದೆವರು ಕಡೇ ಶಾವಣದಲ್ಲಿ ಎಕ್ಕೆಗೊಂದಿಗೆ ಹೋಗಿ ಹಲವು ಗ್ರಾಮದೇವತೆಗಳ ಸಮ್ಮುಖದಲ್ಲಿ ಚೂಪಾದ ಖಡ್ಗದ ಮೇಲೆ ನಿಂತು ದೇವರು ಮೈಮೇಲೆ ಬಂದ ವ್ಯಕ್ತಿಯು ಕಾರ್ಣಿಕ ಹೇಳುವುದು ಇಂದಿಗೂ ನಡೆದುಕೊಂಡು ಬರುತ್ತಿದೆ.

ಮಾಹೇಶ್ವರ ಜಾತ್ರೆ: ಕಾರ್ತಿಕ ಮಾಸದ ಸೋಮವಾರದಂದು ಅಕ್ಕಿಹುಗ್ಗಿ, ಬೆಲ್ಲ, ಬಾಳೆಹಣ್ಣು, ಪ್ರಸಾದದೊಂದಿಗೆ ಮಹೇಶ್ವರನಿಗೆ [ಈಶ್ವರ] ಕಾರ್ತಿಕ ಹಚ್ಚಿ ನಂತರದ ದಿನ ಸಾಯಂಕಾಲ ಆರು ಗಂಟೆಯಿಂದ ದೇವರ ಮೆರವಣಿಗೆಯನ್ನು ನಂದಿಕೋಲು, ಭಜನೆ ಮೂಲಕ ಗುಡಿದುಂಬಿಸುತ್ತಾರೆ. ಈ ಹಬ್ಬವನ್ನು ಗ್ರಾಮಗಳ ಹೊರಗಿನ ದೇವಾಲಯಗಳಿಗೆ ಹೋಗಿ ಆಚರಿಸುತ್ತಾರೆ. ಅಂದು ಗ್ರಾಮದ ಮಹಿಳೆಯರು ಮತ್ತು ಕಪ್ಪಾಳುಗಳನ್ನು ಬಿಟ್ಟು ಹಬ್ಬ ಆಚರಿಸುತ್ತಾರೆ. ಭಕ್ತರು ತಮ್ಮ ಕೋರಿಕೆಗಳನ್ನು ಈಡೇರಿಸಿಕೊಳ್ಳಲು ಈಶ್ವರನಿಗೆ ದೀಡುನಮಸ್ಕಾರ ಹಾಕುವುದು, ಬಾಯಿಬೀಗ ಹಾಕುವುದು, ಮುಖ್ಯವಾಗಿದೆ. ಈ ಆಚರಣೆಯನ್ನು ಗ್ರಾಮದಲ್ಲಿರುವ ದೇವಾಲಯಗಳಲ್ಲಿ ನಡೆಸುತ್ತಾರೆ ವ್ರತಾಚರಣೆ ಅಂಗವಾಗಿ ಮೌನವಾಗಿರುವುದು ಅಥವಾ ಹರಕೆ ತೀರಿಸಲಿಕ್ಕಾಗಿ ಬಾಯಿಗೆ ಶಸ್ತ್ರ ಹಾಕಿಸಿಕೊಳ್ಳುವುದನ್ನು ಬಾಯಿಬೀಗ ಹಾಕುವುದು ಎಂದು ಕರೆಯಲಾಗುತ್ತದೆ. ಈ ಜಾತ್ರೆಯಲ್ಲಿ ಹರಕೆ ಮಾಡಿಕೊಂಡ ಭಕ್ತರು ಒಪ್ಪತ್ತು ಇದ್ದು, ಮೌನಾಚರಣೆ ಮಾಡುತ್ತಾರೆ. ಸ್ನಾನ ಪೂಜಾದಿಗಳು ಮುಗಿದ ನಂತರ ಮೌನವಾಗಿಯೇ ದೇವಾಲಯಕ್ಕೆ ಹೋಗಿ ಪೂಜೆ ಸಲ್ಲಿಸಿ ಮೌನ ಮುರಿದು ಮಾತಾಡಲು ಆರಂಭಿಸುತ್ತಾರೆ. ಈ ಜಾತ್ರೆಯನ್ನು ತಾಲೂಕಿನ ಗಂಗನರಸಿ, ನಂದಿತಾವರೆ, ನಂದಿಗುಡಿ, ದೀಟೂರು, ಚಿಕ್ಕಬಿದರೆ, ಕೆಂಚನಹಳ್ಳಿ, ಕೆ.ಬೇವಿನಹಳ್ಳಿ, ಕಡ್ಲೆಗೊಂದಿ, ಸಾಲಕಟ್ಟೆ, ಕುಣೆಬೆಳಕೆರೆ, ಯಲವಟ್ಟಿ, ಎಕ್ಕೆಗೊಂದಿ, ಬನ್ನಿಕೋಡು, ಹುಲುಗಿನಹೊಳೆ, ಹಲಸಬಾಳು, ರಾಜನಹಳ್ಳಿ, ರಾಮತೀರ್ಥ, ಬಿಳಸನೂರುಗಳಲ್ಲಿ ವಿಶೇಷವಾಗಿ ಆಚರಿಸಲಾಗುತ್ತದೆ.

ಉಕ್ಕಡಗಾತ್ರಿ ಕರಿಬಸವೇಶ್ವರ ರಥೋತ್ಸವ: ಉಕ್ಕಡಗಾತ್ರಿ ಕರಿಬಸವೇಶ್ವರ ಅಥವಾ ಅಜ್ಜಯ್ಯ ಎಂಬ ಮಹಾನ್ ಯೋಗಿ, ತ್ಯಾಗಿ, ಸಂತನ ಗದ್ದಿಗೆಯಿದೆ. ಕರ್ನಾಟಕದ ಮೂಲೆ ಮೂಲೆಯಿಂದಲೂ ಉಕ್ಕಡಗಾತ್ರಿಯು ಭಕ್ತರನ್ನು ಆಕರ್ಷಿಸಿದ್ದು ಆದರಲ್ಲಿಯೂ ಬಯಲು ಸೀಮೆಯ ಭಕ್ತಾದಿಗಳ ಸಂಖ್ಯೆ ಹೆಚ್ಚಾಗಿದೆ.[೫೯] ಹಬ್ಬದ ಜಾತ್ರೆ, ಅಮವಾಸ್ಯೆ ಹುಣ್ಣಿಮೆ ಇತರ ವಿಶೇಷ ದಿನಗಳಲ್ಲಿ ದೆವ್ವಗಳು ಬರುವ

ಮತ್ತು ಹೋಗುವ ದೃಶ್ಯಗಳನ್ನು ಕಾಣಬಹುದಾಗಿದೆ. ಹಾಗಾಗಿ ದೆವ್ವಗಳನ್ನು ಕುರಿತ ಮನೋವಿಶ್ಲೇಷಣೆಯ ಅಧ್ಯಯನಕ್ಕೆ ಮನಶ್ಶಾಸ್ತ್ರಜ್ಞರಿಗೆ ತುಂಬಾ ಸೂಕ್ತ ಸ್ಥಳ ಇದಾಗಿದೆ.[೬೦] ಬಡವರು ದೀನದಲಿತರು, ದೆವ್ವ ಪೀಡೆ, ಪಿಶಾಚಿ, ಮೊದಲಾದ ದುಷ್ಠ ಶಕ್ತಿಗಳಿಗೆ ಸಿಕ್ಕಿ ನೊಂದ ಜನರಿಗೆ ಅವರ ಬಾಳು ಗೋಳಾಗದಂತೆ, ಬಾಳಿಗೆ ಬೆಳಕು ನೀಡಿದೆ. ಅಜ್ಜಯ್ಯನೇ ಕರಿಬಸವೇಶ್ವರರು.[೬೧] ಉಕ್ಕಡಗಾತ್ರಿಯಲ್ಲಿ ವರ್ಗ, ವರ್ಣ, ವಯಸ್ಸು, ವ್ಯಕ್ತಿ ವ್ಯವಹಾರಗಳಿಗೆ ಭೇಧವಿಲ್ಲ ಇಲ್ಲಿ ಭಕಿಯೊಂದೆ ಪ್ರಮುಖವಾಗಿದೆ.

ಕರಿಬಸವೇಶ್ವರ ಆವರಣದಲ್ಲಿ ನಾಗಪ್ಪಜ್ಜ, ತುಕ್ಕಪ್ಪಜ್ಜ, ವೀರಭದ್ರಪ್ಪಜ್ಜರ ಗದ್ದುದೆಗಳಿವೆ ಪ್ರತಿ ಶಿವರಾತ್ರಿ ಅಮವಾಸ್ಯೆ ಮಾಘಮಾಸದಲ್ಲಿ ಜಾತ್ರಾ ಮಹೋತ್ಸವವಿರುತ್ತದೆ. ಎಂಟು ದಿನಗಳವರೆಗೆ ನಡೆಯುವ ಈ ಮಹೋತ್ಸವದ ಅಂಗವಾಗಿ ಧ್ವಜಾರೋಹಣ, ರಥೋತ್ಸವ, ಜವಳ, ಹರಕೆ, ಕುಸ್ತಿ, ಪಳಹಾರ ಹಾಕುವುದು, ತುಲಭಾರ, ಅಜ್ಜಯ್ಯನ ಪಾಲಿಕೋತ್ಸವ, ಆಚರಣೆಗಳು ನಡೆದರೆ. ಇನ್ನೂ ಅಮಾವಾಸ್ಯೆ ಹುಣ್ಣಿಮೆಗಂತು ಉರುಳು ಸೇವೆ, ಕಲ್ಲು ಹೋರುವ ಸೇವೆ ಸಾಮಾನ್ಯವಾಗಿರುತ್ತದೆ.

ಕೊಕ್ಕನೂರು ಆಂಜನೇಯನ ರಥೋತ್ಸವ: ಪ್ರತಿ ವರ್ಷ ಚೈತ್ರಮಾಸದಲ್ಲಿ ರಾಮನವಮಿಯಂದು ಆಂಜನೇಯನ ರಥೋತ್ಸವ ನಡೆಯುತ್ತದೆ. ಅದರ ಅಂಗವಾಗಿ ರಥದ ಕಂಕಣಧಾರಣೆ, ಗಜೋತ್ಸವ, ರಾತ್ರಿಕಲಶ ಸ್ಥಾಪನೆ ಬೆಳಗಿನ ಜಾವ ಶ್ರೀ ದೇವರ ಅಶ್ವೋತ್ಸವ , ಬ್ರಹ್ಮರಥೋತ್ಸವ ಮುಂತಾದ ಆಚರಣೆಗಳು ನಡೆಯುತ್ತವೆ.[೬೨] ಅನಂತರ ರಾತ್ರಿ ಮಂಗಳವಾದ್ಯ, ಡೊಳ್ಳು, ಭಜನೆ, ಹಲಗೆ ಮೇಳಗಳೊಂದಿಗೆ ಮಹಾರಥೋತ್ಸವ ಜರಗುತ್ತದೆ. ಮಾರನೇ ದಿನ ಮಧ್ಯಾಹ್ನ ಆಂಜನೇಯ ಭೇಟಿ ಆಡಲು ಹೋಗುತ್ತಾನೆ. ಅಂದು ಸಾಯಂಕಾಲ ಓಕುಳಿ, ರಾತ್ರಿ ಡೊಳ್ಳು ಮಂಗಳವಾದ್ಯಗಳೊಂದಿಗೆ ಧೂಪ ಹಾಕುವುದು ನಡೆಯುತ್ತದೆ. ನಂತರದದಿನ ಆಂಜನೇಯ, ದುರುಗಮ್ಮ, ಮಾತಂಗೆಮ್ಮ ಮತ್ತು ಗುಡ್ಡದ ತುಮ್ಮಿನಕಟ್ಟೆ ಬೀರದೇವರುಗಳೊಂದಿಗೆ ಗ್ರಾಮದ ಎಲ್ಲಾ ಮನೆಗಳಿಗೆ ದರ್ಶನ ಕೊಡುತ್ತದೆ ಈ ಸಂದರ್ಭದಲ್ಲಿ ಭೂತಸೇವೆ ನಡೆಯುತ್ತದೆ.

ಆಂಜನೇಯ ಉತ್ಸವ: ಪ್ರತಿ ಹಳ್ಳಿಯಲ್ಲೂ ಸಾಮಾನ್ಯವಾಗಿ ಪ್ರತಿವರ್ಷ ನಿರ್ದಿಷ್ಟ ತಿಥಿ ಮಾಸದಲ್ಲಿ ಆಂಜನೇಯನ ರಥೋತ್ಸವವನ್ನು ಆಚರಿಸಲಾಗುತ್ತದೆ ರಥ ಎಂದರೆ ತೇರು, ಉಚ್ಚ ಯ್ಯ ಎಂದೂ ಕರೆಯಲಾಗುತ್ತದೆ.[೬೩] ಕೆಲವು ಗ್ರಾಮಗಳಲ್ಲಿ ಮೂರು, ನಾಲ್ಕು ಅಂಕಣದ ರಥವನ್ನು ಬೃಹತ್ ತೇರು ಗಡ್ಡೆಯ ಮೇಲ್ಭಾಗದಲ್ಲಿ ಭದ್ರವಾಗಿ ಕಟ್ಟಿ ಬಣ್ಣದ ಬಟ್ಟೆ, ಧ್ವಜ ಅಲಂಕರಿಸಿ, ದೇವತಾ ಚಿತ್ತಾರಗಳಿಂದ ಶೃಂಗರಿಸಲಾಗುತ್ತದೆ. ಆ ತೇರು ಗದ್ದಿಗೆ ಅದಕ್ಕೆ ತಕ್ಕಂತಹ ಕಲ್ಲಿನ ಅಥವಾ ಮರದ ನಾಲ್ಕು ಅಥವಾ ಎರಡು ಚಕ್ರಗಳನ್ನು ಅಳವಡಿಸಲಾಗಿರುತ್ತದೆ. ಉತ್ಸವ ಅಥವಾ ರಥೋತ್ಸವವು ತನ್ನದೇ ಆದ ಉದ್ದೇಶ ಸಂದೇಶವನ್ನು ಸಾರುವ ಸಂಕೇತವನ್ನು ಹೊಂದಿರುತ್ತದೆ.

ರಥೋತ್ಸವದ ಸಂದರ್ಭದಲ್ಲಿ ಗ್ರಾಮದಲ್ಲಿನ ಜನರು ವೈವಿಧ್ಯ ಆಚರಣೆಗಳನ್ನು ಆಚರಿಸುವುದಲ್ಲದೆ, ಹರಕೆ ಬಯಕೆಗಳನ್ನು ತೀರಿಸಿಕೊಳ್ಳುವುದುಂಟು. ಈ ಉತ್ಸವಗಳಲ್ಲಿ ಸ್ಥಳೀಯ ಕಲಾವಿದರು, ನಾಟಕ, ಬಯಲಾಟಗಳನ್ನು ಕಲಿತು ಆಡುವ ಪರಿಪಾಟವು ಗ್ರಾಮಗಳಲ್ಲಿ ಇನ್ನೂ ಉಳಿದುಕೊಂಡು ಬಂದಿದೆ. ತಾಲೂಕಿನಲ್ಲಿ ಆಂಜನೇಯ ಅಥವಾ ಹನುಮಂತನ ಉತ್ಸವವು ಹೆಚ್ಚಾಗಿ ಆಚರಣೆಗೊಳ್ಳುವ

ಉತ್ಸವವಾಗಿದ್ದು ಭರತ ಹುಣ್ಣಿಮೆಯ ಸುಮಾರಿನಲ್ಲಿ ಅಮರಾವತಿ, ಹರಗನಹಳ್ಳಿ, ಹಲಸಬಾಳುಗಳಲ್ಲಿ, ಶಿವರಾತ್ರಿ ಅಥವಾ ಹೋಳಿ ಹುಣ್ಣಿಮೆ ಸಂದರ್ಭದಲ್ಲಿ ಎರಬೂದಿಹಾಳು, ಕುಂಬಳೂರುಗಳಲ್ಲಿ, ಯುಗಾದಿನಂತರ ಒಂಬತ್ತನೇ ದಿನದಲ್ಲಿ ರಾಮನವಮಿಗೆ ಕುಣಿಬೆಳಕೆರೆ, ವಾಸನ, ಹೊಳೆಸಿರಿಗೆರೆ, ಒನ್ನಿಕೋಡು, ಬೆಳ್ಳೂಡಿ, ರಾಜನಹಳ್ಳಿಗಳಲ್ಲಿ ಆಂಜನೇಯನ ಉತ್ಸವಗಳು ನಡೆಯುತ್ತವೆ.

ದವನದ ಹುಣ್ಣಿಮೆಗೆ ಸಲಗನಹಳ್ಳಿ, ಗೋವಿನಾಳು, ಸಾರಥಿ, ದೀಟೂರು, ಭಾನುವಳ್ಳಿ, ನಿಟ್ಟೂರು, ಕೊಂಡಜ್ಜಿ, ಹಳೇಪಾಳ್ಯ, ಕೊಪ್ಪ, ಹರಳಹಳ್ಳಿ, ಎಳೆಹೊಳೆ, ಹೊಸಹಳ್ಳಿಗಳಲ್ಲಿ ಇನ್ನೂ ಬಸವ ಜಯಂತಿ ಸಂದರ್ಭದಲ್ಲಿ ಗುತ್ತೂರು ಗ್ರಾಮಗಳಲ್ಲಿ ಆಂಜನೇಯ ಉತ್ಸವ ನಡೆಯುತ್ತದೆ ದವನದ ಹುಣ್ಣಿಮೆಯಂದು ಭಾನುವಳ್ಳಿಯಲ್ಲಿ ನಡೆಯುವ ಆಂಜನೇಯ ಉತ್ಸವದ ಸಂದರ್ಭದಲ್ಲಿ ಮುಳ್ಳುಗದ್ದುಗೆ, ಭೂತಸೇವೆ, ಓಕುಳಿ, ವೀರಭದ್ರೇಶ್ವರ ಗುಗ್ಗಳ[೬೪] ನಡೆಯುತ್ತದೆ. ಈ ಆಚರಣೆಗಳು ತಾಲೂಕಿನ ಇದೇ ಆಂಜನೇಯನ ಉತ್ಸವದಲ್ಲಿ ಹಲವು ಕಡೆ ಜರುಗುತ್ತವೆ. ಗುಗ್ಗಳದ ಸಂದಂರ್ಭದಲ್ಲಿ ಭಾನುವಳ್ಳಿಗೆ ಲಕ್ಕಶೆಟ್ಟಿಹಳ್ಳಿಯ ಕಾಳಮ್ಮ, ನಂದಿತಾವರೆಯ ಬಸವೇಶ್ವರ ದೇವರುಗಳೂ ಸಹ ಆಗಮಿಸುತ್ತವೆ.

ದೇವರ ಬೆಳಕೆರೆಯ ಮೈಲಾರಲಿಂಗೇಶ್ವರ ಜಾತ್ರೆ ಮತ್ತು ಉತ್ಸವ: ದೇವರ ಬೆಳಕೆರೆಯ ಮೈಲಾರಲಿಂಗೇಶ್ವರ ಜಾತ್ರೆಯು ಫೆಬ್ರುವರಿ–ಮಾರ್ಚ್ ತಿಂಗಳಿನಲ್ಲಿ ನಡೆಯುತ್ತದೆ. ಇದು ಭರತ ಹುಣ್ಣಿಮೆಯ ಮಾಘ ಮಾಸವಾಗಿದ್ದು ಹಲವಾರು ಆಚರಣೆಗಳು ನಡೆಯುತ್ತವೆ. ಮುಖ್ಯವಾಗಿ ಕಾರಣಿಕ, ಕಾಲುಶಸ್ತ್ರ, ಕೈಶಸ್ತ್ರ, ಕಾಲಿಗೆ ಗೂಟ ಹೊಡೆದುಕೊಳ್ಳುವುದು, ಸರಪಳಿ ಹರಿಯುವ ಆಚರಣೆಗಳು ನಡೆಯುತ್ತವೆ. ಭರತ ಹುಣ್ಣಿಮೆಯಾಗಿ ಐದನೇ ದಿನದಲ್ಲಿ ಉತ್ಸವವು ನಡೆಯುತ್ತದೆ. ಮೇಲಿನ ಆಚರಣೆಗಳು ಉತ್ಸವ ಮುಗಿದ ನಂತರ ನಡೆಯುವ ಆಚರಣೆಗಳು, ಈ ಆಚರಣೆಗಳು ನಡೆದ ಮಾರನೆ ದಿನ ಮಣಿ ಆಡುವುದು ನಡೆಯುತ್ತದೆ ಈ ಎಲ್ಲಾ ಆಚರಣೆಗಳು ಗ್ರಾಮದ ಮೈಲಾರಲಿಂಗೇಶ್ವರ ದೇವಾಲಯದಲ್ಲಿ ನಡೆಯುತ್ತವೆ. ಈ ದೇವಾಲಯದ ಆವರಣದಲ್ಲಿ ಎಗ್ಗಪ್ಪನ ಮಂಟಪ, ಹಾಗೂ ದೇವಾಲಯದ ಮುಂಭಾಗದಲ್ಲಿ ಶಿಬಾರವಿದೆ.

ಮಾಘ ಮಾಸದ ಮೊದಲನೇ ದಿನ ಮೈಲಾರನಿಗೆ ವಿಶೇಷ ಪೂಜೆ ಸಲ್ಲಿಸುವುದರ ಮೂಲಕ ಉತ್ಸವಕ್ಕೆ ಅಧಿಕೃತವಾಗಿ ಚಾಲನೆ ನೀಡಲಾಗುತ್ತದೆ. ಈ ಮೂಲಕ ಅಂದು ಗಜವಾಹನೋತ್ಸವ, ಉತ್ಸವ ಮೂರ್ತಿಯನ್ನು ಅಲಂಕರಿಸಿ ಗಜದ ಮೇಲೆ ಕೂರಿಸಿ ಪೂಜಿಸುವರು. ಎರಡನೇ ದಿನ ಸ್ವಾಮಿಯ ಜಿಂಕೆ ವಾಹನೋತ್ಸವವು ನಡೆಯುತ್ತದೆ. ಈ ದಿನ ಜಿಂಕೆ ಮಹಾಸ್ವಾಮಿಯ ವಾಹನ. ಮೂರನೇ ದಿನ ಸ್ವಾಮಿಯ ನವಿಲೋತ್ಸವ ನವಿಲು ಈ ದಿನ ಸ್ವಾಮಿಯ ವಾಹನ. ನಾಲ್ಕನೇ ದಿನ ಸ್ವಾಮಿಯ ರಥೋತ್ಸವಕ್ಕೆ ಕಳಸಾರೋಹಣ ಮತ್ತು ರಾತ್ರಿ ವೃಷಭದ ಮೇಲೆ ಕೂರಿಸುವರು. ಈ ಉತ್ಸವ ಮೂರ್ತಿಯನ್ನು ಅಲಂಕರಿಸಿ ವೃಷಭದ ನಾಲ್ಕು ದಿನ ಉತ್ಸವ ಮೂರ್ತಿಯನ್ನು ಮೆರವಣಿಗೆ ಮಾಡುವುದಿಲ್ಲ. ಐದನೇ ದಿನ ಉತ್ಸವ ನಡೆಯುತ್ತದೆ. ಆ ದಿನ ಮೆರವಣಿಗೆ ಮೂಲಕ ರಥೋತ್ಸವ ನಡೆಸುತ್ತಾರೆ. ಇದಾದ ನಂತರ ಮೇಲಿನ ಧಾರ್ಮಿಕ ಆಚರಣೆಗಳಿಗೆ ಚಾಲನೆ

ನೀಡುತ್ತಾರೆ. ಧಾರ್ಮಿಕ ಆಚರಣೆಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಒಂದೊಂದನ್ನೆ ವಿವರಣೆ ಕೊಡಲಾಗುತ್ತದೆ.

ತೇರು ಅಥವಾ ರಥವನ್ನು ಎಳೆಯುವುದು ಬಹುತೇಕ ಇಲ್ಲಿನ ಜಾತ್ರೆಗಳ ಮುಖ್ಯ ಭಾಗವಾಗಿದ್ದು ಜಾತ್ರೆಯೆಂದರೆ ರಥೋತ್ಸವವೇ ಎನ್ನುವಷ್ಟು ಇದರ ವ್ಯಾಪಕತೆ ಈ ಪರಿಸರದಲ್ಲಿ ಇದೆ. ಹೋಳಿಗೆಯಿಲ್ಲದೆ ಹಬ್ಬವಿಲ್ಲ ರಥವಿಲ್ಲದೆ ಜಾತ್ರೆಯಿಲ್ಲ ಎಂಬ ಗಾದೆಯನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ತಾಲೂಕಿನಲ್ಲಿ ನಡೆಯುವ ರಥೋತ್ಸವ ಪ್ರಧಾನವಾದ ಜಾತ್ರೆಗಳು ಅದೇ ಹೆಸರಿನಿಂದಲೇ ಪ್ರಸಿದ್ದವಾಗಿದ್ದ ಹರಿಹರದ ಲಕ್ಷ್ಮಿ ಪಾರ್ವತಿಯರ ಉತ್ಸವ, ಊರಮ್ಮ ದೇವಿಯ ಜಾತ್ರೆ, ಮಹೇಶ್ವರ ಜಾತ್ರೆ, ಮೈಲಾರಲಿಂಗೇಶ್ವರ ಜಾತ್ರೆ, ವನೆತಮ್ಮ ಜಾತ್ರೆ, ಆಂಜನೇಯನ ರಥೋತ್ಸವ, ಮುಂತಾದವು.

೫.೪. ಧಾರ್ಮಿಕ ಆಚರಣೆಗಳು

ಪ್ರತಿ ಗ್ರಾಮಗಳಲ್ಲೂ ಗ್ರಾಮದೇವತೆಗಳ ಕೇಂದ್ರೀಕೃತವಾಗಿ ಜಾತ್ರೆ , ಉತ್ಸವ, ಮುಂತಾದ ಸಂದರ್ಭಗಳ, ಓಕುಳಿ, ಕಾರಣಿಕ, ಅಂಬುಹೊಡೆಯುವುದು, ಮಣೆ ಆಡುವುದು, ಹರಿಸೇವೆ, ಮುತ್ತು ಕಟ್ಟುವುದು, ಮುಳ್ಳು ತುಳಿಯುವುದು, ಬೇಟೆ ಆಡುವುದು, ಕಾಲಿಗೆ ಗೂಟ ಹೊಡೆಯುವುದು, ಕಾಲು ಕೈ ಸಸ್ತ ಪವಾಡ, ಸರಪಳಿ ಹರಿಯುವುದು, ಹೊಳೆ ಪೂಜೆ ಮುಂತಾದ ಧಾರ್ಮಿಕ ಆಚರಣೆಗಳನ್ನು ಆಚರಿಸುವುದನ್ನು ಕಾಣುತ್ತೇವೆ. ಈ ಎಲ್ಲಾ ಆಚರಣೆಗಳು ತನ್ನದೇ ಆದ ಉದ್ದೇಶ, ಸಂದೇಶ, ವೈಶಿಷ್ಟತೆಯನ್ನು ಹೊಂದಿರುವುದನ್ನು ಗುರುತಿಸಬಹುದಾಗಿದೆ. ಹರಿಹರ ತಾಲೂಕಿನಲ್ಲಿ ಕಂಡುಬರುವ ಗ್ರಾಮ ದೇವತೆಗಳ ಸುತ್ತಲೂ ಹೆಣೆದುಕೊಂಡು ಬಂದಿರುವ ಧಾರ್ಮಿಕ ಆಚರಣೆಗಳನ್ನು ವಿಶ್ಲೇಷಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಅಂಬು ಹೊಡೆಯುವುದು: ವಿಜಯ ದಶಮಿಯ ದಿನ ದೇವರುಗಳು ಬನ್ನಿ ಮುಡಿಯುವುದಕ್ಕೆ ಅಂಬೊಡೆಯುವುದು ಎನ್ನುತ್ತಾರೆ. ಅಂಬು ಎಂದರೆ ಬಾಣ. ಬಾಣವನ್ನು ಹೊಡೆಯುವುದು ಎಂಬುದು ಈ ಪದದ ಅರ್ಥ.[೬೪] ಬಿಲ್ಲಿಗೆ ಬಾಣ ಹೂಡಿ ಬೇರೆ ಬೇರೆ ದಿಕ್ಕುಗಳಿಗೆ ಹೊಡೆಯುತ್ತಾರೆ. ಬಾಣಗಳು ನೇರವಾಗಿ ಬಿದ್ದಲ್ಲಿ ಉತ್ತಮ ಮಳೆ, ಬೆಳೆ ಸಮೃದ್ಧಿಯಾಗುವುದೆಂದೂ, ಬಾಣವೇನಾದರೂ ನೆಲಕ್ಕೆ ಬಿದ್ದ ಮೇಲೆ ತಿರುಗಿ ಹಿಮ್ಮುಖವಾಗಿ ಬಿದ್ದರೆ ತೊಂದರೆ ಎನ್ನುವ ನಂಬಿಕೆ ಇದೆ. ಮುಖ್ಯವಾಗಿ ತಾಲೂಕಿನ ನಿಟ್ಟೂರು, ದೇವರಬೆಳಕೆರೆ, ಜಿಗಳಿ, ಗುಳದಳ್ಳಿ ಗ್ರಾಮಗಳಲ್ಲಿ ವಿಜಯದಶಮಿಯಂದು ಆಚರಿಸಲಾಗುತ್ತದೆ.

ಅರಸಲು: ಅಕ್ಕಿ ಹಿಟ್ಟು ಕುಟ್ಟಿ ಬೆಲ್ಲ ಹಾಕಿ ಸಿಹಿ ನಿಪ್ಪಟ್ಟು ಮಾಡಿದಂತೆ ಅಕ್ಕಿ ಹಿಟ್ಟಿನ ಉಂಡೆ ಮಾಡಿ ಹಿರಿಯರಿಗೆ ಎಡೆ ಮಾಡುವುದಕ್ಕೆ ಅರಸಲು ಎಂದು ಕರೆಯುತ್ತಾರೆ. ಇದು ಒಂದು ರೀತಿಯ ಹಿರಿಯರಿಗೆ ಎಡೆಹಾಕುವ ಆಚರಣೆಯಾಗಿದೆ. ಇದನ್ನು ತಾಲೂಕಿನಲ್ಲಿ ಸಾಮಾನ್ಯವಾಗಿಯೇ ಆಚರಿಸಿದರು ಸತ್ಯನಾರಾಯಣ ಕ್ಯಾಂಪಿನಲ್ಲಿ[೬೫] ದುರುಗಮ್ಮನಿಗೆ ಅಭಿಷೇಕ ಮಾಡುವ ಸಂದರ್ಭದಲ್ಲಿ ಈ ಆಚರಣೆಯನ್ನು ಕ್ಯಾಂಪಿನ ಎಲ್ಲಾ ಮನೆಯವರು ಆಚರಿಸುತ್ತಾರೆ.

ಉಡಿ ತುಂಬುವುದು: ಗ್ರಾಮದೇವತೆಗಳ ಜಾತ್ರಾ ಮಹೋತ್ಸವಗಳಲ್ಲಿ ಉಡಿ ತುಂಬುವ ಪದ್ಧತಿಯನ್ನು ಒಂದು ಧಾರ್ಮಿಕ ಆಚರಣೆಯಾಗಿ ಆಚರಿಸುತ್ತಾರೆ. ತಾಲೂಕಿನ ವಾಸನ ಗ್ರಾಮದಲ್ಲಿ ಆಷಾಢದಲ್ಲಿ ನಡೆಯುವ ದುರುಗಮ್ಮನ ಜಾತ್ರೆ ಅಂಗವಾಗಿ ಮನೆಯವರೆಲ್ಲಾ ದೇವಿಗೆ ಉಡಿ ತುಂಬುವ ಕಾರ್ಯವನ್ನು ಮಾಡುತ್ತಾರೆ.

ಉರುಳು ಸೇವೆ: ಗ್ರಾಮದೇವತೆಗೆ ಹರಕೆ ಕಟ್ಟಿಕೊಂಡವರು 'ಉರುಳು ಸೇವೆ' ಮಾಡುತ್ತಾರೆ. ಸ್ನಾನಮಾಡಿ, ಮಡಿಬಟ್ಟೆ ಉಟ್ಟು, ದೇವಸ್ಥಾನದ ಸುತ್ತಾ ಉರುಳುವರು. ಉರುಳಿದ ನಂತರ ಅವರ ಕೊರಳಿಗೆ ಪೂಜಾರಿ ಹಾರ ಹಾಕುವುದು ಕೆಲವು ಕಡೆ ಇದೆ. ಆದರೆ ಈ ಪರಿಸರದಲ್ಲಿ ಇಲ್ಲ ಬರೀ ಮೈಯಲ್ಲಿ ಉರುಳುತ್ತಾ ಸುತ್ತು ಹಾಕುತ್ತಾರೆ ಇದು ಉಕ್ಕಡಗಾತ್ರಿ ಹಾಗೂ ಕುಂಬಳೂರು ಗ್ರಾಮಗಳಲ್ಲಿ ಮಾತ್ರ ಕಂಡು ಬರುತ್ತದೆ.

ಓಕುಳಿ: ಗ್ರಾಮ ದೈವಗಳ ಜಾತ್ರೆ ಉತ್ಸವಗಳಲ್ಲಿ ಕೆಲವೆಡೆ ಈ ಆಚರಣೆ ನಡೆಯುತ್ತದೆ. ಅರಿಶಿಣ ಕುಂಕುಮದಲ್ಲಿ ಇದನ್ನು ಮಾಡಿರುತ್ತಾರೆ, ನೆಂಟರು, ಅಳಿಯಂದಿರು ಓಕುಳಿ ಎರಚುತ್ತಾರೆ ಪರಸ್ಪರ ಎರಚಾಡಿಕೊಳ್ಳುತ್ತಾರೆ ಸಾರಥಿ ಗ್ರಾಮದ ಆಂಜನೇಯ ದೇವಾಲಯದ ಮುಂದಿರುವ ಓಕುಳಿ ಹೊಂಡದ ಸುತ್ತಲೂ ಇರುವ ಕಂಬಗಳಿಗೆ ಮಾವಿನ ತೋರಣ ಕಟ್ಟಲಾಗಿರುತ್ತದೆ ಒಣಕೊಬ್ಬರಿ, ಸಿಪ್ಪೆಯಿರುವ ತೆಂಗಿನ ಕಾಯಿಗಳನ್ನು ಉದ್ದನೆಯ ಹಗ್ಗದ ತುದಿಗೆ ಕಟ್ಟಿ, ಆ ತೋರಣದ ಮಧ್ಯದಲ್ಲಿ ಇಳಿಬಿಡಲಾಗುತ್ತದೆ. ಹಗ್ಗದ ಇನ್ನೊಂದು ತುದಿಯನ್ನು ಒಬ್ಬ ವ್ಯಕ್ತಿ ಹಿಡಿದು ಕೊಬ್ಬರಿ ಮತ್ತು ಕಾಯಿಗಳನ್ನು ಕೆಳಗೆ ಇಳಿಬಿಡುವುದು ಮೇಲಕ್ಕೆ ಎಳೆಯುವುದಕ್ಕಾಗಿ ಒಂದು ಕಂಬದ ಪಕ್ಕ ನಿಂತಿರುತ್ತಾನೆ. ಎರಡು ಕಂಬಗಳ ಪಕ್ಕದಲ್ಲಿ ಓಕುಳಿ ನೀರು ತುಂಬಿರುವ ಕೊಳಾಯಿಗಳನ್ನು ಇಡಲಾಗಿರುತ್ತದೆ. ಅದರಲ್ಲಿ ಪಾಲ್ಗೊಳ್ಳುವ ಕಟ್ಟುಮಸ್ತಾದ ವ್ಯಕ್ತಿಗಳು ಬರೀ ಮೈಯಲ್ಲಿ ಗ್ರಾಮದೇವತೆಯೊಂದಿಗೆ ಹೋಗಿ ಗ್ರಾಮದ ಬಾವೀಗಂಗಮ್ಮನಿಗೆ ಪೂಜೆ ಸಲ್ಲಿಸಿ ನೇರವಾಗಿ ವಾದ್ಯಗಳೊಂದಿಗೆ ಮೆರವಣಿಗೆಯಲ್ಲಿ ಓಕುಳಿ ಬರುತ್ತಾರೆ ಆ ವ್ಯಕ್ತಿಗಳ ಓಕುಳಿಯ ತೋರಣದ ಮದ್ಯದಲ್ಲಿ ಇಳಿಬಿದ್ದ ಹಾಗೂ ಮೇಲೆಕೆಳಗೆ ಎಳೆದಾಡುವ ಸಪ್ಪೆಕಾಯಿ [ಸಿಪ್ಪೆ ಸುಲಿದ ತೆಂಗಿನ ಕಾಯಿ] ಮತ್ತು ಕೊಬ್ಬರಿಯನ್ನು ಹಾರಿ ಹಿಡಿಯಬೇಕು. ಅವರು ಒಬ್ಬೊಬ್ಬರಾಗಿ ದೂರದಿಂದ ಓಡಿ ಬಂದು ಕಾಯಿ, ಕೊಬ್ಬರಿಯನ್ನು ಹಿಡಿಯಲು ಜಿಗಿಯುತ್ತಿದ್ದಂತೆ ಕೆಳಗೆ ಇಳಿಬಿಟ್ಟಿದ್ದ ಕಾಯಿ, ಕೊಬ್ಬರಿಯನ್ನು ಮೇಲಕ್ಕೆ ಎಳೆಯಲಾಗುತ್ತದೆ ಹಾಗೂ ಓಡಿ ಬಂದ ವ್ಯಕ್ತಿಯು ಮೇಲಕ್ಕೆ ಎಳೆಯುತ್ತಿರುವ ಕೊಬ್ಬರಿಯನ್ನು ಹಾರಿಹಿಡಿಯಲು ಪ್ರಯತ್ನಿಸುವಾಗ ಅವರ ಮುಖಕ್ಕೆ ಎರಡೂ ಕಂಬಗಳ ಪಕ್ಕದಿಂದ ಓಕಳಿಯನ್ನು ತಂಬಿಗೆಯಿಂದ ಎರಚಲಾಗುತ್ತದೆ. ಹೀಗೆ ಪ್ರತಿಯೊಬ್ಬರೂ ಕಾಯಿ, ಕೊಬ್ಬರಿ ಹಿಡಿಯಲು ಪ್ರಯತ್ನಿಸುವಾಗಲೆಲ್ಲಾ ಓಕಳಿ ನೀರನ್ನು ಎರಚಲಾಗುತ್ತಿದ್ದು, ಅದನ್ನು ಹಿಡಿಯುವವರಿಗೆ ಈ ಪ್ರಯತ್ನ ನಡೆಯುತ್ತದೆ. ಜನರಿಗೆ ನೋಡಲು ಮನೋರಂಜನೆಯಾದರೆ, ಅದರಲ್ಲಿ ಪಾಲ್ಗೊಂಡವರಿಗೆ ಕ್ರೀಡೆಯಾಗಿರುತ್ತದೆ. ಈ ಆಚರಣೆಯನ್ನು ಗ್ರಾಮದಲ್ಲಿ ಏಪ್ರಿಲ್-ಮೇ ತಿಂಗಳಿನಲ್ಲಿ ಆಚರಿಸಲಾಗುತ್ತದೆ. ತಾಲೂಕಿನ ದೀಟೂರು, ಗುತ್ತೂರು, ದೇವರಬೆಳಕೆರೆ, ಕುಣಿಬೆಳಕೆರೆ,

ನಂದಿತಾವರೆ, ಬುಳ್ಳಾಪುರಗಳಲ್ಲಿ ರಸ್ತೆಯಲ್ಲಿ ಓಡಾಡುವವರ ಮೇಲೆ ರಥೋತ್ಸವದ ನಂತರ ಓಕಳಿ ನೀರನ್ನು ಎರಚುವುದರ ಮೂಲಕ ಓಕುಳಿಯನ್ನು ಆಡುತ್ತಾರೆ.

ಕಾಲು ಪವಾಡ: ಮೈಲಾರನ ಜಾತ್ರೆಯಲ್ಲಿ ಸಲಕರಣೆಗಳನ್ನು ಪೂಜಿಸಿದ ಬಳಿಕ ಗೋರವಪ್ಪನ ಕಾಲಿಗೆ ಬೆಣೆಯನ್ನು ಬಡಿದು ಒಂದು ಕಡೆಯಿಂದ ಮತ್ತೊಂದು ಕಡೆಗೆ ತೂರಿಸಲಾಗುತ್ತದೆ. ಆ ನಂತರ ಬೆಣೆಯನ್ನು ಹೊರಗೆ ತೆಗೆದಾಗ ಉಂಟಾಗುವ ರಂಧ್ರದಲ್ಲಿ ಒಮ್ಮೆ ತೊಗಲಿನ ಹಗ್ಗವನ್ನು ಮತ್ತೊಮ್ಮೆ ಮುಳ್ಳಿನ ಕಡ್ಡಿಯನ್ನು ತೂರಿಸಲಾಗುತ್ತದೆ. ಇದಕ್ಕೆ ಕಾಲುಪವಾಡ ಎಂದು ಕರೆಯಲಾಗುತ್ತದೆ.

ಕೈ ಪವಾಡ: ಇದು ಕೂಡ ಮೈಲಾರನ ಜಾತ್ರೆಯಲ್ಲಿ ಕಂಡು ಬರುವ ಆಚರಣೆಯಾಗಿದ್ದು ಕೈಗೆ ತ್ರಿಶೂಲವನ್ನು ಸಿಕ್ಕಿಸಿಕೊಂಡು ಹರಕೆ ತೀರಿಸಲಾಗುವುದು. ಈ ಹರಕೆಯಲ್ಲಿ ಬಲದ ಹಸ್ತದ ಮೇಲೆ ಒಂಭತ್ತು ಎಣ್ಣೆ ಬತ್ತಿಗಳನ್ನು ಹೊತ್ತಿಸಿಕೊಂಡು ದೇವರಿಗೆ ಆರತಿ ಬೆಳಗುತ್ತಾರೆ.

ಕೆಂಡ ಹಾಯುವುದು: ಬುಳ್ಳಾಪುರದ ಆಂಜನೇಯನ ರಥೋತ್ಸವದ ಸಂದರ್ಭದಲ್ಲಿ ಕೆಂಡಗದ್ದುಗೆ ನಡೆಸಲಾಗುತ್ತದೆ. ಬುಳ್ಳಾಪುರದ ಆಂಜನೇಯ ದೇವಾಲಯದ ಮುಂದೆ ರಾತ್ರಿಯಿಡೀ ಕಟ್ಟಿಗೆಗೆ ಬೆಂಕಿ ಹಾಕಿ ಕೆಂಡ ಮಾಡಲಾಗುತ್ತದೆ. ಮಾರನೇದಿನ ಗ್ರಾಮದ ದೇವತೆಯನ್ನು ಪಲ್ಲಕ್ಕಿಯಲ್ಲಿಟ್ಟು ಉತ್ಸವದೊಂದಿಗೆ ತೆಗೆದುಕೊಂಡು ಹೋಗಿ ಗಂಗೆ ಪೂಜೆ ಮಾಡಿಕೊಂಡು ಕೆಂಡದ ಸ್ಥಳಕ್ಕೆ ಬಂದು ಆಸ್ಥಳವನ್ನು ದೇವರೊಂದಿಗೆ ಸುತ್ತು ಹಾಕಿ ನಂತರ ಕೆಂಡದ ಮಧ್ಯದಿಂದ ಹಾದು ಹೋಗಲಾಗುತ್ತದೆ. ಆ ನಂತರ ಹರಕೆ ಹೊತ್ತ ಭಕ್ತರು ಕೆಂಡ ಹಾಯುವುದು ಇಲ್ಲಿನ ಪದ್ಧತಿಯಾಗಿದೆ. ಹಾಗೆಯೇ ನಂದಿತಾವರೆಯಲ್ಲಿ ಯುಗಾದಿ ನಂತರ ಐದನೇ ದಿನದಲ್ಲಿ ಉಪವಾಸ ಇರುವ ವ್ಯಕ್ತಿಯನ್ನು ಆತನ ಮನೆಯಿಂದ ಉತ್ಸವದೊಂದಿಗೆ ಕರೆತರಲಾಗುತ್ತದೆ. ಈ ವ್ಯಕ್ತಿಯ ಮೈಯಲ್ಲಿ ದುರ್ಗಿ ಬಂದಾಗ ಕೆಂಡದ ಮಧ್ಯದಲ್ಲಿ ಕಳಿತು ಕಾರ್ನೀಕ ಹೇಳಿ ಕೆಂಡ ಹಾಯುತ್ತಾನೆ ನೆರೆದ ದೇವರುಗಳು ಹಾಗೂ ಭಕ್ತರು ಕೆಂಡ ಹಾಯುತ್ತಾನೆ. ಹೀಗೆ ತಾಲೂಕಿನ ಗ್ರಾಮಗಳಲ್ಲಿ ಬೇರೆ ಬೇರೆ ರೀತಿಯಾಗಿ ಈ ಆಚರಣೆ ನಡೆಯುತ್ತದೆ.

ಕಾರಣಿಕ: ವರ್ಷಕ್ಕೊಮ್ಮೆ ಮೈಲಾರಲಿಂಗೇಶ್ವರನ್ನಷ್ಠೇ(ದೇವರಬೆಳಕೆರೆ) ಅಲ್ಲದೆ ತಾಲೂಕಿನ ಹಲವು ಗ್ರಾಮಗಳಲ್ಲಿ ಈ ಆಚರಣೆ ನಡೆಯುತ್ತದೆ. ಪ್ರತಿ ವರ್ಷವೂ ಗ್ರಾಮದೇವತೆಯು ಆ ವರ್ಷದ ಆಗುಹೋಗುಗಳ ಕುರಿತು ಹೇಳುವ ಹೇಳಿಕೆ ಇದಾಗಿದೆ. "ಬಂಗಾರದ ಚೌಕ ಛಿದ್ರವಾದೀತು ಛಿದ್ರವಾದ ಚೌಕ ಮತ್ತೆ ದುಂಡಾದೀತು ಎಚ್ಚರಲೆ"[೬೮] ಎನ್ನುವ ನಾಣ್ನುಡಿಯು ೧೯೯೫ ರಲ್ಲಿ ಹರಿಹರದಲ್ಲಿ ನಡೆದ ಕಾರಣಿಕದ ಹೇಳಿಕೆಯಾಗಿದೆ.

ಚರಗ: ಗ್ರಾಮದೇವತೆಯ ಜಾತ್ರೆಗಳಲ್ಲಿ ದೇವತೆಗೆ ನೀಡುವ ಬಲಿಯನ್ನು ಅದರಿಂದ ಬರುವ ರಕ್ತವನ್ನು ಚರಗದ ಜೋಳಕ್ಕೆ ಕಲೆಸಿ ಗ್ರಾಮದ ಗಡಿಯ ಸುತ್ತಾ ಚೆಲ್ಲುತ್ತಾ ಬರುವುದಕ್ಕೆ ಚರಗ ಎನ್ನಲಾಗುತ್ತದೆ. ಈಗ ಕೆಲವು ಗ್ರಾಮಗಳಲ್ಲಿ ಕೋಣನ ಬಲಿ ನಿಂತಿರುವುದರಿಂದ ಜೋಳವನ್ನು ಬೇಯಿಸಿ ಅದನ್ನೆ ಗಡಿಸುತ್ತಲು ಎರಚುತ್ತಾರೆ.

ಚೊಕ್ಕ: ಕಾರ್ತಿಕ ಮಾಸದಲ್ಲಿ ಪ್ರತಿದಿನ ರಾತ್ರಿ ಹರಿಹರೇಶ್ವರ ದೇವಾಲಯದಲ್ಲಿ ಕಾರ್ತಿಕೋತ್ಸವದ ಅಂಗವಾಗಿ ನಡೆಯುವ 'ಚೊಕ್ಕ'[೬೮] ಆಚರಣೆಯೂ ವಿಶೇಷ ಎರಡು ಗಜ ಉದ್ದ ಒಂದೂವರೆ ಅಡಿ ಅಗಲದ ಹೊಸ ಬಟ್ಟೆಯನ್ನು ತುಪ್ಪದಲ್ಲಿ ಅದ್ದಿ ಅದನ್ನು ತ್ರಿಶೂಲಕ್ಕೆ ಸಿಕ್ಕಿಸಿ, ದೇವಾಲಯದ ಮುಂಭಾಗದ ಮಾಳಿಗೆಯ ಮೇಲೆ ಅದನ್ನು ಹಿಡಿದು ಒಬ್ಬರು ನಿಂತಿರುತ್ತಾರೆ. ಉತ್ಸವವು ದೇವಾಲಯದ ಪ್ರಾಂಗಣದ ಸುತ್ತಲೂ ಮೆರವಣಿಗೆಯಲ್ಲಿ ಬಂದು ದೇವಸ್ಥಾನದ ಮುಂಭಾಗದಲ್ಲಿ ನಿಂತಾಗ ಅರ್ಚಕರು ದೇವರಿಗೆ ಮಂಗಳಾರತಿಮಾಡಿ, ಬಟ್ಟೆಗೆ ಅದನ್ನ ಸ್ಪರ್ಶ ಮಾಡಿ ಅದರ ಕರಿಯನ್ನು ಪ್ರಸಾದ ರೂಪವಾಗಿ ಎಲ್ಲರೂ ಹಣೆಗೆ ಇಟ್ಟುಕೊಳ್ಳುತ್ತಾರೆ.

ಜವಳ: ಸಾಮಾನ್ಯವಾಗಿ ಚಿಕ್ಕ ಮಗುವಿನ ತಲೆಯ ಹುಟ್ಟು ಕೂದಲನ್ನು ಮೊದಲು ಮನೆ ದೇವರ ಹತ್ತಿರ ಹೋಗಿ ತೆಗೆಸುವುದಕ್ಕೆ ಜವಳ ಎನ್ನುವುದು ರೂಢಿಯಾದರೆ ಕೆಲವೊಂದು ಗ್ರಾಮಗಳಲ್ಲಿ ಗ್ರಾಮಗಳ ರಥೋತ್ಸವ ಸಂದರ್ಭದಲ್ಲಿ ಹರಕೆ ಕಟ್ಟಿಕೊಂಡಾಗ ಹಾಗೂ ಅಮವಾಸ್ಯೆ, ಹುಣ್ಣಿಮೆಗೆ ಕೂದಲು ಅರ್ಪಿಸುವುದನ್ನು ಜವಳ ಎಂದು ಈ ಪರಿಸರದಲ್ಲಿ ಕರೆಯುತ್ತಾರೆ ತಾಲೂಕಿನ ಕುಂಬಳೂರು, ನಂದಿತಾವರೆ, ಹಾಗೂ ಉಕ್ಕಡಗಾತ್ರಿಯಲ್ಲಿ ಈ ಆಚರಣೆ ಇದೆ.

ದೀಡು ನಮಸ್ಕಾರ: ಇದು ಬಗೆಯ ಹರಕೆ, ಇಷ್ಟಾರ್ಥ ಸಿದ್ದಿಗಾಗಿ ಹರಕೆ ಹೊತ್ತು ಅದು ಈಡೇರಿದಾಗ ಮಾಡುವ ಸೇವೆಯಿದು ಒದ್ದೆ ಬಟ್ಟೆಯಲ್ಲಿ ಕೈಯಲ್ಲೊಂದು ಉದ್ದ ಕಡ್ಡಿ ಹಿಡಿದು ಭಕ್ತ ಉದ್ದಕ್ಕೆ ಮಲಗಿ ಕೈ ಚಾಚಿ ಕೈಯಲ್ಲಿರುವ ಕಡ್ಡಿಯಿಂದ ಗೆರೆ ಎಳೆದು ಎದ್ದು ಪುನಃ ಗುರುತು ಮಾಡಿದ ಸ್ಥಳದಿಂದ ನಮಸ್ಕಾರ ಹಾಕುತ್ತಾ ಹೋಗುವುದಕ್ಕೆ ದೀಡು ನಮಸ್ಕಾರ ಎಂದು ಕರೆಯಲಾಗುತ್ತದೆ. ಇದಕ್ಕೆ ದಿಂಡೂಡುವುದು ಎಂದು ಅರ್ಥ ಈ ತಾಲೂಕಿನಲ್ಲಿದ್ದು ದೇವರಬೆಳಕೆರೆ, ಉಕ್ಕಡಗಾತ್ರಿಗಳಲ್ಲಿ ಈ ಆಚರಣೆ ನಡೆಯುತ್ತದೆ.

ದೋಣಿ ತುಂಬಿಸುವುದು: ದೇವರ ಬೆಳಕೆರೆಯಲ್ಲಿ ನಡೆಯುವ ಮೈಲಾರಲಿಂಗೇಶ್ವರ ಜಾತ್ರೆ ಸಮಯದಲ್ಲಿ ಈ ಆಚರಣೆ ನಡೆಯುತ್ತದೆ. ಅಂದು ರಥೋತ್ಸವದ ನಂತರ ಆಚಾರಿಯು ದೇವಾಲಯದ ಹೊರ ಭಾಗದಲ್ಲಿದ್ದು ಹರಕೆ ಹೊತ್ತವರಿಗೆ ಗೊರವಪ್ಪ, ಗೊರವಮ್ಮ ಧೀಕ್ಷೆ ಕೊಡುವುದರ[೬೦] ಜೊತೆಗೆ ದೋಣಿತುಂಬಿಸುವ ಆಚರಣೆ ನಡೆಯುತ್ತದೆ.

ಪಳಹಾರ ಹಾಕುವುದು: ಶಿವರಾತ್ರಿಯ ಮಾಘ ಮಾಸದಲ್ಲಿ ಉಕ್ಕಡಗಾತ್ರಿಯ ಕರಿಬಸವೇಶ್ವರ ರಥೋತ್ಸವದಂದು ಪಳಹಾರ ಹಾಕುವ ಆಚರಣೆ ನಾಡಿನಾದ್ಯಂತ ಭಕ್ತಿಯ ಸೆಲೆಯನ್ನ ಮಾಡಿಸುವಂತದ್ದು, ಕರಿಬಸವೇಶ್ವರನಿಗೆ ಮಂಡಕ್ಕಿ, ಖಾರ ಇಷ್ಟ ಎನ್ನುವ ನಂಬಿಕೆ ಭಕ್ತರಲ್ಲಿ ಇರುವುದರಿಂದ ಮಂಡಕ್ಕಿ ಮತ್ತು ಖಾರವನ್ನು ತಂದು ಒಂದು ಕಡೆ ಹಾಕಿ ರಥೋತ್ಸವವು ಮುಗಿದ ನಂತರ ಭಕ್ತರಿಗೆಲ್ಲಾ ಹಂಚಲಾಗುವುದು.

ಬಲೆಬಾನ: ಗ್ರಾಮದೇವತೆಗಳ ಜಾತ್ರೆ, ಉತ್ಸವಗಳಲ್ಲಿ ಜಾತ್ರೆಯ ಆರಂಭದ ಪೂಜೆಗೆ ನೈವೇದ್ಯ ಅರ್ಪಿಸುವ ಅನ್ನವನ್ನ ಬಲೆಬಾನ ಎನ್ನುತ್ತಾರೆ ಸಾಮಾನ್ಯವಾಗಿ ಊರ ಗೌಡರು ಈ ಆಚರಣೆಯಲ್ಲಿ

ಹೆಚ್ಚಾಗಿ ಪಾಲ್ಗೊಳ್ಳುತ್ತಾರೆ ತಾಲೂಕಿನ ಜಿಗಳಿ ರಂಗನಾಥ ಸ್ವಾಮಿ ರಥೋತ್ಸವದ ಮೊದಲು ಜಿಗಳಿಯ ಗೌಡರ ಮನೆಯವರು ದೇವಾಲಯದ ಹತ್ತಿರ ಅಡುಗೆ ಮಾಡಿಸಿ ದೇವರಿಗೆ ಎಡೆ ಹಾಕಲಾಗುವ ಆಚರಣೆ ರೂಢಿಯಲ್ಲಿದೆ ಇನ್ನೂ ಅನೇಕ ಗ್ರಾಮಗಳಲ್ಲಿ ಈ ಧಾರ್ಮಿಕ ಆಚರಣೆಯು ಚಾಲ್ತಿಯಲ್ಲಿದೆ.

ಬೆಲ್ಲದ ಬಂಡಿ: ಗ್ರಾಮದ ರಥೋತ್ಸವಗಳಲ್ಲಿ ಪಾನಕ ತುಂಬಿದ ಕೊಳಾಯಿಗಳನ್ನು ಎತ್ತಿನ ಬಂಡಿಯಲ್ಲಿ ಇಟ್ಟುಕೊಂಡು ಉತ್ಸವದಲ್ಲಿ ಪಾಲ್ಗೊಂಡ ಭಕ್ತರಿಗೆ ಹಂಚಲಾಗುವುದು. ಇದೊಂದು ನಾಗರಿಕ ಸಂಸ್ಕೃತಿಯಾಗಿದೆ.[೭೧] ಸಾಮಾನ್ಯವಾಗಿ ರಥೋತ್ಸವಗಳು ನಡೆಯುವುದು ಬೇಸಿಗೆಯಲ್ಲಿ ಆಗಿರುವುದರಿಂದ ಈ ಆಚರಣೆ ಬೆಸಿಗೆಯ ದಾಹ ನೀಗಿಸಲು ಆಗಿರುವ ಆಚರಣೆಯಾಗಿದೆ. ತಾಲೂಕಿನ ಸಾರಥಿ ಗ್ರಾಮದ ಆಂಜನೇಯ ಉಚ್ಚಯ್ಯದಲ್ಲಿ ಬೆಲ್ಲದ ಬಂಡಿ ಹೂಡಲಾಗುತ್ತದೆ. ಇದನ್ನು ಕೊಲ್ಲಾರಿ ಬಂಡಿ ಕಟ್ಟುವುದು, ಪಾನಕ ಹಂಚುವುದು ಎಂದೆಲ್ಲಾ ಕರೆಯುತ್ತಾರೆ.

ಬೇಟೆ ಆಡುವುದು: ಪ್ರಾಗಿತಿಹಾಸ ಕಾಲದಲ್ಲಿ ನಾಗರಿಕತೆಗಳಲ್ಲಿ ಬೇಟೆ ಆಡುವುದು ಸಾಮಾನ್ಯವಾಗಿತ್ತು ಈ ಸಂದರ್ಭದಲ್ಲಿ ನಿತ್ಯದ ಆಹಾರಕ್ಕಾಗಿ ಆದಿಮಾನವ ಬೇಟೆ ಆಡಿದರೆ ಐತಿಹಾಸಿಕ ರಾಜಮಹಾರಾಜರು ಮೋಜಿಗಾಗಿ ಬೇಟೆಯಾಡುತ್ತಿದ್ದರು, ಆದರೆ ಹರಿಹರ ತಾಲೂಕಿನ ಕೆಲವು ಗ್ರಾಮಗಳಲ್ಲಿ ದೇವರುಗಳು ಬೇಟೆ ಆಡುವುದಕ್ಕೆ ಹೋಗುವ ಆಚರಣೆಯನ್ನು ನೋಡಬಹುದು. ಈ ಆಚರಣೆಯನ್ನ ನೋಡಿದರೆ ಇಂದು ಬೇಟೆ ಆಡುವ ಈ ದೇವರು ಹಿಂದೊಮ್ಮೆ ಈ ಪ್ರಾಂತವನ್ನು ಆಳಿದ ನಾಯಕ, ಪಾಳೆಯಗಾರ ಇದ್ದಿರಬೇಕೆಂದು ಅನ್ನಿಸುತ್ತದೆ.[೭೨] ಜಿಗಳಿ ರಂಗನಾಥ, ಜಿ.ಬೇವಿನಹಳ್ಳಿ ದೇವರುಗಳೊಂದಿಗೆ ಮಹಾನವಮಿಯ ಮೂರನೇ ದಿನ ಅಲ್ಲಿನ ಗುಡ್ಡಕ್ಕೆ ಬೇಟೆಯಾಡಲು ಹೋಗಿ ನಂತರ ವಾಪಸು ಬಂದಾಗ ಬೇವಿನಹಳ್ಳಿಯಲ್ಲಿ ಚೆಂಡು ಹೂವಿನ ಆರತಿ ಬೆಳಗುವ ಸಂಪ್ರದಾಯವಿದ್ದರೆ ನಂತರ ಜಿಗಳಿಯಲ್ಲಿ ರಂಗನಾಥನನ್ನ ಮೆರವಣಿಗೆ ಮಾಡಿ ಆರತಿ ಬೆಳಗುತ್ತಾರೆ. ಬಹುಶಃ ಬೇಟೆಯನ್ನು ಹೊಡೆದು ತಂದವರಿಗೆ ಮಾಡುತ್ತಿದ್ದ ವಿಜಯೋತ್ಸವ ಫಲವಂತಿಕೆಗಾಗಿ ಈ ಪದ್ಧತಿ ಇರಬೇಕು ಕೆಲವು ಕಡೆ ಯುಗಾದಿ ದಿನ ಬೇಟೆಯಾಡುವುದನ್ನ ಕಾಣುತ್ತೇವೆ.

ಬ್ಯಾಟಿ ಮುರಿಯುವುದು: ದೊಗ್ಗಳ್ಳಿಯ ದುರುಗಮ್ಮನ ಹೋಳಿ ಹುಣ್ಣಿಮೆಯಾದ ನಂತರ ಗ್ರಾಮದ ಹೊರವಲಯದಲ್ಲಿರುವ ಬನ್ನಿಮರಕ್ಕೆ ಹೋಗುತ್ತದೆ. ಇಲ್ಲಿ ಬನ್ನಿ ಸೊಪ್ಪನ್ನು ಮುರಿಯುವುದಕ್ಕೆ ಬ್ಯಾಟಿಮುರಿಯುವುದು ಎಂಬ ಧಾರ್ಮಿಕ ಆಚರಣೆಯ ಹೆಸರನ್ನಿಟ್ಟಿದ್ದಾರೆ. ಬ್ಯಾಟಿ ಮುರಿಯುವ ದಾಸಪ್ಪನ ಮೈಯಲ್ಲಿ ಭೂತಪ್ಪ ಬಂದಿರುತ್ತದೆ. ಎಂಬುದು ಗ್ರಾಮಸ್ಥರ ನಂಬಿಕೆ. ಈ ದಾಸಪ್ಪನಿಗೆ ಕುರುಬರ ಮನೆಯಿಂದ ಕುರಿಹಾಲನ್ನು ತರಿಸಿ ಕುಡಿಸುತ್ತಾರೆ. ಸೊಪ್ಪನ್ನು ಹರಿಯುವ ಸ್ಥಳಕ್ಕೆ ಹಳೇಬಾತಿ ಹಾಗೂ ನೀಲಾನಹಳ್ಳಿ ಆಂಜನೇಯ ದೇವರುಗಳು ಕೂಡ ಹೋಗಿರುತ್ತವೆ.

ಬಾಯಿ ಬೀಗ ಹಾಕುವುದು: ದೇವರಬೆಳಕೆರೆಯಲ್ಲಿ ನಡೆಯುವ ಮೈಲಾರಲಿಂಗೇಶ್ವರ ಜಾತ್ರೆ ಹಾಗೂ ನಂದಿತಾವರೆಯ ಅಮೃತಲಿಂಗ ಮಾಣಿಕೇಶ್ವರ ರಥೋತ್ಸವ ಸಂದರ್ಭದಲ್ಲಿ ಬಾಯಿಗೆ

ಬೀಗ ಹಾಕುವ ಹರಕೆ ಸಲ್ಲಿಸಲಾಗುತ್ತದೆ. ವ್ರತಾಚರಣೆಗೆ ಸಂಬಂಧಿಸಿದಂತೆ ತಾಮ್ರ ಅಥವಾ ಬೆಳ್ಳಿಯ ತಂತಿಯಿಂದ ಎರಡೂ ಕೆನ್ನೆಯನ್ನು ತೂತು ಮಾಡಿಸಿಕೊಂಡು ಬಾಯಿಗೆ ಬೀಗ ಹಾಕಿಸಿಕೊಳ್ಳುವರು[೭೩] ಕುಂಬಳೂರಿನ ಆಂಜನೇಯ ರಥೋತ್ಸವದಲ್ಲಿ ಹರಕೆಮಾಡಿಕೊಂಡ ಹೆಣ್ಣು ಮಕ್ಕಳು ಒಪ್ಪತ್ತು ಇದ್ದು ದೇವಾಲಯಕ್ಕೆ ಹೋಗಿ ಅಲ್ಲಿ ತೀರ್ಥವನ್ನು ಹಾಕಿಸಿಕೊಂಡು ಪೂಜೆ ಮಾಡಿದ ನಂತರ ಬೀಗ ತೆಗೆಯುವರು ಹಾಗೆ ತೆಗೆದ ಮೇಲೆ ಚುಚ್ಚಿದ ಜಾಗಕ್ಕೆ ಗ್ರಾಮ ದೇವತೆಯದು ಅಥವಾ ಮೈಲಾರಲಿಂಗನ ಭಂಡಾರ ಹಚ್ಚುತ್ತಾರೆ.

ಮಣಿ ಆಡುವುದು: ಕೊಂಡಜ್ಜಿ ಗ್ರಾಮದಲ್ಲಿ ಆಂಜನೇಯ ರಥೋತ್ಸವ ಅಂಗವಾಗಿ ಮಣಿ ಆಡುವ ಪದ್ಧತಿ ಇದೆ. ಇದನ್ನು ಭೂತಪ್ಪ ಬೀಡುವುದು, ಭೂತಸೇವೆ ಎಂದು ಕರೆಯುತ್ತಾರೆ. ಈ ಕಾರ್ಯಕ್ಕಾಗಿ ಮೀಸಲಿರುವರು ಮಡಿ ಉಡಿಯಿಂದ ಭೂತಪ್ಪನ ಹಲಗೆ ಹಿಡಿದುಕೊಂಡಾಗ ಅವರ ಮೈಮೇಲೆ ಭೂತಪ್ಪ ಬರುತ್ತಾನೆ. ಎನ್ನುವ ನಂಬಿಕೆ ಇದೆ. ಆಗ ಭಕ್ತಾದಿಗಳು ನೆಲದ ಮೇಲೆ ಹರಡಿದ ಬಟ್ಟೆ ಅಥವಾ ಬಾಳೆ ಎಲೆಯ ಮೇಲೆ ಬಾಳೆಹಣ್ಣುಗಳನ್ನು ಸುಲಿದು ಇಡುತ್ತಾರೆ. ಭೂತಪ್ಪ ಮೈಮೇಲೆ ಬಂದವರು ಆ ಬಾಳೆಹಣ್ಣುಗಳನ್ನು ಕೈ ಸಹಾಯವಿಲ್ಲದೆ ತಿನ್ನುತ್ತಾರೆ. ಸುಮಾರು ಸಾವಿರಾರು ಹಣ್ಣುಗಳನ್ನು ದೇವರು ಹಿಡಿದವರು ಇಪ್ಪತ್ತು, ಇಪ್ಪತ್ತೈದು ಜನರು ತಿಂದು ಮುಗಿಸುತ್ತಾರೆ.[೭೪] ಕೊನೆಗೆ ಭೂತಪ್ಪ ದೇವರು ಹಿಡಿದವರಿಂದ ಹಲಗೆಯನ್ನು ಬೇರೆಯವರು ಪಡೆದುಕೊಂಡು ಅವರನ್ನು ಚಾಟಿಯಿಂದ ಹೊಡೆಯುತ್ತಿದ್ದಂತೆ ಭೂತಪ್ಪ ಬಿಟ್ಟು ಹೋಗುತ್ತದೆ. ಈ ರೀತಿ ಆಚರಣೆ ತಾಲೂಕಿನ ನಿಟ್ಟೂರು, ಎರೆಬೂದಿಹಾಳು, ಬನ್ನಿಕೋಡು ಗ್ರಾಮಗಳಲ್ಲಿ ನಡೆಯುತ್ತದೆ, ಎಂಬುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿದುಬಂದಿದೆ.

ಮುತ್ತು ಕಟ್ಟುವುದು: ಮುತ್ತು ಕಟ್ಟಿಸಿಕೊಳ್ಳುತ್ತೇವೆ ಎಂದು ಹರಕೆ ಹೊತ್ತವರು ಈ ಆಚರಣೆಗೆ ಒಳಪಡುತ್ತಾರೆ. ಇದಕ್ಕೆ ಹೆಣ್ಣು ಮಕ್ಕಳು ಮತ್ತು ಗಂಡುಮಕ್ಕಳು ಒಳಗಾಗಿದ್ದು ಮುತ್ತು ಕಟ್ಟುವ ಸಂದರ್ಭಲ್ಲಿ ಕೆಲವೊಂದು ನಂಬಿಕೆಗೆ ಅರ್ಹನಾಗಿರುತ್ತೇನೆ ಎಂದು ಪ್ರಮಾಣ ಮಾಡಿಸಿ ಮುತ್ತು ಕಟ್ಟುತ್ತಾರೆ. 'ಮುತ್ತು' ಹರಳುಗಳ ಒಂಭತ್ತು ಮಣಿಗಳನ್ನು ಹೊಂದಿರುತ್ತದೆ. ಜಿಗಳಿ ರಂಗನಾಥ ಸ್ವಾಮಿ ರಥೋತ್ಸವ ಸಂದರ್ಭದಲ್ಲಿ ಹರಕೆ ಹೊತ್ತವರಿಗೆ ಮುತ್ತು ಕಟ್ಟಲಾಗುವುದು ಹತ್ತಿರದ ಉಚ್ಚಂಗಿದುರ್ಗದ ಗುಡ್ಡದಲ್ಲಿ ಮುತ್ತು ಕಟ್ಟಿಸುವುದನ್ನ ನಿಷೇಧಿಸಲಾಗಿದೆ ಇದಕ್ಕೆ ಸರಕಾರವು ಕೂಡ ಕಾನೂನನ್ನ ಜಾರಿಮಾಡಿದೆ.

ಮುದ್ರೆ ಹಾಕುವುದು: ಕುಂಬಳೂರಿನ ಆಂಜನೇಯ ರಥೋತ್ಸವದ ನಂತರ ಹರಕೆ ಮಾಡಿಸಿಕೊಂಡ ಜನರು ತಮ್ಮ ಭುಜಕ್ಕೆ ಪೂಜಾರಿಯಿಂದ ಶಂಕು ಚಕ್ರದ ಮುದ್ರೆಯನ್ನು ಹಾಕಿಸಿಕೊಳ್ಳುವರು. ಈ ಭಾಗದ ನಾಯಕ ಮನೆತನದಲ್ಲಿ ಮದುವೆ ಆಗುವ ಸಂದರ್ಭದಲ್ಲಿ ವರನಿಗೆ ಈ ಮುದ್ರೆ ಹಾಕುವ ಸಂಪ್ರದಾಯವಿದೆ. ಆದರೆ ಮೈಲಾರ ಹಾಗೂ ಬಿರಯ್ಯನ ಸಂಪ್ರದಾಯದಲ್ಲಿ ಮುದ್ರೆ ಹಾಕುವ ಆಚರಣೆ ವಿಶಿಷ್ಠವಾಗಿದೆ.

ಮುಳ್ಳು ಗದ್ದುಗೆ: ಮುಳ್ಳು ಪಲ್ಲಕ್ಕಿಗೆ ಮುಳ್ಳು ಗದ್ದುಗೆ ಎಂದೂ ಕರೆಯುತ್ತಾರೆ. ದೇವಾಲಯದ ಸಮೀಪದಲ್ಲಿ ಈ ಗದ್ದುಗೆಯನ್ನು ರಚಿಸಿದರೆ ಕೆಲವು ಸಲ ಬಂಡಿಯಲ್ಲಿ ಮುಳ್ಳಿನ ಗದ್ದುಗೆ ಮಾಡಿರುತ್ತಾರೆ ಮೊದಲು ಇದನ್ನು ಪೂಜಿಸಿ ಪೂಜಾರಿಯು ಹತ್ತಿ ತುಳಿಯುತ್ತಾನೆ. ನಂತರ ಹರಕೆ ಕಟ್ಟಿಕೊಂಡವರು ತುಳಿಯುತ್ತಾರೆ ಎಂಬ ಮಾಹಿತಿ ದೊರೆಯುತ್ತದೆ ಮುಳ್ಳಿನ ಗದ್ದುಗೆಯನ್ನು ಉತ್ಸವ ಮಾಡುವುದರಿಂದ ಮುಳ್ಳೋತ್ಸವ ಎಂದು ಕರೆಯಲಾಗುತ್ತದೆ ತಾಲೂಕಿನ ಬೆಳ್ಳೂಡಿ, ಹೊಳೆಸಿರಿಗೆರೆ, ಹರಳಹಳ್ಳಿ, ಬನ್ನಿಕೋಡು, ಕುಣಿಬೆಳಕೆರೆ, ಯಲವಟ್ಟಿ ಹಾಗೂ ಕುಂಬಳೂರು ಗ್ರಾಮಗಳಲ್ಲಿ ಮುಖ್ಯವಾಗಿ ಆಂಜನೇಯ ರಥೋತ್ಸವ ಸಂದರ್ಭದಲ್ಲಿ ಈ ಆಚರಣೆಯನ್ನು ಆಚರಿಸಲಾಗುತ್ತದೆ.

ಸರಪಳಿ ಪವಾಡ: ದೇವರ ಬೆಳಕೆರೆಯ ಮೈಲಾರಲಿಂಗನ ಜಾತ್ರೆಯಲ್ಲಿ ಜಾತ್ರೆ ಮುಗಿದ ನಂತರ ದೇವಾಲಯದ ಮುಂದೆ ಬಲವಾದ ಕಬ್ಬಿಣದ ಸರಪಳಿಯನ್ನು ವ್ರತದಿಂದ ಉಪವಾಸವಿದ್ದ ಪೂಜಾರಿಯು ಸುಲಭವಾಗಿ ತುಂಡರಿಸುತ್ತಾನೆ ಹೀಗೆ ಗಟ್ಟಿಯಾದ ಕಬ್ಬಿಣವು ಸುಲಭವಾಗಿ ತುಂಡಾಗುವುದನ್ನು ಸರಪಳಿ ಪವಾಡ ಎನ್ನಲಾಗುತ್ತದೆ.

ವೀರಭದ್ರೇಶ್ವರ ಗುಗ್ಗಳ: ಸಾಮಾನ್ಯವಾಗಿ ವೀರಭದ್ರೇಶ್ವರನ ಭಕ್ತರು ಹಬ್ಬ , ಮುಂತಾದ ಕಾರ್ಯಗಳಲ್ಲಿ ಆಚರಣೆಯನ್ನು ಮಾಡುವುದರಿಂದ ವೀರಭದ್ರೇಶ್ವರ ಗುಗ್ಗಳ ಎಂದು ಕರೆಯುತ್ತಾರೆ. ವೀರಭದ್ರನನ್ನು ಮನೆ ದೇವರಾಗಿ ಹೊಂದಿರುವವರೇ ಗುಗ್ಗಳ ಕಾರ್ಯವನ್ನು ಮಾಡುತ್ತಾರೆ.[೨೫] ಈ ಸಂದರ್ಭದಲ್ಲಿ ವೀರಭದ್ರನ ಮೂರ್ತಿಯನ್ನು ಧರಿಸಿ ಬೆಂಕಿಯನ್ನು ಹೊತ್ತಿಸಿರುವ ಮಡಿಕೆಗಳನ್ನು ಹೊತ್ತುಕೊಂಡು ವೀರಗಾಸಿ ತಂಡದವರು ಒಡಪು ಹೇಳುತ್ತಾರೆ. ಇದರಲ್ಲಿ ಮುಖ್ಯವಾಗಿ 'ದಕ್ಷಬ್ರಹ್ಮನಿಗೆ ಕುರಿದೆಲೆಯನ್ನಿಟ್ಟಿದ್ದು'[೨೬] ಮುಂತಾದ ಒಡಪುಗಳು ವೀರಭದ್ರನ ಆಚರಣೆಯಲ್ಲಿ ಕಂಡುಬರುತ್ತವೆ ತಾಲೂಕಿನಲ್ಲಿ ಒಂದೊಂದು ಹಬ್ಬದಲ್ಲಿ ಒಂದೊಂದು ಗ್ರಾಮದವರು ಈ ಆಚರಣೆಯನ್ನು ಆಚರಿಸುತ್ತಾರೆ.

ಹರಿಸೇವೆ: ಸಾಮಾನ್ಯವಾಗಿ ತಿರುಪತಿ ತಿಮ್ಮಪ್ಪನ ದರ್ಶನ ಪಡೆದು ಬಂದ ಅವನ ಭಕ್ತರು, ವಾಪಸು ಬಂದ ಮೇಲೆ ತಿಮ್ಮಪ್ಪನ ಫೋಟೋವನ್ನು ಅಲಂಕರಿಸಿ, ಪೂಜೆ ಸಲ್ಲಿಸಿ ಶಕ್ತಾನುಸಾರ ಬಂಧುಗಳಿಗೆ ಪ್ರಸಾದ ವ್ಯವಸ್ಥೆಮಾಡಿಸುವರು. ಕೆಲವು ಗ್ರಾಮಗಳಲ್ಲಿ ಆಚರಿಸಲಾಗುವ ಭೂತಸೇವೆ, ಮಣೆ ಆಡುವುದನ್ನೇ ಹರಿಸೇವೆ ಎಂದು ಕರೆಯುತ್ತಾರೆ.[೨೭] ಆದರೆ ತಾಲೂಕಿನ ಕುಂಬಳೂರಿನಲ್ಲಿ ಆಂಜನೇಯ ರಥೋತ್ಸವ ಸಂದರ್ಭದಲ್ಲಿ ಈ ಸೇವೆಯನ್ನು ನಡೆಸಲಾಗುತ್ತದೆ. ಈ ಸೇವೆಗಾಗಿ ಮಡಿಯಿಂದ ಅಕ್ಕಿಹುಗ್ಗಿ ಮಾಡಿ ಭೂತ ಸೇವೆಯಲ್ಲಿ ಪಾಲ್ಗೊಂಡ ದಾಸಪ್ಪಗಳಿಗೆ ಎಡೆ ಹಾಕಿ ನಂತರ ಉಳಿದದ್ದನ್ನು ಇದ್ದಂತಹ ಜನರಿಗೆ ಪ್ರಸಾದ ರೂಪದಲ್ಲಿ ಹಂಚಲಾಗುತ್ತದೆ.[೨೮]

ಹರಿಹರದ ಸತ್ಯಮ್ಮ: ತುಂಗಭದ್ರಾ ನದಿಯಲ್ಲಿ (ಹರಿಹರದ ಹತ್ತಿರ) ಸ್ನಾನ ಮಾಡುತ್ತಿದ್ದ ಬ್ರಾಹ್ಮಣನೊಬ್ಬನಿಗೆ ಭಾರತೀಯ ಕುಸುರಿ ಕಲೆಯ ಮುದ್ದಾದ ಪ್ರತಿಯೊಂದು ಸಿಕ್ಕಿತು.[೭೯] ಅದನ್ನು ಮೊದ ಮೊದಲು ಅಷ್ಟಾಗಿ ಗಮನಿಸದೆ ಆಟಿಕೆಯಂತೆ ಕಂಡಿದ್ದರಿಂದ ಆತ ಅನೇಕ ಸಂಕಷ್ಟಗಳಿಗೆ ಗುರಿಯಾಗಿ ಆ ಪ್ರತಿಮೆಯನ್ನು ತನ್ನ ಮನೆಯ ಅಂಗಳದಲ್ಲಿದ್ದ ಮರದ ಪೊಟರೆಗೆ ತುರುಕಿದ. ಅಲ್ಲಿ ಆ ಪ್ರತಿಮೆಯನ್ನು 'ಸತ್ಯಮ್ಮ' ಎಂದು ಪೂಜಿಸುತ್ತಿರಲಾಗಿ ಮುಂದೆ ಅದೇ ಪ್ರತಿಮೆ ಕ್ರಿಸ್ತನ ಸಿಪಾಯಿಯೊಬ್ಬನ ಮುಖೇನ ಕ್ರೈಸ್ತನ ಮಾತೆಯಾದ ಮರಿಯಮ್ಮಳ ಪ್ರತಿಮೆ ಎಂದು ಆತನಿಗೆ ತಿಳಿದು ಬಂದಿತು.[೮೦] ಪ್ರೊಟೆಸ್ಟಂಟ್ ಮತದ ಕಲೆಕ್ಟರ್‌ನೊಬ್ಬನ ಅಡುಗೆಯ ಆಳು ಕೆಥೋಲಿಕ್ ಮತಕ್ಕೆ ಸೇರಿದವನು. ಅವನಿಗೆ ಸತ್ಯಮ್ಮ ಕನಸಿನಲ್ಲಿ ಕಾಣಿಸಿಕೊಂಡು, ತಾನು ಅದೇ ಊರಿಲ್ಲಿ ಉಳಿಯುವುದಾಗಿ ಹೇಳಿದಳು. ಆಕೆಯ ಇಚ್ಛಾನುಸಾರ ಆ ಕ್ಯಾಥೋಲಿಕ್ ಅಡಿಗೆಯವನು ಅಲ್ಲೇ ಒಂದು ಗುಡಿಯನ್ನು ಕಟ್ಟಿ ಆ ಪ್ರತಿಮೆಯನ್ನು ಪ್ರತಿಷ್ಠಾಪಿಸಿದನು. ಮುಂದೆ ಆ ಬ್ರಾಹ್ಮಣ ಕ್ರೈಸ್ತ ಧರ್ಮಕ್ಕೆ ಸೇರಿ, ಕ್ರೈಸ್ತ ಧರ್ಮದವನಾಗಿಯೇ ಬದುಕಿ, ಅಲ್ಲಿಯೇ ಸತ್ತು ಸಮಾಧಿಯಾದನು.[೮೧] ಆ ಸಮಾಧಿ ಸ್ಥಳದಲ್ಲಿ ದೇವಾಲಯವನ್ನು ಕಟ್ಟಿ ಸತ್ಯಮ್ಮಳ ಪ್ರತಿಮೆಯನ್ನದರಲ್ಲಿಟ್ಟು, ಅದನ್ನು 'ಆರೋಗ್ಯ ಮಾತೆ' ಎಂದು ಮರುನಾಮಕರಣ ಮಾಡಿದರು.[೮೨] ಸ್ಥಳೀಯ ಆರೋಗ್ಯ ಮಾತೆ 'ಮರಿಯಮ್ಮ' ಬೇರೆಯಲ್ಲ 'ಸತ್ಯಮ್ಮ' ಬೇರೆಯಲ್ಲ ಇಬ್ಬರೂ ಒಂದೇ ಎನ್ನುತ್ತಾರೆ.

ಹೊಳೆ ಪೂಜೆ: ಗ್ರಾಮದ ದೇವತೆಯನ್ನು ಅಲಂಕರಿಸಿದ ಪಲ್ಲಕ್ಕಿಯಲ್ಲಿಟ್ಟುಕೊಂಡು ಹತ್ತಿರದ ಹೊಳೆಗೆ ಹೋಗಿ ಗಂಗೆಯನ್ನು ಪೂಜಿಸಿ ಬರುವುದಕ್ಕೆ ಹೊಳೆ ಪೂಜೆ ಎಂದು ಕರೆಯುತ್ತಾರೆ. ಹೊಳೆ ಇಲ್ಲ ದಿದ್ದಲ್ಲಿ ಕೆರೆ, ಬಾವಿಯು ಈ ಆಚರಣೆಗೆ ಆಸರೆಯಾಗುತ್ತವೆ. ಅಲ್ಲಿ ವಿಗ್ರಹವನ್ನು ಶುಚಿಗೊಳಿಸುತ್ತಾರೆ. ಇದನ್ನು ಪುಣ್ಯೋಜನ, ಪುಣ್ಯಾಹ[೮೩] ಎಂದೂ ಕರೆಯುವರು. ಶ್ರಾವಣ ಪಂಚಮಿಯಂದು ತಾಲೂಕಿನ ಕೊಕ್ಕನೂರು, ನಂದಿಗುದಿ, ಹಿಂಡಸ್ಗಟ್ಟ, ಹಳ್ಳಿಹಾಳು, ಕೆ.ಎಸ್.ಹಳ್ಳಿ ವಾಸನ, ಗೋನಾಳು[೮೪] ದೇವರುಗಳು ನಂದಿಗುಡಿ ಹತ್ತಿರದ ತುಂಗಾಭದ್ರಾ ಹೊಳೆಗೆ ಹೋಗಿ ಗಂಗೆಯನ್ನು ಪೂಜಿಸುವ ಪದ್ಧತಿ ಪ್ರಚಲಿತದಲ್ಲಿದೆ.

ಮೇಲಿನ ಎಲ್ಲಾ ಧಾರ್ಮಿಕ ಆಚರಣೆಗಳನ್ನು ತಾಲೂಕಿನಾದ್ಯಂತ ಆಚರಿಸುತ್ತಿರುವುದು ಮೂಢನಂಬಿಕೆ ಎನಿಸಿದರೂ ಸೂಕ್ಷ್ಮವಾಗಿ ಅವಲೋಕಿಸಿದರೆ ಇತಿಹಾಸದ ಜಾಡು, ವೈಜ್ಞಾನಿಕ ವಿಶಿಷ್ಠತೆ ಹಾಗೂ ಬದುಕಿನ ಸತ್ಯತೆಯನ್ನು ಗುರುತಿಸಬಹುದು ಜಾತ್ರೆ, ಉತ್ಸವ, ಹಬ್ಬ ಹರಿದಿನಗಳಲ್ಲಿ ಗ್ರಾಮದ ಜನತೆಯಲ್ಲಿ ಸಂಭ್ರಮ, ನಲಿವು, ಸಂತೋಷ ಹುರುಪುಗಳನ್ನು ಕಾಣುತ್ತೇವೆ. ನಿತ್ಯಬದುಕಿನ ಜಂಜಾಟ, ಬವಣೆ, ಬೇಗೆಗಳನ್ನು ಬದಿಗಿಟ್ಟು ಸಂಭ್ರಮ ಪಡುವುದು ಅದರ ವೈಶಿಷ್ಟ್ಯವಾಗಿದೆ ತಾಲೂಕಿನ ಕೆಲ ಆಚರಣೆಗಳು ದೇವರುಗಳ ನೆಪದಲ್ಲಿ ಬೇರೆ ಬೇರೆ ಗ್ರಾಮದ ಜನರು ಒಂದೆಡೆ ಸೇರಿ ನಲಿಯುವುದನ್ನು ಕಾಣಬಹುದು.

ಕೊನೆ ಟಿಪ್ಪಣಿಗಳು

೧) ಮಂಜುನಾಥ ಬೇವಿನಕಟ್ಟಿ, ೨೦೦೭, ಕನ್ನಡ ಜನಪದ ನಂಬಿಕೆಗಳು, ಪು.೧೩೨

೨) ಅದೇ, ಪು.೧೩೨

೩) ಅದೇ, ಪು.೧೩೨

೪) ಸಂತೋಷ ಚೊಕ್ಕಾಡಿ, ೨೦೦೮, ಕೃಷಿ ನಂಬಿಕೆಗಳು, ಪು. ೩೯

೫) ರಾಜೇದ್ರ ಡಿ.ಕೆ., ೧೯೯೮, ಜನಪದ ಸಮನ್ವಯ, ಪು. ೨೮

೬) Herskovits, M.J., 2005, culturl Anthropology, P.223

೭) ಸಿದ್ದಲಿಂಗಯ್ಯ, ೧೯೯೭, ಗ್ರಾಮದೇವತೆಗಳು, ಪು.೭೧

೮) ಮಂಜುನಾಥ ಬೇವಿನಕಟ್ಟಿ, ೨೦೦೭, ಪೂರ್ವೋಕ್ತ, ಪು. ೧೪೦

೯) ಚನ್ನಣ್ಣ ವಾಲಿಕಾರ, ೨೦೦೯, ಜಾತ್ರೆಗಳ ಪೌರಾಣಿಕ ಹಿನ್ನೆಲೆ, ಪು. ೧೭೭

೧೦) ಎ.ಕ.ಸಂ,೧೧, ಶಾ,ಸಂ, ೨೨, ದಾವಣಗೆರೆ

೧೧) ಕಲಬುರ್ಗಿ ಎಂ.ಎಂ., ೧೯೯೪, ಕರ್ನಾಟಕದ ಕೈಫಿಯತ್ತುಗಳು, ಪು.೬೭

೧೨) ಅದೇ, ಪು.೬೭

೧೩) ಅದೇ ,ಪು.೯೬

೧೪) ಅದೇ, ಪು. ೩-೯೬

೧೫) ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕೊಮಾರನಹಳ್ಳಿ ರಂಗನಾಥ ದೇವಾಲಯದ ಅರ್ಚಕರು ಹೇಳಿದ್ದು.

೧೬) ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು, ಸಂಪುಟ -೧, ೨೦೦೨, ಪು.೧೧೭೬

೧೭) A Knnada- English Dictionary – Kittle, PP.295

೧೮) ಪುರುಷೊತ್ತಮ ಬಿಳಿಮಲೆ, ೨೦೦೨, ಐತಿಹ್ಯಗಳು, ಸುವರ್ಣ ಜಾನಪದ ಲೇಖನಗಳು, ವೀರಣ್ಣ ದಂಡೆ, ಶ್ರೀಪಾದಶೆಟ್ಟಿ (ಸಂ.), ಪು.೪೩

೧೯) ಮಹಾದೇವ ಸಿ., ಚಿನ್ನಸ್ವಾಮಿ ಸೋಸಲೆ ಎಸ್., (ಸಂ.), ೨೦೦೬, ಹಂಪಿ: ಅಂದು ಇಂದು, ಚಲುವರಾಜು, ಹಂಪಿ : ಮೌಖಿಕ ಚರಿತ್ರೆ, ಪು. ೨೯

೨೦) ಕೊಟ್ರೇಶ್ ನಾ ಉತ್ತಂಗಿ, ೨೦೧೩, ಹರಿಹರದೆಳೆಗಳು, ಪು. ೧೧೫

೨೧) ಅದೇ, ಪು. ೧೦೮

೨೨) ಅದೇ, ಪು. ೨೨೪

೨೩) ಅದೇ, ಪು. ೨೧೫

೨೪) ಅದೇ, ಪು. ೨೫೫

೨೫) ಅದೇ, ಪು. ೮೫

೨೬) ಅದೇ, ಪು. ೮೦

೨೭) ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗಮನಿಸಲಾಗಿದೆ.

೨೮) ಶ್ರೀಕಾಂತತಾಂಬೆ, ೨೦೦೧, ಕೊಕ್ಕನೂರು ಶ್ರೀ ಆಂಜನೇಯ ಸ್ವಾಮಿ ಮಹಾತ್ಮೆ,ಪು.೨೧

೨೯) ಅದೇ, ಪು. ೨೧

೩೦) ಅದೇ, ಪು. ೨೨

೩೧) ಅದೇ, ಪು. ೨೨

೩೨) ಅದೇ, ಪು. ೨೨

೩೩) ಶಿವಕುಮಾರ್ ಸಿ.ಎಸ್., (ಸಂ.), ೧೯೯೮, ಕರ್ನಾಟಕದ ಜಾತ್ರೆಗಳು, ಪು. ೨೩೮

೩೪) ಅದೇ, ಪು. ೨೪೦

೩೫) ಭಾರದ್ವಜ ಡಿ.ಕೆ., ೨೦೧೪, Standard English- English- kannada Dictionary, P.336

೩೬) ಅಂಬಳಿಕೆ ಹಿರಿಯಣ್ಣ, ೧೯೯೯, ಮಲೆನಾಡ ವೈಷ್ಣವ ಒಕ್ಕಲಿಗರ ಸಂಸ್ಕೃತಿ, ಪು. ೧೯೬

೩೭) ಪಾಂಡುರಂಗ ಡಿ.ಆರ್., ೨೦೦೯, ಕರ್ನಾಟಕ ಹಬ್ಬಗಳು, ಪು. ೪

೩೮) ದುಂಡ್ಯಪ್ಪ ಹಿ.ಗೂ., ೧೯೯೪, ೬೬ ಹಳ್ಳಿಯ ಒಡತಿ ಊರಮ್ಮನ ಚರಿತೆ, ಪು.೨೭

೩೯) ಅದೇ, ಪು. ೨೮

೪೦) ಅದೇ ,ಪು. ೨೯

೪೧) ಶಿವಕುಮಾರ್ ಸಿ.ಎಸ್., (ಸಂ.), ೧೯೮೮, ಪೂರ್ವೋಕ್ತ, ಪು. ೧೩೦

೪೨) ಮಂಜುನಾಥ ಬೇವಿನಕಟ್ಟಿ, ೨೦೦೯, ಕರ್ನಾಟಕ ಜನಪದ ಸ್ತ್ರೀ ದೈವಗಳ ಸಾಂಸ್ಕೃತಿಕ ಪದಕೋಶ, ಪು. ೮೧

೪೩) ದುಂಡ್ಯಪ್ಪ ಹಿ.ಗೂ., ೧೯೯೪, ಪೂರ್ವೋಕ್ತ, ಪು. ೩೪

೪೪) ಅದೇ, ಪು. ೩೫

೪೫) ಮಂಜುನಾಥ ಬೇವಿನಕಟ್ಟಿ, ೨೦೦೯, ಪೂರ್ವೋಕ್ತ, ಪು. ೮೭

೪೬) ಮುಂಡ್ಯಪ್ಪ ಹಿ.ಗೂ., ೧೯೯೪, ಪೂರ್ವೋಕ್ತ, ಪು. ೩೭

೪೭) ಅದೇ, ಪು.೩೭

೪೮) ಅದೇ, ಪು. ೩೭

೪೯) ಅದೇ, ಪು. ೩೮

೫೦) ಅದೇ, ಪು. ೪೧

೫೧) ಅದೇ, ಪು. ೫೧

೫೨) ಬುಳ್ಳಾಪುರ ಗ್ರಾಮದ ಮುನಿಯಪ್ಪ ಅವರಿಂದ ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಮಾಹಿತಿ.

೫೩) ದುಡ್ಯಪ್ಪ ಹಿ.ಗೂ., ೧೯೯೪, ಪೂರ್ವೋಕ್ತ, ಪು. ೪೩

೫೪) ಮಂಜುನಾಥ ಬೇವಿನಕಟ್ಟಿ, ೨೦೦೯, ಪೂರ್ವೋಕ್ತ, ಪು. ೬೪

೫೫) ಎ.ಕ.,ಸಂ,೧೧, ಶಾ.ಸಂ,೮೩, ದಾವಣಗೆರೆ

೫೬) ಇ.ದ.,ಸಂ, ೧೧, ೧೯೯೬, ಚಂದನಾ ವೈ. ನೀಲಪ್ಪ, ಹರಿಹರದ ಕಾರಣಿಕ, ಪು.೨೭೬

೫೭) ಅದೇ, ಪು. ೨೨೭

೫೮) ಅದೇ, ಪು. ೨೭೯

೫೯) ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೫, ಭಾವೈಕ್ಯ, ವಾರ್ಷಿಕ ಸಂಭ್ರಮ, ಪು. ೭೬

೬೦) ಸಿದ್ಧನಗೌಡ, ಜೆ.ಬಿ., ೨೦೦೭, ತುಂಗಭದ್ರಾ ನದಿ ಪರಿಸರದ ಧಾರ್ಮಿಕ ಕ್ಷೇತ್ರಗಳು [ಅಪ್ರಕಟಿತ ಎಂ.ಫಿಲ್. ನಿಬಂದ], ಪು. ೨೩

೬೧) ಅದೇ, ಪು. ೨೩

೬೨) ಶ್ರೀಕಾಂತತಾಂಬೆ, ೨೦೦೧, ಪೂರ್ವೋಕ್ತ, ಪು, ೧೨ ಮತ್ತು ಕೊಟ್ರೇಶ್ ನಾ ಉತ್ತಂಗಿ, ೨೦೧೩, ಪೂರ್ವೋಕ್ತ, ಪು. ೫೫೫

೬೩) ದ್ರುವರಾಜ ನಾ. ಗದಗಕರ, ೧೯೯೯, ದೇಗುಲ ರಥಶಿಲ್ಪ, ಪು. ೨೩

೬೪) ಕೊಟ್ರೇಶ್ ನಾ. ಉತ್ತಂಗಿ, ೨೦೧೩, ಪೂರ್ವೋಕ್ತ, ಪು.೫೩೩

೬೫) ಲಿಂಗದಹಳ್ಳಿ ಹಾಲಪ್ಪ, ೨೦೧೪, ಹಾಲುಮತ ಸಾಂಸ್ಕೃತಿಕ ಪದಕೋಶ, ಪು.೨೩

೬೬) ಕೊಟ್ರೇಶ್ ನಾ. ಉತ್ತಂಗಿ, ೨೦೧೩, ಪೂರ್ವೋಕ್ತ, ಪು.೫೩೫

೬೭) ಅದೇ, ಪು. ೫೩೫

೬೮) ಇ.ದ.,ಸಂ,೧೧, ೧೯೯೬, ಪೂರ್ವೋಕ್ತ, ಪು.೨೭೯

೬೯) ಕೊಟ್ರೇಶ್ ನಾ. ಉತ್ತಂಗಿ, ೨೦೧೩, ಪೂರ್ವೋಕ್ತ, ಪು. ೫೩೯

೭೦) ಅದೇ, ಪು. ೫೪೦

೭೧) ಅದೇ, ಪು. ೫೪೨

೭೨) ಅದೇ, ಪು. ೫೪೩

೭೩) ಮಂಜುನಾಥ ಬೇವಿನಕಟ್ಟಿ, ೨೦೦೯, ಪೂರ್ವೋಕ್ತ, ಪು. ೬೪

೭೪) ಬುಳ್ಳಾಪುರದ ಮುನಿಯಪ್ಪ ಅವರಿಂದ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿದು ಬಂದ ಮಾಹಿತಿ.

೭೫) ಲಿಂಗದಹಳ್ಳಿ ಹಾಲಪ್ಪ, ೨೦೧೪, ಪೂರ್ವೋಕ್ತ, ಪು. ೧೮೭

೭೬) ಹಾದಿಮನಿ ಈಶ್ವರಪ್ಪ ಅರಸೀಕೆರೆ ಇವರಿಂದ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ತಿಳಿದು ಬಂದ ಮಾಹಿತಿ.

೭೭) ಕೊಟ್ರೇಶ್ ನಾ. ಉತ್ತಂಗಿ, ೨೦೧೩, ಪೂರ್ವೋಕ್ತ, ಪು. ೫೪೬

೭೮) ಅದೇ, ಪು. ೫೪೬

೭೯) ಮಂಜುನಾಥ ಬೇವಿನಕಟ್ಟಿ, ೨೦೦೯, ಪೂರ್ವೋಕ್ತ, ಪು. ೨೦೫

೮೦) ಅದೇ, ಪು. ೨೦೫

೮೧) ಅದೇ, ಪು. ೨೦೫

೮೨) ಅದೇ, ಪು. ೨೦೫

೮೩) ಅದೇ, ಪು. ೨೧೮

೮೪) ಕೊಟ್ರೇಶ್ ನಾ. ಉತ್ತಂಗಿ, ೨೦೧೩, ಪೂರ್ವೋಕ್ತ, ಪು. ೫೪೬

ಅಧ್ಯಾಯ ಆರು

ಸಮಾರೋಪ

ಅಧ್ಯಾಯ ಆರು

ಸಮಾರೋಪ

"ಹರಿಹರ ತಾಲೂಕಿನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ" ಈ ಮಹಾಪ್ರಬಂಧ ಹರಿಹರ ತಾಲೂಕಿನ ಪ್ರಾಗಿತಿಹಾಸ ಕಾಲದ ಕುರುಹುಗಳು, ಶಾಸನಗಳು, ವಾಸ್ತುಶಿಲ್ಪ ಮೂರ್ತಿಶಿಲ್ಪ ಮತ್ತು ಪ್ರಾಚೀನ ಅಂಶಗಳನ್ನು ಉಳಿಸಿಕೊಂಡಂತಹ ಸಾಂಸ್ಕೃತಿಕ ಹೆಜ್ಜೆ ಗುರುತಿರುವ ನಂಬಿಕೆ ಆಚರಣೆಗಳ ಸ್ಥೂಲ ಅಧ್ಯಯನದ ಫಲವಾಗಿದೆ. ಈ ಮಹಾಪ್ರಬಂಧದಲ್ಲಿ ಚರ್ಚಿಸಲಾದ ವಿಷಯಗಳು ಒಟ್ಟಾರೆಯಾಗಿ ಹರಿಹರ ತಾಲೂಕಿನ ಸಮಗ್ರ ಸಾಂಸ್ಕೃತಿಕ ಹಾಗೂ ಸಾಮಾಜಿಕ ದಾಖಲೆಗಳನ್ನು ನೀಡುತ್ತದೆ.

ಹರಿಹರ, ನಾಡಿನ ನಾಲ್ಕು ದಿಕ್ಕುಗಳನ್ನು ಸಂಧಿಸುವ ಕರ್ನಾಟಕದ ಮಧ್ಯಭಾಗದ ಕೇಂದ್ರ ಬಿಂದುವಾಗಿದೆ. ಇನ್ನಿತರೆ ಭಾಗಗಳಂತೆಯೇ ಪ್ರಾಚೀನ ಕಾಲದಿಂದಲೂ ತನ್ನದೇ ಆದ ಇತಿಹಾಸವನ್ನು ಈ ಸ್ಥಳವು ಹೊಂದಿದೆ. ಇತಿಹಾಸದ ಆಯಾಮವಾಗಿ ಹಲವಾರು ಕಾಲಘಟ್ಟಗಳಲ್ಲಿ ವಿಫುಲವಾದ ಸಂಸ್ಕೃತಿಯ ಬೆಳವಣಿಗೆ ಹೊಂದಿದ್ದು ಈ ಸಂಸ್ಕೃತಿಯ ಅಂಗವಾಗಿಯೇ ಪ್ರಾಗಿತಿಹಾಸ ಕಾಲದ ಜನವಸತಿಯ ನೆಲೆಗಳು ಕಬ್ಬಿಣದ ಬೃಹತ್ ಶಿಲಾ ಸಂಸ್ಕೃತಿಯ ನೆಲೆಗಳು ಇಲ್ಲಿ ಕಂಡು ಬರುತ್ತವೆ. ಪ್ರಸ್ತುತ ಭೌಗೋಳಿಕವಾಗಿ ಹರಿಹರ ತಾಲೂಕು ವ್ಯಾಪ್ತಿಯನ್ನು ಈಗ ಪಡೆದಿದ್ದರೂ ಪ್ರಾಚೀನ ಕಾಲದಲ್ಲಿ ಕದಂಬಳಿಗೆ ಹಾಗೂ ನೊಳಂಬವಾಡಿಯಂತಹ ದೊಡ್ಡ ದೊಡ್ಡ ಪ್ರಾಚೀನ ಆಡಳಿತ ವಿಭಾಗಗಳ ಭಾಗವಾಗಿದ್ದಿತು. ಹೀಗಾಗಿ ನಾವು ಹರಿಹರ ತಾಲೂಕಿನ ಸಾಂಸ್ಕೃತಿಕ ಅಧ್ಯಯನವನ್ನು ವಿಭಿನ್ನ ಕಾಲಘಟ್ಟಗಳ ನೆಲೆಗಳಾದ ಪ್ರಾಗಿತಿಹಾಸ ಕಾಲದ ಕುರುಹುಗಳಿಂದ ವಿಭಿನ್ನ ಕಾಲಘಟ್ಟಗಳಲ್ಲಿ ಆಳಿದ ರಾಜರ ಮಹಾರಾಜರ ಕಾಲದಲ್ಲಿ ಹಾಕಿಸಿದ ಶಾಸನಗಳ ಉಲ್ಲೇಖಗಳಿಂದ ಇಲ್ಲಿನ ಆಚಾರ ವಿಚಾರ ಧಾರ್ಮಿಕ ನಂಬಿಕೆಗಳಿಂದ ಅಭ್ಯಾಸ ಮಾಡಬೇಕಾಗುತ್ತದೆ.

ಒಂದು ಪ್ರದೇಶದ ಉನ್ನತಿಗೆ ಅಲ್ಲಿನ ಭೌಗೋಳಿಕ ಪರಿಸರ ಕೂಡ ಬಹುಮುಖ್ಯವಾಗುತ್ತದೆ. ಮಾನವನ ಅಲೆಮಾರಿ ಜೀವನದಿಂದ ಹಿಡಿದು ಕ್ರಮೇಣ ಒಂದು ಸುಸಂಬದ್ಧವಾದ ಸಾಮಾಜಿಕ ವ್ಯವಸ್ಥೆ ನಿರ್ಮಾಣವಾಗುವಲ್ಲಿ ಅಲ್ಲಿನ ಪರಿಸರ ಬಹಳ ಮುಖ್ಯ ಭೌಗೋಳಿಕವಾಗಿ ಸಮೃದ್ಧಿಯನ್ನು

ಪಡೆದಿದ್ದಂತಹ ಹರಿಹರ ಪರಿಸರವು ಬೆಟ್ಟ ಗುಡ್ಡ, ನೀರು ಮೊದಲಾದ ನೈಸರ್ಗಿಕ ಸಂಪತ್ತು ಮಾನವನು ನಾಗರಿಕನಾಗಲು ಕಾರಣವಾಯಿತು. ಪ್ರಾಗಿತಿಹಾಸ ಕಾಲದಿಂದ ಹಿಡಿದು ಬೃಹತ್‌ಶಿಲಾಯುಗದವರೆಗಿನ ಅನೇಕ ಅವಶೇಷಗಳು ದೊರೆತಿರುವುದರಿಂದ ಆದಿ ಮಾನವನ ಬಗ್ಗೆ ತಿಳಿಯಲು ಸಹಾಯಕಾರಿಯಾಗಿದೆ. ಇಲ್ಲಿನ ಪ್ರಾಚೀನ ಜನಸಮುದಾಯದ ಆಚರಣೆಗಳನ್ನು ಅವರು ನಿರ್ಮಿಸಿದ ಗೋರಿಗಳ ಮೂಲಕ ತಿಳಿಯಬಹುದಾಗಿದೆ. ಕಬ್ಬಿಣದ ಬೃಹತ್‌ಶಿಲಾಸಂಸ್ಕೃತಿ ಹಂತದಲ್ಲಿ ಕಬ್ಬಿಣದ ಉತ್ಪಾದನೆ ಕಂಡು ಕೊಂಡಿದ್ದಲ್ಲದೆ ಸತ್ತವರಿಗಾಗಿ ವಿಶಿಷ್ಟ ಬಗೆಯ ಗೋರಿಗಳ ನಿರ್ಮಾಣವನ್ನು ಮಾಡಿದ್ದಾನೆ. ಇಲ್ಲಿ ಅವರು ಬಳಸಿದ ತಂತ್ರ ಮತ್ತು ಶವಸಂಸ್ಕಾರ ಪದ್ಧತಿಗಳು ಅನೇಕ ಬಗೆಯ ನಂಬಿಕೆ ಆಚರಣೆಗಳನ್ನು ಇಟ್ಟುಕೊಂಡಿದ್ದರು ಎಂಬ ಅಂಶ ಕೊಮಾರನಹಳ್ಳಿಯಲ್ಲಿ ನಡೆದ ಉತ್ಖನನದಲ್ಲಿ ದೊರೆತ ಅವಶೇಷಗಳಿಂದ ತಿಳಿಯುತ್ತದೆ.

ಇತಿಹಾಸ ರಚಿಸಲು ಇರುವ ಐತಿಹಾಸಿಕ ಆಕರಗಳಲ್ಲಿ ಶಾಸನಗಳು ಬಹುಮುಖ್ಯ ಹರಿಹರ ತಾಲೂಕಿನ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಅಧ್ಯಯನಕ್ಕೆ ಅಮೂಲ್ಯವಾದ ಸಂಪತ್ತು ಶಾಸನಗಳು ಈ ಶಾಸನಗಳಲ್ಲಿ ಸ್ಥಳನಾಮಗಳು, ರಾಜಕೀಯ, ಆಡಳಿತ, ಆರ್ಥಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಅಂಶಗಳು ಅಂದಿನ ಸಮಾಜದ ಆಧಾರಿತವಾಗಿ ದಾಖಲಾಗಿರುತ್ತದೆ. ಮುಖ್ಯವಾಗಿ ಇತಿಹಾಸವನ್ನು ಅಧ್ಯಯನ ಮಾಡುವಾಗ ಅಲ್ಲಿನ ಸ್ಥಳನಾಮ ಕುರಿತು ವಿವೇಚಿಸುವುದು ಅತ್ಯವಶ್ಯಕ ಹರಿಹರ ಸ್ಥಳಕ್ಕೆ ಸಂಬಂಧಿಸಿದಂತೆ ಕೂಡಲೂರು, ಗುಹಾರಣ್ಯ, ಶಂಕರನಾರಾಯಣಪುರ, ಹರಿಹರ ಎಂದೆಲ್ಲಾ ಉಲ್ಲೇಖಗಳಿವೆ. ಧಾರ್ಮಿಕವಾಗಿ ಈ ಗ್ರಾಮದ ಸ್ಥಳನಾಮ ಬಂದಿರುವುದನ್ನು ಶಾಸನಗಳ ಹಿನ್ನೆಲೆಯಲ್ಲಿ ಕಟ್ಟಿ ಕೊಡಬಹುದು ಆದರೆ ಕೂಡಲೂರು, ಗುಹಾರಣ್ಯ ಎಂಬ ಗ್ರಾಮ ವಿವೇಚನೆಯ ಕಲ್ಪನೆ ಇಲ್ಲಿ ಆಗುವ ನದಿಗಳ ಸಂಗಮ, ಆರಂಭದಲ್ಲಿ ಇದ್ದಂತಹ ಅರಣ್ಯದಿಂದ ನಮಗೆ ತಿಳಿಯುತ್ತದೆ ಈ ತರಹದ ಅಂಶಗಳಿಗೆ ಪುರಾಣಗಳು ಸಾಕ್ಷಿಯಾಗುತ್ತವೆ.

ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಗಳಿಗೆ ಸಂಬಂಧಿಸಿದಂತೆ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ವಾಸ್ತುವಿನ್ಯಾಸವನ್ನು ಗಮನಿಸಲಾಗಿದೆ. ಈ ಪ್ರದೇಶದಲ್ಲಿ ಹಲವಾರು ದೇವಾಲಯಗಳು ಮೂರ್ತಿಶಿಲ್ಪಗಳು ಕಂಡುಬಂದರು ಬೆರಳಣಿಕೆಯಷ್ಟು ಮಾತ್ರ ಕಲಾಶ್ರೇಷ್ಠತೆಗೆ ಹೆಸರಾಗಿವೆ. ಹರಿಹರ, ಸಾರಥಿ, ಚಿಕ್ಕಬಿದರೆ, ಜಿಗಳಿ ದೇವಾಲಯಗಳು ವಾಸ್ತು ಮಾದರಿಗೆ ಹೆಸರಾದ ದೇವಾಲಯಗಳಾಗಿ ಸಾಂಸ್ಕೃತಿಕ ಆಚರಣಾ ನೆಲೆಗಳ ಕೇಂದ್ರಗಳೆನಿಸಿಕೊಂಡಿವೆ. ಬಹುಸಂಖ್ಯೆಯ ದೇವಾಲಯಗಳು ಪೂಜೆ ಪುನಸ್ಕಾರ, ಜೀರ್ಣೋದ್ಧಾರಗಳಿಂದ ಜನ ಸಾಮಾನ್ಯರಿಂದಲೂ ನಿರ್ಲಕ್ಷ್ಯಕ್ಕೊಳಗಾಗಿವೆ. ಕೇವಲ ಐತಿಹಾಸಿಕ ಸ್ಮಾರಕವಾಗಿಯೇ ಉಳಿದಿವೆ. ಮುಖ್ಯವಾಗಿ ಶೈವದೇವಾಲಯಗಳೇ ಈ ಸ್ಥಿತಿಯನ್ನು ತಲುಪಿದ್ದು ಅವುಗಳಲ್ಲಿ ದೇವರಬೆಳಕೆರೆಯ ಕಲ್ಲೇಶ್ವರ, ಗಂಗನರಸಿಯ ಕಲ್ಲೇಶ್ವರ, ಕೊಕ್ಕನೂರಿನ ಈಶ್ವರ, ರಾಜನಹಳ್ಳಿ ಕಲ್ಲೇಶ್ವರ, ದೀಟೂರು ಕಲ್ಲೇಶ್ವರ, ಕೊಮಾರನಹಳ್ಳಿ ಬಸವೇಶ್ವರ, ಎಲವಟ್ಟಿ ಕಲ್ಲೇಶ್ವರ ದೇವಾಲಯಗಳು ಮುಖ್ಯವಾಗಿವೆ. ಈ ಪ್ರದೇಶದಲ್ಲಿ ಇತಿಹಾಸಕ್ಕಿಂತ ಪುರಾಣಕ್ಕೆ ಹೆಚ್ಚಿನ ಮಹತ್ವವಿದೆಯೇ ವರತು ಪುರಾಣ ಕೇಂದ್ರಿತ ವಸ್ತುವಾದ ಸ್ಮಾರಕಗಳ ಕುರಿತಾದ ತಿಳುವಳಿಕೆ

ಇಲ್ಲ ಜೊತೆಗೆ ತಾಲೂಕಿನ ಕೆಲವು ಗ್ರಾಮಗಳಲ್ಲಿ ಪ್ರಾಚೀನ ದೇವಾಲಯಗಳನ್ನು ಜೀರ್ಣೋದ್ಧಾರಗೊಳಿಸಿ ಅಲ್ಲಿ ಬಸವೇಶ್ವರ, ಈಶ್ವರ ಮುಂತಾದ ದೇವಾಲಯಗಳು ನಿರ್ಮಾಣವಾಗಿವೆ. ಇದು ಆರ್ಥಿಕಾಭಿವೃದ್ಧಿ ಹಾಗೂ ಧಾರ್ಮಿಕಾಭಿವೃದ್ಧಿಯ ಉದ್ದೇಶಕ್ಕಾಗಿ ಮಾತ್ರ ಎಂದು ಹೇಳಬಹುದು. ಇನ್ನೂ ಈ ಪರಿಸರದಲ್ಲಿ ಶೈವ, ವೈಷ್ಣವ, ಶಾಕ್ತ ಪಂಥಕ್ಕೆ ಸೇರಿದ ಹಲವಾರು ದೇವಾಲಯಗಳಿವೆ.

ಇಂಥ ದೇವಾಲಯಗಳಿಗೆ ಹೊಂದಿಕೊಂಡಂತೆಯೇ ಶೈವ, ವೈಷ್ಣವ ಹಾಗೂ ಶಾಕ್ತಪಂಥಕ್ಕೆ ಸಂಬಂಧಿಸಿದಂತೆ ಮೂರ್ತಿಶಿಲ್ಪಗಳಿವೆ ವಿಶೇಷವಾಗಿ ದೇವಾಲಯದ ಧಾರ್ಮಿಕ ಪಂಥವನ್ನು ಗುರುತಿಸುವ ಗಜಲಕ್ಷ್ಮೀ ಶಿಲ್ಪಗಳು ಇದ್ದು ಅವುಗಳೊಂದಿಗೆ ಗ್ರಾಮಗಳಲ್ಲಿ ವೀರಗಲ್ಲು, ಮಹಾಸತಿಗಲ್ಲುಗಳಿವೆ. ಮುಖ್ಯವಾಗಿ ಈ ಪರಿಸರದಲ್ಲಿ ಸಪ್ತಮಾತೃಕೆಯರು ಹಾಗೂ ಮಹಿಷಮರ್ದಿನಿ ಶಿಲ್ಪಗಳು ವಿಶೇಷವಾಗಿ ಕಂಡುಬರುತ್ತವೆ ಇದುವರೆಗೂ ತಿಳಿಸಿರುವ ಮೇಲಿನ ಎಲ್ಲಾ ಸ್ಮಾರಕಗಳು ಸಮಾಜದ ಪ್ರಭುತ್ವದ ಸ್ಮಾರಕಗಳಾಗಿ ಮಾತ್ರ ಕಂಡುಬರುತ್ತವೆ ಕೇವಲ ಧಾರ್ಮಿಕ ಪಂಥಗಳನ್ನು ಗುರುತಿಸುವ ಅಂಶಗಳಾಗಿವೆ. ಇವುಗಳಿಂದ ಕೇವಲ ರಾಜಪ್ರಭುತ್ವ ಇತಿಹಾಸ ಮಾತ್ರ ನಮಗೆ ಗೋಚರಿಸುತ್ತದೆ ಜನಸಮುದಾಯಗಳ ಇತಿಹಾಸ ರಚನೆಗೆ ಪೂರಕವಾದ, ಮುಖ್ಯವಾದ ಆಕರಗಳು ಕೂಡ ನಮಗೆ ಇಲ್ಲಿ ದೊರೆತಿವೆ. ವೀರಗಲ್ಲು ಮಾಸ್ತಿಕಲ್ಲು ಇವುಗಳಿಂದ ಅಂದಿನ ಜನಸಾಮಾನ್ಯರ ಇತಿಹಾಸ ರಚಿಸಲು ಸಾಧ್ಯವಾಗುತ್ತದೆ. ಈ ಎರಡು ಸ್ಮಾರಕಗಳು ಮುಖ್ಯವಾದುವು ಅರಸನಿಗಾಗಿ, ಭೂಮಿಗಾಗಿ, ಮೋಕ್ಷ ಪ್ರಾಪ್ತಿಗಾಗಿ ಮರಣವನ್ನಪ್ಪಿದವರ ನೆನಪಿಗಾಗಿ ನಿಲ್ಲಿಸಿದ ಸ್ಮಾರಕಗಳು, ಇಂತಹ ಸ್ಮಾರಕಗಳು ನಾಡಿನ ಪ್ರೇಮ ತ್ಯಾಗದ ಹೆಸರಿನಲ್ಲಿ ನಡೆಯುತ್ತಿದ್ದ ವೀರರ, ವೀರ ವನಿತೆಯರ ಧೈರ್ಯಶಾಲಿಗಳ ಸ್ಮಾರಕಗಳಾಗಿ ಅಧ್ಯಯನಕ್ಕೊಳಗಾಗಿವೆ. ಆದರೆ ಅಂದಿನ ಸಮಾಜದಲ್ಲಿ ಈ ಜನ ಸಮುದಾಯಗಳಿಗಿದ್ದ ಒತ್ತಡ ಶೋಷಣೆಗಳು ಗೌಣಗಳಾಗಿಯೇ ಉಳಿದಿವೆ. ಪತಿಗಾಗಿ ಮಡಿದ ಸತಿಯ ಸ್ಮಾರಕಗಳನ್ನು ಮಾಸ್ತಿಕಲ್ಲು ಎಂದು ಹೆಸರಿಸಲಾಗಿದೆ. ಈ ಸ್ಮಾರಕಗಳು ಪುರುಷ ಪ್ರಧಾನ ಸಮಾಜ ಸ್ತ್ರೀ ಸಮಾಜವನ್ನು ಶೋಷಿಸುತ್ತಿದ್ದವು ಎಂಬುದರ ಆಚೆಗೆ ದೈವ ಕಲ್ಪನೆಯನ್ನು ಮೂಡಿಸಿ ಧಾರ್ಮಿಕವಾಗಿ ತಳಸಮುದಾಯಗಳನ್ನು ಶೋಷಿಸಲ್ಪಡುತ್ತಿದ್ದ ಪ್ರಭುತ್ವ ರಾಜಕಾರಣ ಇದಕ್ಕೆ ನೇರವಾಗಿ ಕಾರಣವಾಗುತ್ತಿದ್ದ ಅಂಶವನ್ನು ಗುರುತಿಸಬಹುದು.

ಹರಿಹರ ಮೂರ್ತಿಶಿಲ್ಪವೇ ಇಲ್ಲಿನ ಪ್ರಾಚೀನ ಶಿಲ್ಪವಾಗಿದೆ ಹರಿಹರ ಮೂರ್ತಿಗೆ ಸಂಬಂಧಿಸಿದಂತೆ ಕ್ರಿಸ್ತ ಶ.ಕ. ಆರಂಭದಿಂದಲೂ ಅದಕ್ಕಿಂತ ಮೊದಲಿನಿಂದಲೂ ಬಹುತೇಕ ಜನಸಾಮಾನ್ಯರು ವಿಷ್ಣು ಅಥವಾ ಶಿವನ ಆರಾಧಕರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ವಿಷ್ಣು ಮತ್ತು ಶಿವನನ್ನು ಏಕೀಭವಿಸಿ ಆರಾಧಿಸುತ್ತಿದ್ದಾರೆ. ಹರಿಹರ ದೇವರು ಇಬ್ಬರೂ ದೇವರುಗಳ ಲಕ್ಷಣಗಳಿರುವ ಮೂರ್ತಿಯನ್ನು ಪೂಜಿಸಲಾಗುತ್ತಿದೆ. ಈ ಎರಡು ದೇವರುಗಳಿಂದ ವೈಷ್ಣವ ಮತ್ತು ಶೈವ ಅಂಶಗಳನ್ನು ಒಂದುಗೂಡಿಸಿ ಎರಡು ಪಂಥಗಳಲ್ಲಿರುವ ಭೇದಭಾವಗಳನ್ನು ಸರಿಪಡಿಸಿದ್ದಾರೆ. ಎಂಬ ಅಂಶ ತಿಳಿದುಬರುತ್ತದೆಯಾದರು ಕೆಲವು ಸಲ ಹರಿಹರದ ಶಾಸನಗಳಲ್ಲಿ ಈ ಮೂರ್ತಿಯನ್ನು ಶಂಕರನಾರಾಯಣ, ಹರಿಹರ, ಹರಿಹರ, ಶಂಕರನಾರಾಯಣ ಎಂಬ ದಾಖಲೆಗಳು ಇಲ್ಲಿನ

ಇತಿಹಾಸದುದ್ದಕ್ಕೂ ಕಂಡು ಬರುತ್ತವೆ. ಅಂದರೆ ಪ್ರಾಚೀನ ಆರಂಭ ಕಾಲದಲ್ಲಿಯೇ ಈ ಎರಡು ಪಂಥಗಳ ಭೇದ ನಿಲ್ಲಿಸಲು ಹುಟ್ಟಿಕೊಂಡಿದ್ದರು ಸಹ ತದ ನಂತರ ಕಾಲದಲ್ಲಿ ಎರಡು ಪಂಥಗಳ ನಡುವೆ ಶಿವನೇ ಹೆಚ್ಚು ವಿಷ್ಣುವೇ ಹೆಚ್ಚು ಎಂದು ಅವರದೇ ದೇವರುಗಳ ಹೆಸರು ಮೊದಲು ಬರಬೇಕು ಎಂದು ನಡೆದ ಒಳಜಗಳಗಳು ಮುಂದುವರೆದಿದ್ದವು ಎಂಬುದನ್ನು ಈ ಮೂರ್ತಿಗೆ ಕರೆದ ಹೆಸರುಗಳಿಂದ ತಿಳಿಯುತ್ತದೆ. ಶಂಕರನಾರಾಯಣ ಎಂಬ ಹೆಸರಿನಲ್ಲಿ ಮೊದಲು ಶಿವನ ಹೆಸರು ನಂತರ ವಿಷ್ಣುವಿನ ಹೆಸರು ಬಂದರೆ ಹರಿಹರ ಹೆಸರಿನಲ್ಲಿ ಮೊದಲು ವಿಷ್ಣುವಿನ ಹೆಸರು ಬರುತ್ತದೆ. ಆದರೂ ಮೂರ್ತಿಗಳಲ್ಲಿ ಸಮಾಗಮವಾಗಿದೆ. ಹರಿಹರರ ಕುರಿತು ಪುರಾಣ ಐತಿಹ್ಯಗಳು, ಶೈವ ಮತ್ತು ವೈಷ್ಣವರ ಸಾಂಕೇತಿಕ ಸಮಾಗಮವನ್ನು ತೋರಿಸಿದೆ ಇದನ್ನ ಒಪ್ಪಿ ನಡೆದ ಸಮಾಜವಿತ್ತೆ? ಇದ್ದಿದ್ದರೆ ಹರಿಹರ ಆರಾಧನೆ ಪ್ರತ್ಯೇಕವಾಗಿಯೇ ಒಂದು ಸಮುದಾಯದ ಹಿಡಿತಕ್ಕೊಳಪಟ್ಟು ಇರುತ್ತಿತ್ತು.

ಹರಿಹರರ ಅಧ್ಯಯನಕ್ಕೆ ಸಂಬಂಧಿಸಿದಂತೆ ಹರಿಹರ ಶಿಲ್ಪಗಳು ಯಾವ ರಾಜರ ಆಳ್ವಿಕೆಯಲ್ಲಿ ಯಾವ ಪ್ರದೇಶದಲ್ಲಿ ಮೊದಲು ಹುಟ್ಟಿಕೊಂಡಿವೆ ಹಾಗೆಯೇ ಯಾವ ಯಾವ ಸ್ಥಳಗಳಿಗೆ ಈ ಸಮ್ಮಿಲನದ ಪಂಥ ವಲಸೆ ಹೋಗಿ ನೆಲೆಸಿದೆ ಎಂಬುದನ್ನು ಗಮನಿಸಬೇಕು. ಇದರಿಂದ ಆಯಾ ಪ್ರದೇಶದಲ್ಲಿದ್ದ ಸಾಮಾಜಿಕ ಹಾಗೂ ಧಾರ್ಮಿಕ ಏರುಪೇರುಗಳನ್ನು ಅರಿಯಬಹುದು. ಮುಖ್ಯವಾಗಿ ಭಾರತದ ಸಂದರ್ಭದಲ್ಲಿ ಕ್ರಿ.ಶ. ಆರಂಭ ಕಾಲಘಟ್ಟದಲ್ಲಿ ಜೈನ, ಬೌದ್ಧ ಧರ್ಮಗಳ ಪ್ರಭಾವದಿಂದಾಗಿಯೇನಾದರೂ ಈ ದೈವಗಳ ಸಮಾಗಮದ ಪರಿಕಲ್ಪನೆಯಾದರೂ ನಡೆಯಿತೆ ಎಂಬುದನ್ನು ಅರಿಯಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ಮಧ್ಯಕೇಂದ್ರ ಬಿಂದುವಾಗಿರುವ ಹರಿಹರ ಬಹಳಮುಖ್ಯವಾದ ಅಧ್ಯಯನ ವಿಷಯವಾಗಿದೆ.

ಸಾಂಸ್ಕೃತಿಕ ಪರಂಪರೆಯ ಹಿನ್ನೆಲೆಯಲ್ಲಿ ಬೆಳೆದಿರುವ ಹರಿಹರ ತಾಲೂಕಿನ ಸಂಪ್ರದಾಯ, ಆಚರಣೆ, ಜಾತ್ರೆ-ಉತ್ಸವಗಳು ಪ್ರಾದೇಶಿಕತೆಗೆ ಅನುಗುಣವಾಗಿ ನಡೆಯುವಂತಹುಗಳಾಗಿವೆ. ಅಗತ್ಯಗಳಿಗೆ ತಕ್ಕಂತೆ ಬದಲಾಗುತ್ತಿರುವ ಸಂಪ್ರದಾಯಗಳು ಇಂದು ಪಟ್ಟಣಗಳಲ್ಲಿ ತಮ್ಮ ಅಸ್ತಿತ್ವವನ್ನು ಸ್ಥಾಪಿಸಿವೆ. ಆದರೆ ಹಳ್ಳಿಗಳೂ ಇದರಿಂದ ಹೊರತಾಗಿಲ್ಲ ಆದಕಾರಣ ನಶಿಸಿ ಹೋಗುತ್ತಿರುವ ಸಂಪ್ರದಾಯಗಳ ಒಳಸತ್ವವನ್ನು ವೈಜ್ಞಾನಿಕ ದೃಷ್ಟಿಯಿಂದ ಅಧ್ಯಯನ ಮಾಡಿ ಅದರ ಮೌಲ್ಯಗಳನ್ನು ಸಮಾಜದ ಮುಂದಿನ ಪೀಳಿಗೆಗೆ ನೀಡುವ ಅವಶ್ಯಕತೆ ಇದೆ. ಈ ಅಂಶಗಳನ್ನು ಒಳಗೊಂಡಂತೆ ಹರಿಹರ ತಾಲೂಕಿನ ನಂಬಿಕೆ ಆಚರಣೆಗಳ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಒಟ್ಟಿನಲ್ಲಿ ಒಂದು ಸಾಂಸ್ಕೃತಿಕ ಅಧ್ಯಯನವೆಂದರೆ ಮಾನವನು ಹುಟ್ಟಿ ನಾಗರಿಕನಾಗಿ ಬದುಕಿಬಾಳಲು ಪ್ರಾರಂಭಿಸಿದಾಗಿನಿಂದಲೂ ಅವನು ತನ್ನ ದಿನ ನಿತ್ಯದ ಉಡುಗೆ-ತೊಡುಗೆ, ಊಟ ಉಪಚಾರಗಳು, ರೂಢೀ ಸಂಪ್ರದಾಯಗಳು ಹಬ್ಬ ಹರಿದಿನಗಳು ಜನಪದ ಶಿಷ್ಟಗಳು ಧರ್ಮ ಧಾರ್ಮಿಕತೆ ಜಾತಿ ಪಂಥಗಳು ವೈವಾಹಿಕ ಸಂಬಂಧಗಳು ಜಾತ್ರಾ-ಉತ್ಸವಗಳು ಇವೆಲ್ಲವೂ ಅವನಿಂದಾಗಿಯೇ ಹುಟ್ಟಿ ಬೆಳೆದು ಪರಂಪರೆಯಾಗಿ ನಡೆದುಕೊಂಡು ಬಂದಿವೆ.

ಈ ಅಧ್ಯಯನ ಕ್ಷೇತ್ರದ ಕೇಂದ್ರ ಸ್ಥಳದಲ್ಲಿ ಆಗಬೇಕಾದ ಕೆಲವು ಮುಖ್ಯವಾದ ಕೆಲಸಗಳೆಂದರೆ ಹರಿಹರೇಶ್ವರ ದೇವಾಲಯದ ಸುತ್ತಲೂ ನಿಂತಿರುವ ಶಾಸನಗಳನ್ನು ಒಂದು ಕಡೆ ವ್ಯವಸ್ಥಿತವಾಗಿ ಸಂಗ್ರಹಿಸಿ ಈ ಪರಿಸರವನ್ನು ಸ್ವಚ್ಚಗೊಳಿಸಿದರೆ ಇಲ್ಲಿನ ಪರಿಸರದ ನೋಟಕ್ಕೆ ಹಾಗೂ ಐತಿಹಾಸಿಕ ದಾಖಲೆಗಳಾದ ಶಾಸನಗಳ ನೋಟಕ್ಕೆ ಅನುಕೂಲವಾಗುತ್ತದೆ. ಶಾಸನಗಳ ಕೊನೆಯಲ್ಲಿ "ದಾನಾತ್ ಶ್ರೀಯೋನುಪಾಲನಂ" ಎಂಬ ವಾಕ್ಯ ಬರುತ್ತದೆ. ತಾನು ದಾನ ಮಾಡುವುದಕ್ಕಿಂತ ಇನ್ನೊಬ್ಬರು ಮಾಡಿದ ದಾನವನ್ನು ಕಾಪಾಡಿಕೊಂಡು ಬರುವುದು ಹೆಚ್ಚು ಶ್ರೇಯಸ್ಕರ ಎಂಬುದು ಮೇಲಿನ ವಾಕ್ಯದ ಅರ್ಥ ದೇವಾಲಯದ ಎಡ ಹಾಗೂ ಬಲಗಡೆಯಿಂದ ನದಿಗೆ ಪ್ರವೇಶಿಸಲು ಮೆಟ್ಟಲುಗಳಿದ್ದು ಅವು ತುಂಬ ಶಿಥಿಲವಾಗಿವೆ. ಹಾಗೆಯೇ ಸ್ವಚ್ಚತೆಯಲ್ಲಿ ಅಂತಹವುಗಳನ್ನು ಸರಿಪಡಿಸುವ ಕಾರ್ಯಕ್ಕೆ ಸರ್ಕಾರ, ಸ್ಥಳೀಯರು ಗಮನಕೊಡಬೇಕು. ಎಚ್.ಎಂ. ಶಂಕರನಾರಾಯಣರಾವ್‌ರವರು ಹೇಳುವಂತೆ ದೇವಾಲಯದ ಸುತ್ತಲೂ ಇರುವ ವಸತಿಗಳನ್ನು ವಶಪಡಿಸಿಕೊಂಡು ಕೋಟೆಯನ್ನು ಕಟ್ಟಬೇಕೆಂಬ ಯೋಚನೆ ಬಹಳ ವರ್ಷಗಳಿಂದಲೂ ಸರ್ಕಾರಕ್ಕಿದೆ ಈ ಕಾರ್ಯಕ್ಕೆಗೂಡಿದರೆ ಒಳ್ಳೆಯದು ಎಂದಿದ್ದಾರೆ. ಆದರೆ ಈ ವಸತಿಗಳನ್ನ ಇಲ್ಲಿನವರು ಬಿಡುತ್ತಾರೆಯೇ? ದೇವಾಲಯದ ಸುತ್ತಲೂ ಇರುವ ವಸತಿಗಳನ್ನು ಗಮನಿಸಿದರೆ ಪ್ರಾಚೀನ ಕಟ್ಟಡಗಳನ್ನು ಮರೆಮಾಚಿ ಕಟ್ಟಿರುವ ವಸತಿಗಳ ಹಾಗೆ ಕಾಣುತ್ತವೆ. ಇತ್ತೀಚಿಗೆ ಹಂಪಿಯ ವಿರೂಪಾಕ್ಷ ದೇವಾಲಯದ ಮುಂಭಾಗದ ಬಜಾರನ್ನು ರಾಜ್ಯ ಪುರಾತತ್ವ ಇಲಾಖೆ ವಶಪಡಿಸಿಕೊಂಡಾಗ ಕಂಡು ಬಂದ ಸಾಲು ಮಂಟಪಗಳ ಹಾಗೆ ಪ್ರಸ್ತುತ ವಿಷಯದ ಕ್ಷೇತ್ರದಲ್ಲಿ ಕಂಡು ಬರುತ್ತಿವೆ.

ರಾಜ್ಯ ಪುರಾತತ್ವ ಇಲಾಖೆ ಇಲ್ಲಿನ ವಸತಿಗಳನ್ನು ವಶಪಡಿಸಿಕೊಂಡು ಮರೆಮಾಚಿರುವ ಕಟ್ಟಡಗಳನ್ನು ಹೊರತೆಗೆಯಬೇಕು. ಯಾಕೆಂದರೆ ಇಲ್ಲಿರುವ ವಸತಿಗಳ ಅಡಿಪಾಯದ ಎಲ್ಲಾ ಕಲ್ಲುಗಳು ಪ್ರಾಚೀನ ಅವಶೇಷಗಳಾಗಿವೆ. ಶಾಸನದಲ್ಲಿ ಉಲ್ಲೇಖವಾಗಿರುವ ಲಕ್ಷ್ಮೀಪಾರ್ವತಿಯರ ದೇವಾಲಯ ಹರಿಹರೇಶ್ವರ ದೇವಾಲಯದ ಪಕ್ಕದಲ್ಲಿರುವ ಲಕ್ಷ್ಮೀದೇವಾಲಯವೇ ಆಗಿದ್ದರು ಸಹ ಆ ದೇವಾಲಯದ ಹಿಂಭಾಗದಲ್ಲಿ ಒಂದು ದೇವಾಲಯದ ಅಡಿಪಾಯವಿದೆ ಇದಕ್ಕೆ ಉತ್ತರಭಾಗದಲ್ಲಿ ಪ್ರನಾಳವಿದೆ ಅಂದರೆ ಇದು ಒಂದು ಗರ್ಭಗೃಹವನ್ನೊಳಗೊಂಡ ದೇವಾಲಯವಾಗಿರಬೇಕು ಎಂದು ನನ್ನ ಅಭಿಪ್ರಾಯ ಇದಕ್ಕೆ ಪೂರಕವಾಗಿ ಕ್ರಿ.ಶ. ೧೫೩೩ರ ಹರಿಹರ ಶಾಸನದಲ್ಲಿ ದೇಮೇಶ್ವರ ದೇವಾಲಯದ ಉಲ್ಲೇಖವಿದೆ. ಇದು ಹರಿಹರ ದೇವಾಲಯದ ಉತ್ತರಕ್ಕಿದೆ ಎಂದು ಶಾಸನ ಹೇಳುತ್ತದೆ. ಅಂದರೆ ಈಗಿನ ದೇವಾಲಯದ ಉತ್ತರ ಭಾಗಕ್ಕೆ ಒಂದು ದೇವಾಲಯದ ಅವಶೇಷವಿದ್ದು ಇದು ಇಂದು ಸೆಟ್ಲ್‌ನಿಂದ ಬಾಗಿಲು ಮುಚ್ಚಿದ್ದಾರೆ ಆದರೆ ಕಟ್ಟಡ ದೇವಾಲಯದ ರೀತಿಯಲ್ಲಿಯೇ ಇದೆ. ಇವುಗಳನ್ನೆಲ್ಲಾ ಗಮನಿಸಿದರೆ ದೇವಾಲಯದ ಸುತ್ತಲೂ ಪ್ರಾಚೀನ ಅವಶೇಷಗಳು ಖಂಡಿತವಾಗಿ ದೊರೆಯುತ್ತವೆ ಎಂಬ ಅಂಶವನ್ನ ನಾನು ಕ್ಷೇತ್ರಕಾರ್ಯ ಮಾಡಿ ತಿಳಿದುಕೊಂಡ ಹಿನ್ನೆಲೆಯಲ್ಲಿ ಹೇಳಿದ್ದೇನೆ. ರಾಜ್ಯ ಪುರಾತತ್ವ ಇಲಾಖೆ ಇತ್ತ ಗಮನ ಹರಿಸುವುದು. ಇತಿಹಾಸ ಉಳಿಸಿ ಎಂಬ ವಾಕ್ಯಕ್ಕೆ ಈ ಪ್ರದೇಶ ಸೇರ್ಪಡೆಯಾಗುತ್ತದೆ. ಬಾಗಳಿ, ಕೆಳದಿ, ವಸ್ತು ಸಂಗ್ರಹಾಲಯಗಳ ಹಾಗೆ ಸ್ಥಳೀಯ ದಾಖಲೆಗಳಾದ ಶಾಸನ, ತಾಮ್ರಪಟ, ಶಿಲ್ಪಗಳು, ಹರಿಹರದಲ್ಲಷ್ಟೆ

ಅಲ್ಲ ತಾಲೂಕಿನಾದ್ಯಂತ ನೂರಾರು ಶಿಲ್ಪಗಳು ಬಿಸಿಲು ಮಳೆಯಲ್ಲಿ ಹಾಗೆ ಹೊರಗಡೆ ಬಿದ್ದಿವೆ. ಇವು ಹೊರಗಡೆ ಇದ್ದಷ್ಟು ಗ್ರಾಮೀಣ ಪ್ರದೇಶದ ಜನರಲ್ಲಿ ಮೂಢ ನಂಬಿಕೆಗಳು ಹೆಚ್ಚಾಗುವ ಸಾಧ್ಯತೆಯಿದೆಯೇ ವರತು ಐತಿಹಾಸಿಕ ವಿಚಾರಗಳ ಕಡೆ ಗಮನಹರಿಸುವುದಿಲ್ಲ ಎಂದು ಹೇಳಬಹುದು.

ಅಧ್ಯಯನದ ಫಲಿತಗಳು

* ಹರಿಹರ ದಾವಣಗೆರೆ ಜಿಲ್ಲೆಯ ಒಂದು ತಾಲೂಕು ಕೇಂದ್ರ ಈ ತಾಲೂಕಿನ ದಕ್ಷಿಣ ಭಾಗದಲ್ಲಿ ಪೂರ್ವ ಪಶ್ಚಿಮವಾಗಿರುವ ಬೆಟ್ಟಗಳ ಸಾಲು, ತಾಲೂಕಿನಲ್ಲಿ ಸಾರಥಿ, ಕೊಂಡಜ್ಜಿ, ಹಳ್ಳಿಹಾಳಗಳಲ್ಲಿ ಇರುವ ಬೆಟ್ಟಗುಡ್ಡಗಳು, ಹಳ್ಳಗಳು, ಉತ್ತಮ ಹವಾಗುಣದೊಡನೆ ಕೃಷಿಗೆಯೋಗ್ಯ ಮತ್ತು ಫಲವತ್ತಾದ ಭೂಮಿಯನ್ನು ಕಾಣಬಹುದು. ಬಹುಶಃ ಹಿಂದೊಮ್ಮೆ ದಟ್ಟವಾದ ಕಾಡು ಉತ್ತಮ ಹವಾಗುಣ ಮತ್ತು ನೀರಿನ ಸೌಲಭ್ಯ ಹೊಂದಿದ್ದ ಈ ಪರಿಸರದಿಂದ ಆಕರ್ಷಿತನಾದ ಮಾನವ ನೆಲೆ ನಿಂತನೆನ್ನಬಹುದು. ಈಗಾಗಲೆ ಹರಿಹರ ತಾಲೂಕಿನಲ್ಲಿ ಕೊಂಡಜ್ಜಿ, ಹಲಸಬಾಳು, ಹರಿಹರ ಹಾಗೂ ಕೊಮಾರನಹಳ್ಳಿಗಳಲ್ಲಿ ಸೂಕ್ಷ್ಮಶಿಲಾಯುಗ, ನವಶಿಲಾಯುಗ, ಬೃಹತ್‌ಶಿಲಾಯುಗ ಹಾಗೂ ಇತಿಹಾಸ ಆರಂಭಕಾಲ ಸಂಸ್ಕೃತಿಗಳ ಹಲವಾರು ಶಿಲಾಯುಧಗಳು, ಹೆರೆಚೆಕ್ಕೆ, ಮೊನೆ, ನಿಳಚಕ್ಕೆ, ಮಡಿಕೆ-ಕುಡಿಕೆಗಳು ದೊರೆತಿದ್ದು ಈ ಪರಿಸರದಲ್ಲಿನ ಆದಿಮಾನವನ ಜೀವನ ಕ್ರಮವನ್ನು ತಿಳಿಸುತ್ತವೆ. ಇವುಗಳಲ್ಲದೆ ಕ್ಷೇತ್ರಕಾರ್ಯದಲ್ಲಿ ಹೊಸದಾಗಿ ಸೂಕ್ಷ್ಮಶಿಲಾಯುಗ ಸಂಸ್ಕೃತಿಗೆ ಸೇರಿದ ಬೆಣಚು ಕಲ್ಲಿನ ಕೈಗೊಡಲಿ (ಗುಡ್ಡದ ತುಮ್ಮಿನಕಟ್ಟೆ), ನವಶಿಲಾಯುಗದ ಸಂಸ್ಕೃತಿಗೆ ಸೇರಿದ ಆಗೇಟ್, ಕೈಗೊಡಲಿಗಳಿಂದ ಹೊರತೆಗೆದ ಭರ್ಚಿಯಾಕಾರದ ಅಥವಾ ಚಪ್ಪಟೆ ಭಾಗಗಳಾದ ಬ್ಲೇಡ್ಸ್‌ಗಳು, ಕವಣೆಕಲ್ಲು, ಬೂದುಬಣ್ಣದ ಮಡಿಕೆ ಭಾಗಗಳು, ಹೆರೆಚೆಕ್ಕೆ ವಿವಿಧ ಮಾದರಿಯ ಶಿಲೋಪಕರಣಗಳು (ಗುಡ್ಡದ ತುಮ್ಮಿನಕಟ್ಟೆ) ದೊರೆತಿವೆ. ಇದೇ ರೀತಿಯ ಶಿಲೋಪಕರಣಗಳು ಹಾಗೂ ಬೂದುಬಣ್ಣದ ಮಡಿಕೆ ಭಾಗಗಳು ಸಾರಥಿ ಪರಿಸರದ ಗುಡ್ಡದ ಹಿಂಭಾಗದಲ್ಲಿ ದೊರೆತಿವೆ.

ಹೀಗೆ ತಾಲೂಕಿನ ಶೇರಾಪುರ, ಹೀರೆಹಾಲಿವಾಣದ ಬೆಟ್ಟ ಪರಿಸರದಲ್ಲಿ ನವಶಿಲಾಯುಗ ಸಂಸ್ಕೃತಿಯ ಆಯುಧ ಉಪಕರಣಗಳು ದೊರೆತಿವೆ. ಈ ಆಧಾರಗಳನ್ನು ಬಿಟ್ಟರೆ ನವಶಿಲಾಯುಗ ಸಂಸ್ಕೃತಿಗೆ ಸಂಬಂಧಿಸಿದ ವಸತಿ ನೆಲೆಗಳ ಬಗ್ಗೆಯಾಗಲಿ, ಬೂದಿದಿಬ್ಬಗಳು ದೊರೆತಿರುವುದಿಲ್ಲ. ಇಲ್ಲಿ ದೊರೆತ ಶಿಲೋಪಕರಣಗಳಲ್ಲಿ ಮುಖ್ಯವಾಗಿ ಚಕ್ಕೆ ಎಬ್ಬಿಸಿದ ಕೈಗೊಡಲಿ, ಉಜ್ಜಿನಯಗೊಳಿಸಿದ ಕೈಗೊಡಲಿ ದೊರೆತಿವೆ. ಈ ಆಯುಧಗಳಲ್ಲಿ ಮೇಲ್ತುದಿ ಮತ್ತು ಹರಿತ ಅಲಗಿನ ಭಾಗಗಳಲ್ಲಿ ಹೊಳಪುಗೊಳಿಸಲು ಪ್ರಯತ್ನಿಸಿರುವುದನ್ನು ಕಾಣಬಹುದು. ಕಬ್ಬಿಣಯುಗ ಅಥವಾ ಬೃಹತ್‌ಶಿಲಾಯುಗ ಸಂಸ್ಕೃತಿಗೆ ಸೇರಿದ ಕೆಂಪುಮಿಶ್ರಿತ ಮಡಿಕೆ ಭಾಗಗಳು (ಕೊಕ್ಕನೂರು) ದೊರೆತಿವೆ ಹಾಗೂ ಇತಿಹಾಸ ಆರಂಭಕಾಲಕ್ಕೆ ಸೇರಿದ

(ಹಲಸಬಾಳು, ಸಾರಥಿ, ಮೂಗಿನಗೊಂದಿ) ಅವಶೇಷಗಳು ದೊರೆತಿವೆ. ಇದರಿಂದ ಹರಿಹರ ಪರಿಸರದಲ್ಲಿ ಸೂಕ್ಷ್ಮಶಿಲಾಯುಗ ಸಂಸ್ಕೃತಿಯ ಕಾಲಘಟ್ಟದಿಂದಲೂ ಇಲ್ಲಿ ಮಾನವನ ಚಟುವಟಿಕೆಗಳು ನಡೆಯುತ್ತಿದ್ದವು ಎಂದು ಹೇಳಬಹುದು. ಇಲ್ಲಿನ ಸೂಕ್ಷ್ಮಶಿಲಾಯುಗ, ನವಶಿಲಾಯುಗ ಮತ್ತು ಬೃಹತ್‌ಶಿಲಾಯುಗದ ನೆಲೆಗಳನ್ನು ಹಾಗೂ ಆ ಜನತೆ ಬಳಸಿರುವ ವಿವಿಧ ಬಗೆಯ ವಸ್ತುಗಳಾದ ಮಣಿಗಳು, ಬಳೆಗಳು, ಮಡಿಕೆ-ಕುಡಿಕೆಗಳು, ಕಬ್ಬಿಣದ ವಸ್ತುಗಳು ಕಲ್ಲಿನ ಆಯುಧಗಳು ಅವರು ಕರಕುಶಲತೆಯ ಬಗೆಗೆ ವಿಶೇಷ ಗಮನಹರಿಸಿದ್ದರು ಎಂಬುದು ತಿಳಿಯುತ್ತದೆ. ಇಲ್ಲಿ ದೊರೆತಂತಹ ಅವಶೇಷಗಳ ಪ್ರದೇಶಗಳು ಬೆಟ್ಟದ ತಪ್ಪಲುಗಳಾಗಿದ್ದು ಅವುಗಳನ್ನ ವ್ಯವಸಾಯದ ಅನುಕೂಲಕ್ಕಾಗಿ ಒತ್ತುವರಿ ಮಾಡಲಾಗುತ್ತಿದೆ.

* ಕೊಮಾರನಹಳ್ಳಿ ಬೃಹತ್‌ಶಿಲಾಯುಗ ನೆಲೆಯಲ್ಲಿ ಎರಡು ಪ್ರಕಾರದ ಗೋರಿಗಳಿದ್ದು ಕಲ್ಲುಗಪ್ಪೆಯ ಅಡಿಯಲ್ಲಿರುವ ಶವಕುಣಿಗಳು (cairn cercle) ಹಾಗೂ ಚಪ್ಪಡಿಕಲ್ಲಿನಿಂದ (Dalmin) ಮುಚ್ಚಿರುವ ಶವಕುಣಿಗಳು. ಇದರಲ್ಲಿ ಮಾನವ ತಲೆಬುರುಡೆಗಳು, ಕಲ್ಲಿನ ಅರೆಗುಂಡುಗಳು ಮತ್ತು ಸುಡಾವೆ ಮಣ್ಣಿನ ಮಣಿಗಳು ಇಲ್ಲಿ ಸಿಕ್ಕಂತಹ ವಸ್ತುಗಳಾಗಿದ್ದು ಜೊತೆಗೆ ಭರ್ಚಿ ಬಾಣದ ಮೊನೆಗಳು, ಚೂರಿ, ಖಡ್ಗ, ಈಟಿ ಮುಂತಾದ ಕಬ್ಬಿಣದ ಉಪಕರಣಗಳು ದೊರೆತಿವೆ ಹಾಗೆಯೇ ಮೂರು ಬಗೆಯ ಮಣ್ಪಾತ್ರೆಗಳು ದೊರೆತಿವೆ. ಕೆಂಪು-ಕಪ್ಪು (Black and Redware Potry's), ಕಪ್ಪು-ಕೆಂಪು (Red and Blackware Potry's), ಹಾಗೂ ಬಿಳಿ ವರ್ಣರೇಖಾಚಿತ್ರ (Whiteline Potry's) ವುಳ್ಳ ಮೃತ್ ಪಾತ್ರೆಗಳು ದೊರೆತಿವೆ. ಇವುಗಳ ಕಾಲಮಾನ ಕ್ರಿ.ಪೂ. ೧೪೪೦, ಕ್ರಿ.ಪೂ. ೧೨೦೦ ಹಾಗೂ ಕ್ರಿ.ಪೂ. ೯೩೦ ಆಗಿವೆ ಎಂದು ಇಂಗಾಲ-೧೪ ರಿಂದ ತಿಳಿದುಬಂದಿದೆ. ಸಮೀಪದಲ್ಲಿರುವ ಹಳ್ಳೂರಿನ ಉತ್ಖನನದಲ್ಲಿ ಕಂಡುಬಂದ ನವಶಿಲಾಯುಗ-ಕಬ್ಬಿಣಶಿಲಾಯುಗದ ಸಮ್ಮಿಶ್ರ ಹಂತಕ್ಕೆ ಈ ಗೋರಿಗಳು ಸಮನಾಗಿವೆ ಏಕೆಂದರೆ ಗೋರಿಗಳಲ್ಲಿ ಕಂಡುಬಂದ ಬಿಳಿಚಿತ್ರವುಳ್ಳ ಪಾತ್ರೆಗಳು ಹಳ್ಳೂರಿನ ಪಾತ್ರೆಮಾದರಿಗಳಿಗೆ ಸಮೀಪವಿರುವುವು ಹಾಗೆಯೇ ಇವುಗಳ ಕಾಲಮಾನ ಕ್ರಿ.ಪೂ.೧೦೦೦ ಎಂದು ತಿಳಿದುಬಂದಿದೆ. ಕೊಮಾರನಹಳ್ಳಿ ಕಲ್ಗೋರಿಗಳ ನಿರ್ಮಾಣದ ತಾಂತ್ರಿಕ ಕೌಶಲ್ಯವು ತರುವಾಯ ಕಾಲದ ವಾಸ್ತುಶಿಲ್ಪಕ್ಕೆ ಬುನಾದಿಯಂತಿದೆ. ಈ ಸಂಸ್ಕೃತಿಯ ಜನಸಮುದಾಯದವರು ಬಳಸಿಕೊಂಡಂತಹ ಪ್ರಮುಖ ವೃತ್ತಿಗಳಲ್ಲಿ ಅದಿರನ್ನು ಕರಗಿಸಿ ಕಬ್ಬಿಣ ತಯಾರಿಕೆ, ಕಬ್ಬಿಣದ ಅದಿರಿನಿಂದ ಕಬ್ಬಿಣ ಲೋಹವನ್ನು ಮಾಡುವ ಇವರ ತಾಂತ್ರಿಕ ಜ್ಞಾನ ಸುಧಾರಿಸಿದ ಮಟ್ಟದ್ದಾಗಿತ್ತೆಂದು ಇಲ್ಲಿ ದೊರೆತ ಅವಶೇಷಗಳ ವೈಜ್ಞಾನಿಕ ವಿಶ್ಲೇಷಣೆಯಿಂದ ತಿಳಿದುಬರುತ್ತದೆ.

ಮುಖ್ಯವಾಗಿ ಕಬ್ಬಿಣದ ಉಪಕರಣಗಳಾದ ಬಾಣದ ಮೊನೆ, ಬಾಣಲೆ, ಗಾಳ, ಕುಡುಗೋಲು, ಸುಲಿಯುವ ಸಾಧನ, ಹೆರೆಯುವ ಸಾಧನ, ಕೊಡಲಿ, ಕಂಬಿ, ತಂತಿಯ ತುಣುಕು, ಚಾಕು, ಕಠಾರಿ, ಮೊಳೆಗಳು ದೊರೆತಿವೆ. ಈ ಕಬ್ಬಿಣದ ಉಪಕರಣಗಳನ್ನು ದೊಡ್ಡ ಪ್ರಮಾಣದಲ್ಲಿ

ತಯಾರಿಸುತ್ತಿದ್ದುದರ ಚಟುವಟಿಕೆಯ ಪ್ರಾಚೀನತೆ ಕುರಿತು ತಿಳಿಯುವುದಾದರ ಈ ಪರಿಸರದ ತುಂಗಭದ್ರಾ ನದಿ ಪ್ರದೇಶದಲ್ಲಿ ಪ್ರಾಗಿತಿಹಾಸ ಕಾಲದ ವಿವಿಧ ಸಾಂಸ್ಕೃತಿಕ ಘಟ್ಟಗಳ ಮಾನವ ಸಂಸ್ಕೃತಿ ನೆಲೆಗಳು ಕೊಮಾರನಹಳ್ಳಿಯ ಸುತ್ತಮುತ್ತಲೂ ಇವೆ ಉತ್ತಮ ಗುಣಮಟ್ಟದ ಕಬ್ಬಿಣದ ಆದುರಿನ ನಿಕ್ಷೇಪ ಇಲ್ಲಿ ಪ್ರಾಚೀನ ಕಾಲದಿಂದಲೇ ಆದಿರು ನಿಕ್ಷೇಪವನ್ನು ಗುರುತಿಸಿ, ಆದಿರನ್ನು ಸಂಗ್ರಹಿಸಿ, ಕಬ್ಬಿಣದ ಉಪಕರಣಗಳನ್ನು ತಯಾರಿಸುವ ಚಟುವಟಿಕೆ ಇದ್ದಿರುವ ಸಾದ್ಯತೆ ಇದೆ. (ಕಬ್ಬಿಣದ ಕುಲುಮೆಗಳು ದೊರೆತಿರುವುದಿಲ್ಲ)

ಇಲ್ಲಿನ ಪ್ರಾಗಿತಿಹಾಸ ಸಂಸ್ಕೃತಿಯ ಪ್ರಾತಿನಿಧಿಕ ಅವಶೇಷಗಳೆಂದರೆ ಮಣ್ಣಿನ ಮಡಿಕೆಗಳು ಆರಂಭ ಹಂತದಲ್ಲಿ ಕೈಯಿಂದಲೇ ತಟ್ಟಿ ಮಾಡಿದ ನಂತರ ಚಕ್ರದಿಂದ ತಯಾರಿಸಿದ ತೆಳ್ಳನೆಯ ಮೃತ್‌ಪಾತ್ರೆಗಳು ಕಂಡುಬಂದಿವೆ. ಕಪ್ಪು-ಕೆಂಪು ವರ್ಣದ, ಕೆಂಪು-ಕಪ್ಪು ವರ್ಣದ ಹಾಗೂ ಬಿಳಿವರ್ಣದ ರೇಖಾಚಿತ್ರವುಳ್ಳ ಮೃತ್‌ಪಾತ್ರೆಯ ಮೂರು ಮಾದರಿಯ ಪಾತ್ರೆಗಳು ಕಂಡುಬಂದಿವೆ. ಅವುಗಳಲ್ಲಿ ಕೈಯಿಂದ ತಟ್ಟಿ ಮಾಡಿದ ಶಂಕುವಿನಾಕಾರದ ತಳವುಳ್ಳ ಮಡಿಕೆಗಳು, ಗೋಲ ಮಡಿಕೆಗಳು, ಚುಳ್ಳಿಯಿರುವ ಬಟ್ಟಲು ಮತ್ತು ಮೂರು ನಳಿಕೆಯುಳ್ಳ ಪಾತ್ರೆಗಳು, ಬಟ್ಟಲು ಹಾಗೂ ಶಂಕುವಿನಾಕಾರದ ೨ ಮುಚ್ಚಳಗಳ ಹೊರಮೈ ಮೇಲೆ ಬಿಳಿವರ್ಣದಲ್ಲಿ ಪರಸ್ಪರ ಛೇಧಿಸುವ ಗೆರೆಗಳ ಮೃತ್‌ಪಾತ್ರೆಗಳು ದೊರೆತಿವೆ.

* ಕ್ರಿ.ಶ. ೧೨೨೪ರಲ್ಲಿ ಹೊಯ್ಸಳರ ೨ನೇ ವೀರನರಸಿಂಹನ ಮಂತ್ರಿ ಪೋಲಾಳ್ವನು ಹರಿಹರೇಶ್ವರ ದೇವಾಲಯವನ್ನು ಕಟ್ಟಸಿದನೆಂಬ ಉಲ್ಲೇಖವಿದೆ. ಆದರೆ ದೇವರನ್ನ ಪ್ರತಿಷ್ಠಾಪಿಸಲಿಲ್ಲ ಸ್ಕಂದ ಪುರಾಣದ ಕಾಶಿಖಂಡದಲ್ಲಿ ಬರುವ ಹರಿಹರ ಮಹಾತ್ಮೆಯಲ್ಲಿ ಹರಿಹರೇಶ್ವರನನ್ನು ಬ್ರಹ್ಮಪ್ರತಿಷ್ಠೆಯೆಂದು ಹೇಳಿದ್ದರೂ ಶಾಸನಗಳಲ್ಲಿ ದೇವರನ್ನು ಸ್ವಯಂಭೂ ಶಂಕರನಾರಾಯಣ, ಪ್ರಸನ್ನ ಶಂಕರನಾರಾಯಣ, ಹರಿಶಂಕರ, ಚೆಲ್ವವೆತ್ತಾ ಹರಿಹರ ಪರಮರ್ ಎಂದು ಬಗೆಬಗೆಯಾಗಿ ವರ್ಣಿಸಿರುವ ವಿಷಯವನ್ನು ತಿಳಿಸುತ್ತದೆ. ಇಷ್ಟು ಜನಪ್ರಿಯವಾದ ದೇವರಿಗೆ ಅಥವಾ ಮೂರ್ತಿಗೆ ಒಂದು ದೇವಾಲಯವಿರಲಿಲ್ಲವೆಂದು ತೋರುತ್ತದೆ. ಇದ್ದರೂ ಅದು ಚಿಕ್ಕದ್ದಾಗಿರಬೇಕು. ರಾಣಿಬೆನ್ನೂರು ತಾಲೂಕಿನ ಮುದೆನೂರು (ಕ್ರಿ.ಶ.೧೦೯೮), ನದಿಹರಳಹಳ್ಳಿ (ಕ್ರಿ.ಶ.೧೧೬೭), ಹಾಗೂ ಹರಪನಹಳ್ಳಿ ತಾಲೂಕಿನ ತೆಲಗಿ (ಕ್ರಿ.ಶ.೧೦೩೬), ಉಚ್ಚಂಗಿದುರ್ಗ (ಕ್ರಿ.ಶ.೧೧೦೦), ದ ಶಾಸನಗಳು 'ಹರಿಹರದ ಸಂಕರನಾರಾಯಣ' (ಹರಿಹರೇಶ್ವರ), 'ಹರಿಹರದೇವಾಲಯದುತ್ತರಕ್ಕೇ' ಎಂದು ಉಲ್ಲೇಖಿಸುತ್ತವೆ ಹಾಗಾಗಿ ಹರಿಹರೇಶ್ವರ ದೇವರಿಗೆ ಚಿಕ್ಕದಾದ ಒಂದು ದೇವಾಲಯವಿತ್ತು ಎಂಬ ನಿರ್ಧಾರಕ್ಕೆ ಬರಬಹುದು ಆದರೆ ಪೊಲಾಳ್ವನ ಶಾಸನ ಸ್ವತಃ ದೇವಾಲಯ ನಿರ್ಮಾಣ ಮಾಡಿದ ಬಗ್ಗೆ ತಿಳಿಸುತ್ತದೆ.

ಹರಿಹರ ದೇವರಿಗೆ ಅಂಗಭೋಗ, ರಂಗಭೋಗಕ್ಕೆ ರಾಜರು, ದಂಡನಾಯಕರು, ಸ್ಥಳೀಯರು ದಾನ ದತ್ತಿಗಳನ್ನ ಬಿಟ್ಟ ಬಗ್ಗೆ ಶಾಸನಾಧಾರಗಳಿವೆ. ಪೆರ್ಮಾಡಿರಾಯ ಎಂಬ ರಾಜನು

ದೇವಾಲಯವನ್ನು ಕಟ್ಟಿಸಲು ಮುಂದಾದಾಗ ಹರಿಹರ ಈ ರಾಜನ ಸ್ವಪ್ನದಲ್ಲಿ ಬಂದು ಮುಂದೆ ಒಬ್ಬ ಭಕ್ತ ಹುಟ್ಟಿ ನನಗಾಗಿ ದೇವಾಲಯವನ್ನು ಕಟ್ಟಿಸುತ್ತಾನೆ. ಈಗ ನೀನು ಈ ಪ್ರಯತ್ನವನ್ನು ನಿಲ್ಲಿಸು ಎಂದು ಆಜ್ಞೆ ಮಾಡುತ್ತಾನೆ. ನಂತರ ಸುಂದರವಾದ ದೇವಾಲಯವನ್ನು ನನಗಾಗಿ ಕಟ್ಟಿಸು ಎಂದು ಪೋಲಾಳ್ವನಿಗೆ ಅಪ್ಪಣೆ ಮಾಡಿದಾಗ ಬಹುಶಃ ಪೋಲಾಳ್ವನು ಆಗೀನ ಕಾಲಕ್ಕೆ ಇದ್ದಂತಹ ಚಿಕ್ಕದಾದ ದೇವಾಲಯವನ್ನು ಕೆಡವಿಸಿ ಹರಿಹರ ದೇವರಿಗೆ ಬೃಹತ್ ದೇವಾಲಯವನ್ನ ನಿರ್ಮಿಸಿದ್ದಾನೆ. ಇಲ್ಲಿಗೆ ಪೋಲಾಳ್ವನೇ ಈಗೀನ ಭವ್ಯ ದೇವಾಲಯದ ನಿರ್ಮಾತೃ ಎಂದು ಹೇಳಬಹುದು.

ಮೂರನೇಯ ನರಸಿಂಹನ ಸೇನಾಪತಿ ಗಾಯಿಗೋವಳ ಸೋಮದಂಡಾಧಿನಾಥನು ಹರಿಹರ ದೇವಾಲಯಕ್ಕೆ ಪೂರ್ವದ್ವಾರದಲ್ಲಿ ಐದು ಸುವರ್ಣ ಕಲಶ ಸಹಿತ ಐದಂತಸ್ತಿನ ಗೋಪುರ ಮಾಡಿಸಿದ್ದಾನೆ. ಇಲ್ಲಿಂದ ಈ ದೇವಾಲಯಕ್ಕೆ ಮುಂದೆ ಬಂದ ಹಲವಾರು ರಾಜರು, ಅನೇಕ ವಿಧವಾದ ದಾನದತ್ತಿಗಳನ್ನ ನೀಡಿದ್ದಾರೆ. ಆದರೆ ಹೊಯ್ಸಳ-ಯಾದವ ರಾಜ್ಯಗಳ ಆಂತರಿಕ ಕಲಹ, ದುಸ್ಥಿತಿಗಳ ಲಾಭವನ್ನು ಪಡೆದು ಉತ್ತರದ ಮಹಮ್ಮದಿಯರು ದಕ್ಷಿಣಕ್ಕೆ ನುಗ್ಗಿ ಯಾದವರನ್ನು ಸೋಲಿಸಿ, ಹೊಯ್ಸಳರ ರಾಜಧಾನಿಯಾದ ಮೇಲು ದಾಳಿಮಾಡಿ ಅನೇಕ ದೇವಾಲಯಗಳಿಗೆ ಹಾನಿಯುಂಟು ಮಾಡಲಾಗಿದೆ ಇದರಲ್ಲಿ ಹರಿಹರ ದೇವಾಲಯವೂ ಸೇರಿದೆ. ದೇವಾಲಯವು ಹೊಯ್ಸಳರ ಕಾಲದ ವೈಭವವನ್ನ ಕಳೆದುಕೊಂಡು ದೇವಾಲಯಕ್ಕೆ ನೇರವಾಗಿ ಯಾವುದೇ ಆರ್ಥಿಕ ಸಂಪನ್ಮೂಲವಿಲ್ಲದೆ ಹೋಯಿತು ಆದರೂ ವಿಜಯನಗರ ಕಾಲದಲ್ಲಿ ದೇವಾಲಯದ ಸುತ್ತಲೂ ದೇವಾಲಯ ನಿರ್ಮಾಣ ಕಾರ್ಯ ಹಾಗೂ ದೀಪಸ್ತಂಭಗಳ ನಿರ್ಮಾಣವಾಗುತ್ತವೆ.

ವಿಜಯನಗರದ ಒಂದು ಶಾಸನ (ಕ್ರಿ.ಶ.೧೩೭೯) ಮೂವತ್ತಾರು ವೃತ್ತಿಗಳನ್ನ ದಾನ ಮಾಡಿದ ವಿವರವಿದೆ. ಅದರಲ್ಲಿ ೧೨ ವೃತ್ತಿಯನ್ನ ಶ್ರೀಹರಿಹರ ದೇವರಿಗೆ ದಾನ ನೀಡಿದ ಬಗ್ಗೆ ಹೆಸರಿಸಿದೆ. ಕ್ರಿ.ಶ. ೧೩೮೨ರ ಶಾಸನದಲ್ಲಿ ಹರಿಹರದ ಸೀಮೆಯಲ್ಲಿದ್ದ ಶಾಂಕರಿಪುರವೆಂಬ ಗ್ರಾಮವನ್ನು ಶ್ರೀಹರಿಹರ ದೇವಾಲಯದಲ್ಲಿ ಪ್ರತಿ ನಿತ್ಯವೂ ವೇದಶಾಸ್ತ್ರ ಪಾರಾಯಣವಾಗಬೇಕೆಂಬ ಉದ್ದೇಶದಿಂದ ಗ್ರಾಮದಲ್ಲಿದ್ದ ೬೦ ವೃತ್ತಿಗಳಲ್ಲಿ ೨ ವೃತ್ತಿಗಳನ್ನ ದಾನ ನೀಡಿದ್ದಾರೆ. ಕ್ರಿ.ಶ. ೧೪೭೯ರ ಶಾಸನದಲ್ಲಿ ಹರಿಹರ ದೇವಾಲಯಕ್ಕೆ ರಾಮಚಂದ್ರ ಬಾದಾಮಿ ಪ್ರಭುವರ್ಮನ ಹೆಂಡತಿ ಸೌಭಾಗ್ಯವತಿ ತುಳಜಾಬಾಯಿ ಧರ್ಮ ಮಾರ್ಗದ ಗಂಡನಿಗೆ ಒಳ್ಳೆಯದಾಗಲಿ ಎಂಬ ಉದ್ದೇಶಕ್ಕೆ ಕಲ್ಲಿನ ಬೃಹದಾಕಾರದ ದೀಪಸ್ತಂಭಗಳನ್ನು ಮಾಡಿಸಿದ ವಿಷಯವನ್ನು ತಿಳಿಸುತ್ತದೆ. ಕ್ರಿ.ಶ. ೧೫೩೪ರ ಶಾಸನದಲ್ಲಿ ಅವಸರದ ಚಂದ್ರಶೇಖರಯ್ಯನು ತನ್ನ ಮಾವ ಅವಸರದ ದೇಮರಸಯ್ಯನ ಹೆಸರಿನಲ್ಲಿ ಹರಿಹರ ದೇವಾಲಯದ ಉತ್ತರಭಾಗದಲ್ಲಿ ದೇವಾಲಯವೊಂದನ್ನು ಕಟ್ಟಿಸಿ ದೇಮೇಶ್ವರ ದೇವರನ್ನು ಪ್ರತಿಷ್ಠೆ ಮಾಡಿದುದನ್ನು ಈ ಶಾಸನ ತಿಳಿಸುತ್ತದೆ.

ವಿಜಯನಗರ ಕಾಲದಲ್ಲಿ ವೈಭವವನ್ನು ಕ್ರಮಕ್ರಮವಾಗಿ ಹೊಂದುವ ಸ್ಥಿತಿಯನ್ನು ಮುಟ್ಟುತ್ತಿತ್ತು. ಹರಿಹರದಲ್ಲಿ ವೇದಶಾಸ್ತ್ರಪಾರಂಗತರಾದ ಬ್ರಾಹ್ಮಣರಿದ್ದು, ದೇವಾಲಯದಲ್ಲಿ ಸ್ವಾಮಿಯ ಯಾವ ಕೈಂಕರ್ಯಕ್ಕೂ ಲೋಪಬಂದಿರಲಿಲ್ಲ ಇದನ್ನು ಸಮರ್ಥಿಸುವ ಒಂದೆರಡು ಕಾರಣಗಳನ್ನು ಇಲ್ಲಿ ನಿರೂಪಿಸಬಹುದು ವಿಜಯನಗರದ ಅರಸರಿಗೂ ಮಹಮ್ಮದೀಯರಿಗೂ ಕಾಳಗಗಳಾಗುತ್ತಿದ್ದುದು ಕೃಷ್ಣಾ ನದಿಯ ಪ್ರದೇಶದಲ್ಲಿ ತುಂಗಭದ್ರೆಯ ದಕ್ಷಿಣದಲ್ಲಿದ್ದ ಹರಿಹರದ ನೆಮ್ಮದಿಗೆ ಭಂಗ ಬರುತ್ತಿದ್ದ ಪ್ರಮೇಯ ಇರುತ್ತಿರಲಿಲ್ಲ ಹಾಗೆಯೇ ವಿಜಯನಗರ ಅರಸರ ಹರಿಹರ ಪರಿಸರದ ಸ್ಥಳೀಯ ಆಧಿಕಾರಿಗಳು ಅಕ್ಕಸಾಲೆಯ ಕೆಲಸ ಮಾಡುತ್ತಿದ್ದವರಿಗೂ, ಶಾಸನ ತಿದ್ದಿದವರಿಗೂ ಭೂಮಿಯನ್ನ (ಅವಸರದ ದೀಕ್ಷಿತರು ಶ್ರೀಹರಿಹರ ದೇವಾಲಯಕ್ಕೆ ಸಂಬಂಧಿಸಿದಂತೆ ಅಕ್ಕಸಾಲೆಯ ಕೆಲಸ ಮಾಡುತ್ತಿದ್ದ ನಿರೋಜನ ಮಗ ಕರಿಯ ತಿಪ್ಪೋಜನಿಗೆ ಈ ಶಾಸನವನ್ನು ತಿದ್ದಿದುದಕ್ಕೆ ಬೆಳವಡಿಯ ಗ್ರಾಮದ ಎರೆಭೂಮಿಯನ್ನ ಕೊಟ್ಟಂತೆ ಹೇಳಿದೆ) ದಾನ ಕೊಟ್ಟ ಬಗ್ಗೆ ದಾಖಲೆಗಳಿವೆ. ಹಾಗಾಗಿ ಹರಿಹರ ದೇವಾಲಯ ತನ್ನ ಆರಂಭದ ವೈಭವವನ್ನು ಮತ್ತೆ ಗಳಿಸುತ್ತಾ ಬಂದಿತು ಎಂದು ಹೇಳಬಹುದು.

* ಹರಿಹರ ಪ್ರಾಚೀನ ಕಾಲದಿಂದಲೂ ಹಲವಾರು ರಾಜಮನೆತನಗಳ ಗಡಿಭಾಗಗಳಲ್ಲಿದ್ದು ಉತ್ತರ ದಕ್ಷಿಣದ ಮೇರೆಯಾಗಿದೆ ಪ್ರತಿ ಗ್ರಾಮದಲ್ಲೂ ಗಡಿಕಲ್ಲು ಎಂಬುವಂತೆ ಎರಡು ನಾಡಿನ ಗಡಿಯಲ್ಲಿ ಧಾರ್ಮಿಕ ಕೇಂದ್ರವಾದ ಹರಿಹರ ಎರಡು ಪಂಥಗಳ ಕೇಂದ್ರಸ್ಥಾನ ಹೊಯ್ಸಳರ ಕಾಲದಲ್ಲಿ ನಿರ್ಮಾಣವಾದ ಹರಿಹರೇಶ್ವರ ದೇವಾಲಯದಲ್ಲಿರುವ ಮೂರ್ತಿಯ ಆರಾಧನೆ ದೇವಾಲಯಕ್ಕೂ ಪೂರ್ವದ್ದಾಗಿದೆ ಪ್ರಸ್ತುತ ಹರಿಹರದಲ್ಲಿ ಹರಿಹರರ ನೆಲೆಸುವಿಕೆಗೆ ಸಂಬಂಧಿಸಿದಂತೆ ವೈದಿಕ ಪರಂಪರೆ ಹಾಗೂ ಶೈವ ಪರಂಪರೆ ಒಟ್ಟುಗೂಡಿದ್ದುದು ಕಾರಣವಾಗಿದ್ದರು ರಾಮಾನುಜಾಚಾರ್ಯರ ಆಗಮನದಿಂದಾಗಿ ಜೈನ ಮತಾವಲಂಬಿಗಳಾಗಿದ್ದ ಹೊಯ್ಸಳ ಸಾಮ್ರಾಜ್ಯವು ವೈಷ್ಣವ ಧರ್ಮವಲಂಬಿಗಳಾದರು. ಇಲ್ಲಿನ ಜೈನ ಧಾರ್ಮಿಕ ನಂಬಿಕೆಗಳನ್ನ ತೊಡೆದು ಹಾಕುವಲ್ಲಿ ಯಶಸ್ವಿಯಾಗಿ ವೈಷ್ಣವ ಧರ್ಮವನ್ನು ಪ್ರಚಾರ ಮಾಡಿದರು ಈ ಹಿನ್ನೆಲೆಯಲ್ಲಿ ಹೊಯ್ಸಳರು ಹಾಗೂ ಯಾದವರ ಗಡಿಭಾಗವಾದಂತಹ ಹರಿಹರದಲ್ಲಿ ಮುಂದೆ ೨ನೇ ನರಸಿಂಹನ ಕಾಲದ ತಮಿಳು ಮೂಲದ ಬ್ರಾಹ್ಮಣ ದಂಡನಾಥ ಪೋಲಾಳ್ವನು ಹರಿಹರೇಶ್ವರ ಭವ್ಯ ದೇವಾಲಯವನ್ನು ನಿರ್ಮಿಸಿ ಜೈನ ಧರ್ಮದ ಏಳಿಗೆಯನ್ನು ತಡೆದರಲ್ಲದೆ ಸ್ಥಳೀಯ ಜನಸಾಮಾನ್ಯರಲ್ಲಿ ವೈದಿಕ ಪರಂಪರೆಯ ಆಚರಣೆಯನ್ನು ಮುಂದುವರೆಸಿದರು. ಇದಕ್ಕೂ ಪೂರ್ವದಲ್ಲಿ ಇಲ್ಲಿ ಹರಿಹರರ ಆಚರಣೆ ಇದ್ದುದರ ಬಗ್ಗೆ ದಾಖಲೆಗಳಿದ್ದರು ಅದು ಅಷ್ಟೇನು ಮಹತ್ವ ಪಡೆದಿರಲಿಲ್ಲ ಬದಲಿಗೆ ಹರಪನಹಳ್ಳಿ ತಾಲೂಕಿನ (ದಾವಣಗೆರೆ ಜಿಲ್ಲೆ) ಅರಸೀಕೆರೆ ಗ್ರಾಮಕ್ಕೆ ಬಾಡದ (ಹರಪನಹಳ್ಳಿ ತಾ) ಕ್ರಿ.ಶ. ೧೧೭೩ರ ಶಾಸನ 'ಸೊಣಬನರಸಿಕೆರೆಯ ಹರಿಹರಕ್ಷೇತ್ರದಲು' ಎಂಬುದಾಗಿ ಉಲ್ಲೇಖಿಸುತ್ತದೆ. ಹರಿಹರದಲ್ಲಿ ಹರಿಹರರ ಆರಾಧನೆ ಇದ್ದರು ಹರಿಹರರ ಕ್ಷೇತ್ರವಾಗಲಿಲ್ಲ

ಆದರೆ ಪೋಲಾಳ್ವನು ದೇವಾಲಯವನ್ನು ನಿರ್ಮಿಸಿದ ನಂತರ ಇದು ಒಂದು ಹರಿಹರ ಕ್ಷೇತ್ರವಾಯಿತು ಎಂಬುದು ಇಲ್ಲಿನ ನಂತರದ ಶಾಸನಗಳು ಉಲ್ಲೇಖಿಸುತ್ತವೆ ಹಿಂದೆ ಉಚ್ಚಂಗಿ ಪಾಂಡ್ಯರಿಗೆ ಮನೆದೇವರಾಗಿದ್ದ ಹರಿಹರ ನಂತರ ಕಾಲಘಟ್ಟದಿಂದ ಇಡೀ ಈ ಪರಿಸರಕ್ಕೆ ಧಾರ್ಮಿಕ ಕೇಂದ್ರವಾಯಿತು.

* ಅ. ಸುಂದರ ಅವರ ಪ್ರಕಾರ ಮೂರ್ತಿಯ ಎತ್ತರ ಸು.೨ ೧/೨ ಯಿಂದ ೩ ಮೀಟರ್ ಎತ್ತರದ ಸಮಭಂಗಿಯಲ್ಲಿರುವ ಹರಿಹರ ಮೂರ್ತಿಯ ಮಕುಟ, ಆಭರಣಗಳ ಶೈಲಿ, ಧೋತ್ರ ಉಟ್ಟ ರೀತಿ ಮತ್ತು ಕಟಿ ಸೂತ್ರ ಮಾದರಿ ಮತ್ತು ದೈಹಿಕ ಮಾಟ ಮುಖ್ಯವಾಗಿ ಯಜ್ಞೋಪವೀತ ಹಾಗೂ ವೈಜಯಂತಿ ಇಲ್ಲದಿರುವಿಕೆ ಇವೆಲ್ಲವುಗಳಿಂದ ಈ ಮೂರ್ತಿ ೫ ಆಥವಾ ೬ನೇ ಶತಮಾನದ ಆದಿ ಭಾಗದ್ದೆಂದು ತಿಳಿಸಿದ್ದಾರೆ. ಹಾಗೆಯೇ ಶಂಕರನಾರಾಯಣರಾವ್ ಅವರು ತೆಳು ಹಸಿರಿನ ಅಗ್ನಿಶಿಲೆಯ ಹರಿಹರ ಮೂರ್ತಿಯು ೬ ಅಡಿಗಳಿಗಿಂತಲೂ ಹೆಚ್ಚಿನದಾಗಿದ್ದು ಹರಿಹರೇಶ್ವರ ದೇವಾಲಯದಲ್ಲಿ ಕ್ರಿ.ಶ. ೧೧ನೇ ಶತಮಾನದ ವೇಳೆಗೆ ಇಲ್ಲಿ ಅಸ್ತಿತ್ವದಲ್ಲಿ ಇತ್ತು ಎನ್ನವುದಕ್ಕೆ ಶಾಸನಾಧಾರಗಳಿವೆ. ಉಚ್ಚಂಗಿ ಪಾಂಡ್ಯರು ಈ ದೇವರ ಭಕ್ತರಾಗಿದ್ದರು. ಆದರೆ ಈ ದೇವಾಲಯವಿರುವ ಆಂದಿನ ನೊಳಂಬವಾಡಿ ಪ್ರದೇಶವನ್ನು ಇವರಿಗೂ ಮೊದಲು ೮ನೇ ಶತಮಾನದಿಂದ ೧೧ನೇ ಶತಮಾನದ ಮಧ್ಯಭಾಗದವರೆಗೂ ನೊಳಂಬ ಪಲ್ಲವರು ಆಳುತ್ತಿದ್ದರು. ಈ ಎರಡು ಮನೆತನಗಳು ಕಲ್ಯಾಣ ಚಾಲುಕ್ಯರ ಸಾಮಂತಿಕೆಯನ್ನ ಒಪ್ಪಿದ್ದರು. ಮೂರ್ತಿಯ ಲಕ್ಷಣಗಳನ್ನ ಗಮನಿಸಿದಾಗ ಇದು ಕಲ್ಯಾಣ ಚಾಲುಕ್ಯರ ಆರಂಭ ಕಾಲಕ್ಕೆ ಸೇರಿದ ಮೂರ್ತಿ ಎನಿಸುತ್ತದೆ. ಜೊತೆಗೆ ಹಿರಿಯ ವಿದ್ವಾಂಸರು ಮೂರ್ತಿಯ ದೇಹದ ಅನೇಕ ಭಾಗಗಳು ಅನ್ಯಧರ್ಮಿಯರ ಆಳ್ವಿಕೆಗೆ ಸಿಕ್ಕು ಭಗ್ನಗೊಂಡು ಕಾಲಾಂತರದಲ್ಲಿ ಮತ್ತೆ ಸೇರಿಸಲ್ಪಟ್ಟಿವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇಲ್ಲಿಯ ಶಾಸನಗಳಲ್ಲಿ ಬನವಾಸಿ ಕದಂಬರಿಂದ ಮೊದಲಾಗಿ ಬಾದಾಮಿ ಚಾಲುಕ್ಯರು, ಕಲ್ಯಾಣದ ಚಾಲುಕ್ಯರು, ಹೊಯ್ಸಳರ ಕಾಲದವರೆಗೂ ದೇವಾಲಯದ ಅಳಿವು ಉಳಿವುಗಳ ಬಗೆಗೆ ದಾಖಲೆಗಳು ದೊರೆಯುವುದರಿಂದ ಈ ಶಿಲ್ಪವು ೫ ಅಥವಾ ೬ನೇ ಶತಮಾನದ ಆದಿ ಭಾಗದಲ್ಲಿ ನಿರ್ಮಾಣಗೊಂಡಿರುವ ಸಾಧ್ಯತೆ ಇದೆ. ಎನ್ನುವ ಅ. ಸುಂದರ ಅವರ ಅಭಿಪ್ರಾಯವನ್ನು ಒಪ್ಪಬಹುದಾಗಿದೆ. ಶಿಲ್ಪದ ಭಾಗಗಳನ್ನ ಜೋಡಿಸಿದ್ದು ನಿಜವೇ ಆಗಿದ್ದಲ್ಲಿ ಶಿಲ್ಪದ ವಿವಿಧ ಭಾಗಗಳನ್ನು ಬೇರೆ ಬೇರೆ ತಯಾರಿಸಿ ನಂತರ ಜೋಡಿಸುವ ಶಿಲ್ಪ ತಂತ್ರಜ್ಞತೆ ನಮ್ಮ ನಾಡಿನಲ್ಲಿ ಇತ್ತೇನ್ನುವ ವಿಶೇಷತೆಗೆ ನಮ್ಮ ಹರಿಹರ ಶಿಲ್ಪ ಕಾರಣವಾಗುತ್ತದೆ.

* ಹರಿಹರ ಪರಿಸರದ ಧಾರ್ಮಿಕ ಪರಂಪರೆ ಕುರಿತು ತಿಳಿಯುವುದಾದರೆ ಶೈವ ಧರ್ಮವು ಈ ಪ್ರದೇಶದಲ್ಲಿ ಪ್ರಾಮುಖ್ಯತೆ ಪಡೆದ ಧರ್ಮವಾಗಿತ್ತೆಂದು ಇಲ್ಲಿನ ಪ್ರಾಚೀನ ದೇವಾಲಯಗಳು ಹಾಗೂ ಸ್ಮಾರಕಗಳಿಂದ ತಿಳಿದು ಬರುತ್ತದೆ. ಇದು ಹೆಚ್ಚಿನ ಪ್ರಾಮುಖ್ಯತೆ ಗಳಿಸಲು ಕಾರಣ

ಈ ಭಾಗದ ಶ್ರೀಮಂತರು, ಸಾಮಂತರು, ಗಾವುಂಡರು, ಭೂಮಾಲೀಕರು, ವ್ಯಾಪಾರಿಗಳು ಹಾಗೂ ಅಗ್ರಹಾರಗಳು ನೀಡಿದ ದೊಡ್ಡ ಮಟ್ಟದ ದಾನದತ್ತಿಗಳು, ದೇವಾಲಯಗಳ ನಿರ್ಮಾಣ ಹಾಗೂ ಸಂರಕ್ಷಣೆಯ ಸಲುವಾಗಿ ಇಲ್ಲಿನ ಹರಿಹರ, ಚಿಕ್ಕಬಿದರೆ, ಜಿಗಳೆ, ನಂದಿತಾವರೆ, ಬನ್ನಿಕೋಡು ದೇವಾಲಯಗಳು ತೋರಿದ ಆಸಕ್ತಿ, ಶೈವ ಧರ್ಮವು ಇತರ ಧರ್ಮಗಳಿಗಿಂತ ಪ್ರಾಮುಖ್ಯತೆ ಹೊಂದಲು ಕಾರಣವಾಗಿದೆ. ದೊಡ್ಡ ದೊಡ್ಡ ಮಾಂಡಲಿಕರು ತಮ್ಮ ಹೆಸರಿನಲ್ಲಿ ದೇವಾಲಯವನ್ನು ನಿರ್ಮಾಣ ಮಾಡುವುದು ಸರ್ವೆ ಸಾಮಾನ್ಯವಾಗಿರುವುದನ್ನು ಬೇರೆ ಪ್ರದೇಶಗಳಲ್ಲಿ ಕಾಣುತ್ತೇವೆ ಆದರೆ ಸಾಮಾನ್ಯ ಜನರು ಹಾಗೂ ಭೂಮಾಲಿಕರು ತಮ್ಮ ಹೆಸರಿನಲ್ಲಿ ದೇವಾಲಯ ನಿರ್ಮಾಣ ಮಾಡಿದ್ದಾರೆ. ಕ್ರಿ.ಶ.೧೧೩೪ರ ನಿಟ್ಟೂರು ಶಾಸನವು ಬಲ್ಲಯ್ಯನ ಹೆಸರಿನಲ್ಲಿ ನಿರ್ಮಾಣವಾಗಿರುವ ಬಲ್ಲೇಶ್ವರ ದೇವಾಲಯಕ್ಕೆ ನೀಡಿದ ದೇವರ ಮುಂದಿನ ಕೆರೆಯ ಗದ್ದೆ ಹಾಗೂ ಊಳಗಕ್ಕೆ ಕೊಟ್ಟ ಭೂದಾನವನ್ನು ವಿವರಿಸುತ್ತವೆ. ಆದ್ದರಿಂದ ಗಾವುಂಡರು, ಆಚಾರ್ಯರು, ಸಣ್ಣ ಭೂಮಾಲಿಕರು, ವ್ಯಾಪಾರಿಗಳು ಮತ್ತು ದಂಡನಾಯಕರು ಶೈವ ಧರ್ಮವನ್ನು ಬೆಂಬಲಿಸಿದರು ಇನ್ನೂ ಮಾತೃ ದೇವತೆಯ ಆರಾಧನೆ ಹೆಚ್ಚಾಗಿ ಇತ್ತೆಂಬುದಕ್ಕೆ ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾಣಸಿಗುವ ಮಹಿಷಸುರ ಮರ್ದಿನಿ ಹಾಗೂ ಸಪ್ತಮಾತೃಕೆ ಮೂರ್ತಿಗಳು ಸಾಕ್ಷಿಯಾಗಿವೆ ಹಲವಾರು ದೇವಾಲಯಗಳಲ್ಲಿ ಈ ಮೂರ್ತಿಗಳನ್ನ ಸುಕನಾಸಿ ಅಥವಾ ನವರಂಗ ಮಂಟಪದಲ್ಲಿ ಕಾಣುತ್ತೇವೆ. ಕ್ರಿ.ಶ. ೫-೬ನೇ ಶತಮಾನದಿಂದಲೂ ಆಚರಣೆಯಲ್ಲಿದ್ದರೂ ಹರಿಹರ ಕಲ್ಪನೆಯು ಹೊಯ್ಸಳರ ಕಾಲದಲ್ಲಿ ಮಹೊನ್ನತಿಯನ್ನು ಪಡೆಯಿತು. ಇದು ಶೈವ ಹಾಗೂ ವೈಷ್ಣವ ಧರ್ಮಗಳ ಸಮ್ಮಿಲನ ಸಂಕೇತದ ಮೂರ್ತಿಯ ಆರಾಧನೆಯಾಗಿದೆ. ಈ ಪರಿಸರದಲ್ಲಿ ಹೆಚ್ಚಿನದಾಗಿ ಶೈವ ದೇವಾಲಯಗಳೆ ಇದ್ದರೂ ಎರಡು ಧರ್ಮಗಳ ಸಂಕೇತಕ್ಕೆ ಹೆಚ್ಚು ಪ್ರಾಶಸ್ತ್ಯವನ್ನ ನೀಡಿದ್ದಾರೆ.

* ಈ ಪರಿಸರದ ಬೇಸಾಯವು ಮಳೆಯ ಮೇಲೆ ಅವಲಂಬಿತವಾಗಿದ್ದು, ನದಿ, ಹಳ್ಳಗಳು ಕೇವಲ ಮಳೆಗಾಲದಲ್ಲಿ ಹರಿಯುತ್ತಿದ್ದವು ಇದರಿಂದಾಗಿ ನೀರಾವರಿ ಕಾರ್ಯಗಳಿಗೆ ಹರಿಹರದ ಪ್ರಾಚೀನ ಜನರು ವಿವಿಧ ಕ್ರಮಗಳನ್ನು ಕೈಗೊಂಡಿದ್ದರು ಕೆರೆ ನಿರ್ಮಾಣ, ಬಾವಿಗಳ ನಿರ್ಮಾಣದಿಂದ ಬೇಸಾಯಕ್ಕೆ ಬಳಸಿಕೊಂಡರು. ಇವು ನೀರಾವರಿಗೆ ಅನುಕೂಲಕರವಾಗಿರುವುದು. ಇಲ್ಲಿನ ಶಾಸನಗಳಿಂದ ತಿಳಿದುಬರುತ್ತದೆ. ರಾಮಚಂದ್ರನ ಮಹಾಪ್ರಧಾನ ಸರ್ವಾಧಿಕಾರಿ ತಿಪ್ಪರಸನು ಶ್ರೀಮದನಾದಿಯಗ್ರಹಾರಂ ಶ್ರೀಲಕ್ಷ್ಮೀನಾರಯಣಪುರವಾದ ಬಾನವಳ್ಳಿಯಶೇಷಮಹಾಜನಂಗಳಿಗೆ ಆ ಸ್ಥಳದ ಕೆರೆಯ ಧರ್ಮಕ್ಕೆ ದಾನ ಬಿಟ್ಟ ಮಾಹಿತಿ ಆನೇಕ ರೀತಿಯ ದಾನ ನೀಡುವ ಸಂದರ್ಭದಲ್ಲಿ ಕೆರೆ ಕೆಳಗಿನ ಗದ್ದೆಯನ್ನ ದಾನ ನೀಡಿರುವುದು ದಾನದ ವಿಚಾರದಲ್ಲಿ ಗಡಿಯನ್ನು ಹೇಳುವ ಸಂದರ್ಭದಲ್ಲಿ ಕೆರೆಗಳ ವಿಚಾರ ಹಾಗೆಯೇ ಮಧ್ಯಕಾಲಿನಲ್ಲಿ ಹರಿಹರ ಪರಿಸರದಲ್ಲಿನ

ಹರಿದ್ರಾ ನದಿಗೆ ವಿಜಯನಗರ ಅರಸರು ಅಡ್ಡಲಾಗಿ ಕಟ್ಟೆ ಕಟ್ಟಿಸಿ ನೀರಾವರಿಗೆ ಪ್ರೋತ್ಸಾಹ ನೀಡಿದ ಅಂಶಗಳು ಬರುತ್ತವೆ ಆದರೆ ಪ್ರಸ್ತುತ ಭದ್ರಾ ಡ್ಯಾಂನ ಕಾಲುವೆಗಳಿಂದಾಗಿ ಹರಿಹರದ ಹಲವಾರು ಕೆರೆಗಳನ್ನು ಮುಚ್ಚಿ ಬೇಸಾಯ ಭೂಮಿಗಳನ್ನಾಗಿ ಮಾಡಿಕೊಂಡಿದ್ದಾರೆ.

* ಹರಿಹರ ಪರಿಸರದಲ್ಲಿ ಸಿಗುವ ಸ್ಮಾರಕ ಶಿಲ್ಪಗಳಲ್ಲಿ ಹೆಚ್ಚಾಗಿ ತುರುಗೋಳ್ ವೀರಗಲ್ಲುಗಳಾಗಿದ್ದು ಇವುಗಳನ್ನ ಹಾಗೂ ಈ ಪ್ರದೇಶದ ಸ್ಥಳನಾಮಗಳನ್ನು ಗಮನಿಸುತ್ತಾ ಹೋದರೆ ಈ ಪ್ರದೇಶ ಸಂಪತ್ಭರಿತವಾದ ಪ್ರದೇಶವೆಂದು ತಿಳಿಯುತ್ತದೆ. ಮುಖ್ಯವಾಗಿ ಗೋವಿನಹಾಳು, ಹಿಂಡಸಗಟ್ಟ, ನಂದಿಗುಡಿ, ನಂದಿಗಾವಿ, ನಂದಿತಾವರೆ, ಗೋವಿನಕೋವಿ, ಗೋಪಗೊಂಡನಹಳ್ಳಿ ಮುಂತಾದ ಸ್ಥಳನಾಮಗಳು ಪ್ರಾಚೀನ ಕಾಲದ ಆರ್ಥಿಕ ಸಂಪನ್ಮೂಲದ ಸಂಕೇತಗಳಾದ ಗೋವನ್ನು ಪ್ರತಿನಿಧಿಸುವಂತಹ ಸ್ಥಳನಾಮಗಳೇ ಇವಾಗಿದ್ದು ಈ ಪರಿಸರದಲ್ಲಿ ಅನೇಕ ತುರುಗೋಳ್ ವೀರಗಲ್ಲುಗಳಿವೆ. ತುರುಗಳನ್ನ ಕಳ್ಳರಿಂದ ಬಿಡಿಸಿಕೊಳ್ಳುವ ಸಲುವಾಗಿ ಹೋರಾಡಿ ಮಡಿದು ವೀರ ಸ್ವರ್ಗಸ್ಥನಾದ ವೀರನ ಸ್ಮರಣಾರ್ಥವಾಗಿ ನಿಲ್ಲಿಸಿದ ವೀರಗಲ್ಲುಗಳನ್ನು ಹಾಕಿಸಿ ವೀರನ ಕುಟುಂಬಕ್ಕೆ ದಾನ ನೀಡಿದ ಹಲವು ವೀರಗಲ್ಲು ಶಾಸನಗಳಲ್ಲಿ ತುರುಗಳನ್ನ ಸಾಕಿ ಸಲಹುತ್ತಿದ್ದಂತಹ ಸ್ಥಳೀಯ ಗೌಡರ, ಊರೋಡೆಯರು, ಗೋವುಗಳನ್ನು ಸಂಕೇತಿಸುವಂತಹ ಹೆಸರುಗಳು ಶಾಸನಗಳಲ್ಲಿ ಉಲ್ಲೇಖವಾಗಿವೆ. ಉದಾ: ಕುಂಬೂರನಾಲವಲ್ಲಿ ಪೂರಳಿವಿನಲು ನಾರಾಣಪ ಸುರಲೋಕ ಪ್ರಾಪ್ತನಾದಲ್ಲಿ ವೂರೊಡೆಯ ಗೋಪಯ್ಯರೊಡೆಯರು ಎಂದಿದೆ. ಊರೋಡೆಯ ಗೋಪಯ್ಯನ ಹೆಸರು ಪ್ರಾಚೀನ ಕುಂಬಳೂರಿನಲ್ಲಿದ್ದ ದನಗಳಿಗೆ ಒಡೆಯನಾಗಿದ್ದ ಎಂಬ ಸುಳಿವನ್ನ ನೀಡುತ್ತದೆ ಇನ್ನೂ ಕೇಲವು ಕಡೆ ಗದ್ದೆ, ಬೆದ್ದಲು ಭೂಮಿ, ಗೋಮಾಳ ಎಂಬ ಭೂಮಿಯ ಉಲ್ಲೇಖಗಳು ದಾನದ ರೀತಿಯಲ್ಲಿ ಕಂಡುಬರುವುದನ್ನ ಗಮನಿಸಿದರೆ ಗೋಮಾಳ ಎನ್ನುವುದು ಗೋವುಗಳು ಮೇಯುವುದಕ್ಕೆ ದಾನ ನೀಡಿದ್ದನ್ನು ತಿಳಿಸುತ್ತವೆ. ಮೇಲೆ ತಿಳಿಸಿದ ನಂದಿಯ ಗುರುತು ಆಗಿರುವ ಸ್ಥಳನಾಮಗಳು ಈ ಪರಿಸರದಲ್ಲಿ ಅತಿ ಹೆಚ್ಚು ಗಾತ್ರದ ನಂದಿಶಿಲ್ಪಗಳು ಇವೆ.

ಹರಿಹರ ತಾಲೂಕಿನಲ್ಲಿ ಕಂಡುಬರುವ ಐತಿಹ್ಯ, ಸ್ಥಳಪುರಾಣ, ನಂಬಿಕೆ, ಆಚರಣೆ ಹಾಗೂ ಜಾತ್ರೆ-ಉತ್ಸವಗಳು ವಿಶಿಷ್ಟ ಸಾಂಸ್ಕೃತಿಕ ಪರಂಪರೆಯ ಇತಿಹಾಸವನ್ನು ಒಳಗೊಂಡಿವೆ. ಈ ಪರಿಸರದ ಜಾತ್ರೆಯಲ್ಲಿ ಕಂಡುಬರುವ ಅಂಶವೆಂದರೆ ಇಲ್ಲಿನ ಬಹುತೇಕ ಜಾತ್ರೆಗಳು ಸಮಕಾಲೀನ ಅಥವಾ ಐತಿಹಾಸಿಕ ವ್ಯಕ್ತಿಗಳ ಸಂಬಂಧವಾಗಿ ಹುಟ್ಟಿಕೊಂಡಿವೆ ಎಂಬುದು ಗಮನಾರ್ಹ ಅಂಶ. ಈ ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಂಡ ಸಂಶೋಧನಾತ್ಮಕ ವರದಿಗಳು, ಪುಸ್ತಕಗಳು, ಲೇಖನಗಳು ಮತ್ತು ಅಪ್ರಕಟಿತ ಮಹಾಪ್ರಬಂಧಗಳು ಮುಂತಾದ ವಿವರಗಳನ್ನು ಗ್ರಂಥಋಣದಲ್ಲಿ ನೀಡಲಾಗಿದೆ. ಅಧ್ಯಯನಕ್ಕೆ ಸಂಬಂಧಿಸಿದ ತಲನಕ್ಷೆ ಮತ್ತು ಛಾಯಾಚಿತ್ರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

***

ಅನುಬಂಧಗಳು

ಗ್ರಂಥಋಣ

ಗ್ರಂಥಋಣ

ಕನ್ನಡ ಪುಸ್ತಕಗಳು

ಅಣ್ಣಿಗೇರಿ ಎ.ಎಂ., (ಸಂ.), ೧೯೭೫, ಕರ್ನಾಟಕ ಶಾಸನಗಳ ಸ್ವರೂಪ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಅಪರ್ಣಾ ಕೂ.ಸ., ೧೯೯೯, ದೇವಾಲಯ ವಾಸ್ತುಶಿಲ್ಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಅನಂತರಾಮು ಕೆ., ೧೯೯೭, ದಕ್ಷಿಣದ ಸಿರಿನಾಡು, ಅನಂತಪ್ರಕಾಶನ, ದೇವಾಲಯದ ಅಗ್ರಹಾರ, ಮೈಸೂರು

ಇರ್ಫಾನ್ ಹಬೀಬ್, (ಮೂಲ.) ಪ್ರದೀಪ್ ಬೆಳಗಲ್, (ಅನು.), ೨೦೦೮, ಪೂರ್ವೇತಿಹಾಸ, ಚಿಂತನ ಪುಸ್ತಕ, ಬೆಂಗಳೂರು

ಈಶ್ವರಪ್ಪ ಎಂ.ಜಿ., ೨೦೦೧, ಶತಮಾನದ ದಾವಣಗೆರೆ, ಚಂಪಲಾಲ್ ಬಿ.ಡೆಲ್ಡರಿಯಾ, ದಾವಣಗೆರೆ

ಕಮಲದಾನಿ ಗುರುರಾಯರು, ೧೯೯೬, ಹರಿಹರ ಕ್ಷೇತ್ರದ ಮಹಾತ್ಮೆ, ಶ್ರೀಕಾಂತಕುಲಕರ್ಣಿ, ಹರಿಹರ

ಕಪಟರಾಳ ಕೃಷ್ಣರಾಯರು, ೧೯೫೫, ಕರ್ನಾಟಕದ ಲಾಕುಳ ಶೈವರು, ಕರ್ನಾಟಕ ಇತಿಹಾಸ ಅಕಾಡೆಮಿ ಸಂಸ್ಥೆ, ಧಾರವಾಡ

ಕಲಬುರ್ಗಿ ಎಂ.ಎಂ., ೧೯೮೦, ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು, ಐಬಿಹೆಚ್ ಪ್ರಕಾಶನ, ಬೆಂಗಳೂರು

ಕಲಬುರ್ಗಿ ಎಂ.ಎಂ.(ಸಂ.), ೧೯೯೪, ಕರ್ನಾಟಕದ ಕೈಫಿಯತ್ತುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕಲಬುರ್ಗಿ ಎಂ.ಎಂ., ೧೯೯೯, ಪ್ರಾಚೀನ ಕರ್ನಾಟಕದ ಆಡಳಿತದ ವಿಭಾಗಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕೊಟ್ರೇಶ್ ನಾ. ಉತ್ತಂಗಿ, ೨೦೧೩, ಹರಿಹರದೆಳೆಗಳು, ಸಹನಾದ್ರಿ ಪ್ರಕಾಶನ, ಹೊನ್ನಾಳಿ

ಗಿರಿಜ ಟಿ., ೧೯೮೫, ದಾವಣಗೆರೆ ದರ್ಶಿನಿ, ರೇಖಾ ಪ್ರಕಾಶನ, ದಾವಣಗೆರೆ

ಗಿರಿಜ ಟಿ., ೨೦೦೧, ದಾವಣಗೆರೆ ಇದು ನಮ್ಮ ಜಿಲ್ಲೆ, ನಿಹಾರಿಕ ಪ್ರಕಾಶನ, ದಾವಣಗೆರೆ

ಗಿರಿಜ ಟಿ., ೨೦೦೧, ಭಾರತದ ನದಿಗಳು, ನಿಹಾರಿಕ ಪ್ರಕಾಶನ, ದಾವಣಗೆರೆ

ಗುರುರಾಜರಾವ್ ಎ.ಕೆ., ೧೯೭೦, ಕರ್ನಾಟಕ ಶಿಲಾಯುಗ ಸಂಸ್ಕೃತಿಗಳು, ಪ್ರಚಾರ ಪುಸ್ತಕ ಮಾಲೆ ೧೭೨, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಗೋಪಾಲ ಬಾ.ರಾ., ೧೯೮೨, ಕರ್ನಾಟಕದಲ್ಲಿ ನವಶಿಲಾಯುಗ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಗೋಪಾಲ ಬಾ.ರಾ., ೧೯೮೩, ಬನವಾಸಿ ಕದಂಬರು, ಕದಂಬರ ಸಾಂಸ್ಕೃತಿಕ ಅಧ್ಯಯನ ಸಂಸ್ಥೆ, ಶಿರಸಿ

ಗೋಪಾಲಕೃಷ್ಣ ವಿ., ೧೯೮೭, ಸ್ಥಳನಾಮ ಅಧ್ಯಯನಗಳು, ವಿದ್ಯಾಗಿರಿ ಪ್ರಕಾಶನ, ದಾರಿನಾಯಕನಪಾಳ್ಯ ಗೌರಿಬಿದನೂರು

ಚನ್ನಕ್ಕ ಎಲಿಗಾರ, ೧೯೮೭, ಪ್ರಾಚೀನ ಕರ್ನಾಟಕದ ರಾಣಿಯರು, ಚನ್ನಗಂಗಾ ಪ್ರಕಾಶನ, ಧಾರವಾಡ

ಚನ್ನಕ್ಕ ಎಲಿಗಾರ, ೧೯೯೦, ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ಚನ್ನಗಂಗಾ ಪ್ರಕಾಶನ, ಧಾರವಾಡ

ಚನ್ನಕ್ಕ ಎಲಿಗಾರ, ೧೯೯೫, ಸಂಸ್ಕೃತಿ ಸಂಶೋಧನೆ, ಚನ್ನಗಂಗಾ ಪ್ರಕಾಶನ, ಧಾರವಾಡ

ಚನ್ನಬಪ್ಪ ಪಾಟೀಲ, ೧೯೯೯, ಕರ್ನಾಟಕದ ಕೋಟೆಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ,ಹಂಪಿ

ಚಂದ್ರಹಾಸಗುಪ್ತ ಎ. ಆರ್., ೧೯೮೫, ಕರ್ನಾಟಕ ಗ್ರಾಮಸೂಚಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು

ಚಿದಾನಂದಮೂರ್ತಿ ಎಂ., ೧೯೭೦, ಸಂಶೋಧನಾ ತರಂಗ ಸಂ-೨, ಕನ್ನಡ ಸಾಹಿತ್ಯ ಪ್ರಕಾಶನ, ಬೆಂಗಳೂರು

ಚಿದಾನಂದಮೂರ್ತಿ ಎಂ., ೧೯೮೪, ಮಾಸ್ತಿಗಲ್ಲು-ವೀರಗಲ್ಲು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು

ಚಿದಾನಂದಮೂರ್ತಿ ಎಂ., ೧೯೯೩, ಹೊಸತು-ಹೊಸತು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,ಹಂಪಿ

ಚಿದಾನಂದಮೂರ್ತಿ ಎಂ., ೨೦೦೨, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸಪ್ನ ಬುಕ್ ಹೌಸ್, ಬೆಂಗಳೂರು

ಜಯಮ್ಮ ಕರಿಯಣ್ಣ, ೨೦೦೮, ನೊಳಂಬರ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ಇತಿಹಾಸ ಸಂಶೋಧನಾ ಮಂಡಲ, ಧಾರವಾಡ

ತಿಪ್ಪೇರುದ್ರಸ್ವಾಮಿ ಹೆಚ್., ೨೦೦೩, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿವಿಕೆ ಮೂರ್ತಿ ಪ್ರಕಾಶನ, ಮೈಸೂರು

ತಿಪ್ಪೇಸ್ವಾಮಿ ಪಿ.ಆರ್.,(ಪ್ರ.ಸಂ.), ೧೯೯೪, ಶಿಲ್ಪಕಲಾ ಪ್ರಪಂಚ, ಕರ್ನಾಟಕ ಲಲಿತಾ ಕಲಾ ಅಕಾಡೆಮಿ, ಬೆಂಗಳೂರು

ದೇವರಕೊಂಡಾರೆಡ್ಡಿ, ೧೯೯೪, ಭಾರತೀಯ ವಾಸ್ತು ವಿದ್ಯೆ, ರೆಡ್ಡಿ ಪ್ರಕಾಶನ, ಬೆಂಗಳೂರು

ದುಂಡ್ಯಪ್ಪ ಹಿ.ಗೂ., ೧೯೯೬, ೬೬ ಹಳ್ಳಿಯ ಒಡತಿ ಊರಮ್ಮನ ಚರಿತೆ, ಕುಂಭೇಶ್ವರ ಪ್ರಕಾಶನ, ಹರಿಹರ

ದ್ರುವರಾಜ ನಾ. ಗದಗಕರ, ೧೯೯೯, ದೇಗುಲ ರಥಶಿಲ್ಪ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ,ಹಂಪಿ

ನರಸಿಂಹಮೂರ್ತಿ ಎ.ವಿ., ೧೯೭೧, ಕರ್ನಾಟಕದ ಸೇವುಣರ ಇತಿಹಾಸ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ನಂಜುಂಡಸ್ವಾಮಿ ಎ.ಎಸ್., ೨೦೦೯, ವಿಜಯನಗರದ ಇತಿಹಾಸ, ಕರ್ನಾಟಕ ಇತಿಹಾಸಮಾಲಿಕೆ, ಸಮಾಜ ಪುಸ್ತಕಾಲಯ, ಧಾರವಾಡ

ನಂಜುಂಡಸ್ವಾಮಿ ಎ.ಎಸ್., ೨೦೧೨, ಹೊಯ್ಸಳರ ಇತಿಹಾಸ, ಕರ್ನಾಟಕ ಇತಿಹಾಸಮಾಲಿಕೆ, ಸಮಾಜ ಪುಸ್ತಕಾಲಯ, ಧಾರವಾಡ

ನಂಜುಂಡಸ್ವಾಮಿ ಎ.ಎಸ್., ೨೦೧೨, ಪಾಳೆಯಗಾರರು ಮತ್ತು ಒಡೆಯರ ಇತಿಹಾಸ, ಕರ್ನಾಟಕ ಇತಿಹಾಸ ಮಾಲಿಕೆ, ಸಮಾಜ ಪುಸ್ತಕಾಲಯ, ಧಾರವಾಡ

ನಾಗಯ್ಯ ಜೆ.ಎಂ., ೧೯೯೨, ಆರನೇಯ ವಿಕ್ರಮಾದಿತ್ಯನ ಶಾಸನಗಳು ಒಂದು ಅಧ್ಯಯನ, ವೀರಶೈವ ಅಧ್ಯಯನ ಅಕಾಡೆಮಿ, ಶ್ರೀ ನಾಗನೂರು ರುದ್ರಾಕ್ಷಿ ಮಠ, ಬೆಳಗಾವಿ

ನಾಗರಾಜು ಡಿ.ಎಂ., ೨೦೧೨, ಕಲ್ಯಾಣ ಚಾಲುಕ್ಯ ಆರನೇಯ ವಿಕ್ರಮಾದಿತ್ಯನ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಗೌತಮ ಪ್ರಕಾಶನ, ಮೈಸೂರು

ಪರಮಶಿವಮೂರ್ತಿ ಡಿ.ವಿ., ೧೯೯೯, ಕನ್ನಡ ಶಾಸನಶಿಲ್ಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,ಹಂಪಿ

ಪುರುಷೋತ್ತಮ ರಾ. ಲ., ೧೯೯೭, ಕಂಬನಿದುಂಬಿದ ಕಲ್ಲುಗಳು, ಸತ್ಯಪುರುಷ ಪ್ರಕಾಶನ, ಭದ್ರಾವತಿ

ಪುರುಷೋತ್ತಮ ರೆಡ್ಡಿ, ೧೯೯೦, ಖನಿಜಗಳು, ಪ್ರಸಾರಾಂಗ, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ

ಪ್ರಭಾಕರ ಎಂ.ಎನ್., ೨೦೧೧, ದೇವಾಲಯ ವಾಸ್ತು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,ಹಂಪಿ

ಫ್ರಾನ್ಸಿಸ್ ಕ್ಸೇವಿಯರ್, ೨೦೦೧, ಹರಿಹರ ಆರೋಗ್ಯ ಮಾತೆಯ ಪುಣ್ಯಕ್ಷೇತ್ರದ ಚರಿತೆ, ಸಜೀವ ಸಂಕೇತ ಪ್ರಕಾಶನ, ಹರಿಹರ

ಬಸವರಾಜು ಕೆ.ಆರ್., (ಸಂ.), ೨೦೦೫, ನೊಳಂಬ ಇತಿಹಾಸ ದರ್ಶನ, ನೊಳಂಬ ಇತಿಹಾಸ ಪರಿಷತ್, ತಿಪಟೂರು

ಬಳ್ಳಕೆರೆ ಹನುಮಂತಪ್ಪ, ೨೦೦೨, ಹರಿಹರ ತಾಲೂಕು ದರ್ಶಿನಿ, ಕಮಲ ಪ್ರಕಾಶನ, ಶಿವಮೊಗ್ಗ

ಭಟ್‌ಸೂರಿ ಕೆ.ಜಿ., (ಸಂ.), ೨೦೦೯, ಕರ್ನಾಟಕ ಶಾಸನ ಸಂಶೋಧನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,ಹಂಪಿ

ಬೇಟಗೆರಿ ಕೃಷ್ಣಶರ್ಮ, ೧೯೭೧, ಕರ್ನಾಟಕ ಜನ ಜೀವನ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮಹದೇವ ಸಿ., ವಾಸುದೇವನ್ ಸಿ,ಎಸ್., ರಮೇಶನಾಯಕ, (ಸಂ.), ೧೯೯೯, ಕರ್ನಾಟಕ ದೇವಾಲಯ ಕೋಶ, ಹಾವೇರಿ ಜಿಲ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮಹದೇವ ಸಿ., (ಸಂ.), ೨೦೦೬, ಕರ್ನಾಟಕ ದೇವಾಲಯ ಕೋಶ, ಧಾರವಾಡ ಜಿಲ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮಂಜುನಾಥ ಬೇವಿನಕಟ್ಟಿ, ೨೦೦೭, ಕನ್ನಡ ಜನಪದ ನಂಬಿಕೆಗಳು, ಜ್ಯೋತಿ ಪ್ರಕಾಶನ, ಮೈಸೂರು

ಮಂಜುನಾಥ ಸಿ.ಯ., ೨೦೧೨, ಶಾಸನಗಳು ಮತ್ತು ಕರ್ನಾಟಕ ಸಂಸ್ಕೃತಿ, ಚಿತ್ಕಲಾ ಪ್ರಕಾಶನ, ಕುಪ್ಪಂ

ಬಾಲಸುಬ್ರಮಣ್ಯ, ವಾಸುದೇವನ್ ಸಿ.ಎಸ್., ರಮೇಶನಾಯಕ, (ಸಂ.), ೨೦೦೭, ಕರ್ನಾಟಕ ದೇವಾಲಯ ಕೋಶ, ಗದಗ ಜಿಲ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಯ, ಹಂಪಿ

ಮನೋಜ್ ಜಿ., ೨೦೧೫, ದೇವಾಲಯ ವಾಸ್ತು ವಿಜ್ಞಾನ, ಸುಭೋಧಿನಿ ಬುಕ್ ಪಬ್ಲಿಷರ್ಸ್ ಮತ್ತು ನಾಲೆಡ್ಜ್ ಅಕಾಡೆಮಿ, ಚಿತ್ರದುರ್ಗ

ರಮೇಶನಾಯಕ, ೨೦೦೭, ಕರ್ನಾಟಕದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ರಮೇಶ್ ಸ.ಚಿ., ೨೦೧೦, ಕರ್ನಾಟಕದ ಜನಪದ ಆಚರಣೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ರಮೇಶ ಹೆಚ್., ೨೦೧೩, ಅರಸೀಕೆರೆ ಚರಿತ್ರೆ ಮತ್ತು ಸಂಸ್ಕೃತಿ, ಶ್ರೀ ಕೋಲಶಾಂತೇಶ್ವರ ಕಲ್ಯಾಣ ಕೇಂದ್ರ, ಅರಸೀಕೆರೆ

ರಾಮಚಂದ್ರರಾವ್ ಎಸ್.ಕೆ., ೧೯೭೫, ಮೂರ್ತಿಶಿಲ್ಪ ನೆಲೆ–ಹಿನ್ನೆಲೆ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ರಾಮಚಂದ್ರರಾವ್ ಎಸ್. ಕೆ., ೧೯೭೯, ಭಾರತದ ದೇವಾಲಯ ನೆಲೆ–ಹಿನ್ನೆಲೆ, ಐಬಿಎಚ್ ಪ್ರಕಾಶನ, ಬೆಂಗಳೂರು

ರಾಜಶೇಖರಪ್ಪ ಜಿ., ೨೦೦೧, ಇತಿಹಾಸ ಕಥನ, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು

ರಾಜಶೇಖರ ಸಿಂದಗಿ, ೧೯೮೮, ಕರ್ನಾಟಕ ವಾಸ್ತುಶಿಲ್ಪ ಮತ್ತು ಶಿಲ್ಪಕಲೆ, ಸುಜಾತ ಪಬ್ಲಿಕೇಷನ್ಸ್, ಧಾರವಾಡ

ರಾಮಪ್ರಸಾದ್ ಎನ್.ಎಸ್., ೧೯೮೩, ಪ್ರಾಚೀನ ಕರ್ನಾಟಕದಲ್ಲಿ ರಾಜ್ಯಾಡಳಿತ, ಕನ್ನಡ ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು

ಲಕ್ಷ್ಮಣ್ ತೆಲಗಾವಿ, (ಸಂ.), ೧೯೮೭, ಹರತಿಸಿರಿ, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ

ಲಕ್ಷಣ್ ತೆಲಗಾವಿ, (ಸಂ.), ೨೦೦೪, ಮೌರ್ಯ ಮತ್ತು ಶಾತವಾಹನಯುಗ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಲಕ್ಷ್ಮೀನಾರಾಯಣಭಟ್ ಮತ್ತು ಪಂಚಮುಖಿ ಆರ್.ಎಸ್., ೨೦೦೭, ಕರ್ನಾಟಕದ ಅರಸುಮನೆತನಗಳು, ಇತಿಹಾಸ ಸಂಶೋಧನ ಮಂಡಲ, ಧಾರವಾಡ

ವಸಂತಲಕ್ಷ್ಮೀ ಕೆ., ೨೦೦೮, ಕರ್ನಾಟಕದ ಶೈವ ಶಿಲ್ಪಗಳು, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ

ವಾಸುದೇವ ಬಡಿಗೇರ, ೨೦೦೪, ಶಿರಸಂಗಿ ಕಾಳಮ್ಮ-ಚಾರಿತ್ರಿಕ ಅಧ್ಯಯನ, ಶ್ವೇತಾ-ಭಗೀರಥೀ ಪ್ರಕಾಶನ, ಹೊಸಪೇಟೆ

ವಾಸುದೇವ ಬಡಿಗೇರ., (ಸಂ.), ೨೦೦೬, ಕರ್ನಾಟಕ ದೇವಾಲಯ ಕೋಶ, ವಿಜಾಪುರ ಜಿಲ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಾಸುದೇವ ಬಡಿಗೇರ, ೨೦೧೨, ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಷೇಕ್ ಅಲಿ. ಬಿ., ಮತ್ತು ಸುಂದರ ಅ., (ಸಂ.), ೧೯೯೭, ಕರ್ನಾಟಕ ಚರಿತ್ರೆ ಸಂಪುಟಗಳು ೧,೨ ಮತ್ತು ೩, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಶಂಕನಾರಾಯಣರಾವ್ ಎಚ್.ಎಂ., ೧೯೮೨, ಶ್ರೀ ಹರಿಹರ ದೇವಾಲಯ, ಶಾರದ ಮಂದಿರ, ಮೈಸೂರು

ಶಾಂತವೀರಯ್ಯ ಹಿ.ಚಿ., ೨೦೦೫, ಪವಾಡ ಪುರುಷ ಉಕ್ಕಡಗಾತ್ರಿ ಅಜ್ಜಯ್ಯ, ಶ್ರೀ ಕರಿಬಸವೇಶ್ವರ ಗದ್ದಿಗೆ ಟಸ್ಟ್ರ ಕಮಿಟಿ, ಉಕ್ಕಡಗಾತ್ರಿ

ಶಿವಕುಮಾರಸ್ವಾಮಿ ಸಿ.ಎಸ್., ೧೯೮೮, ಕರ್ನಾಟಕದ ಜಾತ್ರೆಗಳು, ಕನ್ನಡ ಅಧ್ಯಯನ ಸಂಸ್ಥೆ, ಸ್ನಾತಕೋತ್ತರ ಕೇಂದ್ರ ಬಿ.ಆರ್. ಪ್ರಾಜೆಕ್ಟ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಶಿವತಾರಕ್ ಕೆ.ಬಿ., ೨೦೦೧, ಕರ್ನಾಟಕದ ಪುರಾತತ್ವ ನೆಲೆಗಳು, ಪ್ರಸಾರಾಂಗ, ಕನ್ನಡವಿಶ್ವವಿದ್ಯಾಲಯ, ಹಂಪಿ

ಶ್ರೀಕಂಠಶಾಸ್ತ್ರಿ ಎಸ್., ೧೯೬೫, ಹೊಯ್ಸಳ ವಾಸ್ತುಶಿಲ್ಪ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಶ್ರೀಕಾಂತತಾಂಬೆ, ೨೦೦೭, ಕೊಕ್ಕನೂರು ಶ್ರೀ ಅಂಜನೇಯ ಸ್ವಾಮಿಯ ಮಹಾತ್ಮೆ, ಶ್ರೀ ಅಂಜನೇಯ ಸ್ವಾಮಿ ಪ್ರಕಾಶನ, ಕೊಕ್ಕನೂರು

ಶ್ರೀನಿವಾಸ ಪಾಡಿಗಾರ, ೧೯೯೭, ಪುರಾತತ್ವಶಾಸ್ತ್ರ ಪರಿಚಯ, ರಾಮಾಶ್ರಯ ಪಬ್ಲಿಕೇಷನ್ಸ್, ಧಾರವಾಡ

ಶೇಷಶಾಸ್ತ್ರಿ ಆರ್., ೧೯೮೨, ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಸದಾಶಿವಪ್ಪ ಶ್ಯಾಗಲೆ ಬಿ.ಎಂ., ೨೦೧೦, ದಾವಣಗೆರೆ ಜಿಲ್ಲೆಯ ಒಂದು ಪಕ್ಷಿ ನೋಟ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ದಾವಣಗೆರೆ

ಸಂತೇಬೆನ್ನೂರು ಸುಮತೇಂದ್ರ ನಾಡಿಗ್, ೨೦೧೦, ದಾವಣಗೆರೆ ಜಿಲ್ಲೆ: ಇತಿಹಾಸದ ಕೆಲವು ಹೆಜ್ಜೆಗಳು, ವಿಜಯ ಯುವಕ ಸಂಘ, ಸಂತೇಬೆನ್ನೂರು

ಸಿದ್ಧಲಿಂಗಯ್ಯ, ೧೯೯೭, ಗ್ರಾಮದೇವತೆಗಳು, ಮೂಲ ಭಾರತಿ ಪ್ರಕಾಶನ, ಬೆಂಗಳೂರು

ಸುರೇಶ ಬಿ., ೨೦೦೯, ಚಿತ್ರದುರ್ಗ-ದಾವಣಗೆರೆ ಜಿಲ್ಲೆಗಳ ದೇವಾಲಯಗಳು, ಸಂಶೋಧನಾ ಪ್ರಕಾಶನ, ಚಳ್ಳಕೆರೆ

ಸುರೇಶ.ಕೆ.ಎಂ., ವಾಸುದೇವ ಬಡಿಗೇರ, ಸೋಮಶೇಖರ್ ಎಸ್.ವೈ., ಮಾಡಲಗೇರಿ ಕೊಟ್ರೇಶ್, (ಸಂ.), ೨೦೦೧, ಕರ್ನಾಟಕ ದೇವಾಲಯ ಕೋಶ,ಕೊಪ್ಪಳಜಿಲ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸೋಮಶೇಖರ್ ಎಸ್.ವೈ., (ಸಂ.), ೨೦೧೦, ಬ್ರಹ್ಮಗಿರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,ಹಂಪಿ

ಸೋಮಶೇಖರ್ ಎಸ್.ವೈ., (ಸಂ.), ೨೦೧೦, ಜಗಲೂರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,ಹಂಪಿ

ಸುಂದರ ಅ., ೧೯೯೪, ಕರ್ನಾಟಕ ಪ್ರಾಗಿತಿಹಾಸ ಕಾಲದ ಕಲೆ, ಕರ್ನಾಟಕ ಲಲಿತಕಲಾ ಆಕಾಡೆಮಿ, ಬೆಂಗಳೂರು

ಹರ್ತಿಕೋಟೆ ವೀರೇಂದ್ರಸಿಂಹ, ಅಮರೇಶ ಯತಗಲ್, (ಸಂ.೧.), ೨೦೦೮, ವಾಲ್ಮೀಕಿ ಮಂದಾರ, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ

ಹಿರೇಮಠ ಬಿ.ಆರ್., ೧೯೮೬, ಶಾಸನಗಳಲ್ಲಿ ಕರ್ನಾಟಕದ ವರ್ತಕರು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಜ್ಞಾನಾನಂದ ಜಿ., ೧೯೯೨, ವಾಸ್ತು ಪುರುಷ ನೆಲೆ-ಹಿನ್ನೆಲೆ, ಸಂಸ್ಕೃತಿ ಸಾಹಿತ್ಯ ಪ್ರಸಾರ ಸಮಿತಿ, ಕೆಜಿಎಫ್

ಜ್ಞಾನಾನಂದ ಜಿ., ೨೦೦೧, ಶಿಲ್ಪಾದರ್ಶನ ಸಂಪುಟ-೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಇಂಗ್ಲಿಷ್ ಪುಸ್ತಕಗಳು

Acharya P.K., 1978, Encyclopedia of Hindu Architecture, J.K., Publishing House, Bhopal

Adam Hardy,1995, Indian Temple Architecture, The Karnakata Dravida Tradition 7th to 13th centuriese, Abhinava Publications , New delhi

Allchin F.R., 1963, Neolithic cattle-keepers of south India, university of Cambridge publications, London

Bhatt S.C., 1998, The Encyclopedic District Gezetteer of India in vol 11, Gyan publishing house, New Delhi

Choodamani M.S., Nandagopal, 1990, Dance and Music in temple Architecture, Agam kala prakashana, Delhi

Dhakes M.A., 1997, The Indian Temple Forms in Karnataka inscriptions and Architecture, Abhinava publishing Govt museum, Madras

Franceis Buchanan, 1998, A Journey from Madras through the Countries of Mysore, Canara and malabar, Vol 1, First AES reprint, London

Gopal B.R., 1981, The chalukyas of Kalyana and the kalachuries, Karnataka university, Dharwad

Gopinath Rao T.A., 1995, Elements of Hindu Inconography Vol-II part, I-II, Mothilal Banarasidas publishing, Delhi

Gururaja Rao B.K., 1971, Megalithic culture in South India, Prasarnga, University of Mysore, Mysore

Hayavadan Rao C., 1984, Mysore Gezetteer Vol-5, Govt press, Bangalore

Ismile K., 1984, Karnataka Temples : their Rolein Socio Economic Life, Sandeep Prakashan, New Delhi

Kelleson Collyer, 1990, The Hoysala Artist their identity and styles, Mysore

Krishnamurthy M.S., 1980, The Nolambas, Prasaranga, University of Mysore, Mysore

Mathuram Bhoothalingom, 1990, Temples of India myths and legends, Publication Division, ministry of Information and broad costing, Govt of India , New Delhi

Nagaraj Rao M.S., 1983, The Chalukyas of Kalyana, Mythic Society, Bangalore

Padmanabha K., 1989, Hoysala sculptures A Cultural study, Sandeep prakashan, Delhi

Setter S., 1992, The Hoysala Temple, prasaranga University of Karnataka, Dharward

Srinivas M.S., 1990, Indian village, M.P. Publishers, Pvt, Ltd, Bombay

Sundara A., 1990, Archaeology in Karnataka, Directorates of Archaeolagy and museums, Mysore

Subramanyam B., 1997, Pre proto and Early Historic cultere of Krishna, Tungabhadra vally, Bharatiya kala prakashana New Delhi

Thomos Folcus, 1870, The Legends of the Shrine of Hari Har in the privance of Mysore, Liggin brother and London

ಸ್ಮರಣ ಸಂಚಿಕೆಗಳು

ಈಶ್ವರಪ್ಪ ಎಂ.ಜಿ., (ಸಂ.), ೧೯೯೨, ದವನಸಿರಿ, ಅಖಿಲ ಭಾರತ ೬೧ನೆ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣ ಸಂಚಿಕೆ, ದಾವಣಗೆರೆ

ಗಡೆಕಟ್ಟೆ ಧನಂಜಯಪ್ಪ, (ಪ್ರಸಂ.), ೨೦೦೨, ದಶದರ್ಶಿನಿ, ಸ್ಮರಣ ಸಂಚಿಕೆ, ನಂದಿಗುಡಿ

ಬಸವರಾಜ ಪಿ., ೨೦೧೧, ಹೊನ್ನಸೌರಭ, ಸ್ಮರಣ ಸಂಚಿಕೆ, ದಾವಣಗೆರೆ ಜಿಲ್ಲಾ ನಾಲ್ಕನೇ ಕನ್ನಡ ಸಾಹಿತ್ಯ ಸಮ್ಮೇಳನ, ದಾವಣಗೆರೆ

ಮಲ್ಲಿಕಾರ್ಜುನ ಕಲಮರಹಳ್ಳಿ, (ಪ್ರಸಂ.), ದಾವಣಗೆರೆ ಹಬ್ಬ, ಸ್ಮರಣಸಂಪುಟ, ಜಿಲ್ಲಾಧಿಕಾರಿಗಳು, ದಾವಣಗೆರೆ

ಲಕ್ಷ್ಮಣ ತೆಲಗಾವಿ, (ಸಂ.), ೧೯೯೧, ಸಂಶೋಧನ, ಎಂ. ಚಿದಾನಂದಮೂರ್ತಿ ಗೌರವ ಸಂಪುಟ, ಎಂ ಚಿದಾನಂದಮೂರ್ತಿ ಅಭಿನಂದನ ಸಮಿತಿ, ಬೆಂಗಳೂರು

ಲೋಕಾಪುರ ಐ.ಎ., ೨೦೦೫, ಹೊಳೆಸಿರಿಗೆರೆಯ ಸಿರಿ, ಸ್ಮರಣ ಸಂಚಿಕೆ, ಸರ್ಕಾರಿ ಪದವಿಪೂರ್ವ ಕಾಲೇಜು, ಹೊಳೆಸಿರಿಗೆರೆ

ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧಗಳು

ಅಮರೇಶ ಯತಗಲ್, ೨೦೦೫, ಕರ್ನಾಟಕ ನಾಯಕ ಅರಸುಮನೆತನಗಳ ವಿಶಿಷ್ಟ ಸಾಂಸ್ಕೃತಿಕ ಆಚರಣೆಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ. (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ)

ಕುಲಕರ್ಣಿ, ೨೦೦೧, ರಾಷ್ಟ್ರಕೂಟರ ಶಾಸನಗಳು ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ)

ಕೊಪ್ಪರ್ ಡಿ.ಎಚ್., ೧೯೫೮, ಹೊಯ್ಸಳರ ಕಾಲದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ)

ಜಯಮ್ಮ ಎಚ್., ೨೦೦೨, ನೊಳಂಬರ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ. (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ)

ತಿಪ್ಪೇಸ್ವಾಮಿ ಹೆಚ್., ೨೦೦೧, ದಾವಣಗೆರೆ ಜಿಲ್ಲೆಯ ದೇವಾಲಯಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ. (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ)

ಧನುಂಜಯಪ್ಪ ಬಿ.ಎಸ್., ೨೦೦೧, ಚಿತ್ರದುರ್ಗ ಮತ್ತು ದಾವಣಗೆರೆ ವೀರಶೈವ ಮಠಗಳು ಒಂದು ಸಾಂಸ್ಕೃತಿಕ ಅಧ್ಯಯನ, ಮದ್ರಾಸ್ ವಿಶ್ವವಿದ್ಯಾಲಯ, ಮದ್ರಾಸ್, (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ)

ಭಾರತೀ ಬಿ. ಆರ್., ೨೦೦೨, ರಾಷ್ಟ್ರಕೂಟರ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ. (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ)

ಮಹಾನಂದ ಎಂ.ಗೊಂದಿ, ೨೦೦೮, ಕಲ್ಯಾಣ ಚಾಲುಕ್ಯರ ಶಾಸನಗಳಲ್ಲಿ ಆರ್ಥಿಕ ಸಾಮಾಜಿಕ ಸ್ಥಿತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ. (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ)

ಮಂಜುನಾಥ ಹ. ಪಾಟೀಲ, ೨೦೦೨, ದಾವಣಗೆರೆ ಜಿಲ್ಲೆಯ ಶಾಸನಗಳು ಒಂದು ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ)

ಮೆಣಸಗಿ ಹೇಮಾವತಿ ಶಿವಾನಂದ, ೨೦೧೬, ಹಂಪಿ ಪರಿಸರದ ಶೈವಶಿಲ್ಪಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ. (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ)

ರಾಜಶ್ರೀ ಬಿ. ಪಾಟೀಲ, ೨೦೧೪, ಬೀರಪ್ಪ ಸಂಪ್ರದಾಯ: ಸಾಂಸ್ಕೃತಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ. (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ)

ಶಿವಯ್ಯ ಮಡಿವಾಳಯ್ಯ ಮಠ, ೨೦೧೨, ಕಲ್ಯಾಣ ಚಾಲುಕ್ಯರ ದಾನ-ದತ್ತಿಗಳು ಒಂದು ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ. (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ)

ಸತೀಶ ಕೆ., ೨೦೦೪, ವಿಜಯನಗರ ಕಾಲದ ಶೈವ ದೇವಾಲಯಗಳು, (ಕರ್ನಾಟಕ), ಕನ್ನಡ ವಿಶ್ವವಿದ್ಯಾಲಯ, ಹಂಪಿ. (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ)

ಸುರೇಶ ಬಿ., ೨೦೦೨, ಚಿತ್ರದುರ್ಗ-ದಾವಣಗೆರೆ ಜಿಲ್ಲೆಗಳ ಪುರಾತತ್ವ ಅಧ್ಯಯನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ)

ಸಂತೋಷ ಎನ್.ಜಿ., ೨೦೦೯, ವಿಜಯನಗರ ಮತ್ತು ನಾಯಕರ ಕಾಲದ ಕೃಷಿ ವ್ಯವಸ್ಥೆ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ. (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ)

ಹೆಬ್ಬೂರು ವಿ.ಎಂ., ೧೯೮೨, ಹೊಯ್ಸಳರ ಕಾಲದ ಧಾರ್ಮಿಕ ಪದ್ಧತಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ)

Ramappa Y., 1994, Hoysala Temples of Shimoga and Chitradurga Districts, University of Mysore. (Unpublished Ph.D. Thesis)

ಅಪ್ರಕಟಿತ ಎಂ.ಫಿಲ್. ನಿಬಂಧಗಳು

ಅಂಜನೇಯ ಸ್ವಾಮಿ ಡಿ.ಕೆ., ೨೦೧೫, ದಾವಣಗೆರೆ ಜಿಲ್ಲೆಯ ಪ್ರಾಚೀನ ಕೆರೆಗಳ ನಿರ್ಮಾಣ ಮತ್ತು ನಿರ್ವಹಣೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ. (ಅಪ್ರಕಟಿತ ಎಂ.ಫಿಲ್. ನಿಬಂಧ)

ಐಶ್ವರ್ಯಮ್ಮ ಎಂ., ೨೦೧೫, ದಾವಣಗೆರೆ ಜಿಲ್ಲೆಯ ಶಾಸನೋಕ್ತ ಮತ್ತು ಜನಪದ ಐತಿಹ್ಯಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, (ಅಪ್ರಕಟಿತ ಎಂ.ಫಿಲ್. ನಿಬಂಧ)

ತಿಪ್ಪೇಸ್ವಾಮಿ ಟಿ., ೨೦೦೭, ಚರಿತ್ರೆ ರಚನಾಶಾಸ್ತ್ರ: ದಾವಣಗೆರೆ ಜಿಲ್ಲೆಯನ್ನು ಕುರಿತ ಅಧ್ಯಯನಗಳ ಸಮೀಕ್ಷೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ. (ಅಪ್ರಕಟಿತ ಎಂ.ಫಿಲ್. ನಿಬಂಧ)

ಮಂಜುನಾಥ ಡಿ., ೧೯೯೭, ಮಧ್ಯಕಾಲದಲ್ಲಿ ದೇವಾಲಯ ಆಶ್ರಯ ಪಾಲನೆ ಮತ್ತು ನಿರ್ವಹಣೆ, ಹರಿಹರ ದೇವಾಲಯದ ಒಂದು ಅಧ್ಯಯನ ಶಾಸನಗಳ ಆಧಾರದಿಂದ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, (ಅಪ್ರಕಟಿತ ಎಂ.ಫಿಲ್. ನಿಬಂಧ)

ರವಿ ಡಿ.ಎನ್., ೨೦೦೯, ಹೊಯ್ಸಳ ಅರಸ ಮೂರನೇ ನರಸಿಂಹನ ಕಾಲದ ದಂಡನಾಯಕರು ಮತ್ತು ಅವರ ಕೊಡುಗೆಗಳು ಒಂದು ಚಾರಿತ್ರಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, (ಅಪ್ರಕಟಿತ ಎಂ.ಫಿಲ್. ನಿಬಂಧ)

ಸಿದ್ಧನಗೌಡ ಜೆ.ಬಿ., ೨೦೦೭, ತುಂಗಭದ್ರಾ ನದಿ ಪರಿಸರದ ಧಾರ್ಮಿಕ ಕ್ಷೇತ್ರಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ. (ಅಪ್ರಕಟಿತ ಎಂ.ಫಿಲ್. ನಿಬಂಧ)

ಸಂಶೋಧನ ಲೇಖನಗಳು

ಕೃಷ್ಣಮೂರ್ತಿ ಪಿ.ವಿ., ದೇವರಾಜಸ್ವಾಮಿ ಜಿ.ಕೆ., (ಸಂ.), ೨೦೧೨, ಇತಿಹಾಸ ದರ್ಶನ ಸಂಪುಟ-೨೭, ರಾಕೇಶ ಬಿ.ಸಿ., ಬಗ್ಗಡನಾಳು ಪ್ರದೇಶದ ಪ್ರಾಚ್ಯಾವಶೇಷಗಳು, ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು

ಕೃಷ್ಣಮೂರ್ತಿ ಪಿ.ವಿ., ದೇವರಾಜಸ್ವಾಮಿ ಜಿ.ಕೆ., (ಸಂ.), ೨೦೧೨, ಹರಿಹರ ಶ್ರೀನಿವಾಸರಾವ್, ಹರಿಹರೇಶ್ವರ ದೇವಾಲಯದ ಹೊರ ಭಿತ್ತಿಯಲ್ಲಿರುವ ನೃತ್ಯಶಿಲ್ಪಗಳ ವಿವೇಚನೆ, ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು

ಕೃಷ್ಣಮೂರ್ತಿ ಪಿ.ವಿ., ರಾಜೇಂದ್ರಪ್ಪ ಎಸ್., (ಸಂ.), ೨೦೧೩, ಇತಿಹಾಸ ದರ್ಶನ ಸಂಪುಟ-೨೮, ಸಂತೇಬೆನ್ನೂರು ಸುಮತೇಂದ್ರ ನಾಡಿಗ್, ದಾವಣಗೆರೆ ಜಿಲ್ಲೆಯ ಶಾಸನೋಕ್ತ ಪ್ರಾಚೀನ ಅಗ್ರಹಾರಗಳು, ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು

ಕೃಷ್ಣಮೂರ್ತಿ ಪಿ.ವಿ., ರಾಜೇಂದ್ರಪ್ಪ ಎಸ್., (ಸಂ.), ೨೦೧೩, ಎನ್.ಜಿ. ಸಂತೋಷ, ಜೆ.ಬಿ. ನಾಗವೇಣಿ, ದಾವಣಗೆರೆ ಜಿಲ್ಲೆಯಲ್ಲಿ ವಿಜಯನಗರ ಮತ್ತು ನಾಯಕರ ಕಾಲದ ನೀರಾವರಿ ವ್ಯವಸ್ಥೆ, (ಕ್ರಿ.ಶ.೧೩೩೬ ರಿಂದ ೧೮೦೦) ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು

ಗೋಪಾಲ್ ಆರ್., ಚಿಕ್ಕಮಾರೇಗೌಡ ಬಿ.ಎಂ., ಗಂಗಾಧರ ಟಿ.ಎಸ್., (ಸಂ.), ೨೦೦೭, ವಿಜಯನಗರ ಅಧ್ಯಯನ ಸಂಪುಟ-೧೨, ಸಂತೇಬೆನ್ನೂರು ಸುಮತೇಂದ್ರ ನಾಡಿಗ್, ಇಮ್ಮಡಿ ಹರಿಹರನ ಹರಿಹರದ ಶಾಸನಗಳು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ

ಗೋಪಾಲ್ ಆರ್., ಚಿಕ್ಕಮಾರೇಗೌಡ ಬಿ. ಎಂ., ಗಂಗಾಧರ ಟಿ.ಎಸ್., (ಸಂ.), ೨೦೦೬, ವಿಜಯನಗರ ಅಧ್ಯಯನ, ಸಂಪುಟ-೧೧, ಕೆ.ಎಂ. ಸುರೇಶ, ಹಂಪಿಯ ಪರಿಸರದಲ್ಲಿ ಹರಿಹರ ಶಿಲ್ಪಗಳು ಹಾಗೂ ದೇವಾಲಯ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

ಚಂದ್ರಶೇಖರ.ಎಸ್., ಶಿವಣ್ಣ ಎಸ್., ವಿಮಲ ಎನ್.ವಿ., (ಸಂ.), ೧೯೮೮, ಸಾಧನೆ, ಸಂ, ೧೭, ಎಂ.ಎಲ್. ಶಿವಶಂಕರ್, ಚಿಕ್ಕಮಗಳೂರಿನಲ್ಲಿ ದೊರೆತ ಅಪೂರ್ವ ಹರಿಹರ ಮೂರ್ತಿ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ದೇವರಕೊಂಡಾರೆಡ್ಡಿ, ದೇವರಾಜಸ್ವಾಮಿ ಜಿ.ಕೆ., (ಸಂ.), ೨೦೧೪, ಇತಿಹಾಸ ದರ್ಶನ, ಸಂಪುಟ-೨೯, ಹರಿಹರ ಶ್ರೀನಿವಾಸರಾವ್, ಹರಿಹರ ಹರಿಹರೇಶ್ವರ ಮೂರ್ತಿಶಿಲ್ಪ ಇತ್ತೀಚಿನ ವಿಶ್ಲೇಷಣೆ, ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು

ದೇವರಕೊಂಡಾರೆಡ್ಡಿ, ದೇವರಾಜಸ್ವಾಮಿ ಜಿ.ಕೆ., (ಸಂ.), ೨೦೧೫, ಇತಿಹಾಸ ದರ್ಶನ, ಸಂಪುಟ-೩೦, ನಾಗರಾಜಪ್ಪ ಎಸ್., ಕುಂಬಳೂರು ಗ್ರಾಮದ ಅಪ್ರಕಟಿತ ತುರುಗೋಳ್ ಊರಳಿವಿನ ಸ್ಮಾರಕಗಳು, ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು

ದೇವರಕೊಂಡಾರೆಡ್ಡಿ, ದೇವರಾಜಸ್ವಾಮಿ ಜಿ.ಕೆ., (ಸಂ.), ೨೦೧೫, ರಾಘವೇಂದ್ರಚಾರಿ ಕೆ.ಎಂ., ಹರಿಹರ ತಾಲೂಕು ಹಿರೇಹಾಲಿವಾಣದಲ್ಲಿ ದೊರೆತ ಎರಡು ವೀರಗಲ್ಲುಗಳು, ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು

ದೇವರಕೊಂಡಾರೆಡ್ಡಿ, ದೇವರಾಜಸ್ವಾಮಿ ಜಿ.ಕೆ., (ಸಂ.), ೨೦೧೫, ಹೆಚ್.ರಮೇಶ, ಹರಿಹರ ತಾಲೂಕಿನ ಶಾಸನೋಕ್ತ ಸ್ಥಳನಾಮಗಳು, ಕರ್ನಾಟಕ ಇತಿಹಾಸಅಕಾದೆಮಿ, ಬೆಂಗಳೂರು

ದೇವರಕೊಂಡಾರೆಡ್ಡಿ, ದೇವರಾಜಸ್ವಾಮಿ ಜಿ.ಕೆ., (ಸಂ.), ೨೦೧೫, ಹರಿಹರ ಶ್ರೀನಿವಾಸರಾವ್,ಹರಿಹರೇಶ್ವರ ಎಡಭಾಗದ ಪೀಠದಲ್ಲಿರುವ ಮೂರ್ತಿ "ಪೋಲಾಳ್ವ ದಂಡನಾಥನದೇ"?, ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು

ದೇವರಕೊಂಡಾರೆಡ್ಡಿ, ದೇವರಾಜಸ್ವಾಮಿ ಜಿ.ಕೆ., (ಸಂ.), ೨೦೧೫, ಎನ್.ಜಿ. ಸಂತೋಷ ಮತ್ತು ಹೆಚ್. ರಮೇಶ, ದಾವಣಗೆರೆ ಜಿಲ್ಲೆಯ ಬಾವಿಗಳು ಒಂದು ಅಧ್ಯಯನ, ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು

ಧಾರವಾಡಕರಾಯ, (ಸಂ.), ೧೯೮೦, ಗ್ರಂಥಸರಸ್ವತಿ, ಆದ್ಯರಾಮಾಚಾರ್ಯ, ವಿಜಯನಗರದ ಮಹಾಸಾಮ್ರಾಜ್ಯದ ಕಾಲುವೆಗಳು, ಶ್ರೀ ಎನ್. ಡಿ. ಬಗರಿ ಅಭಿನಂದನ ಸಮಿತಿ, ಬೆಂಗಳೂರು

ನಾಗರಾಜ್ ಎಂ.ಜಿ., ಕೃಷ್ಣಮೂರ್ತಿ ಪಿ.ವಿ., (ಸಂ.), ೧೯೯೭, ಇತಿಹಾಸ ದರ್ಶನ, ಸಂಪುಟ-೧೨, ಶ್ರೀಮತಿ ಚಂದನಾ ವೈ. ನೀಲಪ್ಪ, ಜಿಗಳಿಯ ಅಪ್ರಕಟಿತ ದೇಗುಲ ಶಾಸನ ಶಿಲ್ಪ, ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು

ನಾಗರಾಜ್ ಎಂ.ಜಿ., ಕೃಷ್ಣಮೂರ್ತಿ ಪಿ.ವಿ., (ಸಂ.), ೧೯೯೯, ಚಂದನಾ ವೈ. ನೀಲಪ್ಪ, ಹರಿಹರದ ಲಕ್ಷ್ಮೀ ದೇವಾಲಯ ಒಂದು ಅಧ್ಯಯನ, ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು

ನಾಗರಾಜ್ ಎಂ.ಜಿ., ಕೃಷ್ಣಮೂರ್ತಿ ಪಿ.ವಿ., (ಸಂ.), ೨೦೦೦, ಚಂದನಾ ವೈ. ನೀಲಪ್ಪ, ಹರಿಹರದಲ್ಲಿ ಯತಿ ಸಮಾಧಿಗಳು, ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು

ನಾಗರಾಜ್ ಎಂ.ಜಿ., ಕೃಷ್ಣಮೂರ್ತಿ, ಪಿ.ವಿ., (ಸಂ.), ೨೦೦೧, ಇತಿಹಾಸ ದರ್ಶನ, ಸಂಪುಟ ೧೬, ಚಂದನಾ ವೈ. ನೀಲಪ್ಪ, ಹರಿಹರದ ಗುತ್ತೂರಿನ ಇತಿಹಾಸ, ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು

ನಾಗರಾಜ್ ಎಂ.ಜಿ., ಕೃಷ್ಣಮೂರ್ತಿ ಪಿ.ವಿ., (ಸಂ.), ೨೦೦೫, ಇತಿಹಾಸ ದರ್ಶನ, ಸಂಪುಟ-೨೦, ಹರಿಹರ ಶ್ರೀನಿವಾಸರಾವ್, ಹರಿಹರದ ಶಾಸನಗಳಲ್ಲಿ ಗಿಡ, ಮರ, ಭೂಮಿ, ನೀರು, ಸುಂಕ ಇತ್ಯಾದಿ ಒಂದು ವೈಜ್ಞಾನಿಕ ನೋಟ, ಕರ್ನಾಟಕ ಇತಿಹಾಸ ಆಕಾದೆಮಿ, ಬೆಂಗಳೂರು

ನಾಗರಾಜ್ ಎಂ.ಜಿ., ಕೃಷ್ಣಮೂರ್ತಿ ಪಿ.ವಿ., (ಸಂ.), ೨೦೦೮, ಇತಿಹಾಸ ದರ್ಶನ, ಸಂಪುಟ-೨೩ ರಾಕೇಶ ಬಿ.ಸಿ., ಹರಿಹರ ತಾಲೂಕು ಭೈರವ ಪಾದದ ಪ್ರಾಚೀನ ಅವಶೇಷಗಳು, ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು

ನಾಗರಾಜ್ ಎಂ.ಜಿ., ಕೃಷ್ಣಮೂರ್ತಿ ಪಿ.ವಿ., (ಸಂ.), ೨೦೧೦, ಇತಿಹಾಸ ದರ್ಶನ, ಸಂಪುಟ-೨೫, ರಾಕೇಶ ಬಿ.ಸಿ., ಕೊಕ್ಕನೂರಿನ ಈಶ್ವರ ದೇವಾಲಯ, ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು

ಪ್ರಕಾಶ ಹುಲಗೇರಿ, ಅಂಜನಪ್ಪ ಡಿ., ಅನಂದಕೂಮಾರ ಎಂ. ಜಕ್ಕಣ್ಣನವರ, ಮತ್ತು ಮಂಜುನಾಥಗೌಡ ಶಿ. ಪಾಟೀಲ, (ಪ್ರ.ಸಂ.), ೨೦೧೭, ಬಹುಶಿಸ್ತೀಯ ಸಂಕಥನ, vol-2, H.Ramesh, The Belifes and Traditional Practices in Davanagere District: A Historical Analysis, ಸಿದ್ದೇಶ್ವರ ಶ್ರೀ ಪ್ರಕಾಶನ, ವಿಜಯಪುರ

ಭಟ್‌ಸೂರಿ ಕೆ.ಜಿ., (ಸಂ.), ೨೦೧೪, ಶಾಸನ ಅಧ್ಯಯನ, ಸಂಪುಟ-೯, ಸಂಚಿಕೆ ೧ ಮತ್ತು ೨ ರವಿಕುಮಾರ ಎಸ್ ನವಲಗುಂದ, ಶಾಸನೋಕ್ತ ಹರಿಹರ ದೇವಾಲಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮೋಹನ್‌ಕೃಷ್ಣ ರೈ ಕೆ., (ಸಂ.), ೨೦೧೨, ಚರಿತ್ರೆ ಅಧ್ಯಯನ, ಸಂಪುಟ-೭, ಸಂಚಿಕೆ-೧, ಎಸ್. ಮುನಿರಾಜ್, ವಸಾಹತು ಕರ್ನಾಟಕದ ಕಂಟೋನ್ಮೆಂಟ್‌ಗಳ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ರಾಮಕೃಷ್ಣ ಕೆ.ಆರ್., ಗೋಪಾಲ್ ಆರ್., ಗಂಗಾಧರ ಟಿ.ಎಸ್., (ಸಂ.), ೨೦೦೪, ವಿಜಯನಗರ ಅಧ್ಯಯನ, ಸಂಪುಟ-೯, ಜಗದೀಶ ಡಿ., ವಿಜಯನಗರ ಕಾಲದ ಹರಿದ್ರಾ ನದಿ ಕಟ್ಟೆಯು ಇದ್ದ ಸ್ಥಳ ಗುರುತಿಸುವಿಕೆ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳು ನಿರ್ದೇಶನಾಲಯ, ಹೊಸಪೇಟೆ

ಶಿವಶಂಕರ್ ಎಂ.ಎಲ್., ಚನ್ನಬಸಪ್ಪ ಎಸ್. ಪಾಟೀಲ, ೧೯೯೭, ಕದಂಬ ಅಧ್ಯಯನ, ಎಂ.ಎಲ್ ಶಿವಶಂಕರ್, ಹರಿಹರ ಶಿಲ್ಪಗಳು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

ಸೂರ್ಯನಾಥ ಯು. ಕಾಮತ್, ದೇವರಕೊಂಡಾರೆಡ್ಡಿ, (ಸಂ.), ೧೯೯೩, ಇತಿಹಾಸ ದರ್ಶನ ಸಂಪುಟ-೮, ಶ್ರೀಮತಿ ಚಂದನ್, ಹರಿಹರದ ಸಂಗಮೇಶ್ವರ ದೇವಾಲಯ, ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು

ಸೂರ್ಯನಾಥ ಯು. ಕಾಮತ್, ಕೃಷ್ಣಮೂರ್ತಿಪಿ.ವಿ, (ಸಂ.), ೧೯೯೬, ಚಂದನ್ ವೈ. ನೀಲಪ್ಪ, ಹರಿಹರದ ಕಾರಣಿಕ, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು

Sundara A., (Edit.), 1990, Archaeology in karnataka, M.S. Nagaraj Rao, Graves of the Early Iron using people at Komaranahalli Recent Evidence, Directorate of Archaeology and Moseums, Mysore

ವಿಶ್ವಕೋಶಗಳು

ಅಂಬಳಿಕೆ ಹಿರಿಯಣ್ಣ, (ಸಂ.), ೨೦೦೯, ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಎಚ್ಚೆಸ್ಕೆ, (ಸಂ.), ೧೯೮೫, ಅವಲೋಕನ, ಕರ್ನಾಟಕ ಪರಂಪರೆಯ ಸಮೀಕ್ಷೆ, ವಿಶ್ವಕನ್ನಡ ಸಮ್ಮೇಳನ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು

ಕರ್ನಾಟಕ ಕೈಪಿಡಿ, ೧೯೯೬, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಕರ್ನಾಟಕ ಸರ್ಕಾರ

ಕರ್ನಾಟಕ ರಾಜ್ಯಗ್ಯಾಸೆಟಿಯರ್ ಭಾಗ-೧ ಮತ್ತು ೩, ಗ್ಯಾಸೆಟಿಯರ್ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು

ಕರ್ನಾಟಕ ರಾಜ್ಯ ಗ್ಯಾಸೆಟಿಯರ್, (ದಶವಾರ್ಷಿಕ ಪುರವಣಿ-೧೯೮೩-೯೩), ೧೯೯೬, ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು

ಚಂದ್ರಶೇಖರ ಕಂಬಾರ, (ಸಂ.), ೧೯೮೫, ಕನ್ನಡ ಜಾನಪದ ವಿಶ್ವಕೋಶ, ಸಂಪುಟ-೧ ಮತ್ತು ೨, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ತಂಬಂಡ ವಿಜಯ್ ಪೂಣಚ್ಚ, (ಸಂ.), ೨೦೦೧, ಕನ್ನಡ ವಿಶ್ವವಿದ್ಯಾಲಯ, ವಿಶ್ವಕೋಶ-೪, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ನಾಯಕ ಹಾ.ಮಾ., (ಪ್ರಸಂ.), ೨೦೦೭, ಕನ್ನಡ ವಿಷಯ ವಿಶ್ವಕೋಶ, ಕರ್ನಾಟಕ ಪರಿಷತ್ತು, ಸಂಪುಟ-೨ ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಮಹಾದೇವಯ್ಯ ಟಿ.ಆರ್., (ಸಂ.), ೧೯೯೮, ಕನ್ನಡ ಜಾನಪದ ಕೋಶ, ಕರ್ನಾಟಕ ಜನಪದ ಪರಿಷತ್ತು, ಬೆಂಗಳೂರು

ರಮೇಶ ಸ.ಚಿ., (ಸಂ.), ೨೦೧೧, ದಕ್ಷಿಣ ಭಾರತೀಯ ಜಾನಪದ ಕೋಶ, ಸಂಪುಟ-೧ ಮತ್ತು ೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಶಾಸನ ಸಂಪುಟಗಳು

ಗಂಗಾನಾಯಕ್ ಕೆ. ಎನ್., (ಪ್ರಸಂ.), ನಾಗಯ್ಯ ಜೆ.ಎಂ., (ಸಂ.), ೨೦೧೧, ಕಲ್ಯಾಣ ಚಾಲುಕ್ಯರ ಶಾಸನಗಳು ಸಂಪುಟ-೧, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಗಂಗನಾಯಕ್ ಕೆ.ಎನ್., (ಪ್ರಸಂ.), ಶೈಲಜ ಬಿ.ಎಂ., (ಸಂ.), ೨೦೧೨, ಪಾಳೆಯಗಾರರ ಶಾಸನಗಳು, ಸಂಪುಟ-೧, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಗಂಗನಾಯಕ್ ಕೆ.ಎನ್., (ಪ್ರಸಂ.), ಶೈಲಜ ಬಿ.ಎಂ., (ಸಂ.), ೨೦೧೨, ಪಾಳೆಯಗಾರರ ಶಾಸನಗಳು, ಸಂಪುಟ-೨, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ದೇವರಕೊಂಡಾರೆಡ್ಡಿ., (ಸಂ.), ೧೯೯೯, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧, ಬಳ್ಳಾರಿ ಜಿಲ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ದೇವರ ಕೊಂಡಾರೆಡ್ಡಿ., (ಸಂ.), ೧೯೯೯, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೨, ಕೊಪ್ಪಳ ಜಿಲ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪರಮಶಿವಮೂರ್ತಿ,ಡಿ.ವಿ., (ಸಂ.), ೨೦೦೭, ಪ್ರೌಢದೇವರಾಯನ ಶಾಸನಗಳು, ಪ್ರಸಾರಾಂಗ, ಕನ್ನಡ ವಿಸ್ವವಿದ್ಯಾಲಯ, ಹಂಪಿ

ಪರಮಶಿವಮೂರ್ತಿ ಡಿ.ವಿ., (ಸಂ.), ೨೦೧೦, ಕೃಷ್ಣದೇವರಾಯನ ಶಾಸನಗಳು, ಸಂಪುಟ-೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಭಾರತಿ ಬಿ.ಆರ್., (ಸಂ.), ೨೦೧೧, ರಾಷ್ಟ್ರಕೂಟರ ಶಾಸನಗಳು, ಸಂಪುಟ-೧ ಮತ್ತು ೨ , ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

Annual Report of Indian Epigraphy

Annual Report on South India Inscriptions

Epigraphia carnatica

Gai G.S., 1975, South Indian Inscripitions vol -XVIII, pulished by the director Generak, Archaelogical Survery of India, New Delhi

Indian Archaelogical A review

Indian Historical quarterly

Indian Antiquary

Mysore Archaelogical Report

Rice B.L., 1903, Ephigraphia cornatica, vol-11, ಚಿತ್ರದುರ್ಗ ಜಿಲ್ಲೆ, ಬೆಂಗಳೂರು

South Indian Inscription volums

ದಿನಪತ್ರಿಕೆಗಳು

ಉದಯವಾಣಿ

ಕನ್ನಡ ಪ್ರಭ

ಜನಾತಾವಾಣಿ

ಪ್ರಜಾವಾಣಿ

ವಿಜಯ ಕರ್ನಾಟಕ

ವಿಜಯವಾಣಿ,

ಪಾರಿಭಾಷಿತ ಪದಗಳು

ಅಧಿಷ್ಠಾನ-ದೇವಾಲಯದ ಗೋಡೆಗೆ ಆಧಾರವಾಗಿರುವ ತಳಭಾಗ

ಅಷ್ಟದಿಕ್ಪಾಲಕರು-ಎಂಟು ದಿಕ್ಕುಗಳ ದೇವತೆಗಳು ಇಂದ್ರ [ಪೂರ್ವ], ವರುಣ [ಪಶ್ಚಿಮ] ಕುಬೇರ [ಉತ್ತರ], ಯಮ [ದಕ್ಷಿಣ], ವಾಯು [ವಾಯುವ್ಯ], ಅಗ್ನಿ [ಅಗ್ನೇಯ], ನಿಋತಿ [ನೈಋತ್ಯ], ಈಶಾನ [ಈಶಾನ್ಯ]

ಆಭಯಹಸ್ತ-ಸಂರಕ್ಷಣಾ ಸೂಚಿ ಹಸ್ತ

ಅಭಿಷೇಕ ಜಲ-ದೇವತಾ ಮೂರ್ತಿಗೆ ಎರೆಯುವ ನೀರು

ಅಮಲಕ-ನೆಲ್ಲಿಕಾಯಿಯ ಆಕಾರದ ರಚನೆ, ನಾಗರ ಪ್ರಾಸಾದಗಳಲ್ಲಿ ಶಿಖರದ ಕಲಶದ ಕೆಳಗಡೆ ಇರುತ್ತದೆ.

ಅರೆಗಂಬ-ಗೋಡೆಗಳ ನಡುವಣ ಅರ್ಧಕಂಭ, ಕಂಭದ ಅರ್ಧಭಾಗ ಗೋಡೆಯಲ್ಲಿ ಸೇರಿದ್ದು. ಭಾಗಮಾತ್ರ ಗೋಚರಿಸುತ್ತದೆ.

ಅಕ್ಷಮಾಲಾ-ಮಣಿಗಳ ಸರ

ಅಂಕಣ-ಏಂಗಡಣೆಯ ಒಂದು ಭಾಗ

ಅಂಕುಶ-ಆಯುಧಗಳಲ್ಲಿ ಒಂದು ವಿಧ

ಅಂಜಲಿಮುದ್ರೆ-ಎರಡು ಕೈ ಜೋಡಿಸಿ ಮುಗಿಯುತ್ತಿರುವುದು

ಅಂತರ್ಭಿತ್ತಿ-ಗರ್ಭಗೃಹದ ಸುತ್ತ ಇರುವ ಒಳಭಿತ್ತಿ

ಅಂತರಾಳ-ಸಭಾಮಂಟಪ, ನವರಂಗ ಮತ್ತು ಗರ್ಭಗೃಹದ ನಡುವೆ ಇರುವ ಕೋಣೆ

ಉದರಬಂಧ-ಮೂರ್ತಿಯ ಎದೆಯ ಭಾಗದಲ್ಲಿ ಧರಿಸಿರುವ ಆಭರಣ

ಉಪಪೀಠ-ದೇವಾಲಯದ ಅಧಿಷ್ಠಾನದಲ್ಲಿ ಒಂದು ಭಾಗ

ಊರ್ಧ್ವಮುಖ ಕ್ರಮ-ದೇವಾಲಯದ ಹೊರಭಾಗದಲ್ಲಿ ಕೆಳಗಿನಿಂದ ಮೇಲಕ್ಕೆ ಒಂದಾದ ಮೇಲೊಂದು ಭಾಗವನ್ನು ನಿಶ್ಚಿತ ರೀತಿಯಲ್ಲಿ ರಚಿಸುವುದು

ಕರ್ಣ-ಮೂಲೆ, ಅಧಿಷ್ಠಾನ ಮತ್ತು ಗೋಡೆಯ ಮೂಲೆಯಲ್ಲಿ ಇರುವ ಮುಂಚಾಚು

ಕಟಿಲಿ–ಮೂಲಪ್ರಾಸಾದ ಮತ್ತು ಮಂಟಪದ ಗೋಡೆಗಳ ನಡುವಿರುವ ಅಂತರಾಳದ ಗೋಡೆ

ಕಪೋತ–ವೃತ್ತದ ಕಾಲುಭಾಗದಂತಹ ಇಳಿಜಾರಾಗಿರುವ, ಅಧಿಷ್ಠಾನದ ಇಲ್ಲವೆ ಗೋಡೆಯ ಮೇಲ್ಗಡೆ ಸಾಗಿರುವ ಚಚ್ಚಾದಂತಹ ಭಾಗ

ಕಲಶ–ಕಳಸ

ಕಕ್ಷಾಸನ–ರಂಗಮಂಟಪ, ಸಭಾಮಂಟಪ ಇಲ್ಲವೆ ಮುಖಮಂಟಪದ ಅಂಚಿನ ಗುಂಟ ಕುಳಿತುಕೊಳ್ಳಲು ಇರುವ ಆಸನ

ಕಟ್ಯಾವಲಂಬಿತ–ಸೊಂಟ ಹಿಡಿದಿರುವ ಕೈ

ಕಿರೀಟ ಮಕುಟ–ತಲೆಯ ಮೇಲೆ ಕಿರೀಟ ಧರಿಸಿದ ಮೂರ್ತಿ

ಕೀರ್ತಿಮುಖ–ಅಲಂಕಾರದ ಒಂದು ವಿಧ, ವೈಭವ, ಭವ್ಯತೆಯನ್ನು ಸೂಚಿಸುವ ಅಲಂಕಾರ

ಕುಮುದ–ಅಧಿಷ್ಠಾನದ ಮಡಿಕೆಗಳಲ್ಲಿ (ಕಂಬ) ಮತ್ತು ಕಪೋತದ ನಡುವಿನ ಮಡಿಕೆ

ಕೂಟ–ಚೌಕವಿನ್ಯಾಸದ ನಾಲ್ಕೂ ಕಡೆ ಇಳಿಜಾರಾದ ಚಾವಣಿಯುಳ್ಳ ಗುಡಿಸಲಿನಂತೆ ಕಾಣುವ ದೇಗುಲ ಮಾದರಿ

ಕೂಟಸ್ತಂಭ–ಕೂಟವನ್ನು ಹೊತ್ತಿರುವ ಕಿರುಕಂಬ

ಕೊಷ್ಠ–ಮೂರ್ತಿಗಳನ್ನು ಇಡಲು ಮಾಡಿದ ಚಿಕ್ಕಗೂಡು

ಗರ್ಭಗೃಹ–ದೇವಾಲಯದ ಮೂಲದೇವರ ಸ್ಥಾನ

ಗರುಡಗಂಭ–ದೇವಾಲಯ ಮುಂದೆ ನಿಲ್ಲಿಸಿರುವ ಗರುಡನ ಚಿತ್ರಕೆತ್ತಿದ ದೀಪಸ್ತಂಭ

ಗ್ರೀವ–ಶಿಖರದ ಕುತ್ತಿಗೆಯಂತಿರುವ ಭಾಗ

ಗೂಢಮಂಡಪ–ಗೋಡೆಗಳಿಗಿರುವ ಮಂಟಪ

ಗೋಪುರ–ಪ್ರವೇಶ ದ್ವಾರದ ಮೇಲಿನ ಮೇಲ್ಕಟ್ಟಡ

ಘಂಟಾ–ಮೂಲಪ್ರಸಾದದ ಶಿಖರದ ಗ್ರೀವದ ಮೇಲೆ, ಕೆಳಗೆ ಇರುವ ಚೌಕ ಘಂಟಾಕಾರದ ಭಾಗ

ಚತುರ್ಭುಜ–ನಾಲ್ಕು ತಲೆಗಳ ರಚನೆಯಿರುವ ಶಿಖರ

ಜಗತಿ–ಅಧಿಷ್ಠಾನದ ತಳಹದಿ

ಜಟಾಮುಕುಟ–ಮೂರ್ತಿಗಳ ಕೂದಲನ್ನೆ ಕಿರೀಟದಂತೆ ಅಲಂಕರಿಸಿರುವುದು

ಡಮರುಗ–ಶಿವನ ಕೈಯಲ್ಲಿರುವ ವಾದ್ಯ

ದ್ವಾರಪಾಲಕರು–ಬಾಗಿಲನ್ನು ಕಾಯುವ ಸೇವಕರು

ಧ್ವಾರಬಂಧ–ಬಾಗಿಲುವಾಡ ಸಾಮಾನ್ಯವಾಗಿ ಶಾಖೆಗಳ ಆಲಂಕಾರದಿಂದ ಕೂಡಿರುತ್ತದೆ

ದೇವಕೋಷ್ಠ–ದೇವತಾ ವಿಗ್ರಹವನ್ನಿರಿಸಲು ಗೋಡೆಯಲ್ಲಿ ಮಾಡಿರುವ ಗೂಡು ಇದಕ್ಕೆ ದೇಗುಲದಂತೆ ಶಿಖರ ಮುಂತಾದ ಆಲಂಕಾರವಿರುತ್ತದೆ

ನಾಗರ–ಉತ್ತರ ಭಾರತದ ಶೈಲಿಯ ರೇಖಾಶಿಖರ. ಇದು ಏಕಾಂತ [ಲತಿನ , ಒಂದೇ ಶಿಖರವುಳ್ಳ] ಅಥವಾ ಆನೇಕಾಂಡ (ಶೇಖರಿ) ಶಿಖರವಾಗಿರಬಹುದು

ನಾಗಶಾಖಾ–ನಾಗನಾಗಿಣಿ ಜೋಡಿಗಳ ಸಾಲಿನಿಂದಾಗಿ ದ್ವಾರಬಂಧದ ಶಾಲ

ನಾಗಬಂಧ ವಾತಾಯನ–ನಾಗರ ಹಾವುಗಳು ಒಂದಕ್ಕೊಂದು ಸುತ್ತಿಕೊಂಡಿದ್ದು, ಮಧ್ಯ ಭಾಗ ಟೊಳ್ಳಾಗಿರುವ ಕಿಟಕಿ

ನಿರಂಧಾರ–ಗರ್ಭಗೃಹದ ಸುತ್ತ ಒಳಗಡೆ ಪ್ರದಕ್ಷಿಣೆ ಪಥವಿಲ್ಲದ ಪ್ರಾಸಾದ

ನಂದಿಮಂಟಪ–ನಂದಿಗಾಗಿ ಕಟ್ಟಿಸಿರುವ ಪ್ರತ್ಯೇಕ ಗುಡಿ

ಪದ್ಮ–ಸಾಮಾನ್ಯವಾಗಿ ಅಧಿಷ್ಠಾನದಲ್ಲಿ ಬರುವ ಮುಗುಚಿದ ಪದ್ಮದ ಆಕಾರದ ಮಡಿಕೆ

ಪದ್ಮಶಾಖಾ–ಪದ್ಮದ ಮೇಲೆ ಕುಳಿತಿರುವುದು. ಎರಡು ಕಾಲನ್ನು ಒಳಭಾಗಕ್ಕೆ ಮಡಚಿಕುಳಿತಿರಬೇಕು

ಪದ್ಮಪೀಠ–ಪದ್ಮದಿಂದ ಅಲಂಕರಿಸಿರುವ ಪೀಠ

ಪಾಶಿಕಾ–ಅಧಿಷ್ಠಾನದ ಕೊನೆಯ ಅಂಗ, ವಾಜನದಂತೆಯೋ ಹೊರಚಾಚಿರುವ ಅಗಲವಾದ ಪಟ್ಟಿ

ಪರಿವಾರ–ಮುಖ್ಯ ದೇವತೆಯರ ಉಪದೇಶಗಳು

ಪುಷ್ಪಭೋದಿಗೆ–ಪದ್ಮಲಂಕಾರವುಳ್ಳ ಭೋದಿಗೆ

ಪ್ರದಕ್ಷಿಣಾ ಪಥ–ಭಕ್ತಾದಿಗಳು ಗರ್ಭಗುಡಿಯನ್ನು ಸುತ್ತಿ ಬರಲು ಇರುವ ದಾರಿ

ಪ್ರನಾಳ–ಅಭಿಷೇಕ ಮಾಡಿದ ನೀರು ಹೊರ ಹೋಗಲು ಮಾಡಿರುವ ನಾಳ

ಪ್ರಭಾವಳಿ–ಮೂರ್ತಿಗಳ ಬೆನ್ನು ಹಿಂದೆ ಮಾಡಿರುವ ಸುತ್ತಲಿನ ಅಲಂಕಾರಿಕ ಪಟ್ಟಿ

ಪೇದ್ಯಾ–ದ್ವಾರಬಂಧದ ತೋಳುಗಳ ಕೆಳಭಾಗ, ಇದರಲ್ಲಿ ಸಾಮಾನ್ಯವಾಗಿ ದ್ವಾರಪಾಲ ನದಿದೇವತೆ, ಕಾಮ, ರತಿ ಇತ್ಯಾದಿ ಶಿಲ್ಪಗಳಿರುತ್ತವೆ

ಫಾಂಸನಾ–ಕದಂಬನಾಗರ ಎಂದು ಕರೆಯುತ್ತಿರುವ ಶಿಖರ ಒಂದರ ಮೇಲೆ ಒಂದರಂತೆ ಕಿರಿದಾಗುತ್ತಾ ಸಾಗಿರುವ ನಾಸಿ ಅಲಂಕಾರಯುಕ್ತ ಕಪೋತಗಳುಳ್ಳ ಪಿರಮಿಡ್ಡಿನಾಕಾರದ ಶಿಖರ ಇದರ ಮೇಲೆ ಗ್ರೀವದ ತರುವಾಯ ಚೌಕ ಘಂಟಾ ಮತ್ತು ಕಲಶ ಇರುತ್ತದೆ

ಭುಜಬಂಧ–ಮೂರ್ತಿ ಭಾಗಕ್ಕೆ ಧರಿಸಿದ ಆಭರಣ

ಮಕರತೋರಣ–ಮೊಸಳೆಯ ಬಾಯಿಂದ ತೋರಣಗಳು ಹೊರಬಂದ ಹಾಗೇ ಮಾಡಿರುವ ಅಲಂಕಾರ

ಮಹಾದ್ವಾರ-ಮುಖ್ಯ ಪ್ರವೇಶದ್ವಾರ

ಮಹಾಮಂಟಪ-ಸಭಾ ಮಂಟಪಕ್ಕೆ (ನವರಂಗ) ಹೊಂದಿಕೊಂಡಿರುವ ಉದ್ದನೆಯ ಭಾಗ

ಮಂಟಪ-ಸಾಮಾನ್ಯವಾಗಿ ಕಂಬಗಳಿರುವ ಸಭಾಗೃಹ

ಮುಖ ಮಂಪಟ-ದೇವಾಲಯದ ಪ್ರವೇಶ ಮಂಟಪ

ಯಜ್ಞೋಪವೀತ-ದೇಹದಲ್ಲಿ ಧರಿಸಿರುವ ಪವಿತ್ರವಾದ ದಾರ

ರಂಗಮಂಟಪ-ನೃತ್ಯಾದಿಗಳಿಗೆ ಉಪಯುಕ್ತ, ಅರೆತೆರೆದ, ಕಂಬಗಳುಳ್ಳ ಮಂಟಪ, ಸಭಾಮಂಟಪ

ರುಂಡಮಾಲೆ-ತಲೆಬುರುಡೆಯ ಹಾರ

ಲತಾ-ಹೂ ಬಳ್ಳಿಗಳು

ಲಲಾಟ-ಧ್ವಾರಬಂಧದ ಹಣೆಯಲ್ಲಿರುವ ಘನ

ಲಲಾಟಬಿಂಬ-ದ್ವಾರದ ಮಧ್ಯದಲ್ಲಿ ಧಾರ್ಮಿಕ ಪಂಥವನ್ನು ಸೂಚಿಸುವ ಪ್ರತಿಬಿಂಬ ಉಬ್ಬುಶಿಲ್ಪವಿರುವ ಅಲಂಕೃತ ಭಾಗ

ಲಲಿತಾಸನ-ಒಂದು ಕಾಲನ್ನು ಇಳಿಬಿಟ್ಟು ಮತ್ತೊಂದು ಕಾಲನ್ನು ಮಡಚಿ ಕುಳಿತಿರುವ ಭಂಗಿ

ವಾತಾಯನ-ಗಾಳಿ ಬೆಳಕಿಗಾಗಿ ಗೋಡೆಯಲ್ಲಿ ಮಾಡಿರುವ ಕಿಟಕಿ

ವಿಮಾನ-ಗರ್ಭಗೃಹದ ಪೂರ್ತಿ ರಚನೆ (ಅಧಿಷ್ಠಾನದ ಕೆಳಮಡಿಕೆಯಿಂದ ಹಿಡಿದು ಕಲಶದವರೆಗೆ)

ಶಾಖಾ-ಧ್ವಾರಬಂಧದ ತೋಳುಗಳ (ಸಾಮಾನ್ಯವಾಗಿ ಅಲಂಕೃತ) ಲಂಬಪಟ್ಟಿಗಳು

ಶ್ರೀಕಾರ-ಕಂಬದ ಒಂದು ಪ್ರಕಾರ, ವೃತ್ತಾಕಾರದ ಕಾಂಡ ಇತ್ಯಾದಿ ಭಾಗಗಳಿರುತ್ತವೆ

ಶೀಖರ-ಅದಿತಲ ಮುಗಿದ ಮೇಲೆ ಗರ್ಭಗೃಹದ ಮೇಲ್ಕಟ್ಟಡ ಭೂಮಿ(ಮಹಡಿ)ಗಳಿಂದಾಗಿರುತ್ತದೆ

ಸಭಾಪದ್ಮಮಂದಾರಕ-ಅನೇಕ ಪದ್ಮಗಳ ಪದಕಗಳಿಂದ ಸುತ್ತುವರಿಯಲ್ಪಟ್ಟ ಮಧ್ಯ ಇಳಿಬಿದ್ದಿರುವ ಪದಕವಿರುವ ವಿತಾನ ಪ್ರಕಾರ

ಸಮಭಂಗಿ-ಎರಡು ಕಾಲಿನ ಮೇಲೆ ಸಮಾನಾಗಿ ನಿಂತಭಂಗಿ

ಸುಕನಾಸ-ಶಿಖರದಿಂದ ಮೂಗಿನಂತೆ ಮುಂಚಾಚಿರುವ ಭಾಗ ಅಂತರಾಳದ ಮೇಲೆ ಬಂದಿರುತ್ತದೆ

ಸಾಂಧಾರ-ಗರ್ಭಗೃಹದ ಸುತ್ತ ಇರುವ ಪ್ರದಕ್ಷಿಣಾ ಪಥ

ಸ್ತಂಭಶಾಖಾ-ಕಂಬದ ಪ್ರತಿರೂಪವಾಗಿ ಮಾಡಿರುವ ದ್ವಾರಬಂಧದ ಶಾಖೆ

ಸ್ತೂಪಿ-ಕಲಶದ ಮೇಲಿನ ಮೊನಚಾದ ಕೊನೆಯ ಭಾಗ

ಹಾರ-ಸಾಮಾನ್ಯವಾಗಿ ಕೂಟ-ಶಾಲಾಗಳ ಸಾಲಿನಿಂದಾದ, ಭೂಮಿಯ ಅಂತ್ಯವನ್ನು ಸೂಚಿಸುವ,

ಗೋಡೆಯ ಮೇಲ್ಗಡೆ ಅಂಚಿನ ಗುಂಟ ಸಾಗಿರುವ ಕುಂಬಿ. ಮೂಲ ಪ್ರಾಸಾದದ ಪ್ರತಿಭೂಮಿಗೂ ಸುತ್ತಲೂ ಸಾಗಿರುವುದರಿಂದ ಮಾಲೆಯಂತೆ ಕಾಣುತ್ತದೆ.

ಹರಿಹರ ತಾಲೂಕಿನ ಅಪ್ರಕಟಿತ ಶಾಸನಗಳು

೧. ಚಿಕ್ಕಬಿದರೆಯ ಕಲ್ಲೇಶ್ವರ ದೇವಾಲಯದ ಮುಂದಿನ ಅಪ್ರಕಟಿತ ಶಾಸನ

೧. ದುಂದುಬಿ ಸಂವತ್ಸರದ ಮಾಘಸುದ್ದ

೨. ಶ್ರೀಮತು ಬಿಲ್ಲಾಳು ಆಂಮೆಯನಾಯಕ

೩. ರಮಗ ಲೂಯನಾಯ್ಕ ರುದ್ರಸೋದಿ

೪. ಲಖದೇವಂಗಳಿಗೆ ದಾರಾಪೂರ್ವಕವಾ

೫. ಗಿ ಕೊಟ್ಟ ಗುಣಮಠದ ಕೆಯಿ ಮಂಗಳ

೬. ಮಹಾಶ್ರೀಶ್ರೀಶ್ರೀ

೨. ಮೂಗಿನಗೊಂದಿ ಹೋಲವೊಂದರಲ್ಲಿ ಬುರುಜುವಿನ ಬುಡದಲ್ಲಿರುವ ಅಪ್ರಕಟಿತ ಶಾಸನ

೧. ಆಸದಲಿ ಶ್ರೀಂ

೨. ಗೇರಿ ಶ್ರೀಶಂಕರ

೩. ಬಾರತಿ ಸ್ವಾಮಿ

೪. ಗಳಿಗೆ ಸಿವಾರ್ಪಿ

೫. ತವಾಗಿ ಮೂಕನಾ

೬. ಗುಂದ ಕೂಟಿದು

ಹರಿಹರ ತಾಲೂಕಿನ ಶಾಸನೋಕ್ತ ದೇವಾಲಯಗಳ ಪಟ್ಟಿ

ಕ್ರ.ಸಂ.	ಸ್ಥಳ	ತಾಲೂಕು	ದೇವಾಲಯ	ಆಳ್ವಿಕೆ ಮತ್ತು ಕಾಲ	ಉಲ್ಲೇಖ
೦೧	ನಿಟ್ಟೂರು	ಹರಿಹರ	ಬಲ್ಲೇಶ್ವರ	ಚಾಲುಕ್ಯಜಯಸಿಂಘದೇವ ಮತ್ತು ಉದಯಾದಿತ್ಯದೇವ ಕ್ರಿ.ಶ.೧೦೩೪	ಎ.ಕ.ಸಂ.೧೧.ದಾ.ಶಾ. ಸಂ.೭೧
೦೨	ಗುತ್ತೂರು	ಹರಿಹರ	ಕೂಡಲೂರಿನ ಶಂಕರನಾರಯಣ	ಚಾಲುಕ್ಯದಯ ಚಕ್ರವರ್ತಿ ತ್ರಿಭುವ ನಮಲ್ಲದೇವ ಕ್ರಿ.ಶ.೧೯೯	ಕೊಟ್ರೇಶ್ ನಾ. ಉತ್ತಂಗಿ, ೨೦೧೩ ಹರಿಹರದೆಳೆಗಳು
೦೩	ಜಿಗಳಿ	ಹರಿಹರ	ಎಲವಟ್ಟಿ ಸೋಮೇಶ್ವರ ಹಾಗೂ ನಾರಾಯಣದೇವರು	ಚಾಲುಕ್ಯದೊರೆ ವಿಜಯಾದಿತ್ಯದೇವ ಕ್ರಿ.ಶ.೧೧೧೯	ಎ.ಕ.ಸಂ.೧೧.ದಾ.ಶಾ. ಸಂ ೧೨೨
೦೪	ಬನ್ನಿಕೋಡು	ಹರಿಹರ	ಮಲ್ಲಿಕಾರ್ಜುನ ದೇವರು	ಚಾಲುಕ್ಯದೊರೆ ಜಗದೇಕಮಲ್ಲ ಕ್ರಿ.ಶ ೧೧೨೫	ಅದೇ, ದಾ.ಶಾ.ಸಂ೭೭
೦೫	ಹರಿಹರ	ಹರಿಹರ	ಯೋಗೇಶ್ವರ ದೇವರು	ಇಮ್ಮಡಿ ಜಗದೇಕಮಲ್ಲ ಕ್ರಿ.ಶ ೧೧೪೪	ಅದೇ, ದಾ.ಶಾ.ಸಂ೬೧
೦೬	ಗಂಗನರಸಿ	ಹರಿಹರ	ಶ್ರೀಶಂಕರನಾರಾಯಣ ದೇವರು	ಚಾಲುಕ್ಯ ಚಕ್ರವರ್ತಿ ಜಗದೇಕಮಲ್ಲ ದೇವ ಕ್ರಿ.ಶ೧೧೪೫	ಅದೇ, ದಾ.ಶಾ.ಸಂ೮೫

೦೭	ಗಂಗನರಸಿ	ಹರಿಹರ	ಅರಸೀಕೆರೆಯ ಕಲಿದೇವಸ್ವಾಮಿ	ಚಾಲುಕ್ಯ ಚಕ್ರವರ್ತಿ ಜಗದೇಕಮಲ್ಲ ದೇವ ಕ್ರಿಶ೧೧೪೫	ಅದೇ, ದಾ.ಶಾ.ಸಂ ೮೫
೦೯	ಹರಿಹರ	ಹರಿಹರ	ಶ್ರೀಶಂಕರನಾರಾಯಣ ದೇವರು	ಇಮ್ಮಡಿಜಗದೇಕಮಲ್ಲದೇವ ಕ್ರಿಶ೧೧೪೯	ಎ.ಕ.ಸಂ.೧೧.ದಾ.ಶಾ.ಸಂ ೪೧
೧೦	ಹರಿಹರ	ಹರಿಹರ	ಹರಿಹರ ದೇವರು	ಕಳಚೂರಿ ಬಿಜ್ಜಳ ಕ್ರಿಶ೧೧೬೦	ಅದೇ, ದಾ.ಶಾ.ಸಂ೩೫
೧೧	ಗಂಗನರಸಿ	ಹರಿಹರ	ಶ್ರೀಶಂಕರನಾರಾಯಣ ದೇವರು	ಕಳಚೂರಿ ಬಿಜ್ಜಳ ಕ್ರಿಶ ೧೧೬೧	ಅದೇ, ದಾ.ಶಾ.ಸಂ೮೪
೧೨	ಗಂಗನರಸಿ	ಹರಿಹರ	ಅರಸೀಕೆರೆ ಮಾದೇಶ್ವರದೇವರು	ಕಳಚೂರಿ ಬಿಜ್ಜಳ ಕ್ರಿಶ ೧೧೬೧	ಅದೇ, ದಾ.ಶಾ.ಸಂ೮೪
೧೩	ಹರಿಹರ	ಹರಿಹರ	ಹರಿಹರ ದೇವರು	ವಿಜಯಪಾಂಡ್ಯ ಕ್ರಿಶ ೧೧೬೭	ಅದೇ, ದಾ.ಶಾ.ಸಂ೩೯
೧೪	ಹರಿಹರ	ಹರಿಹರ	ಹರಿಹರ ದೇವರು	ವಿಜಯಪಾಂಡ್ಯ ಕ್ರಿಶ ೧೧೬೮	ಅದೇ, ದಾ.ಶಾ.ಸಂ೪೦
೧೫	ಹರಿಹರ	ಹರಿಹರ	ಶ್ರೀಶಂಕರನಾರಾಯಣ ದೇವರು	ವಿಜಯಪಾಂಡ್ಯ ಕ್ರಿಶ ೧೧೭೧	ಅದೇ, ದಾ.ಶಾ.ಸಂ೩೨
೧೬	ಹರಿಹರ	ಹರಿಹರ	ಶ್ರೀಶಂಕರನಾರಯನದೇವರು	ಮಹಾಪ್ರಧಾನ ದುರ್ಗ್ಗರಸ ದಂಡನಾಯಕ. ಕ್ರಿ.ಶ.೧೧೭೩	ಅದೇ, ದಾ.ಶಾ.ಸಂ೩೩
೧೭	ನಂದಿತಾವರೆ	ಹರಿಹರ	ಅಮೃತಲಿಂಗ ಮಣಿಕೇಶ್ವರ ದೇವರು	ಮಹಾಪ್ರಧಾನರಾದ ಶ್ರೀಕರಣದ ಹೆಗ್ಗಡೆ ಕ್ರಿಶ ೧೨೨೦	ಅದೇ, ದಾ.ಶಾ.ಸಂ೨೯
೧೮	ಹರಿಹರ	ಹರಿಹರ	ಹರಿಹರ ದೇವಾಲಯ	ಇಮ್ಮಡಿ ನರಸಿಂಹ ಕ್ರಿ.ಶ.೧೨೨೩	ಅದೇ, ದಾ.ಶಾ.ಸಂ೨೫
೧೯	ಚಿಕ್ಕಬಿದರೆ	ಹರಿಹರ	ಕನ್ನೇಶ್ವರ (ಕಲ್ಲೇಶ್ವರ)ದೇವರು	ವೀರ ಕನ್ನರದೇವರಸ. ಕ್ರಿ.ಶ. ೧೨೫೭	–

೨೦	ಹರಿಹರ	ಹರಿಹರ	ಸೋಮನಾಥಪುರದ ಕೇಶವದೇವಾಲಯ	ಹೊಯ್ಸಳ ಚಕ್ರವರ್ತಿ ಮುಮ್ಮಡಿ ವರಸಿಂಹ. ಕ್ರಿ.ಶ. ೧೨೬೯	ಅದೇ, ದಾ.ಶಾ.ಸಂ೩೬
೨೧	ಹರಿಹರ	ಹರಿಹರ	ಲಕ್ಷ್ಮೀನಾರಾಯಣ ದೇಗುಲ	ಸೇನಾಪತಿಸಾಳುವತಿಕ್ಕಮನು ಕ್ರಿ.ಶ.೧೨೮೦	ಅದೇ, ದಾ.ಶಾ.ಸಂ೫೯
೨೨	ಹರಿಹರ	ಹರಿಹರ	ಹರ ದೇವರು	ಕುಕನೂರ ನಾಗೆಯನ ಮಗ ಗೋಪಯನಾಯ್ಕ ಕ್ರಿಶ ೧೨೯೮	ಅದೇ, ದಾ.ಶಾ.ಸಂ೫೧
೨೩	ಕೊಂಡಜ್ಜಿ	ಹರಿಹರ	ಶ್ರೀವಿರೂಪಾಕ್ಷ ದೇವರು	ಶ್ರೀ ವೀರಬುಕ್ಕರಾಯ ಕ್ರಿಶ ೧೩೬೭	ಅದೇ, ದಾ.ಶಾ.ಸಂ೭೮
೨೪	ವಾಸನ	ಹರಿಹರ	ಹನುಮಂತ ದೇವರಿಗೆ	ಕ್ರಿಶ ೧೩೮೨	ಅದೇ, ದಾ.ಶಾ.ಸಂ೧೧೭
೨೫	ಹರಿಹರ	ಹರಿಹರ	ಹರಿಹರೇಶ್ವರ ದೇವರು	ಇಮ್ಮಡಿ ಹರಿಹರ ಕ್ರಿಶ ೧೩೮೨	ಅದೇ, ದಾ.ಶಾ.ಸಂ೬೮
೨೬	ಹರಿಹರ	ಹರಿಹರ	ಶಂಕರದೇವ	ಇಮ್ಮಡಿ ಹರಿಹರರಾಯ ಕ್ರಿಶ ೧೩೮೭	ಕೊಟ್ರೇಶ್ ನಾ. ಉತ್ತಂಗಿ, ೨೦೧೩. ಹರಿಹರದೆಳೆಗಳು
೨೭	ಕೊಂಡಜ್ಜಿ	ಹರಿಹರ	ಹನುಮಂತ ದೇವರು	ವೀರ ಹರಿಹರರಾಯ ಕ್ರಿಶ೧೩೯೨	ಅದೇ, ಪುಸ್ತಕ
೨೮	ಹಳ್ಳಿಹಾಳು	ಹರಿಹರ	ಬುವೇಶ್ವರ ದೇವರು	ಶ್ರೀಬುಕ್ಕಣ ಒಡೆಯರು	ಎ.ಕ.ಸಂ.೧೧.ದಾ.ಶಾ.ಸಂ ೧೨೦
೨೯.	ಹರಿಹರ	ಹರಿಹರ	ದೇಮೇಶ್ವರ ದೇವರು	ಅಚ್ಯುತರಾಯ ಕ್ರಿಶ ೧೫೩೩	ಅದೇ ದಾ.ಶಾ.ಸಂ೪೬
೩೦.	ಮೂಗಿನ ಗೊಂದಿ	ಹರಿಹರ	ಶ್ರೀ ಭೈರವದೇವರು		ಇ.ದ.ಸಂ.೨೩,೨೦೦೮

ಹರಿಹರ ಹೆಸರಿನ ಗ್ರಾಮ ಸೂಚಿ

ಕ್ರಸಂ	ಗ್ರಾಮ	ತಾಲೂಕು	ಜಿಲ್ಲೆ
೦೧	ಶಂಕರನಾರಾಯಣ	ಕುಂದಾಪುರ	ಉಡುಪಿ
೦೨	ಹರಿಹರ	ವೀರರಾಜಪೇಟೆ	ಕೊಡಗು
೦೩	ಹರಿಹರ ಪುರ	ಕೊಪ್ಪ	ಚಿಕ್ಕಮಗಳೂರು
೦೪	ಹರಿಹರಮನೆ	ಕೊಪ್ಪ	ಚಿಕ್ಕಮಗಳೂರು
೦೫	ಹರಿಹರಪುರ	ಪಾವಗಡ	ತುಮಕೂರು
೦೬	ಹರಿಹರಕೊಪ್ಪ	ಮಧುಗಿರಿ	ತುಮಕೂರು
೦೭	ಹರಿಹರ	ಮಧುಗಿರಿ	ತುಮಕೂರು
೦೮	ಹರಿಹರಪಳ್ಳತಡ್ಕ	ಸುಳ್ಯ	ದಕ್ಷಿಣ ಕನ್ನಡ
೦೯	ಹರಿಹರ	ಹರಿಹರ	ದಾವಣಗೆರೆ
೧೦	ಹರಿಹರಪುರ	ಕೃಷ್ಣರಾಜಪೇಟೆ	ಮಂಡ್ಯ
೧೧	ಹರಿಹರ	ಕನಕಪುರ	ರಾಮನಗರ
೧೨	ಹರಿಹರಪುರ	ಶಿಕಾರಿಪುರ	ಶಿವಮೊಗ್ಗ
೧೩	ಹರಿಹರಪುರ	ಅರಸೀಕೆರೆ	ಹಾಸನ
೧೪	ಹರಿಹರಪುರ	ಹಾಸನ	ಹಾಸನ
೧೫	ಹರಿಹರಪುರ	ಹೊಳೆನರಸೀಪುರ	ಹಾಸನ

ಹರಿಹರೇಶ್ವರ ದೇವಾಲಯಗಳ ಸೂಚಿ

ಕ್ರಸಂ	ದೇವಾಲಯ	ಗ್ರಾಮ	ತಾಲೂಕು	ಜಿಲ್ಲೆ	ಕಾಲಮಾನ
೦೧	ಹರಿಹರೇಶ್ವರ	ದುರ್ಗ	ಕಾರ್ಕಳ	ಉಡುಪಿ	–
೦೨	ಹರಿಹರೇಶ್ವರ	ಕುಂಭಾಸಿ	ಕುಂದಾಪುರ	ಉಡುಪಿ	–
೦೩	ಶಂಕರನಾರಾಯಣ	ಕೊಡವೂರು	ಉಡುಪಿ	ಉಡುಪಿ	–
೦೪	ಶಂಕರನಾರಾಯಣ	ಶೇಡಿಕಾವು	ಕಾಸರಗೋಡು	ಕಾಸರಗೋಡು (ಕೇರಳ)	ಕೆಳದಿ ಇಕ್ಕೇರಿ ಅರಸರ ಕಾಲ
೦೫	ಹರಿಹರೇಶ್ವರ	ಕವಲೂರು	ಕೊಪ್ಪಳ	ಕೊಪ್ಪಳ	ಕ್ರಿ.ಶ ೧೨ನೇ ಶತಮಾನ
೦೬	ಹರಿಹರೇಶ್ವರ	ಹರ್ಲಾಪುರ	ಗದಗ	ಗದಗ	ಕ್ರಿ.ಶ ೧೧–೧೨ನೇ ಶತಮಾನ
೦೭	ಹರಿಹರೇಶ್ವರ	ಶೃಂಗೇರಿ	ಶೃಂಗೇರಿ	ಚಿಕ್ಕಮಗಳೂರು	–
೦೮	ಹರಿಹರೇಶ್ವರ	ಹರಿಹರ	ಹರಿಹರ	ದಾವಣಗೆರೆ	ಕ್ರಿ.ಶ ೧೦–೧೩ ನೇಶತಮಾನ
೦೯	ಹರಿಹರೇಶ್ವರ	ಅರಸೀಕೆರೆ	ಹರಪನಹಳ್ಳಿ	ದಾವಣಗೆರೆ	ಕ್ರಿ.ಶ ೧೨ ನೆ ಶತಮಾನ
೧೦	ಹರಿಹರೇಶ್ವರ	ತೆಲಿಗಿ	ಹರಪನಹಳ್ಳಿ	ದಾವಣಗೆರೆ	ಕ್ರಿ.ಶ ೧೧ನೇ ಶತಮಾನ

೧೧	ಹರಿಹರೇಶ್ವರ	ಕುಂದಗೋಳ	ಕುಂದಗೋಳ	ಧಾರವಾಡ	ಆಧುನಿಕ
೧೨	ಹರಿಹರೇಶ್ವರ	ಸಂಡೂರು	ಸಂಡೂರು	ಬಳ್ಳಾರಿ	ಕ್ರಿ.ಶ ೧೧ನೇ ಶತಮಾನ
೧೩	ಹರಿಹರೇಶ್ವರ	ಹಂಪಿ	ಹೊಸಪೇಟೆ	ಬಳ್ಳಾರಿ	ಸಾಸುವೆ ಕಾಳು ಗಣೇಶನ ಗುಡಿಯ ಹಿಂಭಾಗ
೧೪	ಶಂಕರನಾರಾಯಣ	ನಾಗಮಂಗಲ	ನಾಗಮಂಗಲ	ಮಂಡ್ಯ	ಕ್ರಿ.ಶ. ೧೨ನೇ ಶತಮಾನ
೧೫	ಹರಿಹರೇಶ್ವರ	ಹರಿಹರಪುರ	ಕೃಷ್ಣರಾಜಪೇಟೆ	ಮಂಡ್ಯ	ಕ್ರಿ.ಶ.೧೨ ನೇ ಶತಮಾನ
೧೬	ಹರಿಹರೇಶ್ವರ	ಕ್ಯಾಗಟ್ಟ	ಮದ್ದೂರು	ಮಂಡ್ಯ	ಕ್ರಿ.ಶ ೧೪ನೇ ಶತಮಾನ
೧೭	ಶಂಕರ ನಾರಾಯಣ	ಇಕ್ಕೇರಿ	ಸಾಗರ	ಶಿವಮೊಗ್ಗ	ಕೆಳದಿ ಇಕ್ಕೇರಿ ಅರಸರ ಕಾಲ

ಹರಿಹರ ಮೂರ್ತಿಶಿಲ್ಪಗಳ ಸೂಚಿ

ಕ್ರಸಂ	ದೇವಾಲಯ	ಗ್ರಾಮ	ತಾಲೂಕು	ಜಿಲ್ಲೆ	ಕಾಲಮಾನ
೦೧	ಹರಿಹರ	ಭೈಂದೂರು	ಕುಂದಾಪುರ	ಉಡುಪಿ	ಕ್ರಿ.ಶ.೧೨–೧೩ನೇ ಶತಮಾನ
೦೨	ಹರಿಹರ	ಕವಲೂರು	ಕೊಪ್ಪಳ	ಕೊಪ್ಪಳ	ಕ್ರಿ.ಶ.೧೨ನೇ ಶತಮಾನ
೦೩	ಶಂಕರ ನಾರಾಯಣ	ಮಾಲೂರು	ಮಾಲೂರು	ಕೋಲಾರ	ಕ್ರಿ.ಶ.೧೬ನೇ ಶತಮಾನ
೦೪	ಶಂಕರ ನಾರಾಯಣ	ಚಾಮರಾಜ ನಗರ	ಚಾಮರಾಜ ನಗರ	ಚಾಮರಾಜ ನಗರ	ಕ್ರಿ.ಶ.೧೮ನೇ ಶತಮಾನ
೦೫	ಹರಿಹರ	ಮರವಂಜಿ	ಚನ್ನಗಿರಿ	ದಾವಣಗೆರೆ	ಕ್ರಿ.ಶ.೧೧ನೇ ಶತಮಾನ
೦೬	ಹರಿಹರ	ಅರಸೀಕೆರೆ	ಹರಪನಹಳ್ಳಿ	ದಾವಣಗೆರೆ	ಕ್ರಿ.ಶ.೧೨ನೇ ಶತಮಾನ
೦೭	ಹರಿಹರ	ನಿಟ್ಟೂರು	ಹರಪನಹಳ್ಳಿ	ದಾವಣಗೆರೆ	–
೦೮	ಹರಿಹರ	ನಂದಿತಾವರೆ	ಹರಿಹರ	ದಾವಣಗೆರೆ	ಕ್ರಿ.ಶ.೧೩ನೇ ಶತಮಾನ
೦೯	ಹರಿಹರ	ಹರಿಹರ	ಹರಿಹರ	ದಾವಣಗೆರೆ	ಕ್ರಿ.ಶ.೫–೧೨ನೇ ಶತಮಾನ
೧೦	ಹರಿಹರ	ಹಾಲಕನಾಳು	ಚನ್ನಗಿರಿ	ದಾವಣಗೆರೆ	ಕ್ರಿ.ಶ.೧೩ನೇ ಶತಮಾನ

೧೧	ಹರಿಹರ	ಹರಿಹರ	ಹರಿಹರ	ದಾವಣಗೆರೆ	ಸಣ್ಣ ಹರಿರೇಶ್ವರ ದೇವಾಲಯ
೧೨	ಶಂಕರನಾರಾಯಣ	ಕಡಬ	ಪುತ್ತೂರು	ದಕ್ಷಿಣಕನ್ನಡ	ಕ್ರಿ.ಶ.೧೨ನೇ ಶತಮಾನ
೧೩	ಹರಿಹರ	ನಂದಾವರ	ಮಂಗಳೂರು	ದಕ್ಷಿಣಕನ್ನಡ	–
೧೪	ಹರಿಹರ	ಹಂಪಿ	ಹೊಸಪೇಟೆ	ಬಳ್ಳಾರಿ	ಅಚ್ಯುತ ದೇವಾಲಯದ ಮಂಟಪದ ಕಂಬದಲ್ಲಿ
೧೫	ಹರಿಹರ	ಹಂಪಿ	ಹೊಸಪೇಟೆ	ಬಳ್ಳಾರಿ	ವಿರೂಪಾಕ್ಷ ದೇವಾಲಯದ ಹಿಂಭಾಗದ ಬಂಡೆಯಲ್ಲಿ
೧೬	ಹರಿಹರ	ತಿಮ್ಮಾಲಾಪುರ	ಹೊಸಪೇಟೆ	ಬಳ್ಳಾರಿ	ತ್ರಿಕೂಟ ದೇವಾಲಯದ ಸಭಾಮಂಟಪದಲ್ಲಿ
೧೭	ಹರಿಹರ	ಹಂಪಿ	ಹೊಸಪೇಟೆ	ಬಳ್ಳಾರಿ	ರಾಜ ಪ್ರಮುಖರ ವಸತಿ ನೆಲೆಗಳ ಹತ್ತಿರ
೧೮	ಹರಿಹರ	ಹಂಪಿ	ಹೊಸಪೇಟೆ	ಬಳ್ಳಾರಿ	ರಾಜ್ಯ ಪುರಾತತ್ವ ಪ್ರಾಚ್ಯಾವಸ್ತು ಸಂಗ್ರಹಾಲಯಗಳ ಮತ್ತು ಉಪನಿರ್ದೇಶಕರ ಕಛೇರಿ
೧೯	ಹರಿಹರ	ಹೊಸಪೇಟೆ	ಹೊಸಪೇಟೆ	ಬಳ್ಳಾರಿ	ಜಂಬುನಾಥ ದೇವಾಲಯ
೨೦	ಹರಿಹರ	ಐಹೊಳೆ	ಹುನಗುಂದ	ಬಾಗಲಕೋಟೆ	ಕ್ರಿ.ಶ.೭–೮ನೇ ಶತಮಾನ

೨೧	ಹರಿಹರ	ಬಾದಾಮಿ	ಬಾದಾಮಿ	ಬಾಗಲಕೋಟೆ	ಕ್ರಿ.ಶ.೭ನೇ ಶತಮಾನ
೨೨	ಹರಿಹರ	ಕಿಕ್ಕೇರಿ	ಕೃಷ್ಣರಾಜಪೇಟೆ	ಮಂಡ್ಯ	ಕ್ರಿ.ಶ.೧೨ನೇ ಶತಮಾನ
೨೩	ಹರಿಹರ	ಗೋವಿಂದಾನಹಳ್ಳಿ	ಕೃಷ್ಣರಾಜಪೇಟೆ	ಮಂಡ್ಯ	ಕ್ರಿ.ಶ. ೧೨ನೇ ಶತಮಾನ
೨೪	ಹರಿಹರ	ಮೊಸಳೆ	ಹಾಸನ	ಹಾಸನ	ಕ್ರಿ.ಶ ೧೩ನೇ ಶತಮಾನ
೨೫	ಹರಿಹರ	ಪಟ್ಟದಕಲ್ಲು	ಬಾದಾಮಿ	ಬಾಗಲಕೋಟೆ	ವಿರೂಪಾಕ್ಷ ದೇವಾಲಯದಲ್ಲಿ
೨೬	ಹರಿಹರ	ಕನ್ನಡ ವಿಶ್ವವಿದ್ಯಾಲ ಯ, ಹಂಪಿ ಮ್ಯೂಸಿಯಂ	ಹೊಸಪೇಟೆ	ಬಳ್ಳಾರಿ	–

ವಕ್ತೃಗಳ ವಿವರ

ಕ್ರಸಂ	ಹೆಸರು	ವೃತ್ತಿ	ವಯಸ್ಸು	ಜಾತಿ	ಗ್ರಾಮ
೦೧	ಮುನಿಯಪ್ಪ	ವ್ಯವಸಾಯ	೫೩	ವೀರಶೈವ ಲಿಂಗಾಯತ	ಬುಳ್ಳಾಪುರ
೦೨	ಯರಸೀಮೆಕೊಟ್ರಪ್ಪ	ಪೂಜಾರಿ	೪೮	ಪಂಚಾಮಸಾಲಿ ಲಿಂಗಾಯತ	ದೀಟೂರು
೦೩	ಚನ್ನಪ್ಪ	ವ್ಯವಸಾಯ	೬೪	ವಿರಶೈವಲಿಂಗಾಯತ	ಗಂಗನರಸಿ
೦೪	ಮೂಗಬಸಪ್ಪ	ಪೂಜಾರಿ	೫೧	ಕುರುಬರು	ಹಿರೇಬಿದರೆ
೦೫	ಕುಬೇರಗೌಡ ಯು.ಬಿ	ವ್ಯವಸಾಯ	೪೦	ವೀರಶೈವ ಲಿಂಗಾಯತ	ಹಳ್ಳಿಹಾಳು
೦೬	ಬಸವರಾಜಪ್ಪ	ವ್ಯವಸಾಯ	೪೩	ವೀರಶೈವಲಿಂಗಾಯತರು	ಹೊಸದುರ್ಗ
೦೭	ಹಿ.ಗೂ.ದುಂಡ್ಯಪ್ಪ	ಇತಿಹಾಸಕಾರರು	೬೦	ಕುಂಬಾರರು	ಹರಿಹರ
೦೮	ನಾಗಭೂಷಣಗೌಡ.ಪಿ	ಉಪನ್ಯಾಸ ಕರು	೫೬	ಗೌಡರು	ದಾವಣಗೆರೆ
೦೯	ಎನ್.ಜಿ.ಸಂತೋಷ	ಉಪನ್ಯಾಸ ಕರು	೩೫	ವೀರಶೈವ ಲಿಂಗಾಯತ	ನೇರ್ಲಿಗಿ
೧೦	ಲಕ್ಷ್ಮಪ್ಪ.ಬಿ	ವ್ಯವಸಾಯ	೩೬	ಬಾರಿಕರು	ನಿಟ್ಟೂರು
೧೧	ಪಟ್ಟದ ರೇವಯ್ಯ ಸ್ವಾಮಿಗಳು	ಆರ್ಚಕರು	೬೭	ಹಾಲುಮತ	ಗಂಗನರಸಿ
೧೨	ಮುರುಗೆಪ್ಪಗೌಡರು	ವ್ಯವಸಾಯ	೯೦	ವೀರಶೈವಲಿಂಗಾಯತರು	ಯಲವಟ್ಟಿ
೧೩	ಬಸಪ್ಪ	ವ್ಯವಸಾಯ	೭೩	ವೀರಶೈವಲಿಂಗಾಯತರು	ಯಲವಟ್ಟಿ
೧೪	ಶಿವಲಿಂಗಪ್ಪ ಗೌಡರು	ವ್ಯವಸಾಯ	೭೮	ವೀರಶೈವಲಿಂಗಾಯತರು	ಯಲವಟ್ಟಿ
೧೫	ಬಸವರಾಜಪ್ಪ	ವ್ಯವಸಾಯ	೬೩	ವೀರಶೈವಲಿಂಗಾಯತರು	ಯಲವಟ್ಟಿ

೧೬	ರಾಕೇಶ.ಹೆಚ್.ಎಸ್	ಉಪನ್ಯಾಸ ಕರು	೩೪	ವೀರಶೈವ ಲಿಂಗಾಯತರು	ದಾವಣಗೆರೆ
೧೭	ಕೃಷ್ಣಮೂರ್ತಿ ಸಿ.ಎನ್	ವಿದ್ಯಾರ್ಥಿ	೨೮	ನಾಯಕರು	ಹರಿಹರ
೧೮	ಕೊಟ್ರೇಶ.ನಾ ಉತ್ತಂಗಿ	ಗ್ರಂಥಪಾಲಕರು	೩೮	ವೀರಶೈವಲಿಂಗಾಯತರು	ಹೊನ್ನಾಳಿ
೧೯	ರಾಘವೇಂದ್ರಚಾರಿ	ಹವ್ಯಾಸಿ ಸಂಶೋಧಕರು	೩೯	ಆಚಾರ್ಯರು	ದಾವಣಗೆರೆ
೨೦	ಹಾದಿಮನಿ ಈಶ್ವರಪ್ಪ	ಜಾನಪದ ಕಲಾವಿದರು	೫೩	ನಾಯಕರು	ಅರಸೀಕೆರೆ
೨೧	ಶಾಂತಲಿಂಗ ದೇಶಿಕೇಂದ್ರ ಸ್ವಾಮಿಗಳು	ಸ್ವಾಮಿಗಳು	೫೫	ವೀರಶೈವಲಿಂಗಾಯತರು	ಅರಸೀಕೆರೆ
೨೨	ರಾಕೇಶ್ ಬಿ.ಸಿ.	ಉಪನ್ಯಾಸಕರು	೪೨	ವೀರಶೈವಲಿಂಗಾಯತರು	ದಾವಣಗೆರೆ
೨೩	ಕೆ.ಎಲ್.ಎನ್. ಮೂರ್ತಿ	ಸಹ ಪ್ರಾಧ್ಯಾಪಕರು	೫೪	ಕುಂಚಿಟಿಗರು	ವಿಜಾಪುರ
೨೪	ಕೆ.ನಾಗಪ್ಪ	ಕಲಾವಿದರು	೪೩	ಕುರುಬರು	ನಾಗೇನಹಳ್ಳಿ
೨೫	ಕಮಲಾಪುರದ ಪಕ್ಕಿರಮ್ಮ	ಕಲಾವಿದೆ	೫೬	ಕುರುಬರು	ನಾಗೇನಹಳ್ಳಿ
೨೬	ದೊಡ್ಮನೆ ಬಸವನ ಗೌಡ	ವ್ಯವಸಾಯ	೬೩	ಕುಂಚಿಟಿಗರು	ಹಳ್ಳಿಹಾಳು

ನಕ್ಷೆಗಳು

ಭಾರತದಲ್ಲಿ ಕರ್ನಾಟಕ ರಾಜ್ಯ




ಕರ್ನಾಟಕದಲ್ಲಿ ದಾವಣಗೆರೆ ಜಿಲ್ಲೆ




ಭಾರತದಲ್ಲಿ ಕರ್ನಾಟಕ ರಾಜ್ಯ, ದಾವಣಗೆರೆ ಜಿಲ್ಲೆಯಲ್ಲಿ ಹರಿಹರ ತಾಲೂಕು





ಹರಿಹರ ತಾಲೂಕು
N
E
S
W
HARAPANAHALLI TALUK
RANIBENNURU TALUK
DAVANGERE TALUK
HIREKERERUR TALUK
HONNALI TALUK
0 5 10

ತಲನಕ್ಷೆ

ಸಾರಥಿ ಬಸವೇಶ್ವರ ದೇವಾಲಯ




ಚಿಕ್ಕಬದಿರೆಯ ಕಲ್ಲೇಶ್ವರ ದೇವಾಲಯ








ಕುಣಿಬೆಳಕೆರೆ ಉಮಾಮಹೇಶ್ವರ ದೇವಾಲಯ




ನಂದಿತಾವರೆ ಅಮೃತಲಿಂಗೇಶ್ವರ ದೇವಾಲಯ








ಕೊಮಾರನಹಳ್ಳಿ ಲಕ್ಷ್ಮೀರಂಗನಾಥ ದೇವಾಲಯ




ದೇವರಬೆಳಕೆರೆ ಕಲ್ಲೇಶ್ವರ ದೇವಾಲಯ










ಕೊಮಾರನಹಳ್ಳಿ ಗೋರಿನೆಲೆಯ ಮಡಿಕೆ ಅವಶೇಷಗಳು



ಕೊಮಾರನಹಳ್ಳಿ ಗೋರಿನೆಲೆಯ ಮಡಿಕೆ ಅವಶೇಷಗಳು



ಕೊಮಾರನಹಳ್ಳಿ ಗೋರಿನೆಲೆಯ ಮಡಿಕೆ ಅವಶೇಷಗಳು



ಕೊಮಾರನಹಳ್ಳಿ ಗೋರಿನೆಲೆಯ ಮಡಿಕೆ ಅವಶೇಷಗಳು



ಕೊಮಾರನಹಳ್ಳಿ ಗೋರಿನೆಲೆಯ ಮಡಿಕೆ ಅವಶೇಷಗಳು



ಕೊಮಾರನಹಳ್ಳಿ ಗೋರಿನೆಲೆಯ ಕಬ್ಬಿಣ ಅವಶೇಷಗಳು



ಕೊಮಾರನಹಳ್ಳಿ ಗೋರಿನೆಲೆಯ ಕಬ್ಬಿಣ ಅವಶೇಷಗಳು



ಕೃಪೆ: **Sundara a. Archealogy In Karnataka**

ಹರಿಹರ ತಾಲೂಕಿನ ನವಶೋಧಿತ ಪ್ರಾಗಿತಿಹಾಸ ಅವಶೇಷಗಳು



ಹರಿಹರೇಶ್ವರ ದೇವಾಲಯದ ಪ್ರಾಂಗಣ, ಹರಿಹರ



ಹರಿಹರೇಶ್ವರ ದೇವಾಲಯ ಮುಂಭಾಗ, ಹರಿಹರ



ಹರಿಹರೇಶ್ವರ ದೇವಾಲಯದ ದಕ್ಷಿಣ ಭಾಗ, ಹರಿಹರ



ಹರಿಹರೇಶ್ವರ ದೇವಾಲಯದ ಉತ್ತರ ಭಾಗ, ಹರಿಹರ



ಹರಿಹರೇಶ್ವರ ದೇವಾಲಯದ ನವರಂಗದಲ್ಲಿನ ಕಂಬಗಳ ಸಾಲು, ಹರಿಹರ



ವಿಷ್ಣು, ವಾಸನ



ಹರಿಹರೇಶ್ವರ ದೇವಾಲಯದ ಭಾಗಗಳು, ಹರಿಹರ













ಹರಿಹರೇಶ್ವರ ದೇವಾಲಯದ ಮುಂಭಾಗದ ದೀಪಸ್ತಂಬ



ಲಕ್ಷ್ಮೀ ದೇವಾಲಯ, ಹರಿಹರ







ಹರಿಹರ, ಹರಿಹರ



ಹರಿಹರ ಉಬ್ಬುಶಿಲ್ಪ, ನಂದಿತಾವರೆ



ಚಿಕ್ಕಹರಿಹರೇಶ್ವರ ದೇವಾಲಯ, ಹರಿಹರ



ಹರಿಹರದ ಚಿಕ್ಕಹರಿಹರೇಶ್ವರ ದೇವಾಲಯ, ಹರಿಹರ



ಆರೋಗ್ಯ ಮಾತೆಯ ಮಹಾಲಯ, ಹರಿಹರ



ಆರೋಗ್ಯ ಮಾತೆಯ ಮಹಾಲಯದ ಗೋಪುರ, ಹರಿಹರ



ಊರಮ್ಮ ದೇವಿಯ ರಥೋತ್ಸವ, ಹರಿಹರ



ತುರುಗೋಳ್ ವೀರಗಲ್ಲು, ರಾಜನಹಳ್ಳಿ



ತುರುಗೋಳ್ ವೀರಗಲ್ಲು, ರಾಜನಹಳ್ಳಿ



ಸಪ್ತಮಾತೃಕೆಯರ ಶಿಲ್ಪ, ಧೂಳೆಹೊಳೆ



ಕಾರ್ತಿಕೇಯ, ಧೂಳೆಹೊಳೆ



ಭೈರವ, ಧೂಳೆಹೊಳೆ



ವಿಷ್ಣು, ಜಗಳಿ



ಮಹಿಷಮರ್ದಿನಿ, ಧೂಳೆಹೊಳೆ



ಸಪ್ತಮಾತೃಕೆಯರು, ನಂದಿಗುಡಿ



ಸಪ್ತಮಾತೃಕೆಯರು, ವಾಸನ



ಈಶ್ವರ ದೇವಾಲಯದ ಬಾಗಿಲುವಾಡ, ನಂದಿಗುಡಿ



ಬುರುಜು, ಮೂಗಿನಗೊಂದಿ



ಅಪ್ರಕಟಿತ ಶಾಸನ, ಮೂಗಿನಗೊಂದಿ



ಅಪ್ರಕಟಿತ ಶಾಸನ, ಚಿಕ್ಕಬಿದರೆ



ಜೋಡಿ ನಾಗರ ಶಿಲ್ಪಗಳು, ನಂದಿತಾವರೆ




ನಂದಿ ಕಾಷ್ಠಮೂರ್ತಿ, ಧೂಳೆಹೊಳೆ



ಸರಸ್ವತಿ, ನಂದಿತಾವರೆ



ಹನುಮಂತ, ಬಾನುವಳ್ಳಿ



ಕೇಶವ, ದೇವರಬೆಳಕೆರೆ



ಭೈರನ ಪಾದ, ದೇವರಬೆಳಕೆರೆ



ಮಹಿಷಮರ್ದಿನಿ, ಸಾರಥಿ



ತುರುಗೋಳ್ ವೀರಗಲ್ಲು, ಎಕ್ಕೆಗೊಂದಿ



ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ